ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಭಾಗ–26

ಶಾಂತಿಪರ್ವದ

ರಾಜಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ಶ್ರೀರಾಮಶ್ರೀ॥

ಭಗವಾನ್ ಶ್ರೀವೇದವ್ಯಾಸಪ್ರಣೀತ

ಮಹಾಭಾರತ

ಭಾಗ - ೨೬

ಶಾಂತಿಪರ್ವದ

ರಾಜಧರ್ಮಪರ್ವ

(ಅಧ್ಯಾಯಗಳು ೮೩ರಿಂದ ೧೨೯ರವರೆಗೆ)

ಸಮಗ್ರಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ
ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಅನುಗ್ರಹ

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರು

ಶ್ರೀಹೃಷೀಕೇಶಸಂಸ್ಥಾನಮ್, ಪಲಿಮಾರು ಮಠ, ಉಡುಪಿ.

ಅನುವಾದಕರು

ವಿದ್ವಾನ್ ಶ್ರೀಶೇಷಗಿರಿ ಆಚಾರ್ಯ ಪಿ.ಎಸ್., ಮೈಸೂರು

ಪ್ರಕಾಶಕರು

ತತ್ತ್ವಸಂಶೋಧನಸಂಸತ್ (ರಿ)

ಕರ್ನಾಟಕಸಂಸ್ಕೃತವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವ - ಮಹಾಭಾರತತಾತ್ಪರ್ಯನಿರ್ಣಯ-ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ-ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥಶ್ರೀಪಾದರ ದ್ವಿತೀಯಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣ -ಗೊಂಡಿತು.

ರಾಜಧರ್ಮಪರ್ವ - ಭಾಗ ೨ಓ

ಅನುವಾದಕರು - ವಿದ್ವಾನ್ ಶ್ರೀಶೇಷಗಿರಿ ಆಚಾರ್ಯ ಪಿ.ಎಸ್., ಮೈಸೂರು

ಪ್ರಕಾಶಕರು – ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಈ ಗ್ರಂಥವು ಕರ್ನಾಟಕಸರ್ಕಾರದ ಆರ್ಥಿಕನೆರವಿನಿಂದ ಮುದ್ರಿತವಾಗಿದೆ.

ಪುಟಗಳು – xii + 432 = 444

ಮುದ್ರಿತಪ್ರತಿಗಳು - 1000

ಬೆಲೆ - ರೂ 500/-

©ತತ್ವಸಂಶೋಧನಸಂಸತ್ (ರಿ.), ಪಲಿಮಾರುಮಠ, ಉಡುಪಿ.

ಡಿ.ಟಿ.ಪಿ.- ಸುಬ್ಬಣ್ಣ ಕೆಂಪದಾಳಿಹಳ್ಳಿ , (9141311280)

ಮುದ್ರಕರು – ಪವನ್ ಪ್ರಿಂಟರ್ಸ್, ಬೆಂಗಳೂರು -18
ಮೊಬೈಲ್- 9686489131

ಗ್ರಂಥಪ್ರಾಪ್ತಿ - ಪಲಿಮಾರುಮಠ, ಉಡುಪಿ



ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವುಮಃ

ವಿಷಯಾನುಕ್ರಮಣಿಕೆ

೮೩. ಎಂಬತ್ತಮೂರನೆಯ ಅಧ್ಯಾಯ

ಜ್ಞಾತಿಸಂಬಂಧಿಗಳ ಸ್ವಭಾವದ ವಿಷಯದಲ್ಲಿ ಕೃಷ್ಣ-ನಾರದರ ಸಂವಾದ 1

೮೪. ಎಂಬತ್ತನಾಲ್ಕನೆಯ ಅಧ್ಯಾಯ

ಅಮಾತ್ಯಪರೀಕ್ಷೆಯ ವಿಷಯದಲ್ಲಿ ಕಾಲಕವೃಕ್ಷೀಯೋಪಾಖ್ಯಾನ 8

೮೫. ಎಂಬತ್ತೈದನೆಯ ಅಧ್ಯಾಯ

ಮಂತ್ರಿಮೊದಲಾದವರ ಲಕ್ಷಣಕಥನ 25

೮೬. ಎಂಬತ್ತಾರನೆಯ ಅಧ್ಯಾಯ

ಸಾಂತ್ವವಿಷಯದಲ್ಲಿ ಇಂದ್ರಬೃಹಸ್ಪತಿಗಳ ಸಂವಾದ 38

೮೭. ಎಂಬತ್ತೇಳನೆಯ ಅಧ್ಯಾಯ

ಅಮಾತ್ಯಾದಿಲಕ್ಷಣಕಥನ 41

೮೮. ಎಂಬತ್ತೆಂಟನೆಯ ಅಧ್ಯಾಯ

ಪುರಲಕ್ಷಣಾದಿ ಕಥನ 49

೮೯. ಎಂಬತ್ತೊಂಬತ್ತನೆಯ ಅಧ್ಯಾಯ

ರಾಷ್ಟ್ರದ ರಕ್ಷಣೆಯ ಪ್ರಕಾರ ಕಥನ 56

೯೦. ತೊಂಬತ್ತನೆಯ ಅಧ್ಯಾಯ

ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುವ ಪ್ರಕಾರ ಕಥನ 66

೯೧. ತೊಂಬತ್ತೊಂದನೆಯ ಅಧ್ಯಾಯ

ಪುನಃ ರಾಜನೀತಿ ಕಥನ 73

೯೨. ತೊಂಬತ್ತೆರಡನೆಯ ಅಧ್ಯಾಯ

ಉಚಥ್ಯಮಾಂಧಾತೃಸಂವಾದಾನುವಾದ 79

೯೩. ತೊಂಬತ್ತಮೂರನೆಯ ಅಧ್ಯಾಯ

ಉಚಥ್ಯಮಾಂಧಾತೃಸಂವಾದಾನುವಾದ 88

೯೪. ತೊಂಬತ್ತನಾಲ್ಕನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದದಲ್ಲಿ ರಾಜಧರ್ಮಕಥನ 102

೯೫. ತೊಂಬತ್ತೈದನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದ 107

೯೬. ತೊಂಬತ್ತಾರನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದ 116

೯೭. ತೊಂಬತ್ತೇಳನೆಯ ಅಧ್ಯಾಯ

೯೮. ತೊಂಬತ್ತೆಂಟನೆಯ ಅಧ್ಯಾಯ

ಯುದ್ಧಧರ್ಮಕಥನ 126

೯೯. ತೊಂಬತ್ತೊಂಬತ್ತನೆಯ ಅಧ್ಯಾಯ

ಯುದ್ಧದ ಧಾರ್ಮಿಕತ್ವಕಥನ 132

೧೦೦. ನೂರನೆಯ ಅಧ್ಯಾಯ

ಇಂದ್ರಾಂಬರೀಷಸಂವಾದಾನುವಾದ; ಸೇನಾಪತಿಯಾದ ಸುದೇವನ ಸ್ವರ್ಗವೈಭವ 140

೧೦೧. ನೂರೊಂದನೆಯ ಅಧ್ಯಾಯ

ತನ್ನ ಸೈನಿಕರಿಗೆ ಸ್ವರ್ಗನರಕಗಳನ್ನು ತೋರಿಸಿ ಜನಕರಾಜನಿಂದ ಯುದ್ಧಕ್ಕೆ ಪ್ರೋತ್ಸಾಹ 157

೧೦೨. ನೂರ ಎರಡನೆಯ ಅಧ್ಯಾಯ

ಯುದ್ಧಪ್ರಕಾರಾದಿಕಥನ 161

೧೦೩. ನೂರಮೂರನೆಯ ಅಧ್ಯಾಯ

ಯೋಧರ ಯುದ್ಧಪ್ರಕಾರಾದಿ ಕಥನ 173

೧೦೪. ನೂರನಾಲ್ಕನೆಯ ಅಧ್ಯಾಯ

ಸೇನೆಯ ಜಯಚಿಹ್ನೆಗಳ ಮತ್ತು ರಾಜನೀತಿಯ ಕಥನ 178

೧೦೫. ನೂರ ಐದನೆಯ ಅಧ್ಯಾಯ

ಶತ್ರುಜಯಸಂಪಾದಕ ಇಂದ್ರಬೃಹಸ್ಪತಿಸಂವಾದಾನುವಾದ 188

೧೦೬. ನೂರ ಆರನೆಯ ಅಧ್ಯಾಯ

ಕೌಸಲ್ಯ-ಕಾಲಕವೃಕ್ಷೀಯಸಂವಾದ; ಎಲ್ಲರನ್ನೂ ಕಳೆದುಕೊಂಡ ರಾಜನು ಜೀವಿಸುವ ರೀತಿ201

೧೦೭. ನೂರ ಏಳನೆಯ ಅಧ್ಯಾಯ

ಶತ್ರುಜಯೋಪಾಯವಿಷಯದಲ್ಲಿ ಕೌಸಲ್ಯನಿಗೆ ಕಾಲಕವೃಕ್ಷೀಯ ಉಪದೇಶ 214

೧೦೮. ನೂರ ಎಂಟನೆಯ ಅಧ್ಯಾಯ

ಕಾಲಕವೃಕ್ಷೀಯಮುನಿಯ ಆದೇಶದಂತೆ ಕೋಸಲರಾಜನ ರಾಜ್ಯಪ್ರಾಪ್ತಿ 220

೧೦೯. ನೂರ ಒಂಭತ್ತನೆಯ ಅಧ್ಯಾಯ

ಚತುರಂಗಾದಿಗಣಗಳ ನಡತೆ 227

೧೧೦. ನೂರಹತ್ತನೆಯ ಅಧ್ಯಾಯ

ಪಿತೃಮಾತೃಗುರುಮಹಿಮಾಕಥನ 234

೧೧೧. ನೂರಹನ್ನೊಂದನೆಯ ಅಧ್ಯಾಯ

ಸತ್ಯಾನೃತವಿವೇಚನೆ 242

೧೧೨. ನೂರಹನ್ನೆರಡನೆಯ ಅಧ್ಯಾಯ

ಕಷ್ಟಗಳನ್ನು ದಾಟುವ ಉಪಾಯಕಥನ 251

೧೧೩. ನೂರ ಹದಿಮೂರನೆಯ ಅಧ್ಯಾಯ

ಪರೀಕ್ಷೆಯಿಂದ ಸ್ವಭಾವನಿರ್ಣಯವಿಷಯದಲ್ಲಿ ವ್ಯಾಘ್ರಗೋಮಾಯು ಕಥೆ 259

೧೧೪. ನೂರಹದಿನಾಲ್ಕನೆಯ ಅಧ್ಯಾಯ

ಆಲಸ್ಯದಿಂದ ಉಂಟಾಗುವ ಅನರ್ಥದ ವಿಷಯದಲ್ಲಿ ಒಂಟೆಯ ಕಥೆ 279

೧೧೫. ನೂರಹದಿನೈದನೆಯ ಅಧ್ಯಾಯ

ಗಂಗಾಸಾಗರಸಂವಾದಾನುವಾದದಿಂದ ಬಲಿಷ್ಠನಾದ ಶತ್ರುವಿನ ವಿಷಯದಲ್ಲಿ ನಡೆದುಕೊಳ್ಳಬೇಕಾದ ರೀತಿಯ ಕಥನ 284

೧೧೬. ನೂರಹದಿನಾರನೆಯ ಅಧ್ಯಾಯ

ಸಭೆಯಲ್ಲಿ ದುಷ್ಟಪುರುಷರು ನಿಂದಿಸಿದರೆ ಸಹನೆಯ ಕಥನ 288

೧೧೭. ನೂರಹದಿನೇಳನೆಯ ಅಧ್ಯಾಯ

ರಾಜರಿಗೆ ಸಹಾಯಸಂಪಾದನೆಯ ಅವಶ್ಯಕತೆ 293

೧೧೮. ನೂರಹದಿನೆಂಟನೆಯ ಅಧ್ಯಾಯ

ಮುನಿಯಿಂದ ನಾಯಿಯ ರೂಪಾಂತರಕರಣ ಮತ್ತು ಪುನಃ ಶ್ವಾನಕರಣ 299

೧೧೯. ನೂರಹತ್ತೊಂಬತ್ತನೆಯ ಅಧ್ಯಾಯ

ಸಚಿವ, ರಾಜ ಮತ್ತು ಯೋಧರ ಲಕ್ಷಣಕಥನ 311

೧೨೦. ನೂರಇಪ್ಪತ್ತನೆಯ ಅಧ್ಯಾಯ

ಭೃತ್ಯರನ್ನು ಅವರವರಿಗೆ ಯೋಗ್ಯಸ್ಥಾನದಲ್ಲಿ ನಿಯೋಜಿಸುವ ರಾಜನೀತಿ 321

೧೨೧. ನೂರಇಪ್ಪತ್ತೊಂದನೆಯ ಅಧ್ಯಾಯ

ಪ್ರಜಾಪಾಲನಕಥನ 326

೧೨೨. ನೂರಇಪ್ಪತ್ತೆರಡನೆಯ ಅಧ್ಯಾಯ

ದಂಡಸ್ವರೂಪಕಥನ 342

೧೨೩. ನೂರಇಪ್ಪತ್ತಮೂರನೆಯ ಅಧ್ಯಾಯ

ವಸುಹೋಮಮಾಂಧಾತೃಸಂವಾದ; ದಂಡೋತ್ಪತ್ತಿ ಮತ್ತು ಅದರ ಪ್ರಚಾರ. 355

೧೨೪. ನೂರಇಪ್ಪತ್ತನಾಲ್ಕನೆಯ ಅಧ್ಯಾಯ

ಕಾಮಂದ ಅರಿಷ್ಟಸಂವಾದ। ಧರ್ಮತ್ಯಾಗಿಗಳಿಗೆ ಪ್ರಾಯಶ್ಚಿತ್ತಕಥನ 373

೧೨೫. ನೂರಇಪ್ಪತ್ತೈದನೆಯ ಅಧ್ಯಾಯ

ಧೃತರಾಷ್ಟ್ರದುರ್ಯೋಧನಸಂವಾದ; ಶೀಲಕ್ಕೆ ಧರ್ಮಾದಿಕಾರಣತ್ವಕಥನ 379

೧೨೬. ನೂರಇಪ್ಪತ್ತಾರನೆಯ ಅಧ್ಯಾಯ

ಋಷಭಸುಮಿತ್ರಸಂವಾದ; ಆಸೆಯಿಂದ ಸುಮಿತ್ರನ ಮೃಗಾನುಧಾವನ. 396

೧೨೭. ನೂರಇಪ್ಪತ್ತೇಳನೆಯ ಅಧ್ಯಾಯ

ಬದರಿಕಾಶ್ರಮದಲ್ಲಿ ವೃಷಭತನು ಸಂವಾದ ವೀರದ್ಯುಮ್ನಪ್ರಶ್ನೆ 404

೧೨೮. ನೂರಇಪ್ಪತ್ತೆಂಟನೆಯ ಅಧ್ಯಾಯ

ಮಾತಾಪಿತೃಸೇವೆಯಿಂದ ಅವರ ಋಣಮೋಚನ ಕಥನ 417

೧೨೯. ನೂರಇಪ್ಪತ್ತೊಂಬತ್ತನೆಯ ಅಧ್ಯಾಯ

ರಾಜನ ಕೋಶವೃದ್ಧಿರೂಪವಾದ ಆಪದ್ಧರ್ಮಕಥನ 419

* * * * *

ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ

ಶ್ರೀಮನ್ಮಹಾಭಾರತೇ ಶಾಂತಿಪರ್ವ
ರಾಜಧರ್ಮಪರ್ವ

೮೩. ಎಂಬತ್ತಮೂರನೆಯ ಅಧ್ಯಾಯ

ಜ್ಞಾತಿಸಂಬಂಧಿಗಳ ಸ್ವಭಾವದ ವಿಷಯದಲ್ಲಿ ಕೃಷ್ಣ-ನಾರದರ ಸಂವಾದ

ಯುಧಿಷ್ಠಿರಃ

ಏವಮಗ್ರಾಹ್ಯಕೇ ತಸ್ಮಿನ್ ಜ್ಞಾತಿಸಂಬಂಧಿಮಂಡಲೇ।
ಮಿತ್ರೇಷ್ವಮಿತ್ರೇಷ್ವಪಿ ಚ ಕಥಂ ಭಾವೋ ವಿಭಾವ್ಯತೇ ॥೧॥

ಯುಧಿಷ್ಠಿರ – ಈ ರೀತಿಯಲ್ಲಿ ಜ್ಞಾತಿಗಳ ಮತ್ತು ಸಂಬಂಧಿಗಳ ಸಮೂಹವು ಬಹಳವಿಶ್ವಾಸಕ್ಕೆ ಯೋಗ್ಯವಲ್ಲದಿರುವಾಗ ಮಿತ್ರರನ್ನು ಮತ್ತು ಶತ್ರುಗಳನ್ನು ಹೇಗೆ ಸುಧಾರಿಸುವುದು?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ವಾಸುದೇವಸ್ಯ ಸಂವಾದಂ ಸುರರ್ಷೇರ್ನಾರದಸ್ಯ ಚ ॥೨॥

ಭೀಷ್ಮರು – ಈ ವಿಷಯದಲ್ಲಿಯೂ ಕೃಷ್ಣನಿಗೂ ಮತ್ತು ದೇವರ್ಷಿಗಳಾದ ನಾರದರಿಗೂ ನಡೆದ ಪ್ರಾಚೀನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಶ್ರೀವಾಸುದೇವಃ

ನಾಸುಹೃತ್ ಪರಮಂ ಮಂತ್ರಂ ನಾರದಾರ್ಹತಿ ವೇದಿತುಮ್।
ಅಪಂಡಿತೋ ವಾಪಿ ಸುಹೃತ್ ಪಂಡಿತೋ ವಾಪಿ ನಾತ್ಮವಾನ್ ॥೩॥

ಶ್ರೀವಾಸುದೇವ – ನಾರದರೇ! ಸುಹೃಜ್ಜನನಲ್ಲದವನು ರಾಜನ ಮಂತ್ರಾಲೋಚನೆಯನ್ನು ತಿಳಿಯಲು ಯೋಗ್ಯನಲ್ಲ. ಸುಹೃಜ್ಜನನು ಅಪಂಡಿತನಾದರೂ ಪಂಡಿತನಾಗಿ ಒಳ್ಳೆಯ ಮನಸ್ಸನ್ನು ಹೊಂದಿಲ್ಲದಿದ್ದರೂ ರಾಜನ ಮಂತ್ರವನ್ನು ತಿಳಿಯಬಾರದು.

ಸ ತೇ ಸೌಹೃದಮಾಸ್ಥಾಯ ಕಿಂಚಿದ್ ವಕ್ಷ್ಯಾಮಿ ನಾರದ।
ಕೃತಾನ್ನಂ ಚ ಬುದ್ಧಿಂ ಸಂಪ್ರೇಕ್ಷ್ಯ ಸಂಪೃಚ್ಛೇ ತ್ರಿದಿವಂಗಮ ॥೪॥

ಎಲೈ ನಾರದರೇ! ತ್ರಿಲೋಕಸಂಚಾರಿಗಳೇ! ನಿಮ್ಮಲ್ಲಿ ವಿಶ್ವಾಸದಿಂದ ನಿಮ್ಮ ಪೂರ್ಣವಾದ ಬುದ್ಧಿಯನ್ನು ಗಮನಿಸಿ ನಿಮ್ಮಲ್ಲಿ ಸ್ವಲ್ಪ ಮಾತನಾಡುವೆನು.

ದಾಸ್ಯಮೈಶ್ವರ್ಯವಾದೇನ ಜ್ಞಾತೀನಾಂ ವೈ ಕರೋಮ್ಯಹಮ್।
ಅರ್ಧಭೋಕ್ತಾಸ್ಮಿ ಭೋಗಾನಾಂ ವಾಗ್‌ದುರುಕ್ತಾನಿ ಚ ಕ್ಷಮೇ ॥೫॥

ನಾನು ಐಶ್ವರ್ಯವನ್ನು ಹೊಂದಿದವನಾದರೂ ಜ್ಞಾತಿಗಳ ದಾಸ್ಯವನ್ನು ಮಾಡುತ್ತೇನೆ. ಭೋಗಗಳನ್ನು ಅರ್ಧಮಾತ್ರ ಭೋಗಿಸುತ್ತೇನೆ. ಜ್ಞಾತಿಗಳ ದುರ್ವಚನಗಳನ್ನು ಕ್ಷಮಿಸುತ್ತೇನೆ.

ಅರಣೇಮಗ್ನಿಕಾಮೋ ವಾ ಮಥ್ನಾತಿ ಹೃದಯಂ ಮಮ।
ವಾಚಾ ದುರುಕ್ತಂ ದೇವರ್ಷೇ ತನ್ಮೇ ದಹತಿ ನಿತ್ಯದಾ ॥೬॥

ಎಲೈ ದೇವರ್ಷಿಯೇ! ಜ್ಞಾತಿಗಳ ದುರ್ವಚನಗಳು ಅಗ್ನಿಕಾಮನಾದವನು ಅರಣಿಯನ್ನು ಮಥನ ಮಾಡಿದಂತೆ ನನ್ನ ಹೃದಯವನ್ನು ಮಥನ ಮಾಡುತ್ತವೆ. ಅವು ಯಾವಾಗಲೂ ನನಗೆ ತಾಪವನ್ನು ಕೊಡುತ್ತವೆ.

ಬಲಂ ಸಂಕರ್ಷಣೇ ನಿತ್ಯಂ ಸೌಕುಮಾರ್ಯಂ ಪುನರ್ಗದೇ।
ರೂಪೇಣ ಮತ್ತಃ ಪ್ರದ್ಯುಮ್ನಃ ಸೋಽಸಹಾಯೋಽಸ್ಮಿ ನಾರದ ॥೭॥

ಬಲರಾಮನಲ್ಲಿ ನಿತ್ಯವೂ ಬಲವಿದೆ. ಗದನಲ್ಲಿ ಸೌಕುಮಾರ್ಯವಿದೆ. ರೂಪ-

ದಲ್ಲಿ ನನಗಿಂತ ಪ್ರದ್ಯುಮ್ನನು ಅಧಿಕನಾದವನು. ನಾರದರೇ! ಅಂತಹ ನಾನು ಅಸಹಾಯನಾಗಿದ್ದೇನೆ.

ಅನ್ಯೇ ಹಿ ಸುಮಹಾಭಾಗಾ ಬಲವಂತೋ ದುರಾಸದಾಃ।
ನಿತ್ಯೋತ್ಥಾನೇನ ಸಂಪನ್ನಾ ನಾರದಾಂಧಕವೃಷ್ಣಯಃ ॥೮॥

ಎಲೈ ನಾರದರೇ! ಜ್ಞಾತಿಗಳಲ್ಲಿ ಉಳಿದ ಮಹಾನುಭಾವರು ಬಲಿಷ್ಠರೂ ಮತ್ತು ಸಮೀಪಿಸಲು ಅಸಾಧ್ಯರೂ ಆಗಿದ್ದಾರೆ. ಅಂಧಕವೃಷ್ಣಿಗಳು ನಿತ್ಯವೂ ಉದ್ಯಮಶೀಲರಾಗಿದ್ದಾರೆ.

ಯಸ್ಯ ನ ಸ್ಯುರ್ನ ವೈ ಸ ಸ್ಯಾದ್ ಯಸ್ಯ ಸ್ಯುಃ ಕೃತ್ಸ್ನಮೇವ ತತ್।
ದ್ವಯೋರೇವ ಪ್ರಚಲತೋರ್ನಿತ್ಯಂ ವೃಣೋಮ್ಯೇಕತರಂ ನ ಚ ॥೯॥

ಯಾರಿಗೆ ಜ್ಞಾತಿಗಳು ಇರುವುದಿಲ್ಲವೋ ಅವನು ಹೇಗೆ ಸುಖಿಯಾದಾನು? ಯಾರಿಗೆ ಜ್ಞಾತಿಗಳು ಇರುತ್ತಾರೆಯೋ ಅವನೂ ಸಹ ಹೇಗೆ ಪೂರ್ಣ ಸುಖಿಯಾದಾನು? ಇಬ್ಬರು ಜ್ಞಾತಿಗಳು ಕೋಪದಿಂದ ಚಲಿಸುತ್ತಿದ್ದರೆ ನಾವು ಅವರಲ್ಲಿ ಯಾರ ಪಕ್ಷವನ್ನೂ ವಹಿಸುವುದಿಲ್ಲ.

ಸ್ಯಾತಾಂ ಯಸ್ಯಾಹುಕಾಕ್ರೂರೌ ಕಿನ್ನ ದುಃಖತರಂ ತತಃ।
ಯಸ್ಯ ವಾಪಿ ನ ತೌ ಸ್ಯಾತಾಂ ಕಿನ್ನ ದುಃಖತರಂ ತತಃ ॥೧೦॥

ಯಾರಿಗೆ ಆಹುಕ, ಅಕ್ರೂರರು ಜ್ಞಾತಿಗಳಾಗಿರುತ್ತಾರೆಯೋ ಅವರಿಗೆ ಅದಕ್ಕಿಂತ ದುಃಖತರವಾದುದು ಯಾವುದು? ಯಾರಿಗೆ ಅಂತಹವರು ಜ್ಞಾತಿಗಳಾಗಿರುವುದಿಲ್ಲವೋ ಅದಕ್ಕಿಂತಲೂ ದುಃಖತರವಾದುದು ಯಾವುದು?

ಸೋಽಹಂ ಕಿತವಮಾತೇವ ದ್ವಯೋರಪಿ ಮಹಾಮುನೇ।
ನೈಕಸ್ಯ ಜಯಮಾಶಾಸೇ ದ್ವಿತೀಯಸ್ಯ ಪರಾಜಯಮ್ ॥೧೧॥

ಎಲೈ ಮಹಾಮುನಿಯೇ! ಆದ್ದರಿಂದ ನಾನು ದ್ಯೂತಮಾಡುವ ಎರಡು ಮಕ್ಕಳ

ತಾಯಿಯಂತೆ ಒಬ್ಬನಿಗೆ ಜಯವನ್ನಾಗಲೀ, ಇನ್ನೊಬ್ಬನಿಗೆ ಪರಾಜಯವನ್ನಾಗಲೀ ಆಶಿಸುವುದಿಲ್ಲ.

ಮಮೈವಂ ಕ್ಲಿಶ್ಯಮಾನಸ್ಯ ನಾರದೋಭಯತಃ ಸದಾ ।
ವಕ್ತುಮರ್ಹಸಿ ಯಚ್ಛ್ರೇಯೋ ಜ್ಞಾತೀನಾಮಾತ್ಮನಸ್ತಥಾ ॥೧೨॥

ನಾರದರೇ! ಹೀಗೆ ಎರಡು ರೀತಿಯಿಂದಲೂ ಕ್ಲೇಶಪಡುತ್ತಿರುವ ನನಗೆ ನನಗೂ ಮತ್ತು ಜ್ಞಾತಿಗಳಿಗೂ ಯಾವುದು ಶ್ರೇಯಸ್ಕರವಾದುದು ಎಂಬುದನ್ನು ನೀವು ಹೇಳಬೇಕು.

ನಾರದಃ

ಆಪದೋ ದ್ವಿವಿಧಾಃ ಕೃಷ್ಣ ಬಾಹ್ಯಾಶ್ಚಾಭ್ಯಂತರಾಶ್ಚ ಹ ।
ಪ್ರಾದುರ್ಭವಂತಿ ವಾರ್ಷ್ಣೇಯ ಸ್ವಕೃತಾ ಯದಿ ವಾऽನ್ಯತಃ ॥೧೩॥

ನಾರದರು – ಎಲೈ ಕೃಷ್ಣನೇ! ಆಪತ್ತುಗಳು ಹೊರಗಿನಿಂದ ಬಂದವು ಮತ್ತು ಒಳಗಿನಿಂದ ಬಂದವು ಎಂದು ಎರಡು ವಿಧವಾದವು ಉಂಟಾಗುತ್ತವೆ. ಎಲೈ ವಾರ್ಷ್ಣೇಯನೇ! ಅವು ತನ್ನಿಂದಲಾಗಲೀ ಅಥವಾ ಬೇರೆಯವರಿಂದಾಗಲೀ ಉಂಟಾ-ಗುತ್ತವೆ.

ಸೇಯಮಾಭ್ಯಂತರಾ ತುಭ್ಯಮಾಪತ್ ಕೃಚ್ಛ್ರಾ ಸ್ವಕರ್ಮಜಾ ।
ಅಕ್ರೂರಭೋಜಪ್ರಭವಾಃ ಸರ್ವೇ ಹ್ಯೇತೇ ತದನ್ವಯಾಃ ॥೧೪॥

ನಿನಗೆ ಒಳಗಿನವರಿಂದ ಉಂಟಾಗಿರುವ ಆಪತ್ತು ನಿನ್ನ ಕರ್ಮದಿಂದಲೇ ಉಂಟಾದುದು. ಅಕ್ರೂರ, ಭೋಜ ಇವರ ಪರಿವರಾದವರೆಲ್ಲರೂ ನಿನ್ನ ಕರ್ಮ-ಗಳಿಗೆ (ಕಾರ್ಯಗಳಿಗೆ) ಅನುಸಾರವಾಗಿಯೇ ವರ್ತಿಸುತ್ತಾರೆ.

ಅರ್ಥಹೇತೋರ್ಹಿ ಕಾಮಾದ್ವಾ ದ್ವಾರಾ ಬೀಭತ್ಸಯಾಪಿ ವಾ ।
ಆತ್ಮನಾ ಪ್ರಾಪ್ತಮೈಶ್ವರ್ಯಮನ್ಯತ್ರ ಪ್ರತಿಪಾದಿತಮ್ ॥೧೫॥

ಧನದ ಕಾರಣದಿಂದಾಗಲೀ ಇಚ್ಛಾಪೂರ್ವಕವಾಗಿಯೇ ಆಗಲಿ ಅಥವಾ ಭಯದಿಂದಾಗಲೀ ನೀನು ಸಂಪಾದಿಸಿದ ಐಶ್ವರ್ಯವನ್ನು ಬೇರೆಯವರಿಗೆ ಕೊಟ್ಟಿದ್ದೀಯೆ.

ಕೃತಮೂಲಮಿದಾನೀಂ ತಜ್ಜ್ಞಾತಿವೃದ್ಧಂ ಸಹಾಯವತ್ ।
ನ ಶಕ್ಯಂ ಪುನರಾದಾತುಂ ವಾಂತಮನ್ನಮಿವ ತ್ವಯಾ ॥೧೬॥

ನೀನೇ ಮೂಲನಾಗಿ ಕೊಟ್ಟ ಆ ಐಶ್ವರ್ಯವು ಈಗ ಜ್ಞಾತಿಗಳಲ್ಲಿ ಬೆಳೆದು ಸಹಾಯವುಳ್ಳದ್ದಾಗಿದೆ. ವಾಂತಿಮಾಡಿದ ಅನ್ನವನ್ನು ಪುನಃ ತೆಗೆದುಕೊಳ್ಳಲು ಸಾಧ್ಯವಿಲ್ಲದಂತೆ ಆ ಐಶ್ವರ್ಯವನ್ನು ಪುನಃ ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ.

ಬಭ್ರೂಗ್ರಸೇನಯೋ ರಾಜ್ಯಂ ನಾಪ್ತುಂ ಶಕ್ಯಂ ಕಥಂಚನ।
ಜ್ಞಾತಿಭೇದಭಯಾತ್ ಕೃಷ್ಣ ತ್ವಯಾ ಚಾಪಿ ವಿಶೇಷತಃ ॥೧೭॥

ಜ್ಞಾತಿಗಳಲ್ಲಿ ವಿರೋಧವುಂಟಾಗುವ ಭಯದಿಂದ ಬಭ್ರು, ಉಗ್ರಸೇನರ ರಾಜ್ಯವನ್ನು ವಿಶೇಷವಾಗಿ ನಿನ್ನಿಂದಲೂ ಪುನಃ ಪಡೆಯುವುದು ಸಾಧ್ಯವಿಲ್ಲ.

ತಚ್ಚೇತ್ ಸಿದ್ಧ್ಯೇತ್ ಪ್ರಯತ್ನೇನ ಕೃತ್ವಾ ಕರ್ಮ ಸುದುಷ್ಕರಮ್ ।
ಮಹತ್ ಕ್ಷಯಂ ವ್ಯಯಂ ವಾ ಸ್ಯಾದ್ ವಿನಾಶೋ ವಾ ಪುನರ್ಭವೇತ್ ॥೧೮

ಪ್ರಯತ್ನದಿಂದ ದುಷ್ಕರವಾದ ಕರ್ಮವನ್ನು ಮಾಡಿ ಅದನ್ನು ಸಾಧಿಸಿದರೆ ದೊಡ್ಡ ಧನವ್ಯಯವು ಮತ್ತು ದೇಹನಾಶವು ಉಂಟಾದೀತು.

ಅನಾಯಸೇನ ಶಸ್ತ್ರೇಣ ಮೃದುನಾ ಹೃದಯಚ್ಛಿದಾ ।
ಜಿಹ್ವಾಮುದ್ಧರ ಸರ್ವೇಷಾಂ ಪರಿಮೃಜ್ಯಾನುಮೃಜ್ಯ ಚ ॥೧೯॥

ಕಬ್ಬಿಣದಿಂದ ಮಾಡದ ಮೃದುವಾದ ಹೃದಯಭೇದಕವಾದ ಶಸ್ತ್ರದಿಂದ ಜ್ಞಾತಿಗಳ ನಾಲಿಗೆಯಲ್ಲಿ ಸವರಿ ಸವರಿ ಅದನ್ನು ಕತ್ತರಿಸಬೇಕು.

ವಾಸುದೇವಃ

ಅನಾಯಸಂ ಮುನೇ ಶಸ್ತ್ರಂ ಮೃದು ವಿದ್ಯಾಮಹಂ ಕಥಮ್ ।
ಯೇನೈಷಾಮುದ್ಧರೇ ಜಿಹ್ವಾಂ ಪರಿಮೃಜ್ಯಾನುಮೃಜ್ಯ ಚ ॥೨೦॥

ವಾಸುದೇವ – ಕಬ್ಬಿಣದಿಂದ ಮಾಡದ ಮೃದುವಾದ ಶಸ್ತ್ರವನ್ನು ಎಲೈ ಮುನಿಯೇ! ನಾನು ಹೇಗೆ ತಿಳಿಯಲಿ? ಯಾವುದರಿಂದ ಜ್ಞಾತಿಗಳ ನಾಲಿಗೆಯನ್ನು ಸವರಿ ಉದ್ಧರಿಸಬಹುದೋ ಅಂತಹ ಶಸ್ತ್ರವನ್ನು ಹೇಗೆ ತಿಳಿಯಲಿ?

ನಾರದಃ

ಶಕ್ತ್ಯಾನ್ನದಾನಂ ಸತತಂ ತಿತಿಕ್ಷಾ ದಮ ಆರ್ಜವಮ್ ।
ಯಥಾರ್ಹಪ್ರತಿಪೂಜಾ ಚ ಶಸ್ತ್ರಮೇತದನಾಯಸಮ್ ॥೨೧॥

ನಾರದರು – ಸತತವಾಗಿ ಶಕ್ತಿಯಿದ್ದಷ್ಟು ಅನ್ನದಾನ, ತಿತಿಕ್ಷಾ, ಇಂದ್ರಿಯನಿಗ್ರಹ, ಆರ್ಜವ, ಅವರವರ ಯೋಗ್ಯತೆಗೆ ಅನುಗುಣವಾಗಿ ಅವರ ಪೂಜೆ ಇದು ಕಬ್ಬಿಣದಿಂದ ಮಾಡದ ಶಸ್ತ್ರ.

ಜ್ಞಾತೀನಾಂ ವಕ್ತುಕಾಮಾನಾಂ ಕಟೂನಿ ಚ ಲಘೂನಿ ಚ ।
ಗಿರಾ ತ್ವಂ ಹೃದಯಂ ವಾಚಂ ಶಮಯಸ್ವಮನಾಂಸಿ ಚ ॥೨೨॥

ಕಟುವಾಗಿ ಮತ್ತು ಶೀಘ್ರವಾಗಿ ಮಾತನಾಡಲು ಬಯಸುವ ಜ್ಞಾತಿಗಳ ಮನಸ್ಸನ್ನು ಮತ್ತು ಮಾತನ್ನು ನೀನು ಒಳ್ಳೆಯ ಮಾತುಗಳಿಂದ ಶಮನಗೊಳಿಸು.

ನಾಮಹಾಪುರುಷಃ ಕಶ್ಚಿನ್ನಾನಾತ್ಮಾ ನಾಸಹಾಯವಾನ್ ।
ಮಹತೀಂ ಧುರಮಾದತ್ತೇ ತಾಮುದ್ಯಮ್ಯೋರಸಾ ವಹ ॥೨೩॥

ಮಹಾಪುರುಷನಲ್ಲದವನು, ಮನೋಜಯವಿಲ್ಲದವನು, ಸಹಾಯರಹಿತನಾದವನು ದೊಡ್ಡ ಭಾರವನ್ನು ಹೊತ್ತು ಸಾಗುವುದಿಲ್ಲ. ನೀನು ಆ ದೊಡ್ಡ ಭಾರವನ್ನು ಎದೆಯ ಮೇಲೆ ಹೊರುವವನಾಗು.

ಸರ್ವ ಏವ ಗುರುಂ ಭಾರಮನಡ್ವಾನ್ ವಹತೇ ಸಮೇ।
ದುರ್ಗೇ ಪ್ರತೀಕಃ ಸುಗವೋ ಭಾರಂ ವಹತಿ ದುರ್ವಹಮ್ ॥೨೪॥

ಸಮತಟ್ಟಾದ ಪ್ರದೇಶದಲ್ಲಿ ಎಲ್ಲ ಎತ್ತುಗಳೂ ಗುರುವಾದ ಭಾರವನ್ನು ಹೊರುತ್ತವೆ. ಆದರೆ ಒಳ್ಳೆಯ ಹಸುವಿನಿಂದ ಹುಟ್ಟಿದ ಎತ್ತುಮಾತ್ರ ದುರ್ಗಮವಾದ ಪ್ರದೇಶಗಳಲ್ಲಿ ಹೊರಲು ಅಸಾಧ್ಯವಾದ ಭಾರಗಳನ್ನು ಹೊರುತ್ತದೆ.

ಭೇದಾದ್ ವಿನಾಶಃ ಸಂಘಾನಾಂ ಸಂಘಮುಖ್ಯೋಽಸಿ ಕೇಶವ।
ಯಥಾ ತ್ವಾಂ ಪ್ರಾಪ್ಯ ನೋತ್ಸೀದೇದಯಂ ಸಂಘಸ್ತಥಾ ಕುರು ॥೨೫॥

ಎಲೈ ಕೇಶವನೇ! ನೀನು ನಿನ್ನ ಸಮೂಹದಲ್ಲಿ ಪ್ರಧಾನನಾಗಿದ್ದೀಯೆ. ವಿರೋಧವುಂಟಾದರೆ ಸಮೂಹವು ನಾಶವನ್ನು ಹೊಂದುತ್ತದೆ. ನಿನ್ನನ್ನು ಪ್ರಧಾನನನ್ನಾಗಿ ಹೊಂದಿ ಈ ಸಮೂಹವು ನಾಶಹೊಂದದಿರುವಂತೆ ಮಾಡು.

ನಾನ್ಯತ್ರ ಬುದ್ಧಿಕ್ಷಾಂತಿಭ್ಯಾಂ ನಾನ್ಯತ್ರೇಂದ್ರಿಯನಿಗ್ರಹಾತ್।
ನಾನ್ಯತ್ರ ಧನಸಂತ್ಯಾಗಾದ್ ಗಣಃ ಪ್ರಾಜ್ಞೇಽವತಿಷ್ಠತೇ ॥೨೬॥

ಬುದ್ಧಿ ಮತ್ತು ಕ್ಷಮೆಗಳಿಲ್ಲದಿದ್ದರೆ, ಇಂದ್ರಿಯನಿಗ್ರಹವಿಲ್ಲದಿದ್ದರೆ, ಧನತ್ಯಾಗವನ್ನು ಮಾಡದಿದ್ದರೆ ಜ್ಞಾತಿಗಳ ಸಮೂಹವು ಪ್ರಾಜ್ಞನ ಜೊತೆಯಲ್ಲಿ ನಿಲ್ಲುವುದಿಲ್ಲ.

ಧನ್ಯಂ ಯಶಸ್ಯಮಾಯುಷ್ಯಂ ಸ್ವಪಕ್ಷೋದ್ಭಾವನಂ ಶುಭಮ್।
ಜ್ಞಾತೀನಾಮವಿನಾಶಃ ಸ್ಯಾದ್ ಯಥಾ ಕೃಷ್ಣ ತಥಾ ಕುರು ॥೨೭॥

ಎಲೈ ಕೃಷ್ಣನೇ! ಜ್ಞಾತಿಗಳಿಗೆ ಧನಪ್ರದವೂ, ಯಶಃಪ್ರದವೂ, ಆಯುಷ್ಯಪ್ರದವೂ, ಶುಭವಾದ ಉನ್ನತಿಯೂ, ಅವಿನಾಶವೂ ಉಂಟಾಗುವಂತೆ ಮಾಡು.

ಆಯತ್ಯಾಂ ಚ ತದಾತ್ವೇ ಚ ನ ತೇಽಸ್ತ್ಯವಿದಿತಂ ಪ್ರಭೋ।
ಷಾಡ್ಗುಣ್ಯಸ್ಯ ವಿಧಾನೇನ ಯಾತ್ರಾಯಾನವಿಧೌ ತಥಾ ॥೨೮॥

ಎಲೈ ಪ್ರಭುವೇ! ವರ್ತಮಾನಕಾಲದಲ್ಲಾಗಲೀ ಅಥವಾ ಭವಿಷ್ಯತ್ಕಾಲದ-

ಲ್ಲಾಗಲೀ ರಾಜನ ಷಾಡ್ಗುಣ್ಯವಿಷಯದಲ್ಲಿ ಆಗಲೀ, ಯಾತ್ರಾಯಾನಾದಿ ವಿಷಯ-ಗಳಲ್ಲಾಗಲೀ ನೀನು ತಿಳಿಯದಿರುವುದು ಯಾವುದೂ ಇಲ್ಲ.

ಮಾಧವಾಃ ಕುಕುರಾ ಭೋಜಾಃ ಸರ್ವೇ ಚಾಂಧಕವೃಷ್ಣಯಃ।
ತ್ವಯ್ಯಾಸಕ್ತಾ ಮಹಾಬಾಹೋ ಲೋಕಾ ಲೋಕೇಶ್ವರಾಶ್ಚ ಯೇ ॥೨೯॥

ಎಲೈ ಮಹಾಬಾಹುವೇ! ಮಾಧವರು, ಕುಕುರರು, ಭೋಜರು ಮತ್ತು ಎಲ್ಲಾ ಅಂಧಕವೃಷ್ಣಿಗಳು ಮತ್ತು ಲೋಕಗಳು ಮತ್ತು ಲೋಕೇಶ್ವರರೂ ಸಹ ನಿನ್ನನ್ನು ಆಶ್ರಯಿಸಿದ್ದಾರೆ.

ಉಪಾಸತೇ ಹಿ ತ್ವದ್ಬುದ್ಧಿಮೃಷಯಶ್ಚಾಪಿ ಮಾಧವ।
ತ್ವಂ ಗುರುಃ ಸರ್ವಭೂತಾನಾಂ ಜಾನೀಷೇ ತ್ವಂ ಗತಾಗತಮ್ ।
ತ್ವಾಮಾಸಾದ್ಯ ಯದುಶ್ರೇಷ್ಠಮೇಧಂತೇ ಜ್ಞಾತಿನಃ ಸುಖಮ್ ॥೩೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರ್ಯಶೀತಿತಮೋऽಧ್ಯಾಯಃ ॥೮೩॥

ಎಲೈ ಮಾಧವನೇ! ಋಷಿಗಳು ನಿನ್ನ ಬುದ್ಧಿಯನ್ನು ಉಪಾಸನೆ ಮಾಡುತ್ತಾರೆ. ಸರ್ವಜೀವರಿಗೂ ನೀನೇ ಗುರು. ನೀನು ಭೂತಭವಿಷ್ಯತ್ತೆಲ್ಲವನ್ನೂ ತಿಳಿದಿದ್ದೀಯೆ. ಯದುಶ್ರೇಷ್ಠನಾದ ನಿನ್ನನ್ನು ಹೊಂದಿ ಜ್ಞಾತಿಗಳು ಸುಖವನ್ನು ಪಡೆಯುತ್ತಾರೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೩ನೆಯ ಅಧ್ಯಾಯವು ಮುಗಿಯಿತು.

—೦—

೮೪. ಎಂಬತ್ತನಾಲ್ಕನೆಯ ಅಧ್ಯಾಯ

ಅಮಾತ್ಯಪರೀಕ್ಷೆಯ ವಿಷಯದಲ್ಲಿ ಕಾಲಕವೃಕ್ಷೀಯೋಪಾಖ್ಯಾನ

ಭೀಷ್ಮಃ

ಏಷಾ ಪ್ರಥಮತೋ ವೃತ್ತಿರ್ದ್ವಿತೀಯಾಂ ಶೃಣು ಭಾರತ।
ಯ ಕಶ್ಚಿಜ್ಜನಯೇದರ್ಥಂ ರಾಜ್ಞಾ ರಕ್ಷ್ಯಃ ಸ ಮಾನವಃ ॥೧॥

ಭೀಷ್ಮರು – ಎಲೈ ಭಾರತನೇ! ಇದು ಮೊದಲು ಮಾಡಬೇಕಾದ ಕೆಲಸ. ಎರಡನೆಯ ಕಾರ್ಯವನ್ನು ಹೇಳುತ್ತೇನೆ. ರಾಜನಿಗೆ ಯಾವನು ಅರ್ಥವೃದ್ಧಿಯನ್ನು ಉಂಟು ಮಾಡುತ್ತಾನೆಯೋ ಅವನು ರಾಜನಿಂದ ರಕ್ಷಿಸಲ್ಪಡಬೇಕು.

ಹ್ರಿಯಮಾಣಮಮಾತ್ಯೇನ ಭೃತೋ ವಾ ಯದಿ ವಾऽಭೃತಃ।
ಯೋ ರಾಜಕೋಶಂ ನಶ್ಯಂತಮಾಚಕ್ಷೀತ ಯುಧಿಷ್ಠಿರ ॥೨॥

ಶ್ರೋತವ್ಯಂ ತಸ್ಯ ಚ ರಹೋ ರಕ್ಷ್ಯಶ್ಚಾಮಾತ್ಯತೋ ಭವೇತ್ ।
ಅಮಾತ್ಯಾಶ್ಚಾಪಹರ್ತಾರಃ ಭೂಯಿಷ್ಠಂ ಘ್ನಂತಿ ಭಾರತ ॥೩॥

ರಾಜನ ನೌಕರನಾಗಲೀ ಅಥವಾ ನಗರವಾಸಿಯಾಗಲೀ ಯಾವನಾದರೂ ಅಮಾತ್ಯನು ರಾಜಕೋಶವನ್ನು ಅಪಹರಿಸುತ್ತಿದ್ದಾನೆ ಎಂದು ಹೇಳಿದರೆ ಅವನ ಮಾತನ್ನು ರಹಸ್ಯವಾಗಿ ಕೇಳಬೇಕು. ಅವನನ್ನು ಅಮಾತ್ಯನಿಂದ ರಕ್ಷಿಸಬೇಕು. ಎಲೈ ಭಾರತನೇ! ಯುಧಿಷ್ಠಿರನೇ! ರಾಜಕೋಶವನ್ನು ಲೂಟಿ ಮಾಡುವ ಅಮಾತ್ಯರು ಬಹಳವಾಗಿ ರಾಜ್ಯವನ್ನು ನಾಶ ಮಾಡುತ್ತಾರೆ.

ರಾಜಕೋಶಸ್ಯ ಗೋಪ್ತಾರೋ ರಾಜಕೋಶವಿಲೋಪಕಾಃ।
ಸಮೇತ್ಯ ಸರ್ವೇ ಬಾಧಂತೇ ಸ ವಿನಶ್ಯತ್ಯರಕ್ಷಿತಃ ॥೪॥

ಅಮಾತ್ಯರು ರಾಜಕೋಶವನ್ನು ರಕ್ಷಿಸುವವರು; ಆದರೆ ಉದಾಸೀನ ಮಾಡಿ ಅವರೇ ರಾಜಕೋಶವನ್ನು ನಾಶ ಮಾಡುತ್ತಾರೆ. (ರಾಜಕೋಶದ ಕಾವಲುಗಾರರು ಮತ್ತು ರಾಜಕೋಶದ ಅಪಹರಣಕಾರರು ಇಬ್ಬರೂ ಸೇರಿ ರಾಜಕೋಶವನ್ನು ನಾಶ ಮಾಡುತ್ತಾರೆ) ಎಲ್ಲ ಅಮಾತ್ಯರೂ ಸೇರಿ ರಾಜನನ್ನು ಬಾಧಿಸುತ್ತಾರೆ. ರಾಜಕೋಶವು ರಕ್ಷಣೆಯಿಲ್ಲದೆ ನಾಶವನ್ನು ಹೊಂದುತ್ತದೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮುನಿಃ ಕಾಲಕವೃಕ್ಷೀಯಃ ಕೌಸಲ್ಯಂ ಯದುವಾಚ ಹ ॥೫॥

ಈ ವಿಷಯದಲ್ಲಿಯೂ ಸಹ ಕೋಸಲರಾಜನಿಗೂ ಮತ್ತು ಕಾಲಕವೃಕ್ಷೀಯ

ಋಷಿಗೂ ನಡೆದ ಸಂವಾದರೂಪವಾದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಕೋಸಲಾನಾಮಾಧಿಪತ್ಯಂ ಸಂಪ್ರಾಪ್ತೇ ಕ್ಷೇಮದರ್ಶಿನಿ।
ಮುನಿಃ ಕಾಲಕವೃಕ್ಷೀಯ ಆಜಗಾಮೇತಿ ನಃ ಶ್ರುತಮ್ ॥೬॥

ಕ್ಷೇಮದರ್ಶಿ ಎಂಬ ರಾಜನು ಕೋಸಲದೇಶದ ರಾಜನಾಗಿದ್ದಾಗ ಕಾಲಕವೃಕ್ಷೀಯ ಎಂಬ ಋಷಿಯು ಅಲ್ಲಿಗೆ ಬಂದನು ಎಂದು ನಾವು ಕೇಳಿದ್ದೇವೆ.

ಸ ಕಾಕಂ ಪಂಜರೇ ಬದ್ಧ್ವಾ ವಿಷಯಂ ಕ್ಷೇಮದರ್ಶಿನಃ।
ಪೂರ್ವಂ ಪರ್ಯಚರದ್ ಯುಕ್ತಃ ಪ್ರವೃತ್ತ್ಯರ್ಥೀ ಪುನಃ ಪುನಃ ॥೭॥

ಅವನು ಕ್ಷೇಮದರ್ಶಿಯ ಬಳಿಗೆ ಬರುವುದಕ್ಕಿಂತ ಮೊದಲು ಪಂಜರದಲ್ಲಿ ಒಂದು ಕಾಗೆಯನ್ನು ಇಟ್ಟು ನಗರದಲ್ಲಿ ಅಲ್ಲಲ್ಲಿ ತಿರುಗಾಡಿ ಅಮಾತ್ಯಾದಿಗಳ ಪ್ರವೃತ್ತಿಯನ್ನು ತಿಳಿದುಕೊಂಡನು.

ಅಧೀಯೇ ವಾಯಸೀಂ ವಿದ್ಯಾಂ ಶಂಸಂತಿ ಮಮ ವಾಯಸಾಃ।
ಅನಾಗತಮತೀತಂ ಚ ಯಚ್ಚ ಸಂಪ್ರತಿ ವರ್ತತೇ ॥೮॥

ಇತಿ ರಾಷ್ಟ್ರೇ ಪರಿಪತನ್ ಬಹುಶಃ ಪುರುಷೈಃ ಸಹ।
ಸರ್ವೇಷಾಂ ರಾಜಯುಕ್ತಾನಾಂ ದುಷ್ಕೃತಂ ಪರಿಪೃಷ್ಟವಾನ್ ॥೯॥

ನಾನು ವಾಯಸವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದೇನೆ. ವಾಯಸಗಳು ನನಗೆ ಭೂತ, ಭವಿಷ್ಯತ್ ವರ್ತಮಾನವೆಲ್ಲವನ್ನೂ ಹೇಳುತ್ತವೆ ಎಂದು ಹೇಳುತ್ತಾ ರಾಷ್ಟ್ರದಲ್ಲಿ ಬಹಳವಾಗಿ ತಿರುಗಾಡಿ ಅನೇಕಪುರುಷರನ್ನು ನೋಡಿ ರಾಜನಿಂದ ನಿಯುಕ್ತರಾದ ಎಲ್ಲರ ದುಷ್ಕಾರ್ಯಗಳನ್ನು ಕೇಳಿ ತಿಳಿದುಕೊಂಡನು.

ಸ ಬುದ್ಧ್ವಾ ತಸ್ಯ ರಾಷ್ಟ್ರಸ್ಯ ವ್ಯವಸಾರಂ ಹಿ ಸರ್ವಶಃ।
ರಾಜಯುಕ್ತಾಪಚಾರಾಂಶ್ಚ ಸರ್ವಾನ್ ಬುದ್ಧ್ವಾ ತತಸ್ತತಃ ॥೧೦॥

ತಮೇವ ಕಾಕಮಾದಾಯ ರಾಜಾನಂ ದ್ರಷ್ಟುಮಾಗತಮ್ ।
ಸರ್ವಜ್ಞೋಽಸ್ಮೀತಿ ವಚನಂ ಬ್ರುವಾಣಃ ಸಂಶಿತವ್ರತಃ ॥೧೧॥

ಅವನು ಆ ರಾಷ್ಟ್ರವು ಅವನತಿಯನ್ನು ಹೊಂದುತ್ತಿರುವುದನ್ನು ತಿಳಿದು ರಾಜನಿಂದ ಕಾರ್ಯಗಳಲ್ಲಿ ನಿಯಮಿತರಾದ ಎಲ್ಲರ ಅಪಚಾರಗಳನ್ನು ಕೇಳಿ ನಾನು ಸರ್ವಜ್ಞನು ಎಂದು ಹೇಳುತ್ತಾ ಒಳ್ಳೆಯ ವ್ರತಧಾರಿಯಾದ ಅವನು ಅದೇ ಕಾಗೆಯನ್ನು ತೆಗೆದುಕೊಂಡು ರಾಜನನ್ನು ನೋಡಲು ಬಂದನು.

ಸ ಸ್ಮ ಕೌಸಲ್ಯಮಾಗಮ್ಯ ರಾಜಾಮಾತ್ಯಮಲಂಕೃತಮ್ ।
ಪ್ರಾಹ ಕಾಕಸ್ಯ ವಚನಾದಮುತ್ರೇದಂ ತ್ವಯಾ ಕೃತಮ್ ॥೧೨॥

ಅವನು ಕೋಸಲರಾಜನ ಸಭೆಗೆ ಬಂದು ಅಲಂಕೃತನಾದ ರಾಜಾಮಾತ್ಯನನ್ನು ಕುರಿತು ನನ್ನ ಕಾಗೆಯು ಹೇಳುತ್ತಿದೆ. ನೀನು ಇಂತಹ ಸ್ಥಳದಲ್ಲಿ ಇಂತಹ ಅಪಚಾರವನ್ನು ಮಾಡಿದ್ದೀಯೆ ಎಂದು ಹೇಳಿದನು.

ಅಸೌ ಚಾಸೌ ಚ ಜಾನೀತೇ ರಾಜಕೋಶಸ್ತ್ವಯಾ ಹೃತಃ ।
ಏವಮಾಖ್ಯಾತಿ ಕಾಕೋಽಯಂ ತಚ್ಚೀಘ್ರಮನುಗಮ್ಯತಾಮ್ ॥೧೩॥

ಈ ವಿಷಯವನ್ನು ಇಂತಹವರು ಇಂತಹವರು ತಿಳಿದಿದ್ದಾರೆ. ಈ ರಾಜಕೋಶವನ್ನು ಅಪಹರಿಸಿದ್ದೀಯೆ. ಹೀಗೆ ಈ ಕಾಗೆಯು ಹೇಳುತ್ತಿದೆ. ಅದನ್ನು ಒಪ್ಪಿಕೋ. (ಎಂದು ಹೇಳಿದನು)

ತಥಾನ್ಯಾನಪಿ ಸ ಪ್ರಾಹ ರಾಜಕೋಶಹರಾನ್ ಸದಾ ।
ನ ಚಾಸ್ಯ ವಚನಂ ಕಿಂಚಿದನೃತಂ ಶ್ರೂಯತೇ ಕ್ವಚಿತ್ ॥೧೪॥

ಹಾಗೆಯೇ ರಾಜಕೋಶವನ್ನು ಅಪಹಾರಮಾಡಿದ ಉಳಿದವರ ವಿಷಯದಲ್ಲಿಯೂ ಹೇಳಿದನು. ಅವನ ಯಾವ ಮಾತೂ ಸುಳ್ಳಾಗಿರುವುದು ಕಂಡುಬರಲಿಲ್ಲ.

ತೇನ ವಿಪ್ರಕೃತಾಃ ಸರ್ವೇ ರಾಜಯುಕ್ತಾಃ ಕುರೂದ್ವಹ ।
ತಮತಿಕ್ರಮ್ಯ ಸುಪ್ತಸ್ಯ ನಿಶಿ ಕಾಕಮಪೋಥಯನ್ ॥೧೫॥

ಎಲೈ ಕುರೂದ್ವಹನೇ! ಹೀಗೆ ಅವನಿಂದ ಅಪಚಾರಕ್ಕೆ ಒಳಗಾದ ರಾಜಸೇವಕರು ರಾತ್ರಿಯಲ್ಲಿ ಅವನು ಮಲಗಿದ್ದಾಗ ಅವನನ್ನು ಮೀರಿ ಅವನ ಕಾಗೆಯನ್ನು ಕೊಂದರು.

ವಾಯಸಂ ತು ವಿನಿರ್ಭಿನ್ನಂ ದೃಷ್ಟ್ವಾ ಬಾಣೇನ ಪಂಜರೇ।
ಪೂರ್ವಾಹ್ಣೇ ಬ್ರಾಹ್ಮಣೋ ವಾಕ್ಯಂ ಕ್ಷೇಮದರ್ಶಿನಮಬ್ರವೀತ್ ॥೧೬॥

ಪಂಜರದಲ್ಲಿದ್ದ ಕಾಗೆಯು ಬಾಣದಿಂದ ಹತವಾದುದನ್ನು ನೋಡಿ, ಆ ಬ್ರಾಹ್ಮಣನು ಪ್ರಾತಃಕಾಲದಲ್ಲಿ ಕ್ಷೇಮದರ್ಶಿಯನ್ನು ಕುರಿತು ಹೇಳಿದನು.

ರಾಜಂಸ್ತ್ವಾಮಭಯಂ ಯಾಚೇ ಪ್ರಭುಂ ಪ್ರಾಣಧನೇಶ್ವರಮ್।
ಅನುಜ್ಞಾತಸ್ತ್ವಯಾ ಬ್ರೂಯಾಂ ವಚನಂ ತ್ವತ್ಪುರೋ ಹಿತಮ್ ॥೧೭॥

ಎಲೈ ರಾಜನೇ! ಪ್ರಭುವೂ ಪ್ರಾಣಧನೇಶ್ವರನೂ ಆದ ನಿನ್ನನ್ನು ಅಭಯವನ್ನು ಯಾಚಿಸುತ್ತಿದ್ದೇನೆ. ನೀನು ಅನುಮತಿಯನ್ನು ಕೊಟ್ಟರೆ ನಿನ್ನ ಎದುರಿಗೆ ನಿನಗೆ ಹಿತವಚನವನ್ನು ಹೇಳುವೆನು.

ಮಿತ್ರಾರ್ಥಮಭಿಸಂತಪ್ತೋ ಭಕ್ತ್ಯಾ ಸರ್ವಾತ್ಮನಾ ಗತಃ।
ಅಯಂ ತವಾರ್ಥೋ ಹ್ರಿಯತೇ ಯೋ ಬ್ರೂಯಾದಕ್ಷಮಾನ್ವಿತಃ ॥೧೮॥

ನನ್ನ ಮಿತ್ರನಾದ ನಿನ್ನ ವಿಷಯದಲ್ಲಿ ಮನಸ್ಸಿನಲ್ಲಿ ತಾಪವನ್ನು ಹೊಂದಿ, ನಿನ್ನ ಮೇಲಿನ ಸ್ನೇಹದಿಂದ ಬಂದಿದ್ದೇನೆ. ನಿನ್ನ ಅರ್ಥಸಾಧಕನಾದ ಬ್ರಾಹ್ಮಣನಾದ ಈ ನನ್ನನ್ನು ಮಂತ್ರಿಗಳು ಅಪಹರಿಸಲು ಯತ್ನಿಸುತ್ತಿದ್ದಾರೆ.

ಸಂಬುಬೋಧಯಿಷುರ್ಮಿತ್ರಂ ಸದಶ್ವಮಿವ ಸಾರಥಿಃ।
ಅತಿಮನ್ಯುಪ್ರಸಕ್ತೋ ಹಿ ಪ್ರಸಜ್ಯ ಹಿತಕಾರಣಮ್ ॥೧೯॥

ತಥಾವಿಧಸ್ಯ ಸುಹೃದಃ ಕ್ಷಂತವ್ಯಂ ಸಂವಿಜಾನತಾ।
ಐಶ್ವರ್ಯಮಿಚ್ಛತಾ ನಿತ್ಯಂ ಪುರುಷೇಣ ಬುಭೂಷತಾ ॥೨೦॥

ಸಾರಥಿಯು ಸದಶ್ವವನ್ನು ಎಚ್ಚರಿಸುವಂತೆ ನಿನ್ನ ಹಿತವನ್ನು ಆಲೋಚಿಸಿ, ನಿನ-ಗಾಗಿರುವ ಅಪಚಾರದಿಂದ ಬಹಳ ಕೋಪಗೊಂಡು, ನಿತ್ಯವೂ ನಿನ್ನ ಅಭಿವೃದ್ಧಿಯನ್ನು

ಇಚ್ಛಿಸಿ ಮಾತನಾಡುತ್ತೇನೆ. ತಿಳಿದವನೂ ಶ್ರೇಯೋಕಾಂಕ್ಷಿಯೂ ಆದ ನೀನು ಅಂತಹ ಸ್ನೇಹಿತನ ಮಾತನ್ನು ಕ್ಷಮಿಸಬೇಕು. (ಎಂದು ಹೇಳಿದನು)

ತಂ ರಾಜಾ ಪ್ರತ್ಯುವಾಚೇದಂ ಯನ್ಮಾ ಕಿಂಚಿದ್ ಭವಾನ್ ವದೇತ್ ।
ಕಸ್ಮಾದಹಂ ನ ಕ್ಷಮೇಯಮಾಕಾಂಕ್ಷನ್ನಾತ್ಮನೋ ಹಿತಮ್ ॥೨೧॥

ರಾಜನು ಅವನನ್ನು ಕುರಿತು ನನ್ನ ಹಿತವನ್ನು ಬಯಸುವ ನೀನು ಹೇಳುವ ಮಾತನ್ನು ನಾನು (ಅದನ್ನು) ಹೇಗೆ ಕ್ಷಮಿಸದಿರಲಿ ಎಂದು ಹೇಳಿದನು.

ಬ್ರಾಹ್ಮಣ ಪ್ರತಿಜಾನೀಹಿ ಪ್ರಬ್ರೂಹಿ ಯದಿ ಚೇಚ್ಛಸಿ ।
ಕರಿಷ್ಯಾಮಿ ಹಿ ತೇ ವಾಕ್ಯಂ ಯದ್ಯನ್ಮಾಂ ವಿಪ್ರ ವಕ್ಷ್ಯಸಿ ॥೨೨॥

ಬ್ರಾಹ್ಮಣನೇ! ಪ್ರತಿಜ್ಞೆಯನ್ನು ಮಾಡುತ್ತೇನೆ. ನೀನು ಬಯಸಿದುದನ್ನು ಹೇಳು. ಎಲೈ ಬ್ರಾಹ್ಮಣನೇ! ನೀನು ಹೇಳಿದಂತೆಯೇ ನಾನು ನಡೆದುಕೊಳ್ಳುವೆನು.

ಮುನಿಃ

ಜ್ಞಾತ್ವಾ ನಯಾನಪಾಯಾಂಶ್ಚ ಭೃತ್ಯತಸ್ತೇ ಭಯಾನಿ ಚ ।
ಭಕ್ತ್ಯಾ ವೃತ್ತಿಂ ಸಮಾಖ್ಯಾತುಂ ಭವತೋಽಂತಿಕಮಾಗಮಮ್ ॥೨೩॥

ಮುನಿ – ನಿನ್ನ ರಾಜ್ಯದಲ್ಲಿ ನಿನ್ನ ಭೃತ್ಯರಿಂದ ನಡೆಯುವ ನ್ಯಾಯಾನ್ಯಾಯಗಳನ್ನು ಮತ್ತು ನಿನಗೆ ಉಂಟಾಗಿರುವ ಭಯವನ್ನು ತಿಳಿದು ನಿನ್ನ ಮೇಲಿನ ಸ್ನೇಹದಿಂದ ಅದನ್ನು ನಿನಗೆ ತಿಳಿಸಲು ನಿನ್ನ ಸಮೀಪಕ್ಕೆ ಬಂದಿದ್ದೇನೆ.

ಪ್ರಾಗೇವೋಕ್ತಶ್ಚ ದೋಷೋಽಯಮಾಚಾರ್ಯೈರ್ನೃಪಸೇವಿತಮ್ ।
ಅಗತಾ ಕುಗತಿರ್ಹ್ಯೇಷಾ ಯಾ ರಾಜ್ಞಾಸಹ ಜೀವಿಕಾ ॥೨೪॥

ಆಚಾರ್ಯರು ರಾಜನ ಸೇವೆಯನ್ನು ಮಾಡುವವರಿಗೆ ಈ ದೋಷವಿರುತ್ತದೆ ಎಂದು ಮೊದಲೇ ಹೇಳಿದ್ದಾರೆ. ರಾಜನ ಜೊತೆಯಲ್ಲಿ ಜೀವನ ಮಾಡುವವರಿಗೆ ಯಾರಿಂದಲೂ ತಿಳಿಯಲಾರದ ಇಂತಹ ದುರ್ಗತಿ ಉಂಟಾಗುತ್ತದೆ.

ಆಶೀವಿಷೈಶ್ಚ ತಸ್ಯಾಹುಃ ಸಂಗತಂ ಯಸ್ಯ ರಾಜಭಿಃ।
ಬಹುಮಿತ್ರಾಶ್ಚ ರಾಜಾನೋ ಬಹ್ವಮಿತ್ರಾಸ್ತಥೈವ ಚ ॥೨೫॥

ರಾಜನ ಸಹವಾಸವು ಸರ್ಪದ ಸಹವಾಸವೆಂದು ಹೇಳುತ್ತಾರೆ. ರಾಜನಿಗೆ ಅನೇಕ ಮಿತ್ರರೂ ಅನೇಕ ಶತ್ರುಗಳೂ ಇರುತ್ತಾರೆ.

ತೇಭ್ಯಃ ಸರ್ವೇಭ್ಯ ಏವಾಹುರ್ಭಯಂ ರಾಜೋಪಸೇವಿತಮ್।
ಅಥೈಷಾಮೇಕತೋ ರಾಜನ್ ಮುಹೂರ್ತಾದೇವ ಭೀರ್ಭವೇತ್ ॥೨೬॥

ರಾಜಸೇವಕರಾದವರಿಗೆ ಅವರೆಲ್ಲರಿಂದಲೂ ಭಯವಿರುತ್ತದೆ. ಎಲೈ ರಾಜನೇ! ಅವರಲ್ಲಿ ಒಬ್ಬನೂ ಸಹ ಒಂದೇ ಮುಹೂರ್ತದಲ್ಲಿ ಭಯವನ್ನುಂಟು ಮಾಡಬಹುದು.

ನೈಕಾಂತೇನಾಪ್ರಮಾದೋ ಹಿ ಕರ್ತುಂ ಶಕ್ಯೋ ಮಹೀಪತೌ।
ನ ತು ಪ್ರಮಾದಃ ಕರ್ತವ್ಯಃ ಕಥಂಚಿದ್ ಗತಿಮಿಚ್ಛತಾ ॥೨೭॥

ರಾಜನ ಸೇವೆಯಲ್ಲಿರುವವನು ಎಂದೂ ಎಚ್ಚರ ತಪ್ಪಿ ನಡೆದುಕೊಳ್ಳಬಾರದು. ತನ್ನ ಶುಭಗತಿಯನ್ನು ಬಯಸುವವನು ನಿಯಮೇನ ಪ್ರಮಾದವನ್ನು ಮಾಡಬಾರದು.

ಪ್ರಮಾದಾದ್ಧಿ ಸ್ಖಲೇದ್ ರಾಜಾ ಸ್ಖಲಿತೇ ನಾಸ್ತಿ ಜೀವಿತಮ್।
ಅಗ್ನಿಂ ದೀಪ್ತಮಿವಾಸೀದೇದ್ ರಾಜಾನಮುಪಶಿಕ್ಷಿತಃ ॥೨೮॥

ಪ್ರಮಾದವನ್ನು ಮಾಡಿದರೆ ರಾಜನು ಒಂದು ತಪ್ಪನ್ನು ಮಾಡಬಹುದು. ರಾಜನು ತಪ್ಪನ್ನು ಮಾಡಿದರೆ ಸೇವಕನ ಜೀವಿತವೇ ಉಳಿಯಲಾರದು. ವಿದ್ಯಾವಂತನಾದವನು ಉರಿಯುವ ಅಗ್ನಿಯ ಬಳಿಗೆ ಹೋದಂತೆ ರಾಜನ ಬಳಿಗೆ ಹೋಗಬೇಕು.

ಆಶೀವಿಷಮಿವ ಕ್ರುದ್ಧಂ ಪ್ರಭುಂ ಪ್ರಾಣಧನೇಶ್ವರಮ್।
ಯತ್ನೇನೋಪಚರೇನ್ನಿತ್ಯಂ ನಾಹಮಸ್ಮೀತಿ ಮಾನವಃ ॥೨೯॥

ಪ್ರಭುವೂ, ಪ್ರಾಣಧನೇಶ್ವರನೂ ಆದ ರಾಜನನ್ನು ಕೋಪಗೊಂಡ ಸರ್ಪದಂತೆ ಮನುಷ್ಯನು ನಾನು ಉಳಿಯುವುದಿಲ್ಲ ಎಂದು ತಿಳಿದೇ ಪ್ರಯತ್ನಪೂರ್ವಕವಾಗಿ ಉಪಚರಿಸಬೇಕು.

ದುರ್ವ್ಯಾಹತಾಚ್ಚಂಕಮಾನೋ ದುಷ್ಕೃತಾದ್ ದುರಧಿಷ್ಠಿತಾತ್ ।
ದುರಾಸಿತಾದ್ ದುರ್ವ್ರಜಿತಾದಿಂಗಿತಾದಂಗಚೇಷ್ಟಿತಾತ್ ॥೩೦॥

ದುರ್ವಚನಗಳಿಂದ ಶಂಕಿಸುತ್ತಾ, ದುಷ್ಕಾರ್ಯಗಳಿಂದಲೂ ಅಯೋಗ್ಯ-ಸ್ಥಾನದಲ್ಲಿ ನಿಲ್ಲುವುದರಿಂದಲೂ ಕೂಡುವುದರಿಂದಲೂ ನಡೆಯುವುದರಿಂದಲೂ ಇಂಗಿತಗಳಿಂದಲೂ ಅಂಗಚೇಷ್ಟೆಗಳಿಂದಲೂ ತನ್ನನ್ನು ರಕ್ಷಿಸಿಕೊಳ್ಳಬೇಕು.

ದೇವತೇವ ಹಿ ಸರ್ವಾರ್ಥಾನ್ ಕುರ್ಯಾದ್ ರಾಜಾ ಪ್ರಸಾದಿತಃ ।
ವೈಶ್ವಾನರ ಇವ ಕ್ರುದ್ಧಃ ಸಮೂಲಮಪಿ ನಿರ್ದಹೇತ್ ।
ಇತಿ ರಾಜನ್ ಮಯಃ ಪ್ರಾಹ ವರ್ತತೇ ಚ ತಥೈವ ತತ್ ॥೩೧॥

ರಾಜನು ಪ್ರಸನ್ನನಾದರೆ ದೇವತೆಯಂತೆ ಎಲ್ಲಾ ಅರ್ಥವನ್ನೂ ಕೊಡುತ್ತಾನೆ. ಕೋಪಗೊಂಡರೆ ಅಗ್ನಿಯಂತೆ ಮೂಲಸಹಿತವಾಗಿ ಸುಟ್ಟುಬಿಡುತ್ತಾನೆ. ಎಲೈ ರಾಜನೇ! ಮಯನು ಹೀಗೆ ಹೇಳಿದ್ದಾನೆ. ಅದು ಹಾಗೆಯೇ ಸರಿ.

ಅಥ ಭೂಯಾಂಸಮೇವಾರ್ಥಂ ಕರಿಷ್ಯಾಮಿ ಪುನಃಪುನಃ ।
ದದಾತ್ಯಸ್ಮದ್ವಿಧೋಽಮಾತ್ಯೋ ಬುದ್ಧಿಸಾಹಾಯ್ಯಮಾಪದಿ ॥೩೨॥

ನಿನಗೆ ಇದಕ್ಕಿಂತ ಹೆಚ್ಚಿನ ಹಿತವನ್ನು ಪುನಃ ಪುನಃ ಮಾಡುತ್ತೇನೆ. ನನ್ನಂತಹ ಅಮಾತ್ಯರು ಆಪತ್ಕಾಲದಲ್ಲಿ ರಾಜನಿಗೆ ಬುದ್ಧಿಸಹಾಯವನ್ನು ನೀಡುತ್ತಾರೆ.

ವಾಯಸಶ್ಚೈವ ಮೇ ರಾಜನ್ನಂತಕಾಯಾಭಿಸಂಹಿತಃ ।
ನ ಚ ಮೇಽತ್ರ ಭವಾನ್ ಗರ್ಹ್ಯೋ ನ ಚ ಯೇಷಾಂ ಭವಾನ್ ಪ್ರಿಯಃ ।
ಹಿತಾಹಿತಾಂಸ್ತು ಬುದ್ಧ್ಯೇಥಾ ಮಾ ಪರೋಕ್ಷಮತಿರ್ಭವ ॥೩೩॥

ಎಲೈ ರಾಜನೇ! ನನ್ನ ಕಾಗೆಯು ಯಮಲೋಕಕ್ಕೆ ಕಳುಹಿಸಲ್ಪಟ್ಟಿತು. ಅದಕ್ಕಾಗಿ

ನಾನು ನಿನ್ನನ್ನಾಗಲೀ, ನೀನು ಯಾರಿಗೆ ಪ್ರಿಯನೋ ಅವರನ್ನಾಗಲೀ ನಿಂದಿಸುವುದಿಲ್ಲ. ಹಿತಾಹಿತಗಳನ್ನು ತಿಳಿದುಕೋ. ಕಣ್ಣುಮುಚ್ಚಿ ಕುಳಿತಿರಬೇಡ.

ಯೇ ತ್ವಾದಾನಪರಾ ಏವ ವಸಂತಿ ಭವತೋ ಗೃಹೇ।
ಅಭೂತಿಕಾಮಾ ಭೂತಾನಾಂ ತಾದೃಶೈರ್ಮೇऽಭಿಸಂಹಿತಮ್ ॥೩೪॥

ಯಾರು ನಿನ್ನ ಮನೆಯಲ್ಲೇ ವಾಸ ಮಾಡಿ, ನಿನ್ನ ಐಶ್ವರ್ಯವನ್ನು ಬಯಸಿ, ನಿನ್ನ ಹಣವನ್ನು ಅಪಹರಿಸುತ್ತಿದ್ದಾರೆಯೋ ಅಂತಹವರಿಂದ ನನ್ನ ಕಾಗೆಯು ಕೊಲ್ಲಲ್ಪಟ್ಟಿತು.

ಯೇ ವಾ ಭವದ್ವಿನಾಶೇನ ರಾಜ್ಯಮಿಚ್ಛಂತ್ಯನಂತರಮ್ ।
ಆಂತರೈರಭಿಸಂಧಾಯ ರಾಜನ್ ಸಿದ್ಧ್ಯಂತಿ ನಾನ್ಯಥಾ ॥೩೫॥

ಎಲೈ ರಾಜನೇ! ಯಾರು ಒಳಗಿನವರ ಜೊತೆಯಲ್ಲಿ ಸಂಧಾನ ಮಾಡಿ, ನಿನ್ನನ್ನು ವಿನಾಶ ಮಾಡಿ, ನಿನ್ನ ಅನಂತರದಲ್ಲಿ ರಾಜ್ಯವನ್ನು ಬಯಸುತ್ತಾರೆಯೋ (ಅವರಿಂದ ಅಂತಹ ಕೆಲಸವು ಮಾಡಲ್ಪಟ್ಟಿತು). ಆದರೆ ಅವರಿಗೆ ಆ ರೀತಿ ಸಿದ್ಧಿಸುವುದಿಲ್ಲ.

ತೇಷಾಮಹಂ ಭಯಾದ್ ರಾಜನ್ ಗಮಿಷ್ಯಾಮ್ಯನ್ಯಮಾಶ್ರಮಮ್ ।
ತೈರ್ಹಿ ಮೇ ಸಂಧಿತೋ ಬಾಣಃ ಕಾಕೇ ನಿಪತಿತಃ ಪ್ರಭೋ ॥೩೬॥

ಎಲೈ ರಾಜನೇ! ಅವರ ಭಯದಿಂದ ನಾನು ಇನ್ನೊಂದು ಆಶ್ರಮಕ್ಕೆ ಹೋಗುವೆನು. ಎಲೈ ಪ್ರಭುವೇ! ಅವರು ನನ್ನ ಮೇಲೆ ಪ್ರಯೋಗಿಸಿದ ಬಾಣವು ಕಾಗೆಯ ಮೇಲೆ ಬಿದ್ದಿತು.

ಛದ್ಮನಾ ಮಮ ಕಾಕಶ್ಚ ಗಮಿತೋ ಯಮಸಾದನಮ್ ।
ದೃಷ್ಟಂ ಹ್ಯೇತನ್ಮಯಾ ರಾಜಂಸ್ತಪೋದೀರ್ಘೇಣ ಚಕ್ಷುಷಾ ॥೩೭॥

ಎಲೈ ರಾಜನೇ! ನನ್ನ ಕಾಗೆಯು ಮೋಸದಿಂದ ಕೊಲ್ಲಲ್ಪಟ್ಟಿತು. ಇದನ್ನು ನಾನು ತಪಸ್ಸಿನಿಂದ ಕೂಡಿದ ನನ್ನ ಚಕ್ಷುಸ್ಸಿನಿಂದ ನೋಡಿದ್ದೇನೆ.

ಬಹುನಕ್ರಝಷಗ್ರಾಹಾಂ ತಿಮಿಂಗಿಲಗಣಾಯುತಾಮ್ ।
ಕಾಕೇನ ಬಾಲಿಶೇನೇಮಾಮತಾರ್ಷಂ ತ್ವಾಮಹಂ ನದೀಮ್ ॥೩೮॥

ಸ್ಥಾಣ್ವಶ್ಮಕಂಟಕವತೀಂ ವ್ಯಾಘ್ರಸಿಂಹಗಜಾಕುಲಾಮ್ ।
ದುರಾಸದಾಂ ದುಷ್ಪ್ರವೇಶಾಂ ಗುಹಾಂ ಹೈಮವತೀಮಿವ ॥೩೯॥

ಅನೇಕ ಮೀನು ಮೊಸಳೆಗಳು ಇರುವ, ತಿಮಿಂಗಿಲಗಣಗಳಿಂದ ಕೂಡಿರುವ, ಬಂಡೆಗಳು ಸಣ್ಣಕಲ್ಲುಗಳು ಮತ್ತು ಮುಳ್ಳುಗಳಿಂದ ಕೂಡಿರುವ, ಸಿಂಹವ್ಯಾಘ್ರ ಗಜಗಳಿಂದ ಕೂಡಿರುವ, ಸಮೀಪಿಸಲು ಮತ್ತು ಪ್ರವೇಶಿಸಲು ಅಸಾಧ್ಯವಾದ ಹಿಮಾಲಯಪರ್ವತದ ಗುಹೆಯಂತಿರುವ, ನದಿಯಂತಿರುವ ರಾಜನಾದ ನಿನ್ನನ್ನು ನಾನು ಬಡಪಾಯಿಯಾದ ಕಾಗೆಯಿಂದ ದಾಟಿದ್ದೇನೆ.

ಅಗ್ನಿನಾ ತಾಮಸಂ ದುರ್ಗಂ ನೌಭಿರಾಪ್ಯಂ ಚ ಗಮ್ಯತೇ ।
ರಾಜದುರ್ಗಾವತರಣೇ ನೋಪಾಯಂ ಪಂಡಿತಾ ವಿದುಃ ॥೪೦॥

ಕತ್ತಲಿರುವ ಕೋಟೆಯನ್ನು ಅಗ್ನಿಯಿಂದಲೂ, ಜಲಮಯವಾದ ಕೋಟೆಯನ್ನು ನೌಕೆಯಿಂದಲೂ ಸಮೀಪಿಸಬಹುದು. ಆದರೆ ರಾಜನೆಂಬ ಕೋಟೆಯನ್ನು ಪ್ರವೇಶಿಸಲು ಯಾವ ಉಪಾಯವೂ ಪಂಡಿತರಿಗೆ ತಿಳಿದಿಲ್ಲ.

ಗಹನಂ ಭವತೋ ರಾಜ್ಯಮಂಧಕಾರಂ ತಮೋವೃತಮ್ ।
ನೇಹ ವಿಶ್ವಸಿತುಂ ಶಕ್ಯಂ ಭವತಾಪಿ ಕುತೋ ಮಯಾ ॥೪೧॥

ನಿನ್ನ ರಾಜ್ಯವು ಕತ್ತಲಿನಿಂದ ಕೂಡಿದ ದೊಡ್ಡ ಕಾಡಾಗಿದೆ. ಇಲ್ಲಿ ನೀನೂ ಸಹ ವಿಶ್ವಾಸದಿಂದ ಇರಲಾರೆ. ಇನ್ನು ನಾನು ಹೇಗೆ ವಿಶ್ವಾಸದಿಂದ ಇರುವೆನು?

ಅತೋ ನಾಯಂ ಶುಭೋ ವಾಸಸ್ತುಲ್ಯೇ ಸದಸತೀ ಇಹ ।
ವಧೋ ಹ್ಯೇವಾತ್ರ ಸುಕೃತೋ ದುಷ್ಕೃತೇ ನ ಚ ಸಂಶಯಃ ॥೪೨॥

ಆದ್ದರಿಂದ ಇಲ್ಲಿ ವಾಸ ಮಾಡುವುದು ಶುಭವಲ್ಲ. ಇಲ್ಲಿ ಸದಸತ್ಕಾರ್ಯಗಳು ಸಮಾನವಾಗಿವೆ. ಒಳ್ಳೆಯ ಕಾರ್ಯವನ್ನು ಮಾಡಿದವನಿಗೆ ವಧೆಯೇ ಉಂಟಾಗು-

ತ್ತಿದೆ. ದುಷ್ಕಾರ್ಯವನ್ನು ಮಾಡಿದವನಿಗೆ ವಧೆಯುಂಟಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ನ್ಯಾಯತೋ ದುಷ್ಕೃತೇ ಘಾತಃ ಸುಕೃತೇ ಸ್ಯಾತ್ ಕಥಂ ವಧಃ।
ನೇಹ ಯುಕ್ತಂ ಚಿರಂ ಸ್ಥಾತುಂ ಜವೇನಾತೋ ವ್ರಜೇದ್ ಬುಧಃ ॥೪೩॥

ನ್ಯಾಯವಾಗಿ ನೋಡಿದರೆ ದುಷ್ಕಾರ್ಯವನ್ನು ಮಾಡಿದವನಿಗೆ ವಧೆಯಾಗಬೇಕು. ಸತ್ಕಾರ್ಯವನ್ನು ಮಾಡಿದವನಿಗೆ ಹೇಗೆ ವಧೆಯಾದೀತು? ಇಲ್ಲಿ ಬಹಳಕಾಲ ನಿಲ್ಲುವುದು ಯೋಗ್ಯವಲ್ಲ. ಆದ್ದರಿಂದ ವಿವೇಕಿಯಾದವನು ಶೀಘ್ರವಾಗಿ ಹೊರಟು -ಹೋಗಬೇಕು.

ಸೀತಾ ನಾಮ ನದೀ ರಾಜನ್ ಪ್ಲವೋ ಯಸ್ಯಾಂ ನಿಮಜ್ಜತಿ।
ತಥೋಪಮಾಮಿಮಾಂ ಮನ್ಯೇ ವಾಗುರಾಂ ಸರ್ವಘಾತಿನೀಮ್ ॥೪೪॥

ಎಲೈ ರಾಜನೇ! ಸೀತಾ ಎಂಬ ನದಿಯಿದೆ. ಅದರಲ್ಲಿ ದೋಣಿಗಳು ಮುಳುಗುತ್ತವೆ. ನಿನ್ನ ರಾಜ್ಯವು ಅದರಂತೆ ಸರ್ವಘಾತುಕವಾದ ಬಲೆಯಂತೆ ಇದೆ ಎಂದು ನಾನು ತಿಳಿಯುತ್ತೇನೆ.

ಮಧುಪ್ರಪಾತೋ ಹಿ ಭವಾನ್ ಭೋಜನಂ ವಿಷಸಂಯುತಮ್।
ಅಸತಾಮಿವ ತೇ ಭಾವೋ ವರ್ತತೇ ನ ಸತಾಮಿವ।
ಆಶೀವಿಷೈಃ ಪರಿವೃತಃ ಕೂಪಸ್ತ್ವಮಿವ ಪಾರ್ಥಿವ ॥೪೫॥

ನೀನು ಮಧುಪ್ರಪಾತದಂತೆ ಇದ್ದೀಯೆ. ನಿನ್ನ ಭೋಜನವು ವಿಷಸಂಯುತವಾಗಿದೆ. ನಿನ್ನ ಅಭಿಪ್ರಾಯವು ಅಸಜ್ಜನರ ಅಭಿಪ್ರಾಯದಂತೆ ಇದೆಯೇ ಹೊರತು ಸಜ್ಜನರ ಅಭಿಪ್ರಾಯದಂತೆ ಇಲ್ಲ. ಎಲೈ ರಾಜನೇ! ನೀನು ಸರ್ಪಗಳಿಂದ ಸುತ್ತುವರಿಯಲ್ಪಟ್ಟ ಕೂಪದಂತೆ ಇದ್ದೀಯೆ.

ದುರ್ಗತೀರ್ಥಾ ಬೃಹತ್ಕೂಲಾ ಕರೀರೀವೇತ್ರಸಂಯುತಾ।

ನದೀ ಮಧುರಪಾನೀಯಾ ಯಥಾ ರಾಜಂಸ್ತಥಾ ಭವಾನ್ ।
ಶ್ವಗೃಧ್ರಗೋಮಾಯುಯುತೋ ರಾಜಹಂಸಸಮೋ ಹ್ಯಸಿ ॥೪೬॥

ಪಡೆಯಲು ಅಸಾಧ್ಯವಾದ ಜಲ, ದೊಡ್ಡ ದಡ, ಬೆತ್ತ ಮೊದಲಾದ ಗಿಡ-ಗೆಂಟೆಗಳ ಪೊದೆ, ಮಧುರವಾದ ಜಲವಿರುವ ನದಿಯಂತೆ ನೀನು ಇದ್ದೀಯೆ. ಎಲೈ ರಾಜನೇ! ನೀನು ನಾಯಿ, ನರಿ ಮತ್ತು ಹದ್ದುಗಳಿಂದ ಸುತ್ತುವರಿಯಲ್ಪಟ್ಟ ರಾಜ-ಹಂಸಕ್ಕೆ ಸಮನಾಗಿದ್ದೀಯೆ.

ಯಥಾಶ್ರಿತ್ಯ ಮಹಾವೃಕ್ಷಂ ಕಕ್ಷಃ ಸಂವರ್ಧತೇ ಮಹಾನ್ ।
ತತಸ್ತಂ ಸಂವೃಣೋತ್ಯೇವ ತಮತೀತ್ಯ ಚ ವರ್ಧತೇ ॥೪೭॥

ತೇನೈವೋಪೇಂಧನೋ ನೂನಂ ದಾವೋ ದಹತಿ ದಾರುಣಃ ।
ತಥೋಪಮಾ ಹ್ಯಮಾತ್ಯಾಸ್ತೇ ರಾಜಂಸ್ತಾನ್ ಪರಿಶೋಧಯ ॥೪೮॥

ಹೇಗೆ ಪೊದೆಗಳು ದೊಡ್ಡ ವೃಕ್ಷವನ್ನು ಆಶ್ರಯಿಸಿ ಚೆನ್ನಾಗಿ ಬೆಳೆದು ಅದನ್ನು ಆವರಿಸಿ ಅದಕ್ಕಿಂತ ಮೇಲೆ ಬೆಳೆಯುತ್ತವೆಯೋ, ವೃಕ್ಷಕ್ಕೆ ಬೆಂಕಿಯು ತಗುಲಿದಾಗ ಇವು ಸೌದೆಗಳಾಗಿ ದಾವವಾಗಿ ಮಹಾವೃಕ್ಷವನ್ನು ದಹಿಸುತ್ತವೆಯೋ ಎಲೈ ರಾಜನೇ! ನಿನ್ನ ಅಮಾತ್ಯರು ಆ ರೀತಿಯಲ್ಲಿದ್ದಾರೆ. ಅವರನ್ನು ಚೆನ್ನಾಗಿ ಶೋಧಿಸು.

ಭವತ್ಯೈವ ಕೃತಾ ರಾಜನ್ ಭವತಾ ಪರಿಪಾಲಿತಾಃ ।
ಭವಂತಂ ಪರ್ಯವಜ್ಞಾಯ ಜಿಘಾಂಸಂತಿ ಭವತ್ಪ್ರಿಯಮ್ ॥೪೯॥

ಎಲೈ ರಾಜನೇ! ನೀನೇ ನೇಮಿಸಿದವರು, ನಿನ್ನಿಂದಲೇ ರಕ್ಷಿತರಾದವರು ಅಂತಹವರು ನಿನ್ನನ್ನು ತಿರಸ್ಕರಿಸಿ ನಿನಗೆ ಪ್ರಿಯರಾದವರನ್ನು ಕೊಲ್ಲಲು ಬಯಸುತ್ತಾರೆ.

ಉಷಿತಂ ಶಂಕಮಾನೇನ ಪ್ರಮಾದಂ ಪರಿರಕ್ಷತಾ ।
ಅಂತಃಸರ್ಪ ಇವಾಗಾರೇ ವೀರಪತ್ನ್ಯಾ ಇವಾಲಯೇ ।
ಶೀಲಂ ಜಿಜ್ಞಾಸಮಾನೇನ ರಾಜ್ಞಶ್ಚ ಸಹಜೀವಿನಾ ॥೫೦॥

ನಿನ್ನ ಶೀಲವನ್ನು ತಿಳಿದುಕೊಳ್ಳಲು ಬಯಸಿ, ಯಾವ ಪ್ರಮಾದವನ್ನೂ ಮಾಡದಂತೆ ಸರ್ಪವಿರುವ ಮನೆಯಲ್ಲಿ ಜೀವಿಸಿದಂತೆ, ವೀರಪತ್ನಿಯ ಮನೆಯಲ್ಲಿ ಜೀವಿಸಿದಂತೆ ನಿನ್ನ ಜೊತೆಯಲ್ಲಿ ಜೀವಿಸಿದೆ.

ಕಚ್ಚಿಜ್ಜಿತೇಂದ್ರಿಯೋ ರಾಜಾ ಕಚ್ಚಿದಸ್ಯಾಂತರಾ ಜಿತಾಃ।
ಕಚ್ಚಿದೇಷಾಂ ಪ್ರಿಯೋ ರಾಜಾ ಕಚ್ಚಿದ್ ರಾಜ್ಞಃ ಪ್ರಿಯಾ ಪ್ರಜಾಃ ॥೫೧॥

ಜಿಜ್ಞಾಸುರಿಹ ಸಂಪ್ರಾಪ್ತಸ್ತವಾಹಂ ರಾಜಸತ್ತಮ।
ತಸ್ಯ ಮೇ ರೋಚತೇ ರಾಜನ್ ಕ್ಷುಧಿತಸ್ಯೇವ ಭೋಜನಮ್ ॥೫೨॥

ರಾಜನು ಜಿತೇಂದ್ರಿಯನಾಗಿದ್ದಾನೆಯೇ. ಅವನ ಒಳಗಿನ ಜನರು ಜಿತರಾಗಿದ್ದಾರೆಯೇ, ರಾಜನು ಅವರಿಗೆ ಪ್ರಿಯನಾಗಿದ್ದಾನೆಯೇ, ಪ್ರಜೆಗಳು ಅವನಿಗೆ ಪ್ರಿಯರಾಗಿದ್ದಾರೆಯೇ, ಎಲೈ ರಾಜಶ್ರೇಷ್ಠನೇ! ಇವುಗಳನ್ನು ತಿಳಿದುಕೊಳ್ಳಲು ನಾನು ನಿನ್ನ ಸಮೀಪಕ್ಕೆ ಬಂದೆ. ರಾಜನೇ! ನಿನ್ನ ಸ್ವಭಾವವು ಹಸಿದವನಿಗೆ ಭೋಜನವು ಇಷ್ಟವಾಗುವಂತೆ ನನಗೆ ಇಷ್ಟವಾಗುತ್ತದೆ.

ಅಮಾತ್ಯಾ ಮೇ ನ ರೋಚಂತೇ ವಿತೃಷ್ಣಸ್ಯ ಯಥೋದಕಮ್।
ಭವತೋऽರ್ಥಕೃದಿತ್ಯೇವ ಮಯಿ ದೋಷೋ ಹಿ ತೈಃ ಕೃತಃ।
ವಿದ್ಯತೇ ಕಾರಣಂ ನಾನ್ಯದಿತಿ ಮೇ ನಾತ್ರ ಸಂಶಯಃ ॥೫೩॥

ನಿನ್ನ ಅಮಾತ್ಯರು ಮಾತ್ರ ಬಾಯಾರಿಕೆಯಿಲ್ಲದವನಿಗೆ ನೀರು ಇಷ್ಟವಾಗದಂತೆ ನನಗೆ ಇಷ್ಟವಾಗುವುದಿಲ್ಲ. ನಿನಗೆ ಹಿತಕಾರಿಯಾದವನು ಎಂಬ ಒಂದೇ ಕಾರಣಕ್ಕಾಗಿ ಅವರು ನನಗೆ ಅಪಚಾರವನ್ನು ಮಾಡಿದ್ದಾರೆ. ಬೇರೆ ಯಾವುದೂ ಕಾರಣವಿಲ್ಲ ಎಂಬುದರಲ್ಲಿ ನನಗೆ ಯಾವ ಸಂಶಯವೂ ಇಲ್ಲ.

ನ ಹಿ ತೇಷಾಮಹಂ ದ್ರುಗ್ಧಸ್ತತ್ ತೇಷಾಂ ದೋಷವದ್ ಗತಮ್।
ಅರೇರ್ಹಿ ದುರ್ಹೃದಾದ್ ಭೇಯಂ ಭಗ್ನಪೃಷ್ಠಾದಿವೋರಗಾತ್ ॥೫೪॥

ನಾನು ಅವರಿಗೆ ಯಾವ ದ್ರೋಹವನ್ನೂ ಮಾಡಿಲ್ಲ. ಅವರು ಅದನ್ನೂ

ದೋಷವೆಂದು ಎಣಿಸುತ್ತಾರೆ. ಕೆಟ್ಟಮನಸ್ಸುಳ್ಳ ಶತ್ರುವಿನಿಂದ ಸೊಂಟವು ಮುರಿದ ಹಾವಿಗೆ ಹೆದರಿದಂತೆ ಹೆದರಬೇಕು.

ರಾಜಾ

ಭೂಯಸೋ ಪರಿಬರ್ಹೇಣ ಸತ್ಕಾರೇಣ ಚ ಭೂಯಸಾ ।
ಪೂಜಿತೋ ಬ್ರಾಹ್ಮಣಶ್ರೇಷ್ಠ ಭೂಯೋ ವಸ ಗೃಹೇ ಮಮ ॥೫೫॥

ರಾಜ– ಎಲೈ ಬ್ರಾಹ್ಮಣಶ್ರೇಷ್ಠನೇ! ಇನ್ನೂ ಹೆಚ್ಚಿನ ಉಡುಗೊರೆಗಳಿಂದ ಇನ್ನೂ ಹೆಚ್ಚಿನ ಸತ್ಕಾರಗಳಿಂದ ಪೂಜಿತನಾಗಿ ನನ್ನ ಮನೆಯಲ್ಲಿ ಇನ್ನೂ ವಾಸ ಮಾಡು.

ಯೇ ತ್ವಾ ಬ್ರಾಹ್ಮಣ ನೇಚ್ಛಂತಿ ನ ತೇ ವತ್ಸ್ಯಂತಿ ಮೇ ಗೃಹೇ ।
ಭವತೈವ ಹಿ ತಜ್ಜ್ಞೇಯಂ ಯದಿದಾನೀಮನಂತರಮ್ ॥೫೬॥

ಎಲೈ ಬ್ರಾಹ್ಮಣನೇ! ಯಾರು ನಿನ್ನನ್ನು ಬಯಸುವುದಿಲ್ಲವೋ ಅವರು ನನ್ನ ಮನೆಯಲ್ಲಿ ವಾಸಿಸುವುದಿಲ್ಲ. ನಾನು ಈಗ ಮುಂದೆ ಏನು ಮಾಡಬೇಕೆಂಬುದನ್ನು ನೀನೇ ತಿಳಿದು ಹೇಳಬೇಕು.

ಯಥಾ ಸ್ಯಾದ್ ದುಷ್ಕೃತೋ ದಂಡೋ ಯಥಾ ಚ ಸುಕೃತಂ ಕೃತಮ್ ।
ತಥಾ ಸಮೀಕ್ಷ್ಯ ಭಗವನ್ ಶ್ರೇಯಸೇ ವಿನಿಯುಂಕ್ಷ್ವ ಮಾಮ್ ॥೫೭॥

ಹೇಗೆ ದುಷ್ಕರ್ಮಗಳಿಗೆ ದಂಡವು ಉಂಟಾಗುತ್ತದೆಯೋ, ಹೇಗೆ ಒಳ್ಳೆಯ ಕಾರ್ಯವನ್ನು ಮಾಡಿದಂತಾಗುತ್ತದೆಯೋ, ಪೂಜ್ಯನೇ ಹಾಗೆ ವಿಚಾರ ಮಾಡಿ, ನನ್ನನ್ನು ಶ್ರೇಯೋಮಾರ್ಗದಲ್ಲಿ ಸ್ಥಾಪಿಸುವವನಾಗು.

ಮುನಿಃ

ಅದರ್ಶಯನ್ನಿಮಂ ದೋಷಮೇಕೈಕಂ ದುರ್ಬಲಂ ಕುರು ।
ತತಃ ಕಾರಣಮಾಜ್ಞಾಯ ಪುರುಷಂ ಪುರುಷಂ ಜಹಿ ॥೫೮॥

ಮುನಿ – ಈ ದೋಷವನ್ನು ನಿನಗೆ ತೋರಿಸಿದ್ದೇನೆ. ಒಬ್ಬೊಬ್ಬನನ್ನೂ ದುರ್ಬಲ-

ನನ್ನಾಗಿ ಮಾಡು. ಅನಂತರ ಕಾರಣವನ್ನು ತಿಳಿದು ಒಬ್ಬೊಬ್ಬ ಪುರುಷನನ್ನೂ ದೂರ-ಮಾಡು.

ಏಕದೋಷಾ ಹಿ ಬಹವೋ ಮೃದ್ನೀಯುರಪಿ ಕಂಟಕಾನ್ ।
ಮಂತ್ರಭೇದಭಯಾದ್ ರಾಜಂಸ್ತಸ್ಮಾದೇತದ್ ಬ್ರವೀಮಿ ತೇ ॥೫೯॥

ಒಂದೇ ದೋಷವಿರುವ ಅನೇಕ ಜನರು ಸೇರಿದರೆ ಅವರು ಒಟ್ಟಾಗಿ ಕಂಟಕ-ಗಳನ್ನು ತುಳಿದು ನಾಶ ಮಾಡಬಹುದು. ರಾಜನೇ ಮಂತ್ರಭೇದಭಯದಿಂದ ನಾನು ಇದನ್ನು ನಿನಗೆ ಹೇಳುತ್ತಿದ್ದೇನೆ.

ಅರ್ಥೇ ಸರ್ವಂ ಜಗದ್ ದ್ವಂದ್ವಮರ್ಥೇನ ಚ ನಿಬದ್ಧ್ಯತೇ ।
ಅರ್ಥೇ ದರ್ಪೋ ಮನುಷ್ಯಾಣಾಂ ತಸ್ಮಾದರ್ಥಂ ವಿರೇಚಯ ॥೬೦॥

ಜಗತ್ತಿನ ಎಲ್ಲ ಕಲಹಗಳು ಅರ್ಥದಿಂದ ಉಂಟಾಗುತ್ತವೆ. ಅರ್ಥದಿಂದ ಎಲ್ಲರೂ ಬದ್ಧರಾಗುತ್ತಾರೆ. ಅರ್ಥವು ಮನುಷ್ಯರಿಗೆ ದರ್ಪವನ್ನುಂಟು ಮಾಡುತ್ತದೆ. ಆದ್ದರಿಂದ ದುಷ್ಟರಾದ ಅಮಾತ್ಯರು ಅರ್ಥಹೀನರಾಗುವಂತೆ ಮಾಡು.

ಏಕೇನೈಕಸ್ಯ ದೋಷೇಣ ತದ್ವಿರುದ್ಧಂ ಪ್ರಚೋದಯ ।
ಸ ತಸ್ಯ ದೋಷಾನುದ್ಭಾವ್ಯ ತಸ್ಯಾರ್ಥಂ ಗ್ರಾಹಯಿಷ್ಯತಿ ॥೬೧॥

ಒಂದು ದೋಷವಿರುವ ಒಬ್ಬನ ಮೇಲೆ ಅವನಿಗೆ ವಿರುದ್ಧನಾದವನನ್ನು ಪ್ರಚೋದಿಸು. ಅವನು ಅವನ ಬೇರೆ ದೋಷಗಳನ್ನು ಹೊರಗೆಳೆದು ರಾಜನು ಅವನ ಅರ್ಥವನ್ನು ತೆಗೆದುಕೊಳ್ಳುವಂತೆ ಮಾಡುವನು.

ಸಾಮಪೂರ್ವಂ ಚ ಕೇಷಾಂಚಿದ್ ಭೇದೇನ ಚ ಪರಸ್ಪರಮ್ ।
ವೈರಂ ಕಾರಯ ಭೂಪಾಲ ಪಶ್ಚಾದ್ ದಂಡಂ ಪ್ರಯೋಜಯ ॥೬೨॥

ಎಲೈ ರಾಜನೇ! ಕೆಲವರಿಗೆ ಸಾಮದಿಂದ, ಕೆಲವರಿಗೆ ಭೇದದಿಂದ ವೈರವನ್ನು ಉಂಟುಮಾಡು. ಅನಂತರ ದಂಡವನ್ನು ಪ್ರಯೋಗಿಸು.

ಬಿಲ್ವೇನ ಚ ಯಥಾ ಬಿಲ್ವಮಾಕಾರಂ ಛಾದ್ಯ ಬುದ್ಧಿಮಾನ್ ।
ಅಶುದ್ಧಂ ಸಚಿವಂ ರಾಜನ್ನಶುದ್ಧೇನೈವ ನಾಶಯ ॥೬೩॥

ಬಿಲ್ವಫಲದಿಂದ ಬಿಲ್ವಫಲವನ್ನು ನಾಶಮಾಡಿದಂತೆ ಬುದ್ಧಿವಂತನಾದ ನೀನು ನಿನ್ನ ಅಭಿಪ್ರಾಯವನ್ನು ಮರೆಮಾಡಿ ಅಶುದ್ಧನಾದ ಸಚಿವನನ್ನು ಅಶುದ್ಧನಾದ ಸಚಿವನಿಂದಲೇ ನಾಶಮಾಡು.

ವಯಂ ತು ಬ್ರಾಹ್ಮಣಾ ರಾಜನ್ ಮೃದುದಂಡಾಃ ಕೃಪಾಲವಃ ।
ಸ್ವಸ್ತಿ ಚೇಚ್ಛಾಮಿ ಭವತಃ ಪರೇಷಾಂ ಚ ಯಥಾತ್ಮನಃ ॥೬೪॥

ಎಲೈ ರಾಜನೇ! ನಾವು ಬ್ರಾಹ್ಮಣರು; ಕೃಪಾಳುಗಳು ಮತ್ತು ಮೃದುವಾದ ದಂಡವುಳ್ಳವರು. ನಿನಗೂ ಉಳಿದವರಿಗೂ ನನ್ನಂತೆಯೇ ಕ್ಷೇಮವನ್ನು ಬಯಸುತ್ತೇನೆ.

ರಾಜನ್ನಾತ್ಮಾನಮಾಚಕ್ಷೇ ಸಂಬಂಧೀ ಭವತೋ ಹ್ಯಹಮ್ ।
ಮುನಿಃ ಕಾಲಕವೃಕ್ಷೀಯ ಇತ್ಯೇವಮಭಿಸಂಜ್ಞಿತಃ ॥೬೫॥

ರಾಜನೇ! ನಿನಗೆ ನಾನು ಯಾರೆಂದು ತಿಳಿಸುತ್ತೇನೆ. ನಾನು ನಿನ್ನ ಸಂಬಂಧಿಯಾದ ಕಾಲಕವೃಕ್ಷೀಯ ಎಂಬ ಹೆಸರಿನ ಮುನಿ.

ಪಿತುಃ ಸಖಾ ಚ ಭವತಃ ಸಮ್ಮತಃ ಸತ್ಯಸಂಗರಃ ।
ವ್ಯಾಪನ್ನೇ ಭವತೋ ರಾಜ್ಯೇ ರಾಜನ್ ಪಿತರಿ ಸಂಸ್ಥಿತೇ ॥೬೬॥

ಸರ್ವಕಾಮಾನ್ ಪರಿತ್ಯಜ್ಯ ತಪಸ್ತಪ್ತಂ ತದಾ ಮಯಾ ।
ಸ್ನೇಹಾತ್ ತ್ವಾಂ ಪ್ರಬ್ರವೀಮ್ಯೇತನ್ಮಾ ಭೂಯೋ ವಿಭ್ರಮೇದಿತಿ ॥೬೭॥

ನಿನ್ನ ತಂದೆಯ ಸ್ನೇಹಿತ. ಸತ್ಯಸಂಗರನೆಂದು ಎಲ್ಲರಿಗೂ ಸಮ್ಮತನಾದವನು. ನಿನ್ನ ತಂದೆಯು ಮರಣವನ್ನು ಹೊಂದಿ ನಿನ್ನ ರಾಜ್ಯವು ವಿಪತ್ತಿಗೆ ಒಳಗಾದಾಗ ನಾನು ಎಲ್ಲ ಕಾಮಗಳನ್ನೂ ತ್ಯಜಿಸಿ ತಪಸ್ಸನ್ನು ಆಚರಿಸಿದೆ. ನಿನ್ನ ಮೇಲಿನ ಸ್ನೇಹದಿಂದ ಇನ್ನೊಮ್ಮೆ ನೀನು ಪ್ರಮಾದವನ್ನು ಮಾಡಬಾರದು ಎಂದು ಭಾವಿಸಿ ನಿನಗೆ ಹೇಳುತ್ತಿದ್ದೇನೆ.

ಉಭೇ ದೃಷ್ಟ್ವಾ ದುಃಖಸುಖೇ ರಾಜ್ಯಂ ಪ್ರಾಪ್ಯ ಯದೃಚ್ಛಯಾ।
ರಾಜ್ಯೇನಾಮಾತ್ಯಸಂಸ್ಥೇನ ಕಥಂ ರಾಜನ್ ಪ್ರಮಾದ್ಯಸಿ ॥೬೮॥

ರಾಜನೇ! ಸುಖದುಃಖಗಳೆರಡನ್ನೂ ನೋಡಿ, ಭಗವದಿಚ್ಛೆಯಿಂದ ರಾಜ್ಯವನ್ನು ಪಡೆದು, ರಾಜ್ಯವು ಅಮಾತ್ಯರ ಕೈಯ್ಯಲ್ಲಿ ಇರುವಾಗ ನೀನು ಹೇಗೆ ಪ್ರಮಾದವನ್ನು ಮಾಡುವಿ?

ಭೀಷ್ಮಃ

ತತೋ ರಾಜಕುಲೇ ನಂದೀ ಸಂಜಜ್ಞೇ ಭೂಯಸೀ ಪುನಃ।
ಪುರೋಹಿತಕುಲೇ ಚೈವ ಸಂಪ್ರಾಪ್ತೇ ಬ್ರಾಹ್ಮಣರ್ಷಭೇ ॥೬೯॥

ಆಗ ಅಂತಹ ಬ್ರಾಹ್ಮಣರ್ಷಭನು ಸಂಪ್ರಾಪ್ತನಾದಾಗ ರಾಜಕುಲದಲ್ಲಿಯೂ ಮತ್ತು ಪುರೋಹಿತಕುಲದಲ್ಲಿಯೂ ದೊಡ್ಡ ಆನಂದದ ಶಬ್ದವು ಉಂಟಾಯಿತು.

ಏಕಚ್ಛತ್ರಾಂ ಮಹೀಂ ಕೃತ್ವಾ ಕೌಸಲ್ಯಾಯ ಯಶಸ್ವಿನೇ।
ಮುನಿಃ ಕಾಲಕವೃಕ್ಷೀಯ ಈಜೇ ಕ್ರತುಭಿರುತ್ತಮೈಃ ॥೭೦॥

ಕಾಲಕವೃಕ್ಷೀಯ ಮುನಿಯು ಯಶಸ್ವಿಯಾದ ಕೌಸಲ್ಯನಿಗೆ ಏಕಚ್ಛತ್ರವಾದ ಮಹಿಯನ್ನು ಸಂಪಾದಿಸಿಕೊಟ್ಟು ಉತ್ತಮವಾದ ಯಜ್ಞಗಳಿಂದ ಯಾಗವನ್ನು ಮಾಡಿಸಿದನು.

ಹಿತಂ ತದ್ ವಚನಂ ಶ್ರುತ್ವಾ ಕೌಸಲ್ಯೋಽನ್ವಶಸನ್ಮಹೀಮ್।
ತಥಾಚ ಕೃತವಾನ್ ರಾಜಾ ಯಥೋಕ್ತಂ ತೇನ ಭಾರತ ॥೭೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರಶೀತಿತಮೋಽಧ್ಯಾಯಃ ॥೮೪॥

ಅವನ ಹಿತವಚನಗಳನ್ನು ಕೇಳಿ ಕೌಸಲ್ಯನು ಭೂಮಿಯನ್ನು ಆಳಿದನು. ಎಲೈ ಭಾರತನೇ! ರಾಜನು ಅವನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೮೪ನೆಯಅಧ್ಯಾಯವು ಮುಗಿಯಿತು.

೮೫. ಎಂಬತ್ತೈದನೆಯ ಅಧ್ಯಾಯ

ಮಂತ್ರಿಮೊದಲಾದವರ ಲಕ್ಷಣಕಥನ

ಯುಧಿಷ್ಠಿರಃ

ಸಭಾಸದಸಹಾಯಾಶ್ಚ ಸುಹೃದಶ್ಚ ವಿಶಾಂಪತೇ।
ಪರಿಚ್ಛದಾಸ್ತಥಾಮಾತ್ಯಾಃ ಕೀದೃಶಾಃ ಸ್ಯುಃ ಪಿತಾಮಹ ॥೧॥

ಎಲೈ ಪಿತಾಮಹನೇ! ಸಭಾಸದರು, ಸಹಾಯಕರು, ಸುಹೃಜ್ಜನರು, ಪರಿವಾರವು, ಅಮಾತ್ಯರು ಎಂತಹವರಾಗಿರಬೇಕು?

ಭೀಷ್ಮಃ

ಹ್ರೀನಿಷೇಧಾಃ ಸದಾ ಸಂತಃ ಸತ್ಯಾರ್ಜವಸಮನ್ವಿತಾಃ।
ಶಕ್ತಾಃ ಕಥಯಿತುಂ ಸಮ್ಯಕ್ ತೇ ತವ ಸ್ಯುಃ ಸಭಾಸದಃ ॥೨॥

ಭೀಷ್ಮರು – ಕೆಟ್ಟ ಕೆಲಸವನ್ನು ಮಾಡುವುದಕ್ಕೆ ನಾಚುವವರಾಗಿ, ಸದಾ ಸಜ್ಜನರಾಗಿ, ಸತ್ಯಾರ್ಜವಯುಕ್ತರಾಗಿ, ಚೆನ್ನಾಗಿ ಮಾತನಾಡಲು ಬರುವವರು ನಿನ್ನ ಸಭಾಸದರಾಗಲಿ.

ಅತ್ಯಾಢ್ಯಾಂಶ್ಚಾತಿಶೂರಾಂಶ್ಚ ಬ್ರಾಹ್ಮಣಾಂಶ್ಚ ಬಹುಶ್ರುತಾನ್।
ಸುಸಂತುಷ್ಟಾಂಶ್ಚ ಕೌಂತೇಯ ಮಹೋತ್ಸಾಹಾಂಶ್ಚ ಕರ್ಮಸು ॥೩॥

ಏತಾನ್ ಸಹಾಯಾನ್ ಲಿಪ್ಸೇಥಾಃ ಸರ್ವಾಸ್ವಾಪತ್ಸು ಭಾರತ।
ಕುಲೀನಃ ಪೂಜಿತೋ ನಿತ್ಯಂ ನಹಿ ಶಕ್ತಿಂ ನಿಗೂಹತಿ ॥೪॥

ಬಹಳವಾಗಿ ಧನಾಢ್ಯರಾದವರನ್ನು, ಅತಿ ಶೂರರನ್ನು, ಬಹುಶ್ರುತರಾದ ಬ್ರಾಹ್ಮಣರನ್ನು, ಮಹೋತ್ಸಾಹವನ್ನು ಹೊಂದಿ ಒಳ್ಳೆಯ ಸಂತೋಷದಿಂದಿರುವವರನ್ನು, ಎಲೈ ಕೌಂತೇಯನೇ! ನಿನ್ನ ಕರ್ಮಗಳಲ್ಲಿ ಸಹಾಯಕರನ್ನಾಗಿ ಬಯಸು-

ವವನಾಗು. ಎಲೈ ಭಾರತನೇ! ಕುಲೀನನಾಗಿ ಸತ್ಕರಿಸಲ್ಪಟ್ಟವನು ಯಾವ ಆಪತ್ತಿನಲ್ಲಿಯೂ ತನ್ನ ಶಕ್ತಿಯನ್ನು ಮುಚ್ಚಿಡುವುದಿಲ್ಲ.

ಪ್ರಸನ್ನಂ ಹ್ಯಪ್ರಸನ್ನಂ ವಾ ಪೀಡಿತಂ ಹೃತಮೇವ ವಾ।
ಆವರ್ತಯತಿ ಭೂಯಿಷ್ಠಂ ಸ ಏಕೋ ಹ್ಯನುಪಾಲಿತಃ ॥೫॥

ಅಂತಹ ಒಬ್ಬನು ಚೆನ್ನಾಗಿ ರಕ್ಷಿಸಲ್ಪಟ್ಟರೆ ಪ್ರಸನ್ನನಾದ ಅಥವಾ ಅಪ್ರಸನ್ನನಾದ ಇನ್ನೊಬ್ಬರನ್ನು ಹಿಂದಿರುಗಿಸುತ್ತಾನೆ. ಪೀಡಿತವಾದ ಅಥವಾ ಅಪಹೃತವಾದ ಧನವನ್ನು ಹಿಂದಿರುಗಿಸುತ್ತಾನೆ.

ಕುಲೀನಾ ದೇಶಜಾಃ ಪ್ರಾಜ್ಞಾ ರೂಪವಂತೋ ಬಹುಶ್ರುತಾಃ।
ಪ್ರಗಲ್ಭಾಶ್ಚಾನುರಕ್ತಾಶ್ಚ ತೇ ತವ ಸ್ಯುಃ ಪರಿಚ್ಛದಾಃ ॥೬॥

ಕುಲೀನರು, ಒಳ್ಳೆಯ ದೇಶದಲ್ಲಿ ಜನಿಸಿದವರು,ಪ್ರಾಜ್ಞರು, ರೂಪವಂತರು, ಬಹುಶ್ರುತರು, ವಿದ್ವಾಂಸರು, ನಿನ್ನಲ್ಲಿ ಪ್ರೀತಿಯುಳ್ಳವರು ಆದವರು ನಿನಗೆ ಪರಿವಾರವಾಗಲಿ.

ದೌಷ್ಕುಲೇಯಾಶ್ಚ ಲುಬ್ಧಾಶ್ಚ ನೃಶಂಸಾ ನಿರಪತ್ರಪಾಃ।
ತೇ ತ್ವಾಂ ತಾತ ನಿಷೇವೇಯುರ್ಯಾವದಾರ್ದ್ರಕಪಾಣಯಃ ॥೭॥

ಪ್ರೀತಿಪಾತ್ರನೇ! ದುಷ್ಕುಲದಲ್ಲಿ ಜನಿಸಿದವರು, ಲೋಭಿಗಳು, ಕ್ರೂರಿಗಳು, ನಾಚಿಕೆಗೆಟ್ಟವರು, ದಾನವನ್ನು ಸ್ವೀಕರಿಸಿದ ಹಸ್ತವು ಒದ್ದೆಯಾಗಿರುವವರೆಗೆ ಮಾತ್ರ ನಿನ್ನ ಸೇವೆಯನ್ನು ಮಾಡುವವರು ನಿನ್ನ ಪರಿವಾರದಲ್ಲಿ ಇಲ್ಲದಿರಲಿ.

ಅರ್ಥಮಾನಾರ್ಘ್ಯಸತ್ಕಾರೈರ್ಭೋಗೈರುಚ್ಚಾವಚೈಃ ಪ್ರಿಯಾನ್।
ಯಾನರ್ಥಭಾಜೋ ಮನ್ಯೇಥಾಸ್ತೇ ಸ್ಯುಃ ಸುಖಭಾಗಿನಃ ॥೮॥

ಅರ್ಥ-ಮಾನಗಳನ್ನು, ಅರ್ಘ್ಯ-ಸತ್ಕಾರಗಳನ್ನು, ಪ್ರಿಯವಾದ ಶ್ರೇಷ್ಠವಾದ ಭೋಗಗಳನ್ನು ಕೊಟ್ಟು ಯಾರು ಅಂತಹ ಸಂಪತ್ತಿಗೆ ಯೋಗ್ಯರೆಂದು ಭಾವಿಸುತ್ತೀಯೋ ಅಂತಹವರು ನಿನ್ನ ಸುಖದಲ್ಲಿ ಭಾಗಿಗಳಾಗುತ್ತಾರೆ.

ಅಭಿನ್ನವೃತ್ತಾ ವಿದ್ವಾಂಸಃ ಸದ್‌ವೃತ್ತಾಶ್ಚರಿತವ್ರತಾಃ।
ನ ತ್ವಾನಿತ್ಯಾರ್ಥಿನೋ ಜಹ್ಯುರಕ್ಷುದ್ರಾಃ ಸತ್ಯವಾದಿನಃ ॥೯॥

ಒಂದೇ ವಿಧವಾದ ನಡತೆಯುಳ್ಳ, ಸನ್ನಡತೆಯುಳ್ಳ , ವ್ರತಗಳನ್ನು ಆಚರಿಸುವ, ಮೋಕ್ಷಾಭಿಲಾಷಿಗಳಾದ, ಸತ್ಯವಾದಿಗಳಾದ, ಕ್ಷುದ್ರರಲ್ಲದ ವಿದ್ವಾಂಸರು ನಿನ್ನನ್ನು ಎಂದೂ ಬಿಡಲಾರರು.

ಅನಾರ್ಯಾ ಯೇ ನ ಜಾನಂತಿ ಸಮಯಂ ಮಂದಚೇತಸಃ।
ತೇಭ್ಯಃ ಪ್ರತಿಜುಗುಪ್ಸೇಥಾ ಜಾನೀಯಾಃ ಸಮಯಚ್ಯುತಾನ್ ॥೧೦॥

ಅನಾರ್ಯರಾದ ಯಾರು ಮಂದಬುದ್ಧಿಯುಳ್ಳವರಾಗಿ ರಾಜನ ಸಮಯವನ್ನು ತಿಳಿಯುವುದಿಲ್ಲವೋ ಅವರ ವಿಷಯದಲ್ಲಿ ನೀನು ಅಸಹ್ಯ ಪಡಬೇಕು. ಅವರು ಸಮಯಜ್ಞಾನಶೂನ್ಯರು ಎಂದು ತಿಳಿಯಬೇಕು.

ನೈಕಮಿಚ್ಛೇದ್ ಗಣಂ ಹಿತ್ವಾ ಸ್ಯಾಚ್ಚೇದನ್ಯತರಗ್ರಹಃ।
ಯಸ್ತ್ವೇಕೋ ಬಹುಭಿಃ ಶ್ರೇಯಾನ್ ಕಾಮಂ ತೇನ ಗಣಂ ತ್ಯಜೇತ್ ॥೧೧॥

ಒಬ್ಬರನ್ನು ಅಥವಾ ಒಂದು ಗಣವನ್ನು ಸ್ವೀಕರಿಸಬೇಕಾಗಿ ಬಂದಾಗ ಗಣವನ್ನು ಬಿಟ್ಟು ಒಬ್ಬನನ್ನು ಸ್ವೀಕರಿಸಬಾರದು. ಆದರೆ ಅಂತಹ ಒಬ್ಬನು ಸಮಗ್ರವಾದ ಗಣಕ್ಕಿಂತಲೂ ಶ್ರೇಷ್ಠನಾದರೆ ಆಗ ಗಣವನ್ನು ಬಿಡಬೇಕು.

ಶ್ರೇಯಸೋ ಲಕ್ಷಣಂ ಹ್ಯೇತದ್ ವಿಕ್ರಮೋ ಯಸ್ಯ ದೃಶ್ಯತೇ।
ಕೀರ್ತಿಪ್ರಧಾನೋ ಯಶ್ಚ ಸ್ಯಾತ್ ಸಮಯೇ ಯಶ್ಚ ತಿಷ್ಠತಿ ॥೧೨॥

ಸಮರ್ಥಾನ್ ಪೂಜಯೇದ್ ಯಶ್ಚ ನಾಸ್ಪರ್ಧ್ಯೈಃ ಸ್ಪರ್ಧತೇ ಚ ಯಃ।
ನ ಚ ಕಾಮಾದ್ ಭಯಾತ್ ಕ್ರೋಧಾಲ್ಲೋಭಾದ್
ವಾ ಧರ್ಮಮುತ್ಸೃಜೇತ್ ॥೧೩॥

ಅಮಾನೀ ಸತ್ಯವಾಕ್ ಶಕ್ತೋ ಜಿತಾತ್ಮಾ ಮಾನ್ಯಮಾನಿತಾ।
ಸ ತೇ ಮಂತ್ರಸಹಾಯಃ ಸ್ಯಾತ್ ಸರ್ವಾವಸ್ಥಂ ಪರೀಕ್ಷಿತಃ ॥೧೪॥

ಇದು ಶ್ರೇಯಸ್ಸಿನ ಲಕ್ಷಣ. ಎಲ್ಲಿ ವಿಕ್ರಮವು ಕಾಣುತ್ತದೆಯೋ, ಯಾವನು ಕೀರ್ತಿಪ್ರಧಾನನೋ, ಯಾವನು ಮಾಡಿಕೊಂಡ ಒಪ್ಪಂದದಂತೆ ನಡೆದುಕೊಳ್ಳುತ್ತಾನೆಯೋ, ಸಮರ್ಥರನ್ನು ಪೂಜಿಸುತ್ತಾನೆಯೋ, ಸ್ಪರ್ಧಿಸಲು ಯೋಗ್ಯರಲ್ಲದವರ ಜೊತೆಯಲ್ಲಿ ಸ್ಪರ್ಧಿಸುವುದಿಲ್ಲವೋ, ಕಾಮದಿಂದಾಗಲೀ ಭಯದಿಂದಾಗಲೀ ಕ್ರೋಧದಿಂದಾಗಲೀ ಲೋಭದಿಂದಾಗಲೀ ಧರ್ಮವನ್ನು ಬಿಡುವುದಿಲ್ಲವೋ, ನಿರಹಂಕಾರಿಯಾಗಿ ಸತ್ಯವಚನನಾಗಿ ಸಮರ್ಥನಾಗಿ ಜಿತಮನಸ್ಕನಾಗಿ ಮಾನ್ಯರನ್ನು ಸತ್ಕರಿಸುವವನಾಗಿ ಇರುತ್ತಾನೆಯೋ ಅಂತಹವನು ಸರ್ವಾವಸ್ಥೆಯಲ್ಲಿಯೂ ನಿನಗೆ ಮಂತ್ರಸಹಾಯನಾಗಲಿ.

ಕುಲೀನಃ ಸತ್ಯಸಂಪನ್ನಸ್ತಿತಿಕ್ಷುರ್ದಕ್ಷ ಆತ್ಮವಾನ್ ।
ಶೂರಃ ಕೃತಜ್ಞಃ ಸತ್ಯಶ್ಚ ಶ್ರೇಯಸಃ ಪಾರ್ಥ ಲಕ್ಷಣಮ್ ॥೧೫॥

ಎಲೈ ಪಾರ್ಥನೇ! ಸತ್ಕುಲದಲ್ಲಿ ಜನ್ಮ, ಸತ್ಯಸಂಕಲ್ಪತೆ, ದ್ವಂದ್ವಸಹಿಷ್ಣುತೆ, ದಕ್ಷತೆ, ಮನೋಜಯ, ಶೌರ್ಯ, ಕೃತಜ್ಞತೆ ಇವು ಶ್ರೇಯಸ್ಸಿನ ಲಕ್ಷಣಗಳು.

ತಸ್ಯೈವಂ ವರ್ತಮಾನಸ್ಯ ಪುರುಷಸ್ಯ ವಿಜಾನತಃ ।
ಅಮಿತ್ರಾಃ ಸಂಪ್ರಸೀದಂತಿ ತತೋ ಮಿತ್ರೀಭವಂತ್ಯಪಿ ॥೧೬॥

ರಾಜನು ಜ್ಞಾನಪೂರ್ವಕವಾಗಿ ಹೀಗೆ ನಡೆದುಕೊಂಡರೆ ಶತ್ರುಗಳೂ ಪ್ರಸನ್ನರಾಗಿ ಅನಂತರ ಮಿತ್ರರಾಗುತ್ತಾರೆ.

ಅತ ಊರ್ಧ್ವಮಮಾತ್ಯಾನಾಂ ಪರೀಕ್ಷೇತ ಗುಣಾಗುಣಾನ್ ।
ಸಂಯಮಾತ್ಮಾ ಕೃತಪ್ರಜ್ಞೋ ಭೂತಿಕಾಮಶ್ಚ ಭೂಮಿಪಃ ॥೧೭॥

ಇನ್ನು ಮುಂದೆ ಮನೋನಿಗ್ರಹವುಳ್ಳವನೂ, ಕೃತಪ್ರಜ್ಞನೂ, ಐಶ್ವರ್ಯಕಾಮನೂ ಆದ ರಾಜನು ಅಮಾತ್ಯರ ಗುಣದೋಷಗಳನ್ನು ಪರೀಕ್ಷಿಸಬೇಕು.

ಸಂಬದ್ಧಾಃ ಪುರುಷೈರಾಪ್ತೈರಭಿಜಾತೈಃ ಸ್ವದೇಶಜೈಃ ।
ಅಹಾರ್ಯೈರವ್ಯಭೀಚಾರೈಃ ಸರ್ವತಃ ಸುಪರೀಕ್ಷಿತೈಃ ॥೧೮॥

ಯೋಧಾಃ ಸ್ತ್ರೈವಾಸ್ತಥಾ ಮೌಲಾಸ್ತಥೈವಾನ್ಯೇಽಪ್ಯವಸ್ಕೃತಾಃ।
ಕರ್ತವ್ಯಾ ಭೂತಿಕಾಮೇನ ಪುರುಷೇಣ ಬುಭೂಷತಾ ॥೧೯॥

ಆಪ್ತಪುರುಷರ ಸಂಬಂಧವನ್ನು ಹೊಂದಿ, ಸತ್ಕುಲದಲ್ಲಿ ಸ್ವದೇಶದಲ್ಲಿ ಜನಿಸಿ, ಶತ್ರುಗಳಿಂದ ಹಾರಿಸಲ್ಪಡಲು ಅಸಾಧ್ಯರಾಗಿ, ಸತತವಾಗಿ ನಿಷ್ಠೆಯನ್ನು ಹೊಂದಿ, ಎಲ್ಲ ರೀತಿಯಲ್ಲೂ ಚೆನ್ನಾಗಿ ಪರೀಕ್ಷಿತರಾದ, ಸ್ತ್ರೈವರು, ಮೌಲರು ಮತ್ತು ತಿರಸ್ಕೃತರಾದವರು ಇವರನ್ನು ಭೂತಿಕಾಮನಾದ ರಾಜನು ಯೋಧರನ್ನಾಗಿ ಮಾಡಬೇಕು.

ಯೇಷಾಂ ವೈನಯಿಕೀ ಬುದ್ಧಿಃ ಪ್ರಕೃತಾ ಚೈವ ಶೋಭನಾ।
ತೇಜೋ ಧೈರ್ಯಂ ಕ್ಷಮಾ ಶೌಚಮನುರಾಗಃ ಸ್ಥಿತಿರ್ಧೃತಿಃ ॥೨೦॥

ಪರೀಕ್ಷಿತಗುಣಾನ್ ನಿತ್ಯಂ ಪ್ರೌಢಭಾವಾನ್ ಧುರಂಧರಾನ್।
ಪಂಚೋಪಧಾವ್ಯತೀತಾಂಶ್ಚ ಕುರ್ಯಾದ್ ರಾಜಾಽರ್ಥಕಾರಿಣಃ ॥೨೧॥

ಯಾರಿಗೆ ವಿನಯಬುದ್ಧಿ ಇರುತ್ತದೆಯೋ ಮತ್ತುಪ್ರಕೃತವಾದ ಕಾರ್ಯಗಳಲ್ಲಿ ಶೋಭನವಾದ ಬುದ್ಧಿಯಿರುತ್ತದೆಯೋ, ತೇಜಸ್ಸು-ಧೈರ್ಯ-ಕ್ಷಮೆ-ಶೌಚ-ಅನುರಾಗ-ಸ್ಥೈರ್ಯ ಮತ್ತು ಧೃತಿಗಳಿರುತ್ತವೆಯೋ, ಅಂತಹ ಗುಣಗಳುಳ್ಳ ಪ್ರೌಢ ಅಭಿಪ್ರಾಯವುಳ್ಳವರನ್ನು, ಭಾರವನ್ನು ಹೊರಲು ಸಮರ್ಥರಾದವರನ್ನು ನಿತ್ಯವೂ ಅವರ ಗುಣಗಳನ್ನು ಪರೀಕ್ಷೆ ಮಾಡಿ, ಎಲ್ಲಾ ಕಪಟವನ್ನೂ ಮೀರಿದ ಅಂತಹ ಐದು ಜನರನ್ನು ರಾಜನು ಅರ್ಥಸಾಧಕರಾದ ಮಂತ್ರಿಗಳನ್ನಾಗಿ ಮಾಡಬೇಕು.

ಪರ್ಯಾಪ್ತವಚನಾನ್ ವೀರಾನ್ ಪ್ರತಿಪತ್ತಿವಿಶಾರದಾನ್।
ಕುಲೀನಾನ್ ಸತ್ಯಸಂಪನ್ನಾನಿಂಗಿತಜ್ಞಾನನಿಷ್ಠುರಾನ್ ॥೨೨॥

ದೇಶಕಾಲವಿಧಾನಜ್ಞಾನ್ ಭರ್ತ್ಯಕಾರ್ಯಹಿತೈಷಿಣಃ।
ನಿತ್ಯಮರ್ಥೇಷು ಸರ್ವೇಷು ರಾಜಾ ಕುರ್ವೀತ ಮಂತ್ರಿಣಃ ॥೨೩॥

ಚೆನ್ನಾಗಿ ಮಾತನಾಡಲು ಬರುವ, ವೀರರಾದ, ಶೀಘ್ರವಾಗಿ ತಿಳಿದುಕೊಳ್ಳುವ,

ಕುಲೀನರಾದ, ಸತ್ಯಸಂಪನ್ನರಾದ, ಇಂಗಿತಜ್ಞರಾದ, ನಿಷ್ಠುರರಲ್ಲದ ದೇಶಕಾಲ-ವಿಧಾನಗಳನ್ನು ತಿಳಿದ, ಸ್ವಾಮಿಯ ಕಾರ್ಯದಲ್ಲಿ ಮತ್ತು ಹಿತದಲ್ಲಿ ಆಸೆಯುಳ್ಳ ಮಂತ್ರಿಗಳನ್ನು ರಾಜನು ಯಾವಾಗಲೂ ಸರ್ವಕಾರ್ಯಗಳಲ್ಲಿ ನಿಯೋಜಿಸಬೇಕು.

ಹೀನತೇಜಾ ಹ್ಯಸಂತುಷ್ಟೋ ನೈವ ಜಾತು ವ್ಯವಸ್ಯತಿ।
ಅವಶ್ಯಂ ಜನಯತ್ಯೇವ ಸರ್ವಕರ್ಮಸು ಸಂಶಯಾನ್ ॥೨೪॥

ತೇಜೋಹೀನನಾದವನು ಮತ್ತು ಅತೃಪ್ತನಾದವನು ಯಾವ ಕಾರ್ಯವನ್ನೂ ಮಾಡುವುದಿಲ್ಲ. ಎಲ್ಲ ಕರ್ಮಗಳಲ್ಲಿಯೂ ಅವಶ್ಯವಾಗಿ ಸಂಶಯವನ್ನೇ ಉಂಟು-ಮಾಡುತ್ತಾನೆ.

ಏವಮಲ್ಪಶ್ರುತೋ ಮಂತ್ರೀ ಕಲ್ಯಾಣಾಭಿಜನೋऽಪ್ಯುತ।
ಧರ್ಮಾರ್ಥಕಾಮಯುಕ್ತೋऽಪಿ ನಾಲಂ ಮಂತ್ರಂ ಪರೀಕ್ಷಿತುಮ್ ॥೨೫॥

ಇದೇ ರೀತಿಯಲ್ಲಿ ಅಲ್ಪಶ್ರುತನಾದ ಮಂತ್ರಿಯು ಒಳ್ಳೆಯ ಕುಲದಲ್ಲಿ ಜನಿಸಿ-ದ್ದರೂ, ಧರ್ಮಾರ್ಥಕಾಮಯುಕ್ತನಾದರೂ ಅವನು ಮಂತ್ರವನ್ನು ಪರೀಕ್ಷಿಸಲು ಸಮರ್ಥನಲ್ಲ.

ತಥೈವಾನಭಿಜಾತೋऽಪಿ ಕಾಮಮಸ್ತು ಬಹುಶ್ರುತಃ।
ಅನಾಯಕ ಇವಾಚಕ್ಷುರ್ಮುಹ್ಯತ್ಯೂಹ್ಯೇಷು ಕರ್ಮಸು ॥೨೬॥

ಅದರಂತೆಯೇ ಸತ್ಕುಲದಲ್ಲಿ ಜನಿಸದವನು, ಬೇಕಾದಂತೆ ಬಹುಶ್ರುತನಾದರೂ ಅನಾಯಕನಂತೆ ಚಕ್ಷುರ್ಹೀನನಂತೆ ಆಲೋಚನೆ ಮಾಡಬೇಕಾದ ಕಾರ್ಯಗಳಲ್ಲಿ ಮೋಹಕ್ಕೆ ಒಳಗಾಗುತ್ತಾನೆ.

ಯೋ ವಾ ಹ್ಯಸ್ಥಿರಸಂಕಲ್ಪೋ ಬುದ್ಧಿಮಾನಾಗತಾಗಮಃ।
ಉಪಾಯಜ್ಞೋऽಪಿ ನಾಲಂ ಸ ಕರ್ಮ ಯಾಪಯಿತುಂ ಚಿರಮ್ ॥೨೭॥

ಯಾವನು ಚಂಚಲಸಂಕಲ್ಪವುಳ್ಳವನೋ ಅಂತಹವನು ಬುದ್ಧಿವಂತನಾದರೂ,

ಶಾಸ್ತ್ರಜ್ಞನಾದರೂ, ಉಪಾಯಜ್ಞನಾದರೂ ಒಂದು ಕಾರ್ಯವನ್ನು ಕೊನೆಯವರೆಗೂ ಸಾಧಿಸಲು ಸಮರ್ಥನಲ್ಲ.

ಕೇವಲಾತ್ ಪುನರಾಚಾರಾತ್ ಕರ್ಮಣಾಂ ನೋಪಪದ್ಯತೇ।
ಪರಿಮರ್ಶೋ ವಿಶೇಷಾಣಾಮಶ್ರುತಸ್ಯೇಹ ದುರ್ಮತೇಃ ॥೨೮॥

ದುರ್ಮತಿಯಾಗಿ, ಶಾಸ್ತ್ರಶ್ರವಣರಹಿತನಾದ ರಾಜನು ಕೇವಲ ಮಂತ್ರಿಪುರುಷರಿಂದ ಕರ್ಮಗಳ ವಿಶೇಷವನ್ನು ಪರಾಮರ್ಶೆ ಮಾಡಲು ಅಸಮರ್ಥನಾಗುತ್ತಾನೆ. (ರಾಜನು ಅತಿಮೂರ್ಖನಾದರೆ ಮಂತ್ರಿಗಳ ಮಾತನ್ನು ಕೇಳುವುದಿಲ್ಲ ಎಂದು ಅಭಿಪ್ರಾಯ - ಲಕ್ಷಾಲಂಕಾರ).

ಮಂತ್ರಿಣ್ಯನನುರಕ್ತೇ ತು ವಿಶ್ವಾಸೋ ನ ಹಿ ವಿದ್ಯತೇ।
ತಸ್ಮಾದನನುರಕ್ತಾಯ ನೈವ ಮಂತ್ರಂ ಪ್ರಕಾಶಯೇತ್ ॥೨೯॥

ಮಂತ್ರಿಗೆ ರಾಜನಲ್ಲಿ ಅನುರಾಗವಿಲ್ಲದಿದ್ದರೆ ರಾಜನು ಅವನಲ್ಲಿ ವಿಶ್ವಾಸವನ್ನು ಮಾಡಬಾರದು. ಆದ್ದರಿಂದ ಅನುರಾಗವಿಲ್ಲದವನಿಗೆ ರಾಜನು ತನ್ನ ಮಂತ್ರವನ್ನು ಪ್ರಕಾಶಿಸಬಾರದು.

ವ್ಯಥಯೇದ್ಧಿ ಸ ರಾಜಾನಂ ಮಂತ್ರಿಭಿಃ ಸಹಿತೋಽನೃಜುಃ।
ಮಾರುತೋಪಹತಾಚ್ಛಿದ್ರೈಃ ಪ್ರವಿಶ್ಯಾಗ್ನಿರಿವ ದ್ರುಮಮ್ ॥೩೦॥

ಅಂತಹ ವಕ್ರಸ್ವಭಾವದವನು ಉಳಿದ ಮಂತ್ರಿಗಳ ಜೊತೆಯಲ್ಲಿ ಸೇರಿ ವೃಕ್ಷಚ್ಛಿದ್ರದಿಂದ ಪ್ರವೇಶಿಸಿದ ಅಗ್ನಿಯು ವೃಕ್ಷವನ್ನೇ ದಹಿಸುವಂತೆ ರಾಜನನ್ನು ವ್ಯಥೆಗೊಳಿಸುತ್ತಾನೆ.

ಸಂಕ್ರುದ್ಧ್ಯತ್ಯೇಕದಾ ಸ್ವಾಮೀ ಸ್ಥಾನಾಚ್ಚೈವಾಪಕರ್ಷತಿ।
ವಾಚಾ ಕ್ಷಿಪತಿ ಸಂರಬ್ಧಸ್ತತಃ ಪಶ್ಚಾತ್ ಪ್ರಸೀದತಿ ॥೩೧॥

ಸ್ವಾಮಿಯಾದವನು ಒಮ್ಮೆ ಕ್ರುದ್ಧನಾಗುತ್ತಾನೆ. ಸ್ಥಾನದಿಂದ ತೆಗೆಯುತ್ತಾನೆ. ಕೋಪಗೊಂಡು ಮಾತಿನಿಂದ ನಿಂದಿಸುತ್ತಾನೆ. ಅನಂತರ ಪ್ರಸನ್ನನಾಗುತ್ತಾನೆ.

ತಾನಿ ತಾನ್ಯನುರಕ್ತೇನ ಶಕ್ಯಾನ್ಯನುತಿತಿಕ್ಷಿತುಮ್ ।
ಮಂತ್ರಿಣಾಂ ಚ ಭವೇದ್ ಕ್ರೋಧೋ ವಿಸೃಜ್ಯಿತಮಿವಾಶನೇಃ ॥೩೨॥

ಅನುರಕ್ತನಾದವನು ಅವೆಲ್ಲವನ್ನೂ ಸಹಿಸಲು ಸಮರ್ಥನಾಗುತ್ತಾನೆ. ಮಂತ್ರಿಗಳ ಕ್ರೋಧವೂ ಸಹ ಸಿಡಿಲಿನ ಆರ್ಭಟದಂತೆ ಇರುತ್ತದೆ.

ಯಸ್ತು ಸಂಹರತೇ ತಾನಿ ಭರ್ತುಃ ಪ್ರಿಯಚಿಕೀರ್ಷಯಾ ।
ಸಮಾನಸುಖದುಃಖಂ ತಂ ಪೃಚ್ಛೇದರ್ಥೇಷು ಮಾನವಮ್ ॥೩೩॥

ಯಾವ ಮಂತ್ರಿಯು ಸ್ವಾಮಿಗೆ ಪ್ರಿಯವನ್ನು ಮಾಡಲು ಬಯಸಿ ಅಂತಹ ಕ್ರೋಧವನ್ನು ತಡೆದುಕೊಳ್ಳುತ್ತಾನೆಯೋ, ಸಮಾನಸುಖದುಃಖನಾದ ಅಂತಹ ಮಂತ್ರಿಯನ್ನು ಅರ್ಥಗಳಲ್ಲಿ ಪ್ರಶ್ನಿಸಬೇಕು.

ಅನೃಜುಸ್ತ್ವನುರಕ್ತೋಽಪಿ ಸಂಪನ್ನಶ್ಚೇತರೈರ್ಗುಣೈಃ ।
ರಾಜ್ಞಃ ಪ್ರಜ್ಞಾನಯುಕ್ತೋಽಪಿ ನ ಮಂತ್ರಂ ಶ್ರೋತುಮರ್ಹತಿ ॥೩೪॥

ವಕ್ರನಾದವನು ರಾಜನಲ್ಲಿ ಅನುರಾಗವನ್ನು ಹೊಂದಿದ್ದರೂ, ಇತರ ಗುಣಗಳಿಂದ ಕೂಡಿದ್ದರೂ, ರಾಜನನ್ನು ಚೆನ್ನಾಗಿ ತಿಳಿದಿದ್ದರೂ ಅವನು ಮಂತ್ರವನ್ನು ಕೇಳಲು ಅರ್ಹನಲ್ಲ.

ಯೋಽಮಿತ್ರೈಃ ಸಹ ಸಂಬದ್ಧೋ ನ ಪೌರಾನ್ ಬಹು ಮನ್ಯತೇ ।
ಸ ಸುಹೃತ್ ತಾದೃಶೋ ರಾಜ್ಞೋ ನ ಮಂತ್ರಂ ಶ್ರೋತುಮರ್ಹತಿ ॥೩೫॥

ಯಾವನು ರಾಜನ ಸುಹೃಜ್ಜನನಾದರೂ ಶತ್ರುಗಳ ಜೊತೆಯಲ್ಲಿ ಸಂಬದ್ಧನಾಗಿ, ಪೌರರನ್ನು ಗೌರವಿಸುವುದಿಲ್ಲವೋ ಅವನೂ ಸಹ ಮಂತ್ರವನ್ನು ಕೇಳಲು ಅನರ್ಹನಾದವನು

ಅವಿದ್ವಾನಶುಚಿಃ ಸ್ತಬ್ಧಃ ಶತ್ರುಸೇವೀ ವಿಕತ್ಥನಃ ।
ಸ ಸುಹೃತ್ ಕ್ರೋಧನೋ ಲುಬ್ಧೋ ನ ಮಂತ್ರಂ ಶ್ರೋತುಮರ್ಹತಿ ॥೩೬॥

ವಿದ್ಯೆಯಿಲ್ಲದವನು, ಅಶುಚಿಯಾದವನು, ಅಹಂಕಾರಿಯಾದವನು, ಶತ್ರುಗಳನ್ನು ಸೇವಿಸುವವನು, ತನ್ನನ್ನು ತಾನು ಹೊಗಳಿಕೊಳ್ಳುವವನು, ಕ್ರೋಧಶೀಲನಾದವನು, ಲೋಭಿಯಾದವನು ಸುಹೃಜ್ಜನನಾದರೂ ಮಂತ್ರವನ್ನು ಕೇಳಲು ಅರ್ಹನಲ್ಲ.

ಆಗಂತುಃ ಸಾನುರಕ್ತೋಽಪಿ ಕಾಮಮಸ್ತು ಬಹುಶ್ರುತಃ।
ಸತ್ಕೃತಃ ಸಂವಿಭಕ್ತೋ ವಾ ನ ಮಂತ್ರಂ ಶ್ರೋತುಮರ್ಹತಿ ॥೩೭॥

ಆಗಂತುಕನಾದವನು ಅನುರಾಗವನ್ನು ಹೊಂದಿದ್ದರೂ, ಬಹುಶ್ರುತನಾದರೂ, ಸತ್ಕರಿಸಲ್ಪಟ್ಟು ಐಶ್ವರ್ಯವನ್ನು ಪಡೆದರೂ ಮಂತ್ರಶ್ರವಣಕ್ಕೆ ಅರ್ಹನಲ್ಲ.

ಯಸ್ತ್ವಲ್ಪೇನಾಪಿ ಕಾರ್ಯೇಣ ಸಕೃದಾಕಾರಿತೋ ಭವೇತ್।
ಪುನರನ್ಯೈರ್ಗುಣೈರ್ಯುಕ್ತೋ ನ ಮಂತ್ರಂ ಶ್ರೋತುಮರ್ಹತಿ ॥೩೮॥

ಯಾವನು ಅಲ್ಪಕಾರ್ಯಕ್ಕಾಗಿ ರಾಜನಿಂದ ಒಮ್ಮೆ ಆಹ್ವಾನಿಸಲ್ಪಟ್ಟ ಕಾರಣದಿಂದ ರಾಜನನ್ನು ಯಾಚನೆ ಮಾಡಲು ಪ್ರಾರಂಭಿಸುತ್ತಾನೆಯೋ ಅವನು ಬೇರೆಯ ಗುಣಗಳಿಂದ ಕೂಡಿದ್ದರೂ ಮಂತ್ರಶ್ರವಣಕ್ಕೆ ಅರ್ಹನಲ್ಲ.

ಕೃತಪ್ರಜ್ಞಶ್ಚ ಮೇಧಾವೀ ಬುಧೋ ಜಾನಪದಃ ಶುಚಿಃ।
ಸರ್ವಕರ್ಮಸು ಯಃ ಶುದ್ಧಃ ಸ ಮಂತ್ರಂ ಶ್ರೋತುಮರ್ಹತಿ ॥೩೯॥

ಕೃತಪ್ರಜ್ಞನೂ, ಮೇಧಾವಿಯೂ, ವಿದ್ವಾಂಸನೂ, ಅದೇ ದೇಶದಲ್ಲಿ ಜನಿಸಿದವನೂ, ಶುಚಿಯೂ, ಸರ್ವಕರ್ಮಗಳಲ್ಲಿಯೂ ಶುದ್ಧನಾದವನೂ ಆದ ಪುರುಷನು ಮಂತ್ರವನ್ನು ಕೇಳಲು ಅರ್ಹನಾಗುತ್ತಾನೆ.

ಜ್ಞಾನವಿಜ್ಞಾನಸಂಪನ್ನಃ ಪ್ರಕೃತಿಜ್ಞಃ ಪರಾತ್ಮನೋಃ।
ಸುಹೃದಾತ್ಮಸಮೋ ರಾಜ್ಞಃ ಸ ಮಂತ್ರಂ ಶ್ರೋತುಮರ್ಹತಿ ॥೪೦॥

ಜ್ಞಾನವಿಜ್ಞಾನಸಂಪನ್ನನಾಗಿ, ತನ್ನ ಮತ್ತು ಪರರ ಸ್ವಭಾವವನ್ನು ತಿಳಿದು ರಾಜನಿಗೆ

ಸುಹೃಜ್ಜನನಾಗಿ, ರಾಜನಿಗೆ ಆತ್ಮಸಮನಾಗಿರುವವನು ಮಂತ್ರವನ್ನು ಕೇಳಲು ಅರ್ಹನಾಗುತ್ತಾನೆ.

ಸತ್ಯವಾಕ್ ಶೀಲಸಂಪನ್ನೋ ಗಂಭೀರಃ ಸತ್ರಪೋ ಮೃದುಃ।
ಪಿತೃಪೈತಾಮಹೋ ಯಃ ಸ್ಯಾತ್ ಸ ಮಂತ್ರಂ ಶ್ರೋತುಮರ್ಹತಿ ॥೪೧॥

ಸತ್ಯವಚನನೂ, ಶೀಲಸಂಪನ್ನನೂ, ಎಲ್ಲವನ್ನೂ ಮಾತನಾಡದೇ ಗಂಭೀರನಾಗಿರುವವನು, ನಾಚಿಕೆಯಿಂದ ಕೂಡಿದವನೂ, ಮೃದುವೂ, ಪಿತೃಪಿತಾಮಹರ ಮಾರ್ಗವನ್ನು ಅನುಸರಿಸುವವನೂ ಆದವನು ಮಂತ್ರಶ್ರವಣಕ್ಕೆ ಅರ್ಹನಾಗುತ್ತಾನೆ.

ಸಂತುಷ್ಟಃ ಸಮ್ಮತಃ ಸತ್ಯಃ ಶೌಟೀರೋ ದ್ವೇಷ್ಯಪಾವಕಃ।
ಮಂತ್ರವಿತ್ ಕಾಲವಿಚ್ಛೂರಃ ಸ ಮಂತ್ರಂ ಶ್ರೋತುಮರ್ಹತಿ ॥೪೨॥

ತಾನು ಸಂತೃಪ್ತನಾಗಿ, ಪ್ರಜೆಗಳಿಗೆ ಸಮ್ಮತನಾಗಿ, ಸತ್ಯವಚನನಾಗಿ, ನಿಪುಣನಾಗಿ, ಶತ್ರುವಿಗೆ ಅಗ್ನಿಯಂತೆ ಇದ್ದು ಮಂತ್ರವನ್ನು ಮತ್ತು ಕಾಲವನ್ನು ತಿಳಿದ ಶೂರನು ಮಂತ್ರವನ್ನು ಕೇಳಲು ಅರ್ಹನಾಗುತ್ತಾನೆ.

ಸರ್ವಲೋಕಮಿಮಂ ಶಕ್ತಃ ಸಾಂತ್ವೇನ ಕುರುತೇ ವಶೇ।
ತಸ್ಮೈ ಮಂತ್ರಃ ಪ್ರಯೋಕ್ತವ್ಯೋ ದಂಡಮಾಧಿತ್ಸತಾ ನೃಪ ॥೪೩॥

ಸಮರ್ಥನಾದವನು ಎಲ್ಲ ಪ್ರಜೆಗಳನ್ನೂ ಸಾಂತ್ವವಚನಗಳಿಂದಲೇ ವಶಪಡಿಸಿಕೊಳ್ಳುತ್ತಾನೆ. ಎಲೈ ರಾಜನೇ! ದಂಡಧಾರಿಯಾದ ರಾಜನು ಅಂತಹವನಿಗೆ ಮಂತ್ರವನ್ನು ಹೇಳಬೇಕು.

ಪೌರಜಾನಪದಾ ಯಸ್ಮಿನ್ ವಿಶ್ವಾಸಂ ಧರ್ಮತೋ ಗತಾಃ।
ಯೋದ್ಧಾ ನಯವಿಪಶ್ಚಿಚ್ಚ ಸ ಮಂತ್ರಂ ಶ್ರೋತುಮರ್ಹತಿ ॥೪೪॥

ಪೌರಜಾನಪದರು ಯಾವನಲ್ಲಿ ಧರ್ಮದಿಂದ ವಿಶ್ವಾಸವನ್ನು ಮಾಡುತ್ತಾರೆಯೋ, ಯಾವನು ಯುದ್ಧಮಾಡಲು ಬಲ್ಲವನೋ, ರಾಜನೀತಿಯನ್ನು ತಿಳಿದವನೋ ಅಂತಹವನು ಮಂತ್ರವನ್ನು ಕೇಳಲು ಅರ್ಹನಾಗುತ್ತಾನೆ.

ತಸ್ಮಾತ್ ಸರ್ವೈರ್ಗುಣೈರೇತೈರುಪಪನ್ನಾಃ ಸುಪೂಜಿತಾಃ।
ಮಂತ್ರಿಣಃ ಪ್ರಕೃತಿಜ್ಞಾಃ ಸ್ಯುಸ್ತ್ರ್ಯವರಾ ಮಹದೀಪ್ಸವಃ ॥೪೫॥

ಆದ್ದರಿಂದ ಇಂತಹ ಎಲ್ಲ ಗುಣಗಳಿಂದಲೂ ಸಂಪನ್ನರಾದ, ಚೆನ್ನಾಗಿ ಪೂಜಿಸಲ್ಪಡುವ, ದೊಡ್ಡ ಕಾರ್ಯವನ್ನು ಸಾಧಿಸಲು ಬಯಸುವ, ಪ್ರಜೆಗಳ ಸ್ವಭಾವವನ್ನು ತಿಳಿದ ಮಂತ್ರಿಗಳನ್ನು ಮೂರುಜನರಿಗೆ ಕಡಿಮೆಯಿಲ್ಲದಂತೆ ನೇಮಿಸಬೇಕು.

ಸ್ವಾಸು ಪ್ರಕೃತಿಷು ಛಿದ್ರಂ ಲಕ್ಷಯೇರನ್ ಪರಸ್ಯ ಚ।
ಮಂತ್ರಿಣೋ ಮಂತ್ರಮೂಲಂ ಹಿ ರಾಜ್ಞೋ ರಾಷ್ಟ್ರಂ ವಿವರ್ಧತೇ ॥೪೬॥

ಮಂತ್ರಿಗಳು ತಮ್ಮ ಪ್ರಜೆಗಳಲ್ಲಿ ಇರುವ ದೋಷವನ್ನು ಶತ್ರುಪಕ್ಷದಲ್ಲಿರುವ ನ್ಯೂನತೆಗಳನ್ನು ಗಮನಿಸಬೇಕು. ಮಂತ್ರಮೂಲವಾದ ರಾಷ್ಟ್ರವೇ ಅಭಿವೃದ್ಧಿಯನ್ನು ಹೊಂದುವುದಷ್ಟೇ ?

ನಾಸ್ಯ ಛಿದ್ರಂ ಪರಃ ಪಶ್ಯೇಚ್ಛಿದ್ರೇಷು ಪರಮನ್ವಿಯಾತ್।
ಗೂಹೇತ್ ಕೂರ್ಮ ಇವಾಂಗಾನಿ ರಕ್ಷೇದ್ ವಿವರಮಾತ್ಮನಃ ॥೪೭॥

ತನ್ನ ನ್ಯೂನತೆಯನ್ನು ಶತ್ರುವು ನೋಡಬಾರದು. ಶತ್ರುಗಳ ನ್ಯೂನತೆಯಲ್ಲಿ ಅವರನ್ನು ಆಕ್ರಮಿಸಬೇಕು. ಆಮೆಯು ತನ್ನ ಅಂಗಗಳನ್ನು ಮುಚ್ಚಿಕೊಳ್ಳುವಂತೆ ತನ್ನ ದೋಷಗಳನ್ನು ಮುಚ್ಚಿಕೊಳ್ಳಬೇಕು.

ಮಂತ್ರಗೂಢಾ ಹಿ ರಾಜ್ಯಸ್ಯ ಮಂತ್ರಿಣೋ ಯೇ ಮನೀಷಿಣಃ।
ಮಂತ್ರಸಂಹನನೋ ರಾಜಾ ಮಂತ್ರಾಂಗಾನೀತರೋ ಜನಃ ॥೪೮॥

ವಿವೇಕಿಗಳಾದ ಮಂತ್ರಿಗಳು ರಾಜ್ಯದ ಹಿತಕ್ಕಾಗಿ ಗೂಢವಾದ ಮಂತ್ರವನ್ನು ಹೊಂದಿರುತ್ತಾರೆ. ರಾಜನು ಮಂತ್ರಶರೀರವೇ ಆಗಿರುತ್ತಾನೆ. ಉಳಿದ ಜನರು ಮಂತ್ರದ ಅಂಗಗಳಾಗಿರುತ್ತಾರೆ.

ರಾಜ್ಯಂ ಪ್ರಣಿಧಿಮೂಲಂ ಹಿ ಮಂತ್ರಸಾರಂ ಪ್ರಚಕ್ಷತೇ।
ಸ್ವಾಮಿನಂ ತ್ವನುವರ್ತಂತಿ ವೃತ್ತ್ಯರ್ಥಮಿಹ ಮಂತ್ರಿಣಃ ॥೪೯॥

ರಾಜ್ಯವು ಚಾರರನ್ನು ಮೂಲವಾಗಿ ಮತ್ತು ಮಂತ್ರವನ್ನು ಬಲವಾಗಿ ಹೊಂದಿರುವುದು ಎಂದು ಹೇಳುತ್ತಾರೆ. ಮಂತ್ರಿಗಳು ತಮ್ಮ ಜೀವನೋಪಾಯದ ಸಲುವಾಗಿ ಇಲ್ಲಿ ಸ್ವಾಮಿಯಾದ ರಾಜನನ್ನು ಅನುಸರಿಸುತ್ತಾರೆ.

ಸ ವಿನೀಯ ಮದಕ್ರೋಧೌ ಮಾನಮೀರ್ಷ್ಯಾಂ ಚ ನಿರ್ವೃತಃ।
ನಿತ್ಯಂ ಪಂಚೋಪಧಾತೀತೈರ್ಮಂತ್ರಯೇತ್ ಸಹ ಮಂತ್ರಿಭಿಃ ॥೫೦॥

ರಾಜನು ಮದಕ್ರೋಧಗಳನ್ನು ಅಹಂಕಾರ ಈರ್ಷ್ಯೆಗಳನ್ನು ತ್ಯಜಿಸಿ, ಸಂತುಷ್ಟಚಿತ್ತನಾಗಿ ನಿತ್ಯವೂ ಆಮಿಷದಿಂದ ದೂರವಾದ ಐದು ಮಂತ್ರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಬೇಕು.

ತೇಷಾಂ ತ್ರಯಾಣಾಂ ತ್ರಿವಿಧಂ ವಿಮರ್ಶಂ
ಬುದ್ಧ್ವೈತ ಚಿತ್ತಂ ವಿನಿವೇಶ್ಯ ತತ್ರ।
ಸ್ವನಿಶ್ಚಯಂ ತಂ ಪರನಿಶ್ಚಯಂ ಚ
ವಿನೇದಯೇದುತ್ತರಮಂತ್ರಕಾಲೇ ॥೫೧॥

ಅವರಲ್ಲಿ ವಿಮರ್ಶೆ ಮಾಡಿ, ಮೂರು ಮಂತ್ರಿಗಳ ಅಭಿಪ್ರಾಯವನ್ನು ತಿಳಿದು, ತನ್ನ ನಿಶ್ಚಯವನ್ನು ಅವರ ನಿಶ್ಚಯವನ್ನು ಪರೀಕ್ಷಿಸಿ ಮುಂದಿನ ಮಂತ್ರಾಲೋಚನೆಯ ಕಾಲದಲ್ಲಿ ಅದನ್ನು ಹೇಳಬೇಕು.

ಧರ್ಮಾರ್ಥಕಾಮಜ್ಞಮುಪೇತ್ಯ ಪೃಚ್ಛೇದ್
ಯುಕ್ತೋ ಗುರುಂ ಬ್ರಾಹ್ಮಣಮುತ್ತರಾರ್ಥಮ್।
ನಿಷ್ಠಾಂ ಕೃತಾಂ ತೇನ ಯದಾ ಸಹ ಸ್ಯಾತ್
ತಂ ತತ್ರ ಮಾರ್ಗಂ ಪ್ರಣಯೇದಸಕ್ತಮ್ ॥೫೨॥

ಧರ್ಮಾರ್ಥಕಾಮಗಳನ್ನು ತಿಳಿದ ಗುರುವಾದ ಬ್ರಾಹ್ಮಣನನ್ನು ಸಮೀಪಿಸಿ ತನ್ನ ಸಂಶಯಗಳಿಗೆ ಪರಿಹಾರವನ್ನು ಕೇಳಬೇಕು. ಅವನು ತೋರಿಸಿದ ಮಾರ್ಗದಲ್ಲಿ ಉಳಿದವರನ್ನು ನಡೆಸಬೇಕು.

ಏವಂ ಸದಾ ಮಂತ್ರಯಿತವ್ಯಮಾಹು-
ರ್ಯೇ ಮಂತ್ರತತ್ತ್ವಾರ್ಥವಿನಿಶ್ಚಯಜ್ಞಾಃ।
ತಸ್ಮಾತ್ ತ್ವಮೇವಂ ಪ್ರಣಯೇಃ ಸದೈವ
ಮಂತ್ರಂ ಪ್ರಜಾಸಂಗ್ರಹಣೇ ಸಮರ್ಥಮ್ ॥೫೩॥

ಮಂತ್ರತತ್ತ್ವಾರ್ಥವನ್ನು ತಿಳಿದ ಜ್ಞಾನಿಗಳು ಯಾವಾಗಲೂ ಹೀಗೆ ಮಂತ್ರಾಲೋಚನೆಯನ್ನು ಮಾಡಬೇಕೆಂದು ಹೇಳುತ್ತಾರೆ. ಆದ್ದರಿಂದ ನೀನೂ ಸಹ ಪ್ರಜಾಸಂಗ್ರಹದಲ್ಲಿ ಸಮರ್ಥವಾದ ಇಂತಹ ಮಂತ್ರಾಲೋಚನೆಯನ್ನು ಯಾವಾಗಲೂ ಮಾಡುವವನಾಗು.

ನ ವಾಮನಾಃ ಕುಬ್ಜಕೃಶಾ ನ ಖಿಂಜಾ
ನಾಂಧಾ ಜಡಾಃ ಸ್ತ್ರೀ ನ ನಪುಂಸಕಂ ಚ।
ನ ಚಾತ್ರ ತಿರ್ಯಙ್ ನ ಪುರೋ ನ ಪಶ್ಚಾತ್
ನೋರ್ಧ್ವಂ ನ ಚಾಧಃ ಪ್ರಚರೇತ ಕಶ್ಚಿತ್ ॥೫೪॥

ಮಂತ್ರಾಲೋಚನೆಯ ಸ್ಥಳದಲ್ಲಿ ವಾಮನರಾಗಲೀ, ಕುಬ್ಜರಾಗಲೀ, ಕೃಶರಾಗಲೀ, ಕುಂಟರಾಗಲೀ, ಕುರುಡರಾಗಲೀ, ಜಡರಾಗಲೀ, ಸ್ತ್ರೀಯಾಗಲೀ, ನಪುಂಸಕರಾಗಲೀ ಇರಬಾರದು. ಹಿಂಭಾಗದಲ್ಲಿ ಅಥವಾ ಮುಂಭಾಗದಲ್ಲಿ ಮೇಲೆ ಅಥವಾ ಕೆಳಗೆ ಯಾವ ಪ್ರಾಣಿಯೂ ತಿರುಗಾಡಬಾರದು.

ಆರುಹ್ಯ ವಾತಾಯನಮೇವ ಶೂನ್ಯಂ
ಸ್ಥೂಲಂ ಪ್ರಕಾಶಂ ಕುಶಕಾಶಹೀನಮ್।
ವಾಗಂಗದೋಷಾನ್ ಪರಿಹೃತ್ಯ ಮಂತ್ರಂ
ಸಮ್ಮಂತ್ರಯೇತ್ ಕಾರ್ಯಮಹೀನಕಾಲಮ್ ॥೫೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಾಶೀತಿತಮೋऽಧ್ಯಾಯಃ ॥೮೫॥

ನಿರ್ಜನವಾದ ಚೆನ್ನಾಗಿ ಗಾಳಿಯಾಡುವ ಒಳ್ಳೆಯ ಬೆಳಕಿರುವ, ಕುಶಕಾಶ-

ರಹಿತವಾದ ಪ್ರದೇಶವನ್ನು ಏರಿ, ವಾಗ್ದೋಷಗಳನ್ನು ಅಂಗದೋಷಗಳನ್ನು ಪರಿಹರಿಸಿ ಸಂದರ್ಭ ಒದಗಿದಾಗ ಶೀಘ್ರವಾಗಿ ಮಂತ್ರಾಲೋಚನೆಯನ್ನು ಮಾಡಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೫ನೆಯ ಅಧ್ಯಾಯವು ಮುಗಿಯಿತು.

—0—

೮೬. ಎಂಬತ್ತಾರನೆಯ ಅಧ್ಯಾಯ

ಸಾಂತ್ವವಿಷಯದಲ್ಲಿ ಇಂದ್ರಬೃಹಸ್ಪತಿಗಳ ಸಂವಾದ

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಬೃಹಸ್ಪತೇಶ್ಚ ಸಂವಾದಂ ಶಕ್ರಸ್ಯ ಚ ಯುಧಿಷ್ಠಿರ ॥೧॥

ಭೀಷ್ಮರು – ಯುಧಿಷ್ಠಿರನೇ! ಈ ವಿಷಯದಲ್ಲಿಯೂ ಸಹ ಇಂದ್ರಬೃಹಸ್ಪತಿಗಳ ನಡುವೆ ನಡೆದ ಪುರಾತನವಾದ ಈ ಸಂವಾದವನ್ನು ಹೇಳುತ್ತಾರೆ.

ಶಕ್ರಃ

ಕಿಂಸ್ವಿದೇಕಪದಂ ಬ್ರಹ್ಮನ್ ಪುರುಷಃ ಸಮ್ಯಗಾಚರನ್ ।
ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್ ॥೨॥

ಶಕ್ರ – ಬ್ರಾಹ್ಮಣರೇ! ಯಾವ ಒಂದು ಪದದಿಂದ ಹೇಳಲ್ಪಡುವ ವಸ್ತುವನ್ನು ಪುರುಷನು ಚೆನ್ನಾಗಿ ಆಚರಿಸಿದರೆ ಎಲ್ಲ ಪ್ರಜೆಗಳಿಗೂ ಪ್ರಮಾಣಭೂತನಾಗಿ ಕೀರ್ತಿ-ಯನ್ನು ಪಡೆದಾನು?

ಬೃಹಸ್ಪತಿಃ

ಸಾಂತ್ವಮೇಕಪದಂ ಶಕ್ರ ಪುರುಷಃ ಸಮ್ಯಗಾಚರನ್ ।
ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್ ॥೩॥

ಬೃಹಸ್ಪತಿಗಳು – ಇಂದ್ರನೇ! ಅಂತಹ ಒಂದು ಪದದಿಂದ ಹೇಳಲ್ಪಡುವುದು

ಸಾಂತ್ವ. ಅದನ್ನು ಚೆನ್ನಾಗಿ ಆಚರಿಸುವವನು ಸರ್ವಭೂತಗಳಿಗೂ ಪ್ರಮಾಣನಾಗಿ ಕೀರ್ತಿಯನ್ನು ಪಡೆಯುತ್ತಾನೆ.

ಏತದೇಕಪದಂ ಶಕ್ರ ಸರ್ವಲೋಕಸುಖಾವಹಮ್ ।
ಆಚರನ್ ಸರ್ವಭೂತೇಷು ಪ್ರಿಯೋ ಭವತಿ ಸರ್ವದಾ ॥೪॥

ಇಂದ್ರನೇ! ಸರ್ವಲೋಕಕ್ಕೆ ಸುಖವನ್ನು ತಂದುಕೊಡುವಂತಹದು ಇದೊಂದೇ ಪದ. ಎಲ್ಲ ಪ್ರಜೆಗಳಲ್ಲಿಯೂ ಇದನ್ನು ಆಚರಿಸುವವನು ಯಾವಾಗಲೂ ಪ್ರಜೆಗಳಿಗೆ ಪ್ರಿಯನಾಗುತ್ತಾನೆ.

ಯೋ ಹಿ ನಾಭಾಷತೇ ಕಿಂಚಿತ್ ಸತತಂ ಭ್ರುಕುಟೀಮುಖಃ ।
ದ್ವೇಷ್ಯೋ ಭವತಿ ಭೂತಾನಾಂ ಸ ಸಾಂತ್ವಮಿಹ ನಾಚರನ್ ॥೫॥

ಯಾವನು ಸತತವಾಗಿ ಹುಬ್ಬುಗಳನ್ನು ಗಂಟಿಕ್ಕಿ, ಯಾರ ಜೊತೆಯಲ್ಲಿಯೂ ಮಾತನಾಡದೆ, ಸಾಂತ್ವವಚನವನ್ನು ಹೇಳುವುದಿಲ್ಲವೋ ಅವನು ಜನರಿಂದ ದ್ವೇಷ್ಯನಾಗುತ್ತಾನೆ.

ಯಸ್ತು ಪೂರ್ವಮಭಿಪ್ರೇಕ್ಷ್ಯ ಪೂರ್ವಮೇವಾಭಿಭಾಷತೇ ।
ಸ್ಮಿತಪೂರ್ವಾಭಿಭಾಷೀ ಚ ತಸ್ಯ ಲೋಕಃ ಪ್ರಸೀದತಿ ॥೬॥

ಯಾವನು ಮೊದಲೇ ನೋಡಿ, ಮೊದಲೇ ಮಂದಹಾಸಪೂರ್ವಕವಾಗಿ ಮಾತನಾಡುತ್ತಾನೆಯೋ ಅವನಿಗೆ ಜನರು ಪ್ರಸನ್ನರಾಗುತ್ತಾರೆ.

ದಾನಮೇವ ಹಿ ಸರ್ವತ್ರ ಸಾಂತ್ವೇನಾನಭಿಜಲ್ಪಿತಮ್ ।
ನ ಪ್ರೀಣಯತಿ ಭೂತಾನಿ ನಿರ್ವ್ಯಂಜನಮಿವಾಶನಮ್ ॥೭॥

ದಾನವೇ ಎಲ್ಲ ಕಡೆಗಳಲ್ಲಿಯೂ ಸಾಂತ್ವದ ಜೊತೆಯಲ್ಲಿ ಸೇರಬೇಕು. ಸಾಂತ್ವವಚನವಿಲ್ಲದ ದಾನವು ವ್ಯಂಜನವಿಲ್ಲದ ಭೋಜನದಂತೆ ಯಾರಿಗೂ ಸುಖವನ್ನು ಕೊಡುವುದಿಲ್ಲ.

ಅದಾತಾ ಹ್ಯಪಿ ಭೂತಾನಾಂ ಮಧುರಾಮೀರಯನ್ ಗಿರಮ್ ।
ಸರ್ವಲೋಕಮಿಮಂ ಶಕ್ರ ಸಾಂತ್ವೇನ ಕುರುತೇ ವಶೇ ॥೮॥

ಯಾರಿಗೂ ಏನನ್ನೂ ಕೊಡದಿದ್ದರೂ ಎಲೈ ಶಕ್ರನೇ! ಮಧುರವಾದ ಮಾತನ್ನಾಡುವವನು ಈ ಎಲ್ಲ ಲೋಕವನ್ನೂ ಸಾಂತ್ವದಿಂದ ವಶಪಡಿಸಿಕೊಳ್ಳುತ್ತಾನೆ.

ತಸ್ಮಾತ್ ಸಾಂತ್ವಂ ಪ್ರಯೋಕ್ತವ್ಯಂ ದಂಡಮಾಧಿತ್ಸತಾಮಿಹ ।
ಫಲಂ ಚ ಜನಯತ್ಯೇವಂ ನ ಚಾಸ್ಯೋದ್ವಿಜತೇ ಜನಃ ॥೯॥

ಆದ್ದರಿಂದ ದಂಡಧಾರಿಯಾದವನು ಸಾಂತ್ವವನ್ನು ಪ್ರಯೋಗಿಸಬೇಕು. ಅದು ಇಂತಹ ಫಲವನ್ನು ಉಂಟುಮಾಡುತ್ತದೆ ಮತ್ತು ಪ್ರಜೆಗಳು ಅಂತಹವನಿಗೆ ಹೆದರುವುದಿಲ್ಲ.

ಸುಕೃತಸ್ಯ ಹಿ ಸಾಂತ್ವಸ್ಯ ಶ್ಲಕ್ಷ್ಣಸ್ಯ ಮಧುರಸ್ಯ ಚ ।
ಸಮ್ಯಗಾಸೇವ್ಯಮಾನಸ್ಯ ತುಲ್ಯಂ ಜಾತು ನ ವಿದ್ಯತೇ ॥೧೦॥

ಚೆನ್ನಾಗಿ ಅನುಷ್ಠಾನ ಮಾಡಿದ, ಮಧುರವಾದ, ಸೂಕ್ಷ್ಮವಾದ ಸಾಂತ್ವವನ್ನು ಪ್ರಯೋಗಿಸುವವನಿಗೆ ಅದಕ್ಕೆ ಸಮಾನವಾದುದು ಬೇರೆ ಯಾವುದೂ ಇಲ್ಲ.

ಭೀಷ್ಮಃ

ಇತ್ಯುಕ್ತಃ ಕೃತವಾನ್ ಸರ್ವಂ ತಥಾ ಶಕ್ರಃ ಪುರೋಧಸಾ ।
ತಥಾ ತ್ವಮಪಿ ಕೌಂತೇಯ ಸಮ್ಯಗೇತತ್ ಸಮಾಚರ ॥೧೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಡಶೀತಿತಮೋऽಧ್ಯಾಯಃ ॥೮೬॥

ಭೀಷ್ಮರು – ಹೀಗೆ ಇಂದ್ರನು ಪುರೋಹಿತರಾದ ಬೃಹಸ್ಪತಿಗಳಿಂದ ಹೇಳಲ್ಪಟ್ಟು ಎಲ್ಲವನ್ನೂ ಹಾಗೆಯೇ ಮಾಡಿದನು. ಎಲೈ ಕೌಂತೇಯನೇ! ನೀನೂ ಸಹ ಇದನ್ನು ಚೆನ್ನಾಗಿ ಆಚರಿಸುವವನಾಗು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೮೬ನೆಯ ಅಧ್ಯಾಯವು ಮುಗಿಯಿತು.

೮೭. ಎಂಬತ್ತೇಳನೆಯ ಅಧ್ಯಾಯ

ಅಮಾತ್ಯಾದಿಲಕ್ಷಣಕಥನ

ಯುಧಿಷ್ಠಿರಃ

ಕಥಂಸ್ವಿದಿಹ ರಾಜೇಂದ್ರ ಪಾಲಯನ್ ಪಾರ್ಥಿವಃ ಪ್ರಜಾಃ।
ಪ್ರೈತಿ ಧರ್ಮಂ ವಿಶೇಷೇಣ ಕೀರ್ತಿಮಾಪ್ನೋತಿ ಶಾಶ್ವತೀಮ್ ॥೧॥

ಯುಧಿಷ್ಠಿರ – ಎಲೈ ರಾಜೇಂದ್ರನೇ! ರಾಜನು ಪ್ರಜೆಗಳನ್ನು ಹೇಗೆ ಪಾಲಿಸುತ್ತಾ, ಧರ್ಮವನ್ನು ಮತ್ತು ಶಾಶ್ವತವಾದ ವಿಶೇಷವಾದ ಕೀರ್ತಿಯನ್ನು ಪಡೆಯುತ್ತಾನೆ.

ಭೀಷ್ಮಃ

ವ್ಯವಹಾರೇಣ ಶುದ್ಧೇನ ಪ್ರಜಪಾಲನತತ್ಪರಃ।
ಪ್ರಾಪ್ಯ ಧರ್ಮಂ ಚ ಕೀರ್ತಿಂ ಚ ಲೋಕಾವಾಪ್ನೋತ್ಯುಭೌ ಶುಚಿಃ ॥೨॥

ಭೀಷ್ಮರು – ಪ್ರಜಾಪಾಲನತತ್ಪರನಾದ ರಾಜನು ಶುದ್ಧವ್ಯವಹಾರದಿಂದ ಧರ್ಮವನ್ನೂ ಕೀರ್ತಿಯನ್ನೂ ಪಡೆದು ಶುಚಿಯಾಗಿ ಎರಡು ಲೋಕಗಳನ್ನೂ ಹೊಂದುತ್ತಾನೆ.

ಯುಧಿಷ್ಠಿರಃ

ಕೀದೃಶಂ ವ್ಯವಹಾರಂ ತು ಕೈಶ್ಚ ವ್ಯವಹರೇನ್ನೃಪಃ।
ಏತತ್ಪೃಷ್ಟೋ ಮಹಾಪ್ರಾಜ್ಞ ಯಥಾವದ್ ವಕ್ತುಮರ್ಹಸಿ ॥೩॥

ಯುಧಿಷ್ಠಿರ – ಎಂತಹ ವ್ಯವಹಾರವನ್ನು ರಾಜನು ಯಾರ ಜೊತೆಯಲ್ಲಿ ಮಾಡಬೇಕು? ಎಲೈ ಮಹಾಪ್ರಾಜ್ಞನೇ! ಈ ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಹೇಳಬೇಕು.

ಯೇ ಚೈತೇ ಪೂರ್ವಕಥಿತಾ ಗುಣಾಸ್ತೇ ಪುರುಷಂ ಪ್ರತಿ।
ನೈಕಸ್ಮಿನ್ ಪುರುಷೇ ಹ್ಯೇತೇ ವಿದ್ಯಂತ ಇತಿ ಮೇ ಮತಿಃ ॥೪॥

ಪುರುಷನಲ್ಲಿರಬೇಕೆಂದು ಹೇಳಿದ ಈ ಗುಣಗಳು ಒಬ್ಬ ಪುರುಷನಲ್ಲಿ ಇರುವುದಿಲ್ಲ ಎಂದು ನನ್ನ ಅಭಿಪ್ರಾಯ.

ಭೀಷ್ಮಃ

ಏತಮೇತನ್ಮಹಾಪ್ರಾಜ್ಞ ಯಥಾ ವದಸಿ ಬುದ್ಧಿಮಾನ್ ।
ದುರ್ಲಭಃ ಪುರುಷಃ ಕಶ್ಚಿದೇಭಿರ್ಗುಣಗಣೈರ್ಯುತಃ ॥೫॥

ಭೀಷ್ಮರು – ಎಲೈ ಮಹಾಪ್ರಾಜ್ಞನೇ! ಮೇಧಾವಿಯೇ ನೀನು ಹೇಳಿದಂತೆಯೇ ಸರಿ. ಇಂತಹ ಗುಣಗಳಿಂದ ಕೂಡಿದ ಮನುಷ್ಯನು ದುರ್ಲಭನಾದವನು.

ಕಿಂತು ಸಂಕ್ಷೇಪತಃ ಶೀಲಂ ಪ್ರಯತ್ನೇ ನೇಹ ದುರ್ಲಭಮ್ ।
ವಕ್ಷ್ಯಾಮಿ ತು ಯಥಾಮಾತ್ಯಾನ್ ಯಾದೃಶಾಂಶ್ಚ ಕರಿಷ್ಯಸಿ ॥೬॥

ಆದರೆ ಪ್ರಯತ್ನಪಟ್ಟರೆ ಸಂಕ್ಷೇಪವಾಗಿ ಶೀಲವುಳ್ಳ ಪುರುಷನು ದುರ್ಲಭನಲ್ಲ. ನೀನು ಎಂತಹ ಅಮಾತ್ಯರನ್ನು ಸಂಪಾದಿಸಬೇಕೆಂದು ನಾನು ನಿನಗೆ ಹೇಳುವೆನು.

ಚತುರೋ ಬ್ರಾಹ್ಮಣಾನ್ ವೈದ್ಯಾನ್ ಪ್ರಗಲ್ಭಾನ್ ಸಾತ್ವಿಕಾನ್ ಶುಚೀನ್ ।
ಕ್ಷತ್ರಿಯಾಂಶ್ಚತಥಾ ಚಾಷ್ಟೌ ಬಲಿನಃ ಶಸ್ತ್ರಪಾಣಿನಃ ॥೭॥

ವಿದ್ಯಾವಂತರೂ ಕುಶಲರೂ ಸಾತ್ವಿಕರೂ ಶುಚಿಗಳೂ ಆದ ನಾಲ್ಕು ಬ್ರಾಹ್ಮಣರು, ಬಲಿಷ್ಠರೂ ಶಸ್ತ್ರಪಾಣಿಗಳೂ ಆದ ಎಂಟು ಕ್ಷತ್ರಿಯರು.

ವೈಶ್ಯಾನ್ ವಿತ್ತೇನ ಸಂಪನ್ನಾನೇಕವಿಂಶತಿ ಸಂಖ್ಯಯಾ ।
ತ್ರೀಂಶ್ಚ ಶೂದ್ರಾನ್ ವಿನೀತಾಂಶ್ಚ ಶುಚೀನ್ ಕರ್ಮಣಿ ಪೂರ್ವಕೇ ॥೮॥

ಧನಾಢ್ಯರಾದ ಇಪ್ಪತ್ತೊಂದು ವೈಶ್ಯರು, ಮತ್ತು ಶುಚಿಗಳೂ ವಿನೀತರೂ ಆದ ಮೂರು ಶೂದ್ರರನ್ನು ಸೇರಿಸಿ ಕರ್ಮವನ್ನು ಮಾಡುವುದಕ್ಕಿಂತ ಮೊದಲು ಒಂದು ಮಂಡಲವನ್ನು ರಚಿಸಬೇಕು.

ಅಷ್ಟಾಭಿಶ್ಚ ಗುಣೈರ್ಯುಕ್ತಃ ಸೂತಃ ಪೌರಾಣಿಕೋ ಭವೇತ್ ।
ಪಂಚಾಶದ್ವರ್ಷವಯಸಂ ಪ್ರಗಲ್ಭಮನಸೂಯಕಮ್ ॥೯॥

ಪುರಾಣವನ್ನು ಹೇಳುವ ಸೂತನು ಎಂಟುಗುಣಗಳಿಂದ ಕೂಡಿದ್ದು ಐವತ್ತು ವರ್ಷವಯಸ್ಸಿನವನೂ ಅಸೂಯಾರಹಿತನೂ ವಿದಗ್ಧನೂ ಆಗಿರಬೇಕು. (ಪೌರಾಣಿಕಸೂತನಿಗೆ ಇರಬೇಕಾದ ಎಂಟುಗುಣಗಳೆಂದರೆ ಶುಶ್ರೂಷೆ, ಶ್ರವಣ, ಗ್ರಹಣ, ಧಾರಣ, ಊಹ, ಅಪೋಹನ, ವಿಜ್ಞಾನ ಮತ್ತು ತತ್ತ್ವಜ್ಞಾನ).

ಮತಿಸ್ಮೃತಿಸಮಾಯುಕ್ತಂ ವಿನೀತಂ ಸಮದರ್ಶನಮ್ ।
ಕಲ್ಪಯೇದ್ ವದಮಾನಾನಾಂ ಶಕ್ತಮರ್ಥೇಷ್ವಲೋಲುಪಮ್ ॥೧೦॥

ಸ್ಮರಣಶಕ್ತಿ, ಒಳ್ಳೆಯ ಬುದ್ಧಿ, ವಿನಯ, ಸಮದೃಷ್ಟಿ, ಮಾತನಾಡುವ ಸಾಮರ್ಥ್ಯ, ಧನಲೋಭವಿಲ್ಲದಿರುವಿಕೆ ಇವುಗಳನ್ನು ನೋಡಿ ಪೌರಾಣಿಕಸೂತನನ್ನು ನಿಯಮಿಸಬೇಕು.

ವಿವರ್ಜಿತಾನಾಂ ವ್ಯಸನೈಃ ಸುಘೋರೈಃ ಸಪ್ತಭಿರ್ಭೃಶಮ್ ।
ಅಷ್ಟಾನಾಂ ಮಂತ್ರಿಣಾಂ ಮಧ್ಯೇ ಮಂತ್ರಂ ರಾಜೋಪಧಾರಯೇತ್ ॥೧೧॥

ಏಳು ಘೋರವ್ಯಸನಗಳಿಂದ ರಹಿತರಾದ ಎಂಟು ಮಂತ್ರಿಗಳ ಮಧ್ಯದಲ್ಲಿ ರಾಜನು ಮಂತ್ರಾಲೋಚನೆಯನ್ನು ಮಾಡಬೇಕು. (ಮಂತ್ರಿಗಳ ಏಳು ವ್ಯಸನವೆಂದರೆ ಬೇಟೆ, ಜೂಜು, ಸ್ತ್ರೀಸಹವಾಸ, ಮದ್ಯಪಾನ, ಕ್ರೂರದಂಡ, ಕಠಿಣವಾದ ಮಾತು ಮತ್ತು ಅರ್ಥದೂಷಣ).

ತತಃ ಸಂಪ್ರೇಷಯೇದ್ ರಾಷ್ಟ್ರೇ ರಾಷ್ಟ್ರಿಯಾಯ ಚ ದರ್ಶಯೇತ್ ।
ಅನೇನ ವ್ಯವಹಾರೇಣ ದ್ರಷ್ಟವ್ಯಾಸ್ತೇ ಪ್ರಜಾಃ ಸದಾ ॥೧೨॥

ಅನಂತರ ಆ ವಿಷಯವನ್ನು ರಾಷ್ಟ್ರಕ್ಕೂ ಮತ್ತು ರಾಜನ ಬಂಧುಗಳಿಗೂ ತಿಳಿಸಬೇಕು. ಇಂತಹ ವ್ಯವಹಾರದಿಂದ ನೀನು ಯಾವಾಗಲೂ ಪ್ರಜೆಗಳನ್ನು ನೋಡಿ-ಕೊಳ್ಳಬೇಕು.

ನ ಚಾಪಿ ಗೂಢಂ ಕಾರ್ಯಂ ತೇ ಗ್ರಾಹ್ಯಂ ಕಾರ್ಯೋಪಘಾತಕಮ್ ।
ಕಾರ್ಯೇ ಖಲು ವಿಪನ್ನೇ ತ್ವಾಂ ಸೋಽಧರ್ಮಸ್ತ್ವಾಂಶ್ಚ ಪೀಡಯೇತ್ ॥೧೩॥

ಯಾವ ಕಾರ್ಯವನ್ನೂ ಗೂಢವಾಗಿ ಮಾಡಬಾರದು. ಮಾಡಲಿರುವ ಕಾರ್ಯಕ್ಕೆ ವಿರೋಧಿಯಾದ ಯಾವುದನ್ನೂ ಮಾಡಬಾರದು. ಕಾರ್ಯವು ಕೆಟ್ಟುಹೋದರೆ ನಿನಗೂ ಮತ್ತು ಮಂತ್ರಿಗಳಿಗೂ ಅಧರ್ಮದ ಪೀಡೆಯುಂಟಾದೀತು!

ವಿದ್ರವೇಚ್ಚೈವ ರಾಷ್ಟ್ರಂ ತೇ ಶ್ಯೇನಾತ್ ಪಕ್ಷಿಗಣಾ ಇವ ।
ಪರಿಸ್ರವೇಚ್ಚ ಸತತಂ ನೌರ್ವಿಶೀರ್ಣೇವ ಸಾಗರೇ ॥೧೪॥

ಹದ್ದಿಗೆ ಹೆದರಿ ಪಕ್ಷಿಗಳ ಸಮೂಹವು ಓಡಿಹೋದಂತೆ ನಿನ್ನ ರಾಷ್ಟ್ರವು ಓಡಿ ಹೋದೀತು! ಸಾಗರದಲ್ಲಿ ಒಡೆದ ನೌಕೆಯಂತೆ ಸತತವಾಗಿ ಪರಿಸ್ರವಣವನ್ನು ಹೊಂದೀತು!

ಪ್ರಜಾಃ ಪಾಲಯತೋಽಸಮ್ಯಗಧರ್ಮೇಣೇಹ ಭೂಪತೇಃ ।
ಹಾರ್ದಂ ಭಯಂ ಸಂಭವತಿ ಸ್ವರ್ಗಶ್ಚಾಸ್ಯ ವಿರುದ್ಧ್ಯತೇ ॥೧೫॥

ಅಧರ್ಮದಿಂದ ಪ್ರಜೆಗಳನ್ನು ಪಾಲಿಸುವ ರಾಜನಿಗೆ ಹೃದಯದಲ್ಲಿ ಭಯವುಂಟಾಗುತ್ತದೆ. ಮತ್ತು ಸ್ವರ್ಗವು ದೂರವಾಗುತ್ತದೆ.

ಅಥ ಯೋಽಧರ್ಮತಃ ಪಾತಿ ರಾಜಾಽಮಾತ್ಯೋಽಥ ವಾತ್ಮಜಃ ।
ಧರ್ಮಾಸನೇ ನಿಯುಕ್ತಃ ಸನ್ ಧರ್ಮಮೂಲಂ ನರರ್ಷಭ ॥೧೬॥

ಕಾರ್ಯೇಷ್ವಧಿಕೃತಾಃ ಸಮ್ಯಗಕುರ್ವಂತೋ ನೃಪಾನುಗಾಃ ।
ಆತ್ಮಾನಂ ಪುರತಃ ಕೃತ್ವಾ ಯಾಂತ್ಯಧಃ ಸಹಪಾರ್ಥಿವಾಃ ॥೧೭॥

ಎಲೈ ನರರ್ಷಭನೇ! ರಾಜನಾಗಲೀ ಅಥವಾ ಧರ್ಮಾಸನದಲ್ಲಿ ನಿಯುಕ್ತರಾದ ಕಾರ್ಯಗಳಲ್ಲಿ ಅಧಿಕೃತರಾದ ಅಮಾತ್ಯ, ರಾಜಪುತ್ರ ಅಥವಾ ರಾಜಾನುಯಾಯಿಗಳಾಗಲೀ ಅಧರ್ಮದಿಂದ ಪ್ರಜೆಗಳನ್ನು ಪಾಲಿಸಿದರೆ ಅವರು ರಾಜನನ್ನೂ ಎಳೆದುಕೊಂಡು ಅಧಃಪತನವನ್ನು ಹೊಂದುತ್ತಾರೆ.

ಬಲಾತ್ಕೃತಾನಾಂ ಬಲಿಭಿಃ ಕೃಪಣಂ ಬಹು ಜಲ್ಪತಾಮ್ ।
ನಾಥೋ ವೈ ಭೂಮಿಪೋ ನಿತ್ಯಮನಾಥಾನಾಂ ನೃಣಾಂ ಭವೇತ್ ॥೧೮॥

ಬಲಿಷ್ಠರಿಂದ ಬಲಾತ್ಕಾರಕ್ಕೆ ಒಳಗಾಗಿ ಕರುಣಾಜನಕವಾಗಿ ಬಹಳವಾಗಿ ಗೋಳಾಡುವ ಅನಾಥರಾದ ಮನುಷ್ಯರಿಗೆ ರಾಜನೇ ನಿತ್ಯವೂ ನಾಥನಾದವನು.

ತತಃ ಸಾಕ್ಷಿಬಲಂ ಸಾಧು ದ್ವೈತವಾದೇ ಕೃತಂ ಭವೇತ್ ।
ಅಸಾಕ್ಷಿಕಮನಾಥಂ ವಾ ಪರೀಕ್ಷ್ಯಂ ತದ್ ವಿಶೇಷತಃ ॥೧೯॥

ಹಾಗೆಯೇ ವಿವಾದಗಳು ಬಂದಾಗ ಸಾಕ್ಷಿಗಳ ಬಲವನ್ನು ಚೆನ್ನಾಗಿ ವಿಮರ್ಶೆ ಮಾಡದೇ, ಸಾಕ್ಷಿಯಿಲ್ಲದ ಸ್ಥಳದ ನಾಥರೂ ಇಲ್ಲದ ಸ್ಥಳದ ವಿವಾದವಚನಗಳನ್ನು ವಿಶೇಷವಾಗಿ ಪರೀಕ್ಷೆ ಮಾಡಬೇಕು.

ಅಪರಾಧಾನುರೂಪಂ ಚ ದಂಡಂ ಪಾಪೇಷು ಪಾತಯೇತ್ ।
ಉದ್ವೇಜಯೇದ್ ಧನೈರ್ಮದ್ಧಾನ್ ದರಿದ್ರಾನ್ ವಧಬಂಧನೈಃ ॥೨೦॥

ಅಪರಾಧವನ್ನು ಮಾಡಿದವರಲ್ಲಿ ಅಪರಾಧಕ್ಕೆ ಅನುಗುಣವಾಗಿ ಶಿಕ್ಷೆಯನ್ನು ವಿಧಿ-ಸಬೇಕು. ಶ್ರೀಮಂತರನ್ನು ಧನದ ವಿಷಯದಲ್ಲಿ ಉದ್ವೇಗಗೊಳಿಸಬೇಕು. ದರಿದ್ರ-ರನ್ನು ವಧೆ ಮತ್ತು ಬಂಧನಗಳಿಂದ ಶಿಕ್ಷಿಸಬೇಕು.

ವಿನಯ್ಯೈರಪಿ ದುರ್ವೃತ್ತಾನ್ ಪ್ರಹಾರೈರಪಿ ಪಾರ್ಥಿವಃ ।
ಸಾಂತ್ವೇನೋಪಪ್ರದಾನೇನ ಶಿಷ್ಟಾಂಶ್ಚ ಪರಿಪಾಲಯೇತ್ ॥೨೧॥

ರಾಜನು ದುರ್ನಡತೆಯುಳ್ಳವರನ್ನು ಪ್ರಹಾರದಿಂದಾದರೂ ದಾರಿಗೆ ತರಬೇಕು. ಸಜ್ಜನರಾದವರನ್ನು ಸಾಂತ್ವವಚನಗಳಿಂದ ಮತ್ತು ಉಪಪನ್ನವಾದ ವಸ್ತುಗಳ ದಾನದಿಂದ ಪರಿಪಾಲಿಸಬೇಕು.

ರಾಜ್ಞೋ ವಧಂ ಚಿಕೀರ್ಷೇದ್ ಯಸ್ತಸ್ಯ ಚಿತ್ರೋ ವಧೋ ಭವೇತ್ ।
ಆದೀಪಕಸ್ಯ ಸ್ತೇನಸ್ಯ ವರ್ಣಸಂಕರಕಸ್ಯ ಚ ॥೨೨॥

ರಾಜನ ವಧೆಯನ್ನು ಮಾಡಲು ಬಯಸುವವನಿಗೆ, ಗೃಹಗಳಿಗೆ ಅಗ್ನಿಯನ್ನು ಕೊಡುವವನಿಗೆ, ಕಳ್ಳನಿಗೆ, ವರ್ಣಸಂಕರವನ್ನು ಮಾಡುವವನಿಗೆ ಚಿತ್ರವಧೆಯನ್ನು ಮಾಡಿಸಬೇಕು.

ಸಮ್ಯಕ್ ಪ್ರಣಯತೋ ದಂಡಂ ಭೂಮಿಪಸ್ಯ ವಿಶಾಂಪತೇ।
ಯುಕ್ತಸ್ಯ ವಾ ನಾಸ್ತ್ಯಧರ್ಮೋ ಧರ್ಮ ಏವೇಹ ಶಾಶ್ವತಃ ॥೨೩॥

ಎಲೈ ರಾಜನೇ! ಸರಿಯಾದ ರೀತಿಯಲ್ಲಿ ದಂಡಪ್ರಯೋಗವನ್ನು ಮಾಡುವ ರಾಜನಿಗೆ ಅಧರ್ಮವು ಉಂಟಾಗುವುದಿಲ್ಲ. ಇಲ್ಲಿ ಶಾಶ್ವತವಾದ ಧರ್ಮವೇ ಉಂಟಾಗುತ್ತದೆ.

ಕಾಮಕಾರೇಣ ದಂಡಂ ತು ಯಃ ಕುರ್ಯಾದವಿಚಕ್ಷಣಃ।
ಸ ಇಹಾಕೀರ್ತಿಸಂಯುಕ್ತೋ ಮೃತೋ ನರಕಮಾಪ್ನುಯಾತ್ ॥೨೪॥

ಆದರೆ ಯಾವನು ಅಕುಶಲನಾಗಿ, ತನ್ನ ಮನಸ್ಸಿಗೆ ಬಂದಂತೆ ದಂಡವನ್ನು ವಿಧಿಸುತ್ತಾನೆಯೋ ಅವನು ಈ ಲೋಕದಲ್ಲಿ ಅಕೀರ್ತಿಯನ್ನು ಹೊಂದಿ, ಮೃತನಾಗಿ ನರಕವನ್ನು ಸೇರುತ್ತಾನೆ.

ನ ಪರಸ್ಯ ಶ್ರವಾದೇವ ಪರೇಷಾಂ ದಂಡಮರ್ಪಯೇತ್।
ಆಗಮಾನುಗಮಂ ಕೃತ್ವಾ ಬದ್ಧೀಯಾನ್ಮೋಕ್ಷಯೇತ ವಾ ॥೨೫॥

ಕೇವಲ ಇನ್ನೊಬ್ಬರ ಮಾತನ್ನು ಕೇಳಿ ಯಾರಿಗೂ ದಂಡವನ್ನು ವಿಧಿಸಬಾರದು. ಅಂತಹ ದೂರುಗಳನ್ನು ಶಾಸ್ತ್ರಗಳ ಒರೆಗೆ ಹಚ್ಚಿ, ಆರೋಪಿಯನ್ನು ಬಂಧಿಸಬೇಕು ಅಥವಾ ಬಿಡುಗಡೆ ಮಾಡಬೇಕು.

ನ ತು ಹನ್ಯಾನ್ನೃಪೋ ಜಾತು ದೂತಂ ಕಸ್ಯಾಂಚಿದಾಪದಿ।
ದೂತಸ್ಯ ಹಂತಾ ನಿರಯಮಾವಿಶೇತ್ ಸಚಿವೈಃ ಸಹ ॥೨೬॥

ರಾಜನು ಯಾವ ಆಪತ್ತಿನಲ್ಲಿಯೂ ದೂತನನ್ನು ಕೊಲ್ಲಬಾರದು. ದೂತನನ್ನು ಕೊಲ್ಲುವ ರಾಜನು ಸಚಿವರ ಜೊತೆಯಲ್ಲಿ ನರಕಕ್ಕೆ ಹೋಗುತ್ತಾನೆ.

ಯಥೋಕ್ತವಾದಿನಂ ದೂತಂ ಕ್ಷತ್ರಧರ್ಮರತೋ ನೃಪಃ।
ಯೋ ಹನ್ಯಾದ್ ಪಿತರಸ್ತಸ್ಯ ಭ್ರೂಣಹತ್ಯಾಮವಾಪ್ನುಯುಃ ॥೨೭॥

ಕ್ಷತ್ರಿಯಧರ್ಮದಲ್ಲಿ ರತನಾದ ರಾಜನು ತನ್ನ ಸ್ವಾಮಿಯು ಹೇಳಿದಂತೆ ಸಂದೇಶವನ್ನು ತಲುಪಿಸುವ ದೂತನನ್ನು ಕೊಂದರೆ ರಾಜನ ತಂದೆತಾಯಿಗಳು ಭ್ರೂಣಹತ್ಯಾದೋಷಕ್ಕೆ ಗುರಿಯಾಗುತ್ತಾರೆ.

ಕುಲೀನಃ ಶೀಲಸಂಪನ್ನೋ ವಾಗ್ಮೀ ದಕ್ಷಃ ಪ್ರಿಯಂವದಃ।
ಯಥೋಕ್ತವಾದೀ ಸ್ಮೃತಿಮಾನ್ ದೂತಃ ಸ್ಯಾತ್ ಸಪ್ತಭಿರ್ಗುಣೈಃ ॥೨೮॥

ಒಳ್ಳೆಯ ಕುಲದಲ್ಲಿಜನಿಸಿದವನೂ, ಶೀಲಸಂಪನ್ನನೂ, ವಾಗ್ಮಿಯೂ , ದಕ್ಷನೂ, ಪ್ರಿಯವಾದ ಮಾತನ್ನಾಡುವವನೂ, ಒಳ್ಳೆಯ ಸ್ಮೃತಿಯನ್ನುಳ್ಳವನೂ, ಸಂದೇಶವನ್ನು ಸರಿಯಾಗಿ ಹೇಳುವವನೂ ಆದ ಈ ಏಳು ಗುಣಗಳಿಂದ ಕೂಡಿದವನು ದೂತನಾಗುತ್ತಾನೆ.

ಏತೈರೇವ ಗುಣೈರ್ಯುಕ್ತಃ ಪ್ರತೀಹಾರೋಽಸ್ಯ ರಕ್ಷಿತಾ।
ಶಿರೋರಕ್ಷಶ್ಚ ಭವತಿ ಗುಣೈರೇತೈಃ ಸಮನ್ವಿತಃ ॥೨೯॥

ದ್ವಾರಪಾಲಕನಾಗಿ ರಕ್ಷಣೆಯನ್ನು ಮಾಡುವವನೂ ಸಹ ಇವೇ ಗುಣಗಳಿಂದ ಕೂಡಿರಬೇಕು. ಅಂಗರಕ್ಷಕನೂ ಸಹ ಈ ಗುಣಗಳಿಂದ ಕೂಡಿರಬೇಕು.

ಧರ್ಮಾರ್ಥಶಾಸ್ತ್ರತತ್ತ್ವಜ್ಞಃ ಸಂಧಿವಿಗ್ರಹಕೋವಿದಃ।
ಮತಿಮಾನ್ ಧೃತಿಮಾನ್ ಧೀಮಾನ್ ರಹಸ್ಯವಿನಿಗೂಹಿತಾ ॥೩೦॥

ಕುಲೀನಃ ಸತ್ಯಸಂಪನ್ನಃ ಶಕ್ತೋಽಮಾತ್ಯಃ ಪ್ರಶಂಸಿತಃ।

ಧರ್ಮಾರ್ಥಶಾಸ್ತ್ರತತ್ತ್ವಜ್ಞನೂ, ಸಂಧಿ-ವಿಗ್ರಹಗಳಲ್ಲಿ ಕೋವಿದನೂ, ಒಳ್ಳೆಯ ಬುದ್ಧಿಯನ್ನೂ ಧೈರ್ಯವನ್ನೂ ಹೊಂದಿದವನೂ, ಮೇಧಾವಿಯೂ, ರಹಸ್ಯವನ್ನು ಮುಚ್ಚಿಡುವವನೂ, ಸತ್ಕುಲಪ್ರಸೂತನೂ, ಸತ್ಯಸಂಪನ್ನನೂ, ಸಮರ್ಥನೂ ಆದ ಅಮಾತ್ಯನು ಪ್ರಶಂಸಿಸಲ್ಪಡುತ್ತಾನೆ.

ಏತೈರೇವ ಗುಣೈರ್ಯುಕ್ತಸ್ತಥಾ ಸೇನಾಪತಿರ್ಭವೇತ್ ॥೩೧॥

ವ್ಯೂಹಯಂತ್ರಾಯುಧೀಯಾನಾಂ ತತ್ತ್ವಜ್ಞೋ ವಿಕ್ರಮಾನ್ವಿತಃ।
ವರ್ಷಶೀತೋಷ್ಣವಾತಾನಾಂ ಸಹಿಷ್ಣುಃ ಪರರಂಧ್ರವಿತ್ ॥೩೨॥

ಹಾಗೆಯೇ ಸೇನಾಪತಿಯೂ ಸಹ ಈ ಗುಣಗಳಿಂದಲೇ ಕೂಡಿದವನಾಗಿರಬೇಕು. ಜೊತೆಗೆ ವ್ಯೂಹಗಳ, ಯಂತ್ರಗಳ ಮತ್ತು ಆಯುಧಗಳ ತತ್ತ್ವಗಳನ್ನು ತಿಳಿದಿರಬೇಕು. ಪರಾಕ್ರಮಶಾಲಿಯಾಗಿರಬೇಕು. ಶೀತೋಷ್ಣವಾತವರ್ಷಗಳನ್ನು ಸಹಿಸುವವನಾಗಿರಬೇಕು. ಶತ್ರುವಿನ ದೌರ್ಬಲ್ಯವನ್ನು ತಿಳಿಯುವವನಾಗಿರಬೇಕು.

ವಿಶ್ವಾಸಯೇತ್ ಪರಾಂಶ್ಚೈವ ವಿಶ್ವಸೇನ್ನ ತು ಕಸ್ಯಚಿತ್।
ಪುತ್ರೇಷ್ವಪಿ ಹಿ ರಾಜೇಂದ್ರ ವಿಶ್ವಾಸೋ ನ ಪ್ರಶಸ್ಯತೇ ॥೩೩॥

ರಾಜನು ಇನ್ನೊಬ್ಬರು ತನ್ನಲ್ಲಿ ವಿಶ್ವಾಸ ಮಾಡುವಂತೆ ಮಾಡಬೇಕು. ತಾನು ಯಾರನ್ನೂ ನಂಬಬಾರದು. ಎಲೈ ರಾಜೇಂದ್ರನೇ! ಪುತ್ರರಲ್ಲಿ ವಿಶ್ವಾಸ ಮಾಡುವುದೂ ಸಹ ರಾಜನಿಗೆ ಪ್ರಶಸ್ತವಲ್ಲ.

ಏತಚ್ಚಾಸ್ತ್ರಾರ್ಥತತ್ತ್ವಂ ತು ತವಾಖ್ಯಾತಂ ಮಯಾऽನಘ।
ಅವಿಶ್ವಾಸೋ ನರೇಂದ್ರಾಣಾಂ ಗುಹ್ಯಂ ಪರಮಮುಚ್ಯತೇ ॥೩೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಸಪ್ತಾಶೀತಿತಮೋऽಧ್ಯಾಯಃ ॥೮೭॥

ಎಲೈ ಅನಘನೇ! ಈ ಶಾಸ್ತ್ರಾರ್ಥತತ್ವವನ್ನು ನಾನು ನಿನಗೆ ಹೇಳಿದ್ದೇನೆ. ರಾಜರಿಗೆ ಅವಿಶ್ವಾಸವು ಪರಮಗುಹ್ಯವಾದ ತತ್ತ್ವವೆಂದು ಹೇಳಲ್ಪಡುತ್ತದೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೭ನೆಯ ಅಧ್ಯಾಯವು ಮುಗಿಯಿತು

—0—

೮೮. ಎಂಬತ್ತೆಂಟನೆಯ ಅಧ್ಯಾಯ

ಪುರಲಕ್ಷಣಾದಿ ಕಥನ

ಯುಧಿಷ್ಠಿರಃ

ಕಥಂವಿಧಂ ಪುರಂ ರಾಜಾ ಸ್ವಯಮಾವಸ್ತುಮರ್ಹತಿ।
ಕೃತಂ ವಾ ಕಾರಯಿತ್ವಾ ವಾ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಪಿತಾಮಹನೇ! ರಾಜನು ಮೊದಲೇ ಸಿದ್ಧವಾದ ಅಥವಾ ತಾನು ಹೊಸದಾಗಿ ಸಿದ್ಧಪಡಿಸುವ ಎಂತಹ ಪುರದಲ್ಲಿ ವಾಸ ಮಾಡಬೇಕು ಎಂದು ನನಗೆ ಹೇಳು.

ಭೀಷ್ಮಃ

ಯತ್ರ ಕೌಂತೇಯ ವಸ್ತವ್ಯಂ ಸಪುತ್ರಭ್ರಾತೃಬಂಧುನಾ।
ನ್ಯಾಯ್ಯಂ ತತ್ರ ಪರಿಪ್ರಷ್ಟುಂ ಗುಪ್ತಿಂ ವೃತ್ತಿಂ ಚ ಭಾರತ ॥೨॥

ಭೀಷ್ಮರು – ಕೌಂತೇಯನೇ! ಭಾರತನೇ! ರಾಜನು ಪುತ್ರಭ್ರಾತೃಬಂಧು-ಸಹಿತನಾಗಿ ಎಲ್ಲಿ ವಾಸ ಮಾಡಬೇಕೋ ಅಲ್ಲಿಯ ರಕ್ಷಣೆ ಮತ್ತು ಜೀವನಕ್ರಮವು ಹೇಗಿರಬೇಕು ಎಂದು ನೀನು ಕೇಳುವುದು ನ್ಯಾಯವಾಗಿದೆ.

ತಸ್ಮಾತ್ ತೇ ವರ್ತಯಿಷ್ಯಾಮಿ ದುರ್ಗಕರ್ಮ ವಿಶೇಷತಃ।
ಶ್ರುತ್ವಾ ತಥಾ ವಿಧಾತವ್ಯಮನುಷ್ಠೇಯಂ ಚ ಯತ್ನತಃ ॥೩॥

ಆದುದರಿಂದ ನಿನಗೆ ದುರ್ಗವನ್ನು ಮಾಡುವ ರೀತಿಯನ್ನು ವಿಶೇಷವಾಗಿ ಹೇಳುವೆನು. ಅದನ್ನು ಕೇಳಿ ಹಾಗೆಯೇ ಮಾಡಿಸಿ ಪ್ರಯತ್ನಪೂರ್ವಕವಾಗಿ ಅನುಷ್ಠಾನ ಮಾಡಬೇಕು.

ಷಡ್ವಿಧಂ ದುರ್ಗಮಾಸ್ಥಾಯ ಪುರಾಣ್ಯಥ ನಿವೇಶಯೇತ್।
ಸರ್ವಸಂಪತ್ಪ್ರಧಾನಂ ಯದ್ ಬಾಹುಲ್ಯಂ ವಾಪಿ ಸಂಭವೇತ್ ॥೪॥

ಆರುವಿಧವಾದ ದುರ್ಗಗಳನ್ನು ನಿರ್ಮಿಸಿ, ಸರ್ವಸಂಪತ್ ಪ್ರಧಾನವಾದ ವಿಸ್ತಾರವಾದ ಪ್ರದೇಶದಲ್ಲಿ ಪುರಗಳನ್ನು ನಿರ್ಮಿಸಬೇಕು.

ಧನ್ವದುರ್ಗಂ ಮಹೀದುರ್ಗಂ ಗಿರಿದುರ್ಗಂ ತಥೈವ ಚ।
ಮನುಷ್ಯದುರ್ಗಮಬ್ದುರ್ಗಂ ವನದುರ್ಗಂ ಚ ತಾನಿ ಷಟ್ ॥೫॥

ಧನ್ವದುರ್ಗ(ಪುರದ ಸುತ್ತಲೂ ಹೊರಭಾಗದಲ್ಲಿ ಮರುಭೂಮಿಯಿರುವುದು), ಮಹೀದುರ್ಗ (ಕೋಟೆ ಕೊತ್ತಲುಗಳನ್ನು ನಿರ್ಮಿಸುವುದು), ಗಿರಿದುರ್ಗ (ಸುತ್ತಲೂ ಪರ್ವತವಿರುವ ಪ್ರದೇಶದಲ್ಲಿ ನಿರ್ಮಿಸುವುದು), ಮನುಷ್ಯದುರ್ಗ (ಬಹಳ ಸೈನಿಕರನ್ನು ರಕ್ಷಣೆಗಾಗಿ ಹೊಂದಿರುವುದು), ಜಲದುರ್ಗ (ಕಂದಕಗಳನ್ನು ನಿರ್ಮಿಸುವುದು), ವನದುರ್ಗ (ಅರಣ್ಯಗಳನ್ನು ನಿರ್ಮಿಸುವುದು) ಇವು ಆ ಆರು ವಿಧವಾದ ದುರ್ಗಗಳು.

ಯತ್ ಪುರಂ ದುರ್ಗಸಂಪನ್ನಂ ಧಾನ್ಯಾಯುಧಸಮನ್ವಿತಮ್।
ದೃಢಪ್ರಾಕಾರಪರಿಖಂ ಹಸ್ತ್ಯಶ್ವರಥಸಂಕುಲಮ್ ॥೬॥

ವಿದ್ವಾಂಸಃ ಶಿಲ್ಪಿನೋ ಯತ್ರ ನಿಚಯಾಶ್ಚ ಸುಸಂಚಿತಾಃ।
ಧಾರ್ಮಿಕಾಶ್ಚ ಜನೋ ಯತ್ರ ದಾಕ್ಷ್ಯಮುತ್ತಮಮಾಸ್ಥಿತಾಃ ॥೭॥

ಊರ್ಜಸ್ವಿನರನಾಗಾಶ್ವಂ ಚತ್ವಾರಾಪಣಶೋಭಿತಮ್।
ಪ್ರಸಿದ್ಧವ್ಯವಹಾರಂ ಚ ಪ್ರಶಾಂತಮಕುತೋಭಯಮ್ ॥೮॥

ಸುಪ್ರಭಂ ಸಸುನಾದಂ ಚ ಸುಪ್ರಶಸ್ತನಿವೇಶನಮ್।
ಶೂರಾಢ್ಯಜನಸಂಪನ್ನಂ ಬ್ರಹ್ಮಘೋಷಾನುನಾದಿತಮ್ ॥೯॥

ಸಮಾಜೋತ್ಸವಸಂಪನ್ನಂ ಸದಾ ಪೂಜಿತದೈವತಮ್।
ವಶ್ಯಾಮಾತ್ಯಬಲೋ ರಾಜಾ ತತ್ಪುರಂ ಸ್ವಯಮಾವಸೇತ್ ॥೧೦॥

ಯಾವ ಪಟ್ಟಣವು ದುರ್ಗಗಳಿಂದಲೂ, ಧನಧಾನ್ಯ ಆಯುಧಗಳಿಂದಲೂ,

ದೃಢವಾದ ಕೋಟೆ ಮತ್ತು ಕಂದಕಗಳಿಂದಲೂ ಕೂಡಿದುದಾಗಿ ಗಜ, ಅಶ್ವ, ರಥಗಳಿಂದ ನಿಬಿಡವಾಗಿರುತ್ತದೆಯೋ, ಎಲ್ಲಿ ವಿದ್ವಾಂಸರು ಕುಶಲಕರ್ಮಿಗಳು ಮತ್ತು ಧಾನ್ಯಾದಿಗಳು ಚೆನ್ನಾಗಿ ಸಂಗ್ರಹವಾಗಿರುತ್ತವೆಯೋ, ಎಲ್ಲಿ ಜನರು ಧಾರ್ಮಿಕರಾಗಿ ಉತ್ತಮವಾದ ದಕ್ಷತೆಯನ್ನು ಹೊಂದಿರುತ್ತಾರೆಯೋ, ಬಲಿಷ್ಠವಾದ ನರ-ಆನೆ-ಅಶ್ವಗಳು ಇರುತ್ತವೆಯೋ, ಚತುಷ್ಪಥ ಮತ್ತು ಅಂಗಡಿ ಬೀದಿಗಳಿಂದ ಶೋಭಿತವಾಗಿರುತ್ತದೆಯೋ, ಕ್ರಯವಿಕ್ರಯಾದಿ ವ್ಯವಹಾರಗಳಿಗೆ ಅನುಕೂಲವಾಗಿರುತ್ತದೆಯೋ, ನಿರ್ಭಯವಾಗಿರುತ್ತದೆಯೋ, ಪ್ರಶಾಂತವಾಗಿರುತ್ತದೆಯೋ, ಒಳ್ಳೆಯ ಬೆಳಕು ಒಳ್ಳೆಯ ಶಬ್ದಗಳು ಒಳ್ಳೆಯ ಮನೆಗಳಿಂದ ಕೂಡಿರುತ್ತದೆಯೋ, ಶೂರರೂ ಆಢ್ಯರೂ ಆದ ಜನರಿಂದ ತುಂಬಿರುತ್ತದೆಯೋ, ವೇದಘೋಷವಿರುತ್ತದೆಯೋ ಅಂತಹ ಪಟ್ಟಣದಲ್ಲಿ ತನ್ನ ವಶದಲ್ಲಿ ಅಮಾತ್ಯ ಮತ್ತು ಸೈನಿಕರನ್ನು ಇಟ್ಟುಕೊಂಡ ರಾಜನು ವಾಸ ಮಾಡಬೇಕು.

ತತ್ರ ಕೋಶಂ ಬಲಂ ಮಿತ್ರಂ ವ್ಯವಹಾರಂ ಚ ವರ್ಧಯೇತ್ ।
ಪುರೇ ಜನಪದೇ ಚೈವ ಸರ್ವದೋಷಾನ್ ನಿವರ್ತಯೇತ್ ॥೧೧॥

ಅಲ್ಲಿ ಕೋಶ, ಸೈನ್ಯ, ಮಿತ್ರ ಮತ್ತು ಕ್ರಯವಿಕ್ರಯಾದಿ ವ್ಯವಹಾರಗಳನ್ನು ಅಭಿವೃದ್ಧಿಪಡಿಸಬೇಕು. ರಾಜಧಾನಿಯಲ್ಲಿ ಮತ್ತು ರಾಜ್ಯದಲ್ಲಿ ಉಂಟಾಗುವ ಎಲ್ಲ ದೋಷಗಳನ್ನೂ ಪರಿಹರಿಸಬೇಕು.

ಭಾಂಡಾಗಾರಾಯುಧಾಗಾರಾನ್ ಪ್ರಯತ್ನೇನಾಭಿವರ್ಧಯೇತ್ ।
ನಿಚಯಾನ್ ವರ್ಧಯೇತ್ ಸರ್ವಾಂಸ್ತಥಾ ಯಂತ್ರಗದಾಗದಾನ್ ॥೧೨॥

ಅಶ್ವಸಲಕರಣೆಗಳ ಆಗಾರವನ್ನು ಮತ್ತು ಆಯುಧಾಗಾರವನ್ನು ಪ್ರಯತ್ನಪೂರ್ವಕವಾಗಿ ಅಭಿವೃದ್ಧಿ ಪಡಿಸಬೇಕು. ಹಾಗೆಯೇ ಯಂತ್ರಗಳ ಆಯುಧಗಳ ಮತ್ತು ಔಷಧಿಗಳ ಸಂಚಯವನ್ನು ಅಭಿವೃದ್ಧಿಪಡಿಸಬೇಕು.

ಕಾಷ್ಠಲೋಹತುಷಾಂಗಾರದಾರುಶೃಂಗಾಸ್ಥಿವೈಣವಾನ್ ।
ಮಜ್ಜಾಸ್ನೇಹವಸಾಕ್ಷೌದ್ರಮೌಷಧಗ್ರಾಮಮೇವ ಚ ॥೧೩॥

ಶಣಂ ಸರ್ಜರಸಂ ಧಾನ್ಯಮಾಯುಧಾನಿ ಶರಾಂಸ್ತಥಾ ।
ಚರ್ಮ ಸ್ನಾಯು ತಥಾ ವೇತ್ರಂ ಮುಂಜಬಲ್ವಜಧನ್ವನಾನ್ ॥೧೪॥

ಕಟ್ಟಿಗೆಗಳು, ಲೋಹಗಳು, ಹೊಟ್ಟು, ಇದ್ದಿಲು, ಗೃಹನಿರ್ಮಾಣಕ್ಕೆ ಉಪಯೋಗಿಸುವ ಮರಗಳು, ಕೊಂಬುಗಳು, ಮೂಳೆಗಳು, ಬಿದಿರು, ಮಜ್ಜೆ, ತೈಲ, ವಸ, ಜೇನುತುಪ್ಪ, ಔಷಧಸಮೂಹಗಳು, ಸೆಣಬು, ಬೇಗ ಉರಿಯುವ ಸರ್ಜರಸ, ಧಾನ್ಯಗಳು, ಆಯುಧಗಳು, ಬಾಣಗಳು, ಚರ್ಮ, ಸ್ನಾಯುಗಳು, ಬೆತ್ತಗಳು, ಮುಂಜ ಹುಲ್ಲು ಮತ್ತು ಕರಡಿ ಹುಲ್ಲುಗಳು – ಇವುಗಳನ್ನು ಸಂಗ್ರಹಿಸಬೇಕು.

ಆಶಯಾಶ್ಚೋದಪಾನಾಶ್ಚ ಪ್ರಭೂತಸಲಿಲಾಕರಾಃ ।
ನಿರೋದ್ಧವ್ಯಾಃ ಸದಾ ರಾಜ್ಞಾ ಕ್ಷೀರಿಣಶ್ಚ ಮಹೀರುಹಾಃ ॥೧೫॥

ಜಲಾಶಯಗಳು, ಭಾವಿಗಳು, ದೊಡ್ಡ ದೊಡ್ಡ ಸರೋವರಗಳು, ಹಾಲಿನಂತಹ ದ್ರವವನ್ನು ಸುರಿಸುವ ವೃಕ್ಷಗಳು ಇವುಗಳನ್ನು ರಾಜನು ಯಾವಾಗಲೂ ರಕ್ಷಿಸಬೇಕು.

ಸತ್ಕೃತಾಶ್ಚ ಪ್ರಯತ್ನೇನ ಆಚಾರ್ಯರ್ತ್ವಿಕ್ ಪುರೋಹಿತಾಃ ।
ಮಹೇಷ್ವಾಸಾಃ ಸ್ಥಪತಯಃ ಸಾಂವತ್ಸರಚಿಕಿತ್ಸಕಾಃ ॥೧೬॥

ಪ್ರಾಜ್ಞಾಮೇಧಾವಿನೋ ದಾಂತಾ ದಕ್ಷಾಃ ಶೂರಾ ಬಹುಶ್ರುತಾಃ ।
ಕುಲೀನಾಃ ಸತ್ತ್ವಸಂಪನ್ನಾ ಯುಕ್ತಾಃ ಸರ್ವೇಷು ಕರ್ಮಸು ॥೧೭॥

ಆಚಾರ್ಯ ಋತ್ವಿಕ್ ಪುರೋಹಿತರು, ಮಹಾಧನುರ್ಧಾರಿಗಳು, ಬಡಗಿಗಳು, ಜ್ಯೋತಿಷ್ಕರು, ವೈದ್ಯರು, ಪ್ರಾಜ್ಞರು, ಮೇಧಾವಿಗಳು, ಇಂದ್ರಿಯನಿಗ್ರಹವುಳ್ಳವರು, ದಕ್ಷರು, ಶೂರರು, ಬಹುಶ್ರುತರು, ಸತ್ಕುಲಪ್ರಸೂತರು, ಧೈರ್ಯಶಾಲಿಗಳು ಆದವರನ್ನು ಎಲ್ಲ ಕಾರ್ಯಗಳಲ್ಲಿ ನಿಯೋಜಿಸಿ, ಪ್ರಯತ್ನಪೂರ್ವಕವಾಗಿ ಅವರಿಗೆ ಸತ್ಕಾರವನ್ನು ಮಾಡಬೇಕು.

ಪೂಜಯೇದ್ ಧಾರ್ಮಿಕಾನ್ ರಾಜಾ ನಿಗೃಹ್ಣೀಯಾದಧಾರ್ಮಿಕಾನ್ ।
ನಿಯುಂಜ್ಯಾಚ್ಚ ಪ್ರಯತ್ನೇನ ಸರ್ವವರ್ಣಾನ್ ಸ್ವಕರ್ಮಸು ॥೧೮॥

ರಾಜನು ಧಾರ್ಮಿಕರನ್ನು ಪೂಜಿಸಬೇಕು. ಅಧಾರ್ಮಿಕರನ್ನು ನಿಗ್ರಹಿಸಬೇಕು. ಎಲ್ಲ ವರ್ಣದವರೂ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುವಂತೆ ನಿಯೋಜಿಸಬೇಕು.

ಬಾಹ್ಯಮಾಭ್ಯಂತರಂ ಚೈವ ಪೌರಜಾನಪದಂ ಜನಮ್ ।
ಚಾರೈಃ ಸುವಿದಿತಂ ಕೃತ್ವಾ ತತಃ ಕರ್ಮ ಪ್ರಯೋಜಯೇತ್ ॥೧೯॥

ಆರಮನೆಯ ಹೊರಗೆ ಮತ್ತು ಒಳಗೆ ಇರುವವರನ್ನು ರಾಜಧಾನಿಯಲ್ಲಿ ಮತ್ತು ರಾಷ್ಟ್ರದಲ್ಲಿರುವವರನ್ನು ಚಾರರ ಮೂಲಕವಾಗಿ ಚೆನ್ನಾಗಿ ತಿಳಿದು ಅನಂತರ ಕಾರ್ಯಗಳನ್ನು ಮಾಡಿಸಬೇಕು.

ಚಾರಾನ್ ಮಂತ್ರಂ ಚ ಕೋಶಂ ಚ ಮಂತ್ರಂ ಚೈವ ವಿಶೇಷತಃ ।
ಅನುತಿಷ್ಠೇತ್ ಸ್ವಯಂ ರಾಜಾ ಸರ್ವಂ ಹ್ಯತ್ರ ಪ್ರತಿಷ್ಠಿತಮ್ ॥೨೦॥

ಚಾರರು, ಮಂತ್ರಗಳು ಮತ್ತು ಕೋಶ ಅದರಲ್ಲಿಯೂ ವಿಶೇಷವಾಗಿ ಮಂತ್ರಗಳು ಇವನ್ನು ರಾಜ ಸ್ವತಃ ನೋಡಿಕೊಳ್ಳಬೇಕು. ಏಕೆಂದರೆ ರಾಜ್ಯದ ಹಿತವೆಲ್ಲವೂ ಅಲ್ಲಿಯೇ ಪ್ರತಿಷ್ಠಿತವಾಗಿದೆ.

ಉದಾಸೀನಾರಿಮಿತ್ರಾಣಾಂ ಸರ್ವಮೇವ ಚಿಕೀರ್ಷಿತಮ್ ।
ಪುರೇ ಜನಪದೇ ಚೈವ ಜ್ಞಾತವ್ಯಂ ಚಾರಚಕ್ಷುಷಾ ॥೨೧॥

ಪುರದಲ್ಲಿ ಮತ್ತು ಜನಪದದಲ್ಲಿ ಶತ್ರು-ಮಿತ್ರ-ಉದಾಸೀನರು ಮಾಡಲು ಅಪೇಕ್ಷಿಸಿರುವ ಸರ್ವಕಾರ್ಯಗಳನ್ನು ಚಾರರ ಮೂಲಕವಾಗಿ ತಿಳಿಯಬೇಕು.

ತತಸ್ತಥಾ ವಿಧಾತವ್ಯಂ ಸರ್ವಮೇವಾಪ್ರಮಾದತಃ ।
ಭಕ್ತಾನ್ ಪೂಜಯತಾ ನಿತ್ಯಂ ದ್ವಿಷತಶ್ಚ ನಿಗೃಹ್ಣತಾ ॥೨೨॥

ಅನಂತರ ಅದಕ್ಕೆ ಅನುಗುಣವಾಗಿ ಎಚ್ಚರಿಕೆಯಿಂದ ತನ್ನಲ್ಲಿ ನಿಷ್ಠೆಯುಳ್ಳವರನ್ನು ಪೂಜಿಸುತ್ತಾ, ತನ್ನ ಶತ್ರುಗಳನ್ನು ನಿಗ್ರಹಿಸುತ್ತಾ ಎಲ್ಲವನ್ನೂ ಪ್ರಯೋಜಿಸಬೇಕು.

ಯಷ್ಟವ್ಯಂ ಕ್ರತುಭಿರ್ನಿತ್ಯಂ ದಾತವ್ಯಂ ಚಾಪ್ಯಪೀಡಯಾ ।
ಪ್ರಜಾನಾಂ ರಕ್ಷಣಂ ಕಾರ್ಯಂ ನ ಕಾರ್ಯಂ ಕರ್ಮ ಗರ್ಹಿತಮ್ ॥೨೩॥

ನಿತ್ಯವೂ ಯಾಗಗಳನ್ನು ಮಾಡಬೇಕು. ಪ್ರಜೆಗಳನ್ನು ಪೀಡಿಸದೇ ದಾನವನ್ನು ಮಾಡಬೇಕು. ಪ್ರಜೆಗಳ ರಕ್ಷಣೆಯನ್ನು ಮಾಡಬೇಕು. ನಿಂದ್ಯವಾದ ಯಾವ ಕರ್ಮ-ಗಳನ್ನೂ ಮಾಡಬಾರದು.

ಕೃಪಣಾನಾಥವೃದ್ಧಾನಾಂ ವಿಧವಾನಾಂ ಚ ಯೋಷಿತಾಮ್ ।
ಯೋಗಕ್ಷೇಮಂ ಚ ವೃತ್ತಿಂ ಚ ನಿತ್ಯಮೇವ ಪ್ರಕಲ್ಪಯೇತ್ ॥೨೪॥

ಕೃಪಣರು, ಅನಾಥರು, ವೃದ್ಧರು, ವಿಧವಾಸ್ತ್ರೀಯರು ಇವರ ಯೋಗಕ್ಷೇಮ-ವನ್ನು ತಿಳಿದು ಸತತವಾಗಿ ಜೀವನೋಪಾಯವನ್ನು ಕಲ್ಪಿಸಬೇಕು.

ಆಶ್ರಮೇಷು ಯಥಾಕಾಲಂ ಚೇಲಭಾಜನಭೋಜನಮ್ ।
ಸದೈವೋಪಹರೇತ್ ರಾಜಾ ಸತ್ಕೃತ್ಯಾನವಮನ್ಯ ಚ ॥೨೫॥

ರಾಜನು ಆಶ್ರಮಗಳಲ್ಲಿ ಆಯಾ ಕಾಲಕ್ಕೆ ಅನುಗುಣವಾಗಿ ಕಂಬಳಿ ಮೊದಲಾದ ಚೇಲವನ್ನು, ಕಮಂಡಲು ಮೊದಲಾದ ಪಾತ್ರೆಗಳನ್ನು ಮತ್ತು ಭೋಜನಸಾಮಗ್ರಿ-ಯನ್ನು ಆಶ್ರಮವಾಸಿಗಳನ್ನು ಸತ್ಕರಿಸಿ, ಅವಮಾನ ಮಾಡದೇ ಯಾವಾಗಲೂ ಒದಗಿಸಬೇಕು.

ಆತ್ಮಾನಂ ಸರ್ವಕಾರ್ಯಾಣಿ ತಾಪಸೇ ರಾಜ್ಯಮೇವ ಚ ।
ನಿವೇದಯೇತ್ ಪ್ರಯತ್ನೇನ ತಿಷ್ಠೇತ್ ಪ್ರಹ್ವಶ್ಚ ಸರ್ವದಾ ॥೨೬॥

ಆಶ್ರಮವಾಸಿಯಾದ ತಪಸ್ವಿಗೆ ತನ್ನನ್ನು, ತನ್ನ ರಾಜ್ಯವನ್ನು, ತಾನು ಮಾಡುವ ಎಲ್ಲ ಕಾರ್ಯಗಳನ್ನು ನಿವೇದಿಸಬೇಕು. ಪ್ರಯತ್ನಪೂರ್ವಕವಾಗಿ ಅವನ ಬಳಿಯಲ್ಲಿ ಯಾವಾಗಲೂ ವಿನಯದಿಂದ ಇರಬೇಕು.

ಸರ್ವಾರ್ಥತ್ಯಾಗಿನಂ ರಾಜಾ ಕುಲೇ ಜಾತಂ ಬಹುಶ್ರುತಮ್ ।
ಪೂಜಯೇತ್ ತಾದೃಶಂ ದೃಷ್ಟ್ವಾ ಶಯನಾಸನಭೋಜನೈಃ ॥೨೭॥

ಸತ್ಕುಲದಲ್ಲಿ ಜನಿಸಿ, ವಿದ್ಯಾವಂತನಾಗಿ, ಸರ್ವಾರ್ಥತ್ಯಾಗವನ್ನು ಮಾಡಿ, ಸನ್ಯಾಸಿಯಾದವನನ್ನು ನೋಡಿ ರಾಜನು ಅವನನ್ನು ಶಯನಾಸನಭೋಜನಗಳಿಂದ ಪೂಜಿಸಬೇಕು.

ತಸ್ಮಿನ್ ಕುರ್ವೀತ ವಿಶ್ವಾಸಂ ರಾಜಾ ಕಸ್ಯಾಂಚಿದಾಪದಿ।
ತಾಪಸೇಷು ಹಿ ವಿಶ್ವಾಸಮಪಿ ಕುರ್ವಂತಿ ದಸ್ಯವಃ ॥೨೮॥

ಆಪತ್ತು ಒದಗಿದಾಗ ರಾಜನು ಅಂತಹ ತಪಸ್ವಿಯಲ್ಲಿ ವಿಶ್ವಾಸವನ್ನು ಮಾಡಬೇಕು. ಏಕೆಂದರೆ ದಸ್ಯುಗಳೂ ಸಹ ತಾಪಸರಲ್ಲಿ ವಿಶ್ವಾಸವನ್ನು ಮಾಡುತ್ತಾರೆ.

ತಸ್ಮಿನ್ ನಿಧೀನಾದಧೀತ ಪ್ರಜ್ಞಾಂ ಪರ್ಯಾದದೀತ ಚ।
ನ ಚಾಪ್ಯಭೀಕ್ಷ್ಣಂ ಸೇವೇತ ಭೃಶಂ ವಾ ಪ್ರತಿಪೂಜಯೇತ್ ॥೨೯॥

ಆಪತ್ಕಾಲದಲ್ಲಿ ತನ್ನ ಬಳಿಯಿರುವ ನಿಧಿಯನ್ನು ತಪಸ್ವಿಯ ಬಳಿಯಲ್ಲಿ ಇಟ್ಟು ಅವನಿಂದ ವಿವೇಕವನ್ನು ಸಂಗ್ರಹಿಸಬೇಕು. ಪುನಃ ಪುನಃ ತಾಪಸರ ಬಳಿಗೆ ಹೋಗಬಾರದು. ಮತ್ತು ಎಲ್ಲರಿಗೂ ತಿಳಿಯುವಂತೆ ಬಹಳವಾಗಿ ಪೂಜೆಯನ್ನೂ ಮಾಡಬಾರದು.

ಅನ್ಯಃ ಕಾರ್ಯಃ ಸ್ವರಾಷ್ಟ್ರೇಷು ಪರರಾಷ್ಟ್ರೇಷು ಚಾಪರಃ।
ಅಟವೀಷ್ವಪರಃ ಕಾರ್ಯಃ ಸಾಮಂತನಗರೇಷು ಚ ॥೩೦॥

ರಾಜನು ತನ್ನ ರಾಷ್ಟ್ರದಲ್ಲಿ ಬೇರೆಯ ಕಾರ್ಯವನ್ನು ಮಾಡಬೇಕು; ಪರರಾಷ್ಟ್ರಗಳಲ್ಲಿ ಬೇರೆಯ ಕಾರ್ಯ; ಅಡವಿಗಳಲ್ಲಿ ಬೇರೆಯ ಕಾರ್ಯ ಮತ್ತು ಸಾಮಂತರಾಜರ ನಗರಗಳಲ್ಲಿ ಬೇರೆಯ ಕಾರ್ಯವನ್ನು ಮಾಡಬೇಕು.

ತೇಷು ಸತ್ಕಾರಸಂಸ್ಕಾರಾನ್ ಸಂವಿಭಾಗಾಂಶ್ಚ ಕಾರಯೇತ್।
ಪರರಾಷ್ಟ್ರಾಟವೀಸ್ಥೇಷು ಯಥಾ ಸ್ವವಿಷಯೇ ತಥಾ ॥೩೧॥

ಪರರಾಷ್ಟ್ರಗಳಲ್ಲಿ ಮತ್ತು ಅಡವಿಗಳಲ್ಲಿ ಕಾರ್ಯವನ್ನು ಮಾಡುವವರಿಗೆ ತನ್ನ

ರಾಜ್ಯದಲ್ಲಿ ಕಾರ್ಯವನ್ನು ಮಾಡುವವರಂತೆಯೇ ಸತ್ಕಾರವನ್ನು, ಸಂಸ್ಕಾರಗಳನ್ನು ಮತ್ತು ಧನಾದಿದಾನವನ್ನು ಮಾಡಬೇಕು.

ತೇ ಕಸ್ಯಾಂಚಿದವಸ್ಥಾಯಾಂ ಶರಣಂ ಶರಣಾರ್ಥಿನೇ।
ರಾಜ್ಞೇ ದದ್ಯುರ್ಯಥಾಕಾಮಂ ತಾಪಸಾಃ ಸಂಶಿತವ್ರತಾಃ ॥೩೨॥

ಒಳ್ಳೆಯ ವ್ರತಧಾರಿಗಳಾದ ತಾಪಸರು ರಾಜನಿಗೆ ಯಾವಾಗಲಾದರೂ ಒಂದು ಆಪತ್ತು ಒದಗಿ ಅವನು ಶರಣಾರ್ಥಿಯಾಗಿ ಬಂದಾಗ ಅವನಿಗೆ ಆಶ್ರಯವನ್ನು ಕೊಡುವರು.

ಏಷ ತೇ ಲಕ್ಷಣೋದ್ದೇಶಃ ಸಂಕ್ಷೇಪೇಣ ಪ್ರಕೀರ್ತಿತಃ।
ಯಾದೃಶಂ ನಗರಂ ರಾಜಾ ಸ್ವಯಮಾವಸ್ತುಮರ್ಹತಿ ॥೩೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಾಶೀತಿತಮೋऽಧ್ಯಾಯಃ ॥೮೮॥

ರಾಜನು ಎಂತಹ ನಗರದಲ್ಲಿ ವಾಸಮಾಡಬೇಕೆಂಬ ವಿಷಯದಲ್ಲಿ ನಿನಗೆ ಸಂಕ್ಷೇಪವಾಗಿ ನಗರದ ಲಕ್ಷಣಗಳನ್ನು ಹೇಳಿದ್ದೇನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೮೮ನೆಯ ಅಧ್ಯಾಯವು ಮುಗಿಯಿತು.

೮೯. ಎಂಬತ್ತೊಂಬತ್ತನೆಯ ಅಧ್ಯಾಯ

ರಾಷ್ಟ್ರದ ರಕ್ಷಣೆಯ ಪ್ರಕಾರ ಕಥನ

ಯುಧಿಷ್ಠಿರಃ

ರಾಷ್ಟ್ರಗುಪ್ತಿಂ ಚ ಮೇ ರಾಜನ್ ರಾಷ್ಟ್ರಸ್ಯೈವ ಚ ಸಂಗ್ರಹಮ್।
ಸಮ್ಯಗ್ ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೧॥

ಯುಧಿಷ್ಠಿರ – ಎಲೈ ಭರತರ್ಷಭನೇ! ರಾಷ್ಟ್ರದ ರಕ್ಷಣೆಯ ಪ್ರಕಾರವನ್ನು ಮತ್ತು ರಾಷ್ಟ್ರವನ್ನು ಚೆನ್ನಾಗಿ ವಶದಲ್ಲಿಟ್ಟುಕೊಳ್ಳುವ ಪ್ರಕಾರವನ್ನು ತಿಳಿಯಲು ಬಯಸುವ ನನಗೆ ಅದನ್ನು ಚೆನ್ನಾಗಿ ಹೇಳು.

ಭೀಷ್ಮಃ

ರಾಷ್ಟ್ರಗುಪ್ತಿಂ ಚ ತೇ ಸಮ್ಯಗ್ ರಾಷ್ಟ್ರಸ್ಯೈವ ಚ ಸಂಗ್ರಹಮ್ ।
ಹಂತ ಸರ್ವಂ ಪ್ರವಕ್ಷ್ಯಾಮಿ ತತ್ ತ್ವಮೇಕಮನಾಃ ಶೃಣು ॥೨॥

ಭೀಷ್ಮರು – ಸಂತೋಷ. ರಾಷ್ಟ್ರದ ರಕ್ಷಣೆ ಮತ್ತು ಚೆನ್ನಾಗಿ ರಾಷ್ಟ್ರದ ಸಂಗ್ರಹ ಇದೆಲ್ಲವನ್ನೂ ಹೇಳುವೆನು. ಅದನ್ನು ಒಂದೇ ಮನಸ್ಸಿನಿಂದ ಕೇಳು.

ಗ್ರಾಮಸ್ಯಾಧಿಪತಿಃ ಕಾರ್ಯೋ ದಶಗ್ರಾಮ್ಯಸ್ತಥಾಪರಃ ।
ದ್ವಿಗುಣಾಯಾಃ ಶತಸ್ಯೈವಂ ಸಹಸ್ರಸ್ಯ ಚ ಕಾರಯೇತ್ ॥೩॥

ಒಂದು ಗ್ರಾಮಕ್ಕೆ ಒಬ್ಬ ಅಧಿಪತಿಯನ್ನು ಮಾಡಬೇಕು. ಹತ್ತುಗ್ರಾಮಗಳಿಗೆ ಇನ್ನೊಬ್ಬ ಅಧಿಪತಿಯನ್ನು ಮಾಡಬೇಕು. ಹೀಗೆ ಇಪ್ಪತ್ತು ಗ್ರಾಮಗಳಿಗೆ, ನೂರು ಗ್ರಾಮಗಳಿಗೆ, ಸಹಸ್ರಗ್ರಾಮಗಳಿಗೆ ಒಬ್ಬೊಬ್ಬ ಅಧಿಪತಿಯನ್ನು ಮಾಡಬೇಕು.

ಗ್ರಾಮೇ ಯಾನ್ ಗ್ರಾಮದೋಷಾಂಶ್ಚ ಗ್ರಾಮಿಕಃ ಪ್ರತಿಭಾವಯೇತ್ ।
ತಾನ್ ಬ್ರೂಯಾದ್ ದಶಪಾಯಾಸೌ ಸ ತು ವಿಂಶತಿಪಾಯ ವೈ ॥೪॥

ಒಂದು ಗ್ರಾಮದ ಅಧಿಪತಿಯು ತನ್ನ ಗ್ರಾಮದಲ್ಲಿ ಯಾವ ದೋಷಗಳನ್ನು ಗಮನಿಸುತ್ತಾನೆಯೋ ಅವನು ಅದನ್ನು ದಶಗ್ರಾಮಾಧಿಪತಿಗೆ ಹೇಳಬೇಕು. ದಶ-ಗ್ರಾಮಾಧಿಪತಿಯು ಅದನ್ನು ಇಪ್ಪತ್ತು ಗ್ರಾಮಗಳ ಅಧಿಪತಿಗೆ ಹೇಳಬೇಕು.

ಸೋಽಪಿ ವಿಂಶತ್ಯಧಿಪತಿರ್ವೃತ್ತಂ ಜಾನಪದೇ ಜನೇ ।
ಗ್ರಾಮಾಣಾಂ ಶತಪಾಲಾಯ ಸರ್ವಮೇವ ನಿವೇದಯೇತ್ ॥೫॥

ಇಪ್ಪತ್ತು ಗ್ರಾಮಗಳ ಅಧಿಪತಿಯೂ ಸಹ ಗ್ರಾಮದ ಪರಿಸ್ಥಿತಿಯೆಲ್ಲವನ್ನೂ ನೂರು ಗ್ರಾಮಗಳ ಅಧಿಪತಿಗೆ ಹೇಳಬೇಕು.

ಯಾನಿ ಗ್ರಾಮೀಣಭೋಜ್ಯಾನಿ ಗ್ರಾಮಿಕಸ್ತಾನುಪಾಶ್ನುಯಾತ್ ।
ದಶಪಸ್ತೇನ ಭರ್ತವ್ಯಸ್ತೇನಾಪಿ ದ್ವಿಗುಣಾಧಿಕಃ ॥೬॥

ಗ್ರಾಮದಲ್ಲಿ ಬೆಳೆಯುವ ಆಹಾರಧಾನ್ಯಗಳನ್ನು ಆಯಾ ಗ್ರಾಮದವರು ಉಪಯೋಗಿಸಬೇಕು. ಮತ್ತು ಅದರ ಒಂದು ಭಾಗವನ್ನು ಹತ್ತುಗ್ರಾಮಗಳ ಅಧಿಪತಿಗೂ, ಇಪ್ಪತ್ತು ಗ್ರಾಮಗಳ ಅಧಿಪತಿಗೂ ಅವರ ಪೋಷಣೆಗಾಗಿ ಕೊಡಬೇಕು.

ಗ್ರಾಮಂ ಗ್ರಾಮಶತಾಧ್ಯಕ್ಷೋ ಭೋಕ್ತುಮರ್ಹತಿ ಸತ್ಕೃತಃ।
ಮಹಾಂತಂ ಭರತಶ್ರೇಷ್ಠ ಸುಸ್ಫೀತಜನಸಂಕುಲಮ್ ।
ತತ್ರ ಹ್ಯನೇಕಪಾಯತ್ತಂ ರಾಜ್ಞೋ ಭವತಿ ಭಾರತ ॥೭॥

ನೂರು ಗ್ರಾಮಗಳ ಅಧಿಪತಿಯು ಸಮೃದ್ಧವಾದ ಒಂದು ಒಳ್ಳೆಯ ಗ್ರಾಮದ ಪೂರ್ಣವಾದ ಆದಾಯವನ್ನು ತೆಗೆದುಕೊಳ್ಳಲು ಅರ್ಹನಾಗುತ್ತಾನೆ. ಅದರಿಂದ ರಾಜನಿಗೆ ಒಂದು ಗ್ರಾಮದಿಂದ ಬರುವ ಆದಾಯವು ಎಲೈ ಭರತಶ್ರೇಷ್ಠನೇ! ಗ್ರಾಮಾಧಿಪತಿ, ದಶಗ್ರಾಮಾಧಿಪತಿ, ವಿಂಶತಿಗ್ರಾಮಾಧಿಪತಿ ಮೊದಲಾದ ಅನೇಕರನ್ನು ಅವಲಂಬಿಸಿರುತ್ತದೆ.

ಶಾಖಾನಗರಮರ್ಹಸ್ತು ಸಹಸ್ರಪತಿರುತ್ತಮಮ್ ।
ಧಾನ್ಯಹೈರಣ್ಯಭೋಗೇನ ಭೋಕ್ತುಂ ರಾಷ್ಟ್ರಿಯ ಉದ್ಯತಃ ॥೮॥

ಸಹಸ್ರಗ್ರಾಮಾಧಿಪತಿಯು ಶ್ರೇಷ್ಠವಾದ ಒಂದು ಶಾಖಾನಗರದ ಉತ್ಪತ್ತಿಯನ್ನು ಭೋಗಿಸಲು ಅರ್ಹನಾಗುತ್ತಾನೆ. ರಾಜನ ಭಾವಮೈದುನ ಮೊದಲಾದವರೂ ಸಹ ಅಂತಹ ಆದಾಯದಿಂದ ಬರುವ ಧಾನ್ಯವನ್ನು ಮತ್ತು ಸುವರ್ಣವನ್ನು ಭೋಗಿಸಲು ಅರ್ಹರಾಗುತ್ತಾರೆ.

ಯಥಾ ಯದ್ ಗ್ರಾಮಕೃತ್ಯಂ ಸ್ಯಾದ್ ಗ್ರಾಮಿಕೃತ್ಯಂ ಚ ತೇ ಸ್ವಯಮ್ ।
ಧರ್ಮಜ್ಞಃ ಸಚಿವಃ ಕಶ್ಚಿತ್ ತತ್ ಪ್ರಪಶ್ಯೇದತಂದ್ರಿತಃ ॥೯॥

ಹಾಗೆಯೇ ಒಂದು ಗ್ರಾಮಕ್ಕೆ ಮಾಡಬೇಕಾದ ಕಾರ್ಯವನ್ನು ಮತ್ತು ಗ್ರಾಮಸ್ಥರಿಗೆ ಮಾಡಬೇಕಾದ ಕಾರ್ಯವನ್ನು ಧರ್ಮಜ್ಞನಾದ ಒಬ್ಬ ಸಚಿವನು ಆಲಸ್ಯವಿಲ್ಲದೇ ಸ್ವತಃ ನೋಡಿಕೊಳ್ಳಬೇಕು.

ನಗರೇ ನಗರೇ ಚ ಸ್ಯಾದೇಕಃ ಸರ್ವಾರ್ಥಚಿಂತಕಃ।
ಉಚ್ಚೈಃಸ್ಥಾನೇऽಘೋರರೂಪೋ ನಕ್ಷತ್ರಾಣಾಮಿವ ಗ್ರಹಃ।
ಭವೇತ್ ಸ ತಾನ್ ಪರಿಕ್ರಾಮೇತ್ ಸರ್ವಾನೇವ ಸದಾ ಸ್ವಯಮ್ ॥೧೦॥

ಒಂದೊಂದು ಗ್ರಾಮದಲ್ಲಿಯೂ ಎಲ್ಲ ವಿಷಯಗಳನ್ನು ನೋಡಿಕೊಳ್ಳುವ ಒಬ್ಬೊಬ್ಬ ಅಧಿಕಾರಿ ಇರಬೇಕು. ಅವನು ಉಚ್ಚಸ್ಥಾನದಲ್ಲಿದ್ದು, ಶಾಂತರೂಪವನ್ನು ಹೊಂದಿದ್ದು, ನಕ್ಷತ್ರಗಳ ಮಧ್ಯೆ ಇರುವ ಗ್ರಹದಂತೆ ಇರಬೇಕು. ಅವನು ನಗರವೆಲ್ಲವನ್ನೂ ತಾನೇ ಸಂಚರಿಸಿ, ವಿಷಯಗಳನ್ನು ತಿಳಿದುಕೊಳ್ಳಬೇಕು.

ತೇಷಾಂ ವೃತ್ತಂ ಪರಿಣಯೇತ್ ಕ್ವಚಿದ್ ರಾಷ್ಟ್ರೇಷು ತಚ್ಚರಃ।
ಜಿಘಾಂಸವಃ ಪಾಪಕಾಮಾ ಪರಸ್ವಾದಾಯಿನಃ ಶಠಾಃ।
ರಕ್ಷಾಮ್ಯಧಿಕೃತಾ ನಾಮ ತೇಭ್ಯೋ ರಕ್ಷೇದಿಮಾಃ ಪ್ರಜಾಃ ॥೧೧॥

ರಾಜನ ಗೂಢಚಾರನು ಅಂತಹವರ ನಡತೆಯನ್ನೆಲ್ಲ ರಾಜನಿಗೆ ತಿಳಿಸಬೇಕು. ರಕ್ಷಣಾಧಿಕಾರಿಗಳಲ್ಲಿ ಕೆಲವರು ಪಾಪಬುದ್ಧಿಯುಳ್ಳವರೂ, ಇನ್ನೊಬ್ಬರ ಸ್ವತ್ತನ್ನು ಅಪಹರಿಸುವವರೂ, ಶಠರೂ ಮತ್ತು ಪ್ರಜೆಗಳನ್ನು ಕೊಲ್ಲಲು ಬಯಸುವವರೂ ಇರುತ್ತಾರೆ. ಅಂತಹವರಿಂದ ಉಳಿದ ಪ್ರಜೆಗಳನ್ನು ರಕ್ಷಿಸಬೇಕು.

ವಿಕ್ರಯಂ ಕ್ರಮಮಧ್ವಾನಂ ಭಕ್ತಂ ಚ ಸಪರಿವ್ಯಯಮ್।
ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ವಣಿಜಃ ಕಾರಯೇತ್ ಕರಾನ್ ॥೧೨॥

ವ್ಯಾಪಾರವನ್ನು ಮಾಡುವ ವೈಶ್ಯರಿಗೆ ಅವರ ಕ್ರಯವಿಕ್ರಯಗಳನ್ನು, ಅವರು ಸಂಚರಿಸಬೇಕಾದ ಮಾರ್ಗವನ್ನು, ಅವರ ಯೋಗಕ್ಷೇಮವನ್ನು ಮತ್ತು ಅವಶ್ಯಕತೆಯನ್ನು ನೋಡಿ ಕರವನ್ನು ವಿಧಿಸಬೇಕು.

ಉತ್ಪತ್ತಿಂ ದಾನವೃತ್ತಿಂ ಚ ಶಿಲ್ಪಂ ಸಂಪ್ರೇಕ್ಷ್ಯ ಚಾಸಕೃತ್।
ಶಿಲ್ಪಂ ಪ್ರತಿ ಕರಾನೇವ ಶಿಲ್ಪಿನಃ ಪ್ರತಿ ಕಾರಯೇತ್ ॥೧೩॥

ಕುಶಲಕರ್ಮಿಗಳಿಗೆ ಅವರ ಉತ್ಪತ್ತಿ, ದಾನ, ಕೌಶಲ ಇವುಗಳನ್ನು ಅನೇಕ ಬಾರಿ ನೋಡಿ ಅವರ ಕೌಶಲಕ್ಕೆ ಅನುಕೂಲವಾದ ಕರಗಳನ್ನು ವಿಧಿಸಬೇಕು.

ಉಚ್ಚಾವಚಕರಾ ನ್ಯಾಯ್ಯಾಃ ಪೂರ್ವರಾಜ್ಞಾಂ ಯುಧಿಷ್ಠಿರ।
ಯಥಾ ಯಥಾ ನ ಹೀಯೇರಂಸ್ತಥಾ ಕುರ್ಯಾನ್ಮಹೀಪತಿಃ ॥೧೪॥

ಎಲೈ ಯುಧಿಷ್ಠಿರನೇ! ರಾಜ್ಯದಲ್ಲಿ ತೆರಿಗೆಗಳು ಹೆಚ್ಚು ಕಡಿಮೆ ಇರುವುದು ನ್ಯಾಯವಾಗಿದೆ. ಅದು ಪೂರ್ವರಾಜರಿಗೂ ಸಮ್ಮತವಾಗಿದ್ದಿತು. ಎಲ್ಲ ಪ್ರಜೆಗಳಿಗೂ ಒಂದೇ ವಿಧವಾದ ತೆರಿಗೆ ಅಲ್ಲ. ರಾಜನು ಪ್ರಜೆಗಳಿಗೆ ವಿನಾಶವುಂಟಾಗದಂತೆ ತೆರಿಗೆಯನ್ನು ವಿಧಿಸಬೇಕು.

ಫಲಂ ಕರ್ಮ ಚ ಸಂಪ್ರೇಕ್ಷ್ಯ ತತಃ ಸರ್ವಂ ಪ್ರಕಲ್ಪಯೇತ್।
ಫಲಂ ಕರ್ಮ ಚ ನಿರ್ಹೇತುಂ ನ ಕಶ್ಚಿತ್ ಸಂಪ್ರವರ್ತಯೇತ್ ॥೧೫॥

ಪ್ರಜೆಗಳ ಕರ್ಮ ಮತ್ತು ಅದರಿಂದ ಅವರಿಗೆ ಉಂಟಾಗುವ ಫಲ ಇವುಗಳನ್ನು ಚೆನ್ನಾಗಿ ನೋಡಿ ತೆರಿಗೆಗಳನ್ನು ಕಲ್ಪಿಸಬೇಕು. ಅವರ ಫಲಕ್ಕೆ ಅನುಕೂಲವಾದ ಉಚಿತವಾದ ದ್ರವ್ಯದಾನವನ್ನು ಮಾಡದೇ ತೆರಿಗೆಗಳನ್ನು ವಿಧಿಸಬಾರದು. (ವಣಿಜರಿಗೆ ಅಥವಾ ವೈಶ್ಯರಿಗೆ ಅವರ ವ್ಯಾಪಾರಕ್ಕೆ ಅನುಕೂಲ ಮಾಡಿಕೊಡಲು ರಾಜನು ದ್ರವ್ಯದಾನವನ್ನು ಮಾಡಿರಬೇಕು).

ಯಥಾ ರಾಜಾ ಚ ಕರ್ತಾ ಚ ಸ್ಯಾತಾಂ ಕರ್ಮಣಿ ಭಾಗಿನೌ।
ಸಮವೇಕ್ಷ್ಯ ತಥಾ ರಾಜ್ಞಾ ಪ್ರಣೇಯಾಃ ಸತತಂ ಕರಾಃ ॥೧೬॥

ಅಂತಹ ವಾಣಿಜ್ಯಾದಿಗಳಿಂದ ಉಂಟಾದ ಫಲದಲ್ಲಿ ರಾಜನೂ ಆ ವ್ಯಾಪಾರವನ್ನು ಮಾಡಿದ ವರ್ತಕನೂ ಭಾಗಿಗಳಾಗುವಂತೆ ನೋಡಿಕೊಂಡು, ರಾಜನು ತೆರಿಗೆಗಳನ್ನು ವಿಧಿಸಬೇಕು.

ನೋಚ್ಛಿಂದ್ಯಾದಾತ್ಮನೋ ಮೂಲಂ ಪರೇಷಾಂ ವಾಪಿ ತೃಷ್ಣಯಾ।
ಈಹಾದ್ವಾರಾಣಿ ಸಂರುದ್ಧ್ಯ ರಾಜಾ ಸಂಪ್ರೀತಿದರ್ಶನಃ ॥೧೭॥

ವರ್ತಕರು ಮಾಡುವ ವ್ಯಾಪಾರಾದಿಕಾರ್ಯಗಳ ದ್ವಾರವನ್ನು ಮುಚ್ಚಿ ರಾಜನು ಆಸೆಯಿಂದ ತನ್ನ ಮೂಲವನ್ನು ಮತ್ತು ಇನ್ನೊಬ್ಬರ ಮೂಲವನ್ನು ನಾಶ ಮಾಡಬಾರದು. ಪ್ರಜೆಗಳಿಗೆ ರಾಜನಲ್ಲಿ ಪ್ರೀತಿಯಿದ್ದರೆ ಮಾತ್ರ ಅವನ ದರ್ಶನವನ್ನು ಮಾಡುತ್ತಾರೆ.

ಪ್ರದ್ವಿಷಂತಿ ಪರಿಖ್ಯಾತಂ ರಾಜಾನಮತಿಖಾದಿನಮ್ ।
ಪ್ರದ್ವಿಷ್ಟಸ್ಯ ಕುತಃ ಶ್ರೇಯಃ ಸಂಪ್ರಿಯೋ ಲಭತೇ ಪ್ರಿಯಮ್ ॥೧೮॥

ಬಹಳ ತೆರಿಗೆಯನ್ನು ಸ್ವೀಕರಿಸಿ ಉಪಯೋಗಿಸುವವನು ಎಂದು ಪ್ರಸಿದ್ಧನಾದ ರಾಜನನ್ನು ಪ್ರಜೆಗಳು ಬಹಳವಾಗಿ ದ್ವೇಷಿಸುತ್ತಾರೆ. ಪ್ರಜೆಗಳ ದ್ವೇಷಕ್ಕೆ ವಿಷಯನಾದ ರಾಜನಿಗೆ ಎಲ್ಲಿಂದ ಶ್ರೇಯಸ್ಸು ಉಂಟಾದೀತು? ಪ್ರಜೆಗಳಿಗೆ ಪ್ರಿಯನಾದವನು ಮಾತ್ರ ತನ್ನ ಪ್ರಿಯವನ್ನು ಸಂಪಾದಿಸುತ್ತಾನೆ.

ವತ್ಸೌಪಮ್ಯೇನ ದೋಗ್ಧವ್ಯಂ ರಾಷ್ಟ್ರಮಕ್ಷೀಣಬುದ್ಧಿನಾ ।
ಭೃತೋ ವತ್ಸೋ ಜಾತಬಲಃ ಪೀಡಾಂ ಸಹತಿ ಭಾರತ ॥೧೯॥

ಒಳ್ಳೆಯ ಬುದ್ಧಿಯುಳ್ಳ ರಾಜನು ರಾಷ್ಟ್ರವನ್ನು ಕರುವಿನಂತೆ ಹಾಲು ಕರೆಯಬೇಕು. ಎಲೈ ಭಾರತನೇ! ಚೆನ್ನಾಗಿ ಹಾಲು ಕುಡಿದ ಕರುವು ಬಲವನ್ನು ಹೊಂದಿ ಭಾರವನ್ನು ಹೊರುವಾಗ ಉಂಟಾಗುವ ಪೀಡೆಯನ್ನು ಸಹಿಸಲು ಸಮರ್ಥವಾಗುತ್ತದೆ.

ನ ಕರ್ಮ ಕುರುತೇ ವತ್ಸೋ ಭೃಶದುಗ್ಧೋ ಯುಧಿಷ್ಠಿರ ।
ರಾಷ್ಟ್ರಮಪ್ಯತಿದುಗ್ಧಂ ಹಿ ನ ಕರ್ಮ ಕುರುತೇ ಮಹತ್ ॥೨೦॥

ಯುಧಿಷ್ಠಿರನೇ! ಬಹಳ ಹಾಲನ್ನು ಕುಡಿದ ಕರುವು ಯಾವ ಕೆಲಸವನ್ನೂ ಮಾಡುವುದಿಲ್ಲ. ಅಜೀರ್ಣದಿಂದ ರೋಗಗ್ರಸ್ತವಾಗುತ್ತದೆ. ಅಥವಾ ಮರಣವನ್ನು ಹೊಂದುತ್ತದೆ. ಹಾಗೆಯೇ ರಾಷ್ಟ್ರವನ್ನು ಬಹಳವಾಗಿ ಕರೆಯುವ ರಾಜನು ಮುಂದೆ ಪ್ರಜೆಗಳಿಂದ ದ್ರವ್ಯಾದಾನರೂಪವಾದ ಕರ್ಮವನ್ನಾಗಲೀ ಪ್ರಜಾಪಾಲನರೂಪವಾದ ಕರ್ಮವನ್ನಾಗಲೀ ಮಾಡಲು ಅಸಮರ್ಥನಾಗುತ್ತಾನೆ. (-ಲಕ್ಷಾಲಂಕಾರ)

ಯೋ ರಾಷ್ಟ್ರಮನುಗೃಹ್ಣಾತಿ ಪರಿಗೃಹ್ಯ ಸ್ವಯಂ ನೃಪಃ।
ಸಂಜಾತಮುಪಜೀವನ್ ಸ ಲಭತೇ ಸುಮಹತ್ ಫಲಮ್ ॥೨೧॥

ಯಾವ ರಾಜನು ಪ್ರಜೆಗಳಿಂದ ತೆರಿಗೆಯನ್ನು ತೆಗೆದುಕೊಂಡು, ನ್ಯಾಯವಾಗಿ ತನಗೆ ದೊರಕಿದುದರಲ್ಲಿ ಜೀವಿಸಿ ಪ್ರಜೆಗಳಿಗೆ ಅನುಗ್ರಹವನ್ನು ಮಾಡುತ್ತಾನೆಯೋ ಅವನು ಶ್ರೇಷ್ಠವಾದ ಫಲವನ್ನು ಪಡೆಯುತ್ತಾನೆ.

ಆಪದರ್ಥಂ ಚ ನಿರ್ಯಾತಂ ರಾಜಾನ ಇಹ ಚಿನ್ವತೇ।
ರಾಷ್ಟ್ರಂ ಚ ಕೋಶಭೂತಂ ಸ್ಯಾತ್ ಕೋಶೋ ವೇಶ್ಮಗತಸ್ತಥಾ ॥೨೨॥

ಪ್ರಜೆಗಳಿಂದ ಪಡೆದ ಧನವು ಆಪತ್ಕಾಲಕ್ಕಾಗಿ ಇರಬೇಕು ಎಂದು ಬಯಸಿ ರಾಜರು ಸಂಗ್ರಹಿಸುತ್ತಾರೆ. ರಾಜರಿಗೆ ರಾಷ್ಟ್ರವೇ ಕೋಶ. ಅಂತಹ ಕೋಶವು ಪ್ರಜೆಗಳ ಮನೆಗಳಲ್ಲಿರುತ್ತದೆ (ಎಂದು ರಾಜನು ತಿಳಿಯಬೇಕು).

ಪೌರಜಾನಪದಾನ್ ಸರ್ವಾನ್ ಸಂಶ್ರಿತೋಪಾಶ್ರಿತಾಂಸ್ತಥಾ।
ಯಥಾಶಕ್ತ್ಯನುಕಂಪೇತ ಸರ್ವಾನಭ್ಯಂತರಾನಪಿ ॥೨೩॥

ಬಾಹ್ಯಂ ಜನಂ ಭೋಜಯಿತ್ವಾ ಭೋಕ್ತವ್ಯಂ ಮಧ್ಯಮಂ ಸುಖಮ್।
ಏವಂ ನ ಸಂಪ್ರಕುಪ್ಯಂತೇ ಜನಾಃ ಸುಖಿತದುಃಖಿತಾಃ ॥೨೪॥

ಪೌರಜಾನಪದರನ್ನು ತನ್ನನ್ನು ಆಶ್ರಯಿಸಿದವರನ್ನು ಮತ್ತು ಅವರನ್ನು ಆಶ್ರಯಿಸಿದವರನ್ನು, ತನ್ನ ಅರಮನೆಯ ಒಳಗಿನ ಜನರನ್ನು, ಹೊರಗಿನ ಜನರನ್ನು ತನ್ನ ಶಕ್ತಿ ಇದ್ದಷ್ಟು ಅನುಕಂಪದಿಂದ ಸುಖಪಡಿಸಿ (ಭೋಗಿಸುವಂತೆ ಮಾಡಿ) ರಾಜನು ಸರ್ವೋತ್ತಮವಲ್ಲದ, ಹೀನವಲ್ಲದ ಮಧ್ಯಮವಾದ ಸುಖವನ್ನು ಭೋಗಿಸಬೇಕು. ಹಾಗೆ ಮಾಡಿದರೆ ತೆರಿಗೆಗಳನ್ನು ತೆಗೆದುಕೊಳ್ಳುವ ರಾಜನಿಂದ ಹೆಚ್ಚು ಸುಖವನ್ನು ಪಡೆಯುವ ಪ್ರಜೆಗಳು ರಾಜನ ಮೇಲೆ ಕೋಪಗೊಳ್ಳುವುದಿಲ್ಲ.

ಪ್ರಾಗೇವ ತು ಕರಾದಾನಮನುಭಾಷ್ಯ ಪುನಃ ಪುನಃ।
ಸನ್ನಿಪತ್ಯ ಸ್ವವಿಷಯೇ ಭಯಂ ರಾಷ್ಟ್ರೇ ಪ್ರದರ್ಶಯೇತ್ ॥೨೫॥

ಹೆಚ್ಚಿನ ತೆರಿಗೆಗಳನ್ನು ವಿಧಿಸುವುದಕ್ಕೆ ಮೊದಲೇ ತನ್ನ ರಾಜ್ಯದಲ್ಲಿ ಪುನಃ ಪುನಃ ಸಂಚರಿಸಿ, ರಾಷ್ಟ್ರದಲ್ಲಿ ಉಂಟಾಗಿರುವ ಭಯವನ್ನು ವರ್ಣಿಸಿ ಪ್ರದರ್ಶಿಸಬೇಕು.

ಇಯಮಾಪತ್ ಸಮುತ್ಪನ್ನಾ ಪರಚಕ್ರಭಯಂ ಮಹತ್ ।
ಅಪಿ ನಾಂತಾಯ ಕಲ್ಪೇತ ವೇಣೋರಿವ ಫಲಾಗಮಃ ॥೨೬॥

ಇಂತಹ ಆಪತ್ತು ಬಂದೊದಗಿದೆ; ಶತ್ರುಗಳ ಭಯವು ಅಧಿಕವಾಗಿದೆ. ಬಿದಿರು ವೃಕ್ಷದಲ್ಲಿ ಫಲವು ಬಂದಂತೆ ಈ ಆಪತ್ತು ನಮ್ಮ ವಿನಾಶಕ್ಕೆ ಕಾರಣವಾಗಲಿದೆ.

ಅರಯೋ ಮೇ ಸಮುತ್ಥಾಯ ಬಹುಭಿರ್ದಸ್ಯುಭಿಃ ಸಹ ।
ಇದಮಾತ್ಮವಧಾಯೈವ ರಾಷ್ಟ್ರಮಿಚ್ಛಂತಿ ಬಾಧಿತುಮ್ ॥೨೭॥

ನನ್ನ ಶತ್ರುಗಳು ಅನೇಕ ದಸ್ಯುಗಳ ಜೊತೆ ಸೇರಿಕೊಂಡು ತಮ್ಮ ಆತ್ಮವಿನಾಶಕ್ಕಾಗಿಯೇ ನಮ್ಮ ರಾಷ್ಟ್ರವನ್ನು ಪೀಡಿಸಲು ಬಯಸುತ್ತಿದ್ದಾರೆ.

ಅಸ್ಯಾಮಾಪದಿ ಘೋರಾಯಾಂ ಸಂಪ್ರಾಪ್ತೇ ದಾರುಣೇ ಭಯೇ ।
ಪರಿತ್ರಾಣಾಯ ಭವತಾಂ ಪ್ರಾರ್ಥಯಿಷ್ಯೇ ಧನಾನಿ ವಃ ॥೨೮॥

ಇಂತಹ ಘೋರವಾದ ಆಪತ್ತಿನಲ್ಲಿ ದಾರುಣವಾದ ಭಯವು ಉಂಟಾಗಿರುವಾಗ ನಿಮ್ಮನ್ನು ರಕ್ಷಿಸುವುದಕ್ಕಾಗಿ ನಿಮ್ಮ ಧನವನ್ನು ಕೇಳುತ್ತಿದ್ದೇನೆ.

ಪ್ರತಿದಾಸ್ಯೇ ಚ ಭವತಾಂ ಸರ್ವಂ ಚಾಹಂ ಭಯಕ್ಷಯೇ ।
ನಾರಯಃ ಪ್ರತಿದಾಸ್ಯಂತಿ ಯದ್ ಹರೇಯುರ್ಬಲಾದಿತಃ ॥೨೯॥

ಭಯವು ಪರಿಹಾರವಾದ ಮೇಲೆ ನಿಮ್ಮ ಧನವನ್ನೆಲ್ಲಾ ನಿಮಗೇ ಹಿಂದಿರುಗಿಸುತ್ತೇನೆ. ಹಾಗಲ್ಲದೇ ಶತ್ರುಗಳು ಧನವನ್ನು ದೋಚಿಕೊಂಡು ಹೋದರೆ ಅವರು ಧನವನ್ನು ಹಿಂದೆ ಕೊಡುವುದಿಲ್ಲವಷ್ಟೇ!

ಕಳತ್ರಮಾದಿತಃ ಕೃತ್ವಾ ನಶ್ಯೇತ್ ಸ್ವಂ ಸ್ವಯಮೇವ ಹಿ ।
ಅಪಿ ಚೇತ್ ಪುತ್ರದಾರಾರ್ಥಮರ್ಥಸಂಚಯ ಇಷ್ಯತೇ ॥೩೦॥

ಹೆಂಡತಿ ಮತ್ತು ಮಕ್ಕಳ ಸಲುವಾಗಿ ಎಲ್ಲರೂ ಧನಸಂಚಯವನ್ನು ಬಯಸುತ್ತಾರೆ. ನಿಮ್ಮ ರಕ್ಷಣೆಯನ್ನು ಮಾಡದಿದ್ದರೆ ನಿಮ್ಮ ಪತ್ನಿ, ಸ್ವತ್ತುಗಳು, ನೀವೂ ಸಹ ನಾಶವನ್ನು ಹೊಂದುವಿರಿ.

ನಂದಾಮಿ ವಃ ಪ್ರಭಾವೇನ ಪುತ್ರಾಣಾಮಿವ ಚೋದಯೇ।
ಯಥಾಶಕ್ತ್ಯನುಗೃಹ್ಣಾಮಿ ರಾಷ್ಟ್ರಸ್ಯಾಪೀಡಯಾ ಚ ವಃ ॥೩೧॥

ಪುತ್ರರ ಅಭ್ಯುದಯವನ್ನು ನೋಡಿ ಸಂತೋಷಪಡುವಂತೆ ನಿಮ್ಮ ಪ್ರಭಾವದಿಂದ ನಾನು ಸಂತೋಷದಿಂದಿದ್ದೇನೆ. ಭಯವು ಪರಿಹಾರವಾದಮೇಲೆ ರಾಷ್ಟ್ರವನ್ನು ಮತ್ತು ನಿಮ್ಮನ್ನು ಪೀಡಿಸದೇ ನನ್ನ ಶಕ್ತಿ ಇದ್ದಷ್ಟು ನಿಮಗೆ ಅನುಗ್ರಹವನ್ನು ಮಾಡುತ್ತೇನೆ.

ಆಪತ್ಸ್ವೇವ ಚ ವೋಢವ್ಯಂ ಭವದ್ಭಿಃ ಪುಂಗವೈರಿವ।
ನ ವಃ ಪ್ರಿಯತರಂ ಕಾರ್ಯಂ ಧನಂ ಕಸ್ಯಾಂಚಿದಾಪದಿ ॥೩೨॥

ನೀವು ಒಳ್ಳೆಯ ಎತ್ತುಗಳಂತೆ ಆಪತ್ತಿನಲ್ಲಿ ನನ್ನ ಭಾರವನ್ನು ಹೊರಬೇಕಾಗಿದೆ. ನೀವು ನಿಮ್ಮ ಧನದಿಂದ ಈ ಆಪತ್ತಿನಲ್ಲಿ ಸಹಾಯ ಮಾಡುವುದಕ್ಕಿಂತ ಹೆಚ್ಚಿನ ಪ್ರಿಯವಾದ ಕಾರ್ಯವನ್ನು ಮಾಡಲಾರಿರಿ.

ಇತಿ ವಾಚಾ ಮಧುರಯಾ ಶ್ಲಕ್ಷ್ಣಯಾ ಸೋಪಚಾರಯಾ।
ಸ್ವರಶ್ಮೀನಭ್ಯವಸೃಜೇದ್ ಯುಗಮಾದಾಯ ಕಾಲವಿತ್ ॥೩೩॥

ಹೀಗೆ ಮಧುರವಾದ, ಉಪಚಾರಸಹಿತವಾದ, ನಿಪುಣವಾದ ಮಾತುಗಳನ್ನು ಆಡುತ್ತಾ ಕಾಲವನ್ನು ತಿಳಿದ ರಾಜನು ತಾನು ನೊಗದ ಮೇಲೆ ಕುಳಿತು ತನ್ನ ತೆರಿಗೆಯ ಪಾಶಗಳನ್ನು ಪ್ರಜೆಗಳ ಮೇಲೆ ಹಾಕಬೇಕು.

ಪ್ರಚಾರಂ ಭೃತ್ಯಭರಣಂ ವ್ಯಯಂ ಗೋಗ್ರಾಮತೋ ಭಯಮ್।
ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ಗೋಮಿನಃ ಕಾರಯೇತ್ ಕರಾನ್ ॥೩೪॥

ಗೋಸ್ವಾಮಿಗಳಾದ ವೈಶ್ಯರಿಗೆ ಅವರು ಮಾಡುವ ಸಂಚಾರವನ್ನು ಅವರ

ಸೇವಕರ ಪೋಷಣೆಯನ್ನು ವ್ಯಯವನ್ನು ಗೋಸಮೂಹಗಳಲ್ಲಿ ಉಂಟಾಗುವ ಭಯವನ್ನು ಯೋಗಕ್ಷೇಮವನ್ನು ನೋಡಿ ತೆರಿಗೆಯನ್ನು ವಿಧಿಸಬೇಕು.

ಉಪೇಕ್ಷಿತಾ ಹಿ ನಶ್ಯೇಯುರ್ಗೋಮಿನೋಽರಣ್ಯವಾಸಿನಃ।
ತಸ್ಮಾತ್ ತೇಷು ವಿಶೇಷೇಣ ಮೃದುಪೂರ್ವಂ ಸಮಾಚರೇತ್ ॥೩೫॥

ಅರಣ್ಯದಲ್ಲಿ ವಾಸಿಸುವ ಗೋಸ್ವಾಮಿಗಳು ಉದಾಸೀನವನ್ನು ಮಾಡಿದರೆ ನಾಶವನ್ನು ಹೊಂದಬಹುದು. ಆದ್ದರಿಂದ ಅವರ ವಿಷಯದಲ್ಲಿ ಬಹಳ ಮೃದುವಾಗಿ ನಡೆದುಕೊಳ್ಳಬೇಕು.

ಸಾಂತ್ವನಂ ರಕ್ಷಣಂ ದಾನಮವಸ್ಥಾ ಚಾಪ್ಯಭೀಕ್ಷ್ಣಶಃ।
ಗೋಮಿನಾಂ ಪಾರ್ಥ ಕರ್ತವ್ಯಂ ಸಂವಿಭಾಗಾಃ ಪ್ರಿಯಾಣಿ ಚ ॥೩೬॥

ಎಲೈ ಪಾರ್ಥನೇ! ಅವರ ಸಾಂತ್ವನ, ರಕ್ಷಣೆ, ದಾನ, ಸತತವಾಗಿ ಅವರ ವ್ಯವಹಾರಕ್ಕೆ ಅನುಕೂಲತೆಯನ್ನು ಕಲ್ಪಿಸುವುದು, ಅವರಿಗೆ ಪ್ರಿಯವನ್ನು ಉಂಟು ಮಾಡುವುದು, ಬಂದ ಆದಾಯದಲ್ಲಿ ಅವರಿಗೆ ಯೋಗ್ಯಭಾಗವನ್ನು ಕೊಡುವುದು ಹೀಗೆ ಗೋಪಾಲಕರನ್ನು ಯಾವಾಗಲೂ ನೋಡಿಕೊಳ್ಳಬೇಕು.

ಅಜಸ್ರಮುಪಯೋಕ್ತವ್ಯಂ ಫಲಂ ಗೋಮಿಷು ಸರ್ವತಃ।
ಪ್ರಭಾವಯತಿ ರಾಷ್ಟ್ರಂ ಚ ವ್ಯವಹಾರಂ ಕೃಷಿಂ ತಥಾ ॥೩೭॥

ಗೋಸ್ವಾಮಿಗಳಿಂದುಂಟಾದ ಫಲವನ್ನು ಸತತವಾಗಿ ಉಪಯೋಗಿಸಬೇಕು. ಅದರಿಂದ ರಾಷ್ಟ್ರವೂ ವ್ಯವಹಾರವೂ ಮತ್ತು ಕೃಷಿಯೂ ಅಭಿವೃದ್ಧಿಯನ್ನು ಹೊಂದು-ತ್ತದೆ.

ತಸ್ಮಾದ್ ಗೋಮಿಷು ಯತ್ನೇನ ಪ್ರೀತಿಂ ಕುರ್ಯಾದ್ ವಿಚಕ್ಷಣಃ।
ದಯಾವಾನಪ್ರಮತ್ತಶ್ಚ ಕರಾನ್ ಸಂಪ್ರಣಯನ್ ಮೃದೂನ್ ॥೩೮॥

ಆದ್ದರಿಂದ ಗೋಸ್ವಾಮಿಗಳಾದ ವೈಶ್ಯರಿಗೆ ವಿವೇಕಿಯಾದ ರಾಜನು ಸುಲಭ-

ವಾದ ತೆರಿಗೆಗಳನ್ನು ಹಾಕಿ, ಅವರಲ್ಲಿ ದಯೆಯನ್ನು ಹೊಂದಿ, ಪ್ರಯತ್ನಪೂರ್ವಕವಾಗಿ ಆಲಸ್ಯವಿಲ್ಲದೇ ಪ್ರೀತಿಯನ್ನು ಮಾಡಬೇಕು.

ಸರ್ವತ್ರ ಕ್ಷೇಮಚರಣಂ ಸುಲಭಂ ತಾತ ಗೋಮಿಭಿಃ।
ನ ಹ್ಯತಃ ಸದೃಶಂ ಕಿಂಚಿದ್ ಧನಮಸ್ತಿ ಯುಧಿಷ್ಠಿರ ॥೩೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನನವತಿತಮೋऽಧ್ಯಾಯಃ ॥೮೯॥

ಎಲೈ ಪ್ರೀತಿಪಾತ್ರನೇ! ಗೋಪಾಲನೆಯನ್ನು ಮಾಡುವವರು ಎಲ್ಲ ಕಡೆಗಳಲ್ಲಿಯೂ ಸುಲಭವಾಗಿ ಕ್ಷೇಮವನ್ನುಂಟುಮಾಡಬಲ್ಲರು. ಎಲೈ ಯುಧಿಷ್ಠಿರನೇ! ರಾಷ್ಟ್ರಕ್ಕೆ ಗೋಧನಕ್ಕೆ ಸದೃಶವಾದ ಧನವು ಇನ್ನೊಂದು ಇರುವುದಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೯ನೆಯ ಅಧ್ಯಾಯವು ಮುಗಿಯಿತು.

—೦—

೯೦. ತೊಂಬತ್ತನೆಯ ಅಧ್ಯಾಯ

ಪ್ರಜೆಗಳಿಂದ ತೆರಿಗೆಯನ್ನು ಸಂಗ್ರಹಿಸುವ ಪ್ರಕಾರ ಕಥನ

ಯುಧಿಷ್ಠಿರಃ

ಯದಾ ರಾಜಾ ಸಮರ್ಥೋ೯ऽಪಿ ಕೋಶಾರ್ಥೀ ಸ್ಯಾನ್ಮಹಾಮತೇ।
ಕಥಂ ಪ್ರವರ್ತೇತ ತದಾ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ಮಹಾಮತಿಯೇ! ರಾಜನು ಸಮರ್ಥನಾಗಿದ್ದರೂ ಕೋಶವನ್ನು ವೃದ್ಧಿಪಡಿಸಲು ಇಚ್ಛೆ ಮಾಡಿದರೆ ಅವನು ಹೇಗೆ ಪ್ರವೃತ್ತನಾಗಬೇಕೆಂದು ನನಗೆ ಹೇಳು.

ಭೀಷ್ಮಃ

ಯಥಾದೇಶಂ ಯಥಾಕಾಲಮಪಿ ಚೈವ ಯಥಾಬಲಮ್।
ಅನುಶಿಷ್ಯಾತ್ ಪ್ರಜಾ ರಾಜಾ ಧರ್ಮಾರ್ಥೀ ತದ್ಧಿತೇ ರತಃ ॥೨॥

ಭೀಷ್ಮರು – ರಾಜನು ಧರ್ಮಾರ್ಥಿಯಾಗಿ ಪ್ರಜೆಗಳ ಹಿತದಲ್ಲಿ ರತನಾಗಿ ದೇಶಕಾಲಗಳಿಗೆ ಅನುಗುಣವಾಗಿ ಮತ್ತು ತನ್ನ ಶಕ್ತಿಗೆ ಅನುಗುಣವಾಗಿ ಪ್ರಜೆಗಳನ್ನು ಪಾಲಿಸಬೇಕು.

ಯಥಾ ತಾಸಾಂ ಚ ಮನ್ಯೇತ ಶ್ರೇಯ ಆತ್ಮನ ಏವ ಚ।
ತಥಾ ಧರ್ಮ್ಯಾಣಿ ಸರ್ವಾಣಿ ರಾಜಾ ರಾಷ್ಟ್ರೇ ಪ್ರವರ್ತಯೇತ್ ॥೩॥

ತನಗೂ ಮತ್ತು ಪ್ರಜೆಗಳಿಗೂ ಯಾವುದು ಶ್ರೇಯಸ್ಕರವೆಂದು ಭಾವಿಸುತ್ತಾನೆಯೋ ಅಂತಹ ಧರ್ಮಕಾರ್ಯಗಳನ್ನು ರಾಜನು ರಾಜ್ಯದಲ್ಲಿ ಪ್ರವರ್ತಿಸಬೇಕು.

ಮಧುದೋಹಂ ದುಹೇದ್ ರಾಷ್ಟ್ರಂ ಭ್ರಮರಾನ್ನ ವಿಪಾತಯೇತ್।
ವತ್ಸಾಪೇಕ್ಷೀ ದುಹೇಚ್ಚೈವ ಸ್ತನಾಂಶ್ಚ ನ ವಿಕುಟ್ಟಯೇತ್ ॥೪॥

ಜೇನುತುಪ್ಪವನ್ನು ಮಾತ್ರ ಸಂಗ್ರಹಿಸಬೇಕು; ಜೇನುಹುಳುಗಳನ್ನು ಕೊಲ್ಲಬಾರದು. ಕರುವಿನ ಕ್ಷೇಮವನ್ನು ಬಯಸಿ ಹಾಲು ಕರೆಯಬೇಕು. ಹಸುವಿನ ಮೊಲೆಗಳನ್ನು ಘಾಸಿಗೊಳಿಸಬಾರದು.

ಜಲೌಕಾವತ್ ಪಿಬೇತ್ ರಾಷ್ಟ್ರಂ ಮೃದುನೈವ ನರಾಧಿಪ।
ವ್ಯಾಘ್ರೀವ ಚ ಹರೇತ್ ಪುತ್ರಮದಷ್ಟಾವ ಮಾ ಪತೇದಿತಿ ॥೫॥

ಎಲೈ ರಾಜನೇ! ರಾಜನು ರಾಜ್ಯದಿಂದ ತೆರಿಗೆಯನ್ನು ಜಿಗಣೆಯಂತೆ (ಪ್ರಜೆಗಳಿಗೆ ನೋವನ್ನು ಉಂಟುಮಾಡದಂತೆ) ಸಂಗ್ರಹಿಸಬೇಕು. ಹೆಣ್ಣುಹುಲಿಯು ತನ್ನ ಮರಿಯನ್ನು ಕಚ್ಚದೇ ಬೀಳದಿರಲಿ ಎಂದು ಬಾಯಲ್ಲಿ ಹಿಡಿದುಕೊಂಡು ಹೋಗುವಂತೆ ಪ್ರಜೆಗಳನ್ನು ಮುಂದೆ ನಡೆಸಬೇಕು.

ಅಲ್ಪೇನಾಲ್ಪೇನ ದೇಯೇನ ವರ್ಧಮಾನಂ ಪ್ರದಾಪಯೇತ್।
ತತೋ ಭೂಯಸ್ತತೋ ಭೂಯಃ ಕಾಮಂ ವೃದ್ಧಿಂ ಸಮಾಚರೇತ್ ॥೬॥

ವಾಣಿಜ್ಯದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಿರುವವನಿಗೆ ಸ್ವಲ್ಪಸ್ವಲ್ಪವಾಗಿ ತೆರಿಗೆ-

ಯನ್ನು ಏರಿಸಿ ಕೊಡುವಂತೆ ಮಾಡಬೇಕು. ಅನಂತರ ಅವರು ಬೆಳೆದಂತೆ ಬೆಳೆದಂತೆ ಕ್ರಮವಾಗಿ ಅದನ್ನು ಹೆಚ್ಚಿಸಿಕೊಂಡು ಹೋಗಬೇಕು.

ದಮಯನ್ನಿವ ದಮ್ಯಾನಾಂ ಶಶ್ವದ್ ಭಾರಂ ಪ್ರವರ್ಧಯೇತ್ ।
ಮೃದುಪೂರ್ವಂ ಪ್ರಯತ್ನೇನ ಪಾಶಾನಭ್ಯವಹಾರಯೇತ್ ॥೭॥

ಪ್ರಾಣಿಗಳನ್ನು ಪಳಗಿಸುವವನಂತೆ ತೆರಿಗೆಯ ಭಾರವನ್ನು ಕ್ರಮವಾಗಿ ಹೆಚ್ಚಿಸಿಕೊಂಡು ಹೋಗಬೇಕು. ಪ್ರಯತ್ನಪೂರ್ವಕವಾಗಿ ಮೃದುವಾಗಿಯೇ ತೆರಿಗೆಯ ಪಾಶಗಳನ್ನು ಅವರಿಗೆ ಹಾಕಬೇಕು.

ಸಕೃತ್ ಪಾಶಾವಕೀರ್ಣಾಸ್ತೇ ಭವಿಷ್ಯಂತಿ ಹಿ ದುರ್ದಮಾಃ ।
ಉಚಿತೇನೈವ ಭೋಕ್ತವ್ಯಾಸ್ತೇ ಭವಿಷ್ಯಂತಿ ಯತ್ನತಃ ॥೮॥

ಒಂದು ಸಲ ಅವರು ಪಾಶಗಳಿಂದ ಮುಕ್ತರಾದರೆ ಪುನಃ ಬಗ್ಗಿಸಲು ಅಸಾಧ್ಯರಾಗುತ್ತಾರೆ. ಆದ್ದರಿಂದ ಯೋಗ್ಯವಾದ ತೆರಿಗೆಗಳನ್ನು ಪ್ರಯತ್ನಪೂರ್ವಕವಾಗಿ ಹಾಕಿ ಅವರ ಧನವನ್ನು ಭೋಗಿಸಬೇಕು.

ತಸ್ಮಾತ್ ಸರ್ವಸಮಾರಂಭೋ ದುರ್ಲಭಃ ಪುರುಷಂ ಪ್ರತಿ ।
ಯಥಾ ಮುಖ್ಯಾನ್ ಸಾಂತ್ವಯಿತ್ವಾ ಭೋಕ್ತವ್ಯ ಇತರೋ ಜನಃ ॥೯॥

ಒಬ್ಬೊಬ್ಬ ಪುರುಷನನ್ನೂ ಕರೆದು ಅವನನ್ನು ಸಮಾಧಾನಪಡಿಸಿ ಎಲ್ಲ ಕಾರ್ಯವನ್ನೂ ಆರಂಭಿಸುವುದು ಅಸಾಧ್ಯವಾದುದು. ಆದ್ದರಿಂದ ಮುಖ್ಯವಾದವರನ್ನು ಕರೆಸಿ ಸಮಾಧಾನ ಮಾಡಿ ಅವರಿಗೆ ತೆರಿಗೆಗಳನ್ನು ವಿಧಿಸಿ ಅವರಂತೆ ಇತರ ಜನಗಳಿಗೂ ವಿಧಿಸಿ, ಭೋಗಿಸಬೇಕು.

ತತಸ್ತಾನ್ ಭೋಜಯಿತ್ವಾಥ ಪರಸ್ಪರವಿವಕ್ಷಿತಾನ್ ।
ಭುಂಜೀತ ಸಾಂತ್ವಯಿತ್ವೈವ ಯಥಾಸುಖಮಯತ್ನತಃ ॥೧೦॥

ಅನಂತರ ಪರಸ್ಪರವಾಗಿ ಮಾತನಾಡಲು ಅಪೇಕ್ಷಿಸುವ ಅಂತಹ ಮುಖ್ಯ-

ರಾದವರನ್ನು ಕರೆಸಿ, ಅವರನ್ನು ಸಮಾಧಾನ ಪಡಿಸಿ, ಭೋಜನಾದಿಗಳನ್ನು ನೀಡಿ, ತನಗೆ ಬರಬೇಕಾದ ಅಂಶವನ್ನು ಅನಾಯಾಸವಾಗಿ ಸುಖವಾಗಿ ಭೋಗಿಸಬೇಕು.

ನ ಚಾಸ್ಥಾನೇ ನ ಚಾಕಾಲೇ ಕರಾನೇಭ್ಯೋ೭ನುಪಾತಯೇತ್ ।
ಆನುಪೂರ್ವ್ಯೇಣ ಸಾಂತ್ವೇನ ಯಥಾಕಾಲಂ ಯಥಾವಿಧಿ ॥೧೧॥

ಅನುಚಿತವಾಗಿ ಮತ್ತು ಅಕಾಲದಲ್ಲಿ ಅವರಿಗೆ ತೆರಿಗೆಗಳನ್ನು ಹೇರಬಾರದು. ಉಚಿತವಾದ ಕಾಲದಲ್ಲಿ ವಿಧಿಗೆ ಅನುಗುಣವಾಗಿ ಸಮಾಧಾನಮಾತುಗಳಿಂದ ಕ್ರಮವಾಗಿ ತೆರಿಗೆಯನ್ನು ವಿಧಿಸಬೇಕು.

ಉಪಾಯಾನ್ ಪ್ರಬ್ರವೀಮ್ಯೇತಾನ್ನ ಮೇ ಮಾಯಾ ವಿವಕ್ಷಿತಾ ।
ಅನುಪಾಯೇನ ದಮಯನ್ ಪ್ರಕೋಪಯತಿ ವಾಜಿನಃ ॥೧೨॥

ನಾನು ನಿನಗೆ ಉಪಾಯಗಳನ್ನು ಹೇಳುತ್ತಿದ್ದೇನೆ. ಕಪಟವನ್ನು ಮಾಡಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಉಪಾಯವನ್ನು ಬಿಟ್ಟು ಪಳಗಿಸಲು ಪ್ರಾರಂಭಿಸಿದರೆ ಅಶ್ವಗಳು ಕೋಪಗೊಳ್ಳುತ್ತವೆ.

ಪಾನಾಗಾರಾಣಿ ವೇಶ್ಯಾಶ್ಚ ವೇಶ್ಯಪ್ರಾಪಣಿಕಾಸ್ತಥಾ ।
ಕುಶೀಲವಾಃ ಸಕಿತವಾ ಯೇ ಚಾನ್ಯೇ ಕೇಚಿದೀದೃಶಾಃ ॥೧೩॥

ನಿಯಮ್ಯಾಃ ಸರ್ವ ಏವೈತೇ ಯೇ ರಾಷ್ಟ್ರಸ್ಯೋಪಘಾತಕಾಃ ।
ಏತೇ ರಾಷ್ಟ್ರೇ ಹಿ ತಿಷ್ಠಂತೋ ಬಾಧಂತೇ ಭದ್ರಿಕಾಃ ಪ್ರಜಾಃ ॥೧೪॥

ಪಾನಾಗಾರವನ್ನು ನಡೆಸುವವರು, ವೇಶ್ಯೆಯರು, ವೇಶ್ಯೆಯರ ದಳ್ಳಾಳಿಗಳು, ನಟರು, ಜೂಜುಕೋರರು ಮತ್ತು ಇವರಿಗೆ ಸದೃಶರಾದವರು ಇವರೆಲ್ಲರೂ ರಾಷ್ಟ್ರವನ್ನು ನಾಶಮಾಡುವವರು. ಇವರೆಲ್ಲರನ್ನೂ ನಿಯಂತ್ರಿಸಬೇಕು. ಇವರು ರಾಷ್ಟ್ರದಲ್ಲಿದ್ದರೆ ಸಾಧುಗಳಾದ ಪ್ರಜೆಗಳನ್ನು ಪೀಡಿಸುತ್ತಾರೆ.

ನ ಕೇನಚಿದ್ ಯಾಚಿತವ್ಯಃ ಕಶ್ಚಿತ್ ಕಿಂಚಿದನಾಪದಿ ।
ಇತಿ ವ್ಯವಸ್ಥಾ ಭೂತಾನಾಂ ಪುರಸ್ತಾನ್ಮನುನಾ ಕೃತಾ ॥೧೫॥

''ಆಪತ್ತು ಇಲ್ಲದಿದ್ದಾಗ ಯಾರೂ ಯಾರನ್ನೂ ಏನನ್ನೂ ಬೇಡಬಾರದು'' ಎಂಬ ವ್ಯವಸ್ಥೆಯನ್ನು ಮನುಷ್ಯರಿಗೆ ಮನುವು ಹಿಂದೆಯೇ ಮಾಡಿದ್ದಾನೆ.

ಸರ್ವೇ ತಥಾ ನ ಜೀವೇಯುರ್ನ ಕುರ್ಯುಃ ಕರ್ಮ ಚೇದಿಹ।
ಸರ್ವ ಏವ ತ್ರಯೋ ಲೋಕಾ ನ ಭವೇಯುರಸಂಶಯಮ್ ॥೧೬॥

ಈ ಲೋಕದಲ್ಲಿ ಕರ್ಮವನ್ನು ಮಾಡದಿದ್ದರೆ ಯಾರೂ ಜೀವಿಸಲಾರರು. ಮೂರು ಲೋಕಗಳೂ ನಿಃಸಂಶಯವಾಗಿ ನಷ್ಟವಾದಾವು!

ಪ್ರಭುರ್ನಿಯಮನೇ ರಾಜಾ ಯ ಏತಾನ್ನ ನಿಯಚ್ಛತಿ।
ಭುಂಕ್ತೇ ಸ ತಸ್ಯ ಪಾಪಸ್ಯ ಚತುರ್ಭಾಗಮಿತಿ ಶ್ರುತಿಃ ॥೧೭॥

ಪ್ರಭುವೂ ನಿಯಮವನ್ನು ಮಾಡಬೇಕಾದವನೂ ಆದ ರಾಜನು ಇವರನ್ನು ನಿಯಂತ್ರಿಸದಿದ್ದರೆ, ಇವರನ್ನು ನಿಯಮಿಸದೆ ಯಾವ ಕರ್ಮವನ್ನೂ ಮಾಡದ ಅವನು ಆ ಪಾಪದ ನಾಲ್ಕನೇ ಒಂದು ಭಾಗವನ್ನು ಅನುಭವಿಸುತ್ತಾನೆ ಎಂದು ಶ್ರುತಿ ಇದೆ. ಹಾಗೆಯೇ ಪ್ರಜೆಗಳು ಮಾಡಿದ ಧರ್ಮದ ನಾಲ್ಕನೆಯ ಒಂದು ಭಾಗವನ್ನೂ ರಾಜನು ಭೋಗಿಸುತ್ತಾನೆ.

ಸ್ಥಾನಾನ್ಯೇತಾನಿ ಸಂಗಮ್ಯ ಪ್ರಸಂಗೋ ಭೂತಿನಾಶನಃ।
ಕಾಮಪ್ರಸಕ್ತಃ ಪುರುಷಃ ಕಿಮಕಾರ್ಯಂ ವಿವರ್ಜಯೇತ್ ॥೧೮॥

ಪಾನಾಗಾರ, ವೇಶ್ಯಾವಾಟಿಕೆ ಮೊದಲಾದ ಈ ಸ್ಥಾನಗಳಿಗೆ ಹೋಗಿ ಅಲ್ಲಿ ಆಸಕ್ತನಾಗುವುದು ಮನುಷ್ಯನ ಐಶ್ವರ್ಯವನ್ನು ನಾಶಗೊಳಿಸುತ್ತದೆ. ಕಾಮಾಸಕ್ತನಾದ ಪುರುಷನು ಯಾವ ಅಕಾರ್ಯವನ್ನು ಮಾಡದೇ ಬಿಡುತ್ತಾನೆ?

ಆಪದ್ಯೇವ ತು ಯಾಚೇರನ್ ಯೇಷಾಂ ನಾಸ್ತಿ ಪರಿಗ್ರಹಃ।
ದಾತವ್ಯಂ ಧರ್ಮತಸ್ತೇಭ್ಯಸ್ತ್ವನುಕ್ರೋಶಾದ್ ಭಯಾನ್ನ ತು ॥೧೯॥

ಯಾರ ಬಳಿ ಏನೂ ಇಲ್ಲವೋ ಅವರು ಆಪತ್ತಿನಲ್ಲಿ ಮಾತ್ರ ಯಾಚಿಸಬೇಕು.

ಅವರಿಗೆ ದಯೆಯಿಂದಲೇ ಧರ್ಮದ ದೃಷ್ಟಿಯಿಂದ ದಾನವನ್ನು ಮಾಡಬೇಕು. ಭಯ -ದಿಂದ ದಾನಮಾಡಬಾರದು.

ಮಾ ತೇ ರಾಷ್ಟ್ರೇ ಯಾಚನಕಾ ಮಾ ತೇ ಭೂಯುಶ್ಚ ದಸ್ಯವಃ।
ಇಷ್ಟಾದಾತಾರ ಏವೈತೇ ನೈತೇ ಭೂತಸ್ಯ ಭಾವಕಾಃ ॥೨೦॥

ಎಲೈ ರಾಜನೇ! ನಿನ್ನ ರಾಷ್ಟ್ರದಲ್ಲಿ ಬೇಡುವವರು ಮತ್ತು ದಸ್ಯುಗಳು ಇಲ್ಲದಿರಲಿ. ಇಂತಹವರು ಪ್ರಜೆಗಳಿಗೆ ಇಷ್ಟವಾದುದನ್ನು ತೆಗೆದುಕೊಳ್ಳುವವರೇ ಹೊರತು ಇರುವುದನ್ನು ಅಭಿವೃದ್ಧಿ ಪಡಿಸುವವರಲ್ಲ.

ಯೇ ಭೂತಾನ್ಯನುಗೃಹ್ಣಂತಿ ವರ್ಧಯಂತಿ ಚ ಯೇ ಪ್ರಜಾಃ।
ತೇ ತೇ ರಾಷ್ಟ್ರೇ ಪ್ರವರ್ತಂತಾಂ ಮಾ ಭೂತಾನಾಮಭಾವಕಾಃ ॥೨೧॥

ಯಾರು ಪ್ರಜೆಗಳಿಗೆ ಅನುಗ್ರಹಮಾಡಿ ಅವರನ್ನು ಅಭಿವೃದ್ಧಿಪಡಿಸುತ್ತಾರೆಯೋ ಅಂತಹವರು ನಿನ್ನ ರಾಷ್ಟ್ರದಲ್ಲಿರಲಿ. ಪ್ರಜೆಗಳ ನಾಶವನ್ನು ಮಾಡುವವರು ನಿನ್ನ ರಾಷ್ಟ್ರದಲ್ಲಿರುವುದು ಬೇಡ.

ದಂಡ್ಯಾಸ್ತೇ ಚ ಮಹಾರಾಜ ಧನಾದಾನಪ್ರಯೋಜನಾಃ।
ಪ್ರಯೋಗಂ ಕಾರಯೇಯುಸ್ತಾನ್ ಯಥಾ ಬಲಿಕರಾಂಸ್ತಥಾ ॥೨೨॥

ಎಲೈ ಮಹಾರಾಜನೇ! ರಾಜನಿಂದ ನಿಯುಕ್ತರಾದ ಅಧಿಕಾರಿಗಳಾಗಿ ಪ್ರಜೆ-ಗಳಿಂದ ಹೆಚ್ಚು ಧನವನ್ನು ತೆಗೆದುಕೊಳ್ಳುವವರು ಶಿಕ್ಷೆಗೆ ಅರ್ಹರಾದವರು. ನಿನ್ನ ನಿಷ್ಠಾವಂತ ಅಧಿಕಾರಿಗಳಿಂದ ಪ್ರಯೋಗವನ್ನು ಮಾಡಿಸಿ ಅಂತಹ ಅಪ್ರಾಮಾಣಿಕ ಅಧಿಕಾರಿಗಳು ತೆರಿಗೆಯನ್ನು ಕೊಡುವಂತೆ ಮಾಡಬೇಕು.

ಕೃಷಿಗೋರಕ್ಷ್ಯವಾಣಿಜ್ಯಂ ಯಚ್ಚಾನ್ಯತ್ ಕಿಂಚಿದೀದೃಶಮ್ ।
ಪುರುಷೈಃ ಕಾರಯೇತ್ ಕರ್ಮ ಬಹುಭಿಃ ಸಹ ಕರ್ಮಿಭಿಃ ॥೨೩॥

ಕೃಷಿ, ಗೋರಕ್ಷ್ಯ , ವಾಣಿಜ್ಯ ಮತ್ತು ಇಂತಹ ಕಾರ್ಯಗಳನ್ನು ಅನೇಕ ಪುರುಷ-ರಿಂದ ಒಟ್ಟಾಗಿ ಮಾಡಿಸಬೇಕು.

ನ ರಕ್ಷೇಚ್ಚೇತ್ ಕೃಷಿಗೋರಕ್ಷಂ ವಾಣಿಜ್ಯಂ ಚಾಪ್ಯನುಷ್ಠಿತಃ।
ಸಂಶಯಂ ಲಭತೇ ಕಿಂಚಿತ್ ತೇನ ರಾಜಾ ವಿಗರ್ಹ್ಯತೇ ॥೨೪॥

ರಾಜನು ಇವರಿಗೆ ಅನುಕೂಲನಾಗಿದ್ದು, ಕೃಷಿ ಗೋರಕ್ಷಣೆ ವಾಣಿಜ್ಯಗಳನ್ನು ರಕ್ಷಣೆ ಮಾಡದಿದ್ದರೆ ರಾಜನು ಇದ್ದಾನೋ ಇಲ್ಲವೋ ಎಂಬ ಸಂಶಯಕ್ಕೆ ಗುರಿಯಾಗುತ್ತಾನೆ. ಅದರಿಂದ ಅವನು ನಿಂದೆಗೆ ಒಳಗಾಗುತ್ತಾನೆ.

ಧನಿನಃ ಪೂಜಯೇನ್ನಿತ್ಯಂ ಯಾನಾಚ್ಛಾದನಭೋಜನೈಃ।
ವಕ್ತವ್ಯಾಶ್ಚಾನುಗೃಹ್ಣೀಧ್ವಂ ಪ್ರಜಾಃ ಸಹ ಮಯೇತಿ ಹ ॥೨೫॥

ಧನಾಢ್ಯರಾದವರನ್ನು ವಾಹನವಸ್ತ್ರಭೋಜನಗಳನ್ನು ನೀಡಿ ನಿತ್ಯವೂ ಪೂಜಿಸಬೇಕು. 'ನೀವು ಪ್ರಜೆಗಳಿಗೂ ಮತ್ತು ನನಗೂ ಅನುಗ್ರಹವನ್ನು ಮಾಡಿ' ಎಂದು ಅವರಿಗೆ ಹೇಳಬೇಕು.

ಅಂಗಮೇತನ್ಮಹದ್ ರಾಜ್ಞಾಂ ಧನಿನೋ ನಾಮ ಭಾರತ।
ಕಕುದಃ ಸರ್ವಭೂತಾನಾಂ ಧನಸ್ಥೋ ನಾತ್ರ ಸಂಶಯಃ ॥೨೬॥

ಎಲೈ ಭಾರತನೇ! ಧನಾಢ್ಯರಾದವರು ರಾಜನಿಗೆ ಪ್ರಧಾನವಾದ ಅಂಗ. ಧನಾಢ್ಯರಾದವರು ಎಲ್ಲ ಪ್ರಜೆಗಳಲ್ಲಿ ಶಿಖರಪ್ರಾಯರಾದವರು ಎಂಬುದರಲ್ಲಿ ಸಂಶಯವಿಲ್ಲ.

ಪ್ರಾಜ್ಞಃ ಶೂರೋ ಧನಸ್ಥಶ್ಚ ಸ್ವಾಮೀ ಧಾರ್ಮಿಕ ಏವ ಚ।
ತಪಸ್ವೀ ಸತ್ಯವಾದೀ ಚ ಬುದ್ಧಿಮಾಂಶ್ಚಾಭಿರಕ್ಷತಿ ॥೨೭॥

ಪ್ರಾಜ್ಞ, ಶೂರ, ಧನಾಢ್ಯ, ಪ್ರಭು, ಧಾರ್ಮಿಕ, ತಪಸ್ವಿ, ಸತ್ಯವಾದಿ, ಮೇಧಾವಿ - ಇವರು ರಾಷ್ಟ್ರವನ್ನು ರಕ್ಷಿಸುತ್ತಾರೆ.

ತಸ್ಮಾದೇತೇಷು ಸರ್ವೇಷು ಪ್ರೀತಿಮಾನ್ ಭವ ಪಾರ್ಥಿವ।
ಸತ್ಯಮಾರ್ಜವಮಕ್ರೋಧಮಾನೃಶಂಸ್ಯಂ ಚ ಪಾಲಯ ॥೨೮॥

ಎಲೈ ರಾಜನೇ! ಆದ್ದರಿಂದ ಇಂತಹ ಎಲ್ಲರಲ್ಲಿಯೂ ಪ್ರೀತಿಯುಳ್ಳವನಾಗು. ಸತ್ಯ, ಆರ್ಜವ, ಅಕ್ರೋಧ ಮತ್ತು ಮಾರ್ದವಗಳನ್ನು ಪಾಲಿಸು.

ಏವಂ ದಂಡಂ ಚ ಕೋಶಂ ಚ ಮಿತ್ರಂ ಭೂಮಿಂ ಚ ಲಪ್ಸ್ಯಸೇ।
ಸತ್ಯಾರ್ಜವಪರೋ ರಾಜನ್ ಮಿತ್ರಕೋಶಸಮನ್ವಿತಃ ॥೨೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ನವತಿತಮೋऽಧ್ಯಾಯಃ ॥೯೦॥

ಎಲೈ ರಾಜನೇ! ಸತ್ಯ ಮತ್ತು ಋಜುತನದಿಂದ ಕೂಡಿ ನೀನು ಹೀಗೆ ಮಾಡಿದರೆ ದಂಡವನ್ನು, ಕೋಶವನ್ನು, ಮಿತ್ರರನ್ನು ಮತ್ತು ಭೂಮಿಯನ್ನು ಪಡೆಯುವಿ. ಮಿತ್ರರಿಂದ ಮತ್ತು ಕೋಶದಿಂದ ಯುಕ್ತನಾಗುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೯೦ನೆಯ ಅಧ್ಯಾಯ ಮುಗಿಯಿತು.

—೦—

೯೧. ತೊಂಬತ್ತೊಂದನೆಯ ಅಧ್ಯಾಯ

ಪುನಃ ರಾಜನೀತಿ ಕಥನ

ಭೀಷ್ಮಃ

ವನಸ್ಪತೀನ್ ಭಕ್ಷ್ಯಫಲಾನ್ನ ಛಿಂದ್ಯುರ್ವಿಷಯೇ ತವ।
ಬ್ರಾಹ್ಮಣಾನಾಂ ಮೂಲಫಲಂ ಧರ್ಮ್ಯಮಾಹುರ್ಮನೀಷಿಣಃ ॥೧॥

ಭೀಷ್ಮರು – ಫಲವನ್ನು ಕೊಡುವ ವನಸ್ಪತಿಗಳನ್ನು ನಿನ್ನ ರಾಜ್ಯದಲ್ಲಿ ಯಾರೂ ಕತ್ತರಿಸದಿರಲಿ. ಬ್ರಾಹ್ಮಣರಿಗೆ ಫಲಮೂಲಗಳು ಧಾರ್ಮಿಕವಾದ ಆಹಾರವೆಂದು ಜ್ಞಾನಿಗಳು ಹೇಳುತ್ತಾರೆ.

ಬ್ರಾಹ್ಮಣೇಭ್ಯೋऽತಿರಿಕ್ತಂ ಚ ಭುಂಜೀರನ್ನಿತರೇ ಜನಾಃ।
ನ ಬ್ರಾಹ್ಮಣೋಪರೋಧೇನ ಹರೇದನ್ಯಃ ಕಥಂಚನ ॥೨॥

ಬ್ರಾಹ್ಮಣರು ಉಪಯೋಗಿಸಿ ಉಳಿದುದನ್ನು ಇತರ ಜನರು ಉಪಯೋಗಿಸ-

ಬೇಕು. ಬ್ರಾಹ್ಮಣರಿಗೆ ತೊಂದರೆಯನ್ನು ಮಾಡಿ ಬೇರೆ ಯಾವನೂ ಫಲಮೂಲಗಳನ್ನು ತೆಗೆದುಕೊಳ್ಳಬಾರದು.

ವಿಪ್ರಶ್ಚೇತ್ ತ್ಯಾಗಮಾತಿಷ್ಠೇದಾಖ್ಯಾಯಾವೃತ್ತಿಕರ್ಶಿತಃ।
ಪರಿಕಲ್ಪ್ಯೋऽಸ್ಯ ವೃತ್ತಿಃ ಸ್ಯಾತ್ ಸದಾರಸ್ಯ ನರಾಧಿಪ ॥೩॥

ಬ್ರಾಹ್ಮಣನು ತನ್ನ ಜೀವನೋಪಾಯವಿಲ್ಲದ ಕಾರಣದಿಂದ ಕರ್ಶಿತನಾಗಿ ದೇಶತ್ಯಾಗವನ್ನು ಮಾಡಲು ಬಯಸಿದರೆ ಎಲೈ ರಾಜನೇ! ಪತ್ನೀಸಹಿತನಾದ ಅವನಿಗೆ ಜೀವನೋಪಾಯವನ್ನು ಕಲ್ಪಿಸಬೇಕು.

ಸ ಚೇನ್ನೋ ಪರಿವರ್ತೇತ ವಾಚ್ಯೋ ಬ್ರಾಹ್ಮಣಸಂಸದಿ।
ಕಸ್ಮಿನ್ನಿದಾನೀಂ ಮರ್ಯಾದಾಮಯಂ ಲೋಕಃ ಕರಿಷ್ಯತಿ ॥೪॥

ಆದರೂ ಅವನು ತನ್ನ ನಿರ್ಧಾರವನ್ನು ಬದಲಾಯಿಸದಿದ್ದರೆ ಬ್ರಾಹ್ಮಣರ ಸಭೆಯಲ್ಲಿ ಅವನನ್ನು ಕುರಿತು ನಿನ್ನಂತಹವರು ದೇಶತ್ಯಾಗವನ್ನು ಮಾಡಿದರೆ ಈಗ ಪ್ರಜೆಗಳು ಯಾರನ್ನು ರಕ್ಷಿಸುವರು ಎಂದು ಹೇಳಬೇಕು.

ಅಸಂಶಯಂ ನಿವರ್ತೇತ ನ ಚೇದ್ ವಕ್ಷ್ಯತ್ಯತಃ ಪರಮ್।
ಪೂರ್ವಂ ಪರೋಕ್ಷಂ ಕರ್ತವ್ಯಮೇತತ್ ಕೌಂತೇಯ ಶಾಸನಮ್ ॥೫॥

ರಾಜನು ಹೀಗೆ ಮೃದುವಾಗಿ ಹೇಳಿದರೆ ಅವನು ದೇಶತ್ಯಾಗಮಾಡುವುದನ್ನು ಬಿಡುತ್ತಾನೆ. ಎಲೈ ಕೌಂತೇಯನೇ! ಮೊದಲು ಈ ರೀತಿಯಾಗಿ ತನ್ನ ಅಭಿಪ್ರಾಯವನ್ನು ಇನ್ನೊಬ್ಬರಿಂದ ಹೇಳಿಸಬೇಕು.

ಆಹುರೇತಜ್ಜನಾ ಬ್ರಹ್ಮನ್ ನ ಚೈತದ್ ಶ್ರದ್ದಧಾಮ್ಯಹಮ್।
ನಿಮಂತ್ರ್ಯಶ್ಚ ಭವೇದ್ ಭೋಗೈರವೃತ್ತ್ಯಾ ಚೇತ್ ತದಾಚರೇತ್ ॥೬॥

ಅನಂತರ ಜೀವನೋಪಾಯವಿಲ್ಲದೇ ಅವನು ಹಾಗೆ ಮಾಡುತ್ತಿದ್ದರೆ, ಅವನನ್ನು ಆಮಂತ್ರಿಸಿ ಭೋಗಗಳನ್ನು ನೀಡಿ ಜನರು ಹೀಗೆ ಹೇಳುತ್ತಿದ್ದಾರೆ ಎಲೈ ಬ್ರಾಹ್ಮಣನೇ!

ಆದರೆ ಅದರಲ್ಲಿ ನನಗೆ ನಂಬಿಕೆಯಿಲ್ಲ ಎಂದು ಹೇಳಬೇಕು. (ಅದರಿಂದ ಬ್ರಾಹ್ಮಣನು ದೇಶತ್ಯಾಗದ ನಿರ್ಧಾರವನ್ನು ಬಿಡಬಹುದು).

ಕೃಷಿಗೋರಕ್ಷ್ಯವಾಣಿಜ್ಯಂ ಲೋಕಾನಾಮಿಹ ಜೀವನಮ್ ।
ಊರ್ಧ್ವಂ ಚೈವ ತ್ರಯೀ ವಿದ್ಯಾ ಸಾ ಭೂತಾನ್ ಭಾವಯತ್ಯುತ ॥೭॥

ಕೃಷಿಗೋರಕ್ಷ್ಯವಾಣಿಜ್ಯಗಳು ಪ್ರಜೆಗಳ ಜೀವನೋಪಾಯ. ಇವುಗಳಿಗಿಂತ ಮಿಗಿಲಾದುದು ವೇದವಿದ್ಯೆ. ಅದು ಪ್ರಜೆಗಳನ್ನು ಪರಿಶುದ್ಧಗೊಳಿಸುತ್ತದೆ.

ತಸ್ಯಾಂ ವೈ ವರ್ತಮಾನಾಯಾಂ ಯೇ ಸ್ಯುಸ್ತತ್ಪರಿಪಂಥಿನಃ ।
ದಸ್ಯವಸ್ತದ್ವಧಾಯೇಹ ಬ್ರಹ್ಮಾ ಕ್ಷತ್ರಮಥಾಸೃಜತ್ ॥೮॥

ಅಂತಹ ವೇದವಿದ್ಯೆಯು ಪ್ರಸಕ್ತವಾಗಿರುವಾಗ ಅದಕ್ಕೆ ವಿರೋಧಿಗಳಾದ ದಸ್ಯುಗಳು ಯಾರಿದ್ದಾರೋ ಅವರ ವಧೆಗಾಗಿ ಬ್ರಹ್ಮದೇವರು ಕ್ಷತ್ರಿಯರನ್ನು ಸೃಷ್ಟಿಸಿದರು.

ಶತ್ರೂನ್ ಜಹಿ ಪ್ರಜಾ ರಕ್ಷ ಯಜಸ್ವ ಕ್ರತುಭಿರ್ನೃಪ ।
ಯುದ್ಧ್ವಸ್ವ ಸಮರೇ ವೀರೋ ಭೂತ್ವಾ ಕೌರವನಂದನ ॥೯॥

ಎಲೈ ರಾಜನೇ! ಕೌರವನಂದನನೇ! ಶತ್ರುಗಳನ್ನು ಜಯಿಸು. ಪ್ರಜೆಗಳನ್ನು ರಕ್ಷಿಸು. ಯಾಗಗಳನ್ನು ಮಾಡು. ವೀರನಾಗಿ ಯುದ್ಧವನ್ನು ಮಾಡು.

ಸಂರಕ್ಷ್ಯಾನ್ ಪಾಲಯೇದ್ ರಾಜಾ ಯಃ ಸ ರಾಜಾರ್ಯಕೃತ್ತಮಃ ।
ಯೇ ಕೇಚಿತ್ ತಾನ್ ನ ರಕ್ಷ್ಯಂತಿ ತೈರರ್ಥೋ ನಾಸ್ತಿ ಕಶ್ಚನ ॥೧೦॥

ಶ್ರೇಷ್ಠವಾದ ಕಾರ್ಯವನ್ನು ಮಾಡುವವರಲ್ಲಿ ಶ್ರೇಷ್ಠನಾದ ರಾಜನು ರಕ್ಷಿಸಲ್ಪಡಬೇಕಾದವರನ್ನು ಸಂರಕ್ಷಿಸಬೇಕು. ಯಾವ ರಾಜರು ಅವರನ್ನು ರಕ್ಷಿಸುವುದಿಲ್ಲವೋ ಅವರಿಂದ ಯಾವ ಪ್ರಯೋಜನವೂ ಇಲ್ಲ.

ಸದೈವ ರಾಜ್ಞಾ ಯೋದ್ಧವ್ಯಂ ಸರ್ವಲೋಕಾದ್ ಯುಧಿಷ್ಠಿರ ।
ತಸ್ಮಾದ್ ಹೇತೋರ್ಹಿ ಭುಂಜೇತ ಮನುಷ್ಯಾನೇವ ಮಾನವಃ ॥೧೧॥

ಎಲೈ ಯುಧಿಷ್ಠಿರನೇ! ಸರ್ವಲೋಕದ ಹಿತಕ್ಕಾಗಿ ರಾಜನು ಸದಾ ಯುದ್ಧ-ಸನ್ನದ್ಧನಾಗಿರಬೇಕು. ಆ ಕಾರಣದಿಂದ ರಾಜನು ಸೈನಿಕರನ್ನು ಪಾಲಿಸಬೇಕು.

ಅಂತರೇಭ್ಯಃ ಪರಾನ್ ರಕ್ಷನ್ ಪರೇಭ್ಯಃ ಪುನರಂತರಾನ್ ।
ಪರಾನ್ ಪರೇಭ್ಯಃ ಸ್ವಾನ್ ಸ್ವೇಭ್ಯಃ ಸರ್ವಾನ್ ಪಾಲಯ ನಿತ್ಯದಾ ॥೧೨॥

ಒಳಗಿನವರನ್ನು ಹೊರಗಿನವರಿಂದಲೂ, ಹೊರಗಿನವರನ್ನು ಒಳಗಿನವರಿಂದಲೂ, ಹೊರಗಿನವರನ್ನು ಹೊರಗಿನವರಿಂದಲೂ, ಒಳಗಿನವರನ್ನು ಒಳಗಿನವರಿಂದಲೂ ಎಲ್ಲರನ್ನೂ ನಿತ್ಯವೂ ಪಾಲಿಸುವವನಾಗು.

ಆತ್ಮಾನಂ ಸರ್ವತೋ ರಕ್ಷನ್ ರಾಜಾ ರಕ್ಷೇತ ಮೇದಿನೀಮ್ ।
ಆತ್ಮಮೂಲಮಿದಂ ಸರ್ವಮಾಹುರ್ಹಿ ವಿದುಷೋ ಜನಾಃ ॥೧೩॥

ರಾಜನು ತನ್ನನ್ನು ರಕ್ಷಿಸಿಕೊಂಡು ಭೂಮಿಯನ್ನು ರಕ್ಷಿಸಬೇಕು. ಎಲ್ಲ ಕಾರ್ಯವೂ ಆತ್ಮಮೂಲವಾದುದೆಂದು ವಿದ್ವಾಂಸರು ಹೇಳುತ್ತಾರೆ.

ಕಿಂ ಛಿದ್ರಂ ಕೋऽನುಷಂಗೋ ಮೇ ಕಿಂ ವಾಸ್ತ್ಯವಿನಿಪಾತಿತಮ್ ।
ಕುತೋ ಮಾಮಾಸ್ರವೇದ್ ದೋಷ ಇತಿ ನಿತ್ಯಂ ವಿಚಿಂತಯೇತ್ ॥೧೪॥

ನನ್ನ ದೋಷವೇನು? ನನ್ನ ದುರಾಸಕ್ತಿ ಏನು? ನಾನು ಪರಿಹಾರಮಾಡದಿರುವ ಪ್ರತಿಬಂಧಕವೇನು? ದೋಷವು ನನ್ನ ಕಡೆಗೆ ಎಲ್ಲಿಂದ ಹರಿದು ಬರುತ್ತದೆ ಎಂದು ನಿತ್ಯವೂ ಚಿಂತಿಸಬೇಕು.

ಗುಪ್ತೈಶ್ಚಾರ್ಥೈರನುಮತೈಃ ಪೃಥಿವೀಮನುಚಾರಯೇತ್ ।
ಸುನೀತಂ ಯದಿ ಮೇ ವೃತ್ತಂ ಪ್ರಶಂಸಂತಿ ನವಾ ಪುನಃ।
ಕಚ್ಚಿದ್ ರೋಚೇಜ್ಜನಪದೇ ಕಚ್ಚಿದ್ ರಾಷ್ಟ್ರೇ ಚ ಮೇ ಯಶಃ ॥೧೫॥

ಗುಪ್ತವಾದ ಮತ್ತು ಸಮ್ಮತರಾದ ಗೂಢಚಾರರಿಂದ ರಾಷ್ಟ್ರದಲ್ಲಿ ಸಂಚಾರವನ್ನು ಮಾಡಿಸಿ ತನ್ನ ರಾಜನೀತಿಯು ಚೆನ್ನಾಗಿದೆಯೇ ಇಲ್ಲವೇ ಪ್ರಜೆಗಳು ಪ್ರಶಂಸಿಸು-

ತ್ತಾರೆಯೇ ಇಲ್ಲವೇ, ರಾಷ್ಟ್ರದಲ್ಲಿ ಇಷ್ಟಪಡುತ್ತಾರೆಯೇ ಇಲ್ಲವೇ, ರಾಷ್ಟ್ರದಲ್ಲಿ ನನ್ನ ಕೀರ್ತಿಯು ಇದೆಯೇ ಇಲ್ಲವೇ ಎಂದು ತಿಳಿದುಕೊಳ್ಳಬೇಕು.

ಧರ್ಮಜ್ಞಾನಾಂ ಧೃತಿಮತಾಂ ಸಂಗ್ರಾಮೇಷ್ವಪಲಾಯಿನಾಮ್ ।
ರಾಷ್ಟ್ರಂ ಚ ಯೇಽನುಜೀವಂತಿ ಯೇ ಚ ರಾಜ್ಞೋಽನುಜೀವಿನಃ ॥೧೬॥

ಧರ್ಮಜ್ಞರೂ, ಧೈರ್ಯಶಾಲಿಗಳೂ, ಯುದ್ಧದಲ್ಲಿ ಹಿಮ್ಮೆಟ್ಟದವರೂ ಆದವರಲ್ಲಿ ಯಾರು ರಾಷ್ಟ್ರವನ್ನು ಉಪಜೀವಿಸಿಕೊಂಡಿದ್ದಾರೆ. ಯಾರು ರಾಜನನ್ನು ಉಪಜೀವಿಸುತ್ತಾರೆ ಎಂಬುದನ್ನೂ ಚಾರರಿಂದ ತಿಳಿಯಬೇಕು.

ಅಮಾತ್ಯಾನಾಂ ಚ ಸರ್ವೇಷಾಂ ಮಧ್ಯಸ್ಥಾನಾಂ ಚ ಸರ್ವಶಃ ।
ಯೇ ಚ ತ್ವಾಭಿಪ್ರಶಂಸೇಯುರ್ನಿಂದೇಯುರಥ ವಾ ಪುನಃ ।
ಸರ್ವಾನ್ ಸುಪರಿಣೇತಾಂಸ್ತಾನ್ ಕಾರಯೇತ ಯುಧಿಷ್ಠಿರ ॥೧೭॥

ಎಲೈ ಯುಧಿಷ್ಠಿರನೇ! ಎಲ್ಲ ಅಮಾತ್ಯರಲ್ಲಿ ಮತ್ತು ಮಧ್ಯಸ್ಥರಲ್ಲಿ ಯಾರು ನಿನ್ನನ್ನು ಪ್ರಶಂಸೆ ಮಾಡುತ್ತಾರೆಯೋ, ಅಥವಾ ನಿಂದಿಸುತ್ತಾರೆಯೋ ಅವರೆಲ್ಲರನ್ನೂ ಸರಿಯಾದ ಮಾರ್ಗದಲ್ಲಿ ಕರೆದುಕೊಂಡು ಹೋಗಬೇಕು.

ಏಕಾಂತೇನ ಹಿ ಸರ್ವೇಷಾಂ ನ ಶಕ್ಯಂ ತಾತ ರೋಚಿತುಮ್ ।
ಮಿತ್ರಾಮಿತ್ರಮಥೋ ಮಧ್ಯಂ ಸರ್ವಭೂತೇಷು ಭಾರತ ॥೧೮॥

ಎಲೈ ಪ್ರೀತಿಪಾತ್ರನೇ! ನಿಯಮೇನ ಎಲ್ಲರನ್ನೂ ಸಂತೋಷಪಡಿಸುವುದು ಸಾಧ್ಯವಿಲ್ಲ. ಎಲೈ ಭಾರತನೇ! ಎಲ್ಲರಿಗೂ ಶತ್ರುಮಿತ್ರ ಉದಾಸೀನರು ಇರುತ್ತಾರೆ.

ಯುಧಿಷ್ಠಿರಃ

ತುಲ್ಯಬಾಹುಬಲಾನಾಂ ಚ ತುಲ್ಯಾನಾಂ ಚ ಗುಣೈರಪಿ ।
ಕಥಂ ಸ್ಯಾದಧಿಕಃ ಕಶ್ಚಿತ್ ಸ ತು ಭುಂಜೀತ ಮಾನವಾನ್ ॥೧೯॥

ಯುಧಿಷ್ಠಿರ – ಸಮಾನವಾದ ಬಾಹುಬಲವನ್ನು, ಸಮಾನವಾದ ಗುಣವನ್ನು

ಹೊಂದಿದವರಲ್ಲಿ ಒಬ್ಬನು ಹೇಗೆ ಅಧಿಕನಾಗಿ ಉಳಿದ ಮಾನವರನ್ನು ಪಾಲಿಸುತ್ತಾನೆ?

ಭೀಷ್ಮಃ

ಯೇ ಚರಾ ಹ್ಯಚರಾನದ್ಯುರದಂಷ್ಟ್ರಾನ್ ದಂಷ್ಟ್ರಿಣಸ್ತಥಾ।
ಆಶೀವಿಷಾ ಇವ ಕ್ರುದ್ಧಾ ಭುಜಗಾ ಭುಜಗಾನಿವ ॥೨೦॥

ಭೀಷ್ಮರು – ಚಲಿಸುವ ಪ್ರಾಣಿಗಳು ಚಲಿಸದಿರುವ ಪ್ರಾಣಿಗಳನ್ನು ತಿನ್ನುತ್ತವೆ. ಕೋರೆದಾಡೆ ಇರುವ ಪ್ರಾಣಿಗಳು ಕೋರೆದಾಡೆ ಇಲ್ಲದಿರುವ ಪ್ರಾಣಿಗಳನ್ನು ತಿನ್ನುತ್ತವೆ. ದೃಷ್ಟಿವಿಷವುಳ್ಳ ಸರ್ಪಗಳು ಸರ್ಪಗಳನ್ನೇ ತಿನ್ನುತ್ತವೆ. (ಅದರಂತೆ ಪ್ರಬಲನಾದವನು ದುರ್ಬಲರನ್ನು ತಿನ್ನುತ್ತಾನೆ/ಪಾಲಿಸುತ್ತಾನೆ).

ಏತೇಭ್ಯಶ್ಚಾಪ್ರಮತ್ತಃ ಸ್ಯಾತ್ ಸದಾ ಯತ್ತೋ ಯುಧಿಷ್ಠಿರ।
ಭಾರುಂಡಸದೃಶಾ ಹ್ಯೇತೇ ನಿಪತಂತಿ ಪ್ರಮಾದ್ಯತಃ ॥೨೧॥

ಎಲೈ ಯುಧಿಷ್ಠಿರನೇ! ಅಂತಹ ಪ್ರಬಲರಾದವರ ವಿಷಯದಲ್ಲಿ ಯಾವಾಗಲೂ ಜಾಗರೂಕನಾಗಿರಬೇಕು. ರಾಜನು ಪ್ರಮಾದವನ್ನು ಮಾಡಿದರೆ ಭೇರುಂಡಪಕ್ಷಿಯಂತೆ ಅವರು ರಾಜನ ಮೇಲೆ ಎರಗುತ್ತಾರೆ.

ಕಚ್ಚಿತ್ ತೇ ವಣಿಜೋ ರಾಷ್ಟ್ರೇ ನೋದ್ವಿಜಂತೇ ಕರಾರ್ದಿತಾಃ।
ಕ್ರೀಣಂತೋ ಬಹು ವಾಲ್ಪೇನ ಕಾಂತಾರಕೃತನಿಶ್ಚಯಾಃ ॥೨೨॥

ನಿನ್ನ ರಾಜ್ಯದಲ್ಲಿ ವರ್ತಕರು ಅಲ್ಪವ್ಯಾಪಾರವನ್ನು ಮಾಡಲಿ ಅಥವಾ ಬಹಳ ವ್ಯಾಪಾರವನ್ನು ಮಾಡಲಿ ನಿನ್ನ ತೆರಿಗೆಗಳಿಂದ ಪೀಡಿತರಾಗಿ ವೈರಾಗ್ಯವನ್ನು ಹೊಂದಿ ಕಾಡಿನಲ್ಲಿ ವಾಸಮಾಡುವುದೇ ಒಳ್ಳೆಯದು ಎಂಬ ನಿಶ್ಚಯವನ್ನು ಹೊಂದುವುದಿಲ್ಲವಷ್ಟೇ?

ಕಚ್ಚಿತ್ ಕೃಷಿಕರಾ ರಾಷ್ಟ್ರಂ ನ ಜಹತ್ಯತಿಪೀಡಿತಾಃ।
ಯೇ ವಹಂತಿ ಧುರಂ ರಾಜ್ಞಾಂ ಸಂಭರಂತೀತರಾನಪಿ ॥೨೩॥

ರಾಜನ ಕಾರ್ಯವನ್ನು ಹೊರುವ ಎಲ್ಲ ಪ್ರಜೆಗಳನ್ನು ಪೋಷಿಸುವ ಕೃಷೀವಲರು ನಿನ್ನ ರಾಜ್ಯದಲ್ಲಿ ಬಹಳ ಪೀಡಿತರಾಗಿ ರಾಜ್ಯತ್ಯಾಗವನ್ನು ಮಾಡಲು ಬಯಸುವುದಿಲ್ಲವಷ್ಟೇ!

ಇತೋ ದತ್ತೇನ ಜೀವಂತಿ ದೇವಾಃ ಪಿತೃಗಣಾಸ್ತಥಾ।
ಮನುಷ್ಯೋರಗರಕ್ಷಾಂಸಿ ವಯಾಂಸಿ ಪಶವಸ್ತಥಾ ॥೨೪॥

ದೇವತೆಗಳು, ಪಿತೃಗಣಗಳು, ಮನುಷ್ಯೋರಗರಾಕ್ಷಸರು, ಪಶುಪಕ್ಷಿಗಳು ಇಲ್ಲಿ ಮಾಡಿದ ದಾನದಿಂದ ಜೀವಿಸುತ್ತಾರೆ.

ಏಷಾ ತೇ ರಾಷ್ಟ್ರವೃತ್ತಿಶ್ಚ ರಾಷ್ಟ್ರಗುಪ್ತಿಶ್ಚ ಭಾರತ।
ಏತಮೇವಾರ್ಥಮಾಶ್ರಿತ್ಯ ಭೂಯೋ ವಕ್ಷ್ಯಾಮಿ ಪಾಂಡವ ॥೨೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕನವತಿತಮೋऽಧ್ಯಾಯಃ ॥೯೧॥

ಎಲೈ ಭಾರತನೇ! ಇದು ನಿನ್ನ ರಾಷ್ಟ್ರವೃತ್ತಿಯ ಮತ್ತು ರಾಷ್ಟ್ರರಕ್ಷಣೆಯ ಕ್ರಮ. ಎಲೈ ಪಾಂಡವನೇ! ಇದೇ ವಿಷಯವನ್ನಾಧರಿಸಿ ನಾನು ಇನ್ನೂ ನಿನಗೆ ಹೇಳುವೆನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೯೧ನೆಯ ಅಧ್ಯಾಯವು ಮುಗಿಯಿತು.

—೦—

೯೨. ತೊಂಬತ್ತೆರಡನೆಯ ಅಧ್ಯಾಯ

ಉಚಥ್ಯಮಾಂಧಾತೃಸಂವಾದಾನುವಾದ

ಭೀಷ್ಮಃ

ಯಾನಂಗಿರಾಃ ಕ್ಷತ್ರಧರ್ಮಾನುಚಥ್ಯೋ ಬ್ರಹ್ಮವಿತ್ತಮಃ।
ಮಾಂಧಾತ್ರೇ ಯೌವನಾಶ್ವಾಯ ಪ್ರೀತಮಾನಭ್ಯಭಾಷತ ॥೧॥

ಸ ಯಥಾನುಶಶಾಸೈನಮುಚಥ್ಯೋ ಬ್ರಹ್ಮವಿತ್ತಮಃ।
ತತ್ ತೇ ಸರ್ವಂ ಪ್ರವಕ್ಷ್ಯಾಮಿ ನಿಖಿಲೇನ ಯುಧಿಷ್ಠಿರ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಅಂಗಿರಸಗೋತ್ರೋತ್ಪನ್ನರಾದ ಬ್ರಹ್ಮ-ಜ್ಞಾನಿಗಳಲ್ಲಿ ಶ್ರೇಷ್ಠರಾದ ಉಚಥ್ಯರು ಯುವನಾಶ್ವನ ಪುತ್ರರಾದ ಮಾಂಧಾತೃವಿಗೆ ಯಾವ ಕ್ಷತ್ರಿಯ ಧರ್ಮಗಳನ್ನು ಪ್ರೀತಿಯಿಂದ ಹೇಳಿದರೋ ಅವರು ಅವನಿಗೆ ಹೇಗೆ ಅನುಶಾಸನವನ್ನು ಮಾಡಿದರೋ ಅದನ್ನು ನಿನಗೆ ಪೂರ್ಣವಾಗಿ ಹೇಳುವೆನು.

ಉಚಥ್ಯಃ

ಧರ್ಮಾಯ ರಾಜಾ ಭವತಿ ನ ಕಾಮಕರಣಾಯ ತು।
ಮಾಂಧಾತರೇವಂ ಜಾನೀಹಿ ರಾಜಾ ಲೋಕಸ್ಯ ರಕ್ಷಿತಾ ॥೩॥

ಉಚಥ್ಯರು – ಎಲೈ ಮಾಂಧಾತನೇ! ರಾಜನು ಧರ್ಮಸಂಪಾದನೆಗಾಗಿ ಇರು-ತ್ತಾನೆ. ಹೊರತು ಕಾಮಭೋಗಕ್ಕಾಗಿ ಅಲ್ಲ. ರಾಜನು ಲೋಕವನ್ನು ರಕ್ಷಿಸುವವನು ಎಂದು ತಿಳಿ.

ರಾಜಾ ಚರತಿ ವೈ ಧರ್ಮಂ ದೇವತ್ವಾಯೈವ ಗಚ್ಛತಿ।
ನ ಚೇದ್ ಧರ್ಮಂ ಸ ಚರತಿ ನರಕಾಯೈವ ಗಚ್ಛತಿ ॥೪॥

ರಾಜನು ಧರ್ಮವನ್ನು ಆಚರಿಸುತ್ತಾನೆ. ಮತ್ತು ಅದರಿಂದ ದೇವತ್ವವನ್ನೇ ಹೊಂದುತ್ತಾನೆ. ಅವನು ಧರ್ಮವನ್ನು ಆಚರಿಸದಿದ್ದರೆ ನರಕವನ್ನೇ ಹೊಂದುತ್ತಾನೆ.

ಧರ್ಮೇ ತಿಷ್ಠಂತಿ ಭೂತಾನಿ ಧರ್ಮೋ ರಾಜನಿ ತಿಷ್ಠತಿ।
ತಂ ರಾಜಾ ಸಾಧು ಯಃ ಶಾಸ್ತಿ ಸ ರಾಜಾ ಪೃಥಿವೀಪತಿಃ ॥೫॥

ಎಲ್ಲ ಪ್ರಜೆಗಳೂ ಧರ್ಮವನ್ನು ಆಶ್ರಯಿಸಿಕೊಂಡಿದ್ದಾರೆ. ಧರ್ಮವು ರಾಜನನ್ನು ಆಶ್ರಯಿಸಿರುತ್ತದೆ. ಯಾವ ರಾಜನು ಆ ಧರ್ಮವನ್ನು ಚೆನ್ನಾಗಿ ಪಾಲಿಸುತ್ತಾನೋ ಅವನೇ ಪೃಥಿವೀಪತಿ.

ರಾಜಾ ಪರಮಧರ್ಮಾತ್ಮಾ ಲಕ್ಷ್ಮೀವಾನ್ ಪಾಪ ಉಚ್ಯತೇ।
ದೇವಾಶ್ಚ ಗರ್ಹಾಂ ಗಚ್ಛಂತಿ ಧರ್ಮೋ ನಾಸ್ತೀತಿ ಚೋಚ್ಯತೇ ॥೬॥

ಆದರೆ ರಾಜನು ಅಧರ್ಮಿಷ್ಠನಾಗಿ ಸಂಪದ್ಯುಕ್ತನಾದರೆ ಅವನನ್ನು ಪಾಪ ಎಂದು ಕರೆಯುತ್ತಾರೆ. ದೇವತೆಗಳು ಅವನನ್ನು ನಿಂದಿಸುತ್ತಾರೆ. ಅವನ ರಾಜ್ಯದಲ್ಲಿ ಧರ್ಮ-ವಿಲ್ಲವೆಂದು ಹೇಳಲ್ಪಡುತ್ತದೆ.

ಸ್ವಧರ್ಮೇ ವರ್ತಮಾನಾನಾಮರ್ಥಸಿದ್ಧಿಃ ಪ್ರದೃಶ್ಯತೇ।
ತದೇವ ಮಂಗಲಂ ಸರ್ವಂ ಲೋಕಃ ಸಮನುವರ್ತತೇ ॥೭॥

ಸ್ವಧರ್ಮದಲ್ಲಿ ಇರುವವರಿಗೆ ಲೋಕದಲ್ಲಿ ಅರ್ಥಸಿದ್ಧಿಯು ಕಂಡು ಬರುತ್ತದೆ. ಅದೇ ಮಂಗಳವಾದುದು. ಅದನ್ನು ಎಲ್ಲ ಲೋಕವೂ ಅನುಸರಿಸುತ್ತದೆ.

ಉಚ್ಛಿದ್ಯತೇ ಧರ್ಮವೃತ್ತಮಧರ್ಮೋ ವರ್ತತೇ ಮಹಾನ್ ।
ಭಯಮಾಹುರ್ದಿವಾರಾತ್ರಂ ಯದಾ ಪಾಪೋ ನ ವಾರ್ಯತೇ ॥೮॥

ಪಾಪವನ್ನು ತಡೆಯದಿದ್ದರೆ ಧರ್ಮದ ನಡತೆಯು ನಾಶವನ್ನು ಹೊಂದುತ್ತದೆ. ದೊಡ್ಡ ಅಧರ್ಮವುಂಟಾಗುತ್ತದೆ. ಹಗಲೂ ರಾತ್ರಿಯೂ ಭಯವುಂಟಾಗುತ್ತದೆ ಎಂದು ಹೇಳುತ್ತಾರೆ.

ಮಮೇದಮಿತಿ ನೇದಂ ಚ ಸಾಧೂನಾಂ ತಾತ ಧರ್ಮತಃ।
ನೈವ ವ್ಯವಸ್ಥಾ ಭವತಿ ಯದಾ ಪಾಪೋ ನ ವಾರ್ಯತೇ ॥೯॥

ಪಾಪವನ್ನು ತಡೆಯದಿದ್ದಾಗ 'ಇದು ನನ್ನದು ಇದು ನನ್ನದಲ್ಲ' ಎಂಬ ಸಜ್ಜನರ ಧರ್ಮಮೂಲವಾದ ವ್ಯವಸ್ಥೆಯು ಇರುವುದಿಲ್ಲ.

ನೈವ ಭಾರ್ಯಾ ನ ಪಶವೋ ನ ಕ್ಷೇತ್ರಂ ನ ನಿವೇಶನಮ್ ।
ಸಂದೃಶ್ಯೇತ ಮನುಷ್ಯಾಣಾಂ ಯದಾ ಪಾಪಬಲಂ ಭವೇತ್ ॥೧೦॥

ಪಾಪವು ಬಲಿಷ್ಠವಾದರೆ ಮನುಷ್ಯರಿಗೆ ಪತ್ನಿಯಾಗಲೀ, ಪಶುಗಳಾಗಲೀ, ಕ್ಷೇತ್ರವಾಗಲೀ, ನಿವೇಶನವಾಗಲೀ ಯಾವುದೂ ಕಂಡುಬರುವುದಿಲ್ಲ.

ದೇವಾ ಪೂಜಾಂ ನ ಜಾನಂತಿ ನ ಸ್ವಧಾಂ ಪಿತರಸ್ತಥಾ ।
ನ ಪೂಜ್ಯಂತೇ ಹ್ಯತಿಥಯೋ ಯದಾ ಪಾಪೋ ನ ವಾರ್ಯತೇ ॥೧೧॥

ಪಾಪಕರ್ಮವನ್ನು ತಡೆಯದಿದ್ದರೆ ದೇವತೆಗಳಿಗೆ ಪೂಜೆಯು ಸಲ್ಲುವುದಿಲ್ಲ. ಪಿತೃಗಳಿಗೆ ಸ್ವಧಾಕಾರವಿಲ್ಲ. ಅತಿಥಿಗಳು ಪೂಜಿಸಲ್ಪಡುವುದಿಲ್ಲ.

ನ ವೇದಾನನುವರ್ತಂತಿ ವ್ರತವಂತೋ ದ್ವಿಜಾತಯಃ।
ನ ಯಜ್ಞಾಂಸ್ತನ್ವತೇ ವಿಪ್ರಾ ಯದಾ ಪಾಪೋ ನ ವಾರ್ಯತೇ ॥೧೨॥

ಪಾಪಕರ್ಮವನ್ನು ತಡೆಯದಿದ್ದರೆ ವ್ರತನಿಷ್ಠರಾದ ಬ್ರಾಹ್ಮಣರು ವೇದಾಧ್ಯಯನವನ್ನು ಮಾಡುವುದಿಲ್ಲ. ಯಜ್ಞಗಳನ್ನು ಮಾಡುವುದಿಲ್ಲ.

ವೃದ್ಧಾನಾಮಿವ ಸತ್ವಾನಾಂ ಮನೋ ಭವತಿ ವಿಹ್ವಲಮ್।
ಮನುಷ್ಯಾಣಾಂ ಮಹಾರಾಜ ಯದಾ ಪಾಪೋ ನ ವಾರ್ಯತೇ ॥೧೩॥

ಎಲೈ ಮಹಾರಾಜನೇ! ಪಾಪಕರ್ಮವನ್ನು ತಡೆಯದಿದ್ದರೆ ಮನುಷ್ಯನ ಮನಸ್ಸು ಮುದಿಪ್ರಾಣಿಗಳ (ಮುದುಕರ) ಮನಸ್ಸಿನಂತೆ ಭಯಕ್ಕೆ ಒಳಗಾಗುತ್ತದೆ.

ಉಭೌ ಲೋಕಾವಭಿಪ್ರೇಕ್ಷ್ಯ ರಾಜಾನಮೃಷಯಃ ಸ್ವಯಮ್।
ಮುನಯೋಽಥ ಮಹದ್ಭೂತಮಯಂ ಧರ್ಮೋ ಭವಿಷ್ಯತಿ ॥೧೪॥

ಋಷಿಗಳು ಎರಡು ಲೋಕಗಳ ಹಿತವನ್ನು ಗಮನಿಸಿ, ರಾಜನೆಂಬ ಮಹದ್ಭೂತವು ಧಾರಕನಾಗುತ್ತಾನೆಂದು ತಿಳಿದು ರಾಜನನ್ನು ಸೃಷ್ಟಿಸಿದರು.

ಯಸ್ಮಿನ್ ಧರ್ಮೋ ವಿರಾಜೇತ ತಂ ರಾಜಾನಂ ಪ್ರಚಕ್ಷತೇ।
ಯಸ್ಮಿನ್ ವಿಲೀಯತೇ ಧರ್ಮಸ್ತಂ ದೇವಾ ವೃಷಲಂ ವಿದುಃ ॥೧೫॥

ಯಾವನಲ್ಲಿ ಧರ್ಮವು ವಿರಾಜಿಸುತ್ತದೆಯೋ ಅವನನ್ನು ರಾಜನೆಂದು ಕರೆಯುತ್ತಾರೆ. ಯಾವನಿಂದ ಧರ್ಮವು ನಾಶ ಹೊಂದುತ್ತದೆಯೋ ಅವನನ್ನು ದೇವತೆಗಳು ವೃಷಲನೆಂದು ತಿಳಿಯುತ್ತಾರೆ.

ವೃಷೋ ಹಿ ಭಗವಾನ್ ಧರ್ಮೋ ಯಸ್ತಸ್ಯ ಕುರುತೇ ಹ್ಯಲಮ್।
ವೃಷಲಂ ತಂ ವಿದುರ್ದೇವಾಸ್ತಸ್ಮಾದ್ ಧರ್ಮಂ ನ ಲೋಪಯೇತ್ ॥೧೬॥

ವೃಷ ಎಂದರೆ ಪೂಜ್ಯವಾದ ಧರ್ಮ. ಅದಕ್ಕೆ ಅಲಂ ಎಂದರೆ ಸಮಾಪ್ತಿಯನ್ನು ಯಾವನು ಮಾಡುತ್ತಾನೆಯೋ ಅವನನ್ನು ದೇವತೆಗಳು ವೃಷಲ ಎಂದು ಕರೆಯುತ್ತಾರೆ. ಆದ್ದರಿಂದ ಧರ್ಮಲೋಪವನ್ನು ಮಾಡಬಾರದು.

ಧರ್ಮೇ ವರ್ಧತಿ ವರ್ಧಂತಿ ಸರ್ವಭೂತಾನಿ ಸರ್ವದಾ।
ತಸ್ಮಿನ್ ಹ್ರಸತಿ ಹೀಯಂತೇ ತಸ್ಮಾದ್ ಧರ್ಮಂ ಪ್ರವರ್ಧಯೇತ್ ॥೧೭॥

ಧರ್ಮವು ಅಭಿವೃದ್ಧಿಯನ್ನು ಹೊಂದಿದರೆ ಎಲ್ಲ ಪ್ರಾಣಿಗಳೂ ಯಾವಾಗಲೂ ಅಭಿವೃದ್ಧಿಯನ್ನು ಹೊಂದುತ್ತಾರೆ. ಧರ್ಮವು ಹ್ರಾಸಗೊಂಡರೆ ಎಲ್ಲರೂ ಅವನತಿಯನ್ನು ಹೊಂದುತ್ತಾರೆ. ಆದ್ದರಿಂದ ಧರ್ಮವನ್ನು ಅಭಿವೃದ್ಧಿಪಡಿಸಬೇಕು.

ಧನಾನಿ ಸ್ತೌತಿ ಧರ್ಮಸ್ತು ಧಾರಣಾದ್ ವೇತಿ ನಿಶ್ಚಯಃ।
ಅಕಾರ್ಯಾಣಾಂ ಮನುಷ್ಯೇಂದ್ರ ಸ ಸೀಮಾಂತಕರಃ ಸ್ಮೃತಃ ॥೧೮॥

ಧರ್ಮವು ಜಗತ್ತನ್ನು ಧರಿಸುವ ಕಾರಣದಿಂದ ಧನವನ್ನು ಸುರಿಸುತ್ತದೆ ಎಂಬುದು ನಿಶ್ಚಯವಾದುದು. ಎಲೈ ಮನುಷ್ಯೇಂದ್ರನೇ! ಧರ್ಮವು ಅಕಾರ್ಯಗಳಿಗೆ ಒಂದು ಎಲ್ಲೆಯನ್ನು ಹಾಕುವುದು ಎಂದು ಹೇಳಲ್ಪಡುತ್ತದೆ.

ಪ್ರಭವಾರ್ಥಂ ಹಿ ಭೂತಾನಾಂ ಧರ್ಮಃ ಸೃಷ್ಟಃ ಸ್ವಯಂಭುವಾ।
ತಸ್ಮಾತ್ ಪ್ರವರ್ಧಯೇದ್ ಧರ್ಮಂ ಪ್ರಜಾನುಗ್ರಹಕಾರಣಾತ್ ॥೧೯॥

ಬ್ರಹ್ಮದೇವರು ಪ್ರಜೆಗಳ ಏಳಿಗೆಗಾಗಿ ಧರ್ಮವನ್ನು ಸೃಷ್ಟಿಮಾಡಿದರು. ಆದ್ದರಿಂದ ಪ್ರಜೆಗಳಿಗೆ ಅನುಗ್ರಹ ಮಾಡುವ ದೃಷ್ಟಿಯಿಂದ ಧರ್ಮವನ್ನು ಬೆಳೆಸಬೇಕು.

ತಸ್ಮಾದ್ಧಿ ರಾಜಶಾರ್ದೂಲ ಧರ್ಮಃ ಶ್ರೇಷ್ಠ ಇತಿ ಸ್ಮೃತಃ।
ಸ ರಾಜಾ ಯಃ ಪ್ರಜಾಃ ಶಾಸ್ತಿ ಸಾಧುಕೃತ್ ಪುರುಷರ್ಷಭಃ ॥೨೦॥

ಎಲೈ ರಾಜಶಾರ್ದೂಲನೇ! ಆ ಕಾರಣದಿಂದ ಧರ್ಮವು ಶ್ರೇಷ್ಠವೆಂದು ಹೇಳಲ್ಪಡುತ್ತದೆ. ಯಾವನು ಪ್ರಜೆಗಳನ್ನು ಅನುಶಾಸನಮಾಡಿ ಸಾಧುಕರ್ಮವನ್ನು ಮಾಡುತ್ತಾನೆಯೋ ಅಂತಹ ಪುರುಷಶ್ರೇಷ್ಠನೇ ರಾಜನಾಗುವನು.

ಪಾಪಕರ್ಮವನ್ನು ತಡೆಯದಿದ್ದರೆ ದೇವತೆಗಳಿಗೆ ಪೂಜೆಯು ಸಲ್ಲುವುದಿಲ್ಲ. ಪಿತೃಗಳಿಗೆ ಸ್ವಧಾಕಾರವಿಲ್ಲ. ಅತಿಥಿಗಳು ಪೂಜಿಸಲ್ಪಡುವುದಿಲ್ಲ.

ನ ವೇದಾನನುವರ್ತಂತಿ ವ್ರತವಂತೋ ದ್ವಿಜಾತಯಃ।
ನ ಯಜ್ಞಾಂಸ್ತನ್ವತೇ ವಿಪ್ರಾ ಯದಾ ಪಾಪೋ ನ ವಾರ್ಯತೇ ॥೧೨॥

ಪಾಪಕರ್ಮವನ್ನು ತಡೆಯದಿದ್ದರೆ ವ್ರತನಿಷ್ಠರಾದ ಬ್ರಾಹ್ಮಣರು ವೇದಾಧ್ಯಯನವನ್ನು ಮಾಡುವುದಿಲ್ಲ. ಯಜ್ಞಗಳನ್ನು ಮಾಡುವುದಿಲ್ಲ.

ವೃದ್ಧಾನಾಮಿವ ಸತ್ತ್ವಾನಾಂ ಮನೋ ಭವತಿ ವಿಹ್ವಲಮ್ ।
ಮನುಷ್ಯಾಣಾಂ ಮಹಾರಾಜ ಯದಾ ಪಾಪೋ ನ ವಾರ್ಯತೇ ॥೧೩॥

ಎಲೈ ಮಹಾರಾಜನೇ! ಪಾಪಕರ್ಮವನ್ನು ತಡೆಯದಿದ್ದರೆ ಮನುಷ್ಯನ ಮನಸ್ಸು ಮುದಿಪ್ರಾಣಿಗಳ (ಮುದುಕರ) ಮನಸ್ಸಿನಂತೆ ಭಯಕ್ಕೆ ಒಳಗಾಗುತ್ತದೆ.

ಉಭೌ ಲೋಕಾವಭಿಪ್ರೇಕ್ಷ್ಯ ರಾಜಾನಮೃಷಯಃ ಸ್ವಯಮ್ ।
ಮುನಯೋಽಥ ಮಹದ್ಭೂತಮಯಂ ಧರ್ಮೋ ಭವಿಷ್ಯತಿ ॥೧೪॥

ಋಷಿಗಳು ಎರಡು ಲೋಕಗಳ ಹಿತವನ್ನು ಗಮನಿಸಿ, ರಾಜನೆಂಬ ಮಹದ್-ಭೂತವು ಧಾರಕನಾಗುತ್ತಾನೆಂದು ತಿಳಿದು ರಾಜನನ್ನು ಸೃಷ್ಟಿಸಿದರು.

ಯಸ್ಮಿನ್ ಧರ್ಮೋ ವಿರಾಜೇತ ತಂ ರಾಜಾನಂ ಪ್ರಚಕ್ಷತೇ।
ಯಸ್ಮಿನ್ ವಿಲೀಯತೇ ಧರ್ಮಸ್ತಂ ದೇವಾ ವೃಷಲಂ ವಿದುಃ ॥೧೫॥

ಯಾವನಲ್ಲಿ ಧರ್ಮವು ವಿರಾಜಿಸುತ್ತದೆಯೋ ಅವನನ್ನು ರಾಜನೆಂದು ಕರೆಯುತ್ತಾರೆ. ಯಾವನಿಂದ ಧರ್ಮವು ನಾಶ ಹೊಂದುತ್ತದೆಯೋ ಅವನನ್ನು ದೇವತೆಗಳು ವೃಷಲನೆಂದು ತಿಳಿಯುತ್ತಾರೆ.

ವೃಷೋ ಹಿ ಭಗವಾನ್ ಧರ್ಮೋ ಯಸ್ತಸ್ಯ ಕುರುತೇ ಹ್ಯಲಮ್ ।
ವೃಷಲಂ ತಂ ವಿದುರ್ದೇವಾಸ್ತಸ್ಮಾದ್ ಧರ್ಮಂ ನ ಲೋಪಯೇತ್ ॥೧೬॥

ವೃಷ ಎಂದರೆ ಪೂಜ್ಯವಾದ ಧರ್ಮ. ಅದಕ್ಕೆ ಅಲಂ ಎಂದರೆ ಸಮಾಪ್ತಿಯನ್ನು ಯಾವನು ಮಾಡುತ್ತಾನೆಯೋ ಅವನನ್ನು ದೇವತೆಗಳು ವೃಷಲ ಎಂದು ಕರೆಯುತ್ತಾರೆ. ಆದ್ದರಿಂದ ಧರ್ಮಲೋಪವನ್ನು ಮಾಡಬಾರದು.

ಧರ್ಮೇ ವರ್ಧತಿ ವರ್ಧಂತಿ ಸರ್ವಭೂತಾನಿ ಸರ್ವದಾ।
ತಸ್ಮಿನ್ ಹ್ರಸತಿ ಹೀಯಂತೇ ತಸ್ಮಾದ್ ಧರ್ಮಂ ಪ್ರವರ್ಧಯೇತ್ ॥೧೭॥

ಧರ್ಮವು ಅಭಿವೃದ್ಧಿಯನ್ನು ಹೊಂದಿದರೆ ಎಲ್ಲ ಪ್ರಾಣಿಗಳೂ ಯಾವಾಗಲೂ ಅಭಿವೃದ್ಧಿಯನ್ನು ಹೊಂದುತ್ತಾರೆ. ಧರ್ಮವು ಹ್ರಾಸಗೊಂಡರೆ ಎಲ್ಲರೂ ಅವನತಿಯನ್ನು ಹೊಂದುತ್ತಾರೆ. ಆದ್ದರಿಂದ ಧರ್ಮವನ್ನು ಅಭಿವೃದ್ಧಿಪಡಿಸಬೇಕು.

ಧನಾನಿ ಸ್ತೌತಿ ಧರ್ಮಸ್ತು ಧಾರಣಾದ್ ವೇತಿ ನಿಶ್ಚಯಃ।
ಅಕಾರ್ಯಾಣಾಂ ಮನುಷ್ಯೇಂದ್ರ ಸ ಸೀಮಾಂತಕರಃ ಸ್ಮೃತಃ ॥೧೮॥

ಧರ್ಮವು ಜಗತ್ತನ್ನು ಧರಿಸುವ ಕಾರಣದಿಂದ ಧನವನ್ನು ಸುರಿಸುತ್ತದೆ ಎಂಬುದು ನಿಶ್ಚಯವಾದುದು. ಎಲೈ ಮನುಷ್ಯೇಂದ್ರನೇ! ಧರ್ಮವು ಅಕಾರ್ಯಗಳಿಗೆ ಒಂದು ಎಲ್ಲೆಯನ್ನು ಹಾಕುವುದು ಎಂದು ಹೇಳಲ್ಪಡುತ್ತದೆ.

ಪ್ರಭವಾರ್ಥಂ ಹಿ ಭೂತಾನಾಂ ಧರ್ಮಃ ಸೃಷ್ಟಃ ಸ್ವಯಂಭುವಾ।
ತಸ್ಮಾತ್ ಪ್ರವರ್ಧಯೇದ್ ಧರ್ಮಂ ಪ್ರಜಾನುಗ್ರಹಕಾರಣಾತ್ ॥೧೯॥

ಬ್ರಹ್ಮದೇವರು ಪ್ರಜೆಗಳ ಏಳಿಗೆಗಾಗಿ ಧರ್ಮವನ್ನು ಸೃಷ್ಟಿಮಾಡಿದರು. ಆದ್ದರಿಂದ ಪ್ರಜೆಗಳಿಗೆ ಅನುಗ್ರಹ ಮಾಡುವ ದೃಷ್ಟಿಯಿಂದ ಧರ್ಮವನ್ನು ಬೆಳೆಸಬೇಕು.

ತಸ್ಮಾದ್ಧಿ ರಾಜಶಾರ್ದೂಲ ಧರ್ಮಃ ಶ್ರೇಷ್ಠ ಇತಿ ಸ್ಮೃತಃ।
ಸ ರಾಜಾ ಯಃ ಪ್ರಜಾಃ ಶಾಸ್ತಿ ಸಾಧುಕೃತ್ ಪುರುಷರ್ಷಭಃ ॥೨೦॥

ಎಲೈ ರಾಜಶಾರ್ದೂಲನೇ! ಆ ಕಾರಣದಿಂದ ಧರ್ಮವು ಶ್ರೇಷ್ಠವೆಂದು ಹೇಳಲ್ಪಡುತ್ತದೆ. ಯಾವನು ಪ್ರಜೆಗಳನ್ನು ಅನುಶಾಸನಮಾಡಿ ಸಾಧುಕರ್ಮವನ್ನು ಮಾಡುತ್ತಾನೆಯೋ ಅಂತಹ ಪುರುಷಶ್ರೇಷ್ಠನೇ ರಾಜನಾಗುವನು.

ಕಾಮಕ್ರೋಧಾವನಾದೃತ್ಯ ಧರ್ಮಮೇವಾನುಪಾಲಯೇತ್ ।
ಧರ್ಮಃ ಶ್ರೇಯಸ್ಕರತಮೋ ರಾಜ್ಞಾಂ ಭರತಸತ್ತಮ ॥೨೧॥

ಎಲೈ ಭರತಸತ್ತಮನೇ! ಕಾಮಕ್ರೋಧಗಳನ್ನು ದೂರಮಾಡಿ, ಧರ್ಮವನ್ನೇ ಅನುಸರಿಸಬೇಕು. ರಾಜರಿಗೆ ಧರ್ಮವು ಅತ್ಯಂತ ಶ್ರೇಯಸ್ಕರವಾದುದು.

ಧರ್ಮಸ್ಯ ಬ್ರಾಹ್ಮಣಾ ಯೋನಿಸ್ತಸ್ಮಾತ್ ತಾನ್ ಪೂಜಯೇತ್ ಸದಾ ।
ಬ್ರಾಹ್ಮಣಾನಾಂ ಚ ಮಾಂಧಾತಃ ಕಾಮಾನ್ ಕುರ್ಯಾದಮತ್ಸರೀ ॥೨೨॥

ಬ್ರಾಹ್ಮಣರು ಧರ್ಮಕ್ಕೆ ಮೂಲರಾದವರು. ಆದ್ದರಿಂದ ಬ್ರಾಹ್ಮಣರನ್ನು ಯಾವಾಗಲೂ ಪೂಜಿಸಬೇಕು. ಎಲೈ ಮಾಂಧಾತೃವೇ! ಬ್ರಾಹ್ಮಣರ ಆಸೆಗಳನ್ನು ಮಾತ್ಸರ್ಯವಿಲ್ಲದೇ ಪೂರೈಸಬೇಕು.

ತೇಷಾಂ ಹ್ಯಕಾಮಕರಣಾದ್ ರಾಜ್ಞಃ ಸಂಜಾಯತೇ ಭಯಮ್ ।
ಮಿತ್ರಾಣಿ ಚ ನ ವರ್ಧಂತೇ ತಥಾಮಿತ್ರೀಭವಂತ್ಯಪಿ ॥೨೩॥

ಅವರ ಆಸೆಯನ್ನು ಈಡೇರಿಸದಿರುವುದರಿಂದ ರಾಜನಿಗೆ ಭಯವುಂಟಾಗುತ್ತದೆ. ಮಿತ್ರರು ಬೆಳೆಯುವುದಿಲ್ಲ; ಮತ್ತು ಮಿತ್ರರು ಶತ್ರುಗಳಾಗುತ್ತಾರೆ.

ಬ್ರಾಹ್ಮಣಾನ್ ವೈ ತದಾಸೂಯಾದ್ ಯದಾ ವೈರೋಚನೋ ಬಲಿಃ ।
ಅಥಾಸ್ಮಾಚ್ಛ್ರೀರಪಾಕ್ರಾಮದ್ ಯಾऽಸ್ಮಿನ್ನಾಸೀತ್ ಪ್ರತಾಪಿನೀ ॥೨೪॥

ವಿರೋಚನನ ಪುತ್ರನಾದ ಬಲಿಯು ಬ್ರಾಹ್ಮಣರನ್ನು ನೋಡಿ ಅಸೂಯೆ-ಪಟ್ಟಾಗ ಶತ್ರುಗಳಿಗೆ ತಾಪವನ್ನುಂಟುಮಾಡುವ ಅವನ ಸಂಪತ್ತು ಅವನಿಂದ ಹೊರಟುಹೋಯಿತು.

ತತಸ್ತಸ್ಮಾದಪಾಕ್ರಮ್ಯ ಸಾऽಗಚ್ಛದ್ ಪಾಕಶಾಸನಮ್ ।
ಅಥ ಸೋऽನ್ವತಪತ್ ಪಶ್ಚಾಚ್ಛ್ರಿಯಂ ದೃಷ್ಟ್ವಾ ಪುರಂದರೇ ॥೨೫॥

ಅವನನ್ನು ತ್ಯಜಿಸಿದ ಸಂಪತ್ತು ಪಾಕಶಾಸನನಾದ ಇಂದ್ರನನ್ನು ಸೇರಿತು. ಆಗ ಪುರಂದರನಾದ ಇಂದ್ರನಲ್ಲಿ ಸಂಪತ್ತನ್ನು ನೋಡಿದ ಬಲಿಯು ಪಶ್ಚಾತ್ತಾಪಪಟ್ಟನು.

ಏತತ್ ಫಲಮಸೂಯಾಯಾ ಅಭಿಮಾನಸ್ಯ ಚಾಭಿಭೋ।
ತಸ್ಮಾದ್ ಬುಧ್ಯಸ್ವಮಾಂಧಾತರ್ಮಾ ತ್ವಾ ಜಹ್ಯಾತ್ ಪ್ರತಾಪಿನೀ ॥೨೬॥

ಎಲೈ ಶತ್ರುಗಳನ್ನು ಸೋಲಿಸುವವನೇ! ಇದು ಅಸೂಯೆ ಮತ್ತು ಅಹಂಕಾರದ ಫಲ. ಆದ್ದರಿಂದ ತಿಳಿದುಕೋ! ಎಲೈ ಮಾಂಧಾತೃವೇ! ಶತ್ರುಗಳಿಗೆ ತಾಪವನ್ನು ಕೊಡುವ ನಿನ್ನ ಸಂಪತ್ತು ನಿನ್ನನ್ನು ತ್ಯಜಿಸದಿರಲಿ.

ದರ್ಪೋ ನಾಮ ಶ್ರಿಯಃ ಪುತ್ರೋ ಜಜ್ಞೇಽಧರ್ಮಾದಿತಿ ಶ್ರುತಿಃ।
ತೇನ ದೇವಾಸುರಾ ರಾಜನ್ ನೀತಾಃ ಸುಬಹುಶೋ ವಶಮ್ ॥೨೭॥

'ದರ್ಪ ಎಂಬುದು ಸಂಪತ್ತಿನ ಪುತ್ರನಾಗಿ ಅಧರ್ಮದಿಂದ ಜನಿಸಿತು' ಎಂದು ನಾವು ಕೇಳಿದ್ದೇವೆ. ಎಲೈ ರಾಜನೇ! ದೇವತೆಗಳು ಮತ್ತು ಅಸುರರು ಅನೇಕಬಾರಿ ಆ ದರ್ಪದ ವಶರಾಗಿದ್ದಾರೆ.

ರಾಜರ್ಷಯಶ್ಚ ಬಹವಸ್ತಸ್ಮಾದ್ ಬುಧ್ಯಸ್ವ ಪಾರ್ಥಿವ।
ರಾಜಾ ಭವತಿ ತಂ ಜಿತ್ವಾ ದಾಸಸ್ತೇನ ಪರಾಜಿತಃ ॥೨೮॥

ಅನೇಕ ರಾಜರ್ಷಿಗಳು ದರ್ಪದ ವಶವಾಗಿದ್ದಾರೆ. ಆದ್ದರಿಂದ ಎಲೈ ರಾಜನೇ! ಆ ದರ್ಪವನ್ನು ಗೆದ್ದವನು ರಾಜನಾಗುತ್ತಾನೆ. ದರ್ಪಕ್ಕೆ ಸೋತವನು ದಾಸನಾಗುತ್ತಾನೆ.

ಸ ಯಥಾ ದರ್ಪಸಹಿತಮಧರ್ಮಂ ನಾನುಸೇವಸೇ।
ತಥಾ ವರ್ತಸ್ವಮಾಂಧಾತಶ್ಚಿರಂ ಚೇತ್ ಸ್ಥಾತುಮಿಚ್ಛಸಿ ॥೨೯॥

ಎಲೈ ಮಾಂಧಾತೃವೇ! ನೀನು ಬಹುಕಾಲ ರಾಜ್ಯವನ್ನು ಆಳಲು ಬಯಿಸಿದರೆ ದರ್ಪಸಹಿತವಾದ ಅಧರ್ಮವನ್ನು ಸೇವಿಸದಂತೆ ನಡೆದುಕೋ.

ಮತ್ತಾತ್ ಪ್ರಮತ್ತಾತ್ ಪೌಗಂಡಾದುನ್ಮತ್ತಾಚ್ಚ ವಿಶೇಷತಃ।
ಕದರ್ಯಾಶಾದುದಾವರ್ತಾದಹಿತಾನಾಂ ಚ ಸೇವನಾತ್ ॥೩೦॥

ನಿಗೃಹೀತಾದಮಾತ್ಯಾಚ್ಚ ಸ್ತ್ರೀಭ್ಯಶ್ಚೈವ ವಿಶೇಷತಃ।
ಪರ್ವತಾದ್ ವಿಷಮಾದ್ ದುರ್ಗಾದ್ಗಜಿನೋಽಶ್ವಾತ್ ಸರೀಸೃಪಾತ್॥೩೧॥

ಏತೇಭ್ಯೋ ನಿತ್ಯಯತ್ತಃ ಸ್ಯಾನ್ನಕ್ತಂಚರ್ಯಾಂ ಚ ವರ್ಜಯೇತ್।
ಅತ್ಯಾಯಂ ಚಾತಿಮಾನಂ ಚ ದಂಭಂ ಕ್ರೋಧಂ ಚ ವರ್ಜಯೇತ್ ॥೩೨॥

ಪಾನಮತ್ತರು, ಹುಚ್ಚರು, ಅಂಗವಿಕಲರು, ಪ್ರಮಾದಕ್ಕೆ ಒಳಗಾಗುವವರು, ದುರ್ಜನರ ಸಹವಾಸ, ನೀರಿನ ಸುಳಿಗಳು, ಅಹಿತರ ಸೇವೆ, ಕಾರಾಗೃಹವಾಸವನ್ನು ಅನುಭವಿಸಿದವರು, ಅಮಾತ್ಯರು, ವಿಶೇಷವಾಗಿ ಸ್ತ್ರೀಯರು, ಪರ್ವತಗಳು, ವಿಷಮವಾದ ದುರ್ಗಗಳು, ಗಜಗಳು, ಅಶ್ವಗಳು, ಸರ್ಪಗಳು – ಇವುಗಳ ವಿಷಯದಲ್ಲಿ ನಿತ್ಯವೂ ಜಾಗರೂಕನಾಗಿರಬೇಕು. ರಾತ್ರಿಯ ಸಂಚಾರವನ್ನು ವರ್ಜಿಸಬೇಕು. ಬಹಳ ಆದಾಯವನ್ನು, ಬಹಳ ಅಹಂಕಾರವನ್ನು, ಡಂಭವನ್ನು ಮತ್ತು ಕ್ರೋಧವನ್ನು ವರ್ಜಿಸಬೇಕು.

ಅವಿಜ್ಞಾತಾಸು ಚ ಸ್ತ್ರೀಷು ಕ್ಲೀಬಾಸು ಸ್ವೈರಿಣೀಷು ಚ।
ಪರಭಾರ್ಯಾಸು ಕನ್ಯಾಸು ನಾಚರೇನ್ಮೈಥುನಂ ನೃಪಃ ॥೩೩॥

ಅಪರಿಚಿತರಾದ ಸ್ತ್ರೀಯರು, ನಪುಂಸಕರು, ವೇಶ್ಯೆಯರು, ಪರಪತ್ನಿಯರು, ಕನ್ಯೆಯರು ಇವರ ಜೊತೆಯಲ್ಲಿ ರಾಜನು ಮೈಥುನವನ್ನು ಮಾಡಬಾರದು.

ಕುಲೇಷು ಪಾಪರಕ್ಷಾಂಸಿ ಜಾಯಂತೇ ವರ್ಣಸಂಕರಾತ್।
ಅಪುಮಾಂಸೋಽಂಗಹೀನಾಶ್ಚ ಸ್ಥೂಲಜಿಹ್ವಾವಿಚೇತಸಃ ॥೩೪॥

ಹಾಗೆ ಮಾಡಿದರೆ ವರ್ಣಸಾಂಕರ್ಯದಿಂದ ಪಾಪಿಗಳಾದ ರಾಕ್ಷಸರು, ನಪುಂಸಕರು, ಅಂಗಹೀನರು, ಸ್ಥೂಲಜಿಹ್ವೆಯುಳ್ಳವರು, ಬುದ್ಧಿಮಂದರು ಜನಿಸುತ್ತಾರೆ.

ಏತೇ ಚಾನ್ಯೇ ಚ ಜಾಯಂತೇ ಯದಾ ರಾಜಾ ಪ್ರಮಾದ್ಯತಿ।
ತಸ್ಮಾದ್ ರಾಜ್ಞಾವಿಶೇಷೇಣ ವರ್ತಿತವ್ಯಂ ಪ್ರಜಾಹಿತೇ ॥೩೫॥

ರಾಜನು ಪ್ರಮಾದವನ್ನು ಮಾಡಿದರೆ ಇಂತಹವರು ಮತ್ತು ಇಂತಹ ಅನೇಕರು ಜನಿಸುತ್ತಾರೆ. ಆದ್ದರಿಂದ ರಾಜನು ವಿಶೇಷವಾಗಿ ಪ್ರಜೆಗಳ ಹಿತದಲ್ಲಿ ಆಸಕ್ತನಾಗಿರಬೇಕು.

ಕ್ಷತ್ರಿಯಸ್ಯ ಪ್ರಮತ್ತಸ್ಯ ದೋಷಃ ಸಂಜಾಯತೇ ಮಹಾನ್ ।
ಅಧರ್ಮಾಃ ಸಂಪ್ರವರ್ತಂತೇ ಪ್ರಜಾಸಂಕರಕಾರಕಾಃ ॥೩೬॥

ರಾಜನು ಪ್ರಮಾದಕ್ಕೆ ಒಳಗಾದರೆ ದೊಡ್ಡ ದೋಷವುಂಟಾಗುತ್ತದೆ. ಪ್ರಜೆಗಳಲ್ಲಿ ಸಾಂಕರ್ಯವನ್ನುಂಟುಮಾಡುವ ಅಧರ್ಮಗಳು ಬೆಳೆಯುತ್ತವೆ.

ಅಶೀತೇ ವಿದ್ಯತೇ ಶೀತಂ ಶೀತೇ ಶೀತಂ ನ ವಿದ್ಯತೇ ।
ಅವೃಷ್ಟಿರತಿವೃಷ್ಟಿಶ್ಚ ವ್ಯಾಧಿಶ್ಚಾವಿಶತಿ ಪ್ರಜಾಃ ॥೩೭॥

ಉಷ್ಣಕಾಲದಲ್ಲಿ ಶೀತವುಂಟಾಗುತ್ತದೆ. ಶೀತಕಾಲದಲ್ಲಿ ಶೀತವುಂಟಾಗುವುದಿಲ್ಲ. ಅವೃಷ್ಟಿ, ಅತಿವೃಷ್ಟಿ, ವ್ಯಾಧಿಗಳು ಇವುಗಳು ಪ್ರಜೆಗಳನ್ನು ಆವರಿಸುತ್ತವೆ.

ನಕ್ಷತ್ರಾಣ್ಯುಪತಿಷ್ಠಂತಿ ಗ್ರಹಾ ಘೋರಾಸ್ತಥಾ ಗತೇ ।
ಉತ್ಪಾತಾಶ್ಚಾತ್ರ ದೃಶ್ಯಂತೇ ಬಹವೋ ರಾಜನಾಶನಾಃ ॥೩೮॥

ನಕ್ಷತ್ರಗಳು ಎದುರಾಗಿ ನಿಲ್ಲುತ್ತವೆ. ಗ್ರಹಗಳು ತಮ್ಮ ಗತಿಯಲ್ಲಿ ಘೋರವಾಗುತ್ತವೆ. ರಾಜನಾಶವನ್ನು ಸೂಚಿಸುವ ಅನೇಕ ಅಪಶಕುನಗಳು ಇಲ್ಲಿ ಕಂಡುಬರುತ್ತವೆ.

ಅರಕ್ಷಿತಾತ್ಮಾ ಯೋ ರಾಜಾ ಪ್ರಜಾಶ್ಚಾಪಿ ನ ರಕ್ಷತಿ ।
ಪ್ರಜಾಶ್ಚ ತಸ್ಯಕ್ಷೀಯಂತೇ ತಾಶ್ಚ ಸೋಽನು ವಿನಶ್ಯತಿ ॥೩೯॥

ಯಾವ ರಾಜನು ತನ್ನನ್ನು ರಕ್ಷಿಸಿಕೊಳ್ಳುವುದಿಲ್ಲವೋ ಅವನು ಪ್ರಜೆಗಳನ್ನೂ ರಕ್ಷಿಸುವುದಿಲ್ಲ. ಅವನ ಪ್ರಜೆಗಳು ನಾಶವನ್ನು ಹೊಂದುತ್ತಾರೆ. ಅನಂತರ ರಾಜನೂ ನಾಶವನ್ನು ಹೊಂದುತ್ತಾನೆ.

ದ್ವಾವಾದದಾತೇ ಹ್ಯೇಕಸ್ಯಂ ದ್ವಯೋಶ್ಚ ಬಹವೋಽಪರೇ ।
ಕುಮಾರ್ಯಃ ಸಂಪ್ರಲುಪ್ಯಂತೇ ತದಾಹುರ್ನೃಪದೂಷಣಮ್ ॥೪೦॥

ಒಬ್ಬನ ಸ್ವತ್ತನ್ನು ಇಬ್ಬರು ಅಪಹರಿಸುತ್ತಾರೆ. ಆ ಇಬ್ಬರ ಸ್ವತ್ತನ್ನು ಬೇರೆ ಅನೇಕ ಜನರು ಅಪಹರಿಸುತ್ತಾರೆ. ಕುಮಾರಿಯರನ್ನು ಕೆಡಿಸುತ್ತಾರೆ. ಇದೆಲ್ಲಾ ರಾಜನ ದೋಷವೆಂದು ಹೇಳಲ್ಪಡುತ್ತದೆ.

ಮಮೈತದಿತಿ ನೈಕಸ್ಯ ಮನುಷ್ಯೇಷ್ವವತಿಷ್ಠತೇ।
ತ್ಯಕ್ತ್ವಾ ಧರ್ಮಂ ಯದಾ ರಾಜಾ ಪ್ರಮಾದಮನುತಿಷ್ಠತಿ ॥೪೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಿನವತಿತಮೋಽಧ್ಯಾಯಃ ॥೯೨॥

ರಾಜನು ಧರ್ಮವನ್ನು ಬಿಟ್ಟು ಪ್ರಮಾದಕ್ಕೆ ಒಳಗಾದರೆ ಯಾವ ಮನುಷ್ಯನಿಗೂ ಇದು ನನ್ನದು ಎಂಬ ಭಾವನೆಯು ಉಳಿಯುವುದಿಲ್ಲ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೯೨ನೆಯ ಅಧ್ಯಾಯವು ಮುಗಿಯಿತು

—0—

೯೩. ತೊಂಬತ್ತಮೂರನೆಯ ಅಧ್ಯಾಯ

ಉಚಥ್ಯಮಾಂಧಾತೃಸಂವಾದಾನುವಾದ

ಉಚಥ್ಯಃ

ಕಾಲವರ್ಷೀ ಚ ಪರ್ಜನ್ಯೋ ಧರ್ಮಚಾರೀ ಚ ಪಾರ್ಥಿವಃ।
ಸಂಪದ್ ಯದೈಷಾ ಭವತಿ ಸಾ ಬಿಭರ್ತಿ ಸುಖಂ ಪ್ರಜಾಃ ॥೧॥

ಉಚಥ್ಯರು – ಸಕಾಲದಲ್ಲಿ ಮಳೆಯನ್ನು ಕೊಡುವ ಪರ್ಜನ್ಯ ಮತ್ತು ಧರ್ಮ-ಚಾರಿಯಾದ ರಾಜ ಇಂತಹ ಸಂಪತ್ತು ಉಂಟಾದರೆ ಈ ಸಂಪತ್ತು ಪ್ರಜೆಗಳನ್ನು ಸುಖವಾಗಿ ಪೋಷಿಸುತ್ತದೆ.

ಯೋ ನ ಜಾನಾತಿ ನಿರ್ಹಂತುಂ ವಸ್ತ್ರಾಣಾಂ ರಜಕೋ ಮಲಮ್।
ರಕ್ತಾನಿ ವಾ ಶೋಧಯಿತುಂ ಯಥಾ ನಾಸ್ತಿ ತಥೈವ ಸಃ ॥೨॥

ಯಾವ ರಜಕನು ವಸ್ತ್ರಗಳ ಕೊಳೆಯನ್ನಾಗಲೀ ಬಣ್ಣವನ್ನಾಗಲೀ ಶೋಧಿಸಲು ತಿಳಿದಿಲ್ಲವೋ ಅವನು ಇದ್ದರೂ ಇಲ್ಲದಂತೆಯೇ ಸರಿ.

ಏವಮೇವ ದ್ವಿಜೇಂದ್ರಾಣಾಂ ಕ್ಷತ್ರಿಯಾಣಾಂ ವಿಶಾಮಪಿ।
ಶೂದ್ರಾಶ್ಚತುರ್ಣಾಂ ವರ್ಣಾನಾಂ ನಾನಾಕರ್ಮಸ್ವವಸ್ಥಿತಾಃ ॥೩॥

ಅದರಂತೆಯೇ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ನಾಲ್ಕುವರ್ಣಗಳ ನಾನಾ ಕರ್ಮಗಳಲ್ಲಿ ನಿಯುಕ್ತರಾದ ಶೂದ್ರರೂ ಸಹ -

ಕರ್ಮ ಶೂದ್ರೇ ಕೃಷಿರ್ವೈಶ್ಯೇ ದಂಡನೀತಿಶ್ಚ ರಾಜನಿ।
ಬ್ರಹ್ಮಚರ್ಯಂ ತಪೋ ಮಂತ್ರಾಃ ಸತ್ಯಂ ಚಾಪಿ ದ್ವಿಜಾತಿಷು ॥೪॥

ಶೂದ್ರನಲ್ಲಿ ಕರ್ಮ, ವೈಶ್ಯನಲ್ಲಿ ಕೃಷಿ, ರಾಜನಲ್ಲಿ ದಂಡನೀತಿ, ಬ್ರಾಹ್ಮಣರಲ್ಲಿ ಬ್ರಹ್ಮಚರ್ಯ, ತಪಸ್ಸು, ಮಂತ್ರ ಮತ್ತು ಸತ್ಯಗಳು ಇರಬೇಕಾದುದು.

ತೇಷಾಂ ಯಃ ಕ್ಷತ್ರಿಯೋ ವೇದ ವಸ್ತ್ರಾಣಾಮಿವ ಶೋಧನಮ್।
ಶೀಲದೋಷಾನ್ ವಿನಿರ್ಹಂತುಂ ಸ ಪಿತಾ ಸ ಪ್ರಜಾಪತಿಃ ॥೫॥

ಅವರಲ್ಲಿ ರಜಕನು ವಸ್ತ್ರಗಳನ್ನು ಶೋಧಿಸಿದಂತೆ ಯಾವ ಕ್ಷತ್ರಿಯನು ಪ್ರಜೆಗಳ ಶೀಲದೋಷಗಳನ್ನು ಪರಿಹರಿಸಲು ತಿಳಿದಿರುತ್ತಾನೆಯೋ ಅವನೇ ತಂದೆ ಅವನೇ ಪ್ರಜಾಪತಿ.

ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚ ಭರತರ್ಷಭ।
ರಾಜವೃತ್ತಾನಿ ಸರ್ವಾಣಿ ರಾಜೈವ ಯುಗಮುಚ್ಯತೇ ॥೬॥

ಎಲೈ ಭರತರ್ಷಭನೇ! ಕೃತ, ತ್ರೇತಾ, ದ್ವಾಪರ ಮತ್ತು ಕಲಿಯೆಲ್ಲವೂ ರಾಜನ ನಡತೆಯನ್ನೇ ಅವಲಂಬಿಸಿದೆ. ಆದ್ದರಿಂದ ರಾಜನನ್ನೇ ಯುಗವೆಂದು ಹೇಳುತ್ತಾರೆ.

ಚಾತುರ್ವರ್ಣ್ಯಂ ತಥಾ ವೇದಾಶ್ಚಾತುರಾಶ್ರಮ್ಯಮೇವ ಚ।
ಸರ್ವಂ ಪ್ರಮುಹ್ಯತೇ ಹ್ಯೇತದ್ ಯದಾ ರಾಜಾ ಪ್ರಮಾದ್ಯತಿ ॥೭॥

ರಾಜನು ಪ್ರಮಾದಕ್ಕೆ ಒಳಗಾದರೆ ನಾಲ್ಕುವರ್ಣಗಳ ಧರ್ಮಗಳು, ನಾಲ್ಕು ಆಶ್ರಮಗಳ ಧರ್ಮಗಳು, ವೇದಗಳು ಎಲ್ಲವೂ ಅವನತಿಯನ್ನು ಹೊಂದುತ್ತವೆ.

ಅಗ್ನಿತ್ರೇತಾ ತ್ರಯೀ ವಿದ್ಯಾ ಯಜ್ಞಾಶ್ಚ ಸಹದಕ್ಷಿಣಾಃ।
ಸರ್ವ ಏವ ಪ್ರಮಾದ್ಯಂತಿ ಯದಾ ರಾಜಾ ಪ್ರಮಾದ್ಯತಿ ॥೮॥

ರಾಜನು ಪ್ರಮಾದಕ್ಕೆ ಒಳಗಾದಾಗ ತ್ರೇತಾಗ್ನಿಗಳು, ಮೂರು ವೇದಗಳ ವಿದ್ಯೆ, ದಕ್ಷಿಣಾಯುತವಾದ ಯಜ್ಞಗಳು ಎಲ್ಲವೂ ನಾಶವನ್ನು ಹೊಂದುತ್ತವೆ.

ರಾಜೈವ ಕರ್ತಾ ಭೂತಾನಾಂ ರಾಜೈವ ಚ ವಿನಾಶಕಃ।
ಧರ್ಮಾತ್ಮಾ ಯಃ ಸ ಕರ್ತಾ ಸ್ಯಾದಧರ್ಮಾತ್ಮಾ ವಿನಾಶಕಃ ॥೯॥

ಪ್ರಜೆಗಳಿಗೆ ಶ್ರೇಯಸ್ಸನ್ನು ಉಂಟುಮಾಡುವವನು ರಾಜನೇ. ವಿನಾಶವನ್ನು ಉಂಟುಮಾಡುವವನೂ ರಾಜನೇ. ಧರ್ಮಾತ್ಮನಾದ ರಾಜನು ಶ್ರೇಯಸ್ಕರನಾಗುತ್ತಾನೆ. ಅಧರ್ಮಾತ್ಮನಾದವನು ವಿನಾಶಕನಾಗುತ್ತಾನೆ.

ರಾಜ್ಞೋ ಭಾರ್ಯಾಶ್ಚ ಪುತ್ರಾಶ್ಚ ಬಾಂಧವಾಃ ಸುಹೃದಸ್ತಥಾ।
ಸಮೇತ್ಯ ಸರ್ವೇ ಶೋಚಂತಿ ಯದಾ ರಾಜಾ ಪ್ರಮಾದ್ಯತಿ ॥೧೦॥

ರಾಜನು ಪ್ರಮಾದಕ್ಕೆ ಒಳಗಾದರೆ ರಾಜನ ಭಾರ್ಯೆಯರು, ಪುತ್ರರು, ಬಾಂಧವರು, ಸುಹೃಜ್ಜನರು ಎಲ್ಲರೂ ಒಟ್ಟಾಗಿ ಶೋಕಪಡುತ್ತಾರೆ.

ಹಸ್ತಿನೋಽಶ್ವಾಶ್ಚ ಗಾವಶ್ಚಾಪ್ಯುಷ್ಟ್ರಾಶ್ವತರಗರ್ದಭಾಃ।
ಅಧರ್ಮವೃತ್ತೇ ನೃಪತೌ ಸರ್ವೇ ಸೀದಂತಿ ಪಾರ್ಥಿವ ॥೧೧॥

ಎಲೈ ಪಾರ್ಥಿವನೇ! ಆನೆಗಳು, ಅಶ್ವಗಳು, ಗೋವುಗಳು, ಒಂಟೆಗಳು, ಹೇಸರ-ಗತ್ತೆಗಳು, ಕತ್ತೆಗಳು ಎಲ್ಲವೂ ರಾಜನು ಅಧರ್ಮಶೀಲನಾದರೆ ಅವನತಿಯನ್ನು ಹೊಂದುತ್ತವೆ.

ಯಚ್ಚ ಭೂತಂ ಸಂಭಜತೇ ಭೂತಾ ಯೇ ಚ ತದನ್ವಯಾಃ।
ಅಧರ್ಮಸ್ಥೇ ಹಿ ನೃಪತೌ ಸರ್ವೇ ಸೀದಂತಿ ಪಾರ್ಥಿವ ॥೧೨॥

ಎಲೈ ರಾಜನೇ! ರಾಜನು ಅಧರ್ಮಸ್ಥನಾದರೆ ರಾಜನನ್ನು ಆಶ್ರಯಿಸಿರುವ ಪ್ರಾಣಿಗಳು ಮತ್ತು ರಾಜನನ್ನು ಅನುಸರಿಸುವವರೆಲ್ಲರೂ ಅವನತಿಯನ್ನು ಹೊಂದುತ್ತಾರೆ.

ದುರ್ಬಲಾರ್ಥಂ ಬಲಂ ಸೃಷ್ಟಂ ಧಾತ್ರಾ ಮಾಂಧಾತರುಚ್ಯತೇ।
ಅಬಲಂ ತನ್ಮಹದ್ಭೂತಂ ಯಸ್ಮಿನ್ ಸರ್ವಂ ಪ್ರತಿಷ್ಠಿತಮ್ ॥೧೩॥

ಎಲೈ ಮಾಂಧಾತನೇ! ದುರ್ಬಲರನ್ನು ರಕ್ಷಣೆ ಮಾಡುವುದಕ್ಕಾಗಿ ಬ್ರಹ್ಮದೇವರು ಬಲವನ್ನು ಸೃಷ್ಟಿಮಾಡಿದ್ದಾರೆ. ದುರ್ಬಲವರ್ಗವು ಬಹಳ ದೊಡ್ಡದಾದುದು ಮತ್ತು ಎಲ್ಲವೂ ಅದರಲ್ಲಿ ಆಶ್ರಿತವಾಗಿದೆ.

ದುರ್ಬಲಸ್ಯ ಹಿ ಯಚ್ಚಕ್ಷುರ್ಮುನೇರಾಶೀವಿಷಸ್ಯ ಚ।
ಅವಿಷಹ್ಯತಮಂ ಮನ್ಯೇ ಮಾ ಸ್ಮ ದುರ್ಬಲಮಾಸದಃ ॥೧೪॥

ದುರ್ಬಲನ, ಋಷಿಯ ಮತ್ತು ಸರ್ಪದ ದೃಷ್ಟಿಯು ಸಹಿಸಲು ಅಸಾಧ್ಯವಾದುದು ಎಂದು ತಿಳಿಯುತ್ತೇನೆ. ದುರ್ಬಲನ ಸಮೀಪಕ್ಕೆ ಹೋಗಬೇಡ.

ದುರ್ಬಲಾಂಸ್ತಾತ ಬುದ್ಧ್ಯೇಥಾ ನಿತ್ಯಮೇವಾವಿಮಾನಿತಾನ್।
ಮಾ ತ್ವಾಂ ದುರ್ಬಲಚಕ್ಷೂಂಷಿ ಪ್ರದಹೇಯುಃ ಸಬಾಂಧವಮ್ ॥೧೫॥

ಎಲೈ ಪ್ರೀತಿಪಾತ್ರನೇ! ದುರ್ಬಲರಿಗೆ ಅವಮಾನವಾಗದಂತೆ ಯಾವಾಗಲೂ ನೋಡಿಕೊಳ್ಳುವವನಾಗು. ದುರ್ಬಲರ ಕಣ್ಣುಗಳು ನಿನ್ನನ್ನು ಬಾಂಧವರ ಜೊತೆಯಲ್ಲಿ ಸುಡದಿರಲಿ.

ನ ಹಿ ದುರ್ಬಲದಗ್ಧಸ್ಯ ಕುಲೇ ಕಿಂಚಿತ್ ಪ್ರರೋಹತಿ।
ಅಮೂಲಂ ನಿರ್ದಹತ್ಯೇವ ಮಾ ಸ್ಮ ದುರ್ಬಲಮಾಸದಃ ॥೧೬॥

ದುರ್ಬಲರ ದೃಷ್ಟಿಯಿಂದ ದಗ್ಧವಾದ ಕುಲದಲ್ಲಿ ಯಾವುದೂ ಬೆಳೆಯುವುದಿಲ್ಲ. ಆ ದೃಷ್ಟಿಯು ಮೂಲಸಹಿತವಾಗಿ ಎಲ್ಲವನ್ನೂ ಸುಟ್ಟೇ ಸುಡುತ್ತದೆ. ದುರ್ಬಲರ ಸಮೀಪಕ್ಕೆ ಹೋಗಬೇಡ.

ಅಬಲಂ ವೈ ಬಲಾಚ್ಛ್ರೇಯೋ ಯಚ್ಚಾತಿಬಲವದ್ ಬಲಮ್ ।
ಬಲಸ್ಯಾಬಲದಗ್ಧಸ್ಯ ನ ಕಿಂಚಿದವಶಿಷ್ಯತೇ ॥೧೭॥

ಅಬಲವರ್ಗವು ಬಲವನ್ನು ಹೊಂದಿದವರಿಗಿಂತ ಶ್ರೇಷ್ಠವಾದುದು. ಅದು ಬಹಳ ಬಲವನ್ನು ಹೊಂದಿದವರಿಗಿಂತಲೂ ಶ್ರೇಷ್ಠವಾದುದು. ಅಬಲರಿಂದ ಬಲವು ದಗ್ಧವಾದರೆ ಅದರಲ್ಲಿ ಯಾವುದೂ ಉಳಿಯುವುದಿಲ್ಲ.

ವಿಮಾನಿತೋ ಹತೋತ್ಕೃಷ್ಟಸ್ತ್ರಾತಾರಂ ಚೇನ್ನ ವಿಂದತಿ ।
ಅಮಾನುಷಕೃತಸ್ತತ್ರ ದಂಡೋ ಹಂತಿ ನರಾಧಿಪಮ್ ॥೧೮॥

ಅವಮಾನಿತನಾದವನು, ಪ್ರಹಾರಕ್ಕೆ ಸಿಲುಕಿದವನು, ನಿಂದಿಸಲ್ಪಡುವವನು ರಕ್ಷಕನನ್ನು ಪಡೆಯದಿದ್ದರೆ ಅಲ್ಲಿ ರಾಜನನ್ನು ದೈವಕೃತವಾದ ದಂಡವು ನಾಶಗೊಳಿಸುತ್ತದೆ.

ಮಾ ಸ್ಮ ತಾತ ಬಲಸ್ಥಾನ್ ವೈ ಯುಂಜೀಥಾ ದುರ್ಬಲಂ ಜನಮ್ ।
ಮಾ ತ್ವಾ ದುರ್ಬಲಚಕ್ಷೂಂಷಿ ಧಕ್ಷ್ಯಂತ್ವಗ್ನಿರಿವಾಶ್ರಯಮ್ ॥೧೯॥

ಎಲೈ ಪ್ರೀತಿಪಾತ್ರನೇ! ಬಲವುಳ್ಳವರ ಜೊತೆಯಲ್ಲಿ ಸೇರು. ದುರ್ಬಲಜನರ ಸಮೀಪಕ್ಕೆ ಹೋಗಬೇಡ. ಅಗ್ನಿಯು ತನ್ನ ಆಶ್ರಯವನ್ನು ಸುಟ್ಟಂತೆ ದುರ್ಬಲರ ಕಣ್ಣುಗಳು ನಿನ್ನನ್ನು ಸುಡದಿರಲಿ. (ಲಕ್ಷಾಲಂಕಾರ)

ಯಾನಿ ಮಿಥ್ಯಾಭಿಶಸ್ತಾನಾಂ ಪತಂತ್ಯಶ್ರೂಣಿ ರೋದತಾಮ್ ।
ತಾನಿ ಪುತ್ರಾನ್ ಪಶೂನ್ ಘ್ನಂತಿ ತೇಷಾಂ ಮಿಥ್ಯಾಭಿಶಾಸನಾತ್ ॥೨೦॥

ಮಿಥ್ಯಾರೋಪಕ್ಕೆ ಒಳಗಾಗಿ ಅಳುವವರ ಕಣ್ಣಿನಿಂದ ಯಾವ ಕಣ್ಣೀರಿನ ಹನಿಗಳು ಬೀಳುತ್ತವೆಯೋ ಅವು ಮಿಥ್ಯಾರೋಪವನ್ನು ಹೊರಸಿದವರ ಪುತ್ರರನ್ನು ಮತ್ತು ಪಶುಗಳನ್ನು ಕೊಲ್ಲುತ್ತವೆ.

ಯದಿ ನಾತ್ಮನಿ ಪುತ್ರೇಷು ನ ಚೇತ್ ಪೌತ್ರೇಷು ನಪ್ತೃಷು ।
ನಹಿ ಪಾಪಂ ಕೃತಂ ಕರ್ಮ ಸದ್ಯಃ ಫಲತಿ ಗೌರಿವ ॥೨೧॥

ಒಂದು ಪಕ್ಷ ತನಗೆ ದುಷ್ಫಲವನ್ನು ಕೊಡದಿದ್ದರೆ ಅದು ಮಕ್ಕಳಿಗೋ, ಮೊಮ್ಮಕ್ಕಳಿಗೋ ದುಷ್ಫಫಲವನ್ನು ಕೊಡುತ್ತದೆ. ಮಾಡಿದ ಪಾಪಕರ್ಮವು ಭೂಮಿಯಂತೆ ತತ್ಕ್ಷಣದಲ್ಲಿಯೇ ಫಲವನ್ನು ಕೊಡುವುದಿಲ್ಲ. (ಭೂಮಿಯಲ್ಲಿ ಬೀಜವನ್ನು ಬಿತ್ತಿದರೆ ಎಷ್ಟೋ ಸಮಯದ ನಂತರ ಫಲವನ್ನು ಕೊಡುತ್ತದೆ. ಅದರಂತೆಯೇ ಪಾಪಕರ್ಮವು ಪಾಕಗೊಂಡಮೇಲೆ ಫಲವನ್ನು ಕೊಡುತ್ತದೆ).

ಯತ್ರಾಬಲೋ ವಧ್ಯಮಾನಸ್ತ್ರಾತಾರಂ ನಾಧಿಗಚ್ಛತಿ।
ಮಹಾನ್ ದೈವಕೃತಸ್ತತ್ರ ದಂಡಃ ಪತತಿ ದಾರುಣಃ ॥೨೨॥

ಅಬಲನಾದವನು ಪೀಡಿಸಲ್ಪಟ್ಟು ರಕ್ಷಕನನ್ನು ಪಡೆಯದಿದ್ದರೆ ಅಲ್ಲಿ ರಾಜನ ಮೇಲೆ ದೈವಕೃತವಾದ ದಾರುಣವಾದ ದೊಡ್ಡದಂಡವು ಎರಗುತ್ತದೆ.

ಯುಕ್ತಾ ಯದಾ ಜಾನಪದಾ ಭಿಕ್ಷಂತೇ ಬ್ರಾಹ್ಮಣಾ ಇವ।
ಅಭೀಕ್ಷ್ಣಂ ಭಿಕ್ಷುರೂಪೇಣ ರಾಜಾನಂ ಘ್ನಂತಿ ತಾದೃಶಾಃ ॥೨೩॥

ಯೋಗ್ಯವಾದ ನಡತೆಯುಳ್ಳ ಜಾನಪದರು (ಪ್ರಜೆಗಳು) ಬ್ರಾಹ್ಮಣರಂತೆ ಸತತವಾಗಿ ಭಿಕ್ಷೆಯನ್ನು ಬೇಡಲು ಪ್ರಾರಂಭಿಸಿದರೆ ಅಂತಹವರು ರಾಜನನ್ನು ಕೊಲ್ಲುತ್ತಾರೆ.

ರಾಜ್ಞೋ ಯದಾ ಜನಪದೇ ಬಹವೋ ರಾಜಪೂರುಷಾಃ।
ಅನಯೇನೋಪವರ್ತಂತೇ ತದ್ ರಾಜ್ಞಃ ಕಿಲ್ಬಿಷಂ ಮಹತ್ ॥೨೪॥

ರಾಜನ ಅನೇಕ ಅಧಿಕಾರಿಗಳು ರಾಜ್ಯದಲ್ಲಿ ಅನ್ಯಾಯದಿಂದ ವರ್ತಿಸಲು ಪ್ರಾರಂಭಿಸಿದರೆ ಅದು ರಾಜನದೇ ದೊಡ್ಡ ದೋಷ.

ಯದಾ ಯುಕ್ತಾ ನಯಂತ್ಯರ್ಥಾನ್ ಕಾಮಾದರ್ಥವಶೇನ ವಾ।
ಕೃಪಣಂ ಯಾಚಮಾನಾನಾಂ ತದ್ ರಾಜ್ಞೋ ವೈಶಸಂ ಮಹತ್ ॥೨೫॥

ರಾಜನಿಂದ ನಿಯುಕ್ತರಾದ ಅಧಿಕಾರಿಗಳು ಪ್ರಜೆಗಳು ಕಾರ್ಪಣ್ಯದಿಂದ ಬೇಡು-

ತ್ತಿದ್ದರೂ ಅವರ ಧನವನ್ನು ತಮ್ಮ ಮನಸ್ಸಿಗೆ ಬಂದಂತೆ ಅಥವಾ ಲೋಭದಿಂದ ದೋಚುತ್ತಿದ್ದರೆ ಅದು ರಾಜನಿಂದಲೇ ಉಂಟಾದ ದೊಡ್ಡ ಹಿಂಸೆ.

ಮಹಾವೃಕ್ಷೋ ಜಾಯತೇ ವರ್ಧತೇ ಚ
ತಂ ಚೈವ ಭೂತಾನಿ ಸಮಾಶ್ರಯಂತಿ।
ಯದಾ ವೃಕ್ಷಶ್ಛಿದ್ಯತೇ ದಹ್ಯತೇ ವಾ
ತದಾಶ್ರಯಾ ಅನಿಕೇತಾ ಭವಂತಿ ॥೨೬॥

ದೊಡ್ಡ ವೃಕ್ಷವು ಬೆಳೆದು ಅಭಿವೃದ್ಧಿಯನ್ನು ಹೊಂದುತ್ತದೆ. ಅನೇಕ ಪ್ರಾಣಿಗಳು ಅದನ್ನು ಆಶ್ರಯಿಸುತ್ತವೆ. ಆ ವೃಕ್ಷವು ಕಡಿಯಲ್ಪಟ್ಟಾಗ ಅಥವಾ ಸುಡಲ್ಪಟ್ಟಾಗ ಅದನ್ನು ಆಶ್ರಯಿಸಿದ ಪ್ರಾಣಿಗಳೆಲ್ಲವೂ ಆಶ್ರಯ(ತಮ್ಮ ನಿವಾಸ)ವನ್ನು ಕಳೆದುಕೊಳ್ಳುತ್ತವೆ.

ಯದಾ ರಾಷ್ಟ್ರೇ ಧರ್ಮಮಗ್ರ್ಯಂ ಚರಂತಿ
ಸಂಸ್ಕಾರಂ ವಾ ರಾಜಗುಣಂ ಬ್ರುವಾಣಾಃ।
ತೈರೇವಾಧರ್ಮಶ್ಚರಿತೋ ಧರ್ಮಮೋಹಾತ್
ತೂರ್ಣಂ ದಹ್ಯಾತ್ ಸುಕೃತಂ ದುಷ್ಕೃತಂ ಚ ॥೨೭॥

ಪ್ರಜೆಗಳು ರಾಜನ ಗುಣವೆಂದು ಹೇಳುತ್ತಾ ರಾಷ್ಟ್ರದಲ್ಲಿ ಯಾವಾಗ ಮೊದಲು ಶ್ರೇಷ್ಠವಾದ ಧರ್ಮಗಳನ್ನು ಮತ್ತು ಸಂಸ್ಕಾರಗಳನ್ನು ಆಚರಿಸುತ್ತಾ, ಅನಂತರ ಧರ್ಮಮೋಹದಿಂದ ಅವರೇ ಅಧರ್ಮವನ್ನು ಆಚರಿಸಿದರೆ ಅನಂತರ ಆಚರಿಸಿದ ಅಧರ್ಮವು ಮೊದಲು ಆಚರಿಸಿದ ಧರ್ಮವನ್ನು ಶೀಘ್ರವಾಗಿ ಸುಟ್ಟುಬಿಡುತ್ತದೆ. (ಲಕ್ಷಾಲಂಕಾರ)

ಯತ್ರ ಪಾಪಾ ಜ್ಞಾಯಮಾನಾಶ್ಚರಂತಿ
ಸಭಾಂ ಕಲಿರ್ವಿಂದತಿ ತತ್ರ ರಾಜ್ಞಃ।
ಯದಾ ರಾಜಾ ಶಾಸ್ತಿ ನರಾನ್ ನ ಶಕ್ತ್ಯಾ
ನ ತದ್ ರಾಜ್ಯಂ ವರ್ಧತೇ ಭೂಮಿಪಾಲ ॥೨೮॥

ಎಲ್ಲಿ ಪಾಪಗಳಿಂದ ಪ್ರಸಿದ್ಧರಾದವರು ನಿಃಶಂಕೆಯಿಂದ ತಿರುಗಾಡುತ್ತಾರೋ ಅಲ್ಲಿ ಕಲಿಯು ರಾಜಸಭೆಯನ್ನು ಪ್ರವೇಶಿಸುತ್ತಾನೆ. ರಾಜನು ಅಪರಾಧಿಗಳನ್ನು ತನ್ನ ಶಕ್ತಿಗೆ ಅನುಗುಣವಾಗಿ ಶಿಕ್ಷಿಸದಿದ್ದಾಗ ಎಲೈ ರಾಜನೇ! ಆ ರಾಜ್ಯವು ಅಭಿವೃದ್ಧಿಯನ್ನು ಹೊಂದುವುದಿಲ್ಲ.

ಯಶ್ಚಾಮಾತ್ಯಂ ಮಾನಯಿತ್ವಾ ಯಥಾರ್ಹಂ
ಮಂತ್ರೇ ಚ ಯುದ್ಧೇ ಚ ನೃಪೋ ನಿಯುಂಜ್ಯಾತ್ ।
ಪ್ರವರ್ಧತೇ ತಸ್ಯ ರಾಷ್ಟ್ರಂ ನೃಪಸ್ಯ
ಭುಂಕ್ತೇ ಮಹೀಂ ಚಾಪ್ಯಖಿಲಾಂ ಚಿರಾಯ ॥೨೯॥

ಯಾವ ರಾಜ್ಯದಲ್ಲಿ ರಾಜನು ಮಂತ್ರಿಯನ್ನು ಯಥಾಯೋಗ್ಯವಾಗಿ ಸನ್ಮಾನಿಸಿ ಮಂತ್ರದಲ್ಲಿಯೂ ಮತ್ತು ಯುದ್ಧದಲ್ಲಿಯೂ ನಿಯೋಜಿಸುತ್ತಾನೆಯೋ ಅಂತಹ ರಾಜನ ರಾಷ್ಟ್ರವು ಅಭಿವೃದ್ಧಿಯನ್ನು ಹೊಂದುತ್ತದೆ. ಮತ್ತು ಆ ರಾಜನು ಬಹು-ಕಾಲದವರೆಗೆ ಭೂಮಿಯನ್ನು ಭೋಗಿಸುತ್ತಾನೆ.

ಅತ್ರಾಪಿ ಸುಕೃತಂ ಕರ್ಮ ವಾಚಂ ಚೈವ ಸುಭಾಷಿತಮ್ ।
ಸಮೀಕ್ಷ್ಯ ಪೂಜಯನ್ ರಾಜಾ ಧರ್ಮಂ ಪ್ರಾಪ್ನೋತ್ಯನುತ್ತಮಮ್ ॥೩೦॥

ಇಲ್ಲಿಯೂ ಸಹ ಒಳ್ಳೆಯ ಕರ್ಮಗಳನ್ನು ಮಾಡಿದವರನ್ನು ಮತ್ತು ಒಳ್ಳೆಯ ಮಾತನಾಡುವವರನ್ನು ನೋಡಿ ಪೂಜಿಸುವ ರಾಜನು ಶ್ರೇಷ್ಠವಾದ ಧರ್ಮವನ್ನು ಪಡೆಯುವನು.

ಸಂವಿಭಜ್ಯ ಯದಾ ಭುಂಕ್ತೇ ನ ಚಾನ್ಯಾನವಮನ್ಯತೇ ।
ನಿಹಂತಿ ಬಲಿನಂ ದೃಪ್ತಂ ಸ ರಾಜ್ಞೋ ಧರ್ಮ ಉಚ್ಯತೇ ॥೩೧॥

ತನ್ನ ಐಶ್ವರ್ಯವನ್ನು ಪ್ರಜೆಗಳಿಗೆ ಹಂಚಿ ಭೋಗಿಸುವುದು, ಇನ್ನೊಬ್ಬರಿಗೆ ಅವಮಾನವನ್ನು ಮಾಡದಿರುವುದು, ಬಲಿಷ್ಠನೂ ಅಹಂಕಾರಿಯೂ ಆದವನನ್ನು ವಿನಾಶ ಮಾಡುವುದು ರಾಜನ ಧರ್ಮವೆನಿಸುತ್ತದೆ.

ಸ ವಿಭಜ್ಯ ಯದಾ ಭುಂಕ್ತೇ ನೃಪತಿರ್ದುರ್ಬಲಾನ್ ನರಾನ್ ।
ತದಾ ಭವಂತಿ ಬಲಿನಃ ಸ ರಾಜ್ಞೋ ಧರ್ಮ ಉಚ್ಯತೇ ॥೩೨॥

ರಾಜನು ದುರ್ಬಲರಿಗೆ ತನ್ನ ಐಶ್ವರ್ಯವನ್ನು ಹಂಚಿ ಭೋಗಿಸಿದರೆ ದುರ್ಬಲರು ಪ್ರಬಲರಾಗುತ್ತಾರೆ. ಅದು ರಾಜನ ಧರ್ಮವೆನಿಸುತ್ತದೆ.

ತ್ರಾಯತೇ ಹಿ ಯದಾ ಸರ್ವಂ ವಾಚಾ ಕಾಯೇನ ಕರ್ಮಣಾ ।
ಪುತ್ರಸ್ಯಾಪಿ ನ ಮೃಷ್ಯೇಚ್ಚ ಸ ರಾಜ್ಞೋ ಧರ್ಮ ಉಚ್ಯತೇ ॥೩೩॥

ಎಲ್ಲವನ್ನೂ ಮಾತಿನಿಂದಲೂ, ಶರೀರದಿಂದಲೂ ಮತ್ತು ಕರ್ಮದಿಂದಲೂ ರಕ್ಷಿಸುವುದು ಅಪರಾಧ ಮಾಡಿದ ಪುತ್ರನನ್ನೂ ನೋಡಿ ಸಹಿಸದಿರುವುದು ರಾಜನ ಧರ್ಮವೆನಿಸುತ್ತದೆ.

ಯದಾ ರಕ್ಷತಿ ರಾಷ್ಟ್ರಾಣಿ ಯದಾ ದಸ್ಯೂನಪೋಹತಿ ।
ಯದಾ ಜಯತಿ ಸಂಗ್ರಾಮೇ ಸ ರಾಜ್ಞೋ ಧರ್ಮ ಉಚ್ಯತೇ ॥೩೪॥

ರಾಷ್ಟ್ರವನ್ನು ರಕ್ಷಿಸುವುದು, ದಸ್ಯುಗಳನ್ನು ವಿನಾಶಗೊಳಿಸುವುದು, ಯುದ್ಧದಲ್ಲಿ ಜಯಗಳಿಸುವುದು ರಾಜನ ಧರ್ಮವೆನಿಸುತ್ತದೆ.

ಪಾಪಮಾಚರತೋ ಯತ್ರ ಕರ್ಮಣಾ ವ್ಯಾಹೃತೇನ ವಾ ।
ಪ್ರಿಯಸ್ಯಾಪಿ ನ ಮೃಷ್ಯೇತ ಸ ರಾಜ್ಞೋ ಧರ್ಮ ಉಚ್ಯತೇ ॥೩೫॥

ಕರ್ಮದಿಂದಾಗಲೀ ಅಥವಾ ಮಾತಿನಿಂದಾಗಲೀ ಪಾಪಕಾರ್ಯವನ್ನು ಮಾಡಿದವನು ಪ್ರಿಯವ್ಯಕ್ತಿಯಾದರೂ ಅವನನ್ನು ಸಹಿಸದಿರುವುದು ರಾಜನ ಧರ್ಮವೆನಿಸುತ್ತದೆ.

ಯದಾ ಶಾರಣಿಕಾನ್ ರಾಜಾ ಪುತ್ರವತ್ ಪರಿರಕ್ಷತಿ ।
ಭಿನತ್ತಿ ನ ಚ ಮರ್ಯಾದಾಂ ಸ ರಾಜ್ಞೋ ಧರ್ಮ ಉಚ್ಯತೇ ॥೩೬॥

ಶರಣಾಗತರಾದವರನ್ನು ಪುತ್ರರಂತೆ ರಕ್ಷಿಸುವುದು ಮತ್ತು ಧರ್ಮದ ಎಲ್ಲೆಯನ್ನು ಮೀರದಿರುವುದು ರಾಜನ ಧರ್ಮವೆನಿಸುತ್ತದೆ.

ಯದಾಪ್ತದಕ್ಷಿಣೈರ್ಯಜ್ಞೈರ್ಯಜತೇ ಶ್ರದ್ಧಯಾऽನ್ವಿತಃ।
ಕಾಮದ್ವೇಷಾವನಾದೃತ್ಯ ಸ ರಾಜ್ಞೋ ಧರ್ಮ ಉಚ್ಯತೇ ॥೩೭॥

ರಾಗದ್ವೇಷಗಳನ್ನು ತ್ಯಜಿಸಿ ಶ್ರದ್ಧೆಯಿಂದ ಪೂರ್ಣದಕ್ಷಿಣೆಯನ್ನು ಕೊಟ್ಟು ಯಜ್ಞ-ಗಳನ್ನು ಮಾಡುವುದು ರಾಜನ ಧರ್ಮವೆನಿಸುತ್ತದೆ.

ಕೃಪಣಾನಾಥವೃದ್ಧಾನಾಂ ಯದಾಶ್ರು ವ್ಯಪಮಾರ್ಷ್ಟಿ ವೈ।
ಹರ್ಷಂ ಸಂಜನಯನ್ ನೃಣಾಂ ಸ ರಾಜ್ಞೋ ಧರ್ಮ ಉಚ್ಯತೇ ॥೩೮॥

ಕೃಪಣರು ಅನಾಥರು, ವೃದ್ಧರೂ ಆದವರ ಕಣ್ಣೀರನ್ನು ಒರೆಸಿ ಪ್ರಜೆಗಳಿಗೆ ಸಂತೋಷವನ್ನು ಉಂಟುಮಾಡುವುದು ರಾಜನ ಧರ್ಮವೆನಿಸುತ್ತದೆ.

ವಿವರ್ಧಯತಿ ಮಿತ್ರಾಣಿ ತಥಾರೀಂಶ್ಚಾಪಕರ್ಷತಿ।
ಸಂಪೂಜಯತಿ ಸಾಧೂಂಶ್ಚ ಸ ರಾಜ್ಞೋ ಧರ್ಮ ಉಚ್ಯತೇ ॥೩೯॥

ಮಿತ್ರರನ್ನು ಅಭಿವೃದ್ಧಿಪಡಿಸುವುದು, ಹಾಗೆಯೇ ಶತ್ರುಗಳನ್ನು ಅಪಕರ್ಷಣ-ಗೊಳಿಸುವುದು ಮತ್ತು ಸಜ್ಜನರನ್ನು ಪೂಜಿಸುವುದು ರಾಜನ ಧರ್ಮವೆಂದು ಹೇಳಲ್ಪಡುತ್ತದೆ.

ಸತ್ಯಂ ಪಾಲಯತಿ ಪ್ರೀತ್ಯಾ ನಿತ್ಯಂ ಭೂಮಿಂ ಪ್ರಯಚ್ಛತಿ।
ಪೂಜಯತ್ಯತಿಥೀನ್ ಭೃತ್ಯಾನ್ ಸ ರಾಜ್ಞೋ ಧರ್ಮ ಉಚ್ಯತೇ ॥೪೦॥

ಸತ್ಯವನ್ನು ಸಂತೋಷದಿಂದ ಪಾಲಿಸುವುದು, ನಿತ್ಯವೂ ಭೂದಾನವನ್ನು ಮಾಡು-ವುದು, ಅತಿಥಿಗಳನ್ನು ಮತ್ತು ಭೃತ್ಯರನ್ನು ಪೂಜಿಸುವುದು ರಾಜನ ಧರ್ಮವೆನಿಸುತ್ತದೆ.

ನಿಗ್ರಹಾನುಗ್ರಹೌ ಚೋಭೌ ಯತ್ರ ಸ್ಯಾತಾಂ ಪ್ರತಿಷ್ಠಿತೌ।
ಅಸ್ಮಿಂಲ್ಲೋಕೇ ಪರೇ ಚೈವ ರಾಜಾ ತತ್ ಪ್ರಾಪ್ನುತೇ ಫಲಮ್ ॥೪೧॥

ಯಾವ ರಾಜನಲ್ಲಿ ದುಷ್ಟರ ನಿಗ್ರಹ ಮತ್ತು ಶಿಷ್ಟರ ಅನುಗ್ರಹ ಎರಡೂ ಪ್ರತಿ-ಷ್ಠಿತವಾಗಿರುತ್ತವೆಯೋ ಆ ರಾಜನು ಈ ಲೋಕದಲ್ಲಿಯೂ ಮತ್ತು ಪರಲೋಕ-ದಲ್ಲಿಯೂ ಶುಭಫಲವನ್ನು ಹೊಂದುತ್ತಾನೆ.

ಯಮೋ ರಾಜಾ ಧಾರ್ಮಿಕಾಣಾಂ ಮಾಂಧಾತಃ ಪರಮೇಶ್ವರಃ।
ಸಂಯಚ್ಛನ್ ಭವತಿ ಪ್ರಾಣಾನ್ನ ಸಂಯಚ್ಛಂಸ್ತು ಪಾಪಕಃ ॥೪೨॥

ಎಲೈ ಮಾಂಧಾತೃವೇ! ರಾಜನು ಯಮನಂತೆ ಸಜ್ಜನರಿಗೆ ಪ್ರಾಣದಾನವನ್ನು ಮಾಡಿದರೆ ಧಾರ್ಮಿಕರ ದೃಷ್ಟಿಯಲ್ಲಿ ಅವನು ಪರಮೇಶ್ವರನೆನಿಸುತ್ತಾನೆ. ಹಾಗೆ ಮಾಡದಿದ್ದರೆ ಅವನು ಪಾಪಿಯಾಗುತ್ತಾನೆ.

ಋತ್ವಿಕ್‌ಪುರೋಹಿತಾಚಾರ್ಯಾನ್ ಸತ್ಕೃತ್ಯಾನವಮನ್ಯ ಚ।
ಯದಾ ಸಮ್ಯಕ್ ಪ್ರಗೃಹ್ಣಾತಿ ಸ ರಾಜ್ಞೋ ಧರ್ಮ ಉಚ್ಯತೇ ॥೪೩॥

ಋತ್ವಿಕ್, ಪುರೋಹಿತ ಮತ್ತು ಆಚಾರ್ಯರನ್ನು ಸನ್ಮಾನಿಸಿ, ಅವಮಾನ ಮಾಡದೇ ಸರಿಯಾಗಿ ಸ್ವೀಕರಿಸುವುದು ರಾಜನ ಧರ್ಮವೆನಿಸುತ್ತದೆ.

ಯಮೋ ಯಚ್ಛತಿ ಭೂತಾನಿ ಸರ್ವಾಣ್ಯೇವಾವಿಶೇಷತಃ।
ತಸ್ಯ ರಾಜ್ಞಾನುಕರ್ತವ್ಯಂ ಯಂತವ್ಯಾ ವಿಧಿವತ್ ಪ್ರಜಾಃ ॥೪೪॥

ಯಮನು ಎಲ್ಲ ಜೀವರನ್ನೂ ಒಂದೇ ರೀತಿಯಲ್ಲಿ ನಿಯಂತ್ರಿಸುತ್ತಾನೆ. ರಾಜನು ಯಮನನ್ನು ಅನುಸರಿಸಬೇಕು. ಎಲ್ಲ ಪ್ರಜೆಗಳನ್ನೂ ಶಾಸ್ತ್ರರೀತಿಯಲ್ಲಿ ನಿಯಂತ್ರಿಸ-ಬೇಕು.

ಸಹಸ್ರಾಕ್ಷೇಣ ರಾಜಾ ಹಿ ಸರ್ವ ಏವೋಪಮೀಯತೇ।
ಸ ಪಶ್ಯತಿ ಹಿ ಯಂ ಧರ್ಮಂ ಸ ಧರ್ಮಃ ಪುರುಷರ್ಷಭ ॥೪೫॥

ರಾಜನನ್ನು ಎಲ್ಲರೂ ಸಹಸ್ರಾಕ್ಷನಿಗೆ ಹೋಲಿಸುತ್ತಾರೆ. ಎಲೈ ಪುರುಷಶ್ರೇಷ್ಠನೇ! ಅವನು ಯಾವುದನ್ನು ಧರ್ಮವೆಂದು ತಿಳಿಯುತ್ತಾನೆಯೋ ಅದು ಧರ್ಮ-ವಾಗುತ್ತದೆ.

ಅಪ್ರಮಾದೇನ ಶಿಕ್ಷೇಥಾಃ ಕ್ಷಮಾಂ ಬುದ್ಧಿಂ ಧೃತಿಂ ಮತಿಮ್।
ಭೂತಾನಾಂ ಸತ್ತ್ವಜಿಜ್ಞಾಸಾಂ ಸಾಧ್ವಸಾಧು ಚ ಸರ್ವದಾ ॥೪೬॥

ಕ್ಷಮೆ, ಸದ್ಬುದ್ಧಿ, ಧೈರ್ಯ, ಸ್ಮೃತಿ, ಪ್ರಜೆಗಳ ಬಲಾಬಲಜಿಜ್ಞಾಸೆ, ಸಜ್ಜನರ ಮತ್ತು ಅಸಜ್ಜನರ ಜಿಜ್ಞಾಸೆ ಇವುಗಳನ್ನು ಯಾವಾಗಲೂ ಎಚ್ಚರಿಕೆಯಿಂದ ಮಾಡ-ಬೇಕು.

ಸಂಗ್ರಹಃ ಸರ್ವಭೂತಾನಾಂ ದಾನಂ ಚ ಮಧುರಾ ಚ ವಾಕ್ ।
ಪೌರಜಾನಪದಾಶ್ಚೈವ ಗೋಪ್ತವ್ಯಾಃ ಸ್ವಾ ಯಥಾ ಪ್ರಜಾಃ ॥೪೭॥

ಎಲ್ಲ ಪ್ರಜೆಗಳನ್ನೂ ಸಂಗ್ರಹಿಸಬೇಕು, ದಾನ ಮಾಡಬೇಕು, ಮಧುರವಾಗಿ ಮಾತನಾಡಬೇಕು. ಪೌರಜಾನಪದರನ್ನು ತನ್ನ ಮಕ್ಕಳಂತೆ ರಕ್ಷಿಸಬೇಕು.

ನ ಜಾತ್ವದಕ್ಷೋ ನೃಪತಿಃ ಪ್ರಜಾಃ ಶಕ್ನೋತಿ ರಕ್ಷಿತುಮ್ ।
ಭಾರೋ ಹಿ ಸುಮಹಾಂಸ್ತಾತ ರಾಜ್ಯಂ ನಾಮ ಸುದುಷ್ಕರಮ್ ॥೪೮॥

ಅದಕ್ಷನಾದ ರಾಜನು ಪ್ರಜೆಗಳನ್ನು ರಕ್ಷಿಸಲು ಎಂದೂ ಸಮರ್ಥನಾಗುವುದಿಲ್ಲ. ಎಲೈ ಪ್ರೀತಿಪಾತ್ರನೇ! ಏಕೆಂದರೆ, ರಾಜ್ಯವು ಹೊರಲು ಕಷ್ಟಸಾಧ್ಯವಾದ ದೊಡ್ಡ ಭಾರ.

ತದ್ ದಂಡವನ್ನೃಪಃ ಪ್ರಾಜ್ಞಃ ಶೂರಃ ಶಕ್ನೋತಿ ರಕ್ಷಿತುಮ್ ।
ನ ಹಿ ಶಕ್ಯಮದಂಡೇನ ಕ್ಲೀಬೇನಾಬುದ್ಧಿನಾಪಿ ವಾ ॥೪೯॥

ದಂಡನೀತಿಯನ್ನು ತಿಳಿದ ಪ್ರಾಜ್ಞನೂ, ಶೂರನೂ ಆದ ರಾಜನು ರಕ್ಷಿಸಲು ಸಮರ್ಥನಾಗುತ್ತಾನೆ. ದಂಡನೀತಿಯನ್ನು ತಿಳಿಯದ ಶೂರನಲ್ಲದ ಬುದ್ಧಿಹೀನನಾದ ರಾಜನಿಂದ ಪ್ರಜೆಗಳ ರಕ್ಷಣೆಯು ಸಾಧ್ಯವಿಲ್ಲ.

ಅಭಿರೂಪೈಃ ಕುಲೇ ಜಾತೈರ್ದಕ್ಷೈರ್ಭಕ್ತೈರ್ಬಹುಶ್ರುತೈಃ ।
ಸರ್ವಾ ಬುದ್ಧೀಃ ಪರೀಕ್ಷೇಥಾಸ್ತಾಪಸಾಶ್ರಮಿಣಾಮಪಿ ॥೫೦॥

ಸತ್ಕುಲಪ್ರಸೂತರಾದ, ಯೋಗ್ಯವಾದ ರೂಪವನ್ನು ಹೊಂದಿದ, ದಕ್ಷರಾದ, ಬಹುಶ್ರುತರಾದ, ಅನುರಕ್ತರಾದ ಅಧಿಕಾರಿಗಳಿಂದ ಆಶ್ರಮವಾಸಿಗಳ ಮತ್ತು ತಾಪಸರ ಬುದ್ಧಿಗಳನ್ನೂ ಸೇರಿ ಎಲ್ಲರ ಬುದ್ಧಿಗಳನ್ನೂ ಪರೀಕ್ಷಿಸಬೇಕು.

ತತಸ್ತ್ವಂ ಸರ್ವಭೂತಾನಾಂ ಧರ್ಮಂ ವೇತ್ಸ್ಯಸಿ ವೈ ಪರಮ್ ।
ಸ್ವದೇಶೇ ಪರದೇಶೇ ವಾ ನ ತೇ ಧರ್ಮೋ ವಿನಶ್ಯತಿ ॥೫೧॥

ಆಗ ನೀನು ಎಲ್ಲ ಪ್ರಜೆಗಳ ಶ್ರೇಷ್ಠವಾದ ಧರ್ಮವನ್ನು ತಿಳಿಯುವಿ. ಸ್ವದೇಶದಲ್ಲಾಗಲೀ ಹೊರದೇಶದಲ್ಲಾಗಲೀ ನಿನ್ನ ಧರ್ಮವು ವಿನಾಶವನ್ನು ಹೊಂದುವುದಿಲ್ಲ.

ಧರ್ಮೇ ಚಾರ್ಥೇ ಚ ಕಾಮೇ ಚ ಧರ್ಮ ಏವೋತ್ತರೋ ಭವೇತ್ ।
ಅಸ್ಮಿಂಲ್ಲೋಕೇ ಪರೇ ಚೈವ ಧರ್ಮವಿತ್ ಸುಖಮೇಧತೇ ॥೫೨॥

ಧರ್ಮಾರ್ಥಕಾಮಗಳಲ್ಲಿ ಧರ್ಮವೇ ಶ್ರೇಷ್ಠವಾದುದು; ಧರ್ಮವನ್ನು ಸಂಪಾದಿಸುವವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ತ್ಯಜಂತಿ ದಾರಾನ್ ಪ್ರಾಣಾಂಶ್ಚ ಮನುಷ್ಯಾಃ ಪ್ರತಿಪೂಜಿತಾಃ ॥೫೩॥

ಪ್ರಜೆಗಳನ್ನು ಸರಿಯಾಗಿ ಪೂಜಿಸಿದರೆ ಅವರು ರಾಜನ ಸಲುವಾಗಿ ಪತ್ನಿಯರನ್ನೂ, ಪ್ರಾಣವನ್ನೂ ತೊರೆಯುತ್ತಾರೆ.

ಅಪ್ರಮಾದಶ್ಚ ಶೌಚಂ ಚ ತಾತ ಭೂತಿಕರಂ ಮಹತ್ ।
ಏತೇಭ್ಯಶ್ಚೈವ ಮಾಂಧಾತಃ ಸತತಂ ಮಾ ಪ್ರಮಾದಿಥಾಃ ॥೫೪॥

ಎಲೈ ಪ್ರೀತಿಪಾತ್ರನೇ! ಅಪ್ರಮಾದ ಮತ್ತು ಶೌಚ ಇವು ಏಳಿಗೆಗೆ ದೊಡ್ಡ ಕಾರಣವಾದವುಗಳು. ಎಲೈ ಮಾಂಧಾತೃವೇ! ಇವುಗಳ ವಿಷಯದಲ್ಲಿ ಎಂದೂ ಪ್ರಮಾದವನ್ನು ಮಾಡಬೇಡ.

ಅಪ್ರಮತ್ತೋ ಭವೇದ್ ರಾಜಾ ಛಿದ್ರದರ್ಶೀ ಪರಾತ್ಮನೋಃ ।
ನಾಸ್ಯ ಚ್ಛಿದ್ರಂ ಪರಃ ಪಶ್ಯೇಚ್ಛಿದ್ರೇಷು ಪರಮನ್ವಿಯಾತ್ ॥೫೫॥

ರಾಜನು ಯಾವಾಗಲೂ ಎಚ್ಚರಿಕೆಯಿಂದಿದ್ದು, ಶತ್ರುಗಳ ಮತ್ತು ತನ್ನ ದೌರ್ಬಲ್ಯವನ್ನು ಗಮನಿಸಬೇಕು. ತನ್ನ ದೌರ್ಬಲ್ಯಗಳು ಇನ್ನೊಬ್ಬರಿಗೆ ತಿಳಿಯದಂತೆ ಶತ್ರುವಿನ ದೌರ್ಬಲ್ಯವನ್ನು ಗಮನಿಸಿ ಅವನ ಮೇಲೆ ಎರಗಬೇಕು.

ಏತದ್ ವೃತ್ತಂ ವಾಸವಸ್ಯ ಯಮಸ್ಯ ವರುಣಸ್ಯ ಚ।
ರಾಜರ್ಷೀಣಾಂ ಮಹಾರಾಜ ವೃತ್ತಂ ರಾಜರ್ಷಿಸೇವಿತಮ್ ॥೫೬॥

ಎಲೈ ಮಹಾರಾಜನೇ! ಇದು ಇಂದ್ರನ, ಯಮನ, ವರುಣನ ಮತ್ತು ರಾಜರ್ಷಿಗಳ ನಡವಳಿಕೆ. ಈ ನಡವಳಿಕೆಯು ರಾಜರ್ಷಿಗಳಿಂದ ಸೇವಿತವಾದುದು.

ತತ್ ಕುರುಷ್ವ ಮಹಾರಾಜ ವೃತ್ತಂ ರಾಜರ್ಷಿಸೇವಿತಮ್।
ಆತಿಷ್ಠ ದಿವ್ಯಂ ಪಂಥಾನಮಹ್ನಾಯ ಭರತರ್ಷಭ ॥೫೭॥

ಎಲೈ ಮಹಾರಾಜನೇ! ರಾಜರ್ಷಿಗಳಿಂದ ಸೇವಿತವಾದ ಅಂತಹ ನಡತೆಯನ್ನು ಹೊಂದಿ, ಎಲೈ ಭರತರ್ಷಭನೇ ನಿಶ್ಚಯವಾಗಿ ದಿವ್ಯಮಾರ್ಗದಲ್ಲಿ ಹೋಗುವವನಾಗು.

ಧರ್ಮವೃತ್ತಂ ಹಿ ರಾಜಾನಂ ಪ್ರೇತ್ಯ ಚೇಹ ಚ ಭಾರತ।
ದೇವರ್ಷಿಪಿತೃಗಂಧರ್ವಾಃ ಕೀರ್ತಯಂತ್ಯಮಿತೌಜಸಃ ॥೫೮॥

ಎಲೈ ಭಾರತನೇ! ಧರ್ಮವನ್ನು ಅನುಸರಿಸುವ ರಾಜನನ್ನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಅಮಿತಪರಾಕ್ರಮಿಗಳಾದ ದೇವರ್ಷಿ-ಪಿತೃ-ಗಂಧರ್ವರು ಕೀರ್ತಿಸುತ್ತಾರೆ.

ಸ ಏವಮುಕ್ತೋ ಮಾಂಧಾತಾ ತೇನೋಚಥ್ಯೇನ ಭಾರತ।
ಕೃತವಾನವಿಶಂಕಸ್ತದೇಕಃ ಪ್ರಾಪ ಚ ಮೇದಿನೀಮ್ ॥೫೯॥

ಎಲೈ ಭಾರತನೇ! ಉಚಥ್ಯರಿಂದ ಹೀಗೆ ಹೇಳಲ್ಪಟ್ಟ ಮಾಂಧಾತೃವು ನಿಃಶಂಕೆಯಿಂದ ಹಾಗೆಯೇ ಮಾಡಿ ಒಬ್ಬನೇ ಸಮಗ್ರವಾದ ಭೂಮಿಯನ್ನು ಪಡೆದನು.

ಭವಾನಪಿ ತಥಾ ಸಮ್ಯಕ್ ಮಾಂಧಾತೇವ ಮಹೀಪತಿಃ।
ಧರ್ಮಂ ಕೃತ್ವಾ ಮಹೀಂ ರಕ್ಷನ್ ಸ್ವರ್ಗೇ ಸ್ಥಾನಮವಾಪ್ಸ್ಯಸಿ ॥೬೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಿನವತಿತಮೋಽಧ್ಯಾಯಃ ॥೯೩॥

ನೀನೂ ಸಹ ಮಾಂಧಾತೃರಾಜನಂತೆ ಧರ್ಮವನ್ನು ಚೆನ್ನಾಗಿ ಆಚರಿಸಿ, ಭೂಮಿಯನ್ನು ಚೆನ್ನಾಗಿ ರಕ್ಷಿಸಿ, ಸ್ವರ್ಗದಲ್ಲಿ ಸ್ಥಾನವನ್ನು ಹೊಂದುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೯೩ನೆಯ ಅಧ್ಯಾಯವು ಮುಗಿಯಿತು.

—೦—

೯೪. ತೊಂಬತ್ತನಾಲ್ಕನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದದಲ್ಲಿ ರಾಜಧರ್ಮಕಥನ

ಯುಧಿಷ್ಠಿರಃ

ಕಥಂ ಧರ್ಮೇ ಸ್ಥಾತುಮಿಚ್ಛನ್ ರಾಜಾ ವರ್ತೇತ ಧಾರ್ಮಿಕಃ।
ಪೃಚ್ಛಾಮಿ ತ್ವಾ ಕುರುಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಪಿತಾಮಹನೇ! ಕುರುಶ್ರೇಷ್ಠನೇ! ಧರ್ಮದಲ್ಲಿ ಇರಲು ಬಯಸುವ ಧಾರ್ಮಿಕನಾದ ರಾಜನು ಹೇಗೆ ನಡೆದುಕೊಳ್ಳಬೇಕೆಂದು ನಿನ್ನನ್ನು ಕೇಳುತ್ತಿದ್ದೇನೆ. ಅದನ್ನು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಗೀತಂ ದೃಷ್ಟಾರ್ಥತತ್ತ್ವೇನ ವಾಮದೇವೇನ ಧೀಮತಾ ॥೨॥

ಭೀಷ್ಮರು – ಈ ವಿಷಯದಲ್ಲಿಯೂ ಸಹ ಸರ್ವಜ್ಞರೂ ಮೇಧಾವಿಗಳೂ ಆದ ವಾಮದೇವ ಋಷಿಗಳು ಹಾಡಿದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ರಾಜಾ ವಸುಮನಾ ನಾಮ ಕೌಸಲ್ಯೋ ಬಲವಾನ್ ಶುಚಿಃ।
ಮಹರ್ಷಿಂ ಪರಿಪಪ್ರಚ್ಛ ವಾಮದೇವಂ ಯಶಸ್ವಿನಮ್ ॥೩॥

ಕೋಸಲದೇಶದ ರಾಜನಾದ, ಬಲಿಷ್ಠನೂ, ಶುಚಿಯೂ ಆದ ವಸುಮನನು ಕೀರ್ತಿಶಾಲಿಗಳಾದ ವಾಮದೇವಮಹರ್ಷಿಗಳನ್ನು ಪ್ರಶ್ನೆ ಮಾಡಿದನು.

ಧರ್ಮಾರ್ಥಸಹಿತಂ ವಾಕ್ಯಂ ಭಗವನ್ನನುಶಾಧಿ ಮಾಮ್ ।
ಯೇನ ವೃತ್ತೇನ ವೈ ತಿಷ್ಠನ್ ನ ಚ್ಯವೇಯಂ ಸ್ವಧರ್ಮತಃ ॥೪॥

ಪೂಜ್ಯರೇ! ಧರ್ಮಾರ್ಥಸಹಿತವಾದ ವಚನಗಳನ್ನು ನನಗೆ ಉಪದೇಶ ಮಾಡಿ. ಎಂತಹ ನಡತೆಯನ್ನು ಅಡವಳಿಸಿಕೊಂಡರೆ ನಾನು ನನ್ನ ಧರ್ಮದಿಂದ ಚ್ಯುತನಾಗುವುದಿಲ್ಲವೋ ಅಂತಹ ಮಾತನ್ನು ಹೇಳಿರಿ. (ಎಂದು ಕೇಳಿದನು).

ತಮಬ್ರವೀದ್ ವಾಮದೇವಸ್ತಪಸ್ವೀ ಜಪತಾಂವರಃ ।
ಹೇಮವರ್ಣಂ ಸುಖಾಸೀನಂ ಯಯಾತಿಮಿವ ನಾಹುಷಮ್ ॥೫॥

ಆಗ ತಪಸ್ವಿಗಳೂ ಜಪವನ್ನು ಮಾಡುವವರಲ್ಲಿ ಶ್ರೇಷ್ಠರೂ ಆದ ವಾಮದೇವರು ನಹುಷಪುತ್ರನಾದ ಯಯಾತಿಯಂತೆ ಸುವರ್ಣವರ್ಣನಾಗಿ ಸುಖಾಸೀನನಾಗಿದ್ದ ಅವನನ್ನು ಕುರಿತು ಹೇಳಿದರು.

ಧರ್ಮಮೇವಾನುವರ್ತಸ್ವ ನ ಧರ್ಮಾದ್ ವಿದ್ಯತೇ ಪರಮ್ ।
ಧರ್ಮೇ ಸ್ಥಿತಾ ಹಿ ರಾಜಾನೋ ಜಯಂತಿ ಪೃಥಿವೀಮಿಮಾಮ್ ॥೬॥

ಧರ್ಮವನ್ನೇ ಅನುಸರಿಸು, ಧರ್ಮಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಧರ್ಮವನ್ನು ಆಚರಿಸುವ ರಾಜರು ಈ ಭೂಮಿಯನ್ನು ಗೆಲ್ಲುತ್ತಾರೆ.

ಅರ್ಥಸಿದ್ಧೇಃ ಪರಂ ಧರ್ಮಂ ಮನ್ಯತೇ ಯೋ ಮಹೀಪತಿಃ ।
ಋತಾಂ ಚ ಕುರುತೇ ಬುದ್ಧಿಂ ಸ ಧರ್ಮೇಣ ವಿರೋಚತೇ ॥೭॥

ಅರ್ಥಸಿದ್ಧಿಗಿಂತಲೂ ಧರ್ಮಸಿದ್ಧಿಯೇ ಶ್ರೇಷ್ಠವೆಂದು ಯಾವ ರಾಜನು ತಿಳಿಯುತ್ತಾನೆಯೋ ಅಂತಹ ಸತ್ಯವಾದ ಬುದ್ಧಿಯನ್ನು ಹೊಂದಿದ ರಾಜನು ಧರ್ಮದಿಂದ ವಿರಾಜಿಸುತ್ತಾನೆ.

ಅಧರ್ಮದರ್ಶೀ ಯೋ ರಾಜಾ ಬಲಾದೇವ ಪ್ರವರ್ತತೇ ।
ಕ್ಷಿಪ್ರಮೇವಾಪಯಾತೋಽಸ್ಮಾದುಭೌ ಪ್ರಥಮಮಧ್ಯಮೌ ॥೮॥

ಧರ್ಮಜ್ಞಾನವಿಲ್ಲದೇ ಯಾವ ರಾಜನು ಕೇವಲ ಬಲದಿಂದಲೇ ಪ್ರವೃತ್ತಿಯನ್ನು ಮಾಡುತ್ತಾನೆಯೋ ಅವನು ಶೀಘ್ರವಾಗಿ ಧರ್ಮವನ್ನೂ ಮತ್ತು ಮಧ್ಯಮವಾದ ಅರ್ಥಕಾಮಗಳನ್ನೂ ಕಳೆದುಕೊಳ್ಳುತ್ತಾನೆ.

ಅಸತ್ಪಾಪಿಷ್ಠಸಚಿವೋ ವಧ್ಯೋ ಲೋಕಸ್ಯ ಧರ್ಮಹಾ।
ಸಹೈವ ಪರಿವಾರೇಣ ಕ್ಷಿಪ್ರಮೇವಾವಸೀದತಿ ॥೯॥

ದುರ್ಜನನೂ ಪಾಪಿಷ್ಠನೂ ಧರ್ಮಘಾತಕನೂ ಆದ ಸಚಿವನು (ಸಚಿವನನ್ನು ಹೊಂದಿದ ರಾಜನು) ಲೋಕದಲ್ಲಿ ವಧ್ಯನಾಗುತ್ತಾನೆ. ಅವನು ಪರಿವಾರಸಹಿತನಾಗಿ ಶೀಘ್ರವಾಗಿ ನಾಶವನ್ನು ಹೊಂದುತ್ತಾನೆ.

ಅರ್ಥಾನಾಮನನುಷ್ಠಾತಾ ಕಾಮಚಾರೀ ವಿಕತ್ಥನಃ।
ಅಪಿ ಸರ್ವಾಂ ಮಹೀಂ ಲಬ್ಧ್ವಾ ಕ್ಷಿಪ್ರಮೇವ ವಿನಶ್ಯತಿ ॥೧೦॥

ಪ್ರಜೆಗಳ ಅರ್ಥಗಳನ್ನು ಅನುಷ್ಠಾನ ಮಾಡದ ಕಾಮಚಾರಿಯೂ, ತನ್ನನ್ನೇ ತಾನು ಹೊಗಳಿಕೊಳ್ಳುವವನೂ ಆದ ರಾಜನು ಸಮಗ್ರವಾದ ಭೂಮಿಯನ್ನು ಪಡೆದರೂ ಕ್ಷಿಪ್ರವಾಗಿ ನಾಶವನ್ನು ಹೊಂದುತ್ತಾನೆ.

ಅಥಾದದಾನಃ ಕಲ್ಯಾಣಮನಸೂಯುರ್ಜಿತೇಂದ್ರಿಯಃ।
ವರ್ಧತೇ ಮತಿಮಾನ್ ರಾಜಾ ಸ್ರೋತೋಭಿರಿವ ಸಾಗರಃ ॥೧೧॥

ಹಾಗಲ್ಲದೇ ಇನ್ನೊಬ್ಬರ ಹಿತವಚನವನ್ನು ಕೇಳಿ, ಜಿತೇಂದ್ರಿಯನಾಗಿ, ಅಸೂಯಾ-ರಹಿತನಾಗಿ ಶುಭವನ್ನು ಆಚರಿಸುವ ಬುದ್ಧಿವಂತನಾದ ರಾಜನು ನದಿಗಳ ಪ್ರವಾಹದಿಂದ ಸಾಗರವು ಉಕ್ಕುವಂತೆ ಅಭಿವೃದ್ಧಿಯನ್ನು ಪಡೆಯುತ್ತಾನೆ.

ನ ಪೂರ್ಣೋಽಸ್ಮೀತಿ ಮನ್ಯೇತ ಧರ್ಮತಃ ಕಾಮತೋಽರ್ಥತಃ।
ಬುದ್ಧಿತೋ ಮಿತ್ರತಶ್ಚಾಪಿ ಸತತಂ ವಸುಧಾಧಿಪಃ ॥೧೨॥

ರಾಜನು ಧರ್ಮದಿಂದಾಗಲೀ, ಕಾಮದಿಂದಾಗಲೀ, ಅರ್ಥದಿಂದಾಗಲೀ, ಬುದ್ಧಿ

-ಯಿಂದಾಗಲೀ, ಮಿತ್ರರಿಂದಾಗಲೀ ನಾನು ಪರಿಪೂರ್ಣನಾಗಿದ್ದೇನೆಂದು ಎಂದೂ ಚಿಂತಿಸಬಾರದು.

ಏತೇಷ್ವೇವ ಹಿ ಸರ್ವೇಷು ಲೋಕಯಾತ್ರಾ ಪ್ರತಿಷ್ಠಿತಾ ।
ಏತಾನಿ ಶೃಣ್ವನ್ ಲಭತೇ ಯಶಃ ಕೀರ್ತಿಂ ಶ್ರಿಯಃ ಪ್ರಜಾಃ ॥೧೩॥

ಇವುಗಳಲ್ಲಿಯೇ ಲೋಕಯಾತ್ರೆಯು ಪ್ರತಿಷ್ಠಿತವಾಗಿದೆ. ಇವುಗಳನ್ನು ಕೇಳಿ ಅದರಂತೆ ನಡೆದುಕೊಳ್ಳುವ ರಾಜನು ಈ ಲೋಕದಲ್ಲಿ ಯಶಸ್ಸನ್ನೂ, ಸಂಪತ್ತನ್ನೂ, ಪ್ರಜೆಗಳನ್ನೂ ಪರಲೋಕದಲ್ಲಿ ಕೀರ್ತಿಯನ್ನೂ ಪಡೆಯುತ್ತಾನೆ.

ಏವಂ ಯೋ ಧರ್ಮಸಂರಂಭೀ ಧರ್ಮಾರ್ಥಪರಿಚಿಂತಕಃ ।
ಅರ್ಥಾನ್ ಸಮೀಕ್ಷ್ಯಾರಭತೇ ಸ ಧ್ರುವಂ ಮಹದಶ್ನುತೇ ॥೧೪॥

ಈ ರೀತಿಯಲ್ಲಿ ಧರ್ಮದಲ್ಲಿ ಹಠವುಳ್ಳವನಾಗಿ ಧರ್ಮಾರ್ಥಗಳನ್ನು ಚೆನ್ನಾಗಿ ಚಿಂತಿಸಿ ಅರ್ಥಗಳನ್ನು ವಿಮರ್ಶಿಸಿ ಆರಂಭಿಸುವನು ನಿಶ್ಚಿತವಾಗಿ ದೊಡ್ಡದನ್ನು ಸಾಧಿ-ಸುತ್ತಾನೆ.

ಅದಾತಾ ಹ್ಯನತಿಸ್ನೇಹೋ ದಂಡೇನಾವರ್ತಯನ್ ಪ್ರಜಾಃ ।
ಸಾಹಸಪ್ರಕೃತೀ ರಾಜಾ ಕ್ಷಿಪ್ರಮೇವ ವಿನಶ್ಯತಿ ॥೧೫॥

ದಾನವನ್ನು ಮಾಡದ, ಪ್ರಜೆಗಳಲ್ಲಿ ಬಹಳ ಸ್ನೇಹವನ್ನು ಹೊಂದದ, ಪ್ರಜೆಗಳಿಗೆ ದಂಡವನ್ನು ವಿಧಿಸುವ ಸಾಹಸಪ್ರಕೃತಿಯ ರಾಜನು ಶೀಘ್ರವಾಗಿ ವಿನಾಶವನ್ನು ಹೊಂದುತ್ತಾನೆ.

ಅಥ ಪಾಪಂ ಕೃತಂ ಬುದ್ಧ್ಯಾ ನ ಚ ಪಶ್ಯತ್ಯಬುದ್ಧಿಮಾನ್ ।
ಅಕೀರ್ತ್ಯಾಪಿ ಸಮಾಯುಕ್ತೋ ಮೃತೋ ನರಕಮಶ್ನುತೇ ॥೧೬॥

ಅಲ್ಲದೇ ಪಾಪವನ್ನು ಮಾಡಿ, ತನ್ನ ಬುದ್ಧಿಯಿಂದ ವಿಮರ್ಶಿಸಿ ಇದು ಪಾಪ-ವೆಂದು ತಿಳಿಯದ ಬುದ್ಧಿಹೀನನಾದ ರಾಜನು ಅಪಕೀರ್ತಿಯಿಂದಲೂ ಕೂಡಿದ-ವನಾಗಿ ಮೃತನಾಗಿ ನರಕವನ್ನು ಹೊಂದುತ್ತಾನೆ.

ಅಥ ಮಾನಯಿತುರ್ದಾತುಃ ಶುಕ್ಲಸ್ಯ ರಸವೇದಿನಃ।
ವ್ಯಸನಂ ಸ್ವಮಿವೋತ್ಪನ್ನಂ ವಿಜಿಘ್ರಾಂಸಂತಿ ಮಾನವಾಃ ॥೧೭॥

ಇನ್ನು ಪ್ರಜೆಗಳನ್ನು ಸನ್ಮಾನಿಸುವ, ಪ್ರಜೆಗಳಿಗೆ ದಾನವನ್ನು ಮಾಡುವ, ಶುದ್ಧನಾದ, ಸಾರಗ್ರಾಹಿಯಾದ ರಾಜನಿಗೆ ಉಂಟಾಗುವ ವ್ಯಸನವನ್ನು ಪ್ರಜೆಗಳು ತಮ್ಮ ವ್ಯಸನವೆಂದೇ ತಿಳಿದು ಅದನ್ನು ಪರಿಹರಿಸಲು ಬಯಸುತ್ತಾರೆ.

ಯಸ್ಯ ನಾಸ್ತಿ ಗುರುರ್ಧರ್ಮೇ ನ ಚಾನ್ಯಾನನುಪೃಚ್ಛತಿ।
ಸುಖಿತಂತ್ರೋಽರ್ಥಲಾಭೇಷು ನ ಚಿರಂ ಮಹದಶ್ನುತೇ ॥೧೮॥

ಯಾವನಿಗೆ ಧರ್ಮವನ್ನು ಉಪದೇಶಿಸುವ ಗುರುವಿಲ್ಲವೋ, ಅಥವಾ ಅವನು ಇನ್ನೊಬ್ಬರನ್ನು ಕೇಳುವುದಿಲ್ಲವೋ, ಸುಖದಿಂದ ಪ್ರೇರಿತನಾಗಿ ಅರ್ಥಲಾಭದಲ್ಲಿ ಆಸಕ್ತನಾಗಿರುತ್ತಾನೆಯೋ ಅವನು ಬಹಳಕಾಲ ಯಾವ ದೊಡ್ಡದನ್ನೂ ಅನುಭವಿಸುವುದಿಲ್ಲ.

ಗುರುಪ್ರಧಾನೋ ಧರ್ಮೇಷು ಸ್ವಯಮರ್ಥಾನ್ಸವೇಕ್ಷಿತಾ।
ಧರ್ಮಪ್ರಧಾನೋ ಲೋಕೇಷು ಸುಚಿರಂ ಮಹದಶ್ನುತೇ ॥೧೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರ್ನವತಿತಮೋಽಧ್ಯಾಯಃ ॥೯೪॥

ಧರ್ಮದ ವಿಷಯದಲ್ಲಿ ಗುರುಗಳ ಉಪದೇಶವನ್ನು ಪ್ರಧಾನವಾಗಿ ಹೊಂದಿ, ಅರ್ಥಗಳನ್ನು ತಾನೇ ಪರೀಕ್ಷಿಸಿ, ಧರ್ಮಪ್ರಧಾನನಾದ ರಾಜನು ಲೋಕದಲ್ಲಿ ಬಹುಕಾಲ ಶ್ರೇಷ್ಠವಾದುದನ್ನು ಪಡೆಯುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪ನೆಯ ಅಧ್ಯಾಯವು ಮುಗಿಯಿತು.

—0—

೯೫. ತೊಂಬತ್ತೈದನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದ

ವಾಮದೇವಃ

ಯತ್ರಾಧರ್ಮಂ ಪ್ರಣಯತೇ ದುರ್ಬಲೇ ಬಲವತ್ತರಃ।
ತಾಂ ವೃತ್ತಿಮುಪಜೀವಂತಿ ಯೇ ಭವಂತಿ ತದನ್ವಯಾಃ ॥೧॥

ರಾಜಾನಮನುವರ್ತಂತೇ ತಂ ಪಾಪಾಭಿಪ್ರವರ್ತಕಮ್।
ಅವಿನೀತಮನುಷ್ಯಂ ತತ್ ಕ್ಷಿಪ್ರಂ ರಾಷ್ಟ್ರಂ ವಿನಶ್ಯತಿ ॥೨॥

ವಾಮದೇವ – ಎಲ್ಲಿ ಬಲಿಷ್ಠನಾದ ರಾಜನು ದುರ್ಬಲನಾದವನ ಮೇಲೆ ಅಧರ್ಮವನ್ನು ಪ್ರಯೋಗಿಸುತ್ತಾನೆಯೋ ಮತ್ತು ರಾಜಕುಲಕ್ಕೆ ಸೇರಿದವರು ಅದೇ ನಡತೆಯನ್ನು ಉಪಜೀವಿಸುತ್ತಾರೆಯೋ ಮತ್ತು ಪ್ರಜೆಗಳು ಪಾಪಪ್ರವರ್ತಕನಾದ ರಾಜನನ್ನು ಅನುಸರಿಸುತ್ತಾರೆಯೋ ಅಂತಹ ಅವಿನೀತರಾದ ಮನುಷ್ಯರಿಗಿರುವ ರಾಷ್ಟ್ರವು ಶೀಘ್ರವಾಗಿ ವಿನಾಶವನ್ನು ಹೊಂದುತ್ತದೆ.

ಯದ್‌ವೃತ್ತಿಮುಪಜೀವಂತಿ ಪ್ರಕೃತಿಸ್ಥಸ್ಯ ಮಾನವಾಃ।
ತದೇವ ವಿಷಮಸ್ಥಸ್ಯ ಸ್ವಜನೋಽಪಿ ನ ಮೃಷ್ಯತೇ ॥೩॥

ಮನುಷ್ಯರು ಸಂವೃದ್ಧನಾದವನ ಯಾವ ನಡತೆಯನ್ನು ಉಪಜೀವಿಸಿಕೊಂಡು ಬದುಕುತ್ತಾರೆಯೋ ಆ ವ್ಯಕ್ತಿಯು ವಿಷಮಸನ್ನಿವೇಶಕ್ಕೆ ಒಳಗಾದಾಗ ಅದೇ ಮಾನವರು ಮತ್ತು ಸ್ವಜನರು ಅದೇ ನಡತೆಯನ್ನು ಸಹಿಸುವುದಿಲ್ಲ.

ಸಾಹಸಪ್ರಕೃತಿರ್ಯತ್ರ ಕುರುತೇ ಕಿಂಚಿದುಲ್ಬಣಮ್।
ಅಶಾಸ್ತ್ರಲಕ್ಷಣೋ ರಾಜಾ ಕ್ಷಿಪ್ರಮೇವ ವಿನಶ್ಯತಿ ॥೪॥

ವಿಚಾರಮಾಡದೇ ಕಾರ್ಯವನ್ನು ಮಾಡುವ ರಾಜನು ಶಾಸ್ತ್ರವಿಹಿತವಲ್ಲದ ಒಂದು ಉಲ್ಬಣವಾದ ಕಾರ್ಯವನ್ನು ಮಾಡಿದರೆ ತತ್ಕ್ಷಣ ನಾಶವನ್ನು ಹೊಂದುತ್ತಾನೆ.

ಅಥ ಮಾನಯಿತುರ್ದಾತುಃ ಶುಕ್ಲಸ್ಯ ರಸವೇದಿನಃ।
ವ್ಯಸನಂ ಸ್ವಮಿವೋತ್ಪನ್ನಂ ವಿಜಿಘಾಂಸಂತಿ ಮಾನವಾಃ ॥೧೭॥

ಇನ್ನು ಪ್ರಜೆಗಳನ್ನು ಸನ್ಮಾನಿಸುವ, ಪ್ರಜೆಗಳಿಗೆ ದಾನವನ್ನು ಮಾಡುವ, ಶುದ್ಧನಾದ, ಸಾರಗ್ರಾಹಿಯಾದ ರಾಜನಿಗೆ ಉಂಟಾಗುವ ವ್ಯಸನವನ್ನು ಪ್ರಜೆಗಳು ತಮ್ಮ ವ್ಯಸನವೆಂದೇ ತಿಳಿದು ಅದನ್ನು ಪರಿಹರಿಸಲು ಬಯಸುತ್ತಾರೆ.

ಯಸ್ಯ ನಾಸ್ತಿ ಗುರುರ್ಧರ್ಮೇ ನ ಚಾನ್ಯಾನನುಪೃಚ್ಛತಿ।
ಸುಖಿತಂತ್ರೋಽರ್ಥಲಾಭೇಷು ನ ಚಿರಂ ಮಹದಶ್ನುತೇ ॥೧೮॥

ಯಾವನಿಗೆ ಧರ್ಮವನ್ನು ಉಪದೇಶಿಸುವ ಗುರುವಿಲ್ಲವೋ, ಅಥವಾ ಅವನು ಇನ್ನೊಬ್ಬರನ್ನು ಕೇಳುವುದಿಲ್ಲವೋ, ಸುಖದಿಂದ ಪ್ರೇರಿತನಾಗಿ ಅರ್ಥಲಾಭದಲ್ಲಿ ಆಸಕ್ತನಾಗಿರುತ್ತಾನೆಯೋ ಅವನು ಬಹಳಕಾಲ ಯಾವ ದೊಡ್ಡದನ್ನೂ ಅನುಭವಿಸುವುದಿಲ್ಲ.

ಗುರುಪ್ರಧಾನೋ ಧರ್ಮೇಷು ಸ್ವಯಮರ್ಥಾನ್ವವೇಕ್ಷಿತಾ।
ಧರ್ಮಪ್ರಧಾನೋ ಲೋಕೇಷು ಸುಚಿರಂ ಮಹದಶ್ನುತೇ ॥೧೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರ್ನವತಿತಮೋಽಧ್ಯಾಯಃ ॥೯೪॥

ಧರ್ಮದ ವಿಷಯದಲ್ಲಿ ಗುರುಗಳ ಉಪದೇಶವನ್ನು ಪ್ರಧಾನವಾಗಿ ಹೊಂದಿ, ಅರ್ಥಗಳನ್ನು ತಾನೇ ಪರೀಕ್ಷಿಸಿ, ಧರ್ಮಪ್ರಧಾನನಾದ ರಾಜನು ಲೋಕದಲ್ಲಿ ಬಹುಕಾಲ ಶ್ರೇಷ್ಠವಾದುದನ್ನು ಪಡೆಯುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೪ನೆಯ ಅಧ್ಯಾಯವು ಮುಗಿಯಿತು.

—0—

೯೫. ತೊಂಬತ್ತೈದನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದ

ವಾಮದೇವಃ

ಯತ್ರಾಧರ್ಮಂ ಪ್ರಣಯತೇ ದುರ್ಬಲೇ ಬಲವತ್ತರಃ।
ತಾಂ ವೃತ್ತಿಮುಪಜೀವಂತಿ ಯೇ ಭವಂತಿ ತದನ್ವಯಾಃ ॥೧॥

ರಾಜಾನಮನುವರ್ತಂತೇ ತಂ ಪಾಪಾಭಿಪ್ರವರ್ತಕಮ್।
ಅವಿನೀತಮನುಷ್ಯಂ ತತ್ ಕ್ಷಿಪ್ರಂ ರಾಷ್ಟ್ರಂ ವಿನಶ್ಯತಿ ॥೨॥

ವಾಮದೇವ – ಎಲ್ಲಿ ಬಲಿಷ್ಠನಾದ ರಾಜನು ದುರ್ಬಲನಾದವನ ಮೇಲೆ ಅಧರ್ಮವನ್ನು ಪ್ರಯೋಗಿಸುತ್ತಾನೆಯೋ ಮತ್ತು ರಾಜಕುಲಕ್ಕೆ ಸೇರಿದವರು ಅದೇ ನಡತೆಯನ್ನು ಉಪಜೀವಿಸುತ್ತಾರೆಯೋ ಮತ್ತು ಪ್ರಜೆಗಳು ಪಾಪಪ್ರವರ್ತಕನಾದ ರಾಜನನ್ನು ಅನುಸರಿಸುತ್ತಾರೆಯೋ ಅಂತಹ ಅವಿನೀತರಾದ ಮನುಷ್ಯರಿಗಿರುವ ರಾಷ್ಟ್ರವು ಶೀಘ್ರವಾಗಿ ವಿನಾಶವನ್ನು ಹೊಂದುತ್ತದೆ.

ಯದ್‌ವೃತ್ತಿಮುಪಜೀವಂತಿ ಪ್ರಕೃತಿಸ್ಥಸ್ಯ ಮಾನವಾಃ।
ತದೇವ ವಿಷಮಸ್ಥಸ್ಯ ಸ್ವಜನೋಽಪಿ ನ ಮೃಷ್ಯತೇ ॥೩॥

ಮನುಷ್ಯರು ಸಂವೃದ್ಧನಾದವನ ಯಾವ ನಡತೆಯನ್ನು ಉಪಜೀವಿಸಿಕೊಂಡು ಬದುಕುತ್ತಾರೆಯೋ ಆ ವ್ಯಕ್ತಿಯು ವಿಷಮಸನ್ನಿವೇಶಕ್ಕೆ ಒಳಗಾದಾಗ ಅದೇ ಮಾನವರು ಮತ್ತು ಸ್ವಜನರು ಅದೇ ನಡತೆಯನ್ನು ಸಹಿಸುವುದಿಲ್ಲ.

ಸಾಹಸಪ್ರಕೃತಿರ್ಯತ್ರ ಕುರುತೇ ಕಿಂಚಿದುಲ್ಬಣಮ್।
ಅಶಾಸ್ತ್ರಲಕ್ಷಣೋ ರಾಜಾ ಕ್ಷಿಪ್ರಮೇವ ವಿನಶ್ಯತಿ ॥೪॥

ವಿಚಾರಮಾಡದೇ ಕಾರ್ಯವನ್ನು ಮಾಡುವ ರಾಜನು ಶಾಸ್ತ್ರವಿಹಿತವಲ್ಲದ ಒಂದು ಉಲ್ಬಣವಾದ ಕಾರ್ಯವನ್ನು ಮಾಡಿದರೆ ತತ್ಕ್ಷಣ ನಾಶವನ್ನು ಹೊಂದುತ್ತಾನೆ.

ಯೋಽತ್ಯಂತಾಚರಿತಾಂ ವೃತ್ತಿಂ ಕ್ಷತ್ರಿಯೋ ನಾನುವರ್ತತೇ।
ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ ॥೫॥

ಯಾವ ರಾಜನು ಯುದ್ಧದಲ್ಲಿ ಜಿತರಾದವರ ಮತ್ತು ಜಿತರಾಗದವರ ವಿಷಯದಲ್ಲಿ ಹಿಂದಿನಿಂದ ನಡೆಸಿಕೊಂಡು ಬಂದ ವೃತ್ತಿಯನ್ನು ಅನುಸರಿಸುವುದಿಲ್ಲವೋ ಅವನು ಕ್ಷತ್ರಿಯಧರ್ಮದಿಂದ ದೂರನಾಗುತ್ತಾನೆ.

ದ್ವಿಷಂತಂ ಕೃತಕಲ್ಯಾಣಂ ಗೃಹೀತ್ವಾ ನೃಪತೀ ರಣೇ।
ಯೋ ನ ಮಾನಯತೇ ದ್ವೇಷಾತ್ ಕ್ಷತ್ರಧರ್ಮಾದಪೈತಿ ಸಃ ॥೬॥

ತನ್ನ ರಾಜ್ಯದಲ್ಲಿ ಪ್ರಜೆಗಳಿಗೆ ಶುಭವನ್ನು ಮಾಡಿದ ಶತ್ರುರಾಜನನ್ನು ಯುದ್ಧದಲ್ಲಿ ಸೆರೆ ಹಿಡಿದು ಯಾವ ರಾಜನು ದ್ವೇಷದಿಂದ ಅವನನ್ನು ಸತ್ಕರಿಸುವುದಿಲ್ಲವೋ ಅವನು ಕ್ಷತ್ರಿಯಧರ್ಮದಿಂದ ಚ್ಯುತನಾಗುತ್ತಾನೆ.

ಶಕ್ತಃ ಸ್ಯಾತ್ ಸುಮುಖೋ ರಾಜಾ ಕುರ್ಯಾತ್ ಕಾರುಣ್ಯಮಾಪದಿ।
ಪ್ರಿಯೋ ಭವತಿ ಭೂತಾನಾಂ ನ ಚ ವಿಭ್ರಶ್ಯತೇ ಶ್ರಿಯಃ ॥೭॥

ಶಕ್ತನಾದ ರಾಜನು ಪ್ರಸನ್ನಮುಖನಾಗಿರಬೇಕು. ಆಪತ್ತಿನಲ್ಲಿ ಕರುಣೆಯನ್ನು ತೋರಿಸಬೇಕು. ಹಾಗೆ ಮಾಡಿದರೆ ಪ್ರಜೆಗಳಿಗೆ ಪ್ರಿಯನಾಗುತ್ತಾನೆ. ಮತ್ತು ಸಂಪತ್ತಿನಿಂದ ಚ್ಯುತನಾಗುವುದಿಲ್ಲ.

ಅಪ್ರಿಯಂ ಯಸ್ಯ ಕುರ್ವೀತ ಭೂಯಸ್ತಸ್ಯ ಪ್ರಿಯಂ ಚರೇತ್।
ನಚಿರೇಣ ಪ್ರಿಯಃ ಸ ಸ್ಯಾದ್ ಯೋಽಪ್ರಿಯಃ ಪ್ರಿಯಮಾಚರೇತ್ ॥೮॥

ರಾಜನು ಹಿಂದೆ ಯಾವನಿಗಾದರೂ ಅಪ್ರಿಯವನ್ನು ಮಾಡಿದ್ದರೆ ಪುನಃ ಒಂದು ಒಳ್ಳೆಯ ಸಂದರ್ಭದಲ್ಲಿ ಅವನಿಗೆ ಪ್ರಿಯವನ್ನು ಮಾಡಬೇಕು. ಅಪ್ರಿಯನಿಗೂ ಪ್ರಿಯವನ್ನು ಮಾಡುವ ರಾಜನು ಶೀಘ್ರವಾಗಿ ಅವನಿಗೂ ಪ್ರಿಯನಾಗುತ್ತಾನೆ.

ಮೃಷಾವಾದಂ ಪರಿಹರೇತ್ ಕುರ್ಯಾತ್ ಪ್ರಿಯಮಯಾಚಿತಃ।
ನ ಚ ಕಾಮಾನ್ನ ಸಂರಂಭಾನ್ನ ದ್ವೇಷಾದ್ ಧರ್ಮಮುತ್ಸೃಜೇತ್ ॥೯॥

ರಾಜನು ಸುಳ್ಳಾದ ಆಶ್ವಾಸನೆಗಳನ್ನು ಕೊಡುವುದನ್ನು ವರ್ಜಿಸಬೇಕು. ಪ್ರಾರ್ಥಿ-ತನಾಗದಿದ್ದರೂ ತಾನೇ ತಿಳಿದು ಪ್ರಜೆಗಳಿಗೆ ಹಿತವನ್ನು ಮಾಡಬೇಕು. ಕಾಮದಿಂದಾಗಲೀ, ಕ್ರೋಧದಿಂದಾಗಲೀ, ದ್ವೇಷದಿಂದಾಗಲೀ ಧರ್ಮವನ್ನು ಬಿಡಬಾರದು.

ನಾಪತ್ರಪೇತ ಪ್ರಶ್ನೇಷು ನಾಭಿಭವ್ಯಾಂ ಗಿರಂ ಸೃಜೇತ್ ।
ನ ತ್ವರೇತ ನ ಚಾಸೂಯೇತ್ ತಥಾ ಸಂಗೃಹ್ಯತೇ ಪರಃ ॥೧೦॥

ಪ್ರಶ್ನೆಯನ್ನು ಕೇಳಿದರೆ ಹಿಂಜರಿಯಬಾರದು. ಇನ್ನೊಬ್ಬರು ನಿರಾಕರಿಸುವಂತಹ ಮಾತುಗಳನ್ನಾಡಬಾರದು. ತ್ವರೆಯಿಂದ ಏನನ್ನೂ ಮಾಡಬಾರದು. ಯಾರಲ್ಲೂ ಅಸೂಯೆಯನ್ನು ಮಾಡಬಾರದು. ಹಾಗೆ ಮಾಡಿದರೆ ಪರನು ರಾಜನಿಗೆ ವಶನಾಗುತ್ತಾನೆ.

ಪ್ರಿಯೇ ನಾತಿಭೃಶಂ ಹೃಷ್ಯೇದಪ್ರಿಯೇ ನ ಚ ಸಂಜ್ವರೇತ್ ।
ನ ಮುಹ್ಯೇತದರ್ಥಕೃಚ್ಛ್ರೇಷು ಪ್ರಜಾಹಿತಮನುಸ್ಮರನ್ ॥೧೧॥

ಪ್ರಿಯವುಂಟಾದಾಗ ಬಹಳವಾಗಿ ಸಂತೋಷಪಡಬಾರದು. ಅಪ್ರಿಯವುಂಟಾದಾಗ ವಿಹ್ವಲನಾಗಬಾರದು. ಕಷ್ಟಸಂದರ್ಭಗಳಲ್ಲಿ ಪ್ರಮಾದಕ್ಕೆ ಒಳಗಾಗಬಾರದು. ಪ್ರಜೆಗಳ ಹಿತವನ್ನು ಯಾವಾಗಲೂ ಚಿಂತಿಸಬೇಕು.

ಯಃ ಪ್ರಿಯಂ ಕುರುತೇ ನಿತ್ಯಂ ಗುಣತೋ ವಸುಧಾಧಿಪಃ ।
ತಸ್ಯ ಕರ್ಮಾಣಿ ಸಿದ್ಧ್ಯಂತಿ ನ ಚ ಸಂತ್ಯಜ್ಯತೇ ಶ್ರಿಯಾ ॥೧೨॥

ಯಾವ ರಾಜನು ತನ್ನ ಗುಣಗಳಿಂದ ಪ್ರಜೆಗಳಿಗೆ ನಿತ್ಯವೂ ಪ್ರಿಯವನ್ನು ಮಾಡುತ್ತಾನೆಯೋ ಅವನ ಕಾರ್ಯಗಳು ಸಿದ್ಧಿಸುತ್ತವೆ. ಮತ್ತು ಅವನು ಸಂಪತ್ತಿನಿಂದ ಚ್ಯುತನಾಗುವುದಿಲ್ಲ.

ನಿವೃತ್ತಂ ಪ್ರತಿಕೂಲೇಭ್ಯೋ ವರ್ತಮಾನಮನುಪ್ರಿಯೇ ।
ಭಕ್ತಂ ಭಜೇತ ನೃಪತಿಸ್ತದ್ ವೈ ವೃತ್ತಂ ಸತಾಮಿಹ ॥೧೩॥

ತನಗೆ ಪ್ರತಿಕೂಲವನ್ನು ಮಾಡದೇ ತನ್ನ ಪ್ರಿಯದಲ್ಲಿ ನಿರತನಾದ ಅನುರಕ್ತನಾದ ವ್ಯಕ್ತಿಯನ್ನು ರಾಜನು ಆದರಿಸಬೇಕು. ಅದೇ ಸಜ್ಜನರ ನಡೆವಳಿಕೆ.

ಅಪ್ರಕೀರ್ಣೇಂದ್ರಿಯಂ ಪ್ರಾಜ್ಞಮತ್ಯಂತಾನುಗತಂ ಶುಚಿಮ್ ।
ಶಕ್ತಂ ಚೈವಾನುರಕ್ತಂ ಚ ಯುಂಜ್ಯಾನ್ಮಹತಿ ಕರ್ಮಣಿ ॥೧೪॥

ಇಂದ್ರಿಯಲೋಲುಪನಲ್ಲದ, ಪ್ರಾಜ್ಞನಾದ, ಅತ್ಯಂತವಾಗಿ ಹಿಂಬಾಲಿಸುವ, ಶುಚಿಯಾದ, ಸಮರ್ಥನಾದ, ಅನುರಾಗವುಳ್ಳ ಪುರುಷನನ್ನು ದೊಡ್ಡ ಕಾರ್ಯದಲ್ಲಿ ನಿಯೋಜಿಸಬೇಕು.

ಏವಮೇವ ಗುಣೈರ್ಯುಕ್ತೋ ಯೋ ನ ರಜ್ಯತಿ ಭೂಮಿಪಮ್ ।
ಭರ್ತುರರ್ಥೇಷ್ವಸೂಯಂತಂ ನ ತಂ ಯುಂಜೀತ ಕರ್ಮಣಿ ॥೧೫॥

ಇಂತಹ ಗುಣಗಳನ್ನು ಹೊಂದಿದ್ದರೂ ಯಾವನಿಗೆ ರಾಜನಲ್ಲಿ ಅನುರಾಗವಿಲ್ಲವೋ ರಾಜನ ಸಂಪತ್ತಿನಲ್ಲಿ ಅಸೂಯೆಯನ್ನು ಪಡುತ್ತಾನೆಯೋ ಅಂತಹವನನ್ನು ಕಾರ್ಯಗಳಲ್ಲಿ ನಿಯೋಜಿಸಬಾರದು.

ಮೂಢಮೈಂದ್ರಿಯಕಂ ಲುಬ್ಧಮನಾರ್ಯಚರಿತಂ ಶಠಮ್ ।
ಅನತೀತೋಪಧಂ ಹಿಂಸ್ರಂ ದುರ್ಬುದ್ಧಿಮಬಹುಶ್ರುತಮ್ ॥೧೬॥

ತ್ಯಕ್ತೋಪಾಂತಂ ಮದ್ಯಹತಂ ದ್ಯೂತಸ್ತ್ರೀಮೃಗಯಾಪರಮ್ ।
ಕಾರ್ಯೇ ಮಹತಿ ಯೋ ಯುಂಜ್ಯಾದ್ ಹೀಯತೇ ಸ ನೃಪಃ ಶ್ರಿಯಃ ॥೧೭॥

ಮೂಢನೂ, ಇಂದ್ರಿಯಲೋಲುಪನೂ, ಲೋಭಿಯೂ, ಅಸಭ್ಯನಡೆವಳಿಕೆಯುಳ್ಳವನೂ, ಶಠನೂ, ವಂಚಕನೂ, ಹಿಂಸಕನೂ, ದುರ್ಬುದ್ಧಿಯೂ, ಬಹುಶ್ರುತನಲ್ಲದವನೂ, ರಾಜನ ಸಾಮೀಪ್ಯವನ್ನು ತೊರೆದವನೂ, ಮದ್ಯಪಾನರತನೂ, ದ್ಯೂತ ಸ್ತ್ರೀ ಮತ್ತು ಬೇಟೆಗಳಲ್ಲಿ ರತನಾದವನೂ ಆದವನನ್ನು ರಾಜನು ದೊಡ್ಡ ಕಾರ್ಯಗಳಲ್ಲಿ ನಿಯೋಜಿಸಿದರೆ ತನ್ನ ಸಂಪತ್ತಿನಿಂದ ಚ್ಯುತನಾಗುತ್ತಾನೆ.

ರಕ್ಷಿತಾತ್ಮಾ ತು ಯೋ ರಾಜಾ ರಕ್ಷ್ಯಾನ್ ಯಶ್ಚಾನುರಕ್ಷತಿ।
ಪ್ರಜಾಶ್ಚ ತಸ್ಯ ವರ್ಧಂತೇ ಧ್ರುವಂ ಚ ಮಹದಶ್ನುತೇ ॥೧೮॥

ಯಾವ ರಾಜನು ತನ್ನನ್ನು ರಕ್ಷಿಸಿಕೊಂಡು ರಕ್ಷಿಸಲ್ಪಡಬೇಕಾದ ಪ್ರಜೆಗಳನ್ನು ರಕ್ಷಿಸುತ್ತಾನೆಯೋ ಅವನ ಪ್ರಜೆಗಳು ಅಭಿವೃದ್ಧಿಯನ್ನು ಹೊಂದುತ್ತಾರೆ. ಅವನು ನಿಶ್ಚಯವಾಗಿ ದೊಡ್ಡ ಕಾರ್ಯವನ್ನು ಸಾಧಿಸುತ್ತಾನೆ.

ಯೇ ಕೇಚಿದ್ ಭೂಮಿಪತಯಸ್ತಾನ್ ಸರ್ವಾನನ್ವವೇಕ್ಷಯೇತ್।
ಸುಹೃದ್ಭಿರನಭಿಖ್ಯಾತೈಸ್ತೇನ ರಾಜಾ ನ ರಿಷ್ಯತೇ ॥೧೯॥

ಸುತ್ತಮುತ್ತಲೂ ಯಾವ ರಾಜರಿದ್ದಾರೆಯೋ ಅಂತಹವರನ್ನು ಅವರಿಗೆ ತಿಳಿಯದಂತೆ ತನ್ನ ಸುಹೃಜ್ಜನರಿಂದ ಅವರ ನಡೆವಳಿಕೆಯನ್ನು ನೋಡಿಕೊಂಡಿರಬೇಕು. ಅಂತಹ ರಾಜನು ಅವನತಿಯನ್ನು ಹೊಂದುವುದಿಲ್ಲ.

ಅಪಕೃತ್ಯ ಬಲಸ್ಥಸ್ಯ ದೂರಸ್ಥೋಽಸ್ಮೀತಿ ನಾಶ್ವಸೇತ್।
ಶ್ಯೇನಾನುಚರಿತೈರ್ಹ್ಯೇತೇ ನಿಪತಂತಿ ಪ್ರಮಾದ್ಯತಃ ॥೨೦॥

ಬಲಿಷ್ಠನಾದವನಿಗೆ ಅಪಕಾರವನ್ನು ಮಾಡಿ ನಾನು ದೂರದಲ್ಲಿದ್ದೇನೆಂದು ಸಮಾಧಾನದಿಂದಿರಬಾರದು. ಅಂತಹವರು ರಾಜನು ಎಚ್ಚರ ತಪ್ಪಿದರೆ ಹದ್ದುಗಳಂತೆ ಮೇಲೆರಗುತ್ತಾರೆ.

ದೃಢಮೂಲಸ್ತ್ವದುಷ್ಟಾತ್ಮಾ ವಿದಿತ್ವಾ ಬಲಮಾತ್ಮನಃ।
ಅಬಲಾನಭಿಯುಂಜೀತ ನ ತು ಯೇ ಬಲವತ್ತರಾಃ ॥೨೧॥

ತನ್ನ ಮೂಲವನ್ನು ಭದ್ರಮಾಡಿಕೊಂಡು, ದುಷ್ಟಸ್ವಭಾವವನ್ನು ಹೊಂದದೆ ತನ್ನ ಸಾಮರ್ಥ್ಯವನ್ನು ತಿಳಿದುಕೊಂಡು ದುರ್ಬಲನಾದವನ ಮೇಲೆ ದಂಡೆತ್ತಿ ಹೋಗಬೇಕು. ತನಗಿಂತ ಬಲಿಷ್ಠರ ಮೇಲೆ ದಂಡೆತ್ತಿ ಹೋಗಬಾರದು.

ವಿಕ್ರಮೇಣ ಮಹೀಂ ಲಬ್ಧ್ವಾ ಪ್ರಜಾ ಧರ್ಮೇಣ ಪಾಲಯನ್।
ಆಹವೇ ನಿಧನಂ ಕುರ್ಯಾದ್ ರಾಜಾ ಧರ್ಮಪರಾಯಣಃ ॥೨೨॥

ಧರ್ಮಪರಾಯಣನಾದ ರಾಜನು ಪರಾಕ್ರಮದಿಂದ ಭೂಮಿಯನ್ನು ಸಂಪಾದಿಸಿ, ಪ್ರಜೆಗಳನ್ನು ಧರ್ಮದಿಂದ ಸಂಪಾದಿಸಿ, ಯುದ್ಧದಲ್ಲಿ ಶತ್ರುಗಳನ್ನು ಕೊಂದು ತಾನು ಯುದ್ಧದಲ್ಲಿ ಮೃತನಾಗಬೇಕು.

ಮರಣಾಂತಮಿದಂ ಸರ್ವಂ ನೇಹ ಕಿಂಚಿದನಾಮಯಮ್ ।
ತಸ್ಮಾದ್ ಧರ್ಮೇ ಸ್ಥಿತೋ ರಾಜಾ ಪ್ರಜಾ ಧರ್ಮೇಣ ಪಾಲಯೇತ್ ॥೨೩॥

ಎಲ್ಲವೂ ಮರಣದಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ದೋಷವಿಲ್ಲದಿರುವ ವಸ್ತು ಯಾವುದೂ ಇಲ್ಲ. ಆದ್ದರಿಂದ ರಾಜನು ಧರ್ಮದಲ್ಲಿ ನೆಲೆಸಿ ಪ್ರಜೆಗಳನ್ನು ಧರ್ಮದಿಂದ ಪಾಲಿಸಬೇಕು.

ರಕ್ಷಾಧಿಕರಣಂ ಯುದ್ಧಂ ತಥಾ ಧರ್ಮಾನುಶಾಸನಮ್ ।
ಮಂತ್ರಚಿಂತಾ ಸುಖಂ ಕಾಲೇ ಪಂಚಭಿರ್ವರ್ಧತೇ ಮಹೀ ॥೨೪॥

ರಕ್ಷಣೆಯ ಸ್ಥಾನಗಳು, ಯುದ್ಧ, ಧರ್ಮಪಾಲನೆ, ಮಂತ್ರಾಲೋಚನೆ ಮತ್ತು ಪ್ರಜೆಗಳಿಗೆ ಯೋಗ್ಯವಾದ ಕಾಲದಲ್ಲಿ ಸಾಮರ್ಥ್ಯವಿದ್ದಷ್ಟು ಸುಖವನ್ನುಂಟುಮಾಡುವುದು ಈ ಐದರಿಂದ ರಾಜ್ಯವು ಅಭಿವೃದ್ಧಿಯನ್ನು ಹೊಂದುತ್ತದೆ.

ಏತಾನಿ ಯಸ್ಯ ಗುಪ್ತಾನಿ ಸ ರಾಜಾ ರಾಜಸತ್ತಮಃ ।
ಸತತಂ ವರ್ತಮಾನೋऽತ್ರ ರಾಜಾ ಭುಂಕ್ತೇ ಮಹೀಮಿಮಾಮ್ ॥೨೫॥

ಯಾವ ರಾಜನಿಗೆ ಇವುಗಳೆಲ್ಲವೂ ಗುಪ್ತವಾಗಿರುತ್ತವೆಯೋ ಅವನು ಶ್ರೇಷ್ಠನಾದ ರಾಜನಾದವನು. ಈ ಐದರಲ್ಲಿ ಸತತವಾಗಿ ನಿರತನಾದ ರಾಜನು ಈ ಭೂಮಿಯನ್ನು ಭೋಗಿಸುತ್ತಾನೆ.

ನೈತಾನ್ಯೇಕೇನ ಶಕ್ಯಾನಿ ಸಾತತ್ಯೇನಾನವೇಕ್ಷಿತುಮ್ ।
ಏತೇಷ್ವಾಪ್ತಾನ್ ಪ್ರತಿಷ್ಠಾಪ್ಯ ರಾಜಾ ಭುಂಕ್ತೇ ಮಹೀಂ ಚಿರಮ್ ॥೨೬॥

ಇವೆಲ್ಲವನ್ನೂ ಒಬ್ಬನೇ ಸತತವಾಗಿ ನೋಡಿಕೊಳ್ಳುವುದು ಸಾಧ್ಯವಿಲ್ಲ. ಈ

ಕಾರ್ಯಗಳಲ್ಲಿ ಆಪ್ತರನ್ನು ನಿಯೋಜಿಸಿ, ರಾಜನು ಬಹುಕಾಲದವರೆಗೆ ಭೂಮಿಯನ್ನು ಭೋಗಿಸುತ್ತಾನೆ.

ದಾತಾರಂ ಸಂವಿಭಕ್ತಾರಂ ಮಾರ್ದವೋಪಗತಂ ಶುಚಿಮ್ ।
ಅಸಂತ್ಯಕ್ತಮನುಷ್ಯಂ ಚ ತಂ ಜನಾಃ ಕುರ್ವತೇ ಪ್ರಿಯಮ್ ॥೨೭॥

ದಾನವನ್ನು ಮಾಡುವ, ಪ್ರಜೆಗಳಿಗೆ ತನ್ನ ಐಶ್ವರ್ಯವನ್ನು ಹಂಚುವ, ಮೃದುವಾದ, ಶುಚಿಯಾದ, ಆಶ್ರಯಿಸಿದವರನ್ನು ತ್ಯಜಿಸದಿರುವ ರಾಜನನ್ನು ಜನರು ಪ್ರೀತಿಸುತ್ತಾರೆ.

ಯಸ್ತು ನಿಶ್ರೇಯಸಂ ಜ್ಞಾತ್ವಾ ಜ್ಞಾನಂ ತತ್ ಪ್ರತಿಪದ್ಯತೇ ।
ಆತ್ಮನೋ ಮತಮುತ್ಸೃಜ್ಯ ತಂ ಲೋಕೋऽನುವಿಧೀಯತೇ ॥೨೮॥

ಯಾವನು ಒಳ್ಳೆಯ ಜ್ಞಾನವನ್ನು ಸಂಪಾದಿಸಿ, ತನ್ನ ಹಿತವನ್ನಾದರೂ ತ್ಯಜಿಸಿ, ರಾಜ್ಯಕ್ಕೆ ಶ್ರೇಯಸ್ಸನ್ನು ಉಂಟು ಮಾಡುತ್ತಾನೆಯೋ ಲೋಕವು ಅವನನ್ನು ಅನುಸರಿಸುತ್ತದೆ.

ಯೋऽರ್ಥಕಾಮಸ್ಯ ವಚನಂ ಪ್ರಾತಿಕೂಲ್ಯಾನ್ನ ಮೃಷ್ಯತೇ ।
ಶೃಣೋತಿ ಪ್ರತಿಕೂಲಾನಿ ವಿಮನಾ ನಚಿರಾದಿವ ॥೨೯॥

ಅಗ್ರಾಮ್ಯಚರಿತಾಂ ಬುದ್ಧಿಮತ್ಯಂತಂ ಯೋ ನ ಬುದ್ಧ್ಯತೇ ।
ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ ॥೩೦॥

ಯಾವನು ತನ್ನ ಹಿತವನ್ನು ಬಯಸುವವನ ಮಾತುಗಳನ್ನು ಆ ಕಾಲದಲ್ಲಿ ಪ್ರತಿಕೂಲವಾಗಿದೆ ಎಂಬ ಕಾರಣದಿಂದ ಕೇಳಿ ಸಹಿಸುವುದಿಲ್ಲವೋ, ತನಗೆ ಪ್ರತಿಕೂಲವಾದ ತತ್ಕಾಲದಲ್ಲಿ ಹಿತವಾದ ಮಾತುಗಳನ್ನು ಕೇಳುತ್ತಾನೆಯೋ, ಪುರವಾಸಿಗಳ ಉದಾತ್ತವಾದ ಬುದ್ಧಿಯನ್ನು ಯಾವನು ತಿಳಿಯುವುದಿಲ್ಲವೋ, ಪರಾಜಿತರ ಮತ್ತು ಇತರರ ವಿಷಯದಲ್ಲಿ ಯಾವನು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ ಅವನು ಕ್ಷತ್ರಿಯಧರ್ಮದಿಂದ ಚ್ಯುತನಾಗುತ್ತಾನೆ.

ಮುಖ್ಯಾನಮಾತ್ಯಾನ್ ಯೋ ಹಿತ್ವಾನಿಹೀನಾನ್ ಕುರುತೇ ಪ್ರಿಯಾನ್ ।
ಸ ವೈ ವ್ಯಸನಮಾಸಾದ್ಯ ಗಾಧಮಾರ್ತೋ ನ ವಿಂದತಿ ॥೩೧॥

ಯಾವ ರಾಜನು ಮುಖ್ಯರಾದ ಅಮಾತ್ಯರನ್ನು ಬಿಟ್ಟು ಹೀನರಾದವರನ್ನು ಪ್ರಿಯರನ್ನಾಗಿ ಮಾಡಿಕೊಳ್ಳುತ್ತಾನೆಯೋ ಅವನು ವ್ಯಸನಗಳಿಗೆ ಸಿಲುಕಿ ಯಾವ ನೆಲೆಯನ್ನೂ ಹೊಂದುವುದಿಲ್ಲ.

ಯಃ ಕಲ್ಯಾಣಗುಣಾನ್ ಜ್ಞಾತೀನ್ ದ್ವೇಷಾನ್ನೈವಾಭಿಮನ್ಯತೇ ।
ಅದೃಢಾತ್ಮಾ ದೃಢಕ್ರೋಧೋ ನಾಸ್ಯಾರ್ಥೋ ರಮತೇऽಂತಿಕೇ ॥೩೨॥

ಯಾವನು ಚಂಚಲಚಿತ್ತನಾಗಿ, ದೃಢವಾದ ಕೋಪವುಳ್ಳವನಾಗಿ, ಒಳ್ಳೆಯ ಗುಣವನ್ನು ಹೊಂದಿದ ಜ್ಞಾತಿಗಳನ್ನು ದ್ವೇಷದಿಂದ ಸತ್ಕರಿಸುವುದಿಲ್ಲವೋ ಅವನಲ್ಲಿ ಸಂಪತ್ತು ಸಂತೋಷಪಡುವುದಿಲ್ಲ.

ಅಥ ಯೋ ಗುಣಸಂಪನ್ನಾನ್ ಹೃದಯಸ್ಯಾಪ್ರಿಯಾನಪಿ ।
ಪ್ರಿಯೇಣ ಕುರುತೇ ವಶ್ಯಾಂಶ್ಚಿರಂ ಯಶಸಿ ತಿಷ್ಠತಿ ॥೩೩॥

ಹಾಗಲ್ಲದೇ ಯಾವನು ಗುಣಸಂಪನ್ನರಾದವರು ತನ್ನ ಮನಸ್ಸಿಗೆ ಅಪ್ರಿಯರಾಗಿದ್ದರೂ ಅವರಿಗೆ ಪ್ರಿಯವನ್ನು ಮಾಡಿ ವಶಪಡಿಸಿಕೊಳ್ಳುತ್ತಾನೆಯೋ ಅಂತಹವನು ಶಾಶ್ವತವಾದ ಕೀರ್ತಿಯನ್ನು ಪಡೆಯುತ್ತಾನೆ.

ನಾಕಾಲೇ ಪ್ರಣಯೇದರ್ಥಾನ್ನಾಪ್ರಿಯೇ ಜಾತು ಸಂಜ್ವರೇತ್ ।
ಪ್ರಿಯೇ ನಾತಿಭೃಶಂ ಹೃಷ್ಯೇದ್ ಯುಜ್ಯೇತಾರೋಗ್ಯಕರ್ಮಣಿ ॥೩೪॥

ಅಕಾಲದಲ್ಲಿ ಧನಸಂಗ್ರಹವನ್ನು ಮಾಡಬಾರದು. ಅಪ್ರಿಯವುಂಟಾದಾಗ ವಿಹ್ವಲನಾಗಬಾರದು. ಪ್ರಿಯವುಂಟಾದಾಗ ಬಹಳ ಸಂತೋಷಪಡಬಾರದು. ತನ್ನ ದೇಹದ ಆರೋಗ್ಯವನ್ನು ರಕ್ಷಿಸುವುದರಲ್ಲಿ ನಿರತನಾಗಿರಬೇಕು.

ಕೇ ಚಾನುರಕ್ತಾ ರಾಜಾನಃ ಕೇ ಭಯಾತ್ ಸಮುಪಾಶ್ರಿತಾಃ ।
ಮಧ್ಯಸ್ಥದೋಷಾಃ ಕೇ ಚೈಷಾಮಿತಿ ನಿತ್ಯಂ ವಿಚಿಂತಯೇತ್ ॥೩೫॥

ನನ್ನಲ್ಲಿ ಅನುರಾಗ ಹೊಂದಿರುವ ರಾಜರು ಯಾರು? ಭಯದಿಂದ ನನ್ನನ್ನು ಆಶ್ರಯಿಸಿರುವವರು ಯಾರು? ಅವರಲ್ಲಿ ತಟಸ್ಥರಾದವರು ಯಾರು? ಅವರ ದೋಷಗಳೇನು? ಎಂದು ನಿತ್ಯವೂ ಚಿಂತಿಸಬೇಕು.

ನ ಜಾತು ಬಲವಾನ್ ಭೂತ್ವಾ ದುರ್ಬಲೇ ವಿಶ್ವಸೇತ್ ಕ್ವಚಿತ್ ।
ಭಾರುಂಡಸದೃಶಾ ಹ್ಯೇತೇ ನಿಪತಂತಿ ಪ್ರಮಾದ್ಯತಃ ॥೩೬॥

ತಾನು ಬಲಿಷ್ಠನಾಗಿದ್ದೇನೆಂದು ತಿಳಿದು ದುರ್ಬಲರು ನನಗೆ ಅಪಾಯಕಾರಿಗಳಲ್ಲವೆಂಬ ವಿಶ್ವಾಸದಿಂದ ಇರಬಾರದು. ಅಂತಹವರು ಭೇರುಂಡಪಕ್ಷಿಗೆ ಸದೃಶರಾದವರು. ಪ್ರಮಾದ ಮಾಡಿದರೆ ರಾಜನ ಮೇಲೆ ಎರಗುತ್ತಾರೆ.

ಅಪಿ ಸರ್ವೈರ್ಗುಣೈರ್ಯುಕ್ತಂ ಭರ್ತಾರಂ ಪ್ರಿಯವಾದಿನಮ್ ।
ಅಭಿದ್ರುಹ್ಯತಿ ಪಾಪಾತ್ಮಾ ನ ತಸ್ಮಾದ್ ವಿಶ್ವಸೇಜ್ಜನಾನ್ ॥೩೭॥

ತಮ್ಮ ಸ್ವಾಮಿಯು ಎಲ್ಲ ಗುಣಗಳಿಂದ ಕೂಡಿದ್ದರೂ ಪ್ರಿಯವಚನನಾಗಿದ್ದರೂ ಪಾಪಾತ್ಮನಾದವನು ಅವನಿಗೆ ದ್ರೋಹವನ್ನು ಮಾಡುತ್ತಾನೆ. ಆದ್ದರಿಂದ ಅಂತಹ ಜನರಲ್ಲಿ ವಿಶ್ವಾಸವನ್ನು ಮಾಡಬಾರದು.

ಏತಾಂ ರಾಜೋಪನಿಷದಂ ಯಯಾತಿಃ ಸ್ಮಾಹ ನಾಹುಷಃ ।
ಮನುಷ್ಯವಿಜಯೇ ಯುಕ್ತೋ ಹಂತಿ ಶತ್ರೂನನುತ್ತಮಾನ್ ॥೩೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚನವತಿತಮೋऽಧ್ಯಾಯಃ ॥೯೫॥

ನಹುಷಪುತ್ರನಾದ ಯಯಾತಿಯು ಹೇಳಿದ ರಾಜರಹಸ್ಯಗಳನ್ನು ತಿಳಿದು ಅದನ್ನು ಅನುಷ್ಠಾನ ಮಾಡುವ ಮನುಷ್ಯವಿಜಯದಲ್ಲಿ ನಿರತನಾದ ರಾಜನು ತನ್ನ ಶ್ರೇಷ್ಠರಾದ ಶತ್ರುಗಳನ್ನು ವಿನಾಶಗೊಳಿಸುತ್ತಾನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೯೫ನೆಯ ಅಧ್ಯಾಯವು ಮುಗಿಯಿತು

—0—

೯೬. ತೊಂಬತ್ತಾರನೆಯ ಅಧ್ಯಾಯ

ವಾಮದೇವವಸುಮನಸ್ ಸಂವಾದ

ವಾಮದೇವಃ

ಅಯುದ್ಧೇನೈವ ವಿಜಯಂ ವರ್ಧಯೇದ್ ವಸುಧಾಧಿಪಃ।
ಜಘನ್ಯಮಾಹುರ್ವಿಜಯಂ ಯೋ ಯುದ್ಧೇನ ನರಾಧಿಪ ॥೧॥

ವಾಮದೇವ – ಎಲೈ ನರಾಧಿಪನೇ! ರಾಜನು ಯುದ್ಧವನ್ನು ಮಾಡದೆಯೇ ವಿಜಯವನ್ನು ಸಂಪಾದಿಸಬೇಕು. ಯುದ್ಧದಿಂದ ಸಂಪಾದಿಸಿದ ವಿಜಯವು ಹೀನವಾದುದೆಂದು ಹೇಳುತ್ತಾರೆ.

ನ ಚಾಪ್ಯಲಬ್ಧೇ ಲಿಪ್ಸೇತ ಮೂಲೇ ನಾತಿದೃಢೇ ಸತಿ।
ನ ಹಿ ದುರ್ಬಲಮೂಲಸ್ಯ ರಾಜ್ಞೋ ಲಾಭೋ ವಿಧೀಯತೇ ॥೨॥

ತನ್ನ ಮೂಲವು (ಅತಿ)ದೃಢವಿಲ್ಲದಿದ್ದಾಗ ತಾನು ಪಡೆಯದಿದ್ದುದನ್ನು ಪಡೆಯಲು ಆಸೆ ಪಡಬಾರದು. ರಾಜನ ಮೂಲವು ದುರ್ಬಲವಾಗಿದ್ದಾಗ ಅವನಿಗೆ ಯಾವ ಲಾಭವೂ ಉಂಟಾಗುವುದಿಲ್ಲ.

ಯಸ್ಯ ಸ್ಫೀತೋ ಜನಪದಃ ಸಂಪನ್ನಃ ಪ್ರಿಯರಾಜಕಃ।
ಸಂತುಷ್ಟಪುಷ್ಟಸಚಿವೋ ದೃಢಮೂಲಃ ಸ ಪಾರ್ಥಿವಃ ॥೩॥

ಯಾವ ರಾಜನ ದೇಶವು ಸಮೃದ್ಧಿಯಿಂದ ಕೂಡಿರುತ್ತದೆಯೋ, ಸಂಪತ್ತಿನಿಂದ ಕೂಡಿರುತ್ತದೆಯೋ, ರಾಜ್ಯದಲ್ಲಿ ಪ್ರಜೆಗಳು ಪ್ರಿಯದಾಗಿರುತ್ತಾರೆಯೋ, ಸಚಿವರು ಸಂತೋಷ ಮತ್ತು ಪುಷ್ಟಿಗಳಿಂದ ಕೂಡಿರುತ್ತಾರೆಯೋ ಅಂತಹ ರಾಜನ ಮೂಲವು ದೃಢವಾಗಿರುತ್ತದೆ.

ಯಸ್ಯ ಯೋಧಾಃ ಸುಸಂತುಷ್ಟಾಃ ಸಾಂತ್ವಿತಾಃ ಸೂಪವಾಸಿತಾಃ।
ಅಲ್ಪೇನಾಪಿ ಸ ದಂಡೇನ ಮಹೀಂ ಜಯತಿ ಭೂಮಿಪಃ ॥೪॥

ಯಾವ ರಾಜನು ತನ್ನ ಯೋಧರನ್ನು ತನ್ನ ಸಮೀಪದಲ್ಲಿ ಇರಿಸಿಕೊಂಡು, ಅವರಿಗೆ ಸಾಂತ್ವನವನ್ನು ಹೇಳಿ ಸಂತೋಷಪಡಿಸುತ್ತಾನೆಯೋ ಅಂತಹ ರಾಜನು ಅಲ್ಪಸೈನ್ಯದಿಂದಲೇ ಭೂಮಿಯನ್ನು ಜಯಿಸುತ್ತಾನೆ.

ಪೌರಜಾನಪದಾ ಯಸ್ಯ ಸ್ವನುರಕ್ತಾಃ ಸುಪೂಜಿತಾಃ।
ಸಧನಾ ಧಾನ್ಯವಂತಶ್ಚ ದೃಢಮೂಲಃ ಸ ಪಾರ್ಥಿವಃ ॥೫॥

ಯಾವ ರಾಜನ ಪೌರರು ಮತ್ತು ಜಾನಪದರು ರಾಜನಿಂದ ಚೆನ್ನಾಗಿ ಪೂಜಿತರಾಗಿ ರಾಜನಲ್ಲಿ ಬಹಳ ಅನುರಕ್ತರಾಗಿ ಧನಧಾನ್ಯದಿಂದ ಕೂಡಿರುತ್ತಾರೆಯೋ ಅಂತಹ ರಾಜನ ಮೂಲವು ದೃಢವಾಗಿರುತ್ತದೆ.

ರಾಷ್ಟ್ರಕರ್ಮಕರಾ ಹ್ಯೇತೇ ರಾಷ್ಟ್ರಸ್ಯ ಚ ವಿರೋಧಿನಃ।
ದುರ್ವಿನೀತಾ ವಿನೀತಾಶ್ಚ ಸರ್ವೇ ಸಾಧ್ಯಾಃ ಪ್ರಯತ್ನತಃ ॥೬॥

ಚಂಡಾಲಮ್ಲೇಚ್ಛಜಾತ್ಯಾಶ್ಚ ಪಾಷಂಡಾಶ್ಚ ವಿಕರ್ಮಿಣಃ।
ಬಲಿನಶ್ಚಾಶ್ರಮಾಶ್ಚೈವ ತಥಾ ಗಾಯಕನರ್ತಕಾಃ ॥೭॥

ಪೌರಜಾನಪದರು ವಿನೀತರಾದರೆ ರಾಷ್ಟ್ರದ ಏಳಿಗೆಯನ್ನುಂಟು ಮಾಡುತ್ತಾರೆ. ದುರ್ವಿನೀತರಾದರೆ ರಾಷ್ಟ್ರದ ವಿರೋಧಿಗಳಾಗುತ್ತಾರೆ. ಚಂಡಾಲರು ಮ್ಲೇಚ್ಛಜಾತಿಯವರು, ಪಾಷಂಡರು, ದುಷ್ಕರ್ಮಗಳನ್ನು ಮಾಡುವವರು, ಬಲಿಷ್ಠರಾದವರು, ಆಶ್ರಮವಾಸಿಗಳು, ಗಾಯಕರು, ನರ್ತಕರು ಇವರೆಲ್ಲರನ್ನೂ ರಾಜನು ಪ್ರಯತ್ನಪೂರ್ವಕವಾಗಿ ತನಗೆ ಅನುಕೂಲರನ್ನಾಗಿ ಮಾಡಿಕೊಳ್ಳಬೇಕು.

ಪ್ರಭಾವಕಾಲಾವಧಿಕೌ ಯದಾ ಮನ್ಯೇತ ಚಾತ್ಮನಃ।
ತದಾ ಲಿಪ್ಸೇತ ಮೇಧಾವೀ ಪರಭೂಮಿಂ ಧನಾನ್ಯುತ ॥೮॥

ತನ್ನ ಸಾಮರ್ಥ್ಯ ಮತ್ತು ಕಾಲ ಎರಡೂ ಶ್ರೇಷ್ಠವಾಗಿದೆಯೆಂದು ತಿಳಿದಾಗ ಮೇಧಾವಿಯಾದ ರಾಜನು ಶತ್ರುರಾಜರ ಭೂಮಿಯನ್ನು ಮತ್ತು ಧನವನ್ನೂ ಪಡೆಯಲು ಪ್ರಯತ್ನಿಸಬೇಕು.

ಭೋಗೇಷ್ವದಯಮಾನಸ್ಯ ಭೂತೇಷು ಚ ದಯಾವತಃ।
ವರ್ಧತೇ ತ್ವರಮಾಣಸ್ಯ ವಿಷಯೋ ರಕ್ಷಿತಾತ್ಮನಃ ॥೯॥

ಭೋಗಗಳಲ್ಲಿ ಆಸಕ್ತನಾಗದೇ, ಎಲ್ಲ ಪ್ರಜೆಗಳಲ್ಲಿ ದಯೆಯನ್ನು ತೋರಿಸಿ, ತನ್ನನ್ನು ರಕ್ಷಿಸಿಕೊಂಡು, ಶೀಘ್ರವಾಗಿ ಕಾರ್ಯವನ್ನು ಮಾಡುವವನ ದೇಶವು ಅಭಿವೃದ್ಧಿಯನ್ನು ಹೊಂದುತ್ತದೆ.

ತಕ್ಷತ್ಯಾತ್ಮಾನಮೇವೈಷ ವನಂ ಪರಶುನಾ ಯಥಾ।
ಯಃ ಸಮ್ಯಗ್ ವರ್ತಮಾನೇಷು ಸ್ವೇಷು ಮಿಥ್ಯಾ ಪ್ರವರ್ತತೇ ॥೧೦॥

ಯಾವ ರಾಜನು ಸರಿಯಾಗಿ ನಡೆದುಕೊಳ್ಳುವ ತನ್ನ ಪ್ರಜೆಗಳಲ್ಲಿ ಸುಳ್ಳಿನಿಂದ ವರ್ತಿಸುತ್ತಾನೆಯೋ ಅವನು ಕೊಡಲಿಯಿಂದ ಕಾಡನ್ನು ಕಡಿದಂತೆ ತನ್ನನ್ನು ತಾನೇ ಕಡಿದುಕೊಳ್ಳುತ್ತಾನೆ.

ನ ವೈ ದ್ವಿಷಂತಃ ಕ್ಷೀಯಂತೇ ರಾಜ್ಞೋ ನಿತ್ಯಮಪಿ ಘ್ನತಃ।
ಕ್ರೋಧಂ ನಿಯಂತುಂ ಯೋ ವೇದ ತಸ್ಯ ದ್ವೇಷ್ಟಾ ನ ವಿದ್ಯತೇ ॥೧೧॥

ನಿತ್ಯವೂ ಪ್ರಜೆಗಳನ್ನು ಹಿಂಸಿಸುವ ರಾಜನಿಗೆ ದ್ವೇಷಿಗಳ ಸಂಖ್ಯೆಯು ಕಡಿಮೆಯಾಗುವುದಿಲ್ಲ. ಯಾವ ರಾಜನು ತನ್ನ ಕ್ರೋಧವನ್ನು ನಿಯಂತ್ರಿಸಿಕೊಳ್ಳಲು ತಿಳಿದಿರುತ್ತಾನೆಯೋ ಅವನಿಗೆ ದ್ವೇಷಿಯು ಇರುವುದಿಲ್ಲ.

ಯದಾರ್ಯಜನವಿದ್ವಿಷ್ಟಂ ಕರ್ಮ ತನ್ನಾಚರೇದ್ ಬುಧಃ।
ಯತ್ ಕಲ್ಯಾಣಮಭಿಧ್ಯಾಯೇತ್ ತತ್ರಾತ್ಮಾನಂ ನಿಯೋಜಯೇತ್ ॥೧೨॥

ಯಾವುದು ಆರ್ಯಜನರಿಂದ ನಿಂದಿತವಾದುದೋ ವಿವೇಕಿಯಾದವನು ಅಂತಹ ಕಾರ್ಯವನ್ನು ಮಾಡಬಾರದು. ಯಾವುದು ಶುಭಕರ್ಮವೆಂದು ತೋರುತ್ತದೆಯೋ ಅಂತಹ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು.

ನೈನಮನ್ಯೇऽವಜಾನಂತಿ ನಾತ್ಮನಾ ಪರಿತಪ್ಯತೇ।
ಕೃತ್ಯಶೇಷೇಣ ಯೋ ರಾಜಾ ಸುಖಾನ್ಯನುಬುಭೂಷತಿ ॥೧೩॥

ಯಾವ ರಾಜನು ಎಲ್ಲಾ ಕಾರ್ಯಗಳನ್ನು ಮಾಡಿ ಸುಖವನ್ನು ಅನುಭವಿಸಲು ಬಯಸುತ್ತಾನೆಯೋ ಅಂತಹ ರಾಜನು ತಾನೂ ಪಶ್ಚಾತ್ತಾಪ ಪಡುವುದಿಲ್ಲ. ಪ್ರಜೆಗಳೂ ಅವನನ್ನು ಅವಮಾನ ಮಾಡುವುದಿಲ್ಲ.

ಇದಂ ವೃತ್ತಂ ಮನುಷ್ಯೇಷು ವರ್ತತೇ ಯೋ ಮಹೀಪತಿಃ।
ಉಭೌ ಲೋಕೌ ವಿನಿರ್ಜಿತ್ಯ ವಿಜಯೇ ಸಂಪ್ರತಿತಿಷ್ಠತೇ ॥೧೪॥

ಯಾವ ರಾಜನು ಪ್ರಜೆಗಳಲ್ಲಿ ಇಂತಹ ನಡತೆಯನ್ನು ಪ್ರವರ್ತಿಸುತ್ತಾನೆಯೋ, ಅಂತಹವನು ಇಹಲೋಕ ಮತ್ತು ಪರಲೋಕಗಳನ್ನು ಗೆದ್ದು ವಿಜಯದಲ್ಲಿ ಪ್ರತಿಷ್ಠಿತನಾಗುತ್ತಾನೆ.

ಭೀಷ್ಮಃ

ಇತ್ಯುಕ್ತೋ ವಾಮದೇವೇನ ಸರ್ವಂ ತತ್ ಕೃತವಾನ್ ನೃಪಃ।
ತಥಾ ಕುರ್ವಂಸ್ತ್ವಮಪ್ಯೇತೌ ಲೋಕೌ ಜೇತಾ ನ ಸಂಶಯಃ ॥೧೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಣ್ಣವತಿತಮೋऽಧ್ಯಾಯಃ ॥೯೬॥

ಭೀಷ್ಮರು – ಹೀಗೆ ವಾಮದೇವಋಷಿಗಳಿಂದ ಹೇಳಲ್ಪಟ್ಟ ವಸುಮನಸ್ ರಾಜನು ಎಲ್ಲವನ್ನೂ ಹಾಗೆಯೇ ಮಾಡಿದನು. ನೀನೂ ಸಹ ಹಾಗೆಯೇ ಮಾಡಿ ಎರಡು ಲೋಕಗಳನ್ನೂ ಜಯಿಸುವುದರಲ್ಲಿ ಸಂಶಯವಿಲ್ಲ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೯೬ನೆಯ ಅಧ್ಯಾಯವು ಮುಗಿಯಿತು.

—0—

೯೭. ತೊಂಬತ್ತೇಳನೆಯ ಅಧ್ಯಾಯ

ಯುಧಿಷ್ಠಿರಃ

ಅಥ ಯೋ ವಿಜಿಗೀಷೇತ ಕ್ಷತ್ರಿಯಃ ಕ್ಷತ್ರಿಯಂ ಯುಧಿ।
ಕಸ್ತಸ್ಯ ಧರ್ಮ್ಯೋ ವಿಜಯ ಏತತ್ ಪೃಷ್ಟೋ ಬ್ರವೀಹಿ ಮೇ ॥೧॥

ಯುಧಿಷ್ಠಿರ – ಒಬ್ಬ ಕ್ಷತ್ರಿಯನು ಇನ್ನೊಬ್ಬ ಕ್ಷತ್ರಿಯನನ್ನು ಯುದ್ಧದಲ್ಲಿ ಗೆಲ್ಲಲು ಬಯಸಿದರೆ ಧರ್ಮಾನುಗುಣವಾದ ವಿಜಯವು ಯಾವುದು ಎಂಬ ನನ್ನ ಪ್ರಶ್ನೆಗೆ ಉತ್ತರವನ್ನು ಹೇಳು.

ಭೀಷ್ಮಃ

ಸಸಹಾಯೋऽಸಹಾಯೋ ವಾ ರಾಷ್ಟ್ರಮಾಗಮ್ಯ ಭೂಮಿಪಃ।
ಬ್ರೂಯಾದಹಂ ವೋ ರಾಜೇತಿ ರಕ್ಷಿಷ್ಯಾಮಿ ಚ ವಃ ಸದಾ ॥೨॥

ಭೀಷ್ಮರು – ಸಹಾಯಸಹಿತನಾಗಲೀ ಸಹಾಯರಹಿತನಾಗಲೀ ರಾಜನು ಪರರಾಷ್ಟ್ರಕ್ಕೆ ಬಂದು ನಾನು ನಿಮ್ಮ ರಾಜ, ಯಾವಾಗಲೂ ನಿಮ್ಮನ್ನು ರಕ್ಷಿಸುವೆನು ಎಂದು ಹೇಳಬೇಕು.

ಮಮ ಧರ್ಮ್ಯಂ ಬಲಿಂ ದತ್ತ ಕಿಂ ವಾ ಮಾಂ ಪ್ರತಿಪತ್ಸ್ಯಥ।
ತೇ ಚೇತ್ ತಮಾಗತಂ ತತ್ರ ವೃಣುಯುಃ ಕುಶಲಂ ಭವೇತ್ ॥೩॥

ನನಗೆ ನ್ಯಾಯಯುಕ್ತವಾದ ಕಪ್ಪವನ್ನು ಕೊಡಿ; ನನ್ನನ್ನು ಹೇಗೆ ಭಾವಿಸುತ್ತೀರಿ ಎಂದು ಕೇಳಬೇಕು. ಅಲ್ಲಿಗೆ ಬಂದ ರಾಜನನ್ನು ಅವರು ಸ್ವೀಕರಿಸಿದರೆ ಎಲ್ಲವೂ ಕ್ಷೇಮವಾಗುತ್ತದೆ.

ತೇ ಚೇದಕ್ಷತ್ರಿಯಾಃ ಸಂತೋ ವಿರುದ್ಧ್ಯೇಯುಃ ಕಥಂಚನ।
ಸರ್ವೋಪಾಯೈರ್ನಿಯಂತವ್ಯಾ ವಿಕರ್ಮಸ್ಥಾ ನರಾಧಿಪ ॥೪॥

ಎಲೈ ನರಾಧಿಪನೇ! ಅವರು ಕ್ಷತ್ರಿಯಧರ್ಮವನ್ನು ತಿಳಿಯದೇ ವಿರೋಧವನ್ನು ಮಾಡಿದರೆ ಎಲ್ಲ ಉಪಾಯಗಳಿಂದಲೂ ವಿಕರ್ಮಸ್ಥರಾದ ಅವರನ್ನು ನಿಯಂತ್ರಿಸ-ಬೇಕು.

ಅಶಕ್ತಂ ಕ್ಷತ್ರಿಯಂ ಮತ್ವಾ ಶಸ್ತ್ರಂ ಗೃಹ್ಣಾತ್ಯಥಾಪರಃ।
ತ್ರಾಣಾಯಾಪ್ಯಸಮರ್ಥಂ ತಂ ಮನ್ಯಮಾನಮತೀವ ಚ ॥೫॥

ಆ ಕ್ಷತ್ರಿಯನು ತನ್ನ ರಾಜ್ಯವನ್ನು ರಕ್ಷಣೆ ಮಾಡಲು ಅಸಮರ್ಥನಾಗಿ ಅಶಕ್ತ-

ನಾಗಿದ್ದಾನೆಂದು ತಿಳಿದು ಇನ್ನೊಬ್ಬ ಕ್ಷತ್ರಿಯನು ಅವನ ವಿರುದ್ಧವಾಗಿ ಶಸ್ತ್ರವನ್ನು ಹಿಡಿಯುತ್ತಾನೆ.

ಯುಧಿಷ್ಠಿರಃ

ಅಥ ಯಃ ಕ್ಷತ್ರಿಯೋ ರಾಜಾ ಕ್ಷತ್ರಿಯಂ ಪ್ರತ್ಯುಪಾವ್ರಜೇತ್ ।
ಕಥಂ ಸ ಪ್ರತಿಯೋದ್ಧವ್ಯಸ್ತನ್ಮೇ ಬ್ರೂಹಿ ಪಿತಾಮಹ ॥೬॥

ಯುಧಿಷ್ಠಿರ – ಒಬ್ಬ ಕ್ಷತ್ರಿಯರಾಜನು ಇನ್ನೊಬ್ಬ ಕ್ಷತ್ರಿಯರಾಜನ ಜೊತೆಯಲ್ಲಿ ಯುದ್ಧವನ್ನು ಮಾಡಬೇಕಾದರೆ, ಎಲೈ ಪಿತಾಮಹನೇ! ಹೇಗೆ ಯುದ್ಧವನ್ನು ಮಾಡಬೇಕೆಂದು ಹೇಳು.

ಭೀಷ್ಮಃ

ನಾಸನ್ನದ್ಧೋ ನಾಕವಚೋ ಯೋದ್ಧವ್ಯಃ ಕ್ಷತ್ರಿಯೋ ರಣೇ ।
ಏಕ ಏಕೇನ ವಾಚ್ಯಶ್ಚ ವಿಸೃಜಸ್ವ ಕ್ಷಿಪಾಮಿ ಚ ॥೭॥

ಭೀಷ್ಮರು – ಶಸ್ತ್ರಾದಿ ಸನ್ನಾಹವಿಲ್ಲದೇ ಕವಚವನ್ನು ಧರಿಸದೇ ಕ್ಷತ್ರಿಯನು ಯುದ್ಧ ಮಾಡಬಾರದು. ಒಬ್ಬನು ಶತ್ರುವಾದ ಒಬ್ಬನನ್ನು ಕುರಿತು ನನಗೆ ಬಾಣಪ್ರಯೋಗವನ್ನು ಮಾಡು; ನಾನು ನಿನಗೆ ಪ್ರಹಾರ ಮಾಡುತ್ತೇನೆ ಎಂದು ಹೇಳಬೇಕು.

ಸ ಚೇತ್ ಸನ್ನದ್ಧ ಆಗಚ್ಛೇತ್ ಸನ್ನದ್ಧವ್ಯಂ ತತೋ ಭವೇತ್ ।
ಸ ಚೇತ್ ಸಸೈನ್ಯ ಆಗಚ್ಛೇತ್ ಸಸೈನ್ಯಸ್ತಮಥಾಹ್ವಯೇತ್ ॥೮॥

ಶತ್ರುವು ಸನ್ನದ್ಧನಾಗಿಯೇ ಬಂದ ಅನಂತರ ತಾನೂ ಸನ್ನದ್ಧನಾಗಬೇಕು. ಶತ್ರುವು ಸೈನ್ಯಸಹಿತನಾಗಿ ಬಂದರೆ ತಾನೂ ಸೈನ್ಯಸಹಿತನಾಗಿ ಅವನನ್ನು ಆಹ್ವಾನಿಸಬೇಕು.

ಸ ಚೇನ್ನಿಕೃತ್ಯಾ ಯುದ್ಧ್ಯೇತ ನಿಕೃತ್ಯಾ ತಂ ಪ್ರಯೋಧಯೇತ್ ।
ಅಥ ಚೇದ್ ಧರ್ಮತೋ ಯುದ್ಧ್ಯೇದ್ ಧರ್ಮೇಣೈವ ನಿವಾರಯೇತ್ ॥೯

ಅವನು ಮೋಸದಿಂದ ಯುದ್ಧಮಾಡಿದರೆ ಮೋಸದಿಂದಲೇ ಅವನ ಜೊತೆ-

ಯಲ್ಲಿ ಯುದ್ಧಮಾಡಬೇಕು. ಅದನ್ನು ಬಿಟ್ಟು ಧರ್ಮಯುದ್ಧವನ್ನು ಮಾಡಿದರೆ ಧರ್ಮಯುದ್ಧದಿಂದಲೇ ಅವನನ್ನು ತಡೆಯಬೇಕು.

ನಾಶ್ವೇನ ರಥಿನಂ ಯಾಯಾದುದಿಯಾದ್ ರಥಿನಂ ರಥೀ।
ವ್ಯಸನೇ ನ ಪ್ರಹರ್ತವ್ಯಂ ನ ಭೀತಾಯ ಜಿತಾಯ ಚ ॥೧೦॥

ಅಶ್ವದಿಂದ ರಥಿಕನ ಮೇಲೆ ಎರಗಬಾರದು; ರಥಿಕನು ರಥಿಕನ ಮೇಲೆ ಹೋಗಬೇಕು. ಸಂಕಟಕ್ಕೆ ಒಳಗಾದ ಭೀತನಾದ ಪರಾಜಿತನಾದ ಶತ್ರುವಿಗೆ ಪ್ರಹಾರ ಮಾಡಬಾರದು.

ನೇಷುರ್ವಿಪ್ತೋ ನ ಕರ್ಣೀ ಸ್ಯಾದಸತಾಮೇತದಾಯುಧಮ್ ।
ಜಯಾರ್ಥಮೇವ ಯೋದ್ಧವ್ಯಂ ನ ಕ್ರುದ್ಧ್ಯೇದಜಿಘಾಂಸತಃ ॥೧೧॥

ವಿಷಲಿಪ್ತವಾದ ಬಾಣಗಳನ್ನು, ಮೋಸದ ಬಾಣಗಳನ್ನು ಉಪಯೋಗಿಸಬಾರದು. ಇದು ಅಸಜ್ಜನರ ಆಯುಧ. ಜಯವನ್ನು ಪಡೆಯುವ ಸಲುವಾಗಿಯೇ ಯುದ್ಧವನ್ನು ಮಾಡಬೇಕು. ಪ್ರಹಾರವನ್ನು ಮಾಡದಿರುವವನ ಮೇಲೆ ಕೋಪಗೊಳ್ಳಬಾರದು.

ನಾಸ್ತ್ಯೇಕಸ್ಯ ಗಜೋ ಯುದ್ಧೇ ಗಜಶ್ಚೈಕಸ್ಯ ವಿದ್ಯತೇ।
ನ ಪದಾತಿರ್ಗಜಂ ಯುದ್ಧ್ಯೇನ್ನ ಗಜೇನ ಪದಾತಿನಮ್ ॥೧೨॥

ಹಸ್ತಿನಾ ಯೋಧಯೇನ್ನಾಗಂ ಕದಾಚಿಚ್ಛಿಕ್ಷಿತೋ ಹಯಮ್ ।
ದಿವ್ಯಾಸ್ತ್ರಬಲಸಂಪನ್ನಃ ಕಾಮಂ ಯುದ್ಧ್ಯೇತ ಸರ್ವದಾ ॥೧೩॥

ನಾಗೇ ಭೂಮೌ ಸಮೇ ಚೈವ ರಥೇನಾಶ್ವೇನ ವಾ ಪುನಃ।
ರಾಮರಾವಣಯೋರ್ಯುದ್ಧೇ ಹರಯೋ ವೈ ಪದಾತಯಃ ॥೧೪॥

ಲಕ್ಷ್ಮಣಶ್ಚ ಮಹಾಭಾಗಸ್ತಥಾ ರಾಜನ್ ವಿಭೀಷಣಃ।

ಒಬ್ಬನೇ ಯುದ್ಧವನ್ನು ಮಾಡುವಾಗ ಗಜಾರೋಹಿಯಾಗಿ ಯುದ್ಧವನ್ನು

ಮಾಡಬಾರದು. ಪದಾತಿಯು ಗಜಾರೋಹಿಯ ಜೊತೆಯಲ್ಲಿ ಯುದ್ಧವನ್ನು ಮಾಡ-ಬಾರದು. ಗಜಾರೋಹಿಯು ಪದಾತಿಯ ಜೊತೆಯಲ್ಲಿ ಯುದ್ಧವನ್ನು ಮಾಡ-ಬಾರದು. ಗಜಾರೋಹಿಯು ಗಜಾರೋಹಿಯ ಜೊತೆಯಲ್ಲಿಯೇ ಯುದ್ಧವನ್ನು ಮಾಡಬೇಕು. ಚೆನ್ನಾಗಿ ಯುದ್ಧಶಿಕ್ಷಿತನಾಗಿದ್ದರೆ ಅಶ್ವಾರೋಹಿಯ ಜೊತೆಯಲ್ಲೂ ಯುದ್ಧವನ್ನು ಮಾಡಬಹುದು. ದಿವ್ಯಾಸ್ತ್ರಬಲದಿಂದ ಕೂಡಿದವನು ಮಾತ್ರ ತನ್ನ ಇಷ್ಟಬಂದಂತೆ (ತಾನು ಪದಾತಿಯಾಗಿದ್ದರೂ) ಅಶ್ವಾರೋಹಿಯ ಜೊತೆಯ-ಲ್ಲಾಗಲೀ ಸಮವಾದ ಭೂಮಿಯಲ್ಲಾಗಲೀ ರಥಿಕನ ಜೊತೆಯಲ್ಲಾಗಲೀ ಅಶ್ವಾರೋಹಿಯ ಜೊತೆಯಲ್ಲಾಗಲೀ ಯುದ್ಧವನ್ನು ಮಾಡಬಹುದು. ರಾಮ-ರಾವಣರ ಯುದ್ಧದಲ್ಲಿ ಕಪಿಗಳೂ, ಮಹಾನುಭಾವನಾದ ಲಕ್ಷ್ಮಣನೂ ಮತ್ತು ವಿಭೀಷಣನೂ ಪದಾತಿಗಳಾಗಿದ್ದರು.

ರಾವಣಸ್ಯಾಂತಕಾಲೇ ಚ ರಥೇನೈಂದ್ರೇಣ ರಾಘವಃ।
ನಿಜಘಾನ ದುರಾಚಾರಂ ರಾವಣಂ ಪಾಪಕಾರಿಣಮ್ ॥೧೫॥

ರಾವಣನ ಅವಸಾನಕಾಲದಲ್ಲಿ ರಾಮನು ಇಂದ್ರನು ಕಳುಹಿಸಿದ ರಥದಲ್ಲಿ ಕುಳಿತು ದುರಾಚಾರಿಯೂ ಪಾಪಕರ್ಮವನ್ನು ಮಾಡುವವನೂ ಆದ ರಾವಣನನ್ನು ಸಂಹರಿಸಿದನು.

ದಿವ್ಯಾಸ್ತ್ರಬಲಸಂಪನ್ನೇ ಸರ್ವಮೇತದ್ ವಿಧೀಯತೇ।
ದೇವಾಸುರೇಷು ಯುದ್ಧೇಷು ದೃಷ್ಟಮೇತತ್ ಪುರಾತನೇ ॥೧೬॥

ದಿವ್ಯಾಸ್ತ್ರಬಲದಿಂದ ಕೂಡಿದವನಿಗೆ ಎಲ್ಲವೂ ವಿಹಿತವಾಗುತ್ತದೆ. ಇಂತಹ ಪ್ರಸಂಗಗಳು ಪುರಾತನವಾದ ದೇವಾಸುರಯುದ್ಧಗಳಲ್ಲಿ ಕಂಡುಬರುತ್ತವೆ.

ಸಾಧೂನಾಂ ತು ಮಿಥೋ ಭೇದಾತ್ ಸಾಧುಶ್ಚೇದ್ ವ್ಯಸನೀ ಭವೇತ್।
ಸವ್ರಣೋ ನಾಭಿಹಂತವ್ಯೋ ನಾನಪತ್ಯಃ ಕಥಂಚನ ॥೧೭॥

ಇಬ್ಬರು ಸತ್ಪುರುಷರು ಯುದ್ಧಮಾಡುವಾಗ ಒಬ್ಬ ಸತ್ಪುರುಷನು ಸಂಕಷ್ಟಕ್ಕೆ

ಸಿಲುಕಿದರೆ ಅಥವಾ ಗಾಯಗೊಂಡರೆ ಅವನಿಗೆ ಪ್ರಹಾರವನ್ನು ಮಾಡಬಾರದು. ಪುತ್ರನಿಲ್ಲದವನಿಗೂ ಪ್ರಹಾರವನ್ನು ಮಾಡಬಾರದು.

ಭಗ್ನಶಸ್ತ್ರೋ ವಿಪನ್ನಾಶ್ವಶ್ಛಿನ್ನಜ್ಯೋ ಹತವಾಹನಃ।
ಚಿಕಿತ್ಸ್ಯಃ ಸ್ಯಾತ್ ಸ್ವವಿಷಯೇ ಪ್ರಾಪ್ಯೋ ವಾ ಸ್ವಗೃಹಾನ್ ಭವೇತ್।
ನಿರ್ವ್ರಣೋಽಪಿ ಚ ಮೋಕ್ತವ್ಯ ಏಷ ಧರ್ಮಃ ಸನಾತನಃ ॥೧೮॥

ಶಸ್ತ್ರವನ್ನು ಮುರಿದುಕೊಂಡವನು, ವಿಪತ್ತಿಗೆ ಒಳಗಾದ ಅಶ್ವವುಳ್ಳವನು, ಕತ್ತರಿಸಿದ ಹೆದೆಯುಳ್ಳವನು, ಮೃತವಾದ ವಾಹನವುಳ್ಳವನು ಅಂತಹವರನ್ನು ತನ್ನ ರಾಜ್ಯದಲ್ಲಿ ಚಿಕಿತ್ಸೆ ಮಾಡಬೇಕು. ಅಥವಾ ಅವನ ಮನೆಗೆ ಹಿಂದಿರುಗಿಸಬೇಕು. ಅವನ ದೇಹದಲ್ಲಿ ಗಾಯವಿಲ್ಲದಿದ್ದರೂ ಅವನನ್ನು ಕಳುಹಿಸಿಕೊಡಬೇಕು. ಇದು ಸನಾತನವಾದ ಧರ್ಮ.

ತಸ್ಮಾದ್ ಧರ್ಮೇಣ ಯೋದ್ಧವ್ಯಂ ಮನುಃ ಸ್ವಾಯಂಭುವೋಽಬ್ರವೀತ್।
ಸತ್ಸು ನಿತ್ಯಂ ಸತಾಂ ಧರ್ಮಸ್ತಮಾಸ್ಥಾಯ ನ ನಾಶಯೇತ್ ॥೧೯॥

ಆದ್ದರಿಂದ ಸಜ್ಜನರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಧರ್ಮದಿಂದಲೇ ಯುದ್ಧವನ್ನು ಮಾಡಬೇಕೆಂದು ಸ್ವಾಯಂಭುವಮನುವು ಹೇಳಿದ್ದಾನೆ. ಧರ್ಮವನ್ನು ಅವಲಂಬಿಸಿದವನು ಧರ್ಮವನ್ನು ನಾಶಮಾಡಬಾರದು.

ಯೋ ವೈ ಜಯತ್ಯಧರ್ಮೇಣ ಕ್ಷತ್ರಿಯೋ ಧರ್ಮಸಂಗರಃ।
ಆತ್ಮಾನಮಾತ್ಮನಾ ಹಂತಿ ಪಾಪೋ ನಿಕೃತಿಜೀವನಃ ॥೨೦॥

ಯಾವ ಕ್ಷತ್ರಿಯನು ಧರ್ಮಯುದ್ಧದಲ್ಲಿ ಅಧರ್ಮದಿಂದ ಜಯಿಸುತ್ತಾನೆಯೋ ಅವನು ಪಾಪಿಯೂ, ಹೀನಜೀವನನೂ ಆಗಿ ತನ್ನನ್ನು ತಾನೇ ಕೊಂದುಕೊಳ್ಳುತ್ತಾನೆ.

ಕರ್ಮ ಚೈತದಸಾಧೂನಾಮಸಾಧುಂ ಸಾಧುನಾ ಜಯೇತ್।
ಧರ್ಮೇಣ ನಿಧನಂ ಶ್ರೇಯೋ ನ ಜಯಃ ಪಾಪಕರ್ಮಣಾ ॥೨೧॥

ಅಂತಹದು ಅಸಜ್ಜನರ ಕಾರ್ಯ. ಅಸಾಧುವನ್ನೂ ಸನ್ಮಾರ್ಗದಿಂದಲೇ ಜಯಿ-

ಸಬೇಕು. ಧರ್ಮದಿಂದ ಮರಣವಾದರೂ ಲೇಸು. ಪಾಪಕರ್ಮದಿಂದ ಗಳಿಸಿದ ಜಯವು ಶೋಭಿಸುವುದಿಲ್ಲ.

ನಾಧರ್ಮಶ್ಚರಿತೋ ರಾಜನ್ ಸದ್ಯಃ ಫಲತಿ ಗೌರಿವ।
ಮೂಲಾನ್ಯಸ್ಯ ಪ್ರಶಾಖಾಶ್ಚ ದಹನ್ ಸಮನುಗಚ್ಛತಿ ॥೨೨॥

ಎಲೈ ರಾಜನೇ! ಆಚರಿಸಿದ ಅಧರ್ಮವು ಭೂಮಿಯಂತೆ ತತ್ಕ್ಷಣದಲ್ಲಿಯೇ ಫಲವನ್ನು ಕೊಡುವುದಿಲ್ಲ. ಪಾಪಾಚಾರಿಯಾದವನ ಮೂಲವನ್ನು ಅವನ ಶಾಖೆಗಳನ್ನು (ಸಂತತಿಯನ್ನು) ಸುಡುತ್ತಾ ಎಲ್ಲ ಕಡೆಯಲ್ಲಿಯೂ ವ್ಯಾಪಿಸುತ್ತದೆ.

ಪಾಪೇನ ಕರ್ಮಣಾ ವಿತ್ತಂ ಲಬ್ಧ್ವಾ ಪಾಪಃ ಪ್ರಹೃಷ್ಯತಿ।
ಸ ವರ್ಧಮಾನಃ ಸ್ತೇಯೇನ ಪಾಪಃ ಪಾಪೇ ಪ್ರಸಜ್ಜತಿ ॥೨೩॥

ಪಾಪಿಯು ಪಾಪಕರ್ಮದಿಂದ ಧನವನ್ನು ಗಳಿಸಿ ಸಂತೋಷಪಡುತ್ತಾನೆ. ಅವನು ಕಳ್ಳತನದಿಂದ ಅಭಿವೃದ್ಧಿಯನ್ನು ಹೊಂದುತ್ತಾ ಪಾಪದಲ್ಲಿಯೇ ನಿರತ- ನಾಗುತ್ತಾನೆ.

ನ ಧರ್ಮೋऽಸ್ತೀತಿ ಮನ್ವಾನಃ ಶುಚೀನವಹಸನ್ನಿವ।
ಅಶ್ರದ್ದಧಾನಭಾವಾಚ್ಚ ವಿನಾಶಮುಪಗಚ್ಛತಿ ॥೨೪॥

ಧರ್ಮವು ಇಲ್ಲ ಎಂದು ತಿಳಿಯುತ್ತಾ ಶುದ್ಧರಾದವರನ್ನು ಅಪಹಾಸ್ಯ ಮಾಡು- ತ್ತಾನೆ. ಧರ್ಮದಲ್ಲಿ ಶ್ರದ್ಧೆಯಿಲ್ಲದ ಅವನು ವಿನಾಶವನ್ನು ಹೊಂದುತ್ತಾನೆ.

ಸ ಬದ್ಧೋ ವಾರುಣೈಃ ಪಾಶೈರಮರ್ತ್ಯ ಇವ ಮನ್ಯತೇ।
ಮಹಾದೃತಿರಿವಾಧ್ಮಾತಾ ಸ್ವಕೃತೇನ ವಿವರ್ಧತೇ ॥೨೫॥

ತನ್ನ ಪಾಪಕರ್ಮಗಳಿಂದ ಅವನು ವರುಣಪಾಶಗಳಿಂದ ಬಂಧಿಸಲ್ಪಡುತ್ತಾನೆ. ಅದನ್ನು ತಿಳಿಯದೇ ಅವನು ಗಾಳಿಯು ತುಂಬಿದ ದೊಡ್ಡ ತಿದಿಯಂತೆ ತನ್ನ ಕರ್ಮದಿಂದ ತಾನು ಅಭಿವೃದ್ಧಿಯನ್ನು ಹೊಂದುತ್ತಿದ್ದೇನೆ ಎಂದು ತಿಳಿಯುತ್ತಾನೆ.

ತತಃ ಸಮೂಲೋ ಹ್ರಿಯತೇ ನದೀಕೂಲಾದಿವ ದ್ರುಮಃ।

ಅಥೈನಮಭಿನಂದಂತಿ ಭಿನ್ನಂ ಕುಂಭಮಿವಾಶ್ಮನಿ।
ತಸ್ಮಾದ್ ಧರ್ಮೇಣ ವಿಜಯಂ ಕಾಮಂ ಲಿಪ್ಸೇತ ಭೂಮಿಪಃ ॥೨೬॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತನವತಿತಮೋಽಧ್ಯಾಯಃ ॥೯೭॥

ಅನಂತರ ನದಿಯ ದಡದಲ್ಲಿರುವ ವೃಕ್ಷದಂತೆ ಅವನು ಬುಡಸಹಿತವಾಗಿ ಸೆಳೆದೊಯ್ಯಲ್ಪಡುತ್ತಾನೆ. ಆಗ ಕಲ್ಲಿನ ಮೇಲೆ ಒಡೆದ ಮಡಕೆಯಂತೆ ಇರುವ ಅವನನ್ನು ನೋಡಿ ಸಜ್ಜನರು ಸಂತೋಷಪಡುತ್ತಾರೆ. ಆದ್ದರಿಂದ ರಾಜನಾದವನು ಧರ್ಮದಿಂದಲೇ ವಿಜಯವನ್ನು ಪಡೆಯಲು ಆಶಿಸಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೯೭ನೆಯ ಅಧ್ಯಾಯವು ಮುಗಿಯಿತು.

—0—

೯೮. ತೊಂಬತ್ತೆಂಟನೆಯ ಅಧ್ಯಾಯ

ಯುದ್ಧಧರ್ಮಕಥನ

ಭೀಷ್ಮಃ

ನಾಧರ್ಮೇಣ ಮಹೀಂ ಜೇತುಂ ಲಿಪ್ಸೇತ ಜಗತೀಪತಿಃ।
ಅಧರ್ಮವಿಜಯಂ ಲಬ್ಧ್ವಾ ಕೋಽನುಮನ್ಯೇತ ಭೂಮಿಪಃ ॥೧॥

ಭೀಷ್ಮರು – ರಾಜನು ಅಧರ್ಮದಿಂದ ಭೂಮಿಯನ್ನು ಜಯಿಸಲು ಬಯಸಬಾರದು. ಅಧರ್ಮದಿಂದ ವಿಜಯವನ್ನು ಪಡೆದವನು ತನ್ನನ್ನು ಹೇಗೆ ಭೂಮಿಪಾಲನೆಂದು ಕರೆದುಕೊಳ್ಳುತ್ತಾನೆ.

ಅಧರ್ಮಯುಕ್ತೋ ವಿಜಯೋ ಹ್ಯಧ್ರುವೋಽಸ್ವರ್ಗ್ಯ ಏವ ಚ।
ಸಾದಯತ್ಯೇಷ ರಾಜಾನಂ ಮಹೀಂ ಚ ಭರತರ್ಷಭ ॥೨॥

ಅಧರ್ಮದಿಂದ ಸಂಪಾದಿಸಿದ ವಿಜಯವು ಅಸ್ಥಿರವಾದುದು ಮತ್ತು ಸ್ವರ್ಗ-

ಪ್ರದವಾದುದಲ್ಲ. ಎಲೈ ಭರತರ್ಷಭನೇ! ರಾಜನನ್ನು ಮತ್ತು ಅವನ ಭೂಮಿಯನ್ನು ನಾಶಮಾಡುತ್ತದೆ.

ವಿಶೀರ್ಣಕವಚಂ ಚೈವ ತವಾಸ್ಮೀತಿ ಚ ವಾದಿನಮ್ ।
ಕೃತಾಂಜಲಿಂ ನ್ಯಸ್ತಶಸ್ತ್ರಂ ಗೃಹೀತ್ವಾ ನ ವಿಹಿಂಸಯೇತ್ ॥೩॥

ಕವಚವು ಹರಿದುಹೋದವನನ್ನು, ನಾನು ನಿನ್ನ ದಾಸನಾಗಿದ್ದೇನೆ ಎಂದು ಹೇಳಿದವನನ್ನು, ಕೈಮುಗಿದವನನ್ನು, ಶಸ್ತ್ರತ್ಯಾಗವನ್ನು ಮಾಡಿದವನನ್ನು ಹಿಡಿದು ಹಿಂಸಿಸಬಾರದು.

ಬಲೇನ ವರ್ಜಿತೋ ಯಶ್ಚ ನ ತಂ ಯುದ್ಧ್ಯೇತ ಭೂಮಿಪಃ।
ಸಂವತ್ಸರಂ ವಿಪ್ರಣಯೇತ್ ತಸ್ಮಾಜ್ಜ್ಞಾತಃ ಪುನರ್ಭವೇತ್ ॥೪॥

ದುರ್ಬಲನಾದವನು ವೈರವನ್ನು ಮಾಡಿದರೆ ಒಂದು ಸಂವತ್ಸರದವರೆಗೆ ಅವನ ಜೊತೆ ಯುದ್ಧವನ್ನು ಮಾಡಬಾರದು. ಅಲ್ಲಿಯವರೆಗೆ ವಿವಿಧಪ್ರಕಾರಗಳಿಂದ ಅವನಲ್ಲಿ ಸ್ನೇಹವನ್ನು ಮಾಡಬೇಕು. ಪುನಃ ಅವನನ್ನು ಪರೀಕ್ಷಿಸಿ ತನ್ನ ಪಾದಾಕ್ರಾಂತನನ್ನಾಗಿ ಮಾಡಿಕೊಳ್ಳಬೇಕು. (ಲಕ್ಷಾಲಂಕಾರ)

ನಾವಾರ್ಷಕ್ ಸಂವತ್ಸರಾತ್ ಕನ್ಯಾ ಸ್ಪೃಷ್ಟವ್ಯಾ ವಿಕ್ರಮಾಹೃತಾ ।
ಏವಮೇವ ಧನಂ ಸರ್ವಂ ಯಚ್ಚಾನ್ಯತ್ ಸಹಸಾಹೃತಮ್ ॥೫॥

ಯುದ್ಧದಲ್ಲಿ ಜಯಿಸಿದ ಕನ್ಯೆಯರನ್ನು ಒಂದು ವರ್ಷದವರೆಗೆ ಸ್ಪರ್ಶಿಸಬಾರದು. ಜಯಿಸಿ ತಂದ ಧನದ ವಿಷಯದಲ್ಲಿಯೂ ಉಳಿದ ಸ್ವತ್ತುಗಳ ವಿಷಯದಲ್ಲಿಯೂ ಹೀಗೆಯೇ ನಡೆದುಕೊಳ್ಳಬೇಕು.

ನ ತು ವಧ್ಯೇ ಧನಂ ತಿಷ್ಠೇತ್ ಪಿಬೇಯುರ್ಬ್ರಾಹ್ಮಣಾಃ ಪಯಃ।
ಯುಂಜೀರನ್ ವಾಪ್ಯನಡುಹಃ ಕ್ಷಂತವ್ಯಂ ವಾ ತದಾ ಭವೇತ್ ॥೬॥

ವೈಶ್ಯನು ಅಪರಾಧವನ್ನು ಮಾಡಿದರೆ ಅವನ ಧನವನ್ನು ಕಸಿದುಕೊಳ್ಳಬೇಕು. ಹೊರತು ಅವನನ್ನು ಕೊಲ್ಲಬಾರದು. ಅವನ ಬಳಿ ಗೋವುಗಳಿದ್ದರೆ ಅದನ್ನು

ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು. ವೈಶ್ಯನು ಅಲ್ಪಾಪರಾಧವನ್ನು ಮಾಡಿದರೆ ಅವನನ್ನು ಕ್ಷಮಿಸಿ ಅವನ ಎತ್ತುಗಳನ್ನು ಅವನೇ ಉಪಯೋಗಿಸುವಂತೆ ಮಾಡ-ಬೇಕು. ಸ್ಥೂಲಾಪರಾಧವನ್ನು ಮಾಡಿದರೆ ದೇಶದಿಂದ ಗಡೀಪಾರು ಮಾಡಬೇಕು. (ಲಕ್ಷ್ಮಲಂಕಾರ)

ರಾಜ್ಞಾ ರಾಜ್ಞೈವ ಯೋದ್ಧವ್ಯಸ್ತಥಾ ಧರ್ಮೋ ವಿಧೀಯತೇ।
ನಾನ್ಯೋ ರಾಜಾನಮಭ್ಯಸ್ಯೇದರಾಜನ್ಯಃ ಕಥಂಚನ ॥೭॥

ರಾಜನು ರಾಜನ ಜೊತೆಯಲ್ಲಿಯೇ ಯುದ್ಧವನ್ನು ಮಾಡಬೇಕು. ಇದು ಧರ್ಮವೆಂದು ಹೇಳಲ್ಪಡುತ್ತದೆ. ರಾಜನಲ್ಲದವನು ರಾಜನ ಜೊತೆಯಲ್ಲಿ ಯಾವ ಕಾರಣದಿಂದಲೂ ಯುದ್ಧಕ್ಕೆ ಹೋಗಬಾರದು.

ಅನೀಕಯೋಃ ಸಂಹತಯೋರ್ಯದೀಯಾದ್ ಬ್ರಾಹ್ಮಣೋಽಂತರಾ।
ಶಾಂತಿಮಿಚ್ಛನ್ನುಭಯತೋ ನ ಯೋದ್ಧವ್ಯಂ ತದಾ ಭವೇತ್।
ಮರ್ಯಾದಾಂ ಶಾಶ್ವತೀಂ ಭಿಂದ್ಯಾದ್ ಬ್ರಾಹ್ಮಣಂ
ಯೋಽಭಿಲಂಘಯೇತ್ ॥೮॥

ಎರಡು ಸೈನ್ಯಗಳು ಯುದ್ಧಕ್ಕೆ ಸನ್ನದ್ಧವಾಗಿ ಎದುರಾಗಿ ನಿಂತಿರುವಾಗ ಮಧ್ಯೆ ಒಬ್ಬ ಬ್ರಾಹ್ಮಣನು ಶಾಂತಿಯನ್ನು ಬಯಸಿ ನಡೆದರೆ ಆಗ ಯುದ್ಧವನ್ನು ಮಾಡ- ಬಾರದು. ಆ ಬ್ರಾಹ್ಮಣನ ಅಭಿಪ್ರಾಯವನ್ನು ಮೀರುವವನು ಶಾಶ್ವತವಾದ ಧರ್ಮದ ಎಲ್ಲೆಯನ್ನು ಮೀರುತ್ತಾನೆ.

ಅಥ ಚೇಲ್ಲಂಘಯೇದೇನಾಂ ಮರ್ಯಾದಾಂ ಕ್ಷತ್ರಿಯಬ್ರುವಃ।
ಅಸಂಖ್ಯೇಯಸ್ತದೂರ್ಧ್ವಂ ಸ್ಯಾದನಾದೇಯಶ್ಚ ಸಂಸದಿ ॥೯॥

ಒಂದು ಪಕ್ಷ ಕ್ಷತ್ರಿಯನಾದವನು ಅಂತಹ ಎಲ್ಲೆಯನ್ನು ಮೀರಿದರೆ ಅವನನ್ನು ರಾಜರ ಗಣನೆಯಲ್ಲಿ ಪರಿಗಣಿಸಬಾರದು. ಮತ್ತು ಸಭೆಯಲ್ಲಿ ಅವನನ್ನು ಸ್ವೀಕರಿಸ-ಬಾರದು.

ಯಾ ತು ಧರ್ಮವಿಲೋಪೇನ ಮರ್ಯಾದಾಭೇದನೇನ ಚ।
ತಾಂ ವೃತ್ತಿಂ ನಾನುವರ್ತೇತ ವಿಜಿಗೀಷುರ್ಮಹೀಪತಿಃ।
ಧರ್ಮಲಬ್ಧಾದ್ಧಿ ವಿಜಯಾತ್ ಕೋ ಲಾಭೋಽಭ್ಯಧಿಕೋ ಭವೇತ್ ॥೧೦॥

ಜಯವನ್ನು ಬಯಸುವ ರಾಜನು ಧರ್ಮವಿರೋಧದಿಂದಾಗಲೀ ಅಥವಾ ಮರ್ಯಾದಾಭಂಗದಿಂದಾಗಲೀ ಅಂತಹ ಜಯವನ್ನು ಸಾಧಿಸಬಾರದು. ಧರ್ಮದಿಂದ ಸಂಪಾದಿಸಿದ ವಿಜಯಕ್ಕಿಂತಲೂ ಯಾವುದು ಅಧಿಕವಾದೀತು?

ಸಹಸಾ ನ್ಯಾಯಭೂತಾನಿ ಕ್ಷಿಪ್ರಮೇವ ಪ್ರಸಾದಯೇತ್।
ಸಾಂತ್ವೇನ ಭೋಗದಾನೇನ ಸ ರಾಜ್ಞಾಂ ಪರಮೋ ನಯಃ ॥೧೧॥

ನ್ಯಾಯದಿಂದ ನಡೆದುಕೊಳ್ಳುವ ಪ್ರಜೆಗಳನ್ನು ಶೀಘ್ರವಾಗಿ ಸಾಂತ್ವವಚನಗಳಿಂದಲೂ ಭೋಗಸಾಮಗ್ರಿಗಳ ದಾನದಿಂದಲೂ ಪ್ರಸನ್ನಗೊಳಿಸಬೇಕು. ಅದು ಶ್ರೇಷ್ಠವಾದ ರಾಜನೀತಿ.

ಭುಜ್ಯಮಾನಾ ಹ್ಯಭೋಗೇನ ಸ್ವರಾಷ್ಟ್ರಾದಭಿತಾಪಿತಾಃ।
ಅಮಿತ್ರಾನ್ ಪರ್ಯುಪಾಸೀರನ್ ವ್ಯಸನೌಘಪ್ರತೀಕ್ಷಿಣಃ ॥೧೨॥

ಹಿಂದೆ ಭೋಗದಿಂದ ಕೂಡಿದ್ದ ಪ್ರಜೆಗಳು ರಾಜನ ಉಪದ್ರವದಿಂದ ಭೋಗರಹಿತರಾಗಿ ರಾಜನಿಂದ ತನ್ನ ರಾಷ್ಟ್ರದಲ್ಲಿ ಪೀಡಿತರಾದರೆ ವ್ಯಸನಗಳ ಸಮೂಹವನ್ನೇ ಅವರು ಮುಂದೆ ನಿರೀಕ್ಷಿಸುತ್ತಾ ಆ ರಾಜನ ಶತ್ರುಗಳ ಜೊತೆಯಲ್ಲಿ ಹೋದಾರು!

ಅಮಿತ್ರೋಪಗ್ರಹಂ ಚಾಸ್ಯ ತೇ ಕುರ್ಯುಃ ಕ್ಷಿಪ್ರಮಾಪದಿ।
ಸಂದುಷ್ಟಾಃ ಸರ್ವತೋ ರಾಜನ್ ರಾಜವ್ಯಸನಕಾಂಕ್ಷಿಣಃ ॥೧೩॥

ಎಲೈ ರಾಜನೇ! ಅವರಲ್ಲಿ ದುಷ್ಟರಾದ ಪ್ರಜೆಗಳು ರಾಜನ ವ್ಯಸನವನ್ನೇ ಬಯಸುತ್ತಾ ಈ ರಾಜನ ಆಪತ್ತಿನಲ್ಲಿ ಶತ್ರುರಾಜರಿಂದ ಅವರು ಶೀಘ್ರವಾಗಿ ಪರಾಜಿತನಾಗುವಂತೆ ಮಾಡಬಹುದು.

ನಾಮಿತ್ರೋ ವಿನಿಕರ್ತವ್ಯೋ ನಾತಿಚ್ಛೇದ್ಯಃ ಕಥಂಚನ।
ಜೀವಿತಂ ಹ್ಯಪ್ಯತಿಚ್ಛಿನ್ನಃ ಸಂತ್ಯಜತ್ಯೇಕದಾ ನರಃ ॥೧೪॥

ಶತ್ರುವಿಗೆ ಅಪಕಾರವನ್ನು ಮಾಡಬಾರದು. ಸಂಪೂರ್ಣನಾಶವನ್ನೂ ಮಾಡಬಾರದು. ಶತ್ರುವು ಸಂಪೂರ್ಣನಷ್ಟವನ್ನು ಹೊಂದಿದರೆ ಒಮ್ಮೊಮ್ಮೆ ಜೀವಿತವನ್ನೂ ತೊರೆಯಬಹುದು.

ಅಲ್ಪೇನಾಪಿ ಹಿ ಸಂಯುಕ್ತಸ್ತುಷ್ಯತ್ಯೇವಾಪರಾಧಿಕಃ।
ಶುದ್ಧಂ ಜೀವಿತಮೇವಾಪಿ ತಾದೃಶೋ ಬಹು ಮನ್ಯತೇ ॥೧೫॥

ಅಪರಾಧವನ್ನು ಮಾಡಿದವನಿಗೆ ಸ್ವಲ್ಪ ಉಪಕಾರವನ್ನು ಮಾಡಿದರೂ ಅವನು ಸಂತುಷ್ಟನಾಗುತ್ತಾನೆ. ಅನಂತರ ಅವನು ಶುದ್ಧಜೀವನವೇ ಶ್ರೇಷ್ಠವೆಂದು ಭಾವಿಸಬಹುದು.

ಯಸ್ಯ ಸ್ಫೀತೋ ಜನಪದಃ ಸಂಪನ್ನಃ ಪ್ರಿಯರಾಜಕಃ।
ಸಂತುಷ್ಟಭೃತ್ಯಸಚಿವೋ ದೃಢಮೂಲಃ ಸ ಪಾರ್ಥಿವಃ ॥೧೬॥

ಯಾವ ರಾಜನ ರಾಜ್ಯವು ಧಾನ್ಯಸಮೃದ್ಧವಾದ ಜನಪದದಿಂದ ಕೂಡಿ, ರಾಜನಿಗೆ ಪ್ರಿಯರಾದ ಪ್ರಜೆಗಳಿಂದ ಕೂಡಿ, ಸಂತುಷ್ಟರಾದ ಭೃತ್ಯರಿಂದ ಮತ್ತು ಸಚಿವರಿಂದ ಕೂಡಿರುತ್ತದೆಯೋ ಅಂತಹ ರಾಜನ ಮೂಲವು ದೃಢವಾಗಿರುತ್ತದೆ.

ಋತ್ವಿಕ್‌ಪುರೋಹಿತಾಚಾರ್ಯಾ ಯೇ ಚಾನ್ಯೇ ಶ್ರುತಸಮ್ಮತಾಃ।
ಪೂಜಾರ್ಹಾಃ ಪೂಜಿತಾ ಯಸ್ಯ ಸ ವೈ ಲೋಕಜಿದುಚ್ಯತೇ ॥೧೭॥

ಜ್ಞಾನಿಗಳಿಗೆ ಸಮ್ಮತರಾದ ಪೂಜಾರ್ಹರಾದ ಋತ್ವಿಕ್ ಪುರೋಹಿತ ಆಚಾರ್ಯರು ಯಾವನಿಂದ ಪೂಜಿಸಲ್ಪಡುತ್ತಾರೆಯೋ ಅವನು ಲೋಕವನ್ನು ಜಯಿಸಿದವನು ಎಂದು ಹೇಳಲ್ಪಡುತ್ತಾನೆ.

ಏತೇನೈವ ಚ ವೃತ್ತೇನ ಮಹೀಂ ಪ್ರಾಪ ಸುರೋತ್ತಮಃ।
ಅನ್ಯೇಪಿ ಚೈವ ವಿಜಯಂ ವಿಜಿಗೀಷಂತಿ ಪಾರ್ಥಿವಾಃ ॥೧೮॥

ದೇವಶ್ರೇಷ್ಠನಾದ ಇಂದ್ರನು ಇಂತಹದೇ ನಡತೆಯಿಂದ ರಾಜ್ಯವನ್ನು ಪಡೆದನು. ಉಳಿದ ರಾಜರೂ ಸಹ ಇದೇ ರೀತಿಯಲ್ಲಿ ವಿಜಯವನ್ನು ಪಡೆಯಲು ಬಯಸುತ್ತಾರೆ.

ಭೂಮಿವರ್ಜಂ ಧನಂ ರಾಜಾ ಜಿತ್ವಾ ರಾಜನ್ ಮಹಾಹವೇ।
ಅಪಿ ಚಾನ್ನೌಷಧೀಃ ಶಶ್ವದಾಜಹಾರ ಪ್ರತರ್ದನಃ ॥೧೯॥

ಎಲೈ ರಾಜನೇ! ಪ್ರತರ್ದನನು ದೊಡ್ಡ ಯುದ್ಧದಲ್ಲಿ ಭೂಮಿಯನ್ನು ಬಿಟ್ಟು ಉಳಿದ ಎಲ್ಲಾ ಧನವನ್ನೂ ಗೆದ್ದು, ಅನ್ನೌಷಧಿಗಳನ್ನು ಸತತವಾಗಿ ತೆಗೆದುಕೊಳ್ಳುತ್ತಿದ್ದನು.

ಅಗ್ನಿಹೋತ್ರಾಗ್ನಿಶೇಷಂ ಚ ಹವಿಭೋರ್ಜನಮೇವ ಚ।
ಆಜಹಾರ ದಿವೋದಾಸಃ ತತೋ ವಿಪ್ರಕೃತೋಭವತ್ ॥೨೦॥

ದಿವೋದಾಸನು ಅಗ್ನಿಹೋತ್ರದ ಶೇಷವನ್ನು ಮತ್ತು ಹವಿಭೋರ್ಜನವನ್ನು ತೆಗೆದುಕೊಂಡು ಬಂದನು. ಅದರಿಂದ ಅವನು ಪ್ರಜೆಗಳಿಂದ ತಿರಸ್ಕೃತನಾದನು.

ಸರಾಜಕಾಣಿ ರಾಷ್ಟ್ರಾಣಿ ನಾಭಾಗೋ ದಕ್ಷಿಣಾಂ ದದೌ।
ಅನ್ಯತ್ರ ಶ್ರೋತ್ರಿಯಾರ್ಥಾಚ್ಚ ತಾಪಸಸ್ವಾಚ್ಚ ಭಾರತ ॥೨೧॥

ಎಲೈ ಭಾರತನೇ! ನಾಭಾಗನು ರಾಜರಿಂದ ಕೂಡಿದ ರಾಷ್ಟ್ರಗಳನ್ನು, ಬ್ರಾಹ್ಮಣ ಸ್ವತ್ತನ್ನು ಮತ್ತು ತಾಪಸಸ್ವತ್ತನ್ನು ಬಿಟ್ಟು, ದಕ್ಷಿಣೆಯಾಗಿ ನೀಡಿದನು.

ಉಚ್ಚಾವಚಾನಿ ವೃತ್ತಾನಿ ಧರ್ಮಜ್ಞಾನಾಂ ಯುಧಿಷ್ಠಿರ।
ಆಸನ್ ರಾಜ್ಞಾಂ ಪುರಾಣಾನಾಂ ಸರ್ವಂ ತನ್ಮಮ ರೋಚತೇ ॥೨೨॥

ಎಲೈ ಯುಧಿಷ್ಠಿರನೇ! ಧರ್ಮಜ್ಞರಾದ ರಾಜರ ನಡತೆಗಳು ಹೀಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿರುತ್ತವೆ. ಪ್ರಾಚೀನರಾಜರಿಗೆ ಅಂತಹ ನಡವಳಿಕೆ ಇದ್ದಿತು. ಅವೆಲ್ಲವೂ ನನಗೆ ಇಷ್ಟವಾಗುತ್ತದೆ.

ಸರ್ವವಿದ್ಯಾತಿರೇಕಾದ್ ವಾ ಜಯಮಿಚ್ಛೇನ್ಮಹೀಪತಿಃ।
ನ ಮಾಯಯಾ ನ ದಂಭೇನ ಸ ಇಚ್ಛೇದ್ ಭೂತಿಮಾತ್ಮನಃ ॥೨೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟನವತಿತಮೋऽಧ್ಯಾಯಃ ॥೯೮॥

ಅಥವಾ ರಾಜನು ಎಲ್ಲ ವಿದ್ಯೆಗಳಲ್ಲೂ ಅತಿಶಯವಾಗಿ ಪಾರಂಗತನಾಗಿ ಆ ಬಲದಿಂದ ಜಯಿಸಲು ಇಚ್ಛಿಸಬೇಕು. ಕಪಟದಿಂದಾಗಲೀ, ಡಂಭದಿಂದಾಗಲೀ, ತನ್ನ ಶ್ರೀಮಂತಿಕೆಯನ್ನು ಬಯಸಬಾರದು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೯೮ನೆಯ ಅಧ್ಯಾಯವು ಮುಗಿಯಿತು.

—0—

೯೯. ತೊಂಬತ್ತೊಂಬತ್ತನೆಯ ಅಧ್ಯಾಯ

ಯುದ್ಧದ ಧಾರ್ಮಿಕತ್ವಕಥನ

ಯುಧಿಷ್ಠಿರಃ

ಕ್ಷತ್ರಧರ್ಮಾನ್ನ ಪಾಪೀಯಾನ್ ಧರ್ಮೋऽಸ್ತಿ ಭರತರ್ಷಭ।
ಅಭಿಯಾನೇ ಚ ಯುದ್ಧೇ ಚ ರಾಜಾ ಹಂತಿ ಮಹಾಜನಮ್ ॥೧॥

ಅಥ ಸ್ಮ ಕರ್ಮಣಾ ಯೇನ ಲೋಕಾನ್ ಜಯತಿ ಪಾರ್ಥಿವಃ।
ವಿದ್ವನ್ ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೨॥

ಯುಧಿಷ್ಠಿರ – ಎಲೈ ಭರತರ್ಷಭನೇ! ಕ್ಷತ್ರಧರ್ಮಕ್ಕಿಂತ ಪಾಪಕರವಾದ ಧರ್ಮವು ಇನ್ನೊಂದಿಲ್ಲ. ರಾಜನು ದಂಡೆತ್ತಿ ಹೋಗುವಾಗಲೂ ಮತ್ತು ಯುದ್ಧದಲ್ಲಿಯೂ ಮಹಾಜನರನ್ನು ಕೊಲ್ಲುತ್ತಾನೆ. ಎಲೈ ಭರತರ್ಷಭನೇ! ವಿದ್ವಾಂಸನೇ! ಅಂತಹ ರಾಜನು ಯಾವ ಕರ್ಮದಿಂದ ಸ್ವರ್ಗಾದಿಲೋಕಗಳನ್ನು ಜಯಿಸುತ್ತಾನೆ ಎಂದು ನಿನ್ನನ್ನು ಕೇಳುತ್ತಿರುವ ನನಗೆ ಉತ್ತರವನ್ನು ಹೇಳು.

ಭೀಷ್ಮಃ

ನಿಗ್ರಹೇಣ ಚ ಪಾಪಾನಾಂ ಸಾಧೂನಾಂ ಪ್ರಗ್ರಹೇಣ ಚ।
ಯಜ್ಞೈರ್ದಾನೈಶ್ಚ ರಾಜಾನೋ ಭವಂತಿ ಶುಚಯೋऽಮಲಾಃ ॥೩॥

ಭೀಷ್ಮರು – ಪಾಪವನ್ನು ಮಾಡುವವರನ್ನು ನಿಗ್ರಹಿಸುವುದರಿಂದ ಮತ್ತು ಸಜ್ಜನರನ್ನು ಅನುಗ್ರಹಿಸುವುದರಿಂದ ಮತ್ತು ಯಜ್ಞದಾನಗಳಿಂದ ರಾಜರು ಶುಚಿ-ಗಳೂ ನಿರ್ಮಲರೂ ಆಗುತ್ತಾರೆ.

ಉಪರುಂಧಂತಿ ರಾಜಾನೋ ಭೂತಾನಿ ವಿಜಯಾರ್ಥಿನಃ।
ತ ಏವ ವಿಜಯಂ ಪ್ರಾಪ್ಯ ವರ್ಧಯಂತಿ ಪುನಃ ಪ್ರಜಾಃ ॥೪॥

ವಿಜಯವನ್ನು ಬಯಸುವ ರಾಜರು ತಮ್ಮ ಪ್ರಜೆಗಳಿಗೆ (ಧನಸಂಗ್ರಹದಿಂದ) ಉಪದ್ರವವನ್ನು ಕೊಡುತ್ತಾರೆ. ಅದೇ ರಾಜರು ವಿಜಯವನ್ನು ಪಡೆದ ಮೇಲೆ ಪ್ರಜೆಗಳನ್ನು ಪುನಃ ಸಮೃದ್ಧಿಗೊಳಿಸುತ್ತಾರೆ.

ಅಪವಿದ್ಧ್ಯಂತಿ ಪಾಪಾನಿ ದಾನಯಜ್ಞತಪೋಬಲೈಃ।
ಅನುಗ್ರಹೇಣ ಭೂತಾನಾಂ ಪುಣ್ಯಮೇಷಾಂ ಪ್ರವರ್ಧತೇ ॥೫॥

ತಾವು ಮಾಡಿದ ಪಾಪಗಳನ್ನು ದಾನ ಯಜ್ಞ ಮತ್ತು ತಪಸ್ಸುಗಳ ಬಲದಿಂದ ನಿವಾರಿಸಿಕೊಳ್ಳುತ್ತಾರೆ. ಪ್ರಜೆಗಳಿಗೆ ಅನುಗ್ರಹವನ್ನು ಮಾಡುವುದರಿಂದ ಅವರಿಗೆ ಪುಣ್ಯವೃದ್ಧಿಯಾಗುತ್ತದೆ.

ಯಥೈವ ಕ್ಷೇತ್ರನಿರ್ದಾತಾ ನಿರ್ದನ್ ವೈ ಕ್ಷೇತ್ರಮೇಕದಾ।
ಹಿನಸ್ತಿ ಧಾನ್ಯಂ ಕಕ್ಷಂ ವಾ ನ ಚ ಧಾನ್ಯಂ ವಿನಶ್ಯತಿ ॥೬॥

ಹೇಗೆ ಕ್ಷೇತ್ರಕ್ಕೆ ಅಗ್ನಿಯನ್ನು ಕೊಡುವವನು ಒಮ್ಮೆ ಧಾನ್ಯವು ಬೆಳೆಯಲು ಯೋಗ್ಯವಾದ ಕ್ಷೇತ್ರಕ್ಕೆ ಹಿಂಸೆಯನ್ನು ಕೊಡುತ್ತಾನೆ. ಆದರೆ ಪುನಃ ಅಲ್ಲಿ ಬೆಳೆಯುವ ಧಾನ್ಯಕ್ಕೆ ವಿನಾಶವನ್ನು ಉಂಟುಮಾಡುವುದಿಲ್ಲ.

ಏವಂ ಶಸ್ತ್ರಾಣಿ ಮುಂಚಂತೋ ಘ್ನಂತಿ ವಧ್ಯಾನನೇಕಧಾ ।
ತಸ್ಯೈಷಾ ನಿಷ್ಕೃತಿಃ ಕೃತ್ಸ್ನಾ ಭೂತಾನಾಂ ಭಾವನಂ ಪುನಃ ॥೭॥

ಹೀಗೆಯೇ ಶಸ್ತ್ರಪ್ರಯೋಗವನ್ನು ಮಾಡುವವರು ವಧೆಗೆ ಯೋಗ್ಯರಾದ ಅನೇಕರನ್ನು ಅನೇಕರೀತಿಯಲ್ಲಿ ಕೊಲ್ಲುತ್ತಾರೆ. ಆ ಪಾಪದ ಸಮಗ್ರಪ್ರಾಯಶ್ಚಿತ್ತವೆಂದರೆ ಪುನಃ ಪ್ರಜೆಗಳನ್ನು ಸಮೃದ್ಧಿಗೊಳಿಸುವುದು.

ಯೋ ಭೂತಾನಿ ಸದಾऽನರ್ಥಾದ್ ವಧಾತ್ ಕ್ಲೇಶಾಚ್ಚ ರಕ್ಷತಿ ।
ದಸ್ಯುಭ್ಯಃ ಪ್ರಾಣದಾನಾತ್ ಸ ಧನದಃ ಸುಖದೋ ವಿರಾಟ್ ॥೮॥

ಯಾವನು ಪ್ರಜೆಗಳನ್ನು ಅನರ್ಥಗಳಿಂದಲೂ, ವಧೆಯಿಂದಲೂ, ಕ್ಲೇಶದಿಂದಲೂ, ದಸ್ಯುಗಳಿಂದಲೂ ರಕ್ಷಿಸಿ ಪ್ರಾಣದಾನವನ್ನು ಮಾಡುತ್ತಾನೆಯೋ ಅವನೇ ಧನವನ್ನು ಮತ್ತು ಸುಖವನ್ನು ಕೊಡುವ ಬ್ರಹ್ಮದೇವ.

ಸ ಸರ್ವಯಜ್ಞೈರೀಜಾನೋ ರಾಜಾಥಾಭಯದಕ್ಷಿಣೈಃ ।
ಅನುಭೂಯೇಹ ಭದ್ರಾಣಿ ಪ್ರಾಪ್ನೋತೀಂದ್ರಸಲೋಕತಾಮ್ ॥೯॥

ಪ್ರಜೆಗಳಿಗೆ ಅಭಯರೂಪವಾದ ದಕ್ಷಿಣೆಯನ್ನು ಕೊಟ್ಟು, ಸರ್ವಯಜ್ಞಗಳನ್ನು ಆಚರಿಸುವ ರಾಜನು ಇಲ್ಲಿ ಶುಭಗಳನ್ನು ಅನುಭವಿಸಿ, ಪರಲೋಕದಲ್ಲಿ ಇಂದ್ರನ ಸಾಲೋಕ್ಯವನ್ನು ಪಡೆಯುತ್ತಾನೆ.

ಬ್ರಾಹ್ಮಣಾರ್ಥೇ ಸಮುತ್ಪನ್ನೇ ಯೋऽಭಿನಿಃಸೃತ್ಯ ಯುದ್ಧ್ಯತೇ ।
ಆತ್ಮಾನಂ ಯೂಪಮುಚ್ಛ್ರಿತ್ಯ ಸ ಯಜ್ಞೋऽನಂತದಕ್ಷಿಣಃ ॥೧೦॥

ಬ್ರಾಹ್ಮಣನ ಕಾರ್ಯವಾಗಬೇಕಾದಾಗ ಯಾವನು ಹೊರಗೆ ಬಂದು ತನ್ನನ್ನೇ ಎತ್ತಿದ ಯೂಪವನ್ನಾಗಿ ಮಾಡಿ ಯುದ್ಧವನ್ನು ಮಾಡುತ್ತಾನೆಯೋ ಆ ಯುದ್ಧವು ಅನಂತದಕ್ಷಿಣೆಯುಳ್ಳ ಯಜ್ಞರೂಪವಾದುದು.

ಅಭೀತೋ ವಿಕಿರನ್ ಶತ್ರೂನ್ ಪ್ರತಿಗೃಹ್ಣನ್ ಶರಾಂಸ್ತಥಾ ।
ನ ತಸ್ಮಾತ್ ತ್ರಿದಶಾಃ ಶ್ರೇಯೋ ಭುವಿ ಪಶ್ಯಂತಿ ಕಿಂಚನ ॥೧೧॥

ನಿರ್ಭೀತನಾಗಿ ಶತ್ರುಗಳ ಮೇಲೆ ಬಾಣಗಳನ್ನು ಸುರಿಸುತ್ತಾ, ತನ್ನ ಶರೀರದಲ್ಲಿ ಶತ್ರುಗಳ ಬಾಣವನ್ನು ಹಾಗೆಯೇ ಸ್ವೀಕರಿಸುವುದಕ್ಕಿಂತ ಕ್ಷತ್ರಿಯನಿಗೆ ಭೂಮಿಯಲ್ಲಿ ಶ್ರೇಯಸ್ಕರವಾದುದು ಯಾವುದೂ ಇಲ್ಲವೆಂದು ದೇವತೆಗಳು ತಿಳಿಯುತ್ತಾರೆ.

ತಸ್ಯ ಯಾವಂತಿ ಶಸ್ತ್ರಾಣಿ ತ್ವಚಂ ಭಿಂದಂತಿ ಸಂಯುಗೇ।
ತಾವತಃ ಸೋಽಶ್ನುತೇ ಲೋಕಾನ್ ಸರ್ವಕಾಮದುಹೋಽಕ್ಷಯಾನ್ ॥೧೨

ಯುದ್ಧದಲ್ಲಿ ಎಷ್ಟು ಶಸ್ತ್ರಗಳು ಅವನ ಚರ್ಮವನ್ನು ಭೇದಿಸುತ್ತವೆಯೋ ಸರ್ವ-ಕಾಮವನ್ನು ಕೊಡುವ ಅಕ್ಷಯವಾದ ಅಷ್ಟು ಲೋಕಗಳನ್ನು ಅವನು ಹೊಂದುತ್ತಾನೆ.

ಯದಸ್ಯ ರುಧಿರಂ ಗಾತ್ರಾದಾವೇಧೇಭ್ಯಃ ಪ್ರವರ್ತತೇ।
ಸ ಹ ತೇನೈವ ರಕ್ತೇನ ಸರ್ವಪಾಪೈಃ ಪ್ರಮುಚ್ಯತೇ ॥೧೩॥

ಯಾವ ರಕ್ತವು ಅವನ ಶರೀರವ್ರಣಗಳಿಂದ ಹರಿಯುತ್ತದೆಯೋ ಅವನು ಅದೇ ರಕ್ತಸ್ರಾವದಿಂದ ಸರ್ವಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

ಯಾನಿ ದುಃಖಾನಿ ಸಹತೇ ವ್ರಣಾನಾಮಭಿತಾಪನೇ।
ನ ತತೋಽಸ್ತಿ ತಪೋ ಭೂಯ ಇತಿ ಧರ್ಮವಿದೋ ವಿದುಃ ॥೧೪॥

ವ್ರಣಗಳು ಉರಿಯುವಾಗ ಉಂಟಾಗುವ ಯಾವ ದುಃಖಗಳನ್ನು ಸಹಿಸು-ತ್ತಾನೆಯೋ, ಅವನಿಗೆ ಅದಕ್ಕಿಂತ ದೊಡ್ಡ ತಪಸ್ಸಿಲ್ಲವೆಂದು ಧರ್ಮಜ್ಞರು ತಿಳಿಯು-ತ್ತಾರೆ.

ಪೃಷ್ಠತೋ ಭೀರವಃ ಸಂಖೇ ವರ್ತಂತೇಽಧಮಪೂರುಷಾಃ।
ಶೂರಾಚ್ಚರಣಮಿಚ್ಛಂತಃ ಪರ್ಜನ್ಯಾದಿವ ಜೀವನಮ್ ॥೧೫॥

ಭೀರು(ಹೇಡಿ)ಗಳಾದ ಅಧಮಪುರುಷರು ಪರ್ಜನ್ಯನಿಂದ ಜೀವನವನ್ನು ಬಯಸಿದಂತೆ ಶೂರನಿಂದ ರಕ್ಷಣೆಯನ್ನು ಬಯಸಿ ರಣರಂಗದಲ್ಲಿ ಶೂರನ ಹಿಂದೆಯೇ ಇರುತ್ತಾರೆ.

ಯದಿ ಶೂರಂ ತಥಾ ಕ್ಷೇಮೇ ಪ್ರತೀಕ್ಷೇರನ್ ಯಥಾ ಭಯೇ।
ಪ್ರತಿ ಶೂರಂ ಜನಾಃ ಕುರ್ಯುರ್ನ ಚ ತದ್ ವರ್ತತೇ ತಥಾ ॥೧೬॥

ಅಶಕ್ತಪುರುಷರು ಭಯಕಾಲದಲ್ಲಿ ಶೂರನನ್ನು ಬಯಸುವಂತೆ ಕ್ಷೇಮಕಾಲದಲ್ಲಿಯೂ ಒಬ್ಬ ಶೂರನನ್ನು ನಿರೀಕ್ಷಿಸಬೇಕಾದೀತು. ಆದರೆ ಅವರು ಹಾಗೆ ಮಾಡುವುದಿಲ್ಲ. ಏಕೆಂದರೆ ಒಮ್ಮೆ ಉಂಟಾದ ಭಯವು ಹಾಗೆಯೇ ಉಳಿಯುವುದಿಲ್ಲ.

ಯದಿ ತೇ ಕೃತಮಾಜ್ಞಾಯ ನಮಸ್ಕುರ್ಯುಃ ಸದೈವ ತಮ್।
ಯುಕ್ತಂ ನ್ಯಾಯ್ಯಂ ಚ ಕುರ್ಯುಸ್ತೇ ನ ಚ ತದ್ ವರ್ತತೇ ತಥಾ ॥೧೭॥

ಶೂರನು ತಮಗೆ ಮಾಡಿದ ಉಪಕಾರವನ್ನು ಸ್ಮರಿಸಿ, ಅವರು ಯಾವಾಗಲೂ ಅವನಿಗೆ ನಮಸ್ಕರಿಸಿದರೆ ಅದು ನ್ಯಾಯವೂ ಮತ್ತು ಯುಕ್ತವೂ ಆದೀತು! ಆದರೆ ಅವರು ಹಾಗೆ ಮಾಡುವುದಿಲ್ಲ.

ಪುರುಷಾಣಾಂ ಸಮಾನಾನಾಂ ದೃಶ್ಯತೇ ಮಹದಂತರಮ್।
ಸಂಗ್ರಾಮೇऽನೀಕವೇಲಾಯಾಮುತ್ಕೃಷ್ಟೇऽಭಿಪತತ್ಸು ಚ ॥೧೮॥

ಒಂದೇ ರೀತಿಯಯಿಲ್ಲಿ ಕಾಣುವ ಪುರುಷರಲ್ಲಿ ಯುದ್ಧದಲ್ಲಿ ಸೈನ್ಯದಲ್ಲಿ ಶತ್ರುಗಳು ಸಿಂಹಗರ್ಜನೆಯಿಂದ ಮೇಲೆರೆಗುತ್ತಿರುವಾಗ ದೊಡ್ಡ ವ್ಯತ್ಯಾಸವು ಕಂಡು ಬರುತ್ತದೆ.

ಪತತ್ಯಭಿಮುಖಃ ಶೂರಃ ಪರಾನ್ ಭೀರುಃ ಪಲಾಯತೇ।
ಆಸ್ಥಾಯಾಸ್ವರ್ಗ್ಯಮಧ್ವಾನಂ ಸಹಾಯಾನ್ ವಿಷಮೇ ತ್ಯಜನ್ ॥೧೯॥

ಶೂರನು ಶತ್ರುಗಳ ಮೇಲೆ ಅಭಿಮುಖನಾಗಿ ಎರಗುತ್ತಾನೆ. ಹೇಡಿಯಾದವನು ಅಸ್ವರ್ಗ್ಯವಾದ ಮಾರ್ಗವನ್ನು ಆಶ್ರಯಿಸಿ ಸಂಕಟಪರಿಸ್ಥಿತಿಯಲ್ಲಿ ಸಹಾಯಕರನ್ನು ಬಿಟ್ಟು ಪಲಾಯನ ಮಾಡುತ್ತಾನೆ.

ಮಾ ಸ್ಮ ತಾಂಸ್ತಾದೃಶಾಂಸ್ತಾತ ಜನಿಷ್ಠಾಃ ಪುರುಷಾಧಮಾನ್ ।
ಯೇ ಸಹಾಯಾನ್ ರಣೇ ಹಿತ್ವಾ ಸ್ವಸ್ತಿಮಂತೋ ಗೃಹಾನ್ ಯಯುಃ ॥೨೦॥

ಎಲೈ ಪ್ರೀತಿಪಾತ್ರನೇ! ಯಾರು ತಮ್ಮ ಸಹಾಯಕರನ್ನು ಯುದ್ಧಭೂಮಿಯಲ್ಲಿ ಬಿಟ್ಟು, ತಾವು ಕ್ಷೇಮವಾಗಿ ಮನೆಗೆ ತೆರಳುತ್ತಾರೋ ಅಂತಹ ಪುರುಷಾಧಮರನ್ನು ನಿನ್ನ ವಂಶದಲ್ಲಿ ಸೃಷ್ಟಿಸಬೇಡ.

ಅಸ್ವಸ್ತಿ ತೇಭ್ಯಃ ಕುರ್ವಂತಿ ದೇವಾ ಇಂದ್ರಪುರೋಗಮಾಃ ।
ತ್ಯಾಗೇನ ಯಃ ಸಹಾಯಾನಾಂ ಸ್ವಾನ್ ಪ್ರಾಣಾಂಸ್ತ್ರಾತುಮಿಚ್ಛತಿ ॥೨೧॥

ತನ್ನ ಸಹಾಯಕರನ್ನು ತ್ಯಜಿಸಿ ಯಾವನು ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳುತ್ತಾನೆಯೋ ಅವನಿಗೆ ಇಂದ್ರನೇ ಮೊದಲಾದ ದೇವತೆಗಳು ಅಶುಭವನ್ನು ಉಂಟುಮಾಡುತ್ತಾರೆ.

ತಂ ಹನ್ಯುಃ ಕಾಷ್ಠಲೋಷ್ಟೈರ್ವಾ ದಹೇಯುರ್ವಾ ಕಟಾಗ್ನಿನಾ ।
ಪಶುವನ್ಮಾರಯೇಯುರ್ವಾ ಕ್ಷತ್ರಿಯಾ ಯೇ ಸ್ಯುರೀದೃಶಾಃ ॥೨೨॥

ಮೊದಲು ಹೇಳಿದ ವೀರರಾದ ಕ್ಷತ್ರಿಯರು ಅವನನ್ನು ಕಾಷ್ಠಲೋಷ್ಠಗಳಿಂದ ಹೊಡೆದಾರು! ಚಿತಾಗ್ನಿಯಿಂದ ಸುಟ್ಟಾರು! ಅಥವಾ ಪಶುಗಳಂತೆ ಕೊಂದಾರು!

ಅಧರ್ಮಃ ಕ್ಷತ್ರಿಯಸ್ಯೈಷ ಯಚ್ಛಯ್ಯಾಮರಣಂ ಭವೇತ್ ।
ವಿಸೃಜನ್ ಶ್ಲೇಷ್ಮಪಿತ್ತಾನಿ ಕೃಪಣಂ ಪರಿದೇವನಮ್ ॥೨೩॥

ಕ್ಷತ್ರಿಯನಾದವನಿಗೆ ಹಾಸಿಗೆಯಲ್ಲಿ ಮಲಗಿ, ಶ್ಲೇಷ್ಮಾದಿಗಳನ್ನು ಉಗುಳುತ್ತಾ, ಕರುಣಾಜನಕವಾಗಿ ಗೋಳಾಡುತ್ತಾ ಮರಣವನ್ನು ಹೊಂದುವುದು ಅಧರ್ಮವಾದುದು.

ಅವಿಕ್ಷತೇನ ದೇಹೇನ ಪ್ರಲಯಂ ಯೋಽಧಿಗಚ್ಛತಿ ।
ಕ್ಷತ್ರಿಯೋ ನಾಸ್ಯ ತತ್ ಕರ್ಮ ಪ್ರಶಂಸಂತಿ ಪುರಾವಿದಃ ॥೨೪॥

ಯಾವ ಕ್ಷತ್ರಿಯನು ಗಾಯವಿಲ್ಲದ ದೇಹದಿಂದ ಮರಣವನ್ನು ಹೊಂದುತ್ತಾನೆಯೋ ಅವನ ಆ ಕರ್ಮವನ್ನು ಪ್ರಾಚೀನರು ಪ್ರಶಂಸಿಸುವುದಿಲ್ಲ.

ನ ಗೃಹೇ ಮರಣಂ ತಾತ ಕ್ಷತ್ರಿಯಾಣಾಂ ಪ್ರಶಸ್ಯತೇ।
ಶೌಂಡೀರಾಣಾಮಶೌಂಡೀರ್ಯಮಧರ್ಮ್ಯಂ ಕೃಪಣಂ ಚ ತತ್ ॥೨೫॥

ಎಲೈ ಪ್ರೀತಿಪಾತ್ರನೇ! ಕ್ಷತ್ರಿಯರಿಗೆ ಗೃಹದಲ್ಲಿ ಮರಣವು ಪ್ರಶಸ್ತವಲ್ಲ. ಯುದ್ಧಕುಶಲರಾದವರಿಗೆ ಅಕೌಶಲವು ಅಧರ್ಮಪ್ರದವಾದುದು ಮತ್ತು ದರಿದ್ರವಾದುದು.

ಇದಂ ದುಃಖಮಹೋ ಕಷ್ಟಂ ಪಾಪೀಯಮಿತಿ ನಿಷ್ಟನನ್।
ಪ್ರತಿಧ್ವಸ್ತಮುಖಃ ಪೂತಿರಮಾತ್ಯಾನ್ ಬಹು ಶೋಚಯನ್ ॥೨೬॥

ಅರೋಗಾಣಾಂ ಸ್ಪೃಹಯತೇ ಮುಹುರ್ಮೃತ್ಯುಮಪೀಚ್ಛತಿ।
ವೀರೋ ದೃಪ್ತೋಽಭಿಮಾನೀ ಚ ನೇದೃಶಂ ಮೃತ್ಯುಮರ್ಹತಿ ॥೨೭॥

ಅಯ್ಯೋ ಎಂಥಾ ಕಷ್ಟ! ಎಂಥಾ ಪಾಪಸ್ಥಿತಿಯ ಅವಸ್ಥೆ ಉಂಟಾಯಿತು! ಎಂದು ಗಟ್ಟಿಯಾಗಿ ಗೋಳಾಡುತ್ತಾ, ಮುಖದ ಕಾಂತಿಯನ್ನು ಕಳೆದುಕೊಂಡು, ದುರ್ಗಂಧವನ್ನು ಸೂಸುತ್ತಾ, ಕಳೆದು ಹೋದ ಅಮಾತ್ಯರನ್ನು ಸ್ಮರಿಸಿ ಬಹಳವಾಗಿ ಶೋಕಪಡುತ್ತಾ, ಮತ್ತೆ ಮತ್ತೆ ಆರೋಗ್ಯವನ್ನು ಅನಂತರ ಮೃತ್ಯುವನ್ನು ಬಯಸುವವನ ಮರಣಕ್ಕೆ ಸದೃಶವಾದ ಮೃತ್ಯುವನ್ನು ಆತ್ಮಾಭಿಮಾನವುಳ್ಳ ವೀರನಾದವನು ಹೊಂದಲು ಅನರ್ಹನಾದವನು.

ರಣೇಷು ಕದನಂ ಕೃತ್ವಾ ಜ್ಞಾತಿಭಿಃ ಪರಿವಾರಿತಃ।
ತೀಕ್ಷ್ಣೈಃ ಶಸ್ತ್ರೈಃ ಸುವಿಕ್ಷಿಪ್ತೈಃ ಕ್ಷತ್ರಿಯೋ ಮೃತ್ಯುಮರ್ಹತಿ ॥೨೮॥

ಕ್ಷತ್ರಿಯನು ಜ್ಞಾತಿಗಳಿಂದ ಪರಿವಾರಿತನಾಗಿ ರಣರಂಗದಲ್ಲಿ ಹೋರಾಡಿ ತೀಕ್ಷ್ಣವಾದ ಶಸ್ತ್ರಗಳಿಂದ ಗಾಯಗೊಂಡು ಮರಣವನ್ನು ಹೊಂದುವುದಕ್ಕೆ ಅರ್ಹನಾದವನು.

ಶೂರೋ ಹಿ ಸತ್ಯಮನ್ಯುಭ್ಯಾಮಾವಿಷ್ಟೋ ಯುದ್ಧ್ಯತೇ ಭೃಶಮ್ ।
ಕೃತ್ಯಮಾನಾನಿ ಗಾತ್ರಾಣಿ ಪರೈರ್ನೈವಾವಬುದ್ಧ್ಯತೇ ॥೨೯॥

ಶೂರನಾದವನು ಸತ್ಯ ಮತ್ತುಕೋಪಗಳಿಂದ ಆವಿಷ್ಟನಾಗಿ ತೀವ್ರವಾಗಿ ಯುದ್ಧ ಮಾಡುತ್ತಾನೆ. ಶತ್ರುಗಳ ಶಸ್ತ್ರಗಳಿಂದ ಕತ್ತರಿಸಲ್ಪಡುತ್ತಿರುವ ತನ್ನ ದೇಹವನ್ನು ಅವನು ಗಮನಿಸುವುದೇ ಇಲ್ಲ.

ಸ ಸಂಖೇ ನಿಧನಂ ಪ್ರಾಪ್ಯ ಪ್ರಶಸ್ತಂ ಲೋಕಪೂಜಿತಮ್ ।
ಸ್ವಧರ್ಮಂ ವಿಪುಲಂ ಪ್ರಾಪ್ಯ ಶಕ್ರಸ್ಯೈತಿ ಸಲೋಕತಾಮ್ ॥೩೦॥

ಅವನು ಯುದ್ಧದಲ್ಲಿ ಲೋಕಪೂಜಿತವಾದ ಪ್ರಶಸ್ತವಾದ ಮರಣವನ್ನು ಹೊಂದಿ, ವಿಪುಲವಾದ ಸ್ವಧರ್ಮವನ್ನು ಸಂಪಾದಿಸಿ, ಇಂದ್ರನ ಸಾಲೋಕ್ಯವನ್ನು ಪಡೆಯುತ್ತಾನೆ.

ಸರ್ವೋ ಯೋಧಃ ಪರಂ ತ್ಯಕ್ತುಮಾವಿಷ್ಟಸ್ತ್ಯಕ್ತಜೀವಿತಃ ।
ಪ್ರಾಪ್ನೋತೀಂದ್ರಸ್ಯ ಸಾಲೋಕ್ಯಂ ಶೂರಃ ಪೃಷ್ಠಮದರ್ಶಯನ್ ॥೩೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನಶತತಮೋऽಧ್ಯಾಯಃ ॥೮೯॥

ಶೂರನಾದವನು ಶತ್ರುಗಳಿಗೆ ತನ್ನ ಬೆನ್ನನ್ನು ತೋರಿಸದೇ, ಸರ್ವೋಪಾಯಗಳಿಂದ ರಣರಂಗದಲ್ಲಿ ಮುಂಭಾಗದಲ್ಲಿಯೇ ನಿಂತು, ತನ್ನ ಜೀವಿತದ ಹಂಗನ್ನು ತೊರೆದು, ಯುದ್ಧವನ್ನು ಮಾಡಿ ಮರಣವನ್ನು ಹೊಂದಿ ಇಂದ್ರನ ಸಾಲೋಕ್ಯವನ್ನು ಪಡೆಯುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೮೯ನೆಯ ಅಧ್ಯಾಯವು ಮುಗಿಯಿತು.

—0—

೧೦೦. ನೂರನೆಯ ಅಧ್ಯಾಯ

ಇಂದ್ರಾಂಬರೀಷಸಂವಾದಾನುವಾದ; ಸೇನಾಪತಿಯಾದ ಸುದೇವನ ಸ್ವರ್ಗವೈಭವ

ಯುಧಿಷ್ಠಿರಃ

ಕೇ ಲೋಕಾ ಯುದ್ಧ್ಯಮಾನಾನಾಂ ಶೂರಾಣಾಮನಿವರ್ತಿನಾಮ್ ।
ಭವಂತಿ ನಿಧನಂ ಪ್ರಾಪ್ಯ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ಶೂರರಾಗಿ ಯುದ್ಧವನ್ನು ಮಾಡುತ್ತಾ ಹಿಮ್ಮೆಟ್ಟದೇ ನಿಧನವನ್ನು ಹೊಂದುವವರಿಗೆ ಯಾವ ಲೋಕಗಳು ಲಭಿಸುತ್ತವೆ ಎಂದು ನನಗೆ ಹೇಳು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಂಬರೀಷಸ್ಯ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿಯೂ ಸಹ ಅಂಬರೀಷನಿಗೂ ಮತ್ತು ಇಂದ್ರನಿಗೂ ನಡೆದ ಸಂವಾದರೂಪವಾದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಅಂಬರೀಷೋ ಹಿ ನಾಭಾಗಃ ಸ್ವರ್ಗಂ ಗತ್ವಾ ಸುದುರ್ಲಭಮ್ ।
ದದರ್ಶ ಸುರಲೋಕಸ್ಥಂ ಶಕ್ರೇಣ ಸಚಿವಂ ಸಹ ॥೩॥

ಸರ್ವತೇಜೋಮಯಂ ದಿವ್ಯಂ ವಿಮಾನವರಮಾಸ್ಥಿತಮ್ ।
ಉಪರ್ಯುಪರಿ ಗಚ್ಛಂತಂ ಸ್ವಂ ವೈ ಸೇನಾಪತಿಂ ಪ್ರಭುಮ್ ॥೪॥

ನಾಭಾಗಪುತ್ರನಾದ ಅಂಬರೀಷನು ಅತ್ಯಂತ ದುರ್ಲಭವಾದ ಸ್ವರ್ಗಕ್ಕೆ ಹೋಗಿ ಸ್ವರ್ಗಲೋಕದಲ್ಲಿ ಇಂದ್ರನ ಜೊತೆಯಲ್ಲಿ ಇದ್ದ ಪ್ರಕಾಶಮಾನವಾದ ದಿವ್ಯವಾದ ವಿಮಾನದಲ್ಲಿ ಕುಳಿತಿದ್ದ ಮೇಲೆ ಮೇಲೆ ಹೋಗುತ್ತಿದ್ದಂತಹ ಪ್ರಭುವಾದ ತನ್ನ ಸೇನಾಪತಿಯನ್ನು ನೋಡಿದನು.

ಸ ದೃಷ್ಟ್ವೋಪರಿ ಗಚ್ಛಂತಂ ಸೇನಾಪತಿಮುದಾರಧೀಃ।
ಋದ್ಧಿಂ ದೃಷ್ಟ್ವಾ ಸುದೇವಸ್ಯ ವಿಸ್ಮಿತಃ ಪ್ರಾಹ ವಾಸವಮ್ ॥೫॥

ಉದಾರಬುದ್ಧಿಯುಳ್ಳ ಅಂಬರೀಷನು ಸುದೇವನ ವೈಭವವನ್ನೂ ಅವನು ತನಗಿಂತ ಮೇಲೆ ಹೋಗುತ್ತಿದ್ದುದನ್ನೂ ನೋಡಿ ವಿಸ್ಮಿತನಾಗಿ ಇಂದ್ರನನ್ನು ಕುರಿತು ಹೇಳಿದನು.

ಸಾಗರಾಂತಾಂ ಮಹೀಂ ಕೃತ್ಸ್ನಾಮನುಶಿಷ್ಯ ಯಥಾವಿಧಿ।
ಚಾತುರ್ವರ್ಣ್ಯೇ ಯಥಾಶಾಸ್ತ್ರಂ ಪ್ರವೃತ್ತೋ ಧರ್ಮಕಾಮ್ಯಯಾ ॥೬॥

ನಾನು ಸಾಗರಾಂತವಾದ ಸಮಗ್ರವಾದ ಭೂಮಿಯನ್ನು ಶಾಸ್ತ್ರೋಕ್ತರೀತಿಯಲ್ಲಿ ಪಾಲಿಸಿ, ಚಾತುರ್ವರ್ಣ್ಯದವರನ್ನು ಶಾಸ್ತ್ರೋಕ್ತರೀತಿಯಲ್ಲಿಯೇ ಅವರ ಧರ್ಮದಲ್ಲಿ ತೊಡಗಿಸಿ, ಧರ್ಮವನ್ನು ಬಯಸಿ ಪ್ರವೃತ್ತನಾದೆನು.

ಬ್ರಹ್ಮಚರ್ಯೇಣ ಘೋರೇಣ ಆಚಾರ್ಯಕುಲಸೇವಯಾ।
ವೇದಾನಧೀತ್ಯ ಧರ್ಮೇಣ ರಾಜಶಾಸ್ತ್ರಂ ಚ ಕೇವಲಮ್ ॥೭॥

ಅತಿಥೀನನ್ನಪಾನೇನ ಪಿತೄಂಶ್ಚ ಸ್ವಧಯಾ ತಥಾ।
ಋಷೀನ್ ಸ್ವಾಧ್ಯಾಯದೀಕ್ಷಾಭಿರ್ದೇವಾನ್ ಯಜ್ಞೈರನುತ್ತಮೈಃ ॥೮॥

ಕ್ಷತ್ರಧರ್ಮೇ ಸ್ಥಿತೋ ಭೂತ್ವಾ ಯಥಾಶಾಸ್ತ್ರಂ ಯಥಾವಿಧಿ।
ಉದೀಕ್ಷಮಾಣಃ ಪೃತನಾಂ ಜಯಾಮಿ ಯುಧಿ ವಾಸವ ॥೯॥

ಎಲೈ ವಾಸವನೇ! ಗುರುಕುಲದಲ್ಲಿ ಘೋರವಾದ ಬ್ರಹ್ಮಚರ್ಯದಿಂದ ಆಚಾರ್ಯಸೇವೆಯನ್ನು ಮಾಡಿ, ಧರ್ಮದಿಂದಲೇ ವೇದಾಧ್ಯಯನವನ್ನು ಮಾಡಿ, ರಾಜನೀತಿಶಾಸ್ತ್ರವನ್ನು ಅಧ್ಯಯನ ಮಾಡಿ, ಅತಿಥಿಗಳನ್ನು ಅನ್ನಪಾನಗಳಿಂದಲೂ, ಪಿತೃಗಳನ್ನು ಸ್ವಧೆಯಿಂದಲೂ, ಋಷಿಗಳನ್ನು ಸ್ವಾಧ್ಯಾಯ-ದೀಕ್ಷೆಗಳಿಂದಲೂ, ದೇವತೆ-ಗಳನ್ನು ಶ್ರೇಷ್ಠವಾದ ಯಜ್ಞಗಳಿಂದಲೂ ತೃಪ್ತಿಪಡಿಸಿ, ಶಾಸ್ತ್ರವಿಧಿಗಳಂತೆ ಕ್ಷತ್ರಿಯ-

ಧರ್ಮದಲ್ಲೇ ನಿರತನಾಗಿ, ಸೈನ್ಯದ ಮೇಲ್ವಿಚಾರಣೆಯನ್ನು ಮಾಡಿಕೊಂಡು, ಯುದ್ಧದಲ್ಲಿ ಜಯಶೀಲನಾಗಿರುವೆನು.

ದೇವರಾಜ ಸುದೇವೋಽಯಂ ಮಮ ಸೇನಾಪತಿಃ ಪುರಾ ।
ಆಸೀದ್ ಯೋಧಃ ಪ್ರಶಾಂತಾತ್ಮಾ ಸೋಽಯಂ ಕಸ್ಮಾದತೀವ ಮಾಮ್॥೧೦

ಎಲೈ ದೇವರಾಜನೇ! ಈ ಸುದೇವನು ಹಿಂದೆ ನನ್ನ ಸೇನಾಪತಿಯಾಗಿದ್ದವನು. ಪ್ರಶಾಂತಮನಸ್ಸುಳ್ಳ ಒಬ್ಬ ಯೋಧನಾಗಿದ್ದನು. ಅಂತಹವನು ಏಕೆ ನನ್ನನ್ನೂ ಮೀರಿದ್ದಾನೆ?

ನಾನೇನ ಕ್ರತುಭಿರ್ಮುಖ್ಯೈರಿಷ್ಟಂ ನೈವ ದ್ವಿಜಾತಯಃ ।
ತರ್ಪಿತಾ ವಿಧಿವಚ್ಚಕ್ರ ಸೋಽಯಂ ಕಸ್ಮಾದತೀವ ಮೇ ॥೧೧॥

ಅವನು ಶ್ರೇಷ್ಠವಾದ ಕ್ರತು(ಯಜ್ಞ)ಗಳನ್ನು ಮಾಡಿದವನಲ್ಲ. ವಿಧಿವತ್ತಾಗಿ ಬ್ರಾಹ್ಮಣರನ್ನು ತೃಪ್ತಿಪಡಿಸಿದವನಲ್ಲ. ಎಲೈ ಇಂದ್ರನೇ! ಅಂತಹ ಇವನು ಏಕೆ ನನ್ನ ಮೇಲಿದ್ದಾನೆ?

ಇಂದ್ರಃ

ಯದನೇನ ಕೃತಂ ಕರ್ಮ ಪ್ರತ್ಯಕ್ಷಂ ತೇ ಮಹೀಪತೇ ।
ಪುರಾ ಪಾಲಯತಃ ಸಮ್ಯಕ್ ಪೃಥಿವೀಂ ಧರ್ಮತೋ ನೃಪ ॥೧೨॥

ಇಂದ್ರ – ಎಲೈ ರಾಜನೇ! ನೀನು ಹಿಂದೆ ಭೂಮಿಯನ್ನು ಧರ್ಮದಿಂದ ಚೆನ್ನಾಗಿ ಆಳುತ್ತಿದ್ದಾಗ ನಿನ್ನ ಎದುರಿಗೆ ಇವನು ಎಂತಹ ಕರ್ಮವನ್ನು ಮಾಡಿದನೆಂದು ಕೇಳು.

ಶತ್ರವೋ ನಿರ್ಜಿತಾಃ ಸರ್ವೇ ಯೇ ತವಾಹಿತಕಾರಿಣಃ ।
ಸಂಯಮೋ ವಿಷಮಶ್ಚೈವ ಸುಯಮಶ್ಚ ಮಹಾಬಲಃ ॥೧೩॥

ರಾಕ್ಷಸಾ ದುರ್ಜಯಾ ಲೋಕೇ ತ್ರಯಸ್ತೇ ಯುದ್ಧದುರ್ಮದಾಃ ।
ಪುತ್ರಾಸ್ತೇ ಶತಶೃಂಗಸ್ಯ ರಾಕ್ಷಸಸ್ಯ ಮಹೀಪತೇಃ ॥೧೪॥

ನಿನಗೆ ಅಹಿತವನ್ನು ಉಂಟುಮಾಡುವ ಶತ್ರುಗಳಾದ ರಾಕ್ಷಸಾಧಿಪತಿಯಾದ ಶತಶೃಂಗನ ಪುತ್ರರಾದ ಮಹಾಬಲರಾದ ಯುದ್ಧದುರ್ಮದರಾದ ದುರ್ಜಯರಾದ ಸಂಯಮ, ವಿಷಮ ಮತ್ತು ಸುಯಮ ಎಂಬ ಮೂರು ರಾಕ್ಷಸರು ಇವನಿಂದ ಕೊಲ್ಲಲ್ಪಟ್ಟರು. (ಲಕ್ಷಾಲಂಕಾರ)

ತಥಾ ತಸ್ಮಿನ್ ಶುಭೇ ಕಾಲೇ ಯಜ್ಞೇ ಯಜ್ಞಂ ವಿತನ್ವತಃ।
ಅಶ್ವಮೇಧಂ ಮಹಾಯಾಗಂ ದೇವಾನಾಂ ಹಿತಕಾಮ್ಯಯಾ ॥೧೫॥

ತಸ್ಯ ತೇ ಖಲು ವಿಘ್ನಾರ್ಥಮಾಗತಾ ರಾಕ್ಷಸಾಸ್ತ್ರಯಃ।
ಕೋಟೀಶತಪರೀವಾರಾಂ ರಾಕ್ಷಸಾನಾಂ ಮಹಾಚಮೂಮ್ ॥೧೬॥

ಹಾಗೆಯೇ ಶುಭಕಾಲದಲ್ಲಿ ದೇವತೆಗಳನ್ನು ಸಂತೋಷಪಡಿಸುವ ಉದ್ದೇಶದಿಂದ ಅಶ್ವಮೇಧಮಹಾಯಾಗವನ್ನು ಮಾಡುತ್ತಿದ್ದ ನಿನ್ನ ಯಜ್ಞಕ್ಕೆ ವಿಘ್ನವನ್ನು ಉಂಟು ಮಾಡಲು ನೂರುಕೋಟಿ ಪರಿಮಿತವಾದ ರಾಕ್ಷಸರ ದೊಡ್ಡ ಸೈನ್ಯವನ್ನು ತೆಗೆದು-ಕೊಂಡು ಆ ಮೂವರು ಬಂದರು.

ಪರಿಗೃಹ್ಯ ತತಃ ಸರ್ವಾಃ ಪ್ರಜಾ ಬಂದೀಕೃತಾಸ್ತವ।
ವಿಹ್ವಲಾಶ್ಚ ಪ್ರಜಾಃ ಸರ್ವಾಃ ಸರ್ವೇ ಚ ತವ ಸೈನಿಕಾಃ।
ನಿರಾಕೃತಸ್ತಯಾ ಚಾಸೀತ್ ಸುದೇವಃ ಸೈನ್ಯನಾಯಕಃ ॥೧೭॥

ಅವರು ನಿನ್ನ ಪ್ರಜೆಗಳೆಲ್ಲರನ್ನೂ ಹಿಡಿದು ಬಂದಿಗಳನ್ನಾಗಿ ಮಾಡಿಕೊಂಡರು. ಎಲ್ಲ ಪ್ರಜೆಗಳೂ ಮತ್ತು ನಿನ್ನ ಸೈನಿಕರು ವಿಹ್ವಲರಾದರು. ನಿನ್ನ ಸೇನಾಪತಿಯಾದ ಸುದೇವನು ಆ ರಾಕ್ಷಸಸೇನೆಯಿಂದ ಪರಾಜಿತನಾದನು.

ತತ್ರಾಮಾತ್ಯವಚಃ ಶ್ರುತ್ವಾ ನಿರಸ್ತಃ ಸರ್ವಕರ್ಮಸು।
ಶ್ರುತ್ವಾ ತೇಷಾಂ ವಚೋ ಭೂಯಃ ಸೋಪಧಂ ವಸುಧಾಧಿಪ ॥೧೮॥

ಸರ್ವಸೈನ್ಯಸಮಾಯುಕ್ತಃ ಸುದೇವಃ ಪ್ರಹಿತಸ್ತ್ವಯಾ।
ರಾಕ್ಷಸಾನಾಂ ವಧಾರ್ಥಾಯ ದುರ್ಜಯಾನಾಂ ನರಾಧಿಪ ॥೧೯॥

ಆಗ ಅಮಾತ್ಯರ ಮಾತುಗಳನ್ನು ಕೇಳಿ ನೀನು ಸುದೇವನನ್ನು ಎಲ್ಲ ಕರ್ಮ-ಗಳಿಂದಲೂ ಬಹಿಷ್ಕರಿಸಿದೆ. ಎಲೈ ರಾಜನೇ ಪುನಃ ಅಮಾತ್ಯರ ಮಾತಿನಂತೆ ನೀನು ಸುದೇವನನ್ನು ಸರ್ವಸೈನ್ಯಸಮಾಯುಕ್ತನಾಗಿ ಯುದ್ಧಕ್ಕೆ ಕಳುಹಿಸಿದೆ. ಎಲೈ ರಾಜನೇ! ದುರ್ಜಯರಾದ ರಾಕ್ಷಸರ ವಧೆಗಾಗಿ ನೀನು ಅವನನ್ನು ಕಳುಹಿಸಿದೆ.

ನಾಜಿತ್ವಾ ರಾಕ್ಷಸೀಂ ಸೇನಾಂ ಪುನರಾಗಮನಂ ತವ।
ಬಂದಾನ್ಮೋಕ್ಷಮಕೃತ್ವಾ ಚ ನ ಚಾಗಮನಮಿಷ್ಯತೇ ॥೨೦॥

'ರಾಕ್ಷಸಸೇನೆಯನ್ನು ಸೋಲಿಸದೇ ಬಂದೀಕೃತರಾದ ನನ್ನ ಪ್ರಜೆಗಳನ್ನು ಬಿಡುಗಡೆ ಮಾಡದೇ ನೀನು ಹಿಂದಿರುಗಕೂಡದು' (ಎಂದು ಅವನಿಗೆ ಹೇಳಿದೆ).

ಸುದೇವಸ್ತದ್ವಚಃ ಶ್ರುತ್ವಾ ಪ್ರಸ್ಥಾನಮಕರೋನ್ನೃಪ।
ಸಂಪ್ರಾಪ್ತಶ್ಚ ಸ ತಂ ದೇಶಂ ಯತ್ರ ಬಂದೀಕೃತಾಃ ಪ್ರಜಾಃ ॥೨೧॥

ಎಲೈ ರಾಜನೇ! ಸುದೇವನು ಆ ಮಾತನ್ನು ಕೇಳಿ ಹೊರಟು ಸೆರೆ ಹಿಡಿಯಲ್ಪಟ್ಟ ಪ್ರಜೆಗಳಿದ್ದ ಆ ಸ್ಥಳಕ್ಕೆ ಬಂದನು.

ಪಶ್ಯತಿ ಸ್ಮ ಚಮೂರ್ಜೇತುಮಪಿ ಸೇಂದ್ರೈಃ ಸುರಾಸುರೈಃ।
ನಾಂಬರೀಷಃ ಕಲಾಮೇಕಾಮೇಷಾಂ ಕ್ಷಪಯಿತುಂ ಕ್ಷಮಃ।
ದಿವ್ಯಾಸ್ತ್ರಬಲಭೂಯಿಷ್ಠಃ ಕಿಮಂಗಃ ಪುನರೀದೃಶಃ ॥೨೨॥

ಸೇನಾಪತಿಯಾದ ಸುದೇವನು ರಾಕ್ಷಸರ ಮಹಾಘೋರವಾದ ಮಹಾಸೈನ್ಯ-ವನ್ನು ನೋಡಿ ಚಿಂತಿಸಿದನು. ಇಂದ್ರಸಹಿತರಾದ ಸುರಾಸುರರಿಂದಲೂ ಈ ಸೈನ್ಯ-ವನ್ನು ಗೆಲ್ಲಲು ಸಾಧ್ಯವಿಲ್ಲ. ದಿವ್ಯಾಸ್ತ್ರಬಲಸಂಪನ್ನನಾದ ಅಂಬರೀಷನು ಈ ಸೈನ್ಯದ ಒಂದು ಭಾಗವನ್ನೂ ವಿನಾಶ ಮಾಡಲಾರ. ಇನ್ನು ಅವನ ಸಹಾಯಕನಾದ ನನ್ನಿಂದ ಇಂತಹ ಸೈನ್ಯವು ಹೇಗೆ ಸೋಲಿಸಲ್ಪಡುತ್ತದೆ?

ತತಃ ಸೇನಾಂ ಪುನಃ ಸರ್ವಾಂ ಪ್ರೇಷಯಾಮಾಸ ಪಾರ್ಥಿವ।
ಯಚ್ಚ ತ್ವಂ ವಿಜಿತಃ ಸರ್ವೈಮಂತ್ರಿಭಿಃ ಸೋಪಧೈಃ ಸಹ ॥೨೪॥

ಎಲೈ ರಾಜನೇ! ಅನಂತರ ಎಲ್ಲ ಮಂತ್ರಿಗಳೂ ಸೇರಿ ಪುನಃ ಹೆಚ್ಚಿನ ಸೈನ್ಯವನ್ನು ಕಳುಹಿಸಿದರು. ಆಗ ಸೇನೆಯ ಜೊತೆಯಲ್ಲಿ ನೀನೂ ಪರಾಜಿತನಾದೆ.

ತತೋ ರುದ್ರಂ ಮಹಾದೇವಂ ಪ್ರಪನ್ನೋ ಜಗತಃ ಪತಿಮ್ ।
ಶ್ಮಶಾನನಿಲಯಂ ದೇವಂ ತುಷ್ಟಾವ ವೃಷಭಧ್ವಜಮ್ ॥೨೫॥

ಸ್ತುತ್ವಾ ಶಸ್ತ್ರಂ ಸಮಾದಾಯ ಸ್ವಶಿರಶ್ಛೇತ್ತುಮುದ್ಯತಃ ॥೨೬॥

ಆಗ ಸುದೇವನು ಜಗತ್ಪತಿಯೂ, ಮಹಾದೇವನೂ, ಶ್ಮಶಾನವಾಸಿಯೂ ವೃಷಭಧ್ವಜನೂ ಆದ ಶಂಕರನಿಗೆ ಶರಣಾಗತನಾಗಿ ಅವನ ಸ್ತೋತ್ರವನ್ನು ಮಾಡಿದನು. ಸ್ತೋತ್ರವನ್ನು ಮಾಡಿ ಶಸ್ತ್ರವನ್ನು ತೆಗೆದುಕೊಂಡು ತನ್ನ ಶಿರಸ್ಸನ್ನು ಕತ್ತರಿಸಿಕೊಳ್ಳಲು ಉದ್ಯುಕ್ತನಾದನು.

ಕಾರುಣ್ಯಾದ್ ದೇವದೇವೇನ ಗೃಹೀತಸ್ತಸ್ಯ ದಕ್ಷಿಣಃ ।
ಸ ಪಾಣಿಃ ಸಹ ಶಸ್ತ್ರೇಣ ದೃಷ್ಟ್ವಾ ಚೇದಮುವಾಚ ಹ ॥೨೭॥

ದೇವದೇವನಾದ ಶಂಕರನು ಕರುಣೆಯಿಂದ ಅದನ್ನು ನೋಡಿ ಶಸ್ತ್ರಸಹಿತವಾದ ಅವನ ಬಲಗೈಯ್ಯನ್ನು ಹಿಡಿದು ಹೀಗೆ ಮಾತನಾಡಿದನಷ್ಟೇ!

ಕಿಮಿದಂ ಸಾಹಸಂ ಪುತ್ರ ಕರ್ತುಕಾಮೋ ವದಸ್ವ ಮೇ ।
ಸ ಉವಾಚ ಮಹಾದೇವಂ ಶಿರಸಾ ತ್ವವನೀಂ ಗತಃ ॥೨೮॥

ಎಲೈ ಪುತ್ರನೇ! ಇದೇನು ಸಾಹಸವನ್ನು ಮಾಡಲು ಹೊರಟಿರುವೆ ಎಂದು ನನಗೆ ಹೇಳು. (ಎಂದು ಹೇಳಿದನು). ಸುದೇವನು ಮಹಾದೇವನಿಗೆ ಭೂಮಿಯ ಮೇಲೆ ಶಿರಸಾ ನಮಸ್ಕಾರವನ್ನು ಮಾಡಿ ಹೇಳಿದನು.

ಭಗವನ್ ವಾಹಿನೀಮೇನಾಂ ರಾಕ್ಷಸಾನಾಂ ಸುರೇಶ್ವರ ।
ಅಶಕ್ತೋಽಹಂ ರಣೇ ಜೇತುಂ ತಸ್ಮಾತ್ ತ್ಯಕ್ಷ್ಯಾಮಿ ಜೀವಿತಮ್ ।
ಗತಿರ್ಭವ ಮಹಾದೇವ ಮಮಾರ್ತಸ್ಯ ಜಗತ್ಪತೇ ॥೨೯॥

ಭಗವಂತನೇ! ಸುರೇಶ್ವರನೇ! ಈ ರಾಕ್ಷಸರ ಸೈನ್ಯವನ್ನು ಯುದ್ಧದಲ್ಲಿ ಗೆಲ್ಲಲು ನಾನು ಅಸಮರ್ಥನಾಗಿದ್ದೇನೆ. ಆದ್ದರಿಂದ ಪ್ರಾಣವನ್ನು ಬಿಡುವೆನು. ಜಗತ್ಪತಿಯೇ! ಮಹಾದೇವನೇ! ಆರ್ತನಾದ ನನಗೆ ಗತಿಯಾಗು.

ನಾಗಂತವ್ಯಮಜಿತ್ವಾ ಚ ಮಾಮಾಹ ಜಗತೀಪತಿಃ।
ಅಂಬರೀಷೋ ಮಹಾದೇವ ಕ್ಷಾರಿತಃ ಸಚಿವೈಃ ಸಹ ॥೩೦॥

ಮಹಾದೇವ! ಜಗತ್ಪತಿಯಾದ ಅಂಬರೀಷನು ಸಚಿವರ ಮಾತುಗಳಿಂದ ಪ್ರಭಾವಿತನಾಗಿ ರಾಕ್ಷಸಸೈನ್ಯವನ್ನು ಗೆಲ್ಲದೇ ಹಿಂದಕ್ಕೆ ಬರಬಾರದೆಂದು ನನಗೆ ಹೇಳಿದ್ದಾನೆ (ಎಂದು ಹೇಳಿದನು).

ತಮುವಾಚ ಮಹಾದೇವಃ ಸುದೇವಂ ಪತಿತಂ ಕ್ಷಿತೌ।
ಅಧೋಮುಖಂ ಮಹಾತ್ಮಾನಂ ಸತ್ತ್ವಾನಾಂ ಹಿತಕಾಮ್ಯಯಾ ॥೩೧॥

ಭೂಮಿಯ ಮೇಲೆ ಬಿದ್ದು ಅಧೋಮುಖನಾಗಿ ನಮಸ್ಕಾರವನ್ನು ಮಾಡಿ ಪ್ರಜೆಗಳ ಹಿತವನ್ನು ಬಯಸುತ್ತಿದ್ದ ಮಹಾತ್ಮನಾದ ಸುದೇವನನ್ನು ಕುರಿತು ಮಹಾದೇವನು ಹೇಳಿದನು.

ಧನುರ್ವೇದಂ ಸಮಾಹೂಯ ಸಗಣಂ ಸಹವಿಗ್ರಹಮ್।
ರಥನಾಗಾಶ್ವಕಲಿಲಂ ದಿವ್ಯಾಸ್ತ್ರಸಮಲಂಕೃತಮ್ ॥೩೨॥

ರಥಂ ಚ ಸುಮಹಾಭಾಗಂ ಯೇನ ತತ್ ತ್ರಿಪುರಂ ಹತಮ್।
ಧನುಃ ಪಿನಾಕಂ ಖಡ್ಗಂ ಚ ರೌದ್ರಮಸ್ತ್ರಂ ಚ ಶಂಕರಃ।
ನಿಜಘಾನಾಸುರಾನ್ ಸರ್ವಾನ್ ಯೇನ ದೇವಸ್ತ್ರಿಯಂಬಕಃ ॥೩೩॥

ಉವಾಚ ಚ ಮಹಾದೇವಃ ಸುದೇವಂ ವಾಹಿನೀಪತಿಮ್।
ರಥಾದಸ್ಮಾತ್ ಸುದೇವ ತ್ವಂ ದುರ್ಜಯಃ ಸ ಸುರಾಸುರೈಃ ॥೩೪॥

ಮಹಾದೇವನು ಶರೀರವನ್ನು ಧರಿಸಿದ ಅಂಗಸಹಿತವಾದ ಧನುರ್ವೇದವನ್ನು ಕರೆದು ರಥಗಜಾಶ್ವಗಳಿಂದ ಕೂಡಿದ ದಿವ್ಯಾಸ್ತ್ರಗಳಿಂದ ಅಲಂಕೃತವಾದ ತ್ರಿಪುರಾ-

ಸುರರನ್ನು ಸಂಹಾರಮಾಡಿದ ರಥವನ್ನೂ, ಪಿನಾಕಧನುಸ್ಸನ್ನೂ, ಖಡ್ಗವನ್ನೂ, ಯಾವ ತನ್ನ ಅಸ್ತ್ರದಿಂದ ತ್ರ್ಯಂಬಕನಾದ ಶಂಕರನು ಎಲ್ಲ ಅಸುರರನ್ನು ಸಂಹರಿಸಿದನೋ ಅಂತಹ ಅಸ್ತ್ರವನ್ನೂ ಸುದೇವನಿಗೆ ಕೊಟ್ಟು, ಸೇನಾಪತಿಯಾದ ಸುದೇವನನ್ನು ಕುರಿತು ''ಎಲೈ ಸುದೇವನೇ! ಇಂತಹ ಸಲಕರಣೆಗಳಿಂದ ಕೂಡಿದ ರಥದಿಂದ ಯುದ್ಧವನ್ನು ಮಾಡಿದರೆ ನೀನು ದೇವಾಸುರರಿಂದಲೂ ದುರ್ಜನಾಗುವಿ''.

ಮಾಯಯಾ ಮೋಹಿತೋ ಭೂಮೌ ನ ಪದಂ ಕರ್ತುಮರ್ಹಸಿ।
ರಥಸ್ಥಸ್ತ್ರಿದಶಾನ್ ಸರ್ವಾನ್ ಜೇಷ್ಯಸಿ ತ್ವಂ ಸದಾನವಾನ್ ॥೩೫॥

ಪ್ರಮಾದಕ್ಕೆ ಒಳಗಾಗಿ ಭೂಮಿಯ ಮೇಲೆ ಕಾಲಿಡಬೇಡ. ಈ ರಥದಲ್ಲಿ ಕುಳಿತು ಯುದ್ಧವನ್ನು ಮಾಡಿದರೆ ನೀನು ಎಲ್ಲಾ ದೇವತೆಗಳನ್ನೂ ಮತ್ತು ದಾನವರನ್ನೂ ಗೆಲ್ಲುವಿ.

ರಾಕ್ಷಸಾಶ್ಚ ಪಿಶಾಚಾಶ್ಚ ನ ಶಕ್ತಾ ದ್ರಷ್ಟುಮೀದೃಶಮ್।
ರಥಂ ಸೂರ್ಯಸಹಸ್ರಾಭಂ ಕಿಮು ಯೋದ್ಧುಂ ತ್ವಯಾ ಸಹ ॥೩೬॥

ರಾಕ್ಷಸರು ಮತ್ತು ಪಿಶಾಚಿಗಳು ಸಹಸ್ರಸೂರ್ಯರ ಪ್ರಭೆಯುಳ್ಳ ಈ ರಥವನ್ನು ನೋಡಲೂ ಸಹ ಸಾಧ್ಯವಿಲ್ಲ. ಇನ್ನು ನಿನ್ನ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡಿಯಾರು? (ಎಂದು ಹೇಳಿದನು)

ಸ ಜಿತ್ವಾ ರಾಕ್ಷಸಾನ್ ಸರ್ವಾನ್ ಕೃತ್ವಾ ಬಂದೀವಿಮೋಕ್ಷಣಮ್।
ಘಾತಯಿತ್ವಾ ಚ ತಾನ್ ಸರ್ವಾನ್ ಬಾಹುಯುದ್ಧೇ ತ್ವಯಂ ಹತಃ।
ವಿಷಮಂ ಪ್ರಾಪ್ಯ ಭೂಪಾಲ ವಿಷಮಶ್ಚ ನಿಪಾತಿತಃ ॥೩೭॥

ಸುದೇವನಾದರೋ ರಾಕ್ಷಸರೆಲ್ಲರನ್ನೂ ಗೆದ್ದು, ಬಂದೀಕೃತರಾದ ಪ್ರಜೆಗಳನ್ನು ವಿಮೋಚನೆಗೊಳಿಸಿ, ತನ್ನ ಸೈನ್ಯದಿಂದ ಆ ರಾಕ್ಷಸರೆಲ್ಲರನ್ನೂ ಕೊಲ್ಲಿಸಿ, ಬಾಹುಯುದ್ಧದಲ್ಲಿ ವಿಷಮನೆಂಬ ರಾಕ್ಷಸನನ್ನು ಭೂಮಿಯಲ್ಲಿ ಕೆಡವಿ ಅವನನ್ನೂ ಕೊಂದು ತಾನೂ ಹತನಾದನು.

ಏತಸ್ಯ ವಿತತಸ್ಯಾತ ಸುದೇವಸ್ಯ ಬಭೂವ ಹ।
ಸಂಗ್ರಾಮಯಜ್ಞಃ ಸುಮಹಾನ್ ಯಶ್ಚಾನ್ಯೋ ಯುದ್ಧ್ಯತೇ ನರಃ ॥೩೮॥

ಎಲೈ ಪ್ರೀತಿಪಾತ್ರನೇ! ಈ ಸುದೇವನ ಸಂಗ್ರಾಮಯಜ್ಞವು ಬಹಳ ದೊಡ್ಡದಾಗಿ ಮತ್ತು ವಿಸ್ತಾರವಾಗಿ ನಡೆಯಿತು. ಬೇರೆ ಯಾವ ಮನುಷ್ಯನು ಯುದ್ಧವನ್ನು ಮಾಡಿದರೂ ಹಾಗೆಯೇ ನಡೆಯುತ್ತದೆ.

ಸನ್ನದ್ಧೋ ದೀಕ್ಷಿತಃ ಸರ್ವೋ ಯೋಧಃ ಪ್ರಾಪ್ಯ ಚಮೂಮುಖಮ್।
ಯುದ್ಧಯಜ್ಞಾಧಿಕಾರಸ್ಥೋ ಭವತೀತಿ ವಿನಿಶ್ಚಯಃ ॥೩೯॥

ಶಸ್ತ್ರಸನ್ನದ್ಧನಾಗಿ ಯುದ್ಧದೀಕ್ಷೆಯನ್ನು ಪಡೆದ ಪ್ರತಿಯೊಬ್ಬ ಯೋಧನೂ ಸೇನಾಮುಖವನ್ನು ತಲುಪಿ ಯುದ್ಧಯಜ್ಞದಲ್ಲಿ ಅಧಿಕಾರಿಯಾಗುತ್ತಾನೆ ಎಂಬುದು ಅತ್ಯಂತ ನಿಶ್ಚಿತವಾದುದು. (ಎಂದು ಹೇಳಿದನು)

ಅಂಬರೀಷಃ

ಕಾನಿ ಯಜ್ಞೇ ಹವೀಂಷ್ಯತ್ರ ಕಿಮಾಜ್ಯಂ ಕಾ ಚ ದಕ್ಷಿಣಾ।
ಋತ್ವಿಜಶ್ಚಾತ್ರ ಕೇ ಪ್ರೋಕ್ತಾಸ್ತನ್ಮೇ ಬ್ರೂಹಿ ಶತಕ್ರತೋ ॥೪೦॥

ಅಂಬರೀಷ – ಈ ಯಜ್ಞದಲ್ಲಿ ಹವಿಸ್ಸು ಯಾವುದು? ಆಜ್ಯವು ಯಾವುದು? ದಕ್ಷಿಣೆಯು ಯಾವುದು? ಋತ್ವಿಜರು ಯಾರು? ಎಲೈ ಇಂದ್ರನೇ! ಇದನ್ನು ನನಗೆ ಹೇಳು.

ಇಂದ್ರಃ

ಋತ್ವಿಜಃ ಕುಂಜರಾಸ್ತತ್ರ ವಾಜಿನೋಽಧ್ವರ್ಯವಸ್ತಥಾ।
ಹವೀಂಷಿ ಪರಮಾಂಸಾನಿ ರುಧಿರಂ ತ್ವಾಜ್ಯಮೇವ ಚ ॥೪೧॥

ಇಂದ್ರ– ಆ ಯಜ್ಞದಲ್ಲಿ ಗಜಗಳು ಋತ್ವಿಜರು. ಅಶ್ವಗಳು ಅಧ್ವರ್ಯುಗಳು. ಶತ್ರುಗಳ ಮಾಂಸವು ಹವಿಸ್ಸು. ಮತ್ತು ರಕ್ತವು ಆಜ್ಯ.

ಸೃಗಾಲಗೃಧ್ರಕಾಕೋಲಾಃ ಸದಸ್ಯಾಸ್ತತ್ರ ಸತ್ರಿಣಃ।
ಆಜ್ಯಶೇಷಂ ಪಿಬಂತ್ಯೇತೇ ಹವಿಃ ಪ್ರಾಶ್ನಂತಿ ಚಾಧ್ವರೇ ॥೪೨॥

ನರಿ, ಹದ್ದು, ಕಾಗೆ, ಗೂಬೆಗಳು ಯಜ್ಞದಲ್ಲಿರುವ ಸದಸ್ಯರು. ಇವರು ಆಜ್ಯ-ಶೇಷವನ್ನು ಪಾನ ಮಾಡುತ್ತಾರೆ. ಯಜ್ಞದಲ್ಲಿ ಹವಿಸ್ಸನ್ನು ತಿನ್ನುತ್ತಾರೆ.

ಪ್ರಾಸತೋಮರಸಂಘಾತಾಃ ಖಡ್ಗಶಕ್ತಿಪರಶ್ವಧಾಃ।
ಜ್ವಲಂತೋ ನಿಶಿತಾಃ ಪೀತಾಃ ಸ್ರುಚಸ್ತಸ್ಯಾಥ ಸತ್ರಿಣಃ ॥೪೩॥

ಪ್ರಕಾಶಿಸುವ ಹರಿತವಾದ ನೀರನ್ನು ಕುಡಿಸಿ ಹದಮಾಡಿದ ಪ್ರಾಸತೋಮರಗಳ ಸಮೂಹಗಳು, ಖಡ್ಗಶಕ್ತಿಪರಶುಗಳು ವೀರನ ಆ ಯಜ್ಞದಲ್ಲಿ ಸ್ರುಕ್ಕುಗಳು.

ಚಾಪವೇಗಾಯತಸ್ತೀಕ್ಷ್ಣಃ ಪರಕಾಯಾವದಾರಣಃ।
ಋಜುಃ ಸುನಿಶಿತಃ ಪೀತಃ ಸಾಯಕೋಽಸ್ಯ ಸ್ರುವೋ ಮಹಾನ್ ॥೪೪॥

ಬಿಲ್ಲಿನ ವೇಗದಿಂದ ಹೊರಹೊಮ್ಮುವ ತೀಕ್ಷ್ಣವಾದ, ಶತ್ರುಶರೀರಭೇದಕವಾದ, ನೇರವಾದ, ಹರಿತವಾದ, ನೀರುಕುಡಿಸಿದ ಬಾಣವು ಅಲ್ಲಿ ದೊಡ್ಡ ಸ್ರುವ.

ದ್ವೀಪಿಚರ್ಮಾವನದ್ಧಶ್ಚ ನಾಗದಂತಕೃತತ್ಸರುಃ।
ಹಸ್ತಿಹಸ್ತಗತಃ ಖಡ್ಗಃ ಸ್ಫ್ಯೋ ಭವೇತ್ ತಸ್ಯ ಸಂಯುಗೇ ॥೪೫॥

ಆನೆಯ ದಂತದಿಂದ ಮಾಡಿದ ಹಿಡಿಯನ್ನು ಹೊಂದಿ, ವ್ಯಾಘ್ರಚರ್ಮದಿಂದ ಸುತ್ತಲ್ಪಟ್ಟಿರುವ, ಗಜಾರೋಹಿಯ ಹಸ್ತದಲ್ಲಿರುವ ಖಡ್ಗವು ಆ ಯುದ್ಧರೂಪವಾದ ಯಜ್ಞದಲ್ಲಿ ಸ್ಫ್ಯ ಎಂಬ ಖದಿರವೃಕ್ಷದ ಆಯುಧವಿಶೇಷ.

ಜ್ವಲಿತೈರ್ನಿಶಿತೈಃ ಪೀತೈಃ ಪ್ರಾಸಶಕ್ತಿಪರಶ್ವಧೈಃ।
ಶೈಕ್ಯಾಯಸಮಯೈಸ್ತೀಕ್ಷ್ಣೈರಭಿಘಾತೋ ಭವೇದ್ ವಸು ॥೪೬॥

ಪ್ರಕಾಶಿಸುವ, ಹರಿತವಾದ, ನೀರನ್ನು ಕುಡಿಸಿ ಹದಮಾಡಿದ, ಪೂರ್ಣವಾಗಿ ಕಬ್ಬಿಣದಿಂದ ಮಾಡಿದ, ತೀಕ್ಷ್ಣವಾದ ಪ್ರಾಸಶಕ್ತಿಪರಶುಗಳ ಪ್ರಹಾರವು ಧನವಾಗುತ್ತದೆ.

ಆವೇಗಾದ್ ಯತ್ತು ರುಧಿರಂ ಸಂಗ್ರಾಮೇ ಸ್ಯಂದತೇ ಭುವಿ।
ಸಾऽಸ್ಯ ಪೂರ್ಣಾಹುತಿರ್ಹೋತ್ರೇ ಸಮೃದ್ಧಾ ಸರ್ವಕಾಮಧುಕ್ ॥೪೭॥

ಯುದ್ಧದಲ್ಲಿ ಭೂಮಿಯ ಮೇಲೆ ವೇಗದಿಂದ ಹರಿಯುವ ರಕ್ತದ ನದಿಯು ಆ ಯಜ್ಞದ ಪೂರ್ಣಾಹುತಿ. ಅದು ಹೋತೃವಿಗೆ ಸಮೃದ್ಧವಾದ ಸರ್ವಫಲವನ್ನೂ ಕೊಡುವಂತಹದು.

ಛಿಂಧಿ ಭಿಂಧೀತಿ ಯಸ್ಯೈತಚ್ಛ್ರೂಯತೇ ವಾಹಿನೀಮುಖೇ।
ಸಾಮಾನಿ ಸಾಮಗಾಸ್ತಸ್ಯ ಗಾಯಂತಿ ಯಮಸಾದನೇ ॥೪೮॥

ಯುದ್ಧದಲ್ಲಿ ಸೇನಾಮುಖದಲ್ಲಿ ಕೇಳಿಬರುವ 'ಹೊಡೆ, ಕತ್ತರಿಸು' ಮೊದಲಾದ ಶಬ್ದಗಳು ಸಾಮಗಳು. ಅದನ್ನು ಹೇಳುವ ಯೋಧರು ಯುದ್ಧದಲ್ಲಿ ಸಾಮ-ಗಾಯನವನ್ನು ಮಾಡುವವರು. (ಲಕ್ಷಾಲಂಕಾರ)

ಹವಿರ್ಧಾನಂ ತು ತಸ್ಯಾಹುಃ ಪರೇಷಾಂ ವಾಹಿನೀಮುಖಮ್।
ಕುಂಜರಾಣಾಂ ಹಯಾನಾಂ ಚ ವರ್ಮಿಣಾಂ ಚ ಸಮುಚ್ಚಯಃ ॥೪೯॥

ಅಗ್ನಿಃ ಶ್ಯೇನಚಿತೋ ನಾಮ ತಸ್ಯ ಯಜ್ಞೇ ವಿಧೀಯತೇ।

ಶತ್ರುಸೈನ್ಯದ ಮುಂಭಾಗವು ಹವಿರ್ಧಾನ ಎಂದು ಹೇಳಲ್ಪಡುತ್ತದೆ. ಗಜಗಳ ಅಶ್ವಗಳ ಕವಚಧಾರಿಯೋಧರ ಸಮೂಹವು ಆ ಯಜ್ಞದಲ್ಲಿ ಶ್ಯೇನಚಿತ ಎಂಬ ಅಗ್ನಿಯೆಂದು ಹೇಳಲ್ಪಡುತ್ತದೆ.

ಉತ್ತಿಷ್ಠತಿ ಕಬಂಧೋऽತ್ರ ಸಹಸ್ರೇ ನಿಹತೇ ತು ಯಃ।
ಸ ಯೂಪಸ್ತಸ್ಯ ಶೂರಸ್ಯ ಖಾದಿರೋऽಷ್ಟಾಶ್ರಿರುಚ್ಯತೇ ॥೫೦॥

ಸಹಸ್ರಯೋಧರು ಹತರಾದಾಗ ಯಾವ ಶೂರನ ಮುಂಡ ಮೇಲೇಳು-ತ್ತದೆಯೋ ಅದು ಖದಿರವೃಕ್ಷದ ಎಂಟು ಮೂಲೆಗಳಿರುವ ಯೂಪ.

ಇಹೋಪಹೂತಂ ಕ್ರೋಶಂತಿ ಕುಂಜರಾ ಅಂಕುಶೇರಿತಾಃ।

ವ್ಯಾಘುಷ್ಟತಳನಾದೇನ ವಷಟ್‌ಕಾರೇಣ ಪಾರ್ಥಿವ।
ಉದ್ಗಾತಾ ತತ್ರ ಸಂಗ್ರಾಮೇ ತ್ರಿಸಾಮಾ ದುಂದುಭಿಃ ಸ್ಮೃತಃ ॥೫೧॥

ಈ ಯುದ್ಧದಲ್ಲಿ ಅಂಕುಶದಿಂದ ಪ್ರೇರೇಪಿಸಲ್ಪಟ್ಟ ಗಜಗಳ ಗರ್ಜನೆಯು ದೇವತಾಹ್ವಾನ. ಎಲೈ ರಾಜನೇ! ಗಟ್ಟಿಯಾಗಿ ಹೊಡೆದ ಚಪ್ಪಾಳೆಯು ವಷಟ್ಕಾರ. ದುಂದುಭಿಯು ಅಲ್ಲಿ ಮೂರು ಸಾಮಗಳನ್ನು ಗಾನ ಮಾಡುವ ಉದ್ಗಾತೃವೆಂದು ಹೇಳಲ್ಪಡುತ್ತದೆ.

ಬ್ರಹ್ಮಸ್ವೇ ಹ್ರಿಯಮಾಣೇ ಯಃ ಪ್ರಿಯಾಂ ಯುದ್ಧೇ ತನುಂ ತ್ಯಜೇತ್।
ಆತ್ಮಾನಂ ಯೂಪಮುಚ್ಛ್ರಿತ್ಯ ಸ ಯಜ್ಞೋಽನಂತದಕ್ಷಿಣಃ ॥೫೨॥

ಬ್ರಾಹ್ಮಣನ ಸ್ವತ್ತು ಅಪಹಾರವಾದಾಗ ಯಾವನು ಯುದ್ಧಮಾಡಿ ತನ್ನನ್ನೇ ಯೂಪವಾಗಿಸಿಕೊಂಡು ಎತ್ತಿ ತನಗೆ ಪ್ರಿಯವಾದ ಶರೀರವನ್ನು ತ್ಯಜಿಸುತ್ತಾನೆಯೋ ಅದು ಅನಂತದಕ್ಷಿಣೆಯುಳ್ಳ ಯಜ್ಞ.

ಭರ್ತುರರ್ಥೇ ತು ಯಃ ಶೂರೋ ವಿಕ್ರಮೇದ್ ವಾಹಿನೀಮುಖೇ।
ಭಯಾನ್ನ ಚ ನಿವರ್ತೇತ ತಸ್ಯ ಲೋಕಾ ಯಥಾ ಮಮ ॥೫೩॥

ತನ್ನ ಪ್ರಭುವಿನ ಸಲುವಾಗಿ ಯಾವ ಶೂರನು ರಣರಂಗದಲ್ಲಿ ವಿಕ್ರಮವನ್ನು ತೋರಿಸುವನೋ, ಭಯದಿಂದ ಹಿಂದಿರುಗುವುದಿಲ್ಲವೋ ಅವನಿಗೆ ಲಭ್ಯವಾಗುವ ಲೋಕಗಳು ನನ್ನ ಲೋಕಗಳಂತೆಯೇ ಇರುತ್ತವೆ.

ನೀಲಚಂದ್ರಾಕೃತೈಃ ಖಡ್ಗೈರ್ಬಾಹುಭಿಃ ಪರಿಘೋಪಮೈಃ।
ಯಸ್ಯ ವೇದಿರುಪಸ್ತೀರ್ಣಾ ತಸ್ಯ ಲೋಕಾ ಯಥಾ ಮಮ ॥೫೪॥

ನೀಲಮಣಿ ಮತ್ತು ಚಂದ್ರಚಿಹ್ನೆಗಳಿಂದ ಅಲಂಕೃತವಾದ ಖಡ್ಗಸಹಿತವಾದ ಒನಕೆ -ಯಂತಹ ಶತ್ರುಗಳ ಬಾಹುಗಳಿಂದ ಯಾವನ ರಣಭೂಮಿಯು ಹರಡಲ್ಪಡು-ತ್ತದೆಯೋ ಅವನ ಲೋಕಗಳು ನನ್ನ ಲೋಕಗಳಂತೆಯೇ.

ಯಸ್ತು ನಾವೇಕ್ಷತೇ ಕಂಚಿತ್ ಸಹಾಯಂ ವಿಜಯೇ ಸ್ಥಿತಃ।
ವಿಗಾಹ್ಯ ವಾಹಿನೀಮಧ್ಯಂ ತಸ್ಯ ಲೋಕಾ ಯಥಾ ಮಮ ॥೫೫॥

ಯಾವನು ವಿಜಯದಲ್ಲಿ ನಿರತನಾಗಿ ಯಾವ ಸಹಾಯವನ್ನೂ ನಿರೀಕ್ಷಿಸದೇ ಶತ್ರುಸೈನ್ಯಮಧ್ಯವನ್ನು ಪ್ರವೇಶಿಸುತ್ತಾನೆಯೋ ಅವನ ಲೋಕಗಳು ನನ್ನ ಲೋಕಗಳಂತೆಯೇ.

ಯಸ್ಯ ತೋಮರಸಂಘಾಟಾ ಭೇರೀಮಂಡೂಕಕಚ್ಛಪಾ।
ವೀರಾಸ್ಥಿಶರ್ಕರಾ ದುರ್ಗಾ ಮಾಂಸಶೋಣಿತಕರ್ದಮಾ ॥೫೬॥

ಅಸಿಚರ್ಮಪ್ಲವಾ ಸಿಂಧುಃ ಕೇಶಶೈವಲಶಾದ್ವಲಾ।
ಅಶ್ವನಾಗರಥೈಶ್ಚೈವ ಸಂಭಿನ್ನೈಃ ಕೃತಸಂಕ್ರಮಾ ॥೫೭॥

ಪತಾಕಾಧ್ವಜವಾನೀರಾ ಹತವಾಹನವಾಹಿನೀ।
ಶೋಣಿತೋದಾ ಸುಸಂಪೂರ್ಣಾ ದುಸ್ತರಾ ಪಾರಗೈರ್ನರೈಃ ॥೫೮॥

ಹತನಾಗಮಹಾನಕ್ರಾ ಪರಲೋಕವಹಾಶಿವಾ।
ಖಡ್ಗಿಖಡ್ಗಧ್ವಜಾನೂಕಾ ಗೃಧ್ರಕಂಕವಡಪ್ಲವಾ ॥೫೯॥

ಪುರುಷಾದಾನುಚರಿತಾ ಭೀರೂಣಾಂ ಕಶ್ಮಲಾವಹಾ।
ನದೀ ಯೋಧಮಹಾಯಜ್ಞೇ ತದಸ್ಯಾವಭೃಥಂ ಸ್ಮೃತಮ್ ॥೬೦॥

ಯಾವ ಯೋಧನ ಯುದ್ಧರೂಪವಾದ ಮಹಾಯಜ್ಞದಲ್ಲಿ ತೋಮರಗಳೆಂಬ ದೊಡ್ಡ ಕಲ್ಲುಗಳಿಂದ ಕೂಡಿದ, ಭೇರಿಗಳೆಂಬ ಮಂಡೂಕ ಮತ್ತು ಆಮೆಗಳಿಂದ ಕೂಡಿದ, ವೀರರ ಅಸ್ಥಿಗಳೆಂಬ ಮರಳುಗಳಿಂದ ಕೂಡಿದ, ದಾಟಲು ಅಸಾಧ್ಯವಾದ ರಕ್ತಮಾಂಸಗಳೆಂಬ ಕೆಸರಿನಿಂದ ಕೂಡಿದ, ಖಡ್ಗಚರ್ಮಗಳೆಂಬ ದೋಣಿಗಳನ್ನು ಹೊಂದಿದ, ಯೋಧರ ತಲೆಕೂದಲುಗಳೆಂಬ ಶೈವಲದಿಂದ ಮೃದುವಾದ, ಕತ್ತರಿಸಲ್ಪಟ್ಟ ಅಶ್ವಗಜರಥಗಳ ಭಾಗಗಳಿಂದ ಮಿಶ್ರಿತವಾದ, ಪತಾಕೆಗಳು ಮತ್ತು ಧ್ವಜಗಳು ಎಂಬ ಬೆತ್ತದ ಮರಗಳುಳ್ಳ , ಹತವಾದ ಅಶ್ವಾದಿವಾಹನಗಳನ್ನು

ಸೆಳೆದೊಯ್ಯುವ, ರಕ್ತಜಲದಿಂದ ಸಂಪೂರ್ಣವಾಗಿ ಕೂಡಿದ, ದಡದಲ್ಲಿರುವ ನರರು ದಾಟಲು ಸಾಧ್ಯವಾಗದ, ಹತವಾದ ಆನೆಗಳೆಂಬ ದೊಡ್ಡ ಮೊಸಳೆಗಳಿಂದ ಕೂಡಿದ, ಪರಲೋಕದ ಎಡೆಗೆ ಹರಿಯುವ, ನೋಡಲು ಅಮಂಗಳವಾದ, ಋಷ್ಟಿಗಳು ಖಡ್ಗಗಳು ಧ್ವಜಗಳೆಂಬ ಶಿಲೆಗಳಿಂದ ಕೂಡಿದ, ಹದ್ದು-ಕಾಗೆ-ಕಂಕ ಮೊದಲಾದ ಸಣ್ಣದೋಣಿಗಳಿಂದ ಕೂಡಿದ, ರಾಕ್ಷಸರಿಂದ ಸಂಚರಿಸಲ್ಪಡುವ, ಭೀರುಗಳಿಗೆ ಹೆದರಿಕೆಯನ್ನುಂಟು ಮಾಡುವ ನದಿಯು ಹರಿಯುತ್ತದೆಯೋ ಅದು ಅವಭೃಥ-ಸ್ನಾನವೆಂದು ಹೇಳಲ್ಪಡುತ್ತದೆ.

ವೇದೀ ಯಸ್ಯ ತ್ವಮಿತ್ರಾಣಾಂ ಶಿರೋಭಿರವಕೀರ್ಯತೇ।
ಅಶ್ವಸ್ಕಂಧೈರ್ಗಜಸ್ಕಂಧೈಸ್ತಸ್ಯ ಲೋಕಾ ಯಥಾ ಮಮ ॥೬೧॥

ಯಾವ ಯೋಧನ ರಣವೇದಿಕೆಯು ಶತ್ರುಗಳ ತಲೆಬುರುಡೆಗಳಿಂದಲೂ, ಅಶ್ವಸ್ಕಂಧಗಳಿಂದಲೂ, ಗಜಸ್ಕಂಧಗಳಿಂದಲೂ ಹರಡಲ್ಪಡುತ್ತದೆಯೋ ಅವನು ಪಡೆಯುವ ಲೋಕಗಳು ನನ್ನ ಲೋಕಗಳಂತೆಯೇ.

ಪತ್ನೀಶಾಲಾ ಕೃತಾ ಯಸ್ಯ ಪರೇಷಾಂ ವಾಹಿನೀಮುಖಿಮ್।
ಹವಿರ್ಧಾನಂ ಸ್ವವಾಹಿನ್ಯಸ್ತದಸ್ಯಾಹುರ್ಮನೀಷಿಣಃ ॥೬೨॥

ಯಾವನಿಗೆ ಶತ್ರುಸೈನ್ಯದ ಮುಂಭಾಗವು ಪತ್ನೀಶಾಲೆಯೋ ಅವನಿಗೆ ಜ್ಞಾನಿಗಳು ತನ್ನ ಸೈನ್ಯವು ಹವಿರ್ಧಾನವೆಂದು ಹೇಳುತ್ತಾರೆ.

ಸದಸ್ಯೋತ್ತರಯೋಧಾಗ್ನಿರಾಗ್ನೀಧ್ರಸ್ಯೋತ್ತರಾಂ ದಿಶಮ್।
ಶತ್ರುಸೇನಾಕಲತ್ರಸ್ಯ ಸರ್ವಲೋಕಾನದೂರತಃ ॥೬೩॥

ಸದಸ್ಯರ ಉತ್ತರದಲ್ಲಿರುವ ಯೋಧರೆಂಬ ಅಗ್ನಿಯೇನಿದೆಯೋ ಅದು ಆಗ್ನೀಧ್ರನ ಉತ್ತರದಿಕ್ಕಿನಲ್ಲಿ ಶತ್ರುಸೇನೆಯನ್ನು ಭಾರ್ಯೆಯಾಗಿ ಹೊಂದಿದ ಯೋಧ-ನಿಗೆ ಅವನು ಪಡೆಯುವ ಸರ್ವಲೋಕಗಳಿಗೆ ಸಮೀಪದಲ್ಲಿರುವಂತಹದು.

ಯದಾ ತೂಭಯತೋ ವ್ಯೂಹೋ ಭವತ್ಯಾಕಾಶಮಗ್ರತಃ।
ಸಾऽಸ್ಯ ವೇದೀ ತಥಾ ಯಜ್ಞೇ ಯಸ್ಯ ವೇದಾಸ್ತ್ರಯೋऽಗ್ನಯಃ ॥೬೪॥

ಯಾವಾಗ ಎರಡು ಕಡೆಗಳಲ್ಲಿಯೂ ಸೈನ್ಯವು ಸೇರಿ ಅದರ ಮಧ್ಯದಲ್ಲಿ ಯೋಧನ ಮುಂಭಾಗದಲ್ಲಿ ಅವಕಾಶವು ಇರುವುದೋ ಅದು ಅವನ ವೇದಿ. ಆ ಯಜ್ಞದಲ್ಲಿ ಧನುರ್ವೇದವು ಮೂರು ಅಗ್ನಿಗಳು.

ಯಸ್ತು ಯೋಧಃ ಪರಾವೃತಃ ಸಂತ್ರಸ್ತೋ ಹನ್ಯತೇ ಪರೈಃ।
ಅಪ್ರತಿಷ್ಠಂ ಸ ನರಕಂ ಯಾತಿ ನಾಸ್ತ್ಯತ್ರ ಸಂಶಯಃ ॥೬೫॥

ಯಾವ ಯೋಧನು ಯುದ್ಧಕ್ಕೆ ಹೆದರಿ ಹಿಂದಿರುಗುತ್ತಾ ಶತ್ರುಗಳಿಂದ ಕೊಲ್ಲ-ಲ್ಪಡುತ್ತಾನೆಯೋ ಅಂತಹವನು ನೆಲೆಯಿಲ್ಲದ ನರಕವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಯಸ್ಯ ಶೋಣಿತವೇಗೇನ ನದೀ ಸ್ಯಾತ್ ಸಮಭಿಪ್ಲುತಾ।
ಕೇಶಮಾಂಸಾಸ್ಥಿಸಂಕೀರ್ಣಾ ಸ ಗಚ್ಛೇತ್ ಪರಮಾಂ ಗತಿಮ್ ॥೬೬॥

ಯುದ್ಧದಲ್ಲಿ ಮೊದಲೇ ಹರಿಯುವ ಕೇಶ-ಮಾಂಸ-ಅಸ್ಥಿಗಳಿಂದ ಕೂಡಿದ ನದಿಯು ಯಾವನ ರಕ್ತದಿಂದ ಬೆರೆತು ವೇಗವಾಗಿ ಹರಿಯುತ್ತದೆಯೋ ಅಂತಹ-ವನು ಶ್ರೇಷ್ಠವಾದ ಗತಿಯನ್ನು ಹೊಂದುವನು.

ಯಸ್ತು ಸೇನಾಪತಿಂ ಹತ್ವಾ ತದ್ಯಾನಮಧಿರೋಹತಿ।
ಸ ವಿಷ್ಣುವಿಕ್ರಮಕ್ರಾಮೀ ಬೃಹಸ್ಪತಿಸಮಃ ಕ್ರತುಃ ॥೬೭॥

ಯಾವನು ಶತ್ರುಸೇನಾಪತಿಯನ್ನು ಕೊಂದು ಅವನ ರಥವನ್ನು ಏರುತ್ತಾನೆಯೋ ಅವನು ವಿಷ್ಣುವಿನ ವಿಕ್ರಮಕ್ಕೆ ಸಮನಾದ ವಿಕ್ರಮವುಳ್ಳವನು. ಅವನು ಮಾಡುವ ಯಜ್ಞವು ಬೃಹಸ್ಪತಿಯಜ್ಞಕ್ಕೆ ಸಮಾನವಾದುದು.

ನಾಯಕಂ ವಾ ಪ್ರಮಾಣಂ ವಾ ಯೋ ವಾ ಸ್ಯಾತ್ ತತ್ರ ಪೂಜಿತಃ।
ಜೀವಗ್ರಾಹಂ ನಿಗೃಹ್ಣಾತಿ ತಸ್ಯ ಲೋಕಾ ಯಥಾ ಮಮ ॥೬೮॥

ಯಾವನು ಶತ್ರುಸೈನ್ಯದ ನಾಯಕನನ್ನಾಗಲೀ, ಅಥವಾ ಪೂಜಿತನಾದ ಮುಖ್ಯ-ವ್ಯಕ್ತಿಯನ್ನಾಗಲೀ ಜೀವಸಹಿತವಾಗಿ ಸೆರೆ ಹಿಡಿಯುತ್ತಾನೆಯೋ ಅವನ ಲೋಕಗಳು ನನ್ನ ಲೋಕಗಳಂತೆಯೇ.

ಆಹವೇ ನಿಹತಂ ಶೂರಂ ನ ಶೋಚೇತ ಕದಾಚನ।
ಅಶೋಚ್ಯೋ ಹಿ ಹತಃ ಶೂರಃ ಸ್ವರ್ಗಲೋಕೇ ಮಹೀಯತೇ ॥೬೯॥

ಯುದ್ಧದಲ್ಲಿ ನಿಹತನಾದ ಶೂರನ ವಿಷಯದಲ್ಲಿ ಎಂದೂ ಶೋಕಪಡಬಾರದು. ಏಕೆಂದರೆ, ಹತನಾದ ಶೂರನು ಸ್ವರ್ಗಲೋಕದಲ್ಲಿ ಸಂತೋಷದಿಂದ ಇರುತ್ತಾನೆ.

ನ ಹ್ಯನ್ನಂ ನೋದಕಂ ತಸ್ಯ ನ ಸ್ನಾನಂ ನಾಪ್ಯಶೌಚಕಮ್।
ಹತಸ್ಯ ಕರ್ತುಮಿಚ್ಛಂತಿ ತಸ್ಯ ಲೋಕಾನ್ ಶೃಣುಷ್ವ ಮೇ ॥೭೦॥

ಅಂತಹ ವೀರನಿಗೆ ಬಂಧುಗಳು ಅನ್ನದಾನವನ್ನಾಗಲೀ, ಉದಕಕ್ರಿಯೆಯನ್ನಾಗಲೀ, ಸ್ನಾನವನ್ನಾಗಲೀ, ಆಶೌಚಾಚರಣೆಯನ್ನಾಗಲೀ ಮಾಡಲು ಇಷ್ಟಪಡುವುದಿಲ್ಲ. ಅಂತಹ ವೀರನಿಗೆ ದೊರೆಯುವ ಲೋಕಗಳನ್ನು ನನ್ನಿಂದ ಕೇಳು.

ವರಾಪ್ಸರಃಸಹಸ್ರಾಣಿ ಶೂರಮಾಯೋಧನೇ ಹತಮ್।
ತ್ವರಮಾಣಾ ಹಿ ಧಾವಂತಿ ಮಮ ಭರ್ತಾ ಭವೇದಿತಿ ॥೭೧॥

ಯುದ್ಧದಲ್ಲಿ ಹತನಾದ ಶೂರನ ಬಳಿಗೆ ಶ್ರೇಷ್ಠರಾದ ಸಹಸ್ರ ಅಪ್ಸರೆಯರು ನನ್ನ ಪತಿಯಾಗು ಎಂದು ಹೇಳುತ್ತಾ ಓಡಿ ಬರುತ್ತಾರೆ.

ಏತತ್ ತಪಶ್ಚ ಪುಣ್ಯಂ ಚ ಧರ್ಮಶ್ಚೈವ ಸನಾತನಃ।
ಚತ್ವಾರಶ್ಚಾಶ್ರಮಾಸ್ತಸ್ಯ ಯೋ ಯುದ್ಧೇ ನ ಪಲಾಯತೇ ॥೭೨॥

ಯುದ್ಧದಲ್ಲಿ ಪಲಾಯನವನ್ನು ಮಾಡದಿರುವುದು ತಪಸ್ಸು, ಪುಣ್ಯಪ್ರದ, ಸನಾತನವಾದ ಧರ್ಮ. ಮತ್ತು ನಾಲ್ಕು ಆಶ್ರಮದ ಧರ್ಮಾಚರಣೆ.

ವೃದ್ಧಬಾಲೌ ನ ಹಂತವ್ಯೌ ನೈವ ಸ್ತ್ರೀ ನ ಚ ವೈ ದ್ವಿಜಃ।
ತೃಣಪೂರ್ಣಮುಖಶ್ಚೈವ ತವಾಸ್ಮೀತಿ ಚ ಯೋ ವದೇತ್ ॥೭೩॥

ವೃದ್ಧರನ್ನು ಮತ್ತು ಬಾಲಕರನ್ನು ಹಾಗೆಯೇ ಸ್ತ್ರೀಯರನ್ನು ಮತ್ತು ಬ್ರಾಹ್ಮಣರನ್ನು ಕೊಲ್ಲಬಾರದು. ಹಾಗೆಯೇ ಬಾಯಿಯಲ್ಲಿ ತೃಣವನ್ನಿಟ್ಟುಕೊಂಡು ನಾನು ನಿನ್ನ ದಾಸನೆಂದು ಹೇಳುವವನನ್ನೂ ಕೊಲ್ಲಬಾರದು.

ಅಹಂ ವೃತ್ರಂ ಬಲಂ ಪಾಕಂ ಶತಮಾಯಂ ವಿರೋಚನಮ್।
ದುರಾವಾರ್ಯಂ ಚ ನಮುಚಿಂ ನೈಕಮಾಯಂ ಚ ಶಂಬರಮ್ ॥೭೪॥

ವಿಪ್ರಚಿತ್ತಿಂ ಚ ದೈತೇಯಂ ದನೋಃ ಪುತ್ರಾಂಶ್ಚ ಸರ್ವಶಃ।
ಪ್ರಹ್ಲಾದಂ ಚ ನಿಹತ್ಯಾಜೌ ತತೋ ದೇವಾಧಿಪೋಽಭವಮ್ ॥೭೫॥

ನಾನು ವೃತ್ರನನ್ನೂ, ಬಲನನ್ನೂ, ಪಾಕನನ್ನೂ, ನೂರು ಮಾಯೆಗಳುಳ್ಳ ವಿರೋಚನನನ್ನೂ, ನಿವಾರಿಸಲು ಅಸಾಧ್ಯನಾದ ನಮುಚಿಯನ್ನೂ, ಅನೇಕ ಮಾಯೆಗಳನ್ನು ಹೊಂದಿದ ಶಂಬರನನ್ನೂ, ದಿತಿಪುತ್ರನಾದ ವಿಪ್ರಚಿತ್ತಿಯನ್ನೂ, ದನುಪುತ್ರರೆಲ್ಲರನ್ನೂ ಮತ್ತು ಪ್ರಹ್ಲಾದನನ್ನೂ ಯುದ್ಧದಲ್ಲಿ ಜಯಿಸಿ ಅನಂತರ ದೇವರಾಜನಾದೆನು.

ಭೀಷ್ಮಃ

ಇತ್ಯೇತಚ್ಛಕ್ರವಚನಂ ನಿಶಮ್ಯ ಪ್ರತಿಗೃಹ್ಯ ಚ।
ಯೋಧಾನಾಮಾತ್ಮನಃ ಸಿದ್ಧಿಮಂಬರೀಷೋಽಭಿಪನ್ನವಾನ್ ॥೭೬॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಶತತಮೋಽಧ್ಯಾಯಃ ॥೧೦೦॥

ಭೀಷ್ಮರು – ಅಂಬರೀಷನು ಇಂದ್ರನ ಈ ಮಾತುಗಳನ್ನು ಕೇಳಿ ಸ್ವೀಕರಿಸಿ ಯೋಧರು ಮತ್ತು ತಾನೂ ಪಡೆಯುವ ಸಿದ್ಧಿಯನ್ನು ಪಡೆದನು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೦ನೆಯ ಅಧ್ಯಾಯವು ಮುಗಿಯಿತು.

—೦—

೧೦೧. ನೂರೊಂದನೆಯ ಅಧ್ಯಾಯ

ತನ್ನ ಸೈನಿಕರಿಗೆ ಸ್ವರ್ಗನರಕಗಳನ್ನು ತೋರಿಸಿ ಜನಕರಾಜನಿಂದ ಯುದ್ಧಕ್ಕೆ ಪ್ರೋತ್ಸಾಹ

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರತರ್ದನೋ ಮೈಥಿಲಶ್ಚ ಸಂಗ್ರಾಮಂ ಯತ್ರ ಚಕ್ರತುಃ ॥೧॥

ಭೀಷ್ಮರು – ಪ್ರತರ್ದನನು ಮತ್ತು ಮಿಥಿಲಾಧಿಪತಿಯಾದ ಜನಕನು ಯುದ್ಧವನ್ನು ಮಾಡಿದ ಪುರಾತನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಯಥೋಪವೃತ್ತೇ ಸಂಗ್ರಾಮೇ ಜನಕೋ ಮೈಥಿಲೋ ಯಥಾ ।
ಯೋಧಾನುದ್ಧರ್ಷಯಾಮಾಸ ತನ್ನಿಬೋಧ ಯುಧಿಷ್ಠಿರ ॥೨॥

ಎಲೈ ಯುಧಿಷ್ಠಿರನೇ! ಯುದ್ಧವು ಯಥಾಸ್ಥಿತಿಯಲ್ಲಿ ನಡೆಯುತ್ತಿರುವಾಗ ಮಿಥಿಲಾಧಿಪತಿಯಾದ ಜನಕನು ಹೇಗೆ ತನ್ನ ಯೋಧರನ್ನು ಪ್ರೋತ್ಸಾಹಗೊಳಿಸಿದನೆಂದು ತಿಳಿ.

ಜನಕೋ ಮೈಥಿಲೋ ರಾಜಾ ಮಹಾತ್ಮಾ ಸರ್ವತತ್ತ್ವವಿತ್ ।
ಯೋಧಾನ್ ಸ್ವಾನ್ ದರ್ಶಯಾಮಾಸ ಸ್ವರ್ಗಂ ನರಕಮೇವ ಚ ॥೩॥

ಮಹಾತ್ಮನೂ, ಸರ್ವತತ್ತ್ವವೇತ್ತನೂ, ಮಿಥಿಲಾಧಿಪತಿಯೂ ಆದ ಜನಕನು ತನ್ನ ಯೋಧರಿಗೆ ಸ್ವರ್ಗ ಮತ್ತು ನರಕಗಳನ್ನು ತೋರಿಸಿದನು.

ಅಭೀತಾನಾಮಿಮೇ ಲೋಕಾ ಭಾಸ್ವಂತೋ ಹಂತ ಪಶ್ಯತ ।
ಪೂರ್ಣಾ ಗಂಧರ್ವಕನ್ಯಾಭಿಃ ಸರ್ವಕಾಮದುಹೋಽಕ್ಷಯಾಃ ॥೪॥

ನಿರ್ಭಯವಾಗಿ ಯುದ್ಧವನ್ನು ಮಾಡುವವರಿಗೆ ಪ್ರಕಾಶಮಾನವಾದ ಗಂಧರ್ವ-ಕನ್ಯೆಯರಿಂದ ಪೂರ್ಣವಾದ ಸರ್ವಕಾಮಗಳನ್ನು ಕೊಡುವ ಅಕ್ಷಯವಾದ ಈ ಲೋಕಗಳಿವೆ. ಸಂತೋಷದಿಂದ ನೋಡಿ.

ಇಮೇ ಪಲಾಯಮಾನಾನಾಂ ನರಕಾಃ ಪ್ರತ್ಯುಪಸ್ಥಿತಾಃ।
ಅಕೀರ್ತಿಃ ಶಾಶ್ವತೀ ಚೈವ ಪತಿತವ್ಯಮನಂತರಮ್ ॥೫॥

ಯುದ್ಧದಿಂದ ಓಡುವವರಿಗೆ ಈ ನರಕಲೋಕಗಳು ಸಿದ್ಧವಾಗಿವೆ. ಇಲ್ಲಿ ಶಾಶ್ವತವಾದ ಅಪಕೀರ್ತಿಯನ್ನು ಪಡೆದು ಅನಂತರ ಇಂತಹ ಲೋಕಗಳಲ್ಲಿ ಬೀಳಬೇಕು.

ತಾನ್ ದೃಷ್ಟ್ವಾರೀನ್ ವಿಜಯತೋ ಭೂತ್ವಾ ಸಂತ್ಯಾಗಬುದ್ಧಯಃ।
ನರಕಸ್ಯಾಪ್ರತಿಷ್ಠಸ್ಯ ಮಾ ಭೂತ ವಶವರ್ತಿನಃ ॥೬॥

ನೀವು ನೆಲೆಯಿಲ್ಲದ ನರಕದ ವಶವರ್ತಿಗಳಾಗಬೇಡಿ. ಜಯಿಸುತ್ತಿರುವ ಶತ್ರುಗಳನ್ನು ನೋಡಿ ಪ್ರಾಣತ್ಯಾಗವನ್ನು ನಿಶ್ಚಯಿಸಿ ಯುದ್ಧವನ್ನು ಮಾಡಿ.

ತ್ಯಾಗಮೂಲಂ ಹಿ ಶೂರಾಣಾಂ ಸ್ವರ್ಗದ್ವಾರಮನುತ್ತಮಮ್।
ಇತ್ಯುಕ್ತಾಸ್ತೇ ನೃಪತಿನಾ ಯೋಧಾಃ ಪರಪುರಂಜಯ ॥೭॥

ವ್ಯಜಯಂತ ರಣೇ ಶತ್ರೂನ್ ಹರ್ಷಯಂತೋ ಜನೇಶ್ವರಮ್।
ತಸ್ಮಾದಾತ್ಮವತಾ ನಿತ್ಯಂ ಸ್ಥಾತವ್ಯಂ ರಣಮೂರ್ಧನಿ ॥೮॥

ಶೂರನಿಗೆ ತ್ಯಾಗಮೂಲಕವಾಗಿ ಸ್ವರ್ಗದ್ವಾರವು ತೆರೆದಿರುತ್ತದೆ. ಎಲೈ ಶತ್ರುಪುರಂಜಯನೇ! ಹೀಗೆ ರಾಜನಿಂದ ಹೇಳಲ್ಪಟ್ಟ ಆ ಯೋಧರು ರಾಜನಿಗೆ ಸಂತೋಷವನ್ನುಂಟುಮಾಡುತ್ತಾ ಯುದ್ಧದಲ್ಲಿ ಶತ್ರುಗಳನ್ನು ಜಯಿಸಿದರು. ಆದ್ದರಿಂದ ರಣರಂಗದಲ್ಲಿ ಯಾವಾಗಲೂ ಧೈರ್ಯದಿಂದ ನಿಲ್ಲಬೇಕು.

ಗಜಾನಾಂ ರಥಿನೋ ಮಧ್ಯೇ ರಥಾನಾಮನು ಸಾದಿನಃ।
ಸಾದಿನಾಮಂತರಾ ಸ್ಥಾಪ್ಯಂ ಪದಾತಮಿಹ ದಂಸಿತಮ್ ॥೯॥

ಗಜಗಳ ಮತ್ತು ರಥಗಳ ಮಧ್ಯದಲ್ಲಿ, ರಥಗಳ ಮತ್ತು ಅಶ್ವಾರೋಹಿಗಳ ಮಧ್ಯದಲ್ಲಿ, ಮತ್ತು ಅಶ್ವಾರೋಹಿಗಳ ಮಧ್ಯದಲ್ಲಿ ಶಸ್ತ್ರಕವಚಸನ್ನದ್ಧವಾದ ಪದಾತಿಗಳ ಬಲವನ್ನು ನಿಲ್ಲಿಸಬೇಕು.

ಯ ಏವಂ ವ್ಯೂಹತೇ ರಾಜಾ ಸ ನಿತ್ಯಂ ಜಯತೇ ದ್ವಿಷಃ।
ತಸ್ಮಾದೇವಂ ವಿಧಾತವ್ಯಂ ನಿತ್ಯಮೇವ ಯುಧಿಷ್ಠಿರ ॥೧೦॥

ಯಾವ ರಾಜನು ಹೀಗೆ ವ್ಯೂಹವನ್ನು ರಚಿಸುತ್ತಾನೆಯೋ ಅವನು ಯಾವಾಗಲೂ ಶತ್ರುಗಳನ್ನು ಜಯಿಸುತ್ತಾನೆ. ಎಲೈ ಯುಧಿಷ್ಠಿರನೇ! ಆದ್ದರಿಂದ ಯಾವಾಗಲೂ ಹೀಗೆಯೇ ಮಾಡಬೇಕು.

ಸರ್ವೇ ಸುಕೃತಮಿಚ್ಛಂತಃ ಸುಯುದ್ಧೇನಾತಿಮನ್ಯವಃ।
ಕ್ಷೋಭಯೇಯುರನೀಕಾನಿ ಸಾಗರಂ ಮಕರಾ ಇವ ॥೧೧॥

ಬಹಳ ಕೋಪದಿಂದ ಒಳ್ಳೆಯ ಯುದ್ಧವನ್ನು ಮಾಡಿ ಪುಣ್ಯವನ್ನು ಗಳಿಸಲು ಬಯಸುವ ಎಲ್ಲರೂ ಮೊಸಳೆಗಳು ಸಾಗರವನ್ನು ಕಲಕಿದಂತೆ ಶತ್ರುಸೈನ್ಯವನ್ನು ಕಲಕುವರು.

ಹರ್ಷಯೇಯುರ್ವಿಷಣ್ಣಾಂಶ್ಚ ವ್ಯವಸ್ಥಾಪ್ಯ ಪರಸ್ಪರಮ್।
ಜಿತಾಂ ಚ ಭೂಮಿಂ ರಕ್ಷೇತ ಭಗ್ನಾನ್ ನಾತ್ಯನುಸಾರಯೇತ್ ॥೧೨॥

ಪರಸ್ಪರವಾಗಿ ನಿಲ್ಲುವಂತೆ ಮಾಡುತ್ತಾ ವಿಷಾದಕ್ಕೆ ಒಳಗಾದವರನ್ನು ಉತ್ಸಾಹಗೊಳಿಸುವರು. ರಾಜನು ಜಿತವಾದ ಭೂಮಿಯನ್ನು ರಕ್ಷಿಸಬೇಕು. ಪಲಾಯನ ಮಾಡುವ ಶತ್ರುಯೋಧರನ್ನು ಬಹಳವಾಗಿ ಹಿಂಬಾಲಿಸಬಾರದು.

ಪುನರಾವರ್ತಮಾನಾನಾಂ ನಿರಾಶಾನಾಂ ಚ ಜೀವಿತೇ।
ನ ವೇಗಃ ಸುಸಹೋ ರಾಜಂಸ್ತಸ್ಮಾನ್ನಾತ್ಯನುಸಾರಯೇತ್ ॥೧೩॥

ತಮ್ಮ ಜೀವನದಲ್ಲಿ ಆಸೆಯನ್ನು ತೊರೆದು ಅವರು ಹಿಂದಿರುಗಿ ಬಂದರೆ ಎಲೈ ರಾಜನೇ! ಅವರ ವೇಗವು ಸಹಿಸಲು ಅಸಾಧ್ಯವಾಗಿರುತ್ತದೆ. ಆದ್ದರಿಂದ ಅವರನ್ನು ಬಹಳ ಹಿಂಬಾಲಿಸಬಾರದು.

ನ ಹಿ ಪ್ರಹರ್ತುಮಿಚ್ಛಂತಿ ಶೂರಾ ಪ್ರಾದ್ರವತಾಂ ಭಯಾತ್।
ತಸ್ಮಾತ್ ಪಲಾಯಮಾನಾನಾಂ ಕುರ್ಯಾನ್ನಾತ್ಯನುಸಾರಣಮ್ ॥೧೪॥

ಅಲ್ಲದೇ ಭಯದಿಂದ ಪಲಾಯನ ಮಾಡುವವರ ಮೇಲೆ ಶೂರರು ಪ್ರಹಾರವನ್ನು ಮಾಡಲು ಬಯಸುವುದಿಲ್ಲ. ಆದ್ದರಿಂದಲೂ ಪಲಾಯನ ಮಾಡುವವರನ್ನು ಬಹಳ ಹಿಂಬಾಲಿಸಬಾರದು.

ಚರಾಣಾಮಚರಾ ಹ್ಯನ್ನಮದಂಷ್ಟ್ರಾ ದಂಷ್ಟ್ರಿಣಾಮಪಿ।
ಅಪಾಣಯಃ ಪಾಣಿಮತಾಮನ್ನಂ ಶೂರಸ್ಯ ಕಾತರಾಃ ॥೧೫॥

ಚಲಿಸುವ ಪ್ರಾಣಿಗಳಿಗೆ ಚಲಿಸದಿರುವ ಪ್ರಾಣಿಗಳು ಆಹಾರವಾಗುತ್ತವೆ; ಕೋರೆದಾಡೆಯುಳ್ಳ ಪ್ರಾಣಿಗಳಿಗೆ ಕೋರೆದಾಡೆ ಇರದ ಪ್ರಾಣಿಗಳು, ಹಸ್ತವುಳ್ಳ ಪ್ರಾಣಿಗಳಿಗೆ ಹಸ್ತವಿಲ್ಲದ ಪ್ರಾಣಿಗಳು, ಶೂರರಿಗೆ ಭಯಗ್ರಸ್ತರು ಆಹಾರವಾಗುತ್ತಾರೆ.

ಸಮಾನಪೃಷ್ಠೋದರಪಾಣಿಪಾದಾಃ
ಪಶ್ಚಾಚ್ಛೂರಂ ಭೀರವೋಽನುವ್ರಜಂತಿ।
ಅತೋ ಭಯಾರ್ತಾಃ ಪ್ರಣಿಪತ್ಯ ಭೂಯಃ।
ಕೃತ್ವಾಽಂಜಲೀನುಪತಿಷ್ಠಂತಿ ಶೂರಾನ್ ॥೧೬॥

ಸಮಾನವಾದ ಬೆನ್ನು, ಉದರ, ಪಾಣಿ, ಪಾದಗಳನ್ನು ಹೊಂದಿದ್ದರೂ ಹೇಡಿಗಳು ಶೂರನ ಹಿಂದೆಯೇ ನಡೆದು ಹೋಗುತ್ತಾರೆ. ಮತ್ತು ಭಯಾರ್ತರಾಗಿ ಪುನಃ ಶೂರರಿಗೆ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿ ಅವರನ್ನು ಸ್ತೋತ್ರ ಮಾಡುತ್ತಾರೆ.

ಶೂರಬಾಹುಷು ಲೋಕೋಽಯಂ ಲಂಬತೇ ಪುತ್ರವತ್ ಸದಾ।
ತಸ್ಮಾತ್ ಸರ್ವಾಸ್ವವಸ್ಥಾಸು ಶೂರಃ ಸಮ್ಮಾನಮರ್ಹತಿ ॥೧೭॥

ಈ ಲೋಕವು ತಂದೆಯ ಬಾಹುವಿನಲ್ಲಿರುವ ಮಗನಂತೆ ಶೂರರ ಬಾಹುಗಳಲ್ಲಿ ಆಶ್ರಯವನ್ನು ಹೊಂದಿದೆ. ಆದ್ದರಿಂದ ಎಲ್ಲಾ ಕಾಲಗಳಲ್ಲಿಯೂ ಶೂರನು ಸಮ್ಮಾನಕ್ಕೆ ಅರ್ಹರಾಗುತ್ತಾರೆ.

ನ ಹಿ ಶೌರ್ಯಾತ್ ಪರಂ ಕಿಂಚಿತ್ ತ್ರಿಷು ಲೋಕೇಷು ವಿದ್ಯತೇ।
ಶೂರಃ ಸರ್ವಂ ಪಾಲಯತಿ ಸರ್ವಂ ಶೂರೇ ಪ್ರತಿಷ್ಠಿತಮ್ ॥೧೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕಾಧಿಕಶತತಮೋऽಧ್ಯಾಯಃ ॥೧೦೧॥

ಶೌರ್ಯಕ್ಕಿಂತ ಅಧಿಕವಾದುದು ಮೂರು ಲೋಕಗಳಲ್ಲಿ ಯಾವುದೂ ಇಲ್ಲ; ಶೂರನು ಎಲ್ಲವನ್ನೂ ರಕ್ಷಿಸುತ್ತಾನೆ. ಎಲ್ಲವೂ ಶೂರನನ್ನು ಆಶ್ರಯಿಸಿದೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೦೧ನೆಯ ಅಧ್ಯಾಯವು ಮುಗಿಯಿತು.

—0—

೧೦೨. ನೂರ ಎರಡನೆಯ ಅಧ್ಯಾಯ

ಯುದ್ಧಪ್ರಕಾರಾದಿಕಥನ

ಯುಧಿಷ್ಠಿರಃ

ಯಥಾ ಜಯಾರ್ಥಿನಃ ಸೇನಾಂ ನಯಂತಿ ಭರತರ್ಷಭ।
ಈಷದ್ ಧರ್ಮಂ ಪ್ರಪೀಡ್ಯಾಪಿ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ಭರತರ್ಷಭನೇ! ಪಿತಾಮಹನೇ! ಜಯಾರ್ಥಿಯಾದ ರಾಜನು ಧರ್ಮಕ್ಕೆ ಸ್ವಲ್ಪ ಪೀಡೆಯುಂಟಾದರೂ ಹೇಗೆ ಸೈನ್ಯವನ್ನು ಮುಂದೆ ತೆಗೆದುಕೊಂಡು ಹೋಗುತ್ತಾನೆಂದು ನನಗೆ ಹೇಳು.

ಭೀಷ್ಮಃ

ಸತ್ಯೇನ ಹಿ ಸ್ಥಿತಾ ಧರ್ಮಾ ಉಪಪತ್ತ್ಯಾ ತಥಾಪರೇ।
ಸಾಧ್ವಾಚಾರತಯಾ ಕೇಚಿತ್ ತಥೈವೌಪಾಯಿಕಾ ಅಪಿ।
ಉಪಾಯಧರ್ಮಾನ್ ವಕ್ಷ್ಯಾಮಿ ಸಿದ್ಧಾರ್ಥಾನರ್ಥಧರ್ಮಯೋಃ ॥೨॥

ಭೀಷ್ಮರು – ಕೆಲವು ಧರ್ಮಗಳು ಸತ್ಯದಲ್ಲಿ ನೆಲೆಸಿವೆ. ಇನ್ನು ಕೆಲವು ಧರ್ಮ-ಗಳು ಯುಕ್ತಿಯಿಂದ ಸಿದ್ಧವಾಗುತ್ತವೆ. ಇನ್ನು ಕೆಲವು ಧರ್ಮಗಳು ಶಿಷ್ಟಾಚಾರದಿಂದ

ದೊರೆಯುತ್ತವೆ. ಇನ್ನು ಕೆಲವು ಧರ್ಮಗಳು ತತ್ಕಾಲದ ಉಪಾಯಗಳನ್ನು (ಅನುಕೂಲತೆಗಳನ್ನು) ಅನುಸರಿಸಿರುತ್ತವೆ. ಅರ್ಥಧರ್ಮಗಳ ವಿಷಯದಲ್ಲಿ ಸಿದ್ಧವಾದ ಅಂತಹ ಉಪಾಯಧರ್ಮಗಳನ್ನು ಹೇಳುವೆನು.

ನಿರ್ಮರ್ಯಾದಾ ದಸ್ಯವಸ್ತು ಭವಂತಿ ಪರಿಪಂಥಿನಃ।
ತೇಷಾಂ ಪ್ರತಿವಿಘಾತಾರ್ಥಂ ಪ್ರವಕ್ಷ್ಯಾಮ್ಯಥ ನೈಗಮಮ್।
ಕಾರ್ಯಾಣಾಂ ಸಂಪ್ರಸಿದ್ಧ್ಯರ್ಥಂ ತಾನುಪಾಯಾನ್ ನಿಬೋಧ ಮೇ ॥೩॥

ಎಲ್ಲ ಎಲ್ಲೆಯನ್ನು ಮೀರಿದ ದಸ್ಯುಗಳು ಯಾವಾಗಲೂ ವಿರೋಧಿಗಳಾಗಿರುತ್ತಾರೆ. ಅವರನ್ನು ಪ್ರತಿಘಾತಮಾಡಿ ಕಾರ್ಯಸಿದ್ಧಿಯನ್ನು ಪಡೆಯಲು ಶಾಸ್ತ್ರಸಿದ್ಧವಾದ ಆ ಉಪಾಯಗಳನ್ನು ನೀನು ನನ್ನಿಂದ ತಿಳಿ.

ಉಭೇ ಪ್ರಜ್ಞೇ ವೇದಿತವ್ಯೇ ಋಜ್ವೀ ವಕ್ರಾ ಚ ಭಾರತ।
ಜಾನನ್ ವಕ್ರಾಂ ನ ಸೇವೇತ ಪ್ರತಿಬಾಧೇತ ಚಾಗತಾಮ್ ॥೪॥

ಎಲೈ ಭಾರತನೇ! ಋಜುಬುದ್ಧಿ ಮತ್ತು ವಕ್ರಬುದ್ಧಿ ಎರಡನ್ನೂ ತಿಳಿದು, ವಕ್ರಬುದ್ಧಿಯನ್ನು ಆಶ್ರಯಿಸಬಾರದು. ಶತ್ರುಗಳು ಪ್ರಯೋಗಿಸಿದ ವಕ್ರಬುದ್ಧಿಯನ್ನು ಬಾಧಿಸಬೇಕು.

ಅಮಿತ್ರಾ ಏವ ರಾಜಾನಂ ಭೇದೇನೋಪಚರಂತ್ಯುತ।
ತಾನ್ ರಾಜಾ ನಿಕೃತಾನ್ ಜಾನನ್ ಯಥಾಮಿತ್ರಾನ್ ಪ್ರಬಾಧತೇ ॥೫॥

ಶತ್ರುಗಳಾದವರೇ ರಾಜನನ್ನು ಭೇದೋಪಾಯಗಳಿಂದ ಉಪಚರಿಸುತ್ತಾರೆ. ರಾಜನು ಅವರ ಮೋಸದ ಬುದ್ಧಿಯನ್ನು ತಿಳಿದು ಶತ್ರುಗಳಂತೆ (ತನ್ನ ರಾಜ್ಯದಲ್ಲಿರುವ ಅವರನ್ನು) ಬಾಧಿಸಬೇಕು.

ಗಜಾನಾಂ ಪಾರ್ಶ್ವಚರ್ಮಾಣಿ ಗೋವೃಷಾಜಗರಾಣಿ ಚ।
ಶಲ್ಯಕಂಟಕಲೋಹಾನಿ ತನುತ್ರಾಣಿ ಮತಾನಿ ಚ ॥೬॥

ಶಿತಪೀತಾನಿ ಶಸ್ತ್ರಾಣಿ ಸನ್ನಾಹಾಃ ಪೀತಲೋಹಿತಾಃ।
ನಾನಾರಂಜನರಕ್ತಾಃ ಸ್ಯುಃ ಪತಾಕಾಃ ಕೇತವಶ್ಚ ತೇ ॥೭॥

ಋಷ್ಟಯಸ್ತೋಮರಾಃ ಖಡ್ಗಾ ನಿಶಿತಾಶ್ಚ ಪರಶ್ವಧಾಃ।
ಫಲಕಾನ್ಯಥ ಚರ್ಮಾಣಿ ಪ್ರತಿಕಲ್ಪ್ಯಾನ್ಯನೇಕಶಃ।
ಅಭಿನೀತಾನಿ ಶಸ್ತ್ರಾಣಿ ಯೋಧಾಶ್ಚ ಕೃತನಿಶ್ರಮಾಃ ॥೮॥

ಗಜಗಳ ಪಾರ್ಶ್ವಚರ್ಮಗಳಿಂದ, ವೃಷಭಗಳ ಮತ್ತು ಹೆಬ್ಬಾವುಗಳ ಚರ್ಮ-ಗಳಿಂದ ಕವಚಗಳನ್ನು ನಿರ್ಮಿಸುವುದು ಶ್ರೇಷ್ಠವಾದುದು. ಶಲ್ಯ(ಈಟಿಗಳು) ಲೋಹದ ಮುಳ್ಳುಗಳು, ಉಳಿದ ಲೋಹಗಳು, ನಿಶಿತವಾದ ಹಾಗೂ ನೀರು ಕುಡಿಸಿದ ಶಸ್ತ್ರಗಳು, ನೀರು ಕುಡಿಸಿ ಹದ ಮಾಡಿದ ಕವಚಗಳು, ಪತಾಕೆಗಳು ಮತ್ತು ಬಾವುಟಗಳು, ಅನೇಕ ಕೆಂಪುಬಣ್ಣಗಳಿಂದ ಕೂಡಿರಬೇಕು; ಋಷ್ಟಿಗಳು, ತೋಮರ-ಗಳು, ನಿಶಿತವಾದ ಖಡ್ಗಗಳು, ಪರಶುಗಳು, ಫಲಕಗಳು, ಗುರಾಣಿಗಳು ಇವುಗಳನ್ನು ಬಹುಸಂಖ್ಯೆಯಲ್ಲಿ ಸಿದ್ಧಪಡಿಸಬೇಕು. ಶಸ್ತ್ರಗಳು ಯಾವಾಗಲೂ ಉಪಯೋಗಿಸು-ವುದಕ್ಕೆ ಯೋಗ್ಯವಾಗಿರಬೇಕು. ಮತ್ತು ಯೋಧರು ಶಸ್ತ್ರಗಳ ಉಪಯೋಗದಲ್ಲಿ ಪರಿಶ್ರಮವನ್ನು ಹೊಂದಿದವರಾಗಬೇಕು.

ಚೈತ್ರ್ಯಾಂ ವಾ ಮಾರ್ಗಶೀರ್ಷ್ಯಾಂ ವಾ ಸೇನಾಯೋಗಃ ಪ್ರಶಸ್ಯತೇ।
ಪಕ್ವಸಸ್ಯಾ ಹಿ ಪೃಥಿವೀ ಭವತ್ಯಂಬುವತೀ ತಥಾ ॥೯॥

ನೈವಾತಿಶೀತೋ ನಾತ್ಯುಷ್ಣಃ ಕಾಲೋ ಭವತಿ ಭಾರತ।

ಚೈತ್ರಪೂರ್ಣಿಮೆ ಅಥವಾ ಮಾರ್ಗಶೀರ್ಷಪೂರ್ಣಿಮೆಯಂದು ದಂಡೆತ್ತಿ ಹೋಗುವುದು ಪ್ರಶಸ್ತವಾದುದು. ಆಗ ಭೂಮಿಯಲ್ಲಿ ಸಸ್ಯಗಳು ಪಕ್ವವಾಗಿರುತ್ತವೆ. ಮತ್ತು ಜಲವೂ ಸಮೃದ್ಧವಾಗಿರುತ್ತದೆ. ಎಲೈ ಭಾರತನೇ! ಆ ಕಾಲದಲ್ಲಿ ಬಹಳ ಉಷ್ಣತೆಯಾಗಲೀ ಬಹಳ ಶೈತ್ಯವಾಗಲೀ ಇರುವುದಿಲ್ಲ.

ತಸ್ಮಾದ್ ತದಾ ಯೋಧಯೇತ ಪರೇಷಾಂ ವ್ಯಸನೇಷು ವಾ।
ಏತೇಷು ಯೋಗಾಃ ಸೇನಾಯಾಃ ಪ್ರಶಸ್ತಾಃ ಪರಬಾಧನೇ ॥೧೦॥

ಆದ್ದರಿಂದ ಆ ಕಾಲದಲ್ಲಿ ಯುದ್ಧಕ್ಕಾಗಿ ಹೊರಡಬೇಕು. ಅಥವಾ ಶತ್ರುಗಳ ವ್ಯಸನಕಾಲವನ್ನು ತಿಳಿದು ಆಗ ಯುದ್ಧವನ್ನು ಮಾಡಬೇಕು. ಇಂತಹ ದೇಶ-ಕಾಲಗಳ ಅನುಕೂಲವಿರುವಾಗ ಸೇನೆಯ ಉದ್ಯೋಗವು ಶತ್ರುವನ್ನು ಬಾಧಿಸುವುದಕ್ಕೆ ಪ್ರಶಸ್ತವಾಗಿರುತ್ತದೆ.

ಜಲವಾಂಸ್ತೃಣವಾನ್ ಮಾರ್ಗಃ ಸಮೋ ಗಮ್ಯಃ ಪ್ರಶಸ್ಯತೇ।
ಚಾರೈರ್ಹಿ ವಿಹಿತಾಭ್ಯಾಸಃ ಕುಶಲೈರ್ವನಗೋಚರೈಃ ॥೧೧॥

ನ ಹ್ಯರಣ್ಯಾನಿ ಶಕ್ಯಂತೇ ಗಂತುಂ ಮೃಗಗಣೈರಿವ।

ಸೈನ್ಯವು ಹೋಗುವ ಮಾರ್ಗವು ಸಮತಟ್ಟಾಗಿದ್ದು, ತೃಣಜಲಗಳಿಂದ ಕೂಡಿದ್ದು, ನಿಪುಣರಾದ ವನವಾಸಿಗಳಿಂದ ಮತ್ತು ಚಾರರುಗಳಿಂದ ಚೆನ್ನಾಗಿ ಪರಿಚಿತವಾಗಿರಬೇಕು. ಅರಣ್ಯಮಾರ್ಗದಲ್ಲಿ ಮೃಗಸಮೂಹಗಳಂತೆ ಸಂಚರಿಸಲು ಸಾಧ್ಯವಿಲ್ಲ.

ತಸ್ಮಾತ್ ಸರ್ವಾಸು ಸೇನಾಸು ಯೋಜಯಂತಿ ಜಯಾರ್ಥಿನಃ।
ಅಗ್ರತಃ ಪುರುಷಾನೀಕಂ ಶಕ್ತಂ ಭಕ್ತಂ ಕುಲೋದ್ಗತಮ್ ॥೧೨॥

ಆದ್ದರಿಂದ ಜಯಾರ್ಥಿಗಳಾದವರು ಎಲ್ಲ ಸೇನಾಪ್ರಸ್ಥಾನದಲ್ಲಿ ಮುಂಭಾಗದಲ್ಲಿ ಸತ್ಕುಲಪ್ರಸೂತರಾದ ಸಮರ್ಥರಾದ ಅನುರಾಗವುಳ್ಳ ಪುರುಷಸಮೂಹವನ್ನು ನಿಯೋಜಿಸುತ್ತಾರೆ.

ಆವಾಸಸ್ತೋಯವಾನ್ ದುರ್ಗಃ ಪರ್ಯಾಕಾಶಃ ಪ್ರಶಸ್ಯತೇ।
ಪರೇಷಾಮುಪಸರ್ಗಾಣಾಂ ಪ್ರತಿಷೇಧಸ್ತಥಾ ಭವೇತ್ ॥೧೩॥

ಸೈನ್ಯವು ಬೀಡುಬಿಡುವ ಸ್ಥಾನವು ಕೋಟೆಯಂತೆ ಸುತ್ತಲೂ ಮರಗಿಡಗಳಿಲ್ಲದೇ ಅವಕಾಶವನ್ನು ಹೊಂದಿರುವುದು ಪ್ರಶಸ್ತವಾಗುತ್ತದೆ. ಹಾಗೆ ಮಾಡಿದರೆ ಶತ್ರುಗಳು ಮಾಡುವ ಉಪದ್ರವಗಳನ್ನು ನಿವಾರಿಸಲು ಅನುಕೂಲವಾಗುತ್ತದೆ.

ಆಕಾಶಂ ತು ವನಾಭ್ಯಾಶೇ ಮನ್ಯಂತೇ ಗುಣವತ್ತರಮ್ ।
ಬಹುಭಿರ್ಗುಣಜಾತೈಸ್ತು ಯೇ ಯುದ್ಧಕುಶಲಾ ಜನಾಃ ॥೧೪॥

ಅರಣ್ಯದ ಸಮೀಪದಲ್ಲಿ ಸುತ್ತಲೂ ಅವಕಾಶವಿರುವ ಪ್ರದೇಶದಲ್ಲಿ ಸೈನ್ಯವು ಬೀಡು ಬಿಡುವುದು ಅನೇಕ ಗುಣಗಳಿಂದ ಕೂಡಿರುವುದೆಂದು ಯುದ್ಧಕುಶಲರಾದ ಜನರು ತಿಳಿಯುತ್ತಾರೆ.

ಉಪನ್ಯಾಸಾವತರಣಂ ಪದಾತೀನಾಂ ಚ ಗೂಹನಮ್ ।
ಅಥ ಶತ್ರುಪ್ರತೀಘಾತಮಾಪದರ್ಥಂ ಪರಾಯಣಮ್ ॥೧೫॥

ನಾಲ್ಕು ದಿಕ್ಕುಗಳಲ್ಲಿಯೂ ರಕ್ಷಕಭಟರನ್ನು ನಿಯಮಿಸಿ, ಸೇನೆಯು ಬೀಡು ಬಿಡುವಂತೆ ಮಾಡಿ, ಪದಾತಿಗಳನ್ನು ಗೂಹನ ಮಾಡಬೇಕು. ಮತ್ತು ಶತ್ರುಗಳ ಮೇಲೆ ಎರಗಲು ಶತ್ರುಗಳಿಗೆ ಆಪತ್ತು ಒದಗುವವರೆಗೆ ನಿರೀಕ್ಷಿಸಿ ಅನಂತರ ಶತ್ರುಗಳ ಮೇಲೆ ದಾಳಿ ಮಾಡಬೇಕು.

ಸಪ್ತರ್ಷೀನ್ ಪೃಷ್ಠತಃ ಕೃತ್ವಾ ಯುದ್ಧ್ಯೇರನ್ನಚಲಾ ಇವ ।
ಅನೇನ ವಿಧಿನಾ ರಾಜನ್ ಜಿಗೀಷೇತಾಪಿ ದುರ್ಜಯಾನ್ ॥೧೬॥

ಸಪ್ತರ್ಷಿಮಂಡಲವನ್ನು ಹಿಂದೆ ಮಾಡಿಕೊಂಡು ಸ್ಥಿರವಾಗಿ ಯುದ್ಧವನ್ನು ಮಾಡಬೇಕು. ಎಲೈ ರಾಜನೇ! ಈ ವಿಧಾನದಿಂದ ಜಯಿಸಲು ಕಷ್ಟಸಾಧ್ಯರಾದವರನ್ನೂ ಗೆಲ್ಲಬಹುದು.

ಯತೋ ವಾಯುರ್ಯತಃ ಸೂರ್ಯೋ ಯತಃ ಶುಕ್ರಸ್ತತೋ ಜಯಃ ।
ಪೂರ್ವಂ ಪೂರ್ವಂ ಜ್ಯಾಯ ಏಷಾಂ ಸನ್ನಿಪಾತೇ ಯುಧಿಷ್ಠಿರ ॥೧೭॥

ಯಾವ ಸೈನ್ಯಕ್ಕೆ ಹಿಂದಿನಿಂದ ವಾಯುವು ಬೀಸುತ್ತದೆಯೋ, ಸೂರ್ಯ ಅಥವಾ ಶುಕ್ರರು ಹಿಂದೆ ಇರುತ್ತಾರೋ ಅವರಿಗೆ ಜಯವಾಗುತ್ತದೆ. ಎಲೈ ಯುಧಿಷ್ಠಿರನೇ! ಈ ಮೂರರ ಸಮೂಹದಲ್ಲಿ ಹಿಂದಿನದು ಮುಂದಿನದಕ್ಕಿಂತ ಶ್ರೇಷ್ಠವಾದುದು.

ಅಕರ್ದಮಾಮನುದಕಾಮಮರ್ಯಾದಾಮಲೋಷ್ಟಕಾಮ್ ।
ಅಶ್ವಭೂಮಿಂ ಪ್ರಶಂಸಂತಿ ಯೇ ಯುದ್ಧಕುಶಲಾ ಜನಾಃ ॥೧೮॥

ಯುದ್ಧಕುಶಲರಾದ ಜನರು ಕೆಸರಿಲ್ಲದ, ಅಲ್ಲಲ್ಲಿ ನೀರಿಲ್ಲದ, ಮಣ್ಣಿನ ಹೆಂಟೆಗಳಿಲ್ಲದ ವಿಸ್ತಾರವಾದ ಅಶ್ವಭೂಮಿಯನ್ನು ಪ್ರಶಂಸೆ ಮಾಡುತ್ತಾರೆ.

ಸಮಾ ನಿರುದಕಾಕಾಶಾ ರಥಭೂಮಿಃ ಪ್ರಶಸ್ಯತೇ ।
ನೀಚದ್ರುಮಾ ಮಹಾಕಕ್ಷಾಸೋದಕಾ ಹಸ್ತಿಯೋಧಿನಾಮ್ ॥೧೯॥

ಸಮವಾದ, ಮಧ್ಯೆ ಮಧ್ಯೆ ನೀರು ಮತ್ತು ಗುಂಡಿಗಳಿಲ್ಲದ ರಥಭೂಮಿಯು ಪ್ರಶಸ್ತವಾಗುತ್ತದೆ. ಗಜಯೋಧಿಗಳಿಗೆ ಸಣ್ಣವೃಕ್ಷಗಳು, ದೊಡ್ಡ ಪೊದೆಗಳು ಮತ್ತು ಜಲವೂ ಇರುವ ಪ್ರದೇಶವು ಪ್ರಶಸ್ತವಾಗುತ್ತದೆ.

ಬಹುದುರ್ಗಾ ಮಹಾವೃಕ್ಷಾವೇತ್ರವೇಣುಭಿರಾಸ್ಕೃತಾ ।
ಪದಾತೀನಾಂ ಕ್ಷಮಾ ಭೂಮಿಃ ಪರ್ವತೋಪವನಾನಿ ಚ ॥೨೦॥

ಅನೇಕ ಕೋಟೆಗಳು (ರಕ್ಷಣಾಸ್ಥಾನಗಳು), ದೊಡ್ಡ ವೃಕ್ಷಗಳು, ಬಿದುರು ಬೆತ್ತ ಮೊದಲಾದವುಗಳಿಂದ ತುಂಬಿದ ಭೂಮಿಯು, ಪರ್ವತಗಳು ಮತ್ತು ಉಪವನಗಳು ಪದಾತಿಗಳಿಗೆ ಯೋಗ್ಯವಾದ ಭೂಮಿಯಾಗುತ್ತದೆ.

ಪದಾತಿಬಹುಲಾ ಸೇನಾ ದೃಢಾ ಭವತಿ ಭಾರತ ।
ರಥಾಶ್ವಬಹುಲಾ ಸೇನಾ ಸುದಿನೇಷು ಚ ಶಸ್ಯತೇ ॥೨೧॥

ಎಲೈ ಭಾರತನೇ! ಪದಾತಿಗಳನ್ನು ಬಹುಸಂಖ್ಯೆಯಲ್ಲಿ ಹೊಂದಿರುವ ಸೈನ್ಯವು ದೃಢವಾಗುತ್ತದೆ. ರಥಾಶ್ವಗಳು ಪ್ರಧಾನವಾಗಿರುವ ಸೈನ್ಯವು ಹೇಮಂತ, ಶಿಶಿರ, ವಸಂತ ಋತುವಿನ ದಿನಗಳಲ್ಲಿ ಪ್ರಶಸ್ತವಾಗುತ್ತದೆ.

ಪದಾತಿನಾಗಬಹುಲಾ ಪ್ರಾವೃಟ್‌ಕಾಲೇ ಪ್ರಶಸ್ಯತೇ ।
ಗುಣಾನೇತಾನ್ ಪ್ರಸಂಖ್ಯಾಯ ದೇಶಕಾಲೌ ಪ್ರಯೋಜಯೇತ್ ॥೨೨॥

ಪದಾತಿಗಳು ಮತ್ತು ಗಜಗಳು ಪ್ರಧಾನವಾಗಿರುವ ಸೈನ್ಯಕ್ಕೆ ಮಳೆಗಾಲವು

ಪ್ರಶಸ್ತವಾಗುತ್ತದೆ. ದೇಶಕಾಲಗಳ ಈ ಗುಣಗಳನ್ನು ಎಣಿಸಿ ಸೈನ್ಯದ ನಡೆಯನ್ನು ನಿಯೋಜಿಸಬೇಕು.

ಏವಂ ಸಂಚಿಂತ್ಯ ಯೋ ಯಾತಿ ತಿಥಿನಕ್ಷತ್ರಪೂಜಿತಃ।
ವಿಜಯಂ ಲಭತೇ ನಿತ್ಯಂ ಸೇನಾಂ ಸಮ್ಯಕ್ ಪ್ರಯೋಜಯನ್ ॥೨೩॥

ಯಾವನು ಹೀಗೆ ಚಿಂತಿಸಿ, ತಿಥಿನಕ್ಷತ್ರಗಳ ಆನುಕೂಲ್ಯವನ್ನು ಹೊಂದಿ, ಸೈನ್ಯವನ್ನು ಚೆನ್ನಾಗಿ ನಿಯೋಜಿಸಿ ಮುಂದೆ ಸಾಗುತ್ತಾನೋ ಅವನು ಯಾವಾಗಲೂ ಜಯವನ್ನು ಹೊಂದುತ್ತಾನೆ.

ಪ್ರಸುಪ್ತಾಂಸ್ಪೃಷಿತಾನ್ ಶ್ರಾಂತಾನ್ ಪ್ರಕೀರ್ಣಾನ್ ನಾಭಿಘಾತಯೇತ್।
ಮೋಕ್ಷೇ ಪ್ರಯಾಣೇ ಚಲನೇ ಯಾನಭೋಜನಕಾಲಯೋಃ।
ಸಂಧಿಕ್ಷಿಪ್ತಾನತಿಕ್ಷಿಪ್ತಾನ್ ವಿಹತಾನ್ ಪ್ರತನೂಕೃತಾನ್ ॥೨೪॥

ಅವಶ್ರದ್ಧಾನ್ ಕೃತಾರಂಭಾನುಪನ್ಯಾಸಪ್ರತಾಪಿತಾನ್।
ಬಹಿಶ್ಚರಾನುಪನ್ಯಾಸಾನ್ ಕೃತವೇಶ್ಮಾನುಸಾರಿಣಃ ॥೨೫॥

ನಿದ್ದೆ ಮಾಡುವವರು, ಬಾಯಾರಿದವರು, ದಣಿದವರು, ಚದುರಿ ಹೋದವರು ಇವರನ್ನು ಸೇನೆಯು ಯುದ್ಧವನ್ನು ನಿಲ್ಲಿಸಿರುವ ಕಾಲದಲ್ಲಾಗಲೀ ಪ್ರಯಾಣದ ಕಾಲದಲ್ಲಾಗಲೀ ಅಥವಾ ಅವರು ಪಲಾಯನ ಮಾಡುವಾಗಲಾಗಲೀ ಅವರ ಪಾನಭೋಜನಕಾಲಗಳಲ್ಲಾಗಲೀ ಹೊಡೆಯಬಾರದು. ಬಹಳ ತಿರಸ್ಕೃತರಾದವರು, 'ಈದಿನ ನನಗೆ ಬಹಳ ಕೆಲಸವಿದೆ ನಾಳೆಯ ದಿವಸ ಯುದ್ಧವನ್ನು ಮಾಡುತ್ತೇನೆ' ಎಂದು ಹೇಳುವವರು, ಗಾಯಗೊಂಡವರು, ಹೆಚ್ಚಿನ ಸೈನ್ಯವು ಹಿಂದೆ ಹೋಗಿ ರಣರಂಗದಲ್ಲಿ ಕೆಲವರು ಮಾತ್ರ ಉಳಿದವರು, ಯುದ್ಧದ ಉತ್ಸಾಹವನ್ನು ಕಳೆದುಕೊಂಡವರು, ಕಾರ್ಯಾಂತರವನ್ನು ಮಾಡುವವರು, ಸಮೀಪದವರು ಹತರಾದುದರಿಂದ ಮೂರ್ಛೆ ಹೊಂದಿದವರು, ಸಂಧ್ಯಾವಂದನಾದಿನಿತ್ಯಕಾರ್ಯಗಳಿಗಾಗಿ ಹೊರಗೆ ಹೋದವರು, ಆಯುಧವನ್ನು ಕೆಳಗಿಟ್ಟವರು, ಸೇನಾಬಿಡಾರದ ಕಡೆಗೆ ಹೋಗುವವರು – ಇಂತಹ ಯಾರನ್ನೂ ಹೊಡೆಯಬಾರದು.

ಪಾರಂಪರ್ಯಾಗತೇ ದ್ವಾರೇ ಯೇ ಕೇಚಿದನುವರ್ತಿನಃ।
ಪರಿಚರ್ಯಾವರೋದ್ಧಾರೋ ಯೇ ಚ ಕೇಚನ ವಲ್ಗಿನಃ ॥೨೬॥

ಅನೀಕಂ ಯೇ ಪ್ರಭಿಂದಂತಿ ಭಿನ್ನಂ ಯೇ ಸ್ಥಗಯಂತಿ ಚ।
ಸಮಾನಾಶನಪಾನಾಸ್ತೇ ಕಾರ್ಯಾ ದ್ವಿಗುಣವೇತನಾಃ ॥೨೭॥

ಪರಂಪರಾಗತವಾದ ಸೇನಾಮುಖದಲ್ಲಿ ನಿಂತು ಚೆನ್ನಾಗಿ ಮಾತನಾಡಿ ಶತ್ರುಗಳ ಪ್ರವೇಶವನ್ನು ತಡೆಯುವ ಯಾವ ಯೋಧರಿದ್ದಾರೆಯೋ ಯಾರು ಶತ್ರುಗಳ ಸೈನ್ಯವನ್ನು ಭೇದಿಸುತ್ತಾರೆಯೋ ಭಿನ್ನವಾದ ತಮ್ಮ ಸೈನ್ಯವನ್ನು ನಿಲ್ಲಿಸುತ್ತಾರೆಯೋ ಅವರು ಮೊದಲು ಉಳಿದವರಿಗೆ ಸಮಾನವಾದ ಅಶನಪಾನಗಳನ್ನು ಸ್ವೀಕರಿಸು-ತ್ತಿದ್ದರೂ ಅವರ ವೇತನವನ್ನು ದ್ವಿಗುಣಗೊಳಿಸಬೇಕು.

ಜಾತಿಗೋತ್ರಂ ಚ ವಿಜ್ಞಾಯ ಕರ್ಮ ಚಾನುತ್ತಮಂ ಶುಭಮ್।
ಸಮಾನದೇಹರಕ್ಷಾರ್ಥೇ ಕಾರ್ಯಾ ದ್ವಿಗುಣವೇತನಾ।
ತ್ರಿಗುಣಂ ಚತುರ್ಗುಣಂ ಚೈವ ವೇತನಂ ತೇಷು ಕಾರಯೇತ್ ॥೨೮॥

ಅವರ ಜಾತಿ-ಗೋತ್ರಗಳನ್ನು ತಿಳಿದು, ಅವರ ಶ್ರೇಷ್ಠವಾದ ಕರ್ಮಗಳನ್ನು ತಿಳಿದು ಸಮಾನವಾದ ಕುಟುಂಬಾದಿ ರಕ್ಷಣೆಗಾಗಿ ಅವರ ಸಂಬಳವನ್ನು ಎರಡು- ಪಟ್ಟು ಅಥವಾ ಮೂರುಪಟ್ಟು ಅಥವಾ ನಾಲ್ಕುಪಟ್ಟು ಹೆಚ್ಚಿಸಬೇಕು.

ದಶಾಧಿಪತಯಃ ಕಾರ್ಯಾಃ ಶತಾಧಿಪತಯಸ್ತಥಾ।
ತೇಷಾಂ ಸಹಸ್ರಾಧಿಪತಿಂ ಕುರ್ಯಾಚ್ಛೂರಮತಂದ್ರಿತಮ್ ॥೨೯॥

ಹತ್ತುಜನಯೋಧರಿಗೆ ಒಬ್ಬ ಅಧಿಪತಿಯನ್ನು ಮಾಡಬೇಕು. ನೂರು ಜನರಿಗೆ ಒಬ್ಬ ಅಧಿಪತಿಯನ್ನು ಮಾಡಬೇಕು. ಹಾಗೆಯೇ ಸಹಸ್ರಯೋಧರಿಗೆ ಆಲಸ್ಯ-ರಹಿತನೂ ಶೂರನೂ ಆದ ಒಬ್ಬನನ್ನು ಅಧಿಪತಿಯನ್ನಾಗಿ ಮಾಡಬೇಕು.

ಯಥಾಮುಖ್ಯಾಃ ಸನ್ನಿಪತ್ಯ ವಕ್ತವ್ಯಾಃ ಸಂಶಯಾಮಹೇ।
ಯಥಾ ಜಯಾರ್ಥಂ ಸಂಗ್ರಾಮೇ ನ ಜಹ್ಯಾಮ ಪರಸ್ಪರಮ್ ॥೩೦॥

ಇಹೈವ ತೇ ನಿವರ್ತಂತಾಂ ಯೇ ನಃ ಕೇಚನ ಭೀರವಃ।
ನ ಘಾತಯೇಯುಃ ಪ್ರದರಂ ಕುರ್ವಾಣಾಸ್ತುಮುಲೇ ಸತಿ।
ನ ಸನ್ನಿಪಾತೇ ಪ್ರದರಂ ವಧಂ ವಾ ಕುರ್ಯುರೀದೃಶಾಃ ॥೩೧॥

ತನ್ನ ಸೇನೆಯಲ್ಲಿ ಮುಖ್ಯರಾದವರನ್ನು ಸಂಧಿಸಿ ಹೀಗೆ ಮಾತನಾಡಬೇಕು – 'ಯುದ್ಧದಲ್ಲಿ ಜಯದ ವಿಷಯದಲ್ಲಿ ನಮಗೆ ಸಂಶಯವುಂಟಾಗಿದೆ. ನಾವು ಒಬ್ಬರ-ನ್ನೊಬ್ಬರು ಬಿಡುವುದು ಬೇಡ. ನಮ್ಮಲ್ಲಿ ಯಾರಾದರೂ ಭೀರುಗಳಿದ್ದರೆ ಅವರು ಇಲ್ಲಿಯೇ ಹಿಂದಿರುಗಲಿ. ಹೆದರಿದವರು ತೀವ್ರವಾದ ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲಲಾರರು. ಅಂತಹವರು ಶತ್ರುಗಳು ಎರಗಿದಾಗ ಅವರಿಗೆ ಭಯವನ್ನಾಗಲೀ, ವಧೆಯನ್ನಾಗಲೀ ಉಂಟುಮಾಡಲಾರರು.

ಆತ್ಮಾನಂ ಚ ಸ್ವಪಕ್ಷಂ ಚ ಪಲಾಯನ್ ಹಂತಿ ಸಂಯುಗೇ।
ದ್ರವ್ಯನಾಶೋ ವಧೋಽಕೀರ್ತಿರಯಶಶ್ಚ ಪಲಾಯನೇ ॥೩೨॥

ಯುದ್ಧವನ್ನು ಬಿಟ್ಟು ಓಡುವವನು ತನ್ನನ್ನೂ ತನ್ನ ಪಕ್ಷವನ್ನೂ ನಾಶಗೊಳಿಸು-ತ್ತಾನೆ. ಪಲಾಯನ ಮಾಡಿದರೆ ದ್ರವ್ಯನಾಶ, ವಧೆ, ಈ ಲೋಕದಲ್ಲಿ ಅಕೀರ್ತಿ, ಪರಲೋಕದಲ್ಲಿ ಯಶೋಹಾನಿ ಉಂಟಾಗುತ್ತದೆ (ಎಂದು ಹೇಳಬೇಕು).

ಅಮನೋಜ್ಞಾಸುಖಾ ವಾಚಃ ಪುರುಷಸ್ಯ ಪಲಾಯತಃ।
ಪ್ರತಿಸ್ಪಂಧೌಷ್ಠದಂತಶ್ಚ ನ್ಯಸ್ತಸರ್ವಾಯುಧಸ್ಯ ಚ ॥೩೩॥

ಪಲಾಯನ ಮಾಡುವ ಪುರುಷನು ಮನೋಹರವಲ್ಲದ ದುಃಖಕರವಾದ ಮಾತುಗಳನ್ನು ಆಡುತ್ತಾನೆ. ಅವನ ತುಟಿಗಳು ಮತ್ತು ದಂತಗಳು ಅದುರುತ್ತವೆ. ಅವನು ಎಲ್ಲಾ ಆಯುಧಗಳನ್ನೂ ಕೆಳಗಿಡುತ್ತಾನೆ.

ಹಿತ್ವಾ ಪಲಾಯಮಾನಸ್ಯ ಸಹಾಯಾನ್ ಪ್ರಾಣಸಂಶಯೇ।
ಅಮಿತ್ರೈರನುಬದ್ಧಸ್ಯ ದ್ವಿಷತಾಮಸ್ತು ನಸ್ತಥಾ ॥೩೪॥

ಪ್ರಾಣಸಂಶಯವುಂಟಾದಾಗ, ತನ್ನ ಸಹಾಯಕರನ್ನು ಬಿಟ್ಟು ಓಡುವವನ

ಪರಿಸ್ಥಿತಿಯು ಓಡುತ್ತಾ ಶತ್ರುಗಳಿಂದ ಹಿಂಬಾಲಿಸಲ್ಪಡುವವನ ಪರಿಸ್ಥಿತಿಯು ನಮ್ಮ ಶತ್ರುಗಳಿಗಾಗಲಿ (ನಮಗೆ ಬೇಡ).

ಮನುಷ್ಯಾಪಶದಾ ಹ್ಯೇತೇ ಯೇ ಭವಂತಿ ಪರಾಙ್ಮುಖಾಃ।
ರಾಶಿವರ್ಧನಮಾತ್ರಾಸ್ತೇ ನೈವ ತೇ ಪ್ರೇತ್ಯ ನೋ ಇಹ ॥೩೫॥

ಯುದ್ಧಕ್ಕೆ ವಿಮುಖರಾಗಿ ಓಡುವವರು ನೀಚರಾದ ಮನುಷ್ಯರು. ಅವರು ಪಾಚಕರು ಅನ್ನದ ರಾಶಿಯನ್ನು ಹೆಚ್ಚು ಮಾಡುವುದಕ್ಕೆ ಮಾತ್ರ ನಿಮಿತ್ತರಾದವರು. ಅವರಿಗೆ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಸ್ಥಾನವಿಲ್ಲ.

ಅಮಿತ್ರಾ ಹೃಷ್ಟಮನಸಃ ಪ್ರತ್ಯುದ್ಯಾಂತಿ ಪಲಾಯಿನಮ್।
ಜಯಿನಂ ಸುಹೃದಸ್ತಾತ ವಂದನೈರ್ಮಂಗಲೇನ ಚ ॥೩೬॥

ಪಲಾಯನ ಮಾಡುವವನನ್ನು ನೋಡಿ ಶತ್ರುಗಳು ಸಂತೋಷದಿಂದ ಕೂಡಿ ಮೇಲೆರಗುತ್ತಾರೆ. ಎಲೈ ಪ್ರೀತಿಪಾತ್ರನೇ! ಜಯಶಾಲಿಯಾದವನನ್ನು ಸುಹೃಜ್ಜನರು ನಮಸ್ಕಾರಗಳಿಂದಲೂ, ಮಂಗಲಪದಾರ್ಥಗಳಿಂದಲೂ ಪೂಜಿಸುತ್ತಾರೆ.

ಯಸ್ಯ ಸ್ಮ ವ್ಯಸನೇ ರಾಜನ್ನನುಮೋದಂತಿ ಶತ್ರವಃ।
ತದಸಹ್ಯತರಂ ದುಃಖಮಹಂ ಮನ್ಯೇ ವಧಾದಪಿ ॥೩೭॥

ಎಲೈ ರಾಜನೇ! ಯಾವನಿಗೆ ವ್ಯಸನವುಂಟಾದಾಗ ಶತ್ರುಗಳು ಸಂತೋಷ ಪಡುತ್ತಾರೆಯೋ ವ್ಯಸನಕ್ಕೀಡಾದ ಆ ರಾಜನ ಅವಸ್ಥೆಯು ಮರಣಕ್ಕಿಂತ ಹೆಚ್ಚು ದುಃಖಕರವಾದುದು ಮತ್ತು ಸಹಿಸಲು ಅಸಾಧ್ಯವಾದುದು ಎಂದು ತಿಳಿಯುತ್ತೇನೆ.

ಶ್ರಿಯಂ ಜಾನೀತ ಧರ್ಮಸ್ಯ ಮೂಲಂ ಸರ್ವಸುಖಸ್ಯ ಚ।
ಸಾ ಭೀರೂನವಜಾನಾತಿ ಶೂರಸ್ತಾಮಧಿಗಚ್ಛತಿ ॥೩೮॥

ಧರ್ಮಕ್ಕೂ ಮತ್ತು ಎಲ್ಲ ಸುಖಕ್ಕೂ ಸಂಪತ್ತು ಮೂಲವಾದುದು ಎಂದು ತಿಳಿಯಿರಿ. ಆ ಸಂಪತ್ತು ಹೇಡಿಯನ್ನು ತಿರಸ್ಕರಿಸಿ ಶೂರನನ್ನು ಸೇರುತ್ತದೆ.

ತೇ ವಯಂ ಸ್ವರ್ಗಮಿಚ್ಛಂತಃ ಸಂಗ್ರಾಮೇ ತ್ಯಕ್ತಜೀವಿತಾಃ।
ಜಯಂತೋ ವಧ್ಯಮಾನಾ ವಾ ಪ್ರಾಪ್ತುಮರ್ಹಾಮ ಸದ್ಗತಿಮ್ ॥೩೯॥

ಅಂತಹ ನಾವು ಸ್ವರ್ಗವನ್ನು ಬಯಸುತ್ತಾ ಯುದ್ಧದಲ್ಲಿ ಜೀವದ ಹಂಗನ್ನು ತೊರೆದು ಜಯವನ್ನು ಪಡೆದು ಅಥವಾ ಹತರಾಗಿ ಸದ್ಗತಿಯನ್ನು ಹೊಂದೋಣ (ಎಂದು ಹೇಳಬೇಕು).

ಏವಂ ಸಂಶಪ್ತಶಪಥಾಃ ಸಮಭಿತ್ಯಕ್ತಜೀವಿತಾಃ।
ಅಮಿತ್ರವಾಹಿನೀಂ ವೀರಾಃ ಸಂಪ್ರಗಾಹಂತ್ಯಭೀರವಃ ॥೪೦॥

ಹೀಗೆ ಶಪಥವನ್ನು ಮಾಡಿ ಜೀವನದ ಹಂಗನ್ನು ತೊರೆದು ವೀರರು ನಿರ್ಭಯರಾಗಿ ಶತ್ರುಸೈನ್ಯವನ್ನು ಪ್ರವೇಶಿಸುತ್ತಾರೆ.

ಅಗ್ರತಃ ಪುರುಷಾನೀಕಮಸಿಚರ್ಮವತಾಂ ಭವೇತ್।
ಪೃಷ್ಠತಃ ಶಕಟಾನೀಕಂ ಕಲತ್ರಂ ಮಧ್ಯತಸ್ತಥಾ ॥೪೧॥

ಸೈನ್ಯದ ಮುಂಭಾಗದಲ್ಲಿ ಖಡ್ಗಚರ್ಮಗಳನ್ನು ಹಿಡಿದ ಪದಾತಿಗಳ ಸಮೂಹವು, ಹಿಂಭಾಗದಲ್ಲಿ ರಥಗಳು, ಮಧ್ಯಭಾಗದಲ್ಲಿ ಧಾವನೋತ್ಸುಕವಾದ ಸೈನ್ಯವನ್ನು ರಕ್ಷಿಸುವ ಸೇನಾಪತಿಗಳು ಇರಬೇಕು- (ಲಕ್ಷಾಲಂಕಾರ)

ಪರೇಷಾಂ ಪ್ರತಿಘಾತಾರ್ಥಂ ಪದಾತೀನಾಂ ಚ ಗೂಹನಮ್।
ಅಪಿ ಹ್ಯಸ್ಮಿನ್ ಪರೇ ಗೃಧ್ಯಾ ಭವೇಯುರ್ಯೇ ಪುರೋಗಮಾಃ ॥೪೨॥

ಶತ್ರುಗಳ ಪ್ರತಿಘಾತಕ್ಕಾಗಿ ಇರುವ ಪದಾತಿಗಳನ್ನು ರಕ್ಷಿಸಬೇಕು. ಶತ್ರುಸೈನ್ಯದ ಮುಂಭಾಗದಲ್ಲಿರುವವರು ಅಂತಹ ಪದಾತಿಗಳನ್ನು ವಶಪಡಿಸಿಕೊಳ್ಳಲು ಬಯಸಬಹುದು.

ಯೇ ಪುರಸ್ತಾದಭಿಮತಾಃ ಸತ್ತ್ವವಂತೋ ಹಿ ಮನಸ್ವಿನಃ।
ತೇ ಪೂರ್ವಮಭಿವರ್ತೇರಂಸ್ತಾನ್ ಅನ್ವಗಿತರೇ ಜನಾಃ ॥೪೩॥

ಯಾರಿಗೆ ಅಧಿಕವಾದ ಬಲ ಮತ್ತು ಧೈರ್ಯಗಳಿವೆಯೋ ಅವರು ಸೇನೆಯ ಮುಂಭಾಗದಲ್ಲಿರಬೇಕು. ಉಳಿದ ಯೋಧರು ಅವರನ್ನು ಅನುಸರಿಸಬೇಕು.

ಅಪಿ ಚೋದ್ಧರ್ಷಣಂ ಕಾರ್ಯಂ ಭೀರೂಣಾಮಪಿ ಯತ್ನತಃ।
ಸ್ಕಂಧದರ್ಶನಮಾತ್ರಂ ತು ತಿಷ್ಠೇಯುರ್ವಾ ಸಮೀಪತಃ ॥೪೪॥

ಭಯಗ್ರಸ್ತರಾದವರಿಗೂ ಪ್ರಯತ್ನಪಟ್ಟು ಉತ್ತೇಜನವನ್ನು ನೀಡಬೇಕು. ಶತ್ರುಗಳ ಸೈನ್ಯದ ಒಂದು ಭಾಗವನ್ನು ನೋಡುವವರೆಗೂ ಅವರ ಜೊತೆಯಲ್ಲಿ ಇರಬೇಕು.

ಸಂಹತಾನ್ ಯೋಧಯೇದಲ್ಪಾನ್ ಕಾಮಂ ವಿಸ್ತಾರಯೇದ್ ಬಹೂನ್।
ಸೂಚೀಮುಖಿಮನೀಕಂ ಸ್ಯಾದಲ್ಪಾನಾಂ ಬಹುಭಿಃ ಸಹ ॥೪೫॥

ತನ್ನ ಸೈನ್ಯವು ಅಲ್ಪವಾಗಿದ್ದರೆ ಸೂಚೀಮುಖವ್ಯೂಹವನ್ನು ಮಾಡಿ ಅವರನ್ನು ಒಟ್ಟಿಗೆ ಸೇರಿಸಿ ಯುದ್ಧವನ್ನು ಮಾಡಬೇಕು. ಸೈನ್ಯವು ದೊಡ್ಡದಾಗಿದ್ದರೆ ಅವರನ್ನು ನಮ್ಮ ಇಚ್ಛೆಗೆ ತಕ್ಕಂತೆ ವಿಸ್ತಾರಮಾಡಿ ಯುದ್ಧವನ್ನು ಮಾಡಬೇಕು. ಅಲ್ಪರು ಅನೇಕರ ಜೊತೆ ಯುದ್ಧವನ್ನು ಮಾಡುವಾಗ ಸೂಚೀಮುಖವ್ಯೂಹವನ್ನು ರಚಿಸಬೇಕೆಂದು ಹೇಳುತ್ತಾರೆ.

ಸನ್ನಿಕೃಷ್ಟೇ ನಿಕೃಷ್ಟೇ ವಾ ಸತ್ಯಂ ವಾ ಯದಿ ವಾऽನೃತಮ್।
ಪ್ರಗೃಹ್ಯ ಬಾಹೂನ್ ಕ್ರೋಶೇತ ಭಗ್ನಾ ಭಗ್ನಾಃ ಪರಾ ಇತಿ ॥೪೬॥

ಸಮೀಪದಲ್ಲಾಗಲೀ ದೂರದಲ್ಲಾಗಲೀ ಈ ಮಾತು ಸತ್ಯವಾಗಲೀ ಅಥವಾ ಸುಳ್ಳಾಗಲೀ ಬಾಹುಗಳನ್ನು ಎತ್ತಿ ''ಶತ್ರುಗಳು ಭಗ್ನರಾಗಿದ್ದಾರೆ, ಭಗ್ನರಾಗಿದ್ದಾರೆ'' ಎಂದು ಕಿರುಚಬೇಕು.

ಆಗತಂ ನೋ ಮಿತ್ರಬಲಂ ಪ್ರಹರಧ್ವಮಭೀತವತ್।
ಶಬ್ದವಂತೋऽನುಧಾವೇಯುಃ ಕುರ್ವಂತೋ ಭೈರವಂ ರವಮ್ ॥೪೭॥

'ನಮ್ಮ ಮಿತ್ರಸೈನ್ಯವು ಬಂದಿದೆ; ನಿರ್ಭಯವಾಗಿ ಪ್ರಹಾರ ಮಾಡಿ' ಎಂದು ಹೇಳುತ್ತಾ ಭೈರವನಾದವನ್ನು ಮಾಡುತ್ತಾ ಯೋಧರ ಹಿಂದೆ ಓಡಬೇಕು.

ಕ್ಷ್ವೇಡಾಃ ಕಿಲಕಿಲಾಃ ಶಂಖಾಃ ಕ್ರಕಚಾ ಗೋವಿಷಾಣಿಕಾನ್ ।
ಭೇರೀಮೃದಂಗಪಣವಾನ್ ನಾದಯೇಯುಶ್ಚ ಕುಂಜರಾನ್ ॥೪೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವ್ಯಧಿಕಶತತಮೋಽಧ್ಯಾಯಃ ॥೧೦೨॥

ಯುದ್ಧದ ಸಿಂಹನಾದಗಳು, ಕಿಲಕಿಲಶಬ್ದಗಳು ಇವುಗಳನ್ನು ಮಾಡಬೇಕು. ಶಂಖ, ಕ್ರಕಚ, ಗೋವಿಷಾಣ, ಭೇರಿ, ಮೃದಂಗ, ಪಣವಗಳನ್ನು ಮೊಳಗಿಸಬೇಕು. ಗಜಗಳು ಬೃಂಹಣವನ್ನು ಮಾಡುವಂತೆ ಮಾಡಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೨ನೆಯ ಅಧ್ಯಾಯವು ಮುಗಿಯಿತು.

—೦—

೧೦೩. ನೂರಮೂರನೆಯ ಅಧ್ಯಾಯ

ಯೋಧರ ಯುದ್ಧಪ್ರಕಾರಾದಿ ಕಥನ

ಯುಧಿಷ್ಠಿರಃ

ಕಿಂಶೀಲಾಃ ಕಿಂಸಮುತ್ಥಾನಾಃ ಕಥಂರೂಪಾಶ್ಚ ಭಾರತ ।
ಕಿಂಸನ್ನಾಹಾಃ ಕಥಂಶಸ್ತ್ರಾ ಜನಾಃ ಸ್ಯುಃ ಸಂಯುಗೇ ನೃಪ ॥೧॥

ಯುಧಿಷ್ಠಿರ – ಎಲೈ ಭಾರತನೇ! ಯೋಧರ ನಡತೆ ಅವರ ಆಚಾರ ಅವರ ರೂಪಗಳು ಹೇಗಿರಬೇಕು? ಎಲೈ ರಾಜನೇ! ಅವರ ಸನ್ನಾಹ ಶಸ್ತ್ರಗಳು ಯುದ್ಧದಲ್ಲಿ ಹೇಗಿರಬೇಕು?

ಭೀಷ್ಮಃ

ಯಥಾऽಚರಿತಮೇವಾತ್ರ ಶಸ್ತ್ರಪತ್ರಂ ವಿಧೀಯತೇ ।
ಆಚಾರಾದೇವ ಪುರುಷಸ್ತಥಾ ಕರ್ಮಸು ವರ್ತತೇ ॥೨॥

ಭೀಷ್ಮರು – ಅವರವರ ದೇಶಾಚಾರಕ್ಕೆ ತಕ್ಕಂತೆ ಶಸ್ತ್ರಗಳು ಮತ್ತು ವಾಹನಗಳು

ವಿಹಿತವಾಗುತ್ತವೆ. ಯೋಧಪುರುಷನು ತನ್ನ ದೇಶಾಚಾರದಂತೆಯೇ ಯುದ್ಧಕರ್ಮದಲ್ಲಿ ಪ್ರವೃತ್ತನಾಗುತ್ತಾನೆ.

ಗಾಂಧಾರಾಃ ಸಿಂಧುಸೌವೀರಾ ನಖರಪ್ರಾಸಯೋಧಿನಃ।
ಆಭೀರವಃ ಸುಬಲಿನಸ್ತದ್ಬಲಂ ಸರ್ವಪಾರಗಮ್ ॥೩॥

ಗಾಂಧಾರರು ಮತ್ತು ಸಿಂಧುಸೌವೀರರು ನಖರ ಮತ್ತು ಪ್ರಾಸಗಳಿಂದ ಯುದ್ಧವನ್ನು ಮಾಡುವವರು. ಆಭೀರರು ಬಲಿಷ್ಠರಾದವರು. ಅವರು ಸರ್ವಶಸ್ತ್ರಗಳಲ್ಲಿಯೂ ಪಾರಂಗತರು.

ಸರ್ವಶಸ್ತ್ರೇಷು ಕುಶಲಾಃ ಸತ್ತ್ವವಂತೋ ಹ್ಯುಶೀನರಾಃ।
ಪ್ರಾಚ್ಯಾ ಮಾತಂಗಯುದ್ಧೇಷು ಕುಶಲಾಃ ಶಠಯೋಧಿನಃ ॥೪॥

ಉಶೀನರರು ಎಲ್ಲ ಶಸ್ತ್ರಗಳಲ್ಲಿಯೂ ಕುಶಲರು ಮತ್ತು ಬಲಶಾಲಿಗಳು. ಪ್ರಾಚ್ಯರು (ಪೂರ್ವದಿಕ್ಕಿನವರು) ಗಜಯುದ್ಧಗಳಲ್ಲಿ ಕುಶಲರು ಮತ್ತು ಹಠದಿಂದ ಯುದ್ಧವನ್ನು ಮಾಡುವವರು.

ತಥಾ ಯವನಕಾಂಭೋಜಾ ಮಥುರಾಮಭಿತಶ್ಚ ಯೇ।
ಏತೇ ನಿಯುದ್ಧಕುಶಲಾ ದಾಕ್ಷಿಣಾತ್ಯಾಸಿಚರ್ಮಿಣಃ ॥೫॥

ಹಾಗೆಯೇ ಯವನರು ಕಾಂಭೋಜರು ಮತ್ತು ಮಥುರೆಯ ಸಮೀಪದವರು - ಇವರು ಬಾಹುಯುದ್ಧದಲ್ಲಿ ಕುಶಲರು. ದಾಕ್ಷಿಣಾತ್ಯರು ಖಡ್ಗಚರ್ಮಯುದ್ಧದಲ್ಲಿ ಕುಶಲರು.

ಸರ್ವತ್ರ ಶೂರಾ ಜಾಯಂತೇ ಮಹಾಸತ್ತ್ವಾ ಮಹಾಬಲಾಃ।
ಪ್ರಾಯ ಏಷ ಸಮುದ್ದಿಷ್ಟೋ ಲಕ್ಷಣಾನಿ ತು ಮೇ ಶೃಣು ॥೬॥

ಮಹಾಧೈರ್ಯ ಮತ್ತು ಮಹಾಬಲವುಳ್ಳ ಶೂರರು ಎಲ್ಲ ದೇಶಗಳಲ್ಲಿಯೂ ಜನಿಸುತ್ತಾರೆ. ಅವರಲ್ಲಿ ಸ್ಥೂಲವಾಗಿ ಕಾಣುವ ಮುಖ್ಯಲಕ್ಷಣಗಳನ್ನು ನನ್ನಿಂದ ಕೇಳುವವನಾಗು.

ಸಿಂಹಶಾರ್ದೂಲವಾಜ್ಞೇತ್ರಾಃ ಸಿಂಹಶಾರ್ದೂಲಗಾಮಿನಃ।
ಪಾರಾವತಕುಳಿಂಗಾಕ್ಷಾಃ ಸರ್ವೇ ಶೂರಾಃ ಪ್ರಮಾಥಿನಃ ॥೭॥

ಸಿಂಹಶಾರ್ದೂಲಸ್ವರವನ್ನು ಹೊಂದಿದ, ಸಿಂಹಶಾರ್ದೂಲನಡಿಗೆಯನ್ನು ಹೊಂದಿದ ಪಾರಿವಾಳ ಮತ್ತು ಕುಳಿಂಗಪಕ್ಷಿಗಳ ಕಣ್ಣುಗಳಂತೆ ಕಣ್ಣುಳ್ಳ ಎಲ್ಲ ಶೂರರೂ ಶತ್ರುಪಕ್ಷವನ್ನು ಕಲಕಾಡುವವರು.

ಮೃಗಸ್ವರಾ ದ್ವೀಪಿನೇತ್ರಾ ಋಷಭಾಕ್ಷಾಸ್ತಥಾಪರೇ।
ಪ್ರವಾದಿನಃ ಸುಚಂಡಾಶ್ಚ ಕ್ರೋಧಿನಃ ಕಿನ್ನರೀಸ್ವನಾಃ ॥೮॥

ಇನ್ನು ಕೆಲವರು ಜಿಂಕೆಯ ಸ್ವರವನ್ನು, ಚಿರತೆಯ ಕಣ್ಣುಗಳನ್ನು, ಅಥವಾ ವೃಷಭನೇತ್ರಗಳನ್ನು, ಕಿನ್ನರೀ ವಾದ್ಯಸ್ವರವನ್ನು ಹೊಂದಿ ಕ್ರೋಧಶೀಲರೂ ಉಗ್ರರೂ ಮತ್ತು ಉಚ್ಚಘೋಷವನ್ನೂ ಮಾಡುವವರೂ ಆಗಿರುತ್ತಾರೆ.

ಮೇಘಸ್ವನಾಃ ಕ್ರುದ್ಧಮುಖಾಃ ಕೇಚಿತ್ ಕಳಭನಿಸ್ವನಾಃ।
ಜಿಹ್ಮನಾಸಾನುಜಂಘಾಶ್ಚ ದೂರಗಾ ದೂರಪಾತಿನಃ ॥೯॥

ಕೆಲವರು ಮೇಘಗಂಭೀರನಾದವನ್ನು ಹೊಂದಿ, ಕೋಪಗೊಂಡ ಮುಖವನ್ನು ಹೊಂದಿ, ಒಂಟೆಯ (ಅಥವಾ ಮರಿಆನೆಯ) ಸ್ವರವನ್ನು ಹೊಂದಿರುತ್ತಾರೆ. ವಕ್ರವಾದ ನಾಸಿಕೆ ಮತ್ತು ಜಂಘೆಗಳನ್ನು ಹೊಂದಿರುವ ಅವರು ದೂರದವರೆಗೂ ಹೋಗಬಲ್ಲರು ಮತ್ತು ಅವರ ಬಾಣಗಳು ಬಹಳ ದೂರ ಸಾಗುತ್ತವೆ.

ಬಿಡಾಲಕುಬ್ಜಾಸ್ತನವಸ್ತನುಕೇಶಾಸ್ತನುತ್ವಚಃ।
ಶೂರಾಶ್ಚಪಲಚಿತ್ತಾಶ್ಚ ತೇ ಭವಂತಿ ದುರಾಸದಾಃ ॥೧೦॥

ಬೆಕ್ಕಿನಂತೆ ಕುಳ್ಳರಾದವರು, ಕೃಶರಾದವರು, ಮೃದುವಾದ ಕೇಶ ಮತ್ತು ಚರ್ಮವನ್ನು ಹೊಂದಿದವರು, ಶೂರರಾದವರು, ರಣರಂಗವನ್ನು ಬಿಟ್ಟು ಓಡದವರು – ಅವರ ಸಮೀಪಕ್ಕೆ ಹೋಗುವುದು ಕಷ್ಟಸಾಧ್ಯವಾದುದು.

ಗೋಧಾನಿಮೀಲಿತಾಃ ಕೇಚಿನ್ಮೃದುಪ್ರಕೃತಯೋಽಪಿ ಚ।
ತುರಂಗಗತಿನಿಘೋರ್ಷಾಸ್ತೇ ನರಾಃ ಪಾರಯಿಷ್ಣವಃ ॥೧೧॥

ಉಡದ ಮುಚ್ಚಿದ ಕಣ್ಣುಗಳಂತೆ ಕಣ್ಣುಗಳನ್ನು ಹೊಂದಿದ, ಮೃದುಸ್ವಭಾವದ ಕೆಲವರು ಅಶ್ವವೇಗವನ್ನೂ, ಅಶ್ವಘೋಷವನ್ನೂ ಹೊಂದಿರುತ್ತಾರೆ. ಅವರು ಯುದ್ಧದ ಕೊನೆಯನ್ನು ತಲುಪುವವರು.

ಸುಸಂಹತಾಃ ಪ್ರತನವೋ ವ್ಯೂಢೋರಸ್ಕಾಃ ಸುಸಂಸ್ಥಿತಾಃ।
ಪ್ರವಾದಿತೇನ ನೃತ್ಯಂತಿ ಹೃಷ್ಯಂತಿ ಕಲಹೇಷು ಚ ॥೧೨॥

ಗಂಭೀರಾಕ್ಷಾನಿಃಸೃತಾಕ್ಷಾಃ ಪಿಂಗಲಾ ಭ್ರುಕುಟೀಮುಖಾಃ।
ನಕುಲಾಕ್ಷಾಸ್ತಥಾ ಚೈವ ಸರ್ವೇ ಶೂರಾಸ್ತನುತ್ಯಜಃ ॥೧೩॥

ಗಟ್ಟಿಯಾದ ಮೈಕಟ್ಟು, ಕೃಶವಾದ ದೇಹ, ವಿಸ್ತಾರವಾದ ಎದೆಗಳನ್ನು ಹೊಂದಿದವರು ವಾದ್ಯಗಳ ಧ್ವನಿಯನ್ನು ಕೇಳಿ ನರ್ತನವನ್ನು ಮಾಡುತ್ತಾರೆ ಮತ್ತು ಯುದ್ಧಗಳಲ್ಲಿ ಸಂತೋಷಪಡುತ್ತಾರೆ. ಆಳವಾದ ಕಣ್ಣುಗಳನ್ನು ಹೊಂದಿ ಅಥವಾ ಉಬ್ಬಿದ ಕಣ್ಣುಗಳನ್ನು ಹೊಂದಿ, ಕಂದು ಬಣ್ಣವನ್ನು ಹೊಂದಿ, ಹುಬ್ಬು ಗಂಟಿಕ್ಕಿದ ಮುಖವುಳ್ಳವರಾದವರು, ಮುಂಗುಸಿಯ ಕಣ್ಣುಳ್ಳವರು ಎಲ್ಲರೂ ಯುದ್ಧದಲ್ಲಿ ಶರೀರವನ್ನು ತ್ಯಾಗಮಾಡುವ ಶೂರರು.

ಜಿಹ್ಮಾಕ್ಷಾಃ ಪ್ರಲಲಾಟಾಶ್ಚ ನಿರ್ಮಾಂಸಹನವೋಽಪಿ ಚ।
ವಕ್ರಬಾಹ್ವಂಸನಾಸಾಕ್ಷಾಃ ಕೃಶಾ ಧಮನಿಸಂತತಾಃ ॥೧೪॥

ಪ್ರವಿಶಂತ್ಯತಿವೇಗೇನ ಸಂಪರಾಯೇಽಭ್ಯುಪಸ್ಥಿತೇ।
ವಾರಣಾ ಇವ ಸಮ್ಮತ್ತಾಸ್ತೇ ಭವಂತಿ ದುರಾಸದಾಃ ॥೧೫॥

ವಕ್ರವಾದ ಕಣ್ಣು, ವಿಸ್ತಾರವಾದ ಹಣೆ, ಮಾಂಸರಹಿತವಾದ ಗಲ್ಲ, ವಕ್ರವಾದ ಬಾಹುಭುಜನಾಸಿಕ ಮತ್ತು ಕಣ್ಣುಗಳು, ಕೃಶತೆ, ನರಗಳು ಎದ್ದು ಕಾಣುವುದು-

ಇಂತಹವರು ಯುದ್ಧವು ಉಪಸ್ಥಿತವಾದಾಗ ಅತಿವೇಗದಿಂದ ಶತ್ರುಸೈನ್ಯವನ್ನು ಪ್ರವೇಶಿಸುತ್ತಾರೆ. ಮದಿಸಿದ ಆನೆಗಳಂತೆ ಅವರು ಶತ್ರುಗಳಿಗೆ ದುರಾಸದರಾಗುತ್ತಾರೆ.

ದೀಪ್ತಸ್ಫುಟಿತಕೇಶಾಂತಾಃ ಸ್ಥೂಲಪಾರ್ಶ್ವಹನೂಮುಖಾಃ।
ಉನ್ನತಾಂಸಾ ಪೃಥುಗ್ರೀವಾ ವಿಕಟಾಃ ಸ್ಥೂಲಪಿಂಡಿಕಾಃ ॥೧೬॥

ಉದ್ವೃತ್ತಾಶ್ಚೈವ ಸುಗ್ರೀವಾ ವಿನತಾ ವಿಹಗಾ ಇವ।
ಪಿಂಡಶೀರ್ಷಾಹಿವಕ್ತ್ರಾಶ್ಚ ವೃಷದಂಶಮುಖಾ ಇವ ॥೧೭॥

ಉಗ್ರಸ್ವನಾ ಮನ್ಯುಮಂತೋ ಯುದ್ಧೇಷ್ವಾವಸಾರಿಣಃ।
ಅಧರ್ಮಜ್ಞಾವಲಿಪ್ತಾಶ್ಚ ಘೋರಾ ರೌದ್ರಪ್ರದರ್ಶಿನಃ ॥೧೮॥

ಹೊಳೆಯುವ ಮತ್ತು ತುದಿಯಲ್ಲಿ ಒಡೆದ ತಲೆಕೂದಲನ್ನು ಉಳ್ಳವರು, ಪಕ್ಕೆ ಹನು ಮತ್ತು ಮುಖಗಳು ಸ್ಥೂಲವಾಗಿರುವವರು, ಉನ್ನತವಾದ ಎದೆ ವಿಸ್ತಾರವಾದ ಕತ್ತು ಮತ್ತು ಸ್ಥೂಲವಾದ ದೇಹವನ್ನು ಹೊಂದಿದವರು, ಮೇಲ್ಮುಖವಾಗಿ ಅಥವಾ ಉದ್ಧಟರಾಗಿ ಒಳ್ಳೆಯ ಕತ್ತನ್ನು ಹೊಂದಿದವರು, ಎತ್ತರವಾಗಿ ಬಾಗಿ ಪಕ್ಷಿಗಳಂತೆ ಇರುವವರು, ಗುಂಡಾದ ಶಿರಸ್ಸು ಮತ್ತು ಸರ್ಪದ ತಲೆಗಳಂತೆ ತಲೆ ಉಳ್ಳವರು, ವೃಷಭದಂತಹ ಮುಖವುಳ್ಳವರು, ಉಗ್ರವಾದ ಸ್ವರವುಳ್ಳವರು, ಕೋಪವನ್ನು ಹೊಂದಿದವರು, ಯುದ್ಧದಲ್ಲಿ ಗರ್ಜಿಸುತ್ತಾ ಮುಂದೆ ಸಾಗುವವರು – ಇವರೆಲ್ಲರೂ ಅಧರ್ಮಜ್ಞರು, ಅಹಂಕಾರಿಗಳು, ಘೋರರು ಮತ್ತು ಭಯಂಕರ ಕಾರ್ಯವನ್ನು ತೋರಿಸುವವರು.

ತ್ಯಕ್ತಾತ್ಮಾನಃ ಸರ್ವ ಏತ ಉದ್ವೃತ್ತಾ ಹ್ಯನಿವರ್ತಿನಃ।
ಪುರಸ್ಕಾರ್ಯಾಃ ಸದಾ ಸೈನ್ಯೇ ಹನ್ಯಂತೇ ಘ್ನಂತಿ ಚಾಪಿ ತೇ ॥೧೯॥

ಇವರೆಲ್ಲರೂ ಪ್ರಾಣವನ್ನು ತ್ಯಜಿಸಿ ಯುದ್ಧವನ್ನು ಮಾಡುವವರು. ರಣರಂಗದಲ್ಲಿ ಹಿಮ್ಮೆಟ್ಟದವರು ಮತ್ತು ಯುದ್ಧದಲ್ಲಿ ಶ್ರೇಷ್ಠರಾದವರು. ಇವರನ್ನು ಸೈನ್ಯದಲ್ಲಿ ಯಾವಾಗಲೂ ಪುರಸ್ಕರಿಸಬೇಕು. ಇವರು ಶತ್ರುಗಳನ್ನು ಕೊಲ್ಲುತ್ತಾರೆ ಮತ್ತು ತಾವೂ ಹತರಾಗುತ್ತಾರೆ.

ಅಧಾರ್ಮಿಕಾ ಭಿನ್ನವೃತ್ತಾಃ ಸಾಧ್ವೇವೈಷಾಂ ಪರಾಭವಃ।
ಏವಮೇವ ಪ್ರಕುಪ್ಯಂತಿ ರಾಜ್ಞೋಽಪ್ಯೇತೇ ಹ್ಯಭೀಕ್ಷ್ಣಶಃ ॥೨೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರ್ಯಧಿಕಶತತಮೋಽಧ್ಯಾಯಃ ॥೧೦೩॥

ಅಧಾರ್ಮಿಕರು, ಭಿನ್ನವಾದ ನಡತೆಯುಳ್ಳವರೂ ಆದವರಿಗೆ ಸೋಲು ನ್ಯಾಯವಾದುದೇ ಆಗಿದೆ. ಅಂತಹವರು ರಾಜನ ಮೇಲೆಯೂ ಸತತವಾಗಿ ಕಾರಣವಿಲ್ಲದೇ ಕೋಪಗೊಳ್ಳುತ್ತಾರೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೩ನೆಯ ಅಧ್ಯಾಯವು ಮುಗಿಯಿತು

—0—

೧೦೪. ನೂರನಾಲ್ಕನೆಯ ಅಧ್ಯಾಯ

ಸೇನೆಯ ಜಯಚಿಹ್ನೆಗಳ ಮತ್ತು ರಾಜನೀತಿಯ ಕಥನ

ಯುಧಿಷ್ಠಿರಃ

ಜೈತ್ರ್ಯಾ ವಾ ಕಾನಿ ರೂಪಾಣಿ ಭವಂತಿ ಪುರುಷರ್ಷಭ।
ಪೃತನಾಯಾಃ ಪ್ರಶಸ್ತಾನಿ ತಾನೀಹೇಚ್ಛಾಮಿ ವೇದಿತುಮ್ ॥೧॥

ಯುಧಿಷ್ಠಿರ – ಎಲೈ ಪುರುಷಶ್ರೇಷ್ಠನೇ! ಜಯಶೀಲವಾದ ಸೈನ್ಯಕ್ಕೆ ಯಾವ ಪ್ರಶಸ್ತವಾದ ಸೂಚನೆಗಳು ಉಂಟಾಗುತ್ತವೆಂದು ನಾನು ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಜೈತ್ರ್ಯಾ ವಾ ಯಾನಿ ರೂಪಾಣಿ ಭವಂತಿ ಪುರುಷರ್ಷಭ।
ಪೃಥನಾಯಾಃ ಪ್ರಶಸ್ತಾನಿ ತಾನಿ ವಕ್ಷ್ಯಾಮಿ ಸರ್ವಶಃ ॥೨॥

ಭೀಷ್ಮರು – ಎಲೈ ಪುರುಷಶ್ರೇಷ್ಠನೇ! ಜಯಶೀಲವಾದ ಸೈನ್ಯಕ್ಕೆ ಎಂತಹ ಶುಭಸೂಚನೆಗಳು ಉಂಟಾಗುತ್ತವೆಯೋ ಅವುಗಳೆಲ್ಲವನ್ನೂ ನಾನು ಹೇಳುವೆನು.

ದೈವಂ ಪೂರ್ವಂ ವಿಕುರುತೇ ಮಾನುಷೇ ಕಾಲಚೋದಿತೇ।
ತದ್ ವಿದ್ವಾಂಸೋಽನುಪಶ್ಯಂತಿ ಜ್ಞಾನದೀರ್ಘೇಣ ಚಕ್ಷುಷಾ ॥೩॥

ಮನುಷ್ಯರು ಕಾಲಚೋದಿತರಾದಾಗ ಮೊದಲು ದೈವವು ವಿಕೋಪಗೊಳ್ಳುತ್ತದೆ. ಅದನ್ನು ದೀರ್ಘದೃಷ್ಟಿಯುಳ್ಳ ವಿದ್ವಾಂಸರು ತಮ್ಮ ಜ್ಞಾನದೃಷ್ಟಿಯಿಂದ ನೋಡುತ್ತಾರೆ.

ಪ್ರಾಯಶ್ಚಿತ್ತವಿಧಿಂ ಚಾತ್ರ ಜಪಹೋಮಾಂಶ್ಚ ತದ್ವಿದಃ।
ಮಂಗಲಾನಿ ಚ ಕುರ್ವಂತಃ ಶಮಯಂತ್ಯಹಿತಾನ್ಯಪಿ ॥೪॥

ಆಗ ಅದನ್ನು ತಿಳಿದವರು ಪ್ರಾಯಶ್ಚಿತ್ತವಿಧಿಗಳನ್ನು, ಜಪಹೋಮಗಳನ್ನು, ಮಂಗಳಗಳನ್ನೂ ಮಾಡಿ ಅಶುಭವನ್ನು ಶಮನಗೊಳಿಸುತ್ತಾರೆ.

ಉದೀರ್ಣಮನಸೋ ಯೋಧಾ ವಾಹನಾನಿ ಚ ಭಾರತ।
ಯಸ್ಯಾಂ ಭವಂತಿ ಸೇನಾಯಾಂ ಧ್ರುವಂ ತಸ್ಯಾಂ ಜಯೋ ವದೇತ್ ॥೫॥

ಎಲೈ ಭಾರತನೇ! ಯಾವ ಸೈನ್ಯದಲ್ಲಿ ಯೋಧರು ಮತ್ತು ವಾಹನಗಳು ಸಂತೋಷದಿಂದ ಉಬ್ಬಿದ ಮನಸ್ಸುಳ್ಳವರಾಗುತ್ತಾರೆಯೋ ಆ ಸೈನ್ಯಕ್ಕೆ ನಿಶ್ಚಯವಾಗಿ ಜಯವುಂಟಾಗುವುದು.

ಅನ್ವೇನಾಂ ವಾಯವೋ ವಾಂತಿ ತಥೈವೇಂದ್ರಧನೂಂಷಿ ಚ।
ಅನುಪ್ಲವಂತೇ ಮೇಘಾಶ್ಚ ತಥಾದಿತ್ಯಸ್ಯ ರಶ್ಮಯಃ ॥೬॥

ಅವರಿಗೆ ಹಿಂಭಾಗದಿಂದ ವಾಯುವು ಬೀಸುವುದು. ಕಾಮನಬಿಲ್ಲು ಹಿಂಭಾಗದಲ್ಲಿರುವುದು. ಮೇಘಗಳು ಮತ್ತು ಸೂರ್ಯರಶ್ಮಿಗಳು ಅವರನ್ನು ಹಿಂಬಾಲಿಸುವುವು.

ಗೋಮಾಯವಶ್ಚಾನುಲೋಮಾ ವಡಾ ಗೃಧ್ರಾಶ್ಚ ಸರ್ವಶಃ।
ಆಚರೇಯುರ್ಯದಾ ಸೇನಾಂ ತದಾ ಸಿದ್ಧಿರನುತ್ತಮಾ ॥೭॥

ನರಿಗಳು, ಬಕಗಳು, ಹದ್ದುಗಳು ಎಲ್ಲವೂ ಅನುಕೂಲವಾಗಿದ್ದು ಸೈನ್ಯದ ಮೇಲೆ ತಿರುಗಾಡುವವು. ಆಗ ಒಳ್ಳೆಯ ಸಿದ್ಧಿಯುಂಟಾಗುವುದು.

ಪ್ರಸನ್ನಭಾಃ ಪಾವಕ ಊರ್ಧ್ವರಶ್ಮಿಃ
ಪ್ರದಕ್ಷಿಣಾವರ್ತಶಿಖೋ ವಿಧೂಮಃ।
ಪುಣ್ಯಾ ಗಂಧಾಶ್ಚಾಹುತೀನಾಂ ಪ್ರವಾಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೮॥

ಅಗ್ನಿಯ ಕಾಂತಿಯು ಪ್ರಸನ್ನವಾಗಿದ್ದು, ಊರ್ಧ್ವಕಿರಣಗಳನ್ನು ಹೊಂದಿದ್ದು, ಪ್ರದಕ್ಷಿಣಾಕಾರದ ದ್ವಾರಗಳನ್ನು ಹೊಂದಿ ಧೂಮರಹಿತವಾಗಿರುತ್ತದೆ. ಆಹುತಿಗಳ ದಿವ್ಯಗಂಧವು ಬೀಸಿ ಬರುತ್ತದೆ. ಇದು ಮುಂದೆ ಉಂಟಾಗಲಿರುವ ಜಯದ ಸೂಚನೆ ಎಂದು ಹೇಳುತ್ತಾರೆ.

ಗಂಭೀರಶಬ್ದಾಶ್ಚ ಮಹಾಸ್ವನಾಶ್ಚ
ಶಂಖಾಶ್ಚ ಭೇರ್ಯಶ್ಚ ನದಂತಿ ಯತ್ರ।
ಯುಯುತ್ಸವಃ ಸಂಪ್ರತೀತಾ ಭವಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೯॥

ಶಂಖಭೇರಿಗಳು ಗಂಭೀರವಾದ ಮತ್ತು ದೊಡ್ಡದಾದ ಶಬ್ದವನ್ನುಂಟು-ಮಾಡುತ್ತವೆ. ಯೋಧರು ಯುದ್ಧಮಾಡುವ ಆಸೆಯನ್ನು ಹೊಂದಿ ಸಂತೋಷದಿಂದ ಕೂಡಿರುತ್ತಾರೆ. ಇದು ಮುಂದೆ ಉಂಟಾಗಲಿರುವ ಜಯದ ಲಕ್ಷಣವೆಂದು ಹೇಳು-ತ್ತಾರೆ.

ಇಷ್ಟಾ ಮೃಗಾಃ ಪೃಷ್ಠತೋ ವಾಮತಶ್ಚ
ಸಂಪ್ರಸ್ಥಿತಾನಾಂ ಚ ಗಮಿಷ್ಯತಾಂ ಚ।
ಜಿಘಾಂಸತಾಂ ದಕ್ಷಿಣಾಃ ಸಿದ್ಧಿಮಾಹು-
ರ್ಯೇ ತ್ವಗ್ರತಸ್ತೇ ಪ್ರತಿಷೇಧಯಂತಿ ॥೧೦॥

ಯುದ್ಧಕ್ಕೆ ಹೊರಡುವುದಕ್ಕಿಂತ ಮುಂಚೆ ಅಥವಾ ಹೊರಟಮೇಲೆ ಇಷ್ಟವಾದ ಮೃಗಗಳು ಹಿಂದಿನಿಂದಲೂ ಮತ್ತು ಎಡಗಡೆಯಿಂದಲೂ ಬರುತ್ತವೆ. ಯುದ್ಧವನ್ನು ಮಾಡುವಾಗ ಬಲಭಾಗದಲ್ಲಿ ಬಂದರೆ ಅದರಿಂದ ಜಯಸಿದ್ಧಿಯನ್ನು ಹೇಳುತ್ತಾರೆ. ಮುಂಭಾಗದಲ್ಲಿ ಬರುವ ಮೃಗಗಳು ಜಯವನ್ನು ಪ್ರತಿಷೇಧಿಸುತ್ತವೆ.

ಮಂಗಲ್ಯಶಬ್ದಾಃ ಶಕುನಾ ವದಂತಿ
ಹಂಸಾಃ ಕ್ರೌಂಚಾ ಶತಪತ್ರಾಶ್ಚ ಭಾಸಾಃ।
ಹೃಷ್ಟಾ ಯೋಧಾಃ ಸತ್ತ್ವವಂತೋ ಭವಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೧೧॥

ಹಂಸ, ಕ್ರೌಂಚ, ಶತಪತ್ರ (ಮರಕುಟುಕನ ಹಕ್ಕಿ), ಭಾಸಪಕ್ಷಿಗಳು ಮಂಗಳ-ಶಬ್ದವನ್ನು ಉಚ್ಚರಿಸುತ್ತವೆ. ಸಂತೋಷದಿಂದ ಕೂಡಿದ ಯೋಧರು ಧೈರ್ಯಶಾಲಿ-ಗಳಾಗಿರುತ್ತಾರೆ. ಇದು ಮುಂದೆ ಉಂಟಾಗಲಿರುವ ಜಯದ ಸೂಚನೆಯೆಂದು ಹೇಳುತ್ತಾರೆ.

ಶಸ್ತ್ರೈಃ ಪತ್ತ್ಯೈಃ ಕವಚೈಃ ಕೇತುಭಿಶ್ಚ
ಸುಭಾನುಭಿರ್ಮುಖವರ್ಣೈಶ್ಚ ಯೂನಾಮ್।
ಭ್ರಾಜಿಷ್ಣತೀ ದುಷ್ಪ್ರತೀಪ್ರೇಕ್ಷಣೀಯಾ
ಯೇಷಾಂ ಚಮೂಸ್ತೇಽಭಿಭವಂತಿ ಶತ್ರೂನ್ ॥೧೨॥

ಯಾರ ಸೈನ್ಯದಲ್ಲಿ ಶಸ್ತ್ರಗಳು, ವಾಹನಗಳು, ಕವಚಗಳು, ಧ್ವಜಗಳು ಮತ್ತು ಯುವಕರ ಮುಖವರ್ಣವು ಪ್ರಕಾಶಮಾನವಾಗಿರುತ್ತವೆಯೋ; ಶತ್ರುಗಳಿಗೆ ನೋಡಲು ಅಸಾಧ್ಯವಾಗಿರುತ್ತವೆಯೋ ಅಂತಹ ಸೈನ್ಯವು ಶತ್ರುಗಳನ್ನು ಪರಾಭವ-ಗೊಳಿಸುತ್ತದೆ.

ಶುಶ್ರೂಷವಶ್ಚಾನಭಿಮಾನಿನಶ್ಚ
ಪರಸ್ಪರಂ ಸೌಹೃದಮಾಸ್ಥಿತಾಶ್ಚ।

ಯೇಷಾಂ ಯೋಧಾಃ ಶೌಚಮನುಷ್ಠಿತಾಶ್ಚ
ಜಯಸ್ಯೈತದ್ ಭಾವಿನೋ ರೂಪಮಾಹುಃ ॥೧೩॥

ಯಾರ ಯೋಧರು ಪರಸ್ಪರ ಮಾತನ್ನು ಕೇಳುವವರೋ, ನಿರಹಂಕಾರಿಗಳೋ, ಪರಸ್ಪರವಾಗಿ ಸ್ನೇಹದಿಂದಿರುತ್ತಾರೆಯೋ, ಶೌಚಾನುಷ್ಠಾನಪರರೋ – ಅದು ಮುಂದೆ ಬರಲಿರುವ ಜಯದ ಸೂಚನೆಯೆಂದು ಹೇಳುತ್ತಾರೆ.

ಶಬ್ದಾಃ ಸ್ಪರ್ಶಾಸ್ತಥಾ ಗಂಧಾ ವಿಚರಂತಿ ಮನಃಪ್ರಿಯಾಃ।
ಧೈರ್ಯಂ ಚಾವಿಶತೇ ಯೋಧಾನ್ ವಿಜಯಸ್ಯ ಮುಖಂ ತು ತತ್ ॥೧೪॥

ಮನಃಪ್ರಿಯವಾದ ಶಬ್ದಸ್ಪರ್ಶಗಂಧಗಳು ಎಲ್ಲೆಡೆಯೂ ಸಂಚರಿಸುತ್ತವೆ. ಯೋಧರಲ್ಲಿ ಧೈರ್ಯವು ಹೆಚ್ಚುತ್ತದೆ. ಇದು ವಿಜಯದ ಮುನ್ಸೂಚನೆ.

ಶಬ್ದೋ ವಾಮೇ ಪ್ರವಿಷ್ಟಸ್ಯ ದಕ್ಷಿಣಃ ಪ್ರವಿವಿಕ್ಷತಃ।
ಪಶ್ಚಾತ್ ಸಂಬೋಧಯತ್ಯರ್ಥಂ ಪುರಸ್ತಾತ್ ಪ್ರತಿಷೇಧತಿ ॥೧೫॥

ರಣಭೂಮಿಯನ್ನು ಪ್ರವೇಶಿಸಲು ಬಯಸುವವನಿಗೆ ಬಲಭಾಗದಲ್ಲಿ, ರಣರಂಗವನ್ನು ಪ್ರವೇಶಿಸಿದವನಿಗೆ ಎಡಭಾಗದಲ್ಲಿ ಮತ್ತು ಯುದ್ಧಮಾಡುವವನಿಗೆ ಹಿಂಬದಿಯಿಂದ ಬರುವ ಶಬ್ದಗಳು ಜಯಸಿದ್ಧಿಯನ್ನು ಸೂಚಿಸುತ್ತವೆ. ಮುಂದಿನಿಂದ ಬರುವ ಶಬ್ದಗಳು ಜಯವನ್ನು ಪ್ರತಿಷೇಧಿಸುತ್ತವೆ.

ಸಂಭೃತ್ಯ ಮಹತೀಂ ಸೇನಾಂ ಚತುರಂಗಾಂ ಯುಧಿಷ್ಠಿರಃ।
ಸಾಮ್ನೈವಾವರ್ತನೇ ಪೂರ್ವಂ ಪ್ರಯತೇಥಾಸ್ತತೋ ಯುಧಿ ॥೧೬॥

ಎಲೈ ಯುಧಿಷ್ಠಿರನೇ! ದೊಡ್ಡದಾದ ಚತುರಂಗಸೈನ್ಯವನ್ನು ಜಮಾಯಿಸಿ ಸಾಮೋಪಾಯದಿಂದಲೇ ಮೊದಲು ಪ್ರವೃತ್ತಿಯನ್ನು ಮಾಡಬೇಕು. ಅದು ಫಲಿಸದಿದ್ದರೆ ಕೊನೆಯಲ್ಲಿ ಯುದ್ಧವನ್ನು ಮಾಡಬೇಕು.

ಜಘನ್ಯ ಏಷ ವಿಜಯೋ ಯದ್ ಯುದ್ಧಂ ನಾಮ ಭಾರತ।
ಯಾದೃಚ್ಛಿಕೋ ಯುಧಿ ಜಯೋ ದೈವೋ ವೇತಿ ವಿಚಾರಣಮ್ ॥೧೭॥

ಎಲೈ ಭಾರತನೇ! ಯುದ್ಧದಿಂದ ಸಂಪಾದಿಸಿದ ವಿಜಯವು ಹೀನವಾದುದು. ಯುದ್ಧದಲ್ಲಿ ಜಯವು ಆಕಸ್ಮಿಕವೋ ಅಥವಾ ದೈವವನ್ನು ಅವಲಂಬಿಸಿದೆಯೋ ಎಂದು ವಿಚಾರಮಾಡಬೇಕಾಗುವುದು.

ಅಪಾಮಿವ ಮಹಾವೇಗಸ್ತ್ರಸ್ತಾ ಮೃಗಗಣಾ ಇವ।
ದುರ್ನಿವಾರ್ಯತಮಾ ಚೈವ ಪ್ರಭಗ್ನಾ ಮಹತೀ ಚಮೂಃ ॥೧೮॥

ಭಗ್ನಗೊಂಡ ದೊಡ್ಡ ಸೈನ್ಯವು ದೊಡ್ಡ ಜಲಪ್ರವಾಹದಂತೆ ಅಥವಾ ಹೆದರಿದ ಮೃಗಗಣಗಳಂತೆ ತಡೆದು ನಿಲ್ಲಿಸಲು ಅಸಾಧ್ಯವಾದುದು.

ಭಗ್ನಾ ಇತ್ಯೇವ ಭಜ್ಯಂತೇ ವಿದ್ವಾಂಸೋಽಪಿ ನ ಕಾರಣಮ್ ।
ಉದಾರಸಾರಾ ಮಹತೀ ರುರುಸಂಘೋಪಮಾ ಚಮೂಃ ॥೧೯॥

ಸೈನ್ಯವು ಭಗ್ನವಾಗಿದೆ ಎಂಬ ವಾರ್ತೆಯಿಂದಲೇ ಪುನಃ ಭಗ್ನವಾಗುತ್ತದೆ. ಶ್ರೇಷ್ಠವಾದ ಬಲವುಳ್ಳ ದೊಡ್ಡದಾದ ಸೈನ್ಯವೂ ಸಹ ರುರುಗಳ ಸಮೂಹದಂತೆ ಭಗ್ನವಾಗುತ್ತದೆ. ಯುದ್ಧಕುಶಲರೂ ಸಹ ಅದನ್ನು ತಡೆದು ನಿಲ್ಲಿಸಲು ಸಾಧ್ಯವಿಲ್ಲ.

ಪರಸ್ಪರಜ್ಞಾಃ ಸಂಹೃಷ್ಟಾಸ್ತ್ಯಕ್ತಪ್ರಾಣಾಃ ಸುನಿಶ್ಚಯಾಃ।
ಅಪಿ ಪಂಚಾಶತಿಃ ಶೂರಾ ಮೃದ್ನಂತಿ ಪರವಾಹಿನೀಮ್ ॥೨೦॥

ಪರಸ್ಪರ ಮನಸ್ಸನ್ನು ತಿಳಿದ ಸಂತೋಷಗೊಂಡ, ತಮ್ಮ ಪ್ರಾಣವನ್ನು ತ್ಯಜಿಸಲು ಸಿದ್ಧರಾದ, ಯುದ್ಧದಲ್ಲಿ ದೃಢನಿಶ್ಚಯವುಳ್ಳ ಐವತ್ತು ಮಂದಿ ಶೂರರು ದೊಡ್ಡ ಶತ್ರುಸೇನೆಯನ್ನು ವಿನಾಶಗೊಳಿಸಬಲ್ಲರು.

ಅಥವಾ ಪಂಚ ಷಟ್ ಸಪ್ತ ಸಹಿತಾಃ ಕೃತನಿಶ್ಚಯಾಃ।
ಕುಲೀನಾಃ ಪೂಜಿತಾಃ ಸಮ್ಯಗ್ ವಿಜಯಂತೀಹ ಶಾತ್ರವಾನ್ ॥೨೧॥

ಅಥವಾ ದೃಢನಿರ್ಧಾರವುಳ್ಳ, ಒಗ್ಗಟ್ಟಿನಿಂದ ಕೂಡಿದ, ಸತ್ಕುಲಪ್ರಸೂತರಾದ, ಸತ್ಕೃತರಾದ ಐದು, ಆರು, ಏಳು ವೀರರು ಶತ್ರುಗಳನ್ನು ಚೆನ್ನಾಗಿ ಸೋಲಿಸಬಲ್ಲರು.

ಸನ್ನಿಪಾತೋ ನ ಮಂತವ್ಯಃ ಶಕ್ಯೇ ಸತಿ ಕಥಂಚನ।
ಸಾಂತ್ವಭೇದಪ್ರದಾನಾನಾಂ ಯುದ್ಧಮುತ್ತರಮುಚ್ಯತೇ ॥೨೨॥

ಸಾಮಭೇದದಾನಗಳಿಂದ ಅರ್ಥವನ್ನು ಸಾಧಿಸಲು ಸಾಧ್ಯವಾದರೆ ಸಂಘರ್ಷ-ವನ್ನು ಮಾಡಬೇಕೆಂದು ಯಾವರೀತಿಯಿಂದಲೂ ಯೋಚಿಸಬಾರದು. ಯುದ್ಧವು ಕೊನೆಯ ಉಪಾಯವೆಂದು ಹೇಳಲ್ಪಡುತ್ತದೆ.

ಸಂಸರ್ಪಣಾದ್ಧಿ ಸೇನಾಯಾ ಭಯಂ ಭೀರೂನ್ ಪ್ರಬಾಧತೇ।
ವಜ್ರಾದಿವ ಪ್ರಜ್ವಲಿತಾದಿಯಂ ಕ್ವನು ಪತಿಷ್ಯತಿ ॥೨೩॥

ಸೈನ್ಯದ ಚಲನೆಯಿಂದ ಭೀರುಗಳಿಗೆ ಜ್ವಲಿಸುವ ವಜ್ರಾಯುಧದಿಂದ ಉಂಟಾ-ಗುವಂತೆ ಇದು ಎಲ್ಲಿ ಎರಗುವುದೋ ಎಂಬ ಭಯವು ಕಾಡುತ್ತದೆ.

ಅಭಿಪ್ರಯತಾಂ ಸಮಿತಿಂ ಜ್ಞಾತ್ವಾ ಯೇ ಪ್ರತಿಯಾಂತ್ಯಥ।
ತೇಷಾಂ ಸ್ಯಂದಂತಿ ಗಾತ್ರಾಣಿ ಯೋಧಾನಾಂ ವಿಷಯಸ್ಯ ಚ ॥೨೪॥

ಸೈನ್ಯವು ಹೊರಟಿದೆಯೆಂದು ತಿಳಿದು ಯಾವ ಶತ್ರುಗಳು ಎದುರಾಗಿ ಬರು-ತ್ತಾರೆಯೋ ಅವರ ಯೋಧರ ಶರೀರವೂ ಮತ್ತು ದೇಶವೂ ಸಹ ನಡುಗುತ್ತದೆ.

ವಿಜಯಾದ್ ವ್ಯಥತೇ ರಾಜನ್ ಸರ್ವಃ ಸಸ್ಥಾಸ್ನುಜಂಗಮಃ।
ಶಸ್ತ್ರಪ್ರತಾಪತಪ್ತಾನಾಂ ಮಜ್ಜಾ ಸೀದತಿ ದೇಹಿನಾಮ್ ॥೨೫॥

ಎಲೈ ರಾಜನೇ! ವಿರುದ್ಧಪಕ್ಷದ ಜಯದಿಂದ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳಿಗೆ ವ್ಯಥೆಯುಂಟಾಗುತ್ತದೆ. ಶಸ್ತ್ರಪ್ರತಾಪಕ್ಕೆ ಸಿಲುಕಿದವರ ಮಜ್ಜೆಯು ನಾಶವನ್ನು ಹೊಂದುತ್ತದೆ. (ಲಕ್ಷಾಲಂಕಾರ)

ತೇಷಾಂ ಸಾಂತ್ವಂ ಕ್ರೂರಮಿಶ್ರಂ ಪ್ರಣೇತವ್ಯಂ ಪುನಃಪುನಃ।
ಸಂಪೀಡ್ಯಮಾನಾ ಹಿ ಪರೇ ಯೋಗಮಾಯಾಂತಿ ಸರ್ವಶಃ ॥೨೬॥

ಅವರಿಗೆ ಪುನಃ ಪುನಃ ಕ್ರೂರಮಿಶ್ರಿತವಾದ ಸಾಂತ್ವವಚನವನ್ನು ಹೇಳಬೇಕು.

ಹಾಗಲ್ಲದೇ ಹೆಚ್ಚಾಗಿ ಪೀಡಿಸಿದರೆ ಶತ್ರುಗಳು ಇವನ ಬೇರೆಯ ಶತ್ರುಗಳ ಜೊತೆಯಲ್ಲಿ ಸೇರುತ್ತಾರೆ.

ಆಂತರಾಣಾಂ ಚ ಭೇದಾರ್ಥಂ ಚಾರಾನಭ್ಯವಚಾರಯೇತ್ ।
ಯಶ್ಚ ತಸ್ಮಾತ್ ಪರೋ ರಾಜಾ ತೇನ ಸಂಧಿಃ ಪ್ರಶಸ್ಯತೇ ॥೨೭॥

ಶತ್ರುಪಕ್ಷದ ಒಳಗಿನ ಜನರ ಭೇದಾರ್ಥವಾಗಿ ಗೂಢಚಾರರನ್ನು ನಿಯಮಿಸಬೇಕು. ತನಗಿಂತ ಬಲಿಷ್ಠನಾದ ರಾಜನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದು ಪ್ರಶಸ್ತವಾದುದು.

ನಹಿ ತಸ್ಯಾನ್ಯಥಾ ಪೀಡಾ ಶಕ್ಯಾ ಕರ್ತುಂ ತಥಾವಿಧಾ ।
ಯಥಾ ಸಾರ್ಧಮಮಿತ್ರೇಣ ಸರ್ವತಃ ಪ್ರತಿಬಾಧನಮ್ ॥೨೮॥

ಅವನ ಶತ್ರುಗಳ ಜೊತೆಯಲ್ಲಿ ಸೇರಿ ಅವನನ್ನು ಪೀಡಿಸುವುದನ್ನು ಬಿಟ್ಟು, ಬೇರೆಯ ವಿಧಾನದಿಂದ ಅವನನ್ನು ಪೀಡಿಸಲು ಸಾಧ್ಯವಿಲ್ಲ.

ಕ್ಷಮಾ ವೈ ಸಾಧ್ವಮಾಯಾನಾಂ ನಹಿ ಸಾಧ್ವಕ್ಷಮಾ ಸದಾ ।
ಕ್ಷಮಾಯಾಶ್ಚಾಕ್ಷಮಾಯಾಶ್ಚ ವಿದ್ಧಿ ಪಾರ್ಥ ಪ್ರಯೋಜನಮ್ ॥೨೯॥

ಸಾಧುವಿಗೆ ಕ್ಷಮೆಯನ್ನು ತೋರಿಸದೆ ಯಾವಾಗಲೂ ಕ್ಷಮಿಸದಿರುವುದು ಸಾಧುವಲ್ಲ. ಎಲೈ ಪಾರ್ಥನೇ! ಕ್ಷಮೆ ಮತ್ತು ಅಕ್ಷಮೆಗಳ ಪ್ರಯೋಜನವನ್ನು ನೀನು ತಿಳಿಯಬೇಕು.

ವಿಜಿತ್ಯ ಕ್ಷಮಮಾಣಸ್ಯ ಯಶೋ ರಾಜ್ಞೋ ವಿವರ್ಧತೇ ।
ಮಹಾಪರಾಧೇ ಹ್ಯಪ್ಯಸ್ಮಿನ್ ವಿಶ್ವಸಂತ್ಯಪಿ ಶತ್ರವಃ ॥೩೦॥

ಶತ್ರುವನ್ನು ಜಯಿಸಿ ಕ್ಷಮಿಸುವ ರಾಜನ ಯಶಸ್ಸು ಹೆಚ್ಚುತ್ತದೆ. ಅವನು ಮಹಾಪರಾಧವನ್ನು ಮಾಡಿದ್ದರೂ ಶತ್ರುಗಳು ಅವನಲ್ಲಿ ವಿಶ್ವಾಸವನ್ನು ಮಾಡುತ್ತಾರೆ.

ಮನ್ಯಂತೇ ಕರ್ಶಯಿತ್ವಾತು ಕ್ಷಮಾ ಸಾಧ್ವೀತಿ ಶಾಂಬರಾಃ ।
ಅಸಂತಪ್ತಂ ತು ಯದ್ ದಾರು ಪ್ರತ್ಯೇತಿ ಪ್ರಕೃತಿಂ ಪುನಃ ॥೩೧॥

ಸನ್ನಿಪಾತೋ ನ ಮಂತವ್ಯಃ ಶಕ್ಯೇ ಸತಿ ಕಥಂಚನ।
ಸಾಂತ್ವಭೇದಪ್ರದಾನಾನಾಂ ಯುದ್ಧಮುತ್ತರಮುಚ್ಯತೇ ॥೨೨॥

ಸಾಮಭೇದದಾನಗಳಿಂದ ಅರ್ಥವನ್ನು ಸಾಧಿಸಲು ಸಾಧ್ಯವಾದರೆ ಸಂಘರ್ಷ-ವನ್ನು ಮಾಡಬೇಕೆಂದು ಯಾವರೀತಿಯಿಂದಲೂ ಯೋಚಿಸಬಾರದು. ಯುದ್ಧವು ಕೊನೆಯ ಉಪಾಯವೆಂದು ಹೇಳಲ್ಪಡುತ್ತದೆ.

ಸಂಸರ್ಪಣಾದ್ಧಿ ಸೇನಾಯಾ ಭಯಂ ಭೀರೂನ್ ಪ್ರಬಾಧತೇ।
ವಜ್ರಾದಿವ ಪ್ರಜ್ವಲಿತಾದಿಯಂ ಕ್ವನು ಪತಿಷ್ಯತಿ ॥೨೩॥

ಸೈನ್ಯದ ಚಲನೆಯಿಂದ ಭೀರುಗಳಿಗೆ ಜ್ವಲಿಸುವ ವಜ್ರಾಯುಧದಿಂದ ಉಂಟಾ-ಗುವಂತೆ ಇದು ಎಲ್ಲಿ ಎರಗುವುದೋ ಎಂಬ ಭಯವು ಕಾಡುತ್ತದೆ.

ಅಭಿಪ್ರಯತಾಂ ಸಮಿತಿಂ ಜ್ಞಾತ್ವಾ ಯೇ ಪ್ರತಿಯಾಂತ್ಯಥ।
ತೇಷಾಂ ಸ್ಯಂದಂತಿ ಗಾತ್ರಾಣಿ ಯೋಧಾನಾಂ ವಿಷಯಸ್ಯ ಚ ॥೨೪॥

ಸೈನ್ಯವು ಹೊರಟಿದೆಯೆಂದು ತಿಳಿದು ಯಾವ ಶತ್ರುಗಳು ಎದುರಾಗಿ ಬರು-ತ್ತಾರೆಯೋ ಅವರ ಯೋಧರ ಶರೀರವೂ ಮತ್ತು ದೇಶವೂ ಸಹ ನಡುಗುತ್ತದೆ.

ವಿಜಯಾದ್ ವ್ಯಥತೇ ರಾಜನ್ ಸರ್ವಃ ಸಸ್ಥಾಸ್ನುಜಂಗಮಃ।
ಶಸ್ತ್ರಪ್ರತಾಪತಪ್ತಾನಾಂ ಮಜ್ಜಾ ಸೀದತಿ ದೇಹಿನಾಮ್ ॥೨೫॥

ಎಲೈ ರಾಜನೇ! ವಿರುದ್ಧಪಕ್ಷದ ಜಯದಿಂದ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳಿಗೆ ವ್ಯಥೆಯುಂಟಾಗುತ್ತದೆ. ಶಸ್ತ್ರಪ್ರತಾಪಕ್ಕೆ ಸಿಲುಕಿದವರ ಮಜ್ಜೆಯು ನಾಶವನ್ನು ಹೊಂದುತ್ತದೆ. (ಲಕ್ಷಾಲಂಕಾರ)

ತೇಷಾಂ ಸಾಂತ್ವಂ ಕ್ರೂರಮಿಶ್ರಂ ಪ್ರಣೇತವ್ಯಂ ಪುನಃಪುನಃ।
ಸಂಪೀಡ್ಯಮಾನಾ ಹಿ ಪರೇ ಯೋಗಮಾಯಾಂತಿ ಸರ್ವಶಃ ॥೨೬॥

ಅವರಿಗೆ ಪುನಃ ಪುನಃ ಕ್ರೂರಮಿಶ್ರಿತವಾದ ಸಾಂತ್ವವಚನವನ್ನು ಹೇಳಬೇಕು.

ಹಾಗಲ್ಲದೇ ಹೆಚ್ಚಾಗಿ ಪೀಡಿಸಿದರೆ ಶತ್ರುಗಳು ಇವನ ಬೇರೆಯ ಶತ್ರುಗಳ ಜೊತೆಯಲ್ಲಿ ಸೇರುತ್ತಾರೆ.

ಆಂತರಾಣಾಂ ಚ ಭೇದಾರ್ಥಂ ಚಾರಾನಭ್ಯವಚಾರಯೇತ್ ।
ಯಶ್ಚ ತಸ್ಮಾತ್ ಪರೋ ರಾಜಾ ತೇನ ಸಂಧಿಃ ಪ್ರಶಸ್ಯತೇ ॥೨೭॥

ಶತ್ರುಪಕ್ಷದ ಒಳಗಿನ ಜನರ ಭೇದಾರ್ಥವಾಗಿ ಗೂಢಚಾರರನ್ನು ನಿಯಮಿಸಬೇಕು. ತನಗಿಂತ ಬಲಿಷ್ಠನಾದ ರಾಜನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದು ಪ್ರಶಸ್ತವಾದುದು.

ನಹಿ ತಸ್ಯಾನ್ಯಥಾ ಪೀಡಾ ಶಕ್ಯಾ ಕರ್ತುಂ ತಥಾವಿಧಾ ।
ಯಥಾ ಸಾರ್ಧಮಮಿತ್ರೇಣ ಸರ್ವತಃ ಪ್ರತಿಬಾಧನಮ್ ॥೨೮॥

ಅವನ ಶತ್ರುಗಳ ಜೊತೆಯಲ್ಲಿ ಸೇರಿ ಅವನನ್ನು ಪೀಡಿಸುವುದನ್ನು ಬಿಟ್ಟು, ಬೇರೆಯ ವಿಧಾನದಿಂದ ಅವನನ್ನು ಪೀಡಿಸಲು ಸಾಧ್ಯವಿಲ್ಲ.

ಕ್ಷಮಾ ವೈ ಸಾಧ್ವಮಾಯಾನಾಂ ನಹಿ ಸಾಧ್ವಕ್ಷಮಾ ಸದಾ ।
ಕ್ಷಮಾಯಾಶ್ಚಾಕ್ಷಮಾಯಾಶ್ಚ ವಿದ್ಧಿ ಪಾರ್ಥ ಪ್ರಯೋಜನಮ್ ॥೨೯॥

ಸಾಧುವಿಗೆ ಕ್ಷಮೆಯನ್ನು ತೋರಿಸದೆ ಯಾವಾಗಲೂ ಕ್ಷಮಿಸದಿರುವುದು ಸಾಧುವಲ್ಲ. ಎಲೈ ಪಾರ್ಥನೇ! ಕ್ಷಮೆ ಮತ್ತು ಅಕ್ಷಮೆಗಳ ಪ್ರಯೋಜನವನ್ನು ನೀನು ತಿಳಿಯಬೇಕು.

ವಿಜಿತ್ಯ ಕ್ಷಮಮಾಣಸ್ಯ ಯಶೋ ರಾಜ್ಞೋ ವಿವರ್ಧತೇ ।
ಮಹಾಪರಾಧೇ ಹ್ಯಪ್ಯಸ್ಮಿನ್ ವಿಶ್ವಸಂತ್ಯಪಿ ಶತ್ರವಃ ॥೩೦॥

ಶತ್ರುವನ್ನು ಜಯಿಸಿ ಕ್ಷಮಿಸುವ ರಾಜನ ಯಶಸ್ಸು ಹೆಚ್ಚುತ್ತದೆ. ಅವನು ಮಹಾಪರಾಧವನ್ನು ಮಾಡಿದ್ದರೂ ಶತ್ರುಗಳು ಅವನಲ್ಲಿ ವಿಶ್ವಾಸವನ್ನು ಮಾಡುತ್ತಾರೆ.

ಮನ್ಯಂತೇ ಕರ್ಶಯಿತ್ವಾತು ಕ್ಷಮಾ ಸಾಧ್ವೀತಿ ಶಾಂಬರಾಃ ।
ಅಸಂತಪ್ತಂ ತು ಯದ್ ದಾರು ಪ್ರತ್ಯೇತಿ ಪ್ರಕೃತಿಂ ಪುನಃ ॥೩೧॥

ಶಾಂಬರರು ಮೊದಲು ದುಃಖಕ್ಕೆ ಈಡು ಮಾಡಿ ಅನಂತರ ಕ್ಷಮಿಸುವುದು ಒಳ್ಳೆಯದು ಎಂದು ತಿಳಿಯುತ್ತಾರೆ. ಕಾಯಿಸದಿದ್ದ ಮರವು ಮೊದಲಿನ ಸ್ಥಿತಿಗೆ ಬರುತ್ತದೆ. (ಎಂದು ಅವರ ವಾದ)

ನೈತತ್ ಪ್ರಶಂಸಂತ್ಯಾಚಾರ್ಯಾ ನ ಚೈತತ್ ಸಾಧು ದರ್ಶನಮ್ ।
ಅಕ್ರೋಧೇನಾವಿನಾಶೇನ ನಿಯಂತವ್ಯಾಃ ಸ್ವಪುತ್ರವತ್ ॥೩೨॥

ಆದರೆ ಆಚಾರ್ಯರು ಇದನ್ನು ಪ್ರಶಂಸಿಸುವುದಿಲ್ಲ. ಇದು ಸರಿಯಾದ ನೀತಿಯಲ್ಲ. ವಿನಾಶವನ್ನು ಮಾಡದೇ ಕ್ರೋಧವನ್ನು ಮಾಡದೇ ಶತ್ರುಗಳನ್ನು ತನ್ನ ಮಕ್ಕಳಂತೆ ನಿಯಂತ್ರಿಸಬೇಕು.

ದ್ವೇಷ್ಯೋ ಭವತಿ ಭೂತಾನಾಮುಗ್ರೋ ರಾಜಾ ಯುಧಿಷ್ಠಿರ।
ಮೃದುಮಪ್ಯವಮನ್ಯಂತೇ ತಸ್ಮಾದುಭಯಭಾಗ್ ಭವೇತ್ ॥೩೩॥

ಎಲೈ ಯುಧಿಷ್ಠಿರನೇ! ಉಗ್ರನಾದ ರಾಜನು ಎಲ್ಲರಿಗೂ ದ್ವೇಷವಿಷಯನಾಗುತ್ತಾನೆ. ಮೃದುವು ಅವಮಾನಿತವಾಗುತ್ತಾನೆ. ಆದ್ದರಿಂದ ಉಗ್ರತೆಯನ್ನು, ಮಾರ್ದವವನ್ನು ಎರಡನ್ನೂ ಹೊಂದಬೇಕು.

ಪ್ರಹರಿಷ್ಯನ್ ಪ್ರಿಯಂ ಬ್ರೂಯಾತ್ ಪ್ರಹರನ್ನಪಿ ಭಾರತ।
ಪ್ರಹೃತ್ಯ ಚ ಪ್ರಿಯಂ ಬ್ರೂಯಾಚ್ಛೋಚನ್ನಿವ ರುದನ್ನಿವ ॥೩೪॥

ಮುಂದೆ ಪ್ರಹಾರವನ್ನು ಮಾಡುವುದಿದ್ದರೂ ಪ್ರಿಯವನ್ನು ಮಾತನಾಡಬೇಕು. ಪ್ರಹಾರವನ್ನು ಮಾಡುತ್ತಾ ಪ್ರಿಯವನ್ನು ಮಾತನಾಡಬೇಕು. ಪ್ರಹಾರವನ್ನು ಮಾಡುತ್ತಾ ಶೋಕಿಸುವವನಂತೆ ಪ್ರಿಯವನ್ನು ಮಾತನಾಡಬೇಕು.

ನ ಮೇ ಪ್ರಿಯಂ ಯನ್ನಿಹತಾಃ ಸಂಗ್ರಾಮೇ ಮಾಮಕೈರ್ನರೈಃ।
ನ ಚ ಕುರ್ವಂತಿ ಮೇ ವಾಕ್ಯಮುಚ್ಯಮಾನಂ ಪುನಃ ಪುನಃ ॥೩೫॥

ಅಹೋ ಜೀವಿತಮಾಕಾಂಕ್ಷೇನ್ನೇದೃಶೋ ವಧಮರ್ಹತಿ।
ಸುದುರ್ಲಭಾಃ ಸುಪುರುಷಾಃ ಸಂಗ್ರಾಮೇಷ್ವಪಲಾಯಿನಃ ॥೩೬॥

ಕೃತಂ ಮಮಾಪ್ರಿಯಂ ತೇನ ಯೇನಾಯಂ ನಿಹತೋ ಮೃಧೇ।
ಇತಿ ವಾಚಾ ವದನ್ ಹಂತೄನ್ ಪೂಜಯೇತ ರಹೋಗತಃ ॥೩೭॥

"ಶತ್ರುಪಕ್ಷದ ಈ ಯೋಧರು ನನ್ನವರಿಂದ ಯುದ್ಧದಲ್ಲಿ ಹತರಾಗುವುದು ನನಗೆ ಪ್ರಿಯವಲ್ಲ. ನನ್ನ ಯೋಧರು ಪುನಃ ಪುನಃ ನಾನು ಹೇಳಿದರೂ ನನ್ನ ಮಾತನ್ನು ಕೇಳುವುದಿಲ್ಲ. ಅಯ್ಯೋ ಇಂತಹವರು ಜೀವಿಸಿರಬೇಕು. ಇಂತಹವರು ವಧೆಗೆ ಯೋಗ್ಯರಲ್ಲ. ಯುದ್ಧದಲ್ಲಿ ಹಿಮ್ಮೆಟ್ಟದಿರುವ ಸತ್ಪುರುಷರು ಬಹಳ ದುರ್ಲಭ-ರಾದವರು. ಯಾವ ನನ್ನ ಯೋಧನು ಇವನನ್ನು ಕೊಂದಿದ್ದಾನೆಯೋ ಅವನು ನನಗೆ ಅಪ್ರಿಯವನ್ನು ಮಾಡಿದ್ದಾನೆ" ಹೀಗೆ ಮಾತನಾಡುತ್ತಾ ವಧೆಯನ್ನು ಮಾಡಿದವರನ್ನು ರಹಸ್ಯದಲ್ಲಿ ಸತ್ಕರಿಸಬೇಕು.

ಹಂತೄಣಾಂ ಚ ಹತಾನಾಂ ಚ ಪೂಜಾಂ ಕುರ್ಯಾದ್ ಯಥಾರ್ಹತಃ।
ಕ್ರೋಶೇದ್ ಬಾಹುಂ ಪ್ರಗೃಹ್ಯಾಪಿ ಚಿಕೀರ್ಷನ್ ಜನಸಂಗ್ರಹಮ್ ॥೩೮॥

ವಧೆ ಮಾಡಿದವರನ್ನು ಮತ್ತು ಮೃತರಾದವರನ್ನು ಯಥಾಯೋಗ್ಯವಾಗಿ ಪೂಜಿಸಬೇಕು. ಜನಸಂಗ್ರಹವನ್ನು ಮಾಡುವ ದೃಷ್ಟಿಯಿಂದ ಬಾಹುಗಳನ್ನು ಎತ್ತಿ ಕಿರುಚಬೇಕು.

ಏವಂ ಸರ್ವಾಸ್ವವಸ್ಥಾಸು ಸಾಂತ್ವಪೂರ್ವಂ ಸಮಾಚರನ್।
ಪ್ರಿಯೋ ಭವತಿ ಭೂತಾನಾಂ ಧರ್ಮಜ್ಞೋ ವೀತಭೀರ್ನೃಪಃ ॥೩೯॥

ಹೀಗೆ ಎಲ್ಲ ಅವಸ್ಥೆಗಳಲ್ಲಿಯೂ ಸಾಂತ್ವಪೂರ್ವಕವಾಗಿಯೇ ವರ್ತಿಸುವ ಧರ್ಮಜ್ಞನಾದ ರಾಜನು ಎಲ್ಲರಿಗೂ ಪ್ರಿಯನೂ ಮತ್ತು ವೀತಭಯನೂ ಆಗುವನು.

ವಿಶ್ವಾಸಂ ಚಾತ್ರ ಗಚ್ಛಂತಿ ಸರ್ವಭೂತಾನಿ ಭಾರತ।
ವಿಶ್ವಸ್ತಃ ಶಕ್ಯತೇ ಭೋಕ್ತುಂ ಯಥಾಕಾಮಮುಪಸ್ಥಿತಃ ॥೪೦॥

ಎಲೈ ಭಾರತನೇ! ಅಂತಹ ರಾಜನಲ್ಲಿ ಎಲ್ಲರೂ ವಿಶ್ವಾಸವನ್ನು ಮಾಡುತ್ತಾರೆ.

ಪ್ರಜೆಗಳಲ್ಲಿ ವಿಶ್ವಾಸವನ್ನು ಹೊಂದಿದ ರಾಜನು ಭೂಮಿಯನ್ನು ತನ್ನ ಇಚ್ಛೆಗೆ ಅನುಗುಣವಾಗಿ ಭೋಗಿಸಲು ಸಮರ್ಥನಾಗುತ್ತಾನೆ.

ತಸ್ಮಾದ್ ವಿಶ್ವಾಸಯೇದ್ ರಾಜಾ ಸರ್ವಭೂತಾನ್ಯಮಾಯಯಾ।
ಸರ್ವತಃ ಪರಿರಕ್ಷೇಚ್ಚ ಯೋ ಮಹೀಂ ಭೋಕ್ತುಮಿಚ್ಛತಿ ॥೪೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರಧಿಕಶತತಮೋಽಧ್ಯಾಯಃ ॥೧೦೪॥

ಆದ್ದರಿಂದ ಯಾವ ರಾಜನು ಭೂಮಿಯನ್ನು ಭೋಗಿಸಲು ಇಚ್ಛಿಸುತ್ತಾನೆಯೋ ಅವನು ತನ್ನನ್ನು ಎಲ್ಲ ರೀತಿಯಲ್ಲಿಯೂ ರಕ್ಷಿಸಿಕೊಂಡು ಸರ್ವಜೀವರನ್ನು ನಿಷ್ಕಪಟ-ವೃತ್ತಿಯಿಂದ ತನ್ನಲ್ಲಿ ವಿಶ್ವಾಸ ಹೊಂದುವಂತೆ ಮಾಡಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೪ನೆಯ ಅಧ್ಯಾಯವು ಮುಗಿಯಿತು.

—0—

೧೦೫. ನೂರ ಐದನೆಯ ಅಧ್ಯಾಯ

ಶತ್ರುಜಯಸಂಪಾದಕ ಇಂದ್ರಬೃಹಸ್ಪತಿಸಂವಾದಾನುವಾದ

ಯುಧಿಷ್ಠಿರಃ

ಕಥಂ ಮೃದೌ ಕಥಂ ತೀಕ್ಷ್ಣೇ ಮಹಾಪಕ್ಷೇ ಚ ಪಾರ್ಥಿವ।
ಅರೌ ವರ್ತೇತ ನೃಪತಿಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಎಲೈ ರಾಜನೇ! ಪಿತಾಮಹನೇ! ಮೃದುವಾದ ತೀಕ್ಷ್ಣವಾದ ಮಹಾಸೈನ್ಯವುಳ್ಳ ಶತ್ರುವಿನ ವಿಷಯದಲ್ಲಿ ರಾಜನು ಹೇಗೆ ನಡೆದುಕೊಳ್ಳಬೇಕೆಂದು ನನಗೆ ಹೇಳು

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಬೃಹಸ್ಪತೇಶ್ಚ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿಯೂ ಸಹ ಇಂದ್ರನಿಗೂ ಮತ್ತು ಬೃಹಸ್ಪತಿಗೂ ನಡೆದ ಸಂವಾದರೂಪವಾದ ಪ್ರಾಚೀನವಾದ ಈ ಇತಿಹಾಸವನ್ನು ಹೇಳುತ್ತಾರೆ.

ಬೃಹಸ್ಪತಿಂ ದೇವಪತಿರಭಿವಾದ್ಯ ಕೃತಾಂಜಲಿಃ।
ಉಪಸಂಗಮ್ಯ ಪಪ್ರಚ್ಛ ವಾಸವಃ ಪರವೀರಹಾ ॥೩॥

ದೇವಪತಿಯೂ ಪರವೀರಘಾತಕನೂ ಆದ ಇಂದ್ರನು ಬೃಹಸ್ಪತಿಗಳನ್ನು ಸಮೀಪಿಸಿ ಕೈಮುಗಿದು ಪ್ರಶ್ನೆ ಮಾಡಿದನು.

ಅಹಿತೇಷು ಕಥಂ ಬ್ರಹ್ಮನ್ ವರ್ತಯೇಯಮತಂದ್ರಿತಃ।
ಅಸಮುಚ್ಛಿದ್ಯ ಚೈವೇನಾನ್ ನಿಯಚ್ಛೇಯಮುಪಾಯತಃ ॥೪॥

ಎಲೈ ಬ್ರಾಹ್ಮಣರೇ! ಶತ್ರುಗಳ ವಿಷಯದಲ್ಲಿ ಎಚ್ಚರಿಕೆಯಿಂದ ಹೇಗೆ ನಡೆದುಕೊಳ್ಳಲಿ? ಅವರನ್ನು ಸಂಪೂರ್ಣವಾಗಿ ನಾಶಮಾಡದೇ ಉಪಾಯದಿಂದ ನಿಯಂತ್ರಿಸುವ ಬಗೆ ಹೇಗೆ?

ಸೇನಯೋರ್ವ್ಯತಿಷಂಗೇಣ ಜಯಃ ಸಾಧಾರಣೋ ಭವೇತ್।
ಕಿಂ ಕುರ್ವಾಣಂ ನ ಮಾಂ ಜಹ್ಯಾಜ್ಜ್ವಲಿತಾ ಶ್ರೀಃ ಪ್ರತಾಪಿನೀ ॥೫॥

ಸೇನಾಕಾರ್ಯಾಚರಣೆಯಿಂದ ಉಂಟಾಗುವ ಜಯವು ಉಭಯಸಾಧಾರಣವಾಗಿರುತ್ತದೆ. ನಾನು ಏನನ್ನು ಮಾಡಿದರೆ ಶತ್ರುತಾಪಕವಾದ ಜ್ವಲಿಸುವ ಈ ಸಂಪತ್ತು ನನ್ನನ್ನು ಬಿಟ್ಟು ಹೋಗಲಾರದು? (ಎಂದು ಹೇಳಿದನು).

ತತೋ ಧರ್ಮಾರ್ಥಕಾಮಾನಾಂ ಕುಶಲಃ ಪ್ರತಿಮಾನವಾನ್।
ರಾಜಧರ್ಮವಿಧಾನಜ್ಞಃ ಪ್ರತ್ಯುವಾಚ ಪುರಂದರಮ್ ॥೬॥

ಆಗ ಧರ್ಮಾರ್ಥಕಾಮಗಳಲ್ಲಿ ಕುಶಲರೂ, ಪ್ರಮಾಣಜ್ಞರೂ, ರಾಜಧರ್ಮವಿಧಾನಗಳನ್ನು ತಿಳಿದವರೂ ಆದ ಬೃಹಸ್ಪತಿಗಳು ಇಂದ್ರನಿಗೆ ಉತ್ತರವನ್ನು ಕೊಟ್ಟರು.

ನ ಜಾತು ಕಲಹೇನೇಚ್ಛೇನ್ನಿಯಂತುಮಪಕಾರಿಣಃ।
ಬಾಲಸಂಸೇವಿತಂ ಹ್ಯೇತದ್ ಯದಮರ್ಷೋ ಯದಕ್ಷಮಾ।
ನ ಶತ್ರುರ್ವಿವೃತಃ ಕಾರ್ಯೋ ವಧಮಸ್ಯಾಭಿಕಾಂಕ್ಷತಾ ॥೭॥

ಅಪಕಾರಿಗಳನ್ನು ಎಂದೂ ಕಲಹವನ್ನು ಮಾಡಿ ನಿಯಂತ್ರಿಸಲು ಬಯಸ-ಬಾರದು. ಕ್ರೋಧ ಮತ್ತು ಅಸಹನೆ ಎಂಬುದು ಬಾಲಕರಿಂದ ಸೇವಿತವಾದ ಮಾರ್ಗ. ಶತ್ರುವಿನ ವಧೆಯನ್ನು ಅಪೇಕ್ಷಿಸುವವನು ಶತ್ರುವಿಗೆ ಅದು ತಿಳಿಯದಂತೆ ವ್ಯವಹರಿಸಬೇಕು.

ಕ್ರೋಧಂ ಬಲಮಮರ್ಷಂ ಚ ನಿಯಮ್ಯಾತ್ಮಜಮಾತ್ಮನಿ।
ಅಮಿತ್ರಮುಪಸೇವೇತ ವಿಶ್ವಸ್ತವದವಿಶ್ವಸನ್ ॥೮॥

ತನ್ನಲ್ಲಿ ಉಂಟಾದ ಕ್ರೋಧ, ಅಸಹನೆಗಳನ್ನು ತನ್ನಲ್ಲಿಯೇ ನಿಯಂತ್ರಿಸಿ ಶತ್ರುವಿನಲ್ಲಿ ವಿಶ್ವಾಸ ಮಾಡದೇ ವಿಶ್ವಾಸ ಮಾಡುವವನಂತೆ ಅವನನ್ನು ಸೇವಿಸಬೇಕು.

ಪ್ರಿಯಮೇವ ವದೇನ್ನಿತ್ಯಂ ನಾಪ್ರಿಯಂ ಕಿಂಚಿದಾಚರೇತ್।
ವಿರಮೇಚ್ಚುಷ್ಕವೈರೇಭ್ಯಃ ಕಂಠಾಯಾಸಂ ಚ ವರ್ಜಯೇತ್ ॥೯॥

ಅವನಿಗೆ ಪ್ರಿಯವನ್ನೇ ಮಾತನಾಡಬೇಕು. ಅಪ್ರಿಯವಾದ ಏನನ್ನೂ ಮಾಡ-ಬಾರದು. ವ್ಯರ್ಥಕಲಹಗಳನ್ನೂ ಮತ್ತು ಕಂಠಶೋಷಣೆಗಳನ್ನೂ ವರ್ಜಿಸಬೇಕು.

ಯಥಾ ವೈತಂಸಿಕೋ ಯುಕ್ತೋ ದ್ವಿಜಾನಾಂ ಸದೃಶಸ್ವನಃ।
ತಾನ್ ದ್ವಿಜಾನ್ ಕುರುತೇ ವಶ್ಯಾಂಸ್ತಥಾ ಯುಕ್ತೋ ಮಹೀಪತಿಃ ॥೧೦॥

ಹಕ್ಕಿಗಳನ್ನು ಹಿಡಿಯುವವನು ಹೇಗೆ ಹಕ್ಕಿಯ ಸ್ವರದಿಂದಲೇ ಕೂಡಿದವನಾಗಿ ಅವುಗಳನ್ನು ವಶಪಡಿಸಿಕೊಳ್ಳುತ್ತಾನೆಯೋ ರಾಜನು ಅದರಂತೆ ಮಾಡಬೇಕು.

ವಶಂ ಚೋಪನಯೇಚ್ಛತ್ರೂನ್ ನಿಹನ್ಯಾಚ್ಚ ಪುರಂದರ।
ನ ನಿತ್ಯಂ ಪರಿಭೂಯಾರೀನ್ ಸುಖಂ ಸ್ವಪಿತಿ ವಾಸವ।
ಜಾಗರ್ತ್ಯೇವ ಚ ದುಷ್ಪಾತ್ಮಾ ಸಂಕರೇಽಗ್ನಿರಿವೋತ್ಥಿತಃ ॥೧೧॥

ಎಲೈ ಪುರಂದರನೇ! ಶತ್ರುಗಳನ್ನು ವಶಪಡಿಸಿಕೊಂಡು ಅನಂತರ ಕೊಲ್ಲಬೇಕು. ಎಲೈ ಇಂದ್ರನೇ! ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿದವನು ಎಂದೂ ಸುಖವಾಗಿ ನಿದ್ರಿಸುವುದಿಲ್ಲ. ದುಷ್ಟನಾದ ಶತ್ರುವು ತಿಪ್ಪೆಯಲ್ಲಿನ ಅಗ್ನಿಯಂತೆ ಯಾವಾಗಲೂ ಎಚ್ಚರಿಕೆಯಿಂದಿರುತ್ತಾನೆ.

ನ ಸನ್ನಿಪಾತಃ ಕರ್ತವ್ಯಃ ಸಾಮಾನ್ಯೇ ವಿಜಯೇ ಸತಿ।
ವಿಶ್ವಾಸ್ಯೈವೋಪಸನ್ಹ್ಯಸ್ಯೇ ವಶೇ ಕೃತ್ವಾರಿಪುಃ ಪ್ರಭೋ ॥೧೨॥

ಜಯವು ಉಭಯಸಾಧಾರಣವಾಗಬಹುದಾದಾಗ ಸಂಘರ್ಷವನ್ನು ಮಾಡಬಾರದು. ಎಲೈ ಪ್ರಭುವೇ! ಶತ್ರುವನ್ನು ವಿಶ್ವಾಸಗೊಳಿಸಿ ವಶಪಡಿಸಿಕೊಂಡು ಅನಂತರ ಅವನನ್ನು ಬಗ್ಗಿಸಬೇಕು.

ಸಂಪ್ರಧಾರ್ಯ ಸಹಾಮಾತ್ಯೈರ್ಮಂತ್ರವಿದ್ಭಿರ್ಮಹಾತ್ಮಭಿಃ।
ಉಪೇಕ್ಷ್ಯಮಾಣೋऽವಜ್ಞಾತೋ ಹೃದಯೇನಾಪರಾಜಿತಃ ॥೧೩॥

ಶತ್ರುವಿನಿಂದ ಅವಮಾನಕ್ಕೆ ಒಳಗಾದರೂ, ಉಪೇಕ್ಷೆಗೆ ಒಳಗಾದರೂ ರಾಜನು ಮನಸ್ಸಿನಲ್ಲಿ ಧೈರ್ಯವನ್ನು ಕಳೆದುಕೊಳ್ಳದೇ ಅಪರಾಜಿತನಾಗಿ ಮಹಾತ್ಮರೂ, ಮಂತ್ರವೇತ್ತರೂ ಆದ ಅಮಾತ್ಯರ ಜೊತೆಯಲ್ಲಿ ಚರ್ಚೆಯನ್ನು ಮಾಡಿ ವ್ಯವಹರಿಸಬೇಕು.

ಅಥಾಸ್ಯ ಪ್ರಹರೇತ್ ಕಾಲೇ ಕಿಂಚಿದ್ ವಿಚಲಿತೇ ಪದೇ।
ದಂಡಂ ಚ ದೂಷಯೇದಸ್ಯ ಪುರುಷೈರಾಪ್ತಕಾರಿಭಿಃ ॥೧೪॥

ಅನಂತರ ಶತ್ರುವು ಒಂದು ತಪ್ಪು ಹೆಜ್ಜೆಯನ್ನು ಇಟ್ಟಾಗ, ಯೋಗ್ಯವಾದ ಆ ಕಾಲದಲ್ಲಿ ಅವನ ಮೇಲೆ ಎರಗಬೇಕು. ಆಪ್ತಕಾರಿಗಳಾದ ಭಟರಿಂದ ಅವನ ಸೈನ್ಯವನ್ನು ದೂಷಿಸಬೇಕು.

ಆದಿಮಧ್ಯಾವಸಾನಜ್ಞಃ ಪ್ರಚ್ಛನ್ನಂ ಚ ವಿಚಾರಯೇತ್।
ಬಲಾನಿ ದೂಷಯೇದಸ್ಯ ಜಾನಂಶ್ಚೈವ ಪ್ರಮಾಣತಃ ॥೧೫॥

ಭೇದೇನೋಪಪ್ರದಾನೇನ ಸಂಸೃಜನ್ನೌಷಧೈಸ್ತಥಾ ।
ನ ತ್ವೇವ ಖಲು ಸಂಸರ್ಗಂ ರೋಚಯೇದರಿಭಿಃ ಸಹ ॥೧೬॥

ಮಾಡಬೇಕಾದ ಕಾರ್ಯದ ಆದಿ-ಮಧ್ಯಾಂತ್ಯಗಳನ್ನು ಯಾರಿಗೂ ತಿಳಿಯದಂತೆ ವಿಚಾರ ಮಾಡಬೇಕು. ಅವನ ಸೈನ್ಯದ ಪ್ರಮಾಣವನ್ನು ತಿಳಿದು ಅದನ್ನು ಭೇದೋಪಾಯದಿಂದಲೂ ದಾನೋಪಾಯದಿಂದಲೂ ಔಷಧಪ್ರಯೋಗಗಳಿಂದಲೂ ದೂಷಿಸಬೇಕು. ಶತ್ರುಗಳ ಜೊತೆಯಲ್ಲಿ ಯಾವಾಗಲೂ ಸಂಘರ್ಷವನ್ನು ಬಯಸಬಾರದು

ದೀರ್ಘಕಾಲಮಪಿ ಕ್ಷಾಂತ್ವಾ ವಿಹನ್ಯಾದೇವ ಶಾತ್ರವಾನ್ ।
ಕಾಲಕಾಂಕ್ಷೀ ಯಾಪಯೇಚ್ಚ ಯಥಾ ವಿಸ್ರಂಭಮಾಪ್ನುಯುಃ ॥೧೭॥

ದೀರ್ಘಕಾಲದವರೆಗೂ ಕ್ಷಮಿಸಿ ಅನಂತರ ಶತ್ರುಗಳನ್ನು ಕೊಲ್ಲಬೇಕು. ಕಾಲವನ್ನು ನಿರೀಕ್ಷಿಸುವವನು ಶತ್ರುಗಳು ತನ್ನಲ್ಲಿ ವಿಶ್ವಾಸವನ್ನು ತಾಳುವವರೆಗೆ ಕಾಲವನ್ನು ಕಳೆಯಬೇಕು.

ನ ಸದ್ಯೋಽರೀನ್ ವಿನಿರ್ಹನ್ಯಾದ್ ದ್ರಷ್ಟವ್ಯೋ ವಿಜಯೋ ಧ್ರುವಃ ।
ನ ಯಃ ಶಲ್ಯಂ ಘಟ್ಟಯತಿ ನವಂ ಚ ಕುರುತೇ ವ್ರಣಮ್ ॥೧೮॥

ತನಗೆ ನಿಶ್ಚಯವಾಗಿ ವಿಜಯವುಂಟಾಗುತ್ತದೆ ಎಂದು ತಿಳಿದು ಶತ್ರುವಿನ ಮೇಲೆ ದಾಳಿ ಮಾಡಬೇಕು. ಸುಮ್ಮನೇ ತತ್ಕ್ಷಣದಲ್ಲಿ ದಾಳಿ ಮಾಡಬಾರದು. ಶತ್ರುವನ್ನು ಕೊಲ್ಲದೇ ದಾಳಿಯನ್ನು ಮಾಡಿದರೆ ಈಟಿಯಿಂದ ಇರಿದು ಇನ್ನೊಂದು ಹೊಸ ವ್ರಣವನ್ನು ಮಾಡಿದಂತೆ. (ಆಗ ಶತ್ರುವು ಇನ್ನೂ ವಿರೋಧಿಯಾಗುತ್ತಾನೆ).

ಪ್ರಾಪ್ತೇ ಚ ಪ್ರಹರೇತ್ ಕಾಲೇ ನ ಸ ಸಂವರ್ತತೇ ಪುನಃ ।
ಹಂತುಕಾಮಸ್ಯ ದೇವೇಂದ್ರ ಪುರುಷಸ್ಯ ರಿಪುಂ ಪ್ರತಿ ॥೧೯॥

ಯಃ ಕಾಲೋ ಹಿ ವ್ಯತಿಕ್ರಾಮೇತ್ ಪುರುಷಂ ಕಾಲಕಾಂಕ್ಷಿಣಮ್ ।
ದುರ್ಲಭಃ ಸ ಪುನಃ ಕಾಲಃ ಕಾಲಧರ್ಮಚಿಕೀರ್ಷಣಾ ॥೨೦॥

ಯೋಗ್ಯವಾದ ಕಾಲವು ಪ್ರಾಪ್ತವಾದಾಗ ಶತ್ರುವು ಪುನಃ ಹಿಂದಿರುಗದಂತೆ ಅವನಿಗೆ ಪ್ರಹಾರವನ್ನು ಮಾಡಬೇಕು. ಎಲೈ ದೇವೇಂದ್ರನೇ! ಶತ್ರುವನ್ನು ಕೊಲ್ಲಲು ಬಯಸಿದ ರಾಜನು ಕಾಲವನ್ನು ನಿರೀಕ್ಷಿಸುತ್ತಾ ಯೋಗ್ಯವಾದ ಆ ಕಾಲವು ಒದಗಿದಾಗ ಅದನ್ನು ಉಪಯೋಗಿಸಿಕೊಳ್ಳದೇ ಕಾಲವು ಅತಿಕ್ರಾಂತವಾದರೆ ಅಂತಹ ಕರ್ಮವನ್ನು ಮಾಡಲು ಅಪೇಕ್ಷಿಸಿದ ರಾಜನಿಗೆ ಇನ್ನೊಮ್ಮೆ ಅಂತಹ ಕಾಲವು ದೊರೆಯಲಾರದು.

ಔರ್ಜಸ್ಥ್ಯಂ ವಿಜಯೇದೇವಂ ಸಂಗೃಹ್ಣನ್ ಸಾಧುಸಮ್ಮತಾನ್ ।
ಕಾಲೇನ ಸಾಧಯೇನ್ನಿತ್ಯಂ ನಾಪ್ರಾಪ್ತೇऽಭಿನಿಪೀಡಯೇತ್ ॥೨೧॥

ಸಜ್ಜನರಾದವರನ್ನು ಸಂಗ್ರಹಿಸಿ ಬಲಿಷ್ಠನಾದ ಶತ್ರುವನ್ನು ಹೀಗೆ ಜಯಿಸಬೇಕು. ಯೋಗ್ಯವಾದ ಕಾಲದಲ್ಲಿ ಕಾರ್ಯವನ್ನು ಸಾಧಿಸಬೇಕು. ಅಂತಹ ಕಾಲವು ಪ್ರಾಪ್ತವಾಗದಿದ್ದಾಗ ಶತ್ರುವನ್ನು ಪೀಡಿಸಬಾರದು.

ವಿಹಾಯ ಕಾಮಂ ಕ್ರೋಧಂ ಚ ತಥಾऽಹಂಕಾರಮೇವ ಚ ।
ಯುಕ್ತೋ ವಿವರಮನ್ವಿಚ್ಛೇದಹಿತಾನಾಂ ಪುರಂದರ ॥೨೨॥

ಎಲೈ ಪುರಂದರನೇ! ಕಾಮಕ್ರೋಧಾಹಂಕಾರಗಳನ್ನು ಬಿಟ್ಟು ಎಚ್ಚರಿಕೆಯಿಂದಿದ್ದು ಶತ್ರುಗಳ ಛಿದ್ರವನ್ನು ಅನ್ವೇಷಣೆ ಮಾಡಬೇಕು.

ಮಾರ್ದವಂ ದಂಡ ಆಲಸ್ಯಂ ಪ್ರಮಾದಶ್ಚ ಸುರೋತ್ತಮ ।
ಮಾಯಾಶ್ಚ ವಿವಿಧಾಃ ಶಕ್ರ ಸಾದಯಂತ್ಯವಿಚಕ್ಷಣಮ್ ॥೨೩॥

ಎಲೈ ಸುರೋತ್ತಮನೇ! ಇಂದ್ರನೇ! ಮೃದುತನ, ದಂಡ, ಆಲಸ್ಯ ಮತ್ತು ಪ್ರಮಾದಗಳು ಮತ್ತು ವಿವಿಧವಾದ ಕಪಟಗಳು ಅವಿವೇಕಿಯನ್ನು ಕೊಲ್ಲುತ್ತವೆ.

ನಿಹತ್ಯೈತಾನಿ ಚತ್ವಾರಿ ಮಾಯಾಂ ಪ್ರತಿವಿಧಾಯ ಚ ।
ತತಃ ಶಕ್ನೋತಿ ಶತ್ರೂಣಾಂ ಪ್ರಹರ್ತುಮವಿಚಾರಯನ್ ॥೨೪॥

ಮಾರ್ದವ, ದಂಡ, ಆಲಸ್ಯ ಮತ್ತು ಪ್ರಮಾದ ಈ ನಾಲ್ಕನ್ನು ಪರಿತ್ಯಜಿಸಿ

ಶತ್ರುವಿನ ಮಾಯೆಗೆ ಪ್ರತಿಮಾಯೆಯನ್ನು ಮಾಡಿ ರಾಜನು ಬೇರೆ ಏನನ್ನೂ ವಿಚಾರ ಮಾಡದೇ ಶತ್ರುಗಳ ಮೇಲೆ ಪ್ರಹಾರ ಮಾಡಲು ಶಕ್ತನಾಗುತ್ತಾನೆ.

ಯದೈವೈಕೇನ ಶಕ್ಯೇತ ಗುಹ್ಯಂ ಕರ್ತುಂ ತದಾಚರೇತ್ ।
ಯಚ್ಛಂತಿ ಸಚಿವಾ ಗುಹ್ಯಂ ಮಿಥೋ ವಿದ್ರಾವಯಂತ್ಯಪಿ ॥೨೫॥

ಒಬ್ಬನೇ ಮಾಡಲು ಸಾಧ್ಯವಾಗುವ ಕೆಲಸವನ್ನು ಗುಪ್ತವಾಗಿಯೇ ಮಾಡಬೇಕು. ಸಚಿವರು ಪರಸ್ಪರವಾಗಿ ಮಾತನಾಡಿಕೊಂಡು ಅಂತಹ ಗುಪ್ತವಾದ ಸಲಹೆಯನ್ನು ಕೊಡುತ್ತಾರೆ.

ಅಶಕ್ಯಮಿತಿ ಕೃತ್ವಾವಾ ತತೋಽನ್ಯೈಃ ಸಂವಿದಂ ಚರೇತ್ ।
ಬ್ರಹ್ಮದಂಡಮದೃಷ್ಟೇಷು ದೃಷ್ಟೇಷು ಚತುರಂಗಿಣೀಮ್ ॥೨೬॥

ಒಬ್ಬರಿಂದ ಮಾಡಲು ಸಾಧ್ಯವಾಗದಿದ್ದರೆ ಮಾತ್ರ ಬೇರೆಯವರ ಜೊತೆಯಲ್ಲಿ ವಿಚಾರ ಮಾಡಬೇಕು. ಕಣ್ಣಿಗೆ ಕಾಣದ ಪ್ರತಿರೋಧಗಳಿಗೆ ಬ್ರಾಹ್ಮಣರಿಂದ ಶಾಂತಿ-ಹೋಮಾದಿಗಳನ್ನೂ ಕಣ್ಣಿಗೆ ಕಾಣುವಂತೆ ಪ್ರತಿರೋಧ ಮಾಡುವವರಿಗೆ ಚತುರಂಗಸೈನ್ಯವನ್ನೂ ನಿಯೋಜಿಸಬೇಕು.

ಭೇದಂ ಚ ಪ್ರಥಮಂ ಯುಂಜ್ಯಾತ್ ತೂಷ್ಣೀಂ ದಂಡಂ ತಥೈವ ಚ ।
ಕಾಲೇ ಪ್ರಯೋಜಯೇದ್ ರಾಜಾ ತಸ್ಮಿಂಸ್ತಸ್ಮಿಂಸ್ತದಾ ತದಾ ॥೨೭॥

ಮೊದಲು ಭೇದೋಪಾಯವನ್ನು ಪ್ರಯೋಗಿಸಬೇಕು (ಶತ್ರುವಿಗೂ ಅವನ ಮಿತ್ರರಿಗೂ ವಿರೋಧವುಂಟಾಗುವಂತೆ ಮಾಡಬೇಕು). ಅನಂತರ ಮಾತನಾಡದೇ ಯೋಗ್ಯವಾದ ಕಾಲದಲ್ಲಿ ದಂಡಪ್ರಯೋಗವನ್ನು ಮಾಡಬೇಕು. ರಾಜನು ಆಯಾ ಉಪಾಯಗಳಿಗೆ ಯೋಗ್ಯವಾದ ಕಾಲದಲ್ಲಿ ಆಯಾ ಉಪಾಯಗಳನ್ನು ಮಾಡಬೇಕು.

ಪ್ರಣಿಪಾತಂ ಚ ಗಚ್ಛೇತ ಕಾಲೇ ಶತ್ರೋರ್ಬಲೀಯಸಃ ।
ಯುಕ್ತೋಽಸ್ಯ ವಧಮನ್ವಿಚ್ಛೇದಪ್ರಮತ್ತಃ ಪ್ರಮಾದ್ಯತಃ ॥೨೮॥

ಶತ್ರುವು ಬಲಿಷ್ಠನಾದರೆ ಅವನಿಗೆ ಒಂದು ಕಾಲದಲ್ಲಿ ಪ್ರಣಾಮವನ್ನು ಮಾಡ-

ಬೇಕು. ಅವನ ಜೊತೆಯಲ್ಲಿ ಕೂಡಿದ್ದರೂ ಎಚ್ಚರಿಕೆಯಲ್ಲಿದ್ದು ಅವನು ಪ್ರಮಾದವನ್ನು ಮಾಡಿದಾಗ ಅವನ ವಧೆಯನ್ನು ಮಾಡಲು ಬಯಸಬೇಕು.

ಪ್ರಣಿಪಾತೇನ ದಾನೇನ ವಾಚಾ ಮಧುರಯಾ ಬ್ರುವನ್ ।
ಅಮಿತ್ರಮುಪಸೇವೇತ ನ ತು ಜಾತು ವಿಶಂಕಯೇತ್ ॥೨೯॥

ಪ್ರಣಾಮ, ದಾನ, ಮತ್ತು ಮಧುರವಾದ ಮಾತುಗಳಿಂದ ಶತ್ರುವನ್ನು ಸೇವಿಸಬೇಕು. ಅವನು ಎಂದೂ ನಿನ್ನನ್ನು ಶಂಕಿಸುವಂತೆ ಮಾಡಬಾರದು.

ಸ್ಥಾನಾನಿ ಶಂಕಿತಾನಾಂ ಚ ನಿತ್ಯಮೇವ ವಿವರ್ಜಯೇತ್ ।
ನ ಚ ತೇಷ್ವಾಶ್ವಸೇದ್ ದ್ರುಗ್ಧ್ವಾ ಜಾಗ್ರತೀಹ ನಿರಾಕೃತಾಃ ॥೩೦॥

ಶಂಕಿತರ ಸ್ಥಾನಗಳನ್ನು ಯಾವಾಗಲೂ ವರ್ಜಿಸಬೇಕು. ಒಮ್ಮೆ ಅವರಿಗೆ ದ್ರೋಹವನ್ನು ಮಾಡಿದ ರಾಜನು ಅವರಲ್ಲಿ ವಿಶ್ವಾಸವನ್ನು ಮಾಡಬಾರದು. ದ್ರೋಹಕ್ಕೆ ಒಳಗಾದವರು ಯಾವಾಗಲೂ ಎಚ್ಚರಿಕೆಯಿಂದಿರುತ್ತಾರೆ.

ನ ಹ್ಯತೋ ದುಷ್ಕರಂ ಕರ್ಮ ಕಿಂಚಿದಸ್ತಿ ಸುರೋತ್ತಮ ।
ಯಥಾ ವಿವಿಧವೃತ್ತಾನಾಮೈಶ್ವರ್ಯಮಮರಾಧಿಪ ॥೩೧॥

ಎಲೈ ಸುರೋತ್ತಮನೇ! ಅಮರಾಧಿಪನೇ! ವಿವಿಧಶೀಲಗಳನ್ನು ಹೊಂದಿದ ಪುರುಷನನ್ನು ನಿಯಂತ್ರಿಸುವುದಕ್ಕಿಂತ ದೊಡ್ಡ ದುಷ್ಕರವಾದ ಕಾರ್ಯವಿಲ್ಲ.

ತಥಾ ವಿವಿಧಶೀಲಾನಾಮಪಿ ಸಂಭವ ಉಚ್ಯತೇ ।
ಯತೇತ ಯೋಗಮಾಸ್ಥಾಯ ಮಿತ್ರಾಮಿತ್ರಾನವಾರಯನ್ ॥೩೨॥

ಹಾಗೆಯೇ ವಿವಿಧಶೀಲವುಳ್ಳ ಜನರ ಜೊತೆಯಲ್ಲಿ ವ್ಯವಹರಿಸುವುದು ದುಷ್ಕರವಾದುದು. ಶತ್ರುಮಿತ್ರರನ್ನು ಯಾರನ್ನೂ ತ್ಯಜಿಸದೇ ಉಪಾಯದಿಂದ ಪ್ರಯತ್ನವನ್ನು ಮಾಡಬೇಕು.

ಮೃದುಮಪ್ಯವಮನ್ಯಂತೇ ತೀಕ್ಷ್ಣಾದುದ್ವಿಜತೇ ಜನಃ ।
ಮಾ ತೀಕ್ಷ್ಣೋ ಮಾ ಮೃದುರ್ಭೂಸ್ತ್ವಂ ತೀಕ್ಷ್ಣೋ ಭವ ಮೃದುರ್ಭವ॥೩೩॥

ಮೃದುವಾದವನನ್ನು ಪ್ರಜೆಗಳು ಅವಮಾನಗೊಳಿಸುತ್ತಾರೆ. ತೀಕ್ಷ್ಣನಾದವನನ್ನು ನೋಡಿ ಹೆದರುತ್ತಾರೆ. ನೀನು ತೀಕ್ಷ್ಣನೂ ಆಗಬೇಡ. ಮೃದುವೂ ಆಗಬೇಡ. ತೀಕ್ಷ್ಣನೂ ಆಗು ಮೃದುವೂ ಆಗು.

ಯಥಾ ವಪ್ರೇ ವೇಧವತಿ ಸರ್ವತಃ ಸಂಪ್ಲುತೋದಕೇ।
ನಿತ್ಯಂ ವಿದಾರಣಾದ್ ಬಾಧಸ್ತಥಾ ರಾಜ್ಯಂ ಪ್ರಮಾದ್ಯತಃ ॥೩೪॥

ಹೇಗೆ ನೀರಿನಿಂದ ಸುತ್ತುವರೆಯಲ್ಪಟ್ಟ ಕೋಟೆಯ ಗೋಡೆಯ ಬಿರುಕಿನಿಂದ ನಿತ್ಯವೂ ಒಡೆದು ಹೋಗುವ ಭಯವಿರುತ್ತದೆಯೋ ರಾಜ್ಯವು ಎಚ್ಚರ ತಪ್ಪಿದರೆ ಅದರಂತೆ ಆಗುತ್ತದೆ.

ನ ಬಹೂನಭಿಯುಂಜೀತ ಯೌಗಪದ್ಯೇನ ಶಾತ್ರವಾನ್।
ಸಾಮ್ನಾ ದಾನೇನ ಭೇದೇನ ದಂಡೇನ ಚ ಪುರಂದರ ॥೩೫॥

ಎಲೈ ಪುರಂದರನೇ! ಅನೇಕಶತ್ರುಗಳ ಜೊತೆ ಒಂದೇ ಕಾಲದಲ್ಲಿ ಸಾಮದಿಂದಾಗಲೀ, ದಾನದಿಂದಾಗಲೀ, ಭೇದದಿಂದಾಗಲೀ, ದಂಡದಿಂದಾಗಲೀ ವ್ಯವಹರಿಸಬೇಡ.

ಏಕೈಕಮೇಷಾಂ ನಿಷ್ಪಿಂಷನ್ ಶಿಷ್ಟೇಷು ನಿಪುಣಂ ಚರೇತ್।
ನ ಚ ಶಕ್ತೋಽಪಿ ಮೇಧಾವೀ ಸರ್ವಾನೇವಾರಭೇನ್ನೃಪಃ ॥೩೬॥

ಅವರಲ್ಲಿ ಒಬ್ಬೊಬ್ಬರನ್ನು ವಿನಾಶಗೊಳಿಸುತ್ತಾ, ಉಳಿದವರ ವಿಷಯದಲ್ಲಿ ನಿಪುಣತೆಯಿಂದ ವ್ಯವಹರಿಸಬೇಕು. ರಾಜನು ಸಮರ್ಥನಾದರೂ ಮೇಧಾವಿಯಾದರೂ ಎಲ್ಲರ ಜೊತೆಯಲ್ಲಿಯೂ ಒಟ್ಟಿಗೆ ವ್ಯವಹರಿಸಬಾರದು.

ಯದಾ ಸ್ಯಾನ್ಮಹತೀ ಸೇನಾ ಹಯನಾಗರಥಾಕುಲಾ।
ಪದಾತಿಯಂತ್ರಬಹುಲಾ ಸ್ವನುರಕ್ತಾ ಪತಾಕಿನೀ ॥೩೭॥

ಯದಾ ಬಹುವಿಧಾಂ ವೃದ್ಧಿಂ ಮನ್ಯತೇ ಪ್ರತಿಲೋಮತಃ।
ತದಾ ವಿವೃತ್ಯ ಪ್ರಹರೇದ್ ಅರೀಣಾಮವಿಚಾರಯನ್ ॥೩೮॥

ಹಯಗಜರಥಗಳಿಂದ ನಿಬಿಡವಾದ, ಪದಾತಿ ಮತ್ತು ಯಂತ್ರಗಳ ಬಾಹುಲ್ಯ-ದಿಂದ ಕೂಡಿದ, ಬಹಳ ಅನುರಕ್ತವಾದ, ದೊಡ್ಡ ಸೈನ್ಯವಿದ್ದರೆ ಶತ್ರುಗಳಿಗಿಂತ ತನ್ನ ಬಲವು ಸಮೃದ್ಧಿ ಹಾಗೂ ಅಧಿಕವಾಗಿದೆಯೆಂದು ಭಾವಿಸಿದರೆ ಆಗ ಮಾತ್ರ ಬೇರೆ ಏನೂ ವಿಚಾರಮಾಡದೇ ಸ್ಪಷ್ಟವಾಗಿ ಶತ್ರುಗಳ ಮೇಲೆ ಎರಗಬೇಕು.

ನ ಸಾಮ ದಂಡೋಪನಿಷತ್ ಪ್ರಶಸ್ಯತೇ
ನ ಮಾರ್ದವಂ ಶತ್ರುಷು ಯಾತ್ರಿಕಂ ಸದಾ ।
ನ ಸಸ್ಯಘಾತೋ ನ ಚ ಸಂಕರಕ್ರಿಯಾ
ನ ಚಾಸ್ಯ ಭೂಯಃ ಪ್ರಕೃತೇರ್ವಿಚಾರಣಾ ॥೩೯॥

ಯಾವಾಗಲೂ ಸಾಮವಾಗಲೀ ಅಥವಾ ದಂಡವಾಗಲೀ ಅಥವಾ ಮೃದುತನ-ವಾಗಲೀ ಅಥವಾ ಶತ್ರುಗಳ ಮೇಲೆ ಎರಗುವುದಾಗಲೀ ಶೋಭಿಸುವುದಿಲ್ಲ. ಶತ್ರುಗಳ ಸಸ್ಯಗಳನ್ನು ನಾಶಮಾಡುವುದಾಗಲೀ, ಜಲಾಶಯಗಳನ್ನು ವಿಷದಿಂದ ದೂಷಿಸುವುದಾಗಲೀ, ಶತ್ರುರಾಜನ ಸಪ್ತಪ್ರಕೃತಿಗಳನ್ನು ಯಾವಾಗಲೂ ವಿಮರ್ಶೆ ಮಾಡುವುದಾಗಲೀ ಶೋಭಿಸುವುದಿಲ್ಲ.

ಮಾಯಾವಿಭೇದಾನುಪಸರ್ಜನಾನಿ
ಪಾಪಂ ತಥೈವ ಸ್ಪಶಸಂಪ್ರಯೋಗಾತ್ ।
ಆಪ್ತೈರ್ಮನುಷ್ಯೈರುಪಚಾರಯೇತ
ಪುರೇಷು ರಾಷ್ಟ್ರೇಷು ಚ ಸಂಪ್ರಯುಕ್ತಾನ್ ॥೪೦॥

ತನ್ನ ಗೂಢಚಾರರನ್ನು ಶತ್ರುವಿನ ಪಟ್ಟಣಗಳಲ್ಲಿಯೂ ಮತ್ತು ರಾಷ್ಟ್ರದಲ್ಲಿಯೂ ಪ್ರಯೋಗಿಸಿ ಅಂತಹ ಆಪ್ತಮನುಷ್ಯರಿಂದ ಶತ್ರುರಾಜ್ಯದಲ್ಲಿ ಮಾಯೆ, ಕಪಟಗಳು, ಧನದ ಅವಿತರಣೆಯು ಮತ್ತು ಪಾಪಕಾರ್ಯಗಳು ಆಗುವಂತೆ ನೋಡಿಕೊಳ್ಳ-ಬೇಕು.

ಪುರಾಪಿ ಚೈಷಾಮನುಸೃತ್ಯ ಭೂಮಿಪಾಃ
ಪುರೇಷು ಭೋಗಾನ್ ನಿಖಿಲಾನಿಹಾಜಯನ್ ।

ಪುರೇಷು ನೀತಿಂ ವಿಹಿತಾಂ ಯಥಾವಿಧಿ
ಪ್ರಯೋಜಯಂತೋ ಬಲವೃತ್ರಸೂದನ ॥೪೧॥

ಎಲೈ ಬಲವೃತ್ರಸೂದನನೇ! ಹಿಂದಿನ ಕಾಲದಲ್ಲಿಯೂ ಸಹ ರಾಜನು ಶತ್ರುಗಳ ಪಟ್ಟಣಗಳಲ್ಲಿ ಶಾಸ್ತ್ರೋಕ್ತರೀತಿಯಲ್ಲಿ ಇಂತಹ ನೀತಿಗಳನ್ನು ಪ್ರಯೋಗಿಸಿ, ಆ ಪಟ್ಟಣಗಳಲ್ಲಿದ್ದ ಅಖಿಲಭೋಗಗಳನ್ನು ಜಯಿಸಿದರು.

ಪ್ರದಾಯ ಗೂಢಾನಿ ವಸೂನಿ ನಾಮ
ಪ್ರಚ್ಛಿದ್ಯ ಭೋಗಾನವಧಾಯ ಚ ಸ್ವಾನ್ ।
ದುಷ್ಟಾಃ ಸ್ವದೋಷೈರಿತಿ ಕೀರ್ತಯಿತ್ವಾ
ಪುರೇಷು ರಾಷ್ಟ್ರೇಷು ಚ ಯೋಜಯಂತಿ ॥೪೨॥

ತನ್ನ ಅಮಾತ್ಯಾದಿಗಳಿಗೆ ರಹಸ್ಯವಾಗಿ ಧನವನ್ನು ನೀಡಿ, ಅವರಿಗೆ ಕೊಡುತ್ತಿದ್ದ ಭೋಗಸಾಮಗ್ರಿಗಳನ್ನು ಎಲ್ಲರಿಗೂ ತಿಳಿಯುವಂತೆ ನಿಲ್ಲಿಸಿ, 'ಇವರು ತಮ್ಮ ದೋಷಗಳಿಂದಲೇ ದುಷ್ಟರಾದವರು, ಆದ್ದರಿಂದ ನನ್ನನ್ನು ಬಿಡುತ್ತಿದ್ದಾರೆ' ಎಂದು ಘೋಷಿಸಿ ಶತ್ರುಗಳ ಪಟ್ಟಣಗಳಲ್ಲಿಯೂ ರಾಷ್ಟ್ರಗಳಲ್ಲಿಯೂ ಅವರನ್ನು ನಿಯೋಜಿಸಬೇಕು.

ತಥೈವ ಚಾನ್ಯೈರಪಿ ಶಾಸ್ತ್ರವೇದಿಭಿಃ
ಸ್ವಲಂಕೃತೈಃ ಶಾಸ್ತ್ರವಿಧಾನದೃಷ್ಟಿಭಿಃ ।
ಸುಶಿಕ್ಷಿತೈರ್ಭಾಷ್ಯಕಥಾವಿಶಾರದೈಃ
ಪರೇಷು ಕೃತ್ಯಾನುಪಧಾರಯಸ್ವ ॥೪೩॥

ಹಾಗೆಯೇ ಶಾಸ್ತ್ರಜ್ಞರಾದ, ಅಲಂಕೃತರಾದ, ಶಾಸ್ತ್ರವಿಹಿತವಾದ ದೃಷ್ಟಿಯುಳ್ಳ, ಸುಶಿಕ್ಷಿತರಾದ, ವಾಗ್ಮಿಗಳಾದ ಜನರನ್ನು ನಿಯೋಜಿಸಿ ಶತ್ರುದೇಶದ ಕಾರ್ಯಗಳನ್ನು ತಿಳಿದುಕೊಳ್ಳಬೇಕು.

ಇಂದ್ರಃ

ಕಾನಿ ಲಿಂಗಾನಿ ದುಷ್ಟಸ್ಯ ಭವಂತಿ ದ್ವಿಜಸತ್ತಮ।
ಕಥಂ ದುಷ್ಟಂ ವಿಜಾನೀಯಾದೇತತ್ ಪೃಷ್ಟೋ ಬ್ರವೀಹಿ ಮೇ ॥೪೪॥

ಇಂದ್ರ – ಎಲೈ ದ್ವಿಜಶ್ರೇಷ್ಠರೇ! ದುಷ್ಟರ ಚಿಹ್ನೆಗಳು ಯಾವುವು? ದುಷ್ಟರನ್ನು ತಿಳಿಯುವ ಬಗೆ ಹೇಗೆ ಎಂಬ ನನ್ನ ಪ್ರಶ್ನೆಗೆ ಉತ್ತರವನ್ನು ಹೇಳಿ.

ಬೃಹಸ್ಪತಿಃ

ಪರೋಕ್ಷಮಗುಣಾನಾಹ ಸದ್ಗುಣಾನಭ್ಯಸೂಯತಿ।
ಪರೈರ್ವಾ ಕೀರ್ತ್ಯಮಾನೇಷು ತೂಷ್ಣೀಮಾಸ್ತೇ ಪರಾಙ್ಮುಖಃ ॥೪೫॥

ಬೃಹಸ್ಪತಿಗಳು – ದುಷ್ಟನು ಪರೋಕ್ಷದಲ್ಲಿ ನಿಂದಿಸುತ್ತಾನೆ. ಸದ್ಗುಣಗಳನ್ನು ಹೇಳಿದರೆ ಅಸೂಯೆಪಡುತ್ತಾನೆ. ಬೇರೆಯವರು ಆ ವ್ಯಕ್ತಿಯ ಗುಣಗಳನ್ನು ಹೇಳಿದರೆ ಮುಖವನ್ನು ತಿರುಗಿಸಿ ಮೌನವಾಗಿರುತ್ತಾನೆ.

ತೂಷ್ಣೀಂಭಾವೇऽಪಿ ವಿಜ್ಞೇಯಂ ನ ಚೇದ್ ಭವತಿ ದಾರಣಮ್।
ನಿಃಶ್ವಾಸಮೋಷ್ಠಸಂದಂಶಂ ಶಿರಸಶ್ಚ ಪ್ರಕಂಪಯನ್ ॥೪೬॥

ಅವನು ಸುಮ್ಮನಿದ್ದರೂ, ತುಟಿಗಳನ್ನು ಬಿಡಿಸಿ ಮಾತನಾಡದಿದ್ದರೂ, ನಿಃಶ್ವಾಸದಿಂದ, ತುಟಿಗಳನ್ನು ಕಚ್ಚುವುದರಿಂದ ಮತ್ತು ತಲೆಯನ್ನು ಅಲ್ಲಾಡಿಸುವುದರಿಂದ ಅವನ ಮನಸ್ಸಿನ ಅಭಿಪ್ರಾಯವು ತಿಳಿದುಬರುತ್ತದೆ.

ಕರೋತ್ಯಭೀಕ್ಷ್ಣಂ ಸಂಸೃಷ್ಟಮಸಂಸೃಷ್ಟಶ್ಚ ಭಾಷತೇ।
ಅದೃಷ್ಟಿತೋ ವಿಕುರುತೇ ದೃಷ್ಟಾವ ವಾ ನಾಭಿಭಾಷತೇ ॥೪೭॥

ಪುನಃ ಪುನಃ ನೋಡಲು ಬರುತ್ತಾನೆ. ಮಾತನಾಡಿಸದಿದ್ದರೂ ಮಾತನಾಡಿಸುತ್ತಾನೆ. ಎದುರಿಗೆ ಸಿಕ್ಕಿದಾಗ ದೃಷ್ಟಿಯನ್ನು ಬೇರೆಡೆ ತಿರುಗಿಸುತ್ತಾನೆ. ಅಥವಾ ನೋಡಿದರೂ ಮಾತನಾಡುವುದಿಲ್ಲ.

ಪೃಥಗೇತ್ಯ ಸಮಶ್ನಾತಿ ನೇದಮದ್ಯ ಯಥಾವಿಧಿ।
ಆಸನೇ ಶಯನೇ ಯಾನೇ ಭಾವಾ ಲಕ್ಷ್ಯಾ ವಿಶೇಷತಃ ॥೪೮॥

ಒಬ್ಬನೇ ಬಂದು ಊಟ ಮಾಡುತ್ತಾನೆ. ಭೋಜನವು ಹಿಂದಿನಂತೆ ಚೆನ್ನಾಗಿಲ್ಲ ಎಂದು ಹೇಳುತ್ತಾನೆ. ಕೂಡುವುದರಲ್ಲಿ ಮಲಗುವುದರಲ್ಲಿ ನಡೆಯುವುದರಲ್ಲಿ ಅವನ ಭಾವನೆಗಳನ್ನು ಗಮನಿಸಬೇಕು.

ಆರ್ತಿರಾರ್ತೇ ಪ್ರಿಯೇ ಪ್ರೀತಿರೇತಾವನ್ಮಿತ್ರಲಕ್ಷಣಮ್ ।
ವಿಪರೀತಂ ತು ಬೋದ್ಧವ್ಯಮರಿಲಕ್ಷಣಮೇವ ತತ್ ॥೪೯॥

ಇನ್ನೊಬ್ಬನು ದುಃಖಗೊಂಡಾಗ ದುಃಖಗೊಳ್ಳುವುದು, ಇನ್ನೊಬ್ಬನು ಸಂತೋಷ -ಗೊಂಡಾಗ ಸಂತೋಷಗೊಳ್ಳುವುದು ಮಿತ್ರನ ಲಕ್ಷಣ. ಶತ್ರುಗಳ ಲಕ್ಷಣವು ಇದಕ್ಕೆ ವಿರುದ್ಧವಾದುದೆಂದು ತಿಳಿಯಬೇಕು.

ಏತಾನ್ಯೇವಂ ಯಥೋಕ್ತಾನಿ ಬುದ್ಧ್ಯೇಥಾಸ್ತ್ರಿದಶಾಧಿಪ।
ಪುರುಷಾಣಾಂ ಪ್ರದುಷ್ಟಾನಾಂ ಸ್ವಭಾವೋ ಬಲವತ್ತರಃ ॥೫೦॥

ಎಲೈ ದೇವರಾಜನೇ! ನಾನು ಹೇಳಿದ ಈ ಲಕ್ಷಣಗಳನ್ನು ಈ ರೀತಿಯಲ್ಲಿ ತಿಳಿದುಕೊಳ್ಳಬೇಕು. ದುಷ್ಟಪುರುಷರ ಸ್ವಭಾವವು ಬಹಳ ಬಲಿಷ್ಠವಾಗಿರುತ್ತದೆ.

ಇತಿ ದುಷ್ಟಸ್ಯ ವಿಜ್ಞಾನಮುಕ್ತಂ ತೇ ಸುರಸತ್ತಮ।
ನಿಶಾಮ್ಯ ಶಾಸ್ತ್ರತತ್ತ್ವಾರ್ಥಂ ಯಥಾವದಮರೇಶ್ವರ ॥೫೧॥

ಎಲೈ ಸುರೋತ್ತಮನೇ! ಅಮರೇಶ್ವರನೇ! ನಾನು ಶಾಸ್ತ್ರತತ್ತ್ವಾರ್ಥವನ್ನು ತಿಳಿದು ನಿನಗೆ ಯಥಾರ್ಥವಾಗಿ ದುಷ್ಟರ ಲಕ್ಷಣಗಳನ್ನು ಹೇಳಿದ್ದೇನೆ.

ಭೀಷ್ಮಃ

ಸ ತದ್ವಚಃ ಶತ್ರುನಿಬರ್ಹಣೇ ರತ-
ಸ್ತಥಾ ಚಕಾರಾವಿತಥಂ ಬೃಹಸ್ಪತೇಃ।

ಚಚಾರ ಕಾಲೇ ವಿಜಯಾಯ ಚಾರಿಹಾ
ವಶಂ ಚ ಶತ್ರೂನನಯತ್ ಪುರಂದರಃ ॥೫೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚಾಧಿಕಶತತಮೋಽಧ್ಯಾಯಃ ॥೧೦೫॥

ಭೀಷ್ಮರು – ಶತ್ರುವಿನಾಶದಲ್ಲಿ ರತನಾದ ಇಂದ್ರನು ಬೃಹಸ್ಪತಿಗಳ ಆ ಮಾತುಗಳನ್ನು ಕೇಳಿ, ಅದನ್ನು ವ್ಯರ್ಥವನ್ನು ಮಾಡದೇ ನಡೆದುಕೊಂಡನು. ಶತ್ರುಸೂದನನಾದ ಪುರಂದರನು ಯೋಗ್ಯವಾದ ಕಾಲದಲ್ಲಿ ವಿಜಯಯಾತ್ರೆಯನ್ನು ಮಾಡಿ ಶತ್ರುಗಳನ್ನು ವಶಪಡಿಸಿಕೊಂಡನು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೦೫ನೆಯ ಅಧ್ಯಾಯವು ಮುಗಿಯಿತು.

—0—

೧೦೬. ನೂರ ಆರನೆಯ ಅಧ್ಯಾಯ

ಕೌಸಲ್ಯ-ಕಾಲಕವೃಕ್ಷೀಯಸಂವಾದ; ಎಲ್ಲರನ್ನೂ ಕಳೆದುಕೊಂಡ ರಾಜನು ಜೀವಿಸುವ ರೀತಿ

ಯುಧಿಷ್ಠಿರಃ

ಧಾರ್ಮಿಕೋಽರ್ಥಾನಸಂಪ್ರಾಪ್ಯ ರಾಜಾಽಮಾತ್ಯೈಃ ಪ್ರಬಾಧಿತಃ।
ಚ್ಯುತಃ ಕೋಶಾಚ್ಚ ದಂಡಾಚ್ಚ ಸುಖಮಿಚ್ಛನ್ ಕಥಂ ಚರೇತ್ ॥೧॥

ಯುಧಿಷ್ಠಿರ – ಧಾರ್ಮಿಕನಾದ ರಾಜನು ಅಮಾತ್ಯರಿಂದ ಬಾಧಿತನಾಗಿ, ತನ್ನ ಕಾರ್ಯಗಳು ಸಿದ್ಧಿಸದೇ, ಕೋಶದಿಂದಲೂ ಸೈನ್ಯದಿಂದಲೂ ಚ್ಯುತನಾಗಿ ಸುಖವನ್ನು ಬಯಸಿದರೆ ಹೇಗೆ ನಡೆದುಕೊಳ್ಳಬೇಕು?

ಭೀಷ್ಮಃ

ಅತ್ರಾಯಂ ಕ್ಷೇಮದರ್ಶೀಯಮಿತಿಹಾಸೋಽನುಗೀಯತೇ।
ತತ್ ತೇಽಹಂ ಸಂಪ್ರವಕ್ಷ್ಯಾಮಿ ತನ್ನಿಬೋಧ ಯುಧಿಷ್ಠಿರ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿ ಕ್ಷೇಮದರ್ಶ ಮಹಾ-

ರಾಜನ ಒಂದು ಇತಿಹಾಸವನ್ನು ಹೇಳುತ್ತಾರೆ. ನಾನು ಅದನ್ನು ನಿನಗೆ ಹೇಳುವೆನು. ಅದನ್ನು ಕೇಳು.

ಕ್ಷೇಮದರ್ಶಂ ನೃಪಸುತಂ ಯತ್ರ ಕ್ಷೀಣಬಲಂ ಪುರಾ ।
ಮುನಿಃ ಕಾಲಕವೃಕ್ಷೀಯ ಆಜಗಾಮೇತಿ ನಃ ಶ್ರುತಮ್ ।
ತಂ ಪಪ್ರಚ್ಛೋಪಸಂಗೃಹ್ಯ ಕೃಚ್ಛ್ರಾದಾಪದಮಾಸ್ಥಿತಃ ॥೩॥

ಹಿಂದೆ ದುರ್ಬಲನಾದ ಕ್ಷೇಮದರ್ಶ ರಾಜಕುಮಾರನ ಬಳಿಗೆ ಕಾಲಕವೃಕ್ಷೀಯ ಎಂಬ ಮುನಿಯು ಬಂದನೆಂದು ನಾವು ಕೇಳಿದ್ದೇವೆ. ಬಹಳಕಷ್ಟಕ್ಕೆ ಸಿಲುಕಿದ ಕ್ಷೇಮದರ್ಶನು ಅವನನ್ನು ಸಮೀಪಿಸಿ ಪ್ರಶ್ನೆಮಾಡಿದನು.

ಅರ್ಥೇಷು ಭಾಗೀ ಪುರುಷ ಈಹಮಾನಃ ಪುನಃ ಪುನಃ ।
ಅಲಬ್ಧ್ವಾ ಮದ್ವಿಧೋ ರಾಜ್ಯಂ ಬ್ರಹ್ಮನ್ ಕಿಂ ಕರ್ತುಮರ್ಹತಿ ॥೪॥

ಎಲೈ ಬ್ರಾಹ್ಮಣರೇ! ಪುನಃ ಪುನಃ ಪ್ರಯತ್ನವನ್ನು ಮಾಡಿ ಅರ್ಥವನ್ನು ಸಂಪಾದಿಸಲು ಪ್ರಯತ್ನಿಸಿ ಅಂತಹ ಅರ್ಥವನ್ನು ರಾಜ್ಯವನ್ನು ಪಡೆಯದ ನನ್ನಂತಹವನು ಏನು ಮಾಡಬೇಕು?

ಅನ್ಯತ್ರ ಮರಣಾತ್ ಸ್ತೇಯಾದನ್ಯತ್ರ ಪರಸಂಶ್ರಯಾತ್ ।
ಕುಪ್ಯಾದನ್ಯತ್ರ ಚಾಚಾರಾತ್ ತನ್ಮಾಚಕ್ಷ್ವ ಸತ್ತಮ ॥೫॥

ಎಲೈ ಸಜ್ಜನರಲ್ಲಿ ಶ್ರೇಷ್ಠರೇ! ಮರಣವನ್ನು ಬಿಟ್ಟು ಇನ್ನೊಬ್ಬರನ್ನು ಆಶ್ರಯಿಸುವುದನ್ನು ಬಿಟ್ಟು, ಕಳ್ಳತನವನ್ನು ಮಾಡುವುದನ್ನು ಬಿಟ್ಟು, ಬೇರೆ ಯಾವ ಕುದ್ರ್ಯಾಚಾರವನ್ನು ಮಾಡುವುದನ್ನೂ ಬಿಟ್ಟು ಏನು ಮಾಡಬೇಕೆಂಬುದನ್ನು ನನಗೆ ತಿಳಿಸಿ.

ವ್ಯಾಧಿನಾ ಚಾಭಿಪನ್ನಸ್ಯ ಮಾನಸೇನೇತರೇಣ ವಾ ।
ಬಹುಶ್ರುತಃ ಕೃತಪ್ರಜ್ಞಸ್ತ್ವದ್ವಿಧಃ ಶರಣಂ ವ್ರಜೇತ್ ॥೬॥

ಮಾನಸವಾದ ಅಥವಾ ದೈಹಿಕವಾದ ವ್ಯಾಧಿಗೆ ತುತ್ತಾದವನಿಗೆ ಬಹುಶ್ರುತರೂ ಕೃತಪ್ರಜ್ಞರೂ (ಬುದ್ಧಿಶಾಲಿಗಳೂ) ಆದ ನಿಮ್ಮಂತಹವರು ಆಶ್ರಯರಾಗುತ್ತಾರೆ.

ನಿರ್ವಿದ್ಯ ಹಿ ನರಃ ಕಾಮಾನ್ನಿಯಮ್ಯ ಸುಖಮೇಧತೇ।
ತ್ಯಕ್ತ್ವಾ ಪ್ರೀತಿಂ ಚ ಶೋಕಂ ಚ ಲಬ್ಧ್ವಾ ಬುದ್ಧಿಮಯಂ ವಸು ॥೭॥

ಮನುಷ್ಯನು ವೈರಾಗ್ಯವನ್ನು ಹೊಂದಿ, ತನ್ನ ಆಸೆಗಳನ್ನು ನಿಯಂತ್ರಿಸಿ, ಹರ್ಷ-ಶೋಕಗಳನ್ನು ತ್ಯಜಿಸಿ, ಬುದ್ಧಿರೂಪವಾದ ಸಂಪತ್ತನ್ನು ಹೊಂದಿ ಸುಖಪಡುತ್ತಾನೆ.

ಸುಖಮರ್ಥಾಶ್ರಯಂ ಯೇಷಾಮನುಶೋಚಾಮಿ ತಾನಹಮ್।
ಮಮ ಹ್ಯರ್ಥಾಃ ಸುಬಹವೋ ನಷ್ಟಾಃ ಸ್ವಪ್ನ ಇವಾಗತಾಃ ॥೮॥

ಸುಖವು ಸಂಪತ್ತನ್ನು ಅವಲಂಬಿಸಿದೆ ಎಂದು ತಿಳಿಯುವವರನ್ನು ಕುರಿತು ನಾನು ಕನಿಕರಪಡುತ್ತೇನೆ. ನನ್ನ ಅಪಾರವಾದ ಸಂಪತ್ತು ಸ್ವಪ್ನದಂತೆ ಹೊರಟು ಹೋಯಿತು.

ದುಷ್ಕರಂ ಬತ ಕುರ್ವಂತಿ ಮಹತೋऽರ್ಥಾಂಸ್ತ್ಯಜಂತಿ ಯೇ।
ವಯಂ ತ್ವೇನಾನ್ ಪರಿತ್ಯಕ್ತುಮಸತೋऽಪಿ ನ ಶಕ್ನುಮಃ ॥೯॥

ಮಹಾತ್ಮರು ಮಹಾಸಂಪತ್ತನ್ನು ತೊರೆದು ದುಷ್ಕರವಾದ ಕಾರ್ಯವನ್ನು ಮಾಡುತ್ತಾರೆ. ನಾವು ಅರ್ಥವನ್ನು ದುಷ್ಟವೆಂದು ತಿಳಿದಿದ್ದರೂ ಅದನ್ನು ತ್ಯಜಿಸಲು ಶಕ್ತರಾಗಿಲ್ಲ.

ಇಮಾಮವಸ್ಥಾಂ ಸಂಪ್ರಾಪ್ತಂ ದೀನಮಾರ್ತಂ ಶ್ರಿಯಶ್ಚ್ಯುತಮ್।
ಯದನ್ಯತ್ ಸುಖಮಸ್ತೀಹ ತದ್ ಬ್ರಹ್ಮನ್ ಅನುಶಾಧಿ ಮಾಮ್ ॥೧೦॥

ಎಲೈ ಬ್ರಾಹ್ಮಣರೇ! ಇಂತಹ ದುರವಸ್ಥೆಯನ್ನು ಹೊಂದಿ, ದೀನನೂ ಆರ್ತನೂ ಸಂಪತ್ತಿನಿಂದ ಹೀನನೂ ಆದ ನನಗೆ ಬೇರೆ ಯಾವ ಸುಖಸಾಧನವಿದೆಯೆಂದು ನೀವು ಉಪದೇಶಿಸಿ.

ಕೌಸಲ್ಯೇನೈವಮುಕ್ತಸ್ತು ರಾಜಪುತ್ರೇಣ ಧೀಮತಾ।
ಮುನಿಃ ಕಾಲಕವೃಕ್ಷೀಯಃ ಪ್ರತ್ಯುವಾಚ ಮಹಾದ್ಯುತಿಃ ॥೧೧॥

ಮೇಧಾವಿಯಾದ ಕೋಸಲರಾಜಕುಮಾರನಿಂದ ಹೀಗೆ ಹೇಳಲ್ಪಟ್ಟ ಮಹಾ ತೇಜಸ್ಸುಳ್ಳ ಕಾಲಕವೃಕ್ಷೀಯ ಮುನಿಯು ಉತ್ತರವನ್ನು ಕೊಟ್ಟನು.

ಪುರಸ್ತಾದೇವ ತೇ ಬುದ್ಧಿರಿಯಂ ಕಾರ್ಯಾ ವಿಜಾನತಃ।
ಅನಿತ್ಯಂ ಸರ್ವಮೇವೇದಮಹಂ ಚ ಮಮ ಚಾಸ್ತಿ ಯತ್ ॥೧೨॥

ಯತ್ಕಿಂಚಿನ್ಮನ್ಯಸೇಽಸ್ತೀತಿ ಸರ್ವಂ ನಾಸ್ತೀತಿ ವಿದ್ಧಿ ತತ್ ।
ಏವಂ ನ ವ್ಯಥತೇ ಪ್ರಾಜ್ಞಃ ಕೃಚ್ಛ್ರಮಪ್ಯಾಪದಂ ಗತಃ ॥೧೩॥

'ನನ್ನ ಬಳಿ ಏನಿದೆಯೋ ಇದೆಲ್ಲವೂ ಅನಿತ್ಯವಾದುದು' ಎಂದು ಬುದ್ಧಿವಂತನಾದ ನೀನು ಮೊದಲೇ ತಿಳಿಯಬೇಕು. ಯಾವ ಯಾವುದು ಇದೆಯೋ ಅದೆಲ್ಲವೂ ಇಲ್ಲವೆಂದು ತಿಳಿ. ಹಾಗೆ ಮಾಡಿದರೆ ದುರವಸ್ಥೆಯನ್ನು ಹೊಂದಿದರೂ ಪ್ರಾಜ್ಞನು ವ್ಯಥೆ ಪಡುವುದಿಲ್ಲ.

ಯದ್ಧಿ ಭೂತಂ ಭವಿಷ್ಯಚ್ಚ ಧ್ರುವಂ ತನ್ನ ಭವಿಷ್ಯತಿ।
ಏವಂ ವಿದಿತವೇದ್ಯಸ್ತ್ವಮನರ್ಥೇಭ್ಯಃ ಪ್ರಮೋಕ್ಷ್ಯಸೇ ॥೧೪॥

ಯಾವುದು ಇದೆಯೋ, ಯಾವುದು ಮುಂದೆ ಉಂಟಾಗುವುದೋ ಖಂಡಿತವಾಗಿ ಅದು ಉಳಿಯುವುದಿಲ್ಲ. ಈ ರೀತಿಯಲ್ಲಿ ತಿಳಿದರೆ ನೀನು ಅನರ್ಥಗಳಿಂದ ಬಿಡುಗಡೆಯನ್ನು ಹೊಂದುವಿ.

ಯಚ್ಚ ಪೂರ್ವಂ ಸಮಾಹಾರೇ ಯಚ್ಚ ಪೂರ್ವತರೇ ಪರೇ ।
ಸರ್ವಂ ತನ್ನಾಸ್ತಿ ತಚ್ಚೈವ ತಜ್ಞಾತ್ವಾ ಕೋಽನುಸಂಜ್ವರೇತ್ ॥೧೫॥

ಜನಸಮುದಾಯದಲ್ಲಿ ಈಗ ಏನಿದೆಯೋ, ಹಿಂದಿನ ಜನಸಮುದಾಯದಲ್ಲಿ ಏನಿದ್ದಿತೋ, ಮುಂದಿನ ಜನಸಮುದಾಯದಲ್ಲಿ ಏನಿರುವುದೋ ಅದು ಯಾವುದೂ ಉಳಿಯುವುದಿಲ್ಲ ಎಂದು ತಿಳಿದ ಯಾವನು ವ್ಯಥೆಪಡುತ್ತಾನೆ?

ಭೂತ್ವಾ ಚ ನ ಭವತ್ಯೇತದಭೂತ್ವಾ ಚ ಭವತ್ಯಪಿ।
ಶೋಕೇ ನ ಹ್ಯಸ್ತಿ ಸಾಮರ್ಥ್ಯಂ ಶೋಕಂ ಕುರ್ಯಾತ್ ಕಥಂ ನರಃ ॥೧೬॥

ಕೆಲವಸ್ತುಗಳು ಜೊತೆಯಲ್ಲಿದ್ದವು ನಾಶವನ್ನು ಹೊಂದುತ್ತವೆ. ಇನ್ನು ಕೆಲವು ವಸ್ತುಗಳು ಮೊದಲು ಇಲ್ಲದೇ ಅನಂತರ ಬರುತ್ತವೆ. ಶೋಕ ಮಾಡುವುದರಲ್ಲಿ

ಯಾವ ಪ್ರಯೋಜನವೂ ಇಲ್ಲ. ಇದನ್ನು ತಿಳಿದ ಮನುಷ್ಯನು ಹೇಗೆ ಶೋಕವನ್ನು ಮಾಡಿಯಾನು?

ಕ್ವನು ತೇऽದ್ಯ ಪಿತಾ ರಾಜನ್ ಕ್ವನು ತೇऽದ್ಯ ಪಿತಾಮಹಃ।
ನ ತ್ವಂ ಪಶ್ಯಸಿ ತಾನದ್ಯ ನ ತ್ವಾಂ ಪಶ್ಯಂತಿ ತೇऽಪಿ ಚ ॥೧೭॥

ಎಲೈ ರಾಜನೇ! ಈಗ ನಿನ್ನ ತಂದೆಯು ಎಲ್ಲಿ? ಈಗ ನಿನ್ನ ತಾತನು ಎಲ್ಲಿ? ನೀನು ಅವರನ್ನು ನೋಡುತ್ತಿಲ್ಲ. ಅವರೂ ನಿನ್ನನ್ನು ನೋಡುತ್ತಿಲ್ಲ.

ಆತ್ಮನೋऽಧ್ರುವತಾಂ ಪಶ್ಯಂಸ್ತಾಸ್ತ್ವಂ ಕಿಮನುಶೋಚಸಿ।
ಬುದ್ಧ್ಯಾ ಚೈವಾನುಬುದ್ಧ್ಯಸ್ವ ಧ್ರುವಂ ಹಿ ನ ಭವಿಷ್ಯಸಿ ॥೧೮॥

ನಿನ್ನ ಅನಿತ್ಯತ್ವವನ್ನು ತಿಳಿದ ನೀನು ಅವರನ್ನು ಕುರಿತು ಏಕೆ ಶೋಕಪಡುತ್ತಿದ್ದೀಯೆ? ಒಳ್ಳೆಯ ಬುದ್ಧಿಯನ್ನು ಹೊಂದು. ಖಂಡಿತವಾಗಿ ನೀನೂ ಇರುವುದಿಲ್ಲ.

ಅಹಂ ಚ ತ್ವಂ ಚ ನೃಪತೇ ಶತ್ರವಃ ಸುಹೃದಶ್ಚ ತೇ।
ಅವಶ್ಯಂ ನ ಭವಿಷ್ಯಾಮಃ ಸರ್ವಂ ಚ ನ ಭವಿಷ್ಯತಿ ॥೧೯॥

ಎಲೈ ರಾಜನೇ! ನಾನು, ನೀನು, ನಿನ್ನ ಶತ್ರುಗಳು, ನಿನ್ನ ಸುಹೃಜ್ಜನರು ಅವಶ್ಯವಾಗಿ ನಾಶವನ್ನು ಹೊಂದುತ್ತೇವೆ. ಯಾವುದೂ ಉಳಿಯುವುದಿಲ್ಲ.

ಯೇ ತು ವಿಂಶತಿವರ್ಷಾ ವೈ ತ್ರಿಂಶದ್ವರ್ಷಾಶ್ಚ ಮಾನವಾಃ।
ಅರ್ವಾಗೇವ ಹಿ ತೇ ಸರ್ವೇ ಮರಿಷ್ಯಂತಿ ಶರಚ್ಛತಾತ್ ॥೨೦॥

ಇಪ್ಪತ್ತು ವರ್ಷದ, ಮೂವತ್ತು ವರ್ಷದ ಮನುಷ್ಯರೂ ಸಹ ನೂರು ವರ್ಷಗಳಿಗಿಂತ ಮೊದಲೇ ಮರಣವನ್ನು ಹೊಂದುತ್ತಾರೆ.

ಅಪಿ ಚೇನ್ಮಹತೋ ವಿತ್ತಾದ್ ವಿಪ್ರಮುಚ್ಯೇತ ಪೂರುಷಃ।
ನೈತನ್ಮಮೇತಿ ತನ್ಮತ್ಯಾ ಕುರ್ಯೇತ ಪ್ರಿಯಮಾತ್ಮನಃ ॥೨೧॥

ಮನುಷ್ಯನು ದೊಡ್ಡ ಸಂಪತ್ತನ್ನು ಕಳೆದುಕೊಂಡರೂ ಇದು ನನ್ನದಲ್ಲ ಎಂದು ತಿಳಿದು ಬುದ್ಧಿಯಿಂದ ತನಗೆ ಪ್ರಿಯವನ್ನು ಮಾಡಿಕೊಳ್ಳಬೇಕು.

ಅನಾಗತಂ ಯನ್ನ ಮಮೇತಿ ವಿದ್ಯಾ-
ದತಿಕ್ರಾಂತಂ ಯನ್ನ ಮಮೇತಿ ವಿದ್ಯಾತ್ ।
ದಿಷ್ಟಂ ಬಲೀಯ ಇತಿ ಮನ್ಯಮಾನಾಃ
ತೇ ಪಂಡಿತಾಸ್ತತ್ ಸತಾಂ ವೃತ್ತಮಾಹುಃ ॥೨೨॥

ಇನ್ನೂ ಪ್ರಾಪ್ತವಾಗದಿರುವುದು ನನ್ನದಲ್ಲ ಎಂದು ತಿಳಿಯಬೇಕು. ಕಳೆದು ಹೋದುದು ನನ್ನದಲ್ಲ ಎಂದು ತಿಳಿಯಬೇಕು. ಯಾರು ವಿಧಿಯು ಪ್ರಬಲವಾದುದು ಎಂದು ತಿಳಿಯುತ್ತಾರೋ ಅವರು ಪಂಡಿತರು. ಅದು ಸಜ್ಜನರ ನಡತೆಯೆಂದು ಹೇಳುತ್ತಾರೆ.

ಅನಾಢ್ಯಾಶ್ಚಾಪಿ ಜೀವಂತಿ ರಾಜ್ಯಂ ಚಾಪ್ಯನುಶಾಸತೇ ।
ಬುದ್ಧಿಪೌರುಷಸಂಪನ್ನಾಸ್ತ್ವಯಾ ತುಲ್ಯಾಧಿಕಾ ಜನಾಃ ॥೨೩॥

ಲೋಕದಲ್ಲಿ ಬುದ್ಧಿಪೌರುಷಸಂಪನ್ನರಾದ ನಿನಗೆ ಸಮಾನರಾದ ಅಥವಾ ನಿನಗಿಂತ ಅಧಿಕರಾದ ಜನರು ಧನಾಢ್ಯರಲ್ಲದಿದ್ದರೂ ಬದುಕುತ್ತಾರೆ ಮತ್ತು ರಾಜ್ಯವನ್ನು ಆಳುತ್ತಾರೆ.

ನ ಚ ತ್ವಮಿವ ಶೋಚಂತಿ ತಸ್ಮಾತ್ ತ್ವಮಪಿ ಮಾ ಶುಚಃ ।
ಕಿನ್ನು ತ್ವಂ ತೈರ್ನ ವೈ ಶ್ರೇಯಾಂಸ್ತುಲ್ಯೋ ವಾ ಬುದ್ಧಿಪೌರುಷೈಃ ॥೨೪॥

ಅವರು ನಿನ್ನಂತೆ ಶೋಕಪಡುವುದಿಲ್ಲ. ಆದ್ದರಿಂದ ನೀನೂ ಶೋಕಪಡಬೇಡ. ಬುದ್ಧಿಪೌರುಷಗಳ ದೃಷ್ಟಿಯಿಂದ ನೀನು ಅವರಿಗೆ ಸಮಾನನಾದವನಲ್ಲವೇ? ಅಥವಾ ಅಧಿಕನಾದವನಲ್ಲವೇ?

ರಾಜಪುತ್ರಃ

ಯಾದೃಚ್ಛಿಕಂ ಮಮಾಸೀತ್ ತದ್ ರಾಜ್ಯಮಿತ್ಯೇವ ಚಿಂತಯೇ।
ಹ್ರಿಯತೇ ಸರ್ವಮೇವೇದಂ ಕಾಲೇನ ಮಹತಾ ದ್ವಿಜ ॥೨೫॥

ತಸ್ಯೈವಂ ಹ್ರಿಯಮಾಣಸ್ಯ ಸ್ರೋತಸೇವ ತಪೋಧನ।
ಫಲಮೇತತ್ ಪ್ರಪಶ್ಯಾಮಿ ಯಥಾಲಬ್ಧೇನ ವರ್ತಯೇ ॥೨೬॥

ರಾಜಪುತ್ರ – ನನಗೆ ದೊರೆತ ರಾಜ್ಯವು ಅಕಸ್ಮಾತ್ತಾಗಿ ದೊರೆಯಿತು ಎಂದೇ ತಿಳಿಯುತ್ತೇನೆ. ಎಲೈ ಬ್ರಾಹ್ಮಣರೇ! ಮಹತ್ತಾದ ಕಾಲವು ಇದೆಲ್ಲವನ್ನೂ ಸೆಳೆದೊಯ್ಯುತ್ತದೆ. ಎಲೈ ತಪೋಧನರೇ! ನನಗೆ ಒದಗಿರುವ ದುರವಸ್ಥೆಯು ನದಿಯ ಪ್ರವಾಹದಂತೆ ಸೆಳೆದೊಯ್ಯುವ ಕಾಲದ ಫಲವೆಂದು ತಿಳಿಯುತ್ತೇನೆ. ಇದ್ದುದರಲ್ಲಿಯೇ ಜೀವನವನ್ನು ಮಾಡುತ್ತೇನೆ.

ಮುನಿಃ

ಅನಾಗತಮತೀತಂ ಚ ಯಥಾತಥ್ಯವಿನಿಶ್ಚಯಾತ್।
ನಾನುಶೋಚಸಿ ಕೌಸಲ್ಯ ಸರ್ವಾರ್ಥೇಷು ತಥಾ ಭವ ॥೨೭॥

ಮುನಿಗಳು – ಎಲೈ ಕೌಸಲ್ಯನೇ! ಅನಾಗತವಾದ ಅಥವಾ ಅತೀತವಾದ ವಸ್ತುಗಳ ಸರಿಯಾದ ಸ್ವರೂಪವನ್ನು ತಿಳಿದರೆ ನೀನು ಶೋಕಪಡುವುದಿಲ್ಲ. ಎಲ್ಲ ವಿಷಯಗಳಲ್ಲಿಯೂ ಹಾಗೆಯೇ ಇರು.

ಅವಾಪ್ಯಾನ್ ಕಾಮಯ ಸ್ವಾರ್ಥಾನ್ ನಾನವಾಪ್ಯಾನ್ ಕದಾಚನ।
ಪ್ರತ್ಯುತ್ಪನ್ನಾನನುಭವನ್ ಮಾ ಶುಚಸ್ತ್ವಮನಾಗತಾಮ್ ॥೨೮॥

ಪಡೆಯಬಹುದಾದ ವಸ್ತುಗಳನ್ನು ಆಶಿಸು; ಪಡೆಯಲಾರದ ವಸ್ತುಗಳನ್ನು ಎಂದೂ ಆಶಿಸಬೇಡ. ಸದ್ಯದಲ್ಲಿ ಸಮೀಪದಲ್ಲಿರುವ ವಸ್ತುಗಳನ್ನು ಭೋಗಿಸುತ್ತಾ ಪಡೆಯದಿರುವ ವಸ್ತುಗಳ ವಿಷಯದಲ್ಲಿ ಶೋಕಪಡಬೇಡ.

ಯಥಾಲಬ್ಧೋಪಪನ್ನಾರ್ಥಸ್ತಥಾ ಕೌಸಲ್ಯ ರಂಸ್ಯಸೇ।
ಕಚ್ಚಿಚ್ಛುದ್ಧಸ್ವಭಾವೇನ ಶ್ರಿಯಾ ಹೀನೋ ನ ಶೋಚಸಿ ॥೨೯॥

ಎಲೈ ಕೌಸಲ್ಯನೇ! ಸಹಜವಾಗಿ ದೊರೆತವಸ್ತುಗಳಿಂದ ನೀನು ಸುಖವನ್ನು ಪಡುವವನಾಗು. ಸಂಪತ್ತಿನಿಂದ ಹೀನನಾದ ನೀನು ಶುದ್ಧಸ್ವಭಾವವನ್ನು ಹೊಂದಿ ಶೋಕವನ್ನು ತ್ಯಜಿಸು.

ಪುರಸ್ತಾದ್ ಭೂತಪೂರ್ವತ್ವಾದ್ ವೀತಭಾಗ್ಯೋಽಪಿ ದುರ್ಮತಿಃ।
ಧಾತಾರಂ ಗರ್ಹತೇ ನಿತ್ಯಂ ಲಬ್ಧಾರ್ಥಶ್ಚ ನ ಮೃಷ್ಯತೇ ॥೩೦॥

ಮುಂದೆ ಬರುವ ದಾರಿದ್ರ್ಯಾದಿಗಳು ಹಿಂದೆ ಮಾಡಿದ ದುಷ್ಕೃತಾದಿಗಳ ಫಲವೆಂದು ತಿಳಿಯದೇ ದುರ್ಮತಿಯಾದವನು ಭಾಗ್ಯವನ್ನು ಕಳೆದುಕೊಂಡಾಗ ಯಾವಾಗಲೂ ವಿಧಿಯನ್ನು ನಿಂದಿಸುತ್ತಾನೆ. ಸಂಪತ್ತನ್ನು ಪಡೆದರೂ ಇದು ಸಾಲದು ಎಂದು ತಿಳಿದು ಸಹನೆಯನ್ನು ಕಳೆದುಕೊಳ್ಳುತ್ತಾನೆ.

ಅನರ್ಹಾನಪಿ ಚೈವಾನ್ಯಾನ್ ಮನ್ಯತೇ ಶ್ರೀಮತೋ ಜನಾನ್।
ಏತಸ್ಮಾತ್ ಕಾರಣಾದೇತತ್ ದುಃಖಂ ಭೂಯೋಽನುವರ್ತತೇ ॥೩೧॥

ಅನರ್ಹರಾದ ಬೇರೆಯವರೂ ಸಹ ಶ್ರೀಮಂತರಾಗಿದ್ದಾರೆ ಎಂದು ನೀನು ತಿಳಿಯುತ್ತಿದ್ದೀಯೆ. ಈ ಕಾರಣದಿಂದ ನಿನ್ನ ದುಃಖವು ಇನ್ನೂ ಮುಂದುವರಿಯುತ್ತಿದೆ.

ಈರ್ಷ್ಯಾತಿಚ್ಛೇದಸಂಪನ್ನಾ ರಾಜನ್ ಪುರುಷಮಾನಿನಃ।
ಕಚ್ಚಿತ್ತ್ವಂ ನ ತಥಾ ಪ್ರಾಜ್ಞಮತ್ಸರೀ ಕೋಸಲಾಧಿಪ ॥೩೨॥

ಎಲೈ ರಾಜ್ಯನೇ! ತಮ್ಮನ್ನು ಶ್ರೇಷ್ಠಪುರುಷರೆಂದು ತಿಳಿದುಕೊಳ್ಳುವವರು ಅಸೂಯೆ ಮತ್ತು ಅತಿವ್ಯಥೆಗಳಿಂದ ಕೂಡಿರುತ್ತಾರೆ. ಎಲೈ ಪ್ರಾಜ್ಞನೇ! ಕೋಸಲಾಧಿ-ಪತಿಯೇ! ನೀನು ಅವರಂತೆ ಮಾತ್ಸರ್ಯವನ್ನು ಹೊಂದಿಲ್ಲವಷ್ಟೇ?

ಸಹಸ್ವ ಶ್ರಿಯಮನ್ಯೇಷಾಂ ಯದ್ಯಪಿ ತ್ವಯಿ ನಾಸ್ತಿ ಸಾ।

ಅನ್ಯತ್ರಾಪಿ ಸತೀಂ ಲಕ್ಷ್ಮೀಂ ಕುಶಲಾ ಭುಂಜತೇ ಜನಾಃ।
ಅಭಿವಿಷ್ಯಂದತೇ ಶ್ರೀರ್ಹಿ ಸತ್ಯಪಿ ದ್ವಿಷತೋ ಜನಾತ್ ॥೩೩॥

ನಿನ್ನಲ್ಲಿ ಸಂಪತ್ತಿಲ್ಲದಿದ್ದರೂ ಇನ್ನೊಬ್ಬರ ಸಂಪತ್ತನ್ನು ನೋಡಿ ಸಹಿಸಿಕೋ. ನಿಪುಣರಾದ ಜನರು ಇನ್ನೊಬ್ಬರ ಬಳಿ ಇರುವ ಸಂಪತ್ತನ್ನು ಭೋಗಿಸುತ್ತಾರೆ. ಸಂಪತ್ತು ಇದ್ದರೂ ಸಹ ಇನ್ನೊಬ್ಬರನ್ನು ದ್ವೇಷಿಸುವ ಮನುಷ್ಯನಿಂದ ಅದು ಹರಿದು ಹೋಗುತ್ತದೆ.

ಶ್ರಿಯಂ ಚ ಪುತ್ರಪೌತ್ರಂ ಚ ಮನುಷ್ಯಾ ಧರ್ಮಚಾರಿಣಃ।
ತ್ಯಾಗಧರ್ಮವಿದೋ ವೀರಾಃ ಸ್ವಯಮೇವ ತ್ಯಜಂತ್ಯುತ ॥೩೪॥

ತ್ಯಾಗಧರ್ಮವನ್ನು ತಿಳಿದ, ಧರ್ಮಚಾರಿಗಳಾದ, ವೀರರಾದ ಮನುಷ್ಯರು ತಾವಾಗಿಯೇ ಸಂಪತ್ತನ್ನೂ ಪುತ್ರಪೌತ್ರರನ್ನೂ ತ್ಯಜಿಸುತ್ತಾರೆ.

ಬಹು ಸಂಕಸುಕಂ ದೃಷ್ಟ್ವಾವಿವಿತ್ಸಾಸಾಧನೇನ ಚ।
ತಥಾನ್ಯೇ ಸಂತ್ಯಜಂತ್ಯೇವಂ ಮತ್ವಾ ಪರಮದುರ್ಲಭಮ್ ॥೩೫॥

ಸಂಪತ್ತಿನ ಸಾಧನೆಯು ಬಹಳ ಕಷ್ಟದಿಂದ ಕೂಡಿದೆ ಎಂದು ತಿಳಿದ ಕೆಲವರು ಅದು ಬಹಳ ದುರ್ಲಭವಾದುದೆಂದು ತಿಳಿದು ಸಂಪತ್ತಿನ ಆಸೆಯನ್ನೇ ತ್ಯಜಿಸುತ್ತಾರೆ.

ತ್ವಂ ಪುನಃ ಪ್ರಾಜ್ಞರೂಪಃ ಸನ್ ಕೃಪಣಂ ಪರಿತಪ್ಯಸೇ।
ಅಕಾಮ್ಯಾನ್ ಕಾಮಯಾನೋಽರ್ಥಾನ್ ಪರಾಚೀನಾನುಪದ್ರುತಾನ್ ೩೬

ನೀನು ಪ್ರಾಜ್ಞನಾಗಿದ್ದರೂ ಆಸೆಪಡಬಾರದ, ಪರಾಧೀನವಾದ, ಉಪದ್ರವಕ್ಕೆ ಒಳಗಾದ ವಸ್ತುಗಳಲ್ಲಿ ಆಸೆಯನ್ನು ಮಾಡುತ್ತಾ ಶೋಚನೀಯನಾಗಿ ಪರಿತಾಪ ಪಡುತ್ತಿದ್ದೀಯೆ.

ತಾಂ ಬುದ್ಧಿಮನುವಿಜ್ಞಾಯ ತ್ವಮೇವೈನಾನ್ ಪರಿತ್ಯಜ।
ಅನರ್ಥಾಂಶ್ಚಾರ್ಥರೂಪೇಣ ಅರ್ಥಾಂಶ್ಚಾನರ್ಥರೂಪತಃ ॥೩೭॥

ಅಂತಹ ಬುದ್ಧಿಯನ್ನು ಹೊಂದಿ ನೀನೇ ಅಂತಹ ಅರ್ಥಗಳನ್ನು ಪರಿತ್ಯಜಿಸು. ಅರ್ಥಗಳು ಅನರ್ಥರೂಪದಲ್ಲಿಯೂ ಅನರ್ಥಗಳು ಅರ್ಥರೂಪದಲ್ಲಿಯೂ ತೋರುತ್ತವೆ. ಅವುಗಳನ್ನು ಪರಿತ್ಯಜಿಸು.

ಅರ್ಥಾಯೈವ ಹಿ ಕೇಷಾಂಚಿದ್ ಧನನಾಶೋ ಭವತ್ಯುತ।
ಅನಿತ್ಯಂ ತಂ ಸುಖಂ ಮತ್ವಾ ಶ್ರಿಯಮನ್ಯೇ ನ ಲಿಪ್ಸತೇ ॥೩೮॥

ಧನನಾಶವು ಕೆಲವರಿಗೆ ದೊಡ್ಡ ಪ್ರಯೋಜನವನ್ನೇ ಉಂಟುಮಾಡುತ್ತದೆ. ಸಂಪತ್ತಿನಿಂದ ಉಂಟಾಗುವ ಸುಖವು ಅನಿತ್ಯವೆಂದು ತಿಳಿದು ಇನ್ನು ಕೆಲವರು ಸಂಪತ್ತನ್ನೇ ಬಯಸುವುದಿಲ್ಲ.

ರಮಮಾಣಃ ಶ್ರಿಯಾ ಕಶ್ಚಿನ್ನಾನ್ಯಚ್ಛ್ರೇಯೋऽಭಿಮನ್ಯತೇ।
ತಥಾ ತಸ್ಯೇಹಮಾನಸ್ಯ ಸಮಾರಂಭೋ ವಿನಶ್ಯತಿ ॥೩೯॥

ಸಂಪತ್ತಿನಿಂದ ಸುಖಭೋಗದಲ್ಲಿರುವವನು ಅದಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲವೆಂದು ತಿಳಿಯುತ್ತಾನೆ. ಅಂತಹ ಕಾರ್ಯಗಳಲ್ಲಿ ತೊಡಗಿರುವ ಅವನಿಗೆ ಅವನ ಪ್ರಯತ್ನಗಳು ವಿಫಲವಾಗುತ್ತವೆ.

ಕೃಚ್ಛ್ರಾಲ್ಲಬ್ಧಮಭಿಪ್ರೇತಂ ಯದಾ ಕೌಸಲ್ಯ ನಶ್ಯತಿ।
ತದಾ ನಿರ್ವಿದ್ಯತೇ ಸೋऽರ್ಥಾತ್ ಪರಿಭಗ್ನಕ್ರಮೋ ನರಃ ॥೪೦॥

ಎಲೈ ಕೌಸಲ್ಯನೇ! ಆಸೆಪಟ್ಟು ಕಷ್ಟಪಟ್ಟು ಸಂಪಾದಿಸಿದ ವಸ್ತುವು ನಾಶವನ್ನು ಹೊಂದಿದಾಗ ತನ್ನ ಪ್ರಯತ್ನವು ತಲೆಕೆಳಗಾಗಿ ಮನುಷ್ಯನು ಸಂಪತ್ತಿನ ಮೇಲೆ ವೈರಾಗ್ಯವನ್ನು ಹೊಂದುತ್ತಾನೆ.

ಧರ್ಮಮೇಕೇऽಭಿಪದ್ಯಂತೇ ಕಲ್ಯಾಣಾಭಿರತಾ ನರಾಃ।
ಪರತ್ರ ಸುಖಮಿಚ್ಛಂತೋ ನಿರ್ವಿದ್ಯೇಯುಶ್ಚ ಲೌಕಿಕಾತ್ ॥೪೧॥

ತಮ್ಮ ಕಲ್ಯಾಣದಲ್ಲಿ ಆಸಕ್ತರಾದ ಕೆಲವರು ಧರ್ಮಮಾರ್ಗವನ್ನು ಆಶ್ರಯಿ-

ಸುತ್ತಾರೆ. ಪರಲೋಕದಲ್ಲಿ ಸುಖವನ್ನು ಬಯಸುತ್ತಾ ಲೋಕದ ಪರಿಶ್ರಮದಿಂದ ಹಿಂದೆಗೆಯುತ್ತಾರೆ.

ಜೀವಿತಂ ಸಂತ್ಯಜಂತ್ಯೇಕೇ ಧನಲೋಭಪರಾ ನರಾಃ।
ನ ಜೀವಿತಾರ್ಥಂ ಮನ್ಯಂತೇ ಪುರುಷಾ ಹಿ ಧನಾದೃತೇ ॥೪೨॥

ಧನಲೋಭವುಳ್ಳ ಕೆಲವರು ಜೀವಿತವನ್ನೇ ತೊರೆಯುತ್ತಾರೆ. ಅಂತಹ ಪುರುಷರು ಧನವಿಲ್ಲದೆ ಜೀವಿಸುವುದರಲ್ಲಿ ಯಾವ ಪ್ರಯೋಜನವೂ ಇಲ್ಲವೆಂದು ತಿಳಿಯುತ್ತಾರೆ.

ಪಶ್ಯ ತೇಷಾಂ ಕೃಪಣತಾಂ ಪಶ್ಯ ತೇಷಾಮಬುದ್ಧಿತಾಮ್।
ಅಧ್ರುವೇ ಜೀವಿತೇ ಮೋಹಾದರ್ಥತೃಷ್ಣಾಮುಪಾಶ್ರಿತಾಃ ॥೪೩॥

ಅವರ ಕಾರ್ಪಣ್ಯವನ್ನು ಮತ್ತು ಬುದ್ಧಿಗೇಡಿತನವನ್ನು ನೋಡು. ಅನಿತ್ಯವಾದ ಜೀವನದಲ್ಲಿ ಮೋಹದಿಂದ ಸಂಪತ್ತಿನ ಆಸೆಗೆ ಸಿಲುಕಿದ್ದಾರೆ.

ಸಂಚಯೇ ಚ ವಿನಾಶಾಂತೇ ಮರಣಾಂತೇ ಚ ಜೀವಿತೇ।
ಸಂಯೋಗೇ ವಿಪ್ರಯೋಗಾಂತೇ ಕೋ ನು ವಿಪ್ರಣಯೇನ್ಮನಃ ॥೪೪॥

ನಾಶವನ್ನು ಹೊಂದಲಿರುವ ಧನಸಂಗ್ರಹದಲ್ಲಿ, ಮರಣವನ್ನು ಹೊಂದಿರುವ ಜೀವನದಲ್ಲಿ, ವಿಯೋಗವನ್ನು ಹೊಂದಲಿರುವ ಸಂಯೋಗದಲ್ಲಿ ಯಾವನು ತಾನೇ ಮನಸ್ಸನ್ನು ಇಟ್ಟಾನು?

ಧನಂ ವಾ ಪುರುಷಂ ರಾಜನ್ ಪುರುಷೋ ವಾ ಪುನರ್ಧನಮ್।
ಅವಶ್ಯಂ ಪ್ರಜಹಾತ್ಯೇತತ್ ತದ್ ವಿದ್ವಾನ್ ಕೋಽನುಸಂಜ್ವರೇತ್ ॥೪೫॥

ರಾಜನೇ! ಧನವು ಪುರುಷನನ್ನಾಗಲೀ ಅಥವಾ ಪುರುಷನೇ ಧನವನ್ನಾಗಲೀ ಅವಶ್ಯವಾಗಿ ಬಿಡುತ್ತಾನೆ. ಇದನ್ನು ತಿಳಿದ ಯಾವನು ವ್ಯಥೆಪಟ್ಟಾನು?

ಅನ್ಯತ್ರೋಪನತಾ ಹ್ಯಾಪತ್ ಪುರುಷಂ ತೋಷಯತ್ಯುತ।
ತೇನ ಶಾಂತಿಂ ಸ ಲಭತೇ ನಾಹಮೇವೇತಿ ಕಾರಣಾತ್ ॥೪೬॥

ಇನ್ನೊಬ್ಬನಿಗೆ ಆಪತ್ತು ಉಂಟಾದಾಗ ಪುರುಷನಿಗೆ ಸಂತೋಷವಾಗುತ್ತದೆ. ನಾನೊಬ್ಬನೇ ಆಪತ್ತಿಗೆ ಸಿಲುಕಿದವನಲ್ಲ ಎಂಬ ಕಾರಣದಿಂದ ಅವನು ಸಮಾಧಾನವನ್ನು ಪಡೆಯುತ್ತಾನೆ.

ಅನ್ಯೇಷಾಮಪಿ ನಶ್ಯಂತಿ ಸುಹೃದಶ್ಚ ಧನಾನಿ ಚ।
ಪಶ್ಯ ಬುದ್ಧ್ಯಾ ಮನುಷ್ಯಾಣಾಂ ತುಲ್ಯಮಾಪದಮಾತ್ಮನಃ।

ಬೇರೆಯವರಿಗೂ ಸುಹೃಜ್ಜನರೂ ಮತ್ತು ಧನವೂ ನಾಶವನ್ನು ಹೊಂದುತ್ತವೆ. ನಿನಗೆ ಸಮಾನರಾದ ಮನುಷ್ಯರಿಗೆ ಉಂಟಾಗುವ ಆಪತ್ತುಗಳನ್ನು ನೀನು ಬುದ್ಧಿಯಿಂದ ನೋಡು.

ನಿಯಚ್ಛ ಯಚ್ಛ ಸಂಯಚ್ಛ ಇಂದ್ರಿಯಾಣಿ ಮನೋ ಗಿರಮ್ ॥೪೭॥
ಪ್ರತಿಷಿದ್ಧಾನಿ ಚಾಪ್ಯೇಷು ದುರ್ಲಭೇಷ್ವಹಿತೇಷು ಚ।

ದುರ್ಲಭವಾದ, ಅಹಿತವಾದ, ಇಂದ್ರಿಯಮನೋವಚನಕಾರ್ಯಗಳಲ್ಲಿ ನಿಷಿದ್ಧವಾದ ಅಗಮ್ಯಾಗಮನಾದಿಗಳಿಂದ ಇಂದ್ರಿಯವನ್ನು ನಿಯಂತ್ರಿಸು. ಮನಸ್ಸನ್ನು ಸಂಯಮಗೊಳಿಸು. ಮಾತನ್ನು ನಿಯಂತ್ರಿಸು.

ಪ್ರತಿಕೃಷ್ಟೇಷು ಭಾವೇಷು ವ್ಯತಿಕೃಷ್ಟೇಷ್ವಸಂಭವೇ।
ಪ್ರಜ್ಞಾನತೃಪ್ತೋ ವಿಕ್ರಾಂತಸ್ತ್ವದ್ವಿಧೋ ನಾನುಶೋಚತಿ ॥೪೮॥

ಪಡೆಯಲು ಅಸಾಧ್ಯವಾದ ಸಂಪತ್ತು ನಾಶಹೊಂದಿದಾಗ ನಿನ್ನಂತಹವನು ಜ್ಞಾನದಿಂದ ತೃಪ್ತಿಯನ್ನು ಹೊಂದಿ ಧೈರ್ಯದಿಂದಿರಬೇಕು. ಶೋಕಪಡಬಾರದು.

ಅಲ್ಪಮಿಚ್ಛನ್ನಚಪಲೋ ಮೃದುರ್ದಾಂತಃ ಸುಸಂಯತಃ।
ಬ್ರಹ್ಮಚರ್ಯೋಪಪನ್ನಶ್ಚ ತ್ವದ್ವಿಧೋ ನೈವ ಮುಹ್ಯತಿ ॥೪೯॥

ಚಂಚಲನಲ್ಲದೇ ಮೃದುವೂ, ದಾಂತನೂ, ಆತ್ಮನಿಗ್ರಹವುಳ್ಳವನೂ, ಬ್ರಹ್ಮ-ಚರ್ಯದಿಂದ ಕೂಡಿದವನೂ ಆದ ನಿನ್ನಂತಹವನು ಅಲ್ಪವನ್ನೇ ಬಯಸುತ್ತಾ ಮೋಹಕ್ಕೆ ಒಳಗಾಗಬಾರದು.

ನ ತ್ವೇವ ಜಾಲ್ಮೀಂ ಕಾಪಾಲೀಂ ವೃತ್ತಿಮೇಷಿತುಮರ್ಹತಿ।
ನೃಶಂಸವೃತ್ತಿಂ ಪಾಪಿಷ್ಠಾಂ ದುಃಖಾಂ ಕಾಪುರುಷೋಚಿತಾಮ್ ॥೫೦॥

ಕಪಟವೃತ್ತಿಯನ್ನಾಗಲೀ, ಭಿಕ್ಷಾವೃತ್ತಿಯನ್ನಾಗಲೀ, ಕ್ರೂರವೃತ್ತಿಯನ್ನಾಗಲೀ, ದುಷ್ಟಪುರುಷರಿಗೆ ಉಚಿತವಾದ ದುಃಖಕರವಾದ ಪಾಪಿಷ್ಠವಾದ ವೃತ್ತಿಯನ್ನಾಗಲೀ ಎಂದೂ ಆಶಿಸಬಾರದು.

ಅಪಿ ಮೂಲಫಲಾಜೀವೋ ರಮಸ್ವೈಕೋ ಮಹಾವನೇ।
ವಾಗ್ಯತಃ ಸಂಗೃಹೀತಾತ್ಮಾ ಸರ್ವಭೂತದಯಾನ್ವಿತಃ ॥೫೧॥

ಮಾತನ್ನು ನಿಯಂತ್ರಿಸಿ, ಮನೋಜಯವನ್ನು ಹೊಂದಿ, ಸರ್ವಭೂತದಯೆ-ಯಿಂದ ಕೂಡಿದವನಾಗಿ ದೊಡ್ಡ ಅರಣ್ಯದಲ್ಲಿ ಮೂಲಫಲಗಳನ್ನು ಸೇವಿಸಿ-ಯಾದರೂ ಒಬ್ಬನೇ ಸಂತೋಷದಿಂದಿರು.

ಸದೃಶಂ ಪಂಡಿತಸ್ಯೈತದೀಷಾದಂತೇನ ದಂತಿನಾ।
ಯದೇಕೋ ರಮತೇऽರಣ್ಯೇ ಯಚ್ಚಾಪ್ಯಲ್ಪೇನ ತುಷ್ಯತಿ ॥೫೨॥

ಇದು ಪಂಡಿತನಿಗೆ ಯೋಗ್ಯವಾದುದು. ಬಹಳ ದೊಡ್ಡದಾದ ದಂತವನ್ನು ಹೊಂದಿದ್ದರೂ ಆನೆಯು ಏಕಾಕಿಯಾಗಿ ಅರಣ್ಯದಲ್ಲಿ ದೊರೆಯುವ ಅಲ್ಪವಸ್ತು-ಗಳಿಂದ ಸಂತೋಷಪಡುತ್ತದೆ.

ಮಹಾಹ್ರದಃ ಸಂಕ್ಷುಭಿತ ಆತ್ಮನೈವ ಪ್ರಸೀದತಿ।
ಏತದೇವಂಗತಸ್ಯಾಹಂ ಸುಖಂ ಪಶ್ಯಾಮಿ ಕೇವಲಮ್ ॥೫೩॥

ಕ್ಷೋಭೆಗೊಂಡ ದೊಡ್ಡ ಸರೋವರವು ತಾನಾಗಿಯೇ ಪ್ರಸನ್ನವಾಗುತ್ತದೆ. ಅದೇ

ರೀತಿಯಲ್ಲಿ ವಿತ್ತವನ್ನು ಕಳೆದುಕೊಂಡವನಿಗೂ ನಾನು ಕೇವಲ ಸುಖವನ್ನೇ ಕಾಣುತ್ತೇನೆ.

ಅಸಂಭವೇ ಶ್ರಿಯೋ ರಾಜನ್ ಹೀನಸ್ಯ ಸಚಿವಾದಿಭಿಃ।
ದೈವೇ ಪ್ರತಿನಿವಿಷ್ಟೇ ಚ ಕಿಂ ಶ್ರೇಯೋ ಮನ್ಯತೇ ಭವಾನ್ ॥೫೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಡಧಿಕಶತತಮೋಽಧ್ಯಾಯಃ ॥೧೦೬॥

ಎಲೈ ರಾಜನೇ! ಸಂಪತ್ತನ್ನು ಪಡೆಯುವುದು ಅಸಾಧ್ಯವಾದಾಗ, ಸಚಿವಾದಿಗಳು ಇಲ್ಲದಿರುವಾಗ, ದೈವವು ಪ್ರತಿಕೂಲವಾಗಿರುವಾಗ ನೀನು ಬೇರೆ ಯಾವ ಶ್ರೇಯಸ್ಸನ್ನು ಬಯಸುವಿ?

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೦೬ನೆಯ ಅಧ್ಯಾಯವು ಮುಗಿಯಿತು

—0—

೧೦೭. ನೂರ ಏಳನೆಯ ಅಧ್ಯಾಯ

ಶತ್ರುಜಯೋಪಾಯವಿಷಯದಲ್ಲಿ ಕೌಸಲ್ಯನಿಗೆ ಕಾಲಕವೃಕ್ಷೀಯ ಉಪದೇಶ

ಮುನಿಃ

ಅಥ ಚೈತದ್ ಪೌರುಷಂ ಕಿಂಚಿತ್ ಕ್ಷತ್ರಿಯಾತ್ಮನಿ ಪಶ್ಯಸಿ।
ಬ್ರವೀಮಿ ಹಂತ ತೇ ನೀತಿಂ ರಾಜ್ಯಸ್ಯ ಪ್ರತಿಪತ್ತಯೇ ॥೧॥

ತಾಂ ಚೇಚ್ಛಕ್ಷ್ಯಸ್ಯನುಷ್ಠಾತುಂ ಕರ್ಮ ಚೈವ ಕರಿಷ್ಯಸಿ।
ಶೃಣು ಸರ್ವಮಶೇಷೇಣ ಯತ್ ತ್ವಾವಕ್ಷ್ಯಾಮಿ ತತ್ತ್ವತಃ ॥೨॥

ಮುನಿಗಳು – ಅಥವಾ ಎಲೈ ಕ್ಷತ್ರಿಯನೇ! ನೀನು ಪೌರುಷವನ್ನೇನಾದರೂ ಹೊಂದಿರುವುದಾದರೆ ಸಂತೋಷ! ರಾಜ್ಯವನ್ನು ಸಂಪಾದಿಸುವ ನೀತಿಯನ್ನು ಹೇಳುತ್ತೇನೆ . ಅದನ್ನು ಅನುಷ್ಠಾನಮಾಡಲು ಸಮರ್ಥನಾಗಿ ಅನುಷ್ಠಾನಮಾಡುವುದಾದರೆ ಹೇಳುತ್ತೇನೆ. ನಾನು ನಿನಗೆ ಹೇಳುವುದನ್ನು ಸಮಗ್ರವಾಗಿ ಕೇಳು.

ಆಚರಿಷ್ಯಸಿ ಚೇತ್ ಕರ್ಮ ಮಹತೋಽರ್ಥಾನವಾಪ್ಸ್ಯಸಿ।
ರಾಜ್ಯಂ ರಾಜ್ಯಸ್ಯ ಮಂತ್ರಂ ವಾ ಮಹತೀಂ ವಾ ಪುನಃ ಶ್ರಿಯಮ್ ।
ಯದ್ಯೇತದ್ ರೋಚತೇ ರಾಜನ್ ಪುನರ್ಬ್ರೂಹಿ ಬ್ರವೀಮಿ ತೇ ॥೩॥

ನಾನು ಹೇಳಿದ ಕಾರ್ಯವನ್ನು ಮಾಡಿದರೆ ಶ್ರೇಷ್ಠವಾದ ಅರ್ಥವನ್ನು ಹೊಂದುವಿ. ರಾಜ್ಯವಾಗಲೀ, ರಾಜ್ಯದ ಮಂತ್ರಾಲೋಚನೆಯಾಗಲೀ, ಮಹತ್ತಾದ ಸಂಪತ್ತಾಗಲೀ ನಿನಗೆ ಇಷ್ಟವಾಗುವುದಾದರೆ ಎಲೈ ರಾಜನೇ! ನನಗೆ ಹೇಳು. ಅದನ್ನೂ ಸಂಪಾದಿಸುವ ಉಪಾಯವನ್ನು ನಿನಗೆ ಹೇಳುತ್ತೇನೆ.

ರಾಜಪುತ್ರಃ

ಬ್ರವೀತು ಭಗವಾನ್ ನೀತಿಮುಪಪನ್ನೋಽಸ್ಮ್ಯಹಂ ಪ್ರಭೋ।
ಅಮೋಘಮಿದಮದ್ಯಾಸ್ತು ತ್ವಯಾ ಸಹ ಸಮಾಗತಮ್ ॥೪॥

ರಾಜಪುತ್ರ – ಪ್ರಭುಗಳೇ! ಪೂಜ್ಯರಾದ ನೀವು ನನಗೆ ಅದನ್ನು ಹೇಳಬೇಕು. ನಾನು ನಿಮಗೆ ಶರಣಾಗತನಾಗಿದ್ದೇನೆ. ಈ ದಿನ ನಿಮ್ಮ ಈ ಸಮಾಗಮವು ವ್ಯರ್ಥ-ವಾಗದಿರಲಿ.

ಮುನಿಃ

ಹಿತ್ವಾ ಸ್ತಂಭಂ ಚ ಮಾನಂ ಚ ಕ್ರೋಧಹರ್ಷೌ ಭಯಂ ತಥಾ।
ಪ್ರತ್ಯಮಿತ್ರಂ ನಿಷೇವಸ್ವ ಪ್ರಣಿಪತ್ಯ ಕೃತಾಂಜಲಿಃ ॥೫॥

ಮುನಿಗಳು – ದರ್ಪವನ್ನು ಅಹಂಕಾರವನ್ನು, ಕ್ರೋಧಹರ್ಷಗಳನ್ನು, ಭಯ-ವನ್ನು ತ್ಯಜಿಸಿ, ಶತ್ರುವಿಗೆ ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು ಅವನನ್ನು ಸೇವಿಸು.

ತಮುತ್ತಮೇನ ಶೌಚೇನ ಕರ್ಮಣಾ ಚಾಭಿರಾಧಯ।
ದಾತುಮರ್ಹತಿ ತೇ ವೃತ್ತಿಂ ವೈದೇಹಃ ಸತ್ಯಸಂಗರಃ ॥೬॥

ಅವನನ್ನು ಉತ್ತಮವಾದ ಶೌಚದಿಂದಲೂ ಕರ್ಮದಿಂದಲೂ ಆರಾಧಿಸು. ಸತ್ಯ-ಸಂಗರನಾದ ಜನಕನು ನಿನಗೆ ಜೀವನೋಪಾಯವನ್ನು ಕಲ್ಪಿಸಿಕೊಡಲು ಸಮರ್ಥ-ನಾಗಿದ್ದಾನೆ.

ಪ್ರಮಾಣಂ ಸರ್ವಭೂತೇಷು ಪ್ರಗ್ರಹಂ ಚ ಗಮಿಷ್ಯಸಿ।
ತತಃ ಸಹಾಯಾನ್ ಸೋತ್ಸಾಹಾನ್ ಲಪ್ಸ್ಯಸೇऽವ್ಯಸನಾನ್ ಶುಚೀನ್ ॥೭॥

ನೀನು ಎಲ್ಲ ಪ್ರಜೆಗಳಿಂದ ಪೂಜ್ಯನಾಗುವಿ. ಮತ್ತು ಸ್ವೀಕರಿಸಲ್ಪಡುವಿ. ಅನಂತರ ಶುಚಿಗಳಾದ, ಚಟಗಳಿಲ್ಲದ, ಉತ್ಸಾಹಭರಿತರಾದ ಸಹಾಯಕರನ್ನು ಪಡೆಯುವಿ.

ವರ್ತಮಾನಃ ಸ್ವಶಾಸ್ತ್ರೇ ವೈ ಸಂಯತಾತ್ಮಾ ಜಿತೇಂದ್ರಿಯಃ।
ಅಭ್ಯುದ್ಧರತಿ ಚಾತ್ಮಾನಂ ಪ್ರಸಾದಯತಿ ಚ ಪ್ರಜಾಃ ॥೮॥

ತನ್ನ ರಾಜ್ಯದಲ್ಲಿಯೇ ಜಿತಮನಸ್ಕನಾಗಿ ಜಿತೇಂದ್ರಿಯನಾಗಿ ಇದ್ದು ರಾಜನು ತನ್ನನ್ನು ಉದ್ಧರಿಸಿಕೊಳ್ಳುತ್ತಾನೆ. ಮತ್ತು ಪ್ರಜೆಗಳನ್ನು ಸಂತೋಷಪಡಿಸುತ್ತಾನೆ.

ತೇನೈವ ತ್ವಂ ಧೃತಿಮತಾ ಶ್ರೀಮತಾ ಚಾಭಿಸತ್ಕೃತಃ।
ಪ್ರಮಾಣಂ ಸರ್ವಭೂತೇಷು ಗತ್ವಾ ಪ್ರಗ್ರಹಣಂ ಮಹತ್ ॥೯॥

ತತಃ ಸುಹೃದ್ಬಲಂ ಲಬ್ಧ್ವಾ ಮಂತ್ರಯಿತ್ವಾ ಸುಮಂತ್ರಿತಮ್।
ಅಂತರೈರ್ಭೇದಯಿತ್ವಾऽರೀನ್ ಬಿಲ್ವಂ ಬಿಲ್ವೇನ ಶಾತಯ।
ಪರೈರ್ವಾ ಸಂವಿದಂ ಕೃತ್ವಾ ಬಲಮಪ್ಯಸ್ಯ ಘಾತಯ ॥೧೦॥

ಧೈರ್ಯಶಾಲಿಯೂ ಸಂಪದ್ಯುಕ್ತನೂ ಆದ ಅವನಿಂದಲೇ ನೀನು ಪೂಜಿತನಾಗಿ ಎಲ್ಲ ಪ್ರಜೆಗಳಿಗೂ ಪೂಜ್ಯನಾಗಿ ಎಲ್ಲರಿಂದಲೂ ಸ್ವೀಕರಿಸಲ್ಪಡುವಿ. ಅನಂತರ ಸುಹೃಜ್ಜನರ ಬಲವನ್ನು ಪಡೆದು, ಒಳ್ಳೆಯ ಮಂತ್ರಾಲೋಚನೆಯನ್ನು ಮಾಡಿ, ಶತ್ರುಗಳ ಒಳಗಿನವರಿಂದಲೇ ಬಿಲ್ವಫಲವನ್ನು ಬಿಲ್ವಫಲದಿಂದ ಹೊಡೆದಂತೆ ಶತ್ರು-ಗಳನ್ನು ನಾಶಗೊಳಿಸು. ಅಥವಾ ಅವನ ಶತ್ರುಗಳ ಜೊತೆಯಲ್ಲಿ ಸಂಭಾಷಣೆಯನ್ನು ಮಾಡಿ ಅವನ ಸೈನ್ಯವನ್ನು ವಿನಾಶಗೊಳಿಸು.

ಅಲಭ್ಯಾ ಯೇ ಶುಭಾ ಭಾವಾಃ ಸ್ತ್ರಿಯಶ್ಚಾಚ್ಛಾದನಾನಿ ಚ।
ಶಯ್ಯಾಸನಾನಿ ಯಾನಾನಿ ಮಹಾರ್ಹಾಣಿ ಗೃಹಾಣಿ ಚ ॥೧೧॥

ಪಕ್ಷಿಣೋ ಮೃಗಜಾತಾನಿ ರಸಾ ಗಂಧಾಃ ಫಲಾನಿ ಚ।
ತೇಷ್ವೇವ ಸಜ್ಜಯೇಥಾಸ್ತ್ವಂ ಯಥಾ ನಶ್ಯೇತ್ ಸ್ವಯಂ ಪರಃ ॥೧೨॥

ಶುಭವಾದ ವಸ್ತುಗಳು, ಸುಂದರಿಯರು, ಒಳ್ಳೆಯ ವಸ್ತುಗಳು, ಶಯ್ಯಾಸನ-ಯಾನಗಳು, ಬೆಲೆಬಾಳುವ ಗೃಹಗಳು, ಪಕ್ಷಿಗಳು, ಮೃಗಗಳು, ರಸಗಂಧಗಳು, ಫಲಗಳು – ಇವೆಲ್ಲವೂ ದುರ್ಲಭವಾದವು. ಅವನನ್ನು ಅವುಗಳಲ್ಲಿಯೇ ಆಸಕ್ತನಾ-ಗಿರುವಂತೆ ಮಾಡಿ ಅವನು ತಾನೇ ನಾಶವನ್ನು ಹೊಂದುವಂತೆ ಮಾಡು.

ಯದ್ಯೇವ ಪ್ರತಿಷೇದ್ಧವ್ಯೋ ಯದ್ಯುಪೇಕ್ಷಣಮರ್ಹತಿ।
ನ ಜಾತು ವಿವೃತಃ ಕಾರ್ಯಃ ಶತ್ರುರ್ವಿನಯಮಿಚ್ಛತಾ ॥೧೩॥

ಶತ್ರುವನ್ನು ಯುದ್ಧದಲ್ಲಿ ಎದುರಿಸಬೇಕಾದರೆ ಅಥವಾ ಉಪೇಕ್ಷೆ ಮಾಡ-ಬೇಕಾದರೆ ಶತ್ರುವನ್ನು ಬಗ್ಗಿಸಲು ಬಯಸುವವನು ಅದನ್ನು ಗೌಪ್ಯವಾಗಿ ಮಾಡ-ಬೇಕು.

ವಸಸ್ವ ಪರಮಾಮಿತ್ರಂ ವಿಷಯೇ ಪ್ರಾಜ್ಞಸಮ್ಮತೇ।
ಭಜಸ್ವ ಶ್ವೇತಕಾಕೀಯೈರ್ಮಿಥ್ಯಾಧರ್ಮಮನರ್ಥಕೈಃ ॥೧೪॥

ದೊಡ್ಡ ವೈರಿಯಾದವನನ್ನು ಪ್ರಾಜ್ಞಸಮ್ಮತವಾದ ವಿಷಯಗಳನ್ನು ಭೋಗಿ-ಸುವಂತೆ ಮಾಡಬೇಕು. ಅವನಿಗೆ ಅನರ್ಥಪ್ರಾಪಕವಾದ ಅನುಕೂಲವಾದ ಮಾತು-ಗಳನ್ನು ಆಡಬೇಕು.

ಆರಂಭಾಶ್ಚಾಸ್ಯ ಮಹತೋ ದುಷ್ಕರಾಂಸ್ತ್ವಂ ಪ್ರಯೋಜಯ।
ನದೀವಚ್ಚ ವಿರೋಧೇಽಸ್ಯ ಬಲವದ್ಭಿರ್ವಿರುದ್ಧ್ಯತಾಮ್ ॥೧೫॥

ಅವನು ದುಷ್ಕರವಾದ ದೊಡ್ಡ ಕಾರ್ಯವನ್ನು ಮಾಡುವಂತೆ ಅವನನ್ನು ಪ್ರೇರಿಸಬೇಕು. ಬಲಿಷ್ಠರಾಜರ ಜೊತೆಯಲ್ಲಿ ವಿರೋಧವನ್ನು ಮಾಡುವಂತೆ ಮಾಡ-

ಬೇಕು. ಆಗ ಬಲವಾದ ವಿರೋಧವನ್ನು ಮಾಡಿದರೆ ನದಿಯು ಪಾರ್ಶ್ವದಲ್ಲಿ ಹರಿದುಹೋಗುವಂತೆ ಅವನ ಸಂಪತ್ತು ಹರಿದು ಹೋಗುತ್ತದೆ.

ಉದ್ಯಾನಾನಿ ಮಹಾರ್ಹಾಣಿ ಶಯನಾನ್ಯಾಸನಾನಿ ಚ।
ಪ್ರತಿಭೋಗಸುಖೇನೈವ ಕೋಶಮಸ್ಯ ವಿರೇಚಯ ॥೧೬॥

ಅವನಿಂದ ಭೋಗಸುಖಕ್ಕಾಗಿ ಬೆಲೆಬಾಳುವ ಉದ್ಯಾನಗಳನ್ನು, ಶಯನಾಸನಗಳನ್ನು ಅವನು ನಿರ್ಮಿಸುವಂತೆ ಮಾಡಿ ಅವನ ಕೋಶವನ್ನು ಬರಿದುಮಾಡು.

ಯಜ್ಞದಾನಪ್ರಶಂಸಾಽಸ್ಯೈ ಬ್ರಾಹ್ಮಣೇಷ್ವನುವರ್ಣ್ಯತಾಮ್।
ತೇ ತ್ವತ್‌ಪ್ರಿಯಂ ಕರಿಷ್ಯಂತಿ ತಂ ಛೇತ್ಸ್ಯಂತಿ ವೃಕಾ ಇವ ॥೧೭॥

ಬ್ರಾಹ್ಮಣರಲ್ಲಿ ಅವನ ಯಜ್ಞದಾನಗಳನ್ನು ಪ್ರಶಂಸೆ ಮಾಡು. ಅವರು ನಿನಗೆ ಪ್ರಿಯವನ್ನು ಮಾಡಿ, ತೋಳಗಳಂತೆ ಅವನನ್ನು (ಅವನ ಸಂಪತ್ತನ್ನು) ಹರಿದು ಹಾಕುತ್ತಾರೆ.

ಅಸಂಶಯಂ ಪುಣ್ಯಶೀಲಃ ಪ್ರಾಪ್ನೋತಿ ಪರಮಾಂ ಗತಿಮ್।
ತ್ರಿವಿಷ್ಟಪೇ ಪುಣ್ಯತಮಂ ಸ್ಥಾನಂ ಪ್ರಾಪ್ನೋತಿ ಪಾರ್ಥಿವಃ।
ಕೋಶಕ್ಷಯೇ ತ್ವಮಿತ್ರಾಣಾಂ ವಶಂ ಕೌಸಲ್ಯ ಗಚ್ಛತಿ ॥೧೮॥

ಪುಣ್ಯಶೀಲನಾದ ರಾಜನು ನಿಃಸಂಶಯವಾಗಿ ಶ್ರೇಷ್ಠಗತಿಯನ್ನು ಸ್ವರ್ಗದಲ್ಲಿ ಉನ್ನತಸ್ಥಾನವನ್ನು ಪಡೆಯುತ್ತಾನೆ. ಆದರೆ ಎಲೈ ಕೌಸಲ್ಯನೇ! ಕೋಶವು ಬರಿದಾದಾಗ ಶತ್ರುಗಳಿಗೆ ವಶನಾಗುತ್ತಾನೆ.

ಉಭಯತ್ರ ಪ್ರಸಕ್ತಸ್ಯ ಧರ್ಮೇ ಚಾಧರ್ಮ ಏವ ಚ।
ಮೂಲಂ ಫಲಾರ್ಥಮುಚ್ಛಿದ್ಯೇತ್ ತೇನ ನಂದಂತಿ ಶತ್ರವಃ ॥೧೯॥

ಧರ್ಮ ಮತ್ತು ಅಧರ್ಮಗಳು ಎರಡಲ್ಲಿಯೂ ಪ್ರಸಕ್ತನಾದವನಿಗೆ ಅದರಿಂದ

ಅವನ ಮೂಲಭೂತವಾದ ಕೋಶವು ನಾಶವನ್ನು ಹೊಂದುತ್ತದೆ. ಅದರಿಂದ ಶತ್ರುಗಳು ಸಂತೋಷಪಡುತ್ತಾರೆ.

ನಿಂದ್ಯಾಸ್ಯ ಮಾನುಷಂ ಕರ್ಮ ದೈವಮಸ್ಯೋಪವರ್ಣಯ।
ಅಸಂಶಯಂ ದೈವಪರಃ ಕ್ಷಿಪ್ರಮೇವ ವಿನಶ್ಯತಿ ॥೨೦॥

ಅವನ ಮಾನುಷಕರ್ಮಗಳನ್ನು ನಿಂದಿಸಿ, ಅವನಿಗೆ ದೈವಪ್ರೀತಿಕರವಾದ ಕರ್ಮಗಳನ್ನು ವರ್ಣಿಸು. ದೈವಪರನಾದ ರಾಜನು ನಿಃಸಂಶಯವಾಗಿ ಶೀಘ್ರವಾಗಿ ವಿನಾಶವನ್ನು ಹೊಂದುತ್ತಾನೆ.

ಯಾಜಯೈನಂ ವಿಶ್ವಜಿತಾ ಸರ್ವಸ್ವೇನ ವಿಯುಜ್ಯತಾಮ್ ।
ತತೋ ಗಚ್ಛತ್ವಸಿದ್ಧಾರ್ಥಃ ಭಿಕ್ಷಮಾಣೋ ಮಹಾಜನಮ್ ॥೨೧॥

ಅವನಿಂದ ವಿಶ್ವಜಿತ್ ಯಾಗವನ್ನು ಮಾಡಿಸಿ ಸರ್ವಸ್ವದಕ್ಷಿಣೆಯನ್ನು ಕೊಡಿಸು. ಅವನ ಸರ್ವಸಂಪತ್ತೂ ವಿಯೋಗವನ್ನು ಹೊಂದಲಿ. ಅನಂತರ ಅವನು ಇಷ್ಟಾರ್ಥವು ನೆರವೇರದೇ ಪ್ರಜೆಗಳ ಎದುರಿಗೆ ಹೋಗಿ ಭಿಕ್ಷೆಯನ್ನು ಬೇಡಲಿ.

ತ್ಯಾಗಧರ್ಮವಿದಂ ಮುಂಡಂ ಕಂಚಿದಸ್ಯೋಪವರ್ಣಯ।
ಅಪಿ ತ್ಯಾಗಂ ಬುಭೂಷೇತ ಕಚ್ಚಿದ್ ಗಚ್ಛೇದನಾಶ್ರಯಮ್ ॥೨೨॥

ಅಥವಾ ತ್ಯಾಗಧರ್ಮವನ್ನು ತಿಳಿದ ಒಬ್ಬ ಸನ್ಯಾಸಿಯನ್ನು ಅವನಿಗೆ ವರ್ಣಿಸು. (ಪರಿಚಯಿಸು). ಅವನು ತ್ಯಾಗಧರ್ಮದಲ್ಲಿ ಆಸಕ್ತನಾಗಿ ಆಶ್ರಯರಹಿತನಾಗಲಿ.

ಸಿದ್ಧೇನೌಷಧಯೋಗೇನ ಸರ್ವಶತ್ರುವಿನಾಶಿನಾ ।
ನಾಗಾನಶ್ವಾನ್ ಮನುಷ್ಯಾಂಶ್ಚ ಕೃತಕೈರುಪಘಾತಯ ॥೨೩॥

ಮೋಸಮಾಡುವ ಜನರನ್ನು ನಿಯೋಜಿಸಿ ಸರ್ವಶತ್ರುವಿನಾಶಕವಾದ ಶಾಸ್ತ್ರ-ಸಿದ್ಧವಾದ ಔಷಧಪ್ರಯೋಗಗಳಿಂದ ಅವನ ಅಶ್ವಗಳನ್ನು ಮತ್ತು ಗಜಗಳನ್ನು ನಾಶ-ಪಡಿಸು.

ಏತೇ ಚಾನ್ಯೇ ಚ ಬಹವೋ ದಂಭಯೋಗಾಃ ಸುನಿಶ್ಚಿತಾಃ।
ಶಕ್ಯಾ ವಿಷಹತಾ ಕರ್ತುಂ ನ ಕ್ಲೀಬೇನ ನೃಪಾತ್ಮಜ ॥೨೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಸಪ್ತಾಧಿಕಶತತಮೋಽಧ್ಯಾಯಃ ॥೧೦೭॥

ಎಲೈ ರಾಜಕುಮಾರನೇ! ಮೋಸದಿಂದ ಮಾಡುವ ಉಪಾಯಗಳು ಇವೂ ಮತ್ತು ಇನ್ನೂ ಅನೇಕವೂ ಶಾಸ್ತ್ರದಲ್ಲಿ ನಿಶ್ಚಿತವಾಗಿವೆ. ಅವುಗಳನ್ನು ಮಾಡಲು ಸಾಧ್ಯವಾದರೆ ಮಾಡಬಹುದು. ಹೇಡಿಯಾದವನು ಮಾಡಲಾರ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೭ನೆಯ ಅಧ್ಯಾಯವು ಮುಗಿಯಿತು

—0—

೧೦೮. ನೂರ ಎಂಟನೆಯ ಅಧ್ಯಾಯ

ಕಾಲಕವೃಕ್ಷೀಯಮುನಿಯ ಆದೇಶದಂತೆ ಕೋಸಲರಾಜನ ರಾಜ್ಯಪ್ರಾಪ್ತಿ

ರಾಜಪುತ್ರಃ

ನ ನಿಕೃತ್ಯಾ ನ ದಂಭೇನ ಬ್ರಹ್ಮನ್ನಿಚ್ಛಾಮಿ ಜೀವಿತುಮ್।
ನಾಧರ್ಮಯುಕ್ತಾನಿಚ್ಛೇಯಮರ್ಥಾನ್ ಸುಮಹತೋಽಪ್ಯಹಮ್ ॥೧॥

ರಾಜಪುತ್ರ – ಎಲೈ ಬ್ರಾಹ್ಮಣರೇ! ನಾನು ಡಂಭದಿಂದಾಗಲೀ ಮೋಸದಿಂದಾಗಲೀ ಜೀವಿಸಲು ಬಯಸುವುದಿಲ್ಲ. ಅಧರ್ಮಮೂಲವಾದ ವಸ್ತು ಎಷ್ಟೇ ದೊಡ್ಡದಾದರೂ ಅದನ್ನು ನಾನು ಬಯಸುವುದಿಲ್ಲ.

ಪುರಸ್ತಾದೇವ ಭಗವನ್ ಮಯ್ಯೇತದಪವರ್ಜಿತಮ್।
ಯೇನ ಮಾಂ ನಾಭಿಶಂಕೇತ ಯದ್ವಾ ಕೃತ್ಸ್ನಂ ಹಿತಂ ಭವೇತ್ ॥೨॥

ಎಲೈ ಪೂಜ್ಯರೇ! ನಾನು ಅಂತಹ ಮಾರ್ಗವನ್ನು ಮೊದಲೇ ಬಿಟ್ಟಿದ್ದೇನೆ. ಏನು ಮಾಡಿದರೆ ಪ್ರಜೆಗಳು ನನ್ನನ್ನು ಶಂಕಿಸುವುದಿಲ್ಲವೋ ಸಮಗ್ರವಾದ ಹಿತವುಂಟಾಗುತ್ತದೆಯೋ ಅದನ್ನು ಮಾತ್ರ ಮಾಡುತ್ತೇನೆ.

ಆನೃಶಂಸ್ಯೇನ ಧರ್ಮೇಣ ಲೋಕೇ ಹ್ಯಸ್ಮಿನ್ ಜಿಜೀವಿಷುಃ।
ನಾಹಮೇತದಲಂ ಕರ್ತುಂ ನೈತನ್ಮಯ್ಯುಪಪದ್ಯತೇ ॥೩॥

ಮಾರ್ದವಯುಕ್ತವಾದ ಧರ್ಮದಿಂದ ಈ ಲೋಕದಲ್ಲಿ ಜೀವಿಸಲು ಇಷ್ಟ ಪಡುತ್ತೇನೆ. ನೀವು ಹೇಳಿದ ಕಾರ್ಯಗಳನ್ನು ನಾನು ಮಾಡಲಾರೆ. ಅದು ನನಗೆ ಹೊಂದುವುದಿಲ್ಲ.

ಮುನಿಃ

ಉಪಪನ್ನಸ್ತ್ವಮೇತೇನ ಯಥಾ ಕ್ಷತ್ರಿಯ ಭಾಷಸೇ।
ಪ್ರಕೃತ್ಯಾ ಹ್ಯುಪಪನ್ನೋಽಸಿ ಬುದ್ಧ್ಯಾ ಚಾದ್ಭುತದರ್ಶನ ॥೪॥

ಮುನಿಗಳು – ಎಲೈ ಕ್ಷತ್ರಿಯನೇ! ನೀನು ಮಾತನಾಡುವ ರೀತಿಯು ನಿನಗೆ ಯೋಗ್ಯವಾಗಿಯೇ ಇದೆ. ಎಲೈ ಅದ್ಭುತದರ್ಶನನೇ! ನೀನು ಸ್ವಾಭಾವಿಕವಾಗಿಯೇ ಸದ್ಬುದ್ಧಿಯನ್ನು ಹೊಂದಿದ್ದೀಯೆ.

ಉಭಯೋರೇವ ವಾಮರ್ಥೇ ಯತಿಷ್ಯೇ ತವ ತಸ್ಯ ಚ।
ಸಂಶ್ಲೇಷಂ ವಾ ಕರಿಷ್ಯಾಮಿ ಶಾಶ್ವತಂ ಹ್ಯನಪಾಯಿನಮ್ ॥೫॥

ನಿಮ್ಮಿಬ್ಬರ ಎಂದರೆ, ನಿನ್ನ ಮತ್ತು ವೈದೇಹರಾಜನ ಹಿತಕ್ಕಾಗಿ ನಾನು ಪ್ರಯತ್ನ ಪಡುವೆನು. ಶಾಶ್ವತವಾದ ಕಡಿದು ಹೋಗದ ಸ್ನೇಹಸಂಬಂಧವನ್ನಾದರೂ ಉಂಟು ಮಾಡುವೆನು.

ತ್ವಾದೃಶಂ ಹಿ ಕುಲೇ ಜಾತಮನೃಶಂಸಂ ಬಹುಶ್ರುತಮ್।
ಅಮಾತ್ಯಂ ಕೋ ನ ಕುರ್ವೀತ ರಾಜ್ಯಪ್ರಣಯಕೋವಿದಮ್ ॥೬॥

ನಿನ್ನಂತಹ ಸತ್ಕುಲಪ್ರಸೂತನಾದ, ಮೃದುವಾದ, ಬಹುಶ್ರುತನಾದ, ರಾಜ್ಯನೀತಿ-ವಿಶಾರದನಾದವನನ್ನು ಯಾವನು ತಾನೇ ಮಂತ್ರಿಯಾಗಿ ಮಾಡಿಕೊಳ್ಳುವುದಿಲ್ಲ?

ಯಸ್ತ್ವಂ ಪ್ರವ್ರಾಜಿತೋ ರಾಜ್ಯಾದ್ ವ್ಯಸನಂ ಚೋತ್ತಮಂ ಗತಃ।
ಆನೃಶಂಸ್ಯೇನ ವೃತ್ತೇನ ಕ್ಷತ್ರಿಯೇಚ್ಛಸಿ ಜೀವಿತುಮ್ ॥೭॥

ಏಕೆಂದರೆ ನೀನು ರಾಜ್ಯವು ಬಿಟ್ಟು ಹೋಗಿ ದೊಡ್ಡದಾದ ವ್ಯಸನವನ್ನು ಹೊಂದಿದರೂ ಮೃದುವಾದ ನಡತೆಯಿಂದ ಜೀವಿಸಲು ಬಯಸುತ್ತೀಯೆ.

ಆಗಂತಾ ಮದ್‌ಗೃಹಂ ತಾತ ವೈದೇಹಃ ಸತ್ಯಸಂಗರಃ।
ಯಥಾಹಂ ತಂ ನಿಯೋಕ್ಷ್ಯಾಮಿ ತತ್ ಕರಿಷ್ಯತ್ಯಸಂಶಯಮ್ ॥೮॥

ಎಲೈ ಪ್ರೀತಿಪಾತ್ರನೇ! ಸತ್ಯಸಂಗರನಾದ ವಿದೇಹರಾಜನು ನನ್ನ ಆಶ್ರಮಕ್ಕೆ ಬರುವನು. ನಾನು ಅವನಿಗೆ ನಿದೇಶವನ್ನು ನೀಡಿದಂತೆ ಅವನು ನಿಃಸಂಶಯವಾಗಿ ಮಾಡುವನು.

ಭೀಷ್ಮಃ

ತತ ಆಹೂಯ ವೈದೇಹಂ ಮುನಿರ್ವಚನಮಬ್ರವೀತ್।
ಅಯಂ ರಾಜಕುಲೇ ಜಾತೋ ವಿದಿತಾಭ್ಯಂತರೋ ಮಮ ॥೯॥

ಭೀಷ್ಮರು – ಅನಂತರ ಮುನಿಯು ವಿದೇಹರಾಜನನ್ನು ಕರೆಸಿ, ಅವನ ಜೊತೆಯಲ್ಲಿ ಮಾತನಾಡಿದನು. 'ಇವನು (ಕೋಸಲರಾಜಕುಮಾರನು) ರಾಜಕುಲದಲ್ಲಿ ಜನಿಸಿದವನು. ಅವನ ಒಳಗಿನ ವಿಷಯವೆಲ್ಲವೂ ನನಗೆ ತಿಳಿದಿದೆ..'

ಆದರ್ಶ ಇವ ಶುದ್ಧಾತ್ಮಾ ಶಾರದಶ್ಚಂದ್ರಮಾ ಇವ।
ನಾಸ್ಮಿನ್ ಪಶ್ಯಾಮಿ ವೃಜಿನಂ ಸರ್ವತೋ ಮೇ ಪರೀಕ್ಷಿತಃ ॥೧೦॥

'ಕನ್ನಡಿಯಂತೆ ಶರತ್ಕಾಲದ ಚಂದ್ರನಂತೆ ಶುದ್ಧವಾದ ಮನಸ್ಸನ್ನು ಹೊಂದಿದ್ದಾನೆ. ಎಲ್ಲ ರೀತಿಯಿಂದ ಪರೀಕ್ಷೆ ಮಾಡಿದರೂ ನಾನು ಅವನಲ್ಲಿ ಒಂದು ದೋಷವನ್ನೂ ಕಾಣುವುದಿಲ್ಲ'.

ತೇನ ತೇ ಸಂಧಿರೇವಾಸ್ತು ವಿಶ್ವಾಸಾಸ್ಮಿನ್ ಯಥಾ ಮಯಿ।
ನ ರಾಜ್ಯಮನಮಾತ್ಯೇನ ಶಕ್ಯಂ ಶಾಸ್ತುಮಮಿತ್ರಹನ್ ॥೧೧॥

'ಅವನ ಜೊತೆಯಲ್ಲಿ ನಿನಗೆ ಸಂಧಿಯುಂಟಾಗಲಿ, ನನ್ನಲ್ಲಿ ವಿಶ್ವಾಸ ಮಾಡಿ-

ದಂತೆ ಅವನಲ್ಲಿಯೂ ವಿಶ್ವಾಸವನ್ನು ಮಾಡು. ಎಲೈ ಶತ್ರುನಾಶಕನೇ! ಅಮಾತ್ಯ-ನಿಲ್ಲದೇ ರಾಜ್ಯವನ್ನು ಪಾಲನೆ ಮಾಡುವುದು ಸಾಧ್ಯವಿಲ್ಲ'.

ಅಮಾತ್ಯಃ ಶೂರ ಏವ ಸ್ಯಾದ್ ಬುದ್ಧಿಸಂಪನ್ನ ಏವ ಚ।
ತಸ್ಮಾಚ್ಚೈವ ಭಯಂ ರಾಜ್ಞಃ ಪಶ್ಯ ರಾಜ್ಯಸ್ಯ ಯೋಜನಮ್ ।
ಧರ್ಮಾತ್ಮಾನಂ ಕ್ವಚಿಲ್ಲೋಕೇ ನಾನ್ಯಾಸ್ತಿ ಗತಿರೀದೃಶೀ ॥೧೨॥

ಅಮಾತ್ಯನು ಶೂರನೂ ಮೇಧಾವಿಯೂ ಆಗಿರಬೇಕು. ಶೂರನಿಂದಲೇ ಮತ್ತು ಮೇಧಾವಿಗಳಿಂದಲೇ ರಾಜನಿಗೆ ಭಯವುಂಟಾಗುತ್ತದೆ. ರಾಜ್ಯದ ವಿಧಾನ- ವನ್ನು ನೋಡು. ಧರ್ಮಾತ್ಮರಾದವರಿಗೆ ಲೋಕದಲ್ಲಿ ಅಂತಹ ಅಮಾತ್ಯನನ್ನು ಹೊಂದದೇ ಬೇರೆ ಮಾರ್ಗವಿಲ್ಲ.

ಕೃತಾತ್ಮಾ ರಾಜಪುತ್ರೋಽಯಂ ಸತಾಂ ಮಾರ್ಗಮನುಷ್ಠಿತಃ।
ಸುಸಂಗೃಹೀತಸ್ತ್ವೇವೈಷ ತ್ವಯಾ ಧರ್ಮಪುರೋಗಮಃ।
ಸಂಸೇವ್ಯಮಾನಃ ಪುತ್ರಸ್ತೇ ಗೃಹ್ಣೀಯಾದ್ ವದತೋ ಗುಣಾನ್ ॥೧೩॥

ಈ ರಾಜಕುಮಾರನು ಒಳ್ಳೆಯ ಮನಸ್ಸನ್ನು ಹೊಂದಿದವನು. ಸನ್ಮಾರ್ಗದಲ್ಲಿ ನಡೆಯುವವನು. ಧರ್ಮಪ್ರಧಾನನಾದ ಇವನನ್ನು ನೀನು ಚೆನ್ನಾಗಿ ಸಂಗ್ರಹಿಸಿ ಅವನನ್ನು ಸೇವಿಸಿದರೆ ನಿನ್ನ ಪುತ್ರನು ಅವನಿಂದ ಒಳ್ಳೆಯ ಗುಣಗಳನ್ನು ಸಂಪಾದಿಸಿ-ಯಾನು!

ಯದ್ಯಯಂ ಪ್ರತಿಯುದ್ಧ್ಯೇತ್ ತ್ವಾಂ ಸ್ವಕರ್ಮ ಕ್ಷತ್ರಿಯಸ್ಯ ತತ್ ।
ಜಿಗೀಷಮಾಣಸ್ತ್ವಾಂ ಯುದ್ಧೇ ಪಿತೃಪೈತಾಮಹೇ ಪದೇ ॥೧೪॥

ತ್ವಂ ಚಾಪಿ ಪ್ರತಿಯುದ್ಧ್ಯೇಥಾ ವಿಜಿಗೀಷುವ್ರತೇ ಸ್ಥಿತಃ।
ಅಯುದ್ಧ್ವಲ್ವ ನಿಯೋಗಾನ್ಮೇ ವಶೇ ವೈದೇಹ ತೇ ಸ್ಥಿತಃ ॥೧೫॥

ನೀನು ಅವನ ಜೊತೆಯಲ್ಲಿ ಯುದ್ಧವನ್ನು ಮಾಡಿದರೆ ಕ್ಷತ್ರಿಯಧರ್ಮವನ್ನು ಅನುಸರಿಸಿ ಪಿತೃಪಿತಾಮಹರ ಮಾರ್ಗದಲ್ಲಿ ನಡೆದು ಅವನು ನಿನ್ನನ್ನು ಯುದ್ಧದಲ್ಲಿ

ಜಯಿಸಲು ಬಯಸಬಹುದು. ನೀನೂ ಸಹ ಅಂತಹ ಜಯದ ಇಚ್ಛೆಯ ವ್ರತದಲ್ಲಿಯೇ ಇರುವವನಾಗಿ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಬಹುದು. ಆದರೆ ಎಲೈ ವೈದೇಹನೇ! ಅವನು ಯುದ್ಧವನ್ನು ಮಾಡದೆಯೇ ನನ್ನ ಮಾತಿನಂತೆ ನಿನ್ನ ವಶವಾಗಿದ್ದಾನೆ.

ಸ ತ್ವಂ ಧರ್ಮಮವೇಕ್ಷಸ್ವ ತ್ಯಕ್ತ್ವಾऽಧರ್ಮಮಸಾಂಪ್ರತಮ್ ।
ನ ಹಿ ಕಾಮಾನ್ನ ಚ ದ್ರೋಹಾತ್ ಸ್ವಧರ್ಮಂ ಹಾತುಮರ್ಹಸಿ ॥೧೬॥

ಅಂತಹ ನೀನು ಅಯೋಗ್ಯವಾದ ಅಧರ್ಮವನ್ನು ತ್ಯಜಿಸಿ ಧರ್ಮವನ್ನು ನೋಡು. ಕಾಮದಿಂದಾಗಲೀ ಅಥವಾ ದ್ರೋಹವನ್ನು ಮಾಡುವ ಉದ್ದೇಶ-ದಿಂದಾಗಲೀ ನಿನ್ನ ಸ್ವಧರ್ಮವನ್ನು ಬಿಡಬೇಡ.

ನೈವ ನಿತ್ಯಂ ಜಯಸ್ತಾತ ನೈವ ನಿತ್ಯಂ ಪರಾಜಯಃ ।
ತಸ್ಮಾದ್ ಭೋಜಯಿತವ್ಯಶ್ಚ ಭೋಕ್ತವ್ಯಶ್ಚ ಪರೋ ಜನಃ ॥೧೭॥

ಎಲೈ ಪ್ರೀತಿಪಾತ್ರನೇ! ಜಯವೂ ನಿತ್ಯವಲ್ಲ. (ನಿಯಮೇನ ಸಿಗುವುದಲ್ಲ). ಪರಾಜಯವೂ ನಿತ್ಯವಲ್ಲ. ಆದ್ದರಿಂದ ಇನ್ನೊಬ್ಬನನ್ನು (ಶತ್ರುವನ್ನು) ಒಳ್ಳೆಯ ಭೋಗಯುಕ್ತನನ್ನಾಗಿ ಮಾಡಬೇಕು. ತಾನೂ ಒಳ್ಳೆಯ ಭೋಗಯುಕ್ತನಾಗಿರಬೇಕು.

ಆತ್ಮನ್ಯೇವ ಹಿ ಸಂದೃಶ್ಯಾವುಭೌ ಜಯಪರಾಜಯೌ ।
ನಿಃಶೇಷಕಾರಿಣಾಂ ತಾತ ನಿಃಶೇಷಕರಣಾದ್ ಭಯಮ್ ॥೧೮॥

ಜಯಪರಾಜಯಗಳೆರಡನ್ನೂ ತನ್ನಲ್ಲಿಯೇ ನೋಡಿಕೊಳ್ಳಬೇಕು. ಎಲೈ ಪ್ರೀತಿಪಾತ್ರನೇ! ಶತ್ರುವನ್ನು ನಿರ್ಮೂಲಗೊಳಿಸುವವರಿಗೆ ತಮ್ಮನ್ನು ಇನ್ನೊಬ್ಬರು ನಿರ್ಮೂಲಗೊಳಿಸಬಹುದು ಎಂಬ ಭಯವು ಯಾವಾಗಲೂ ಇರುತ್ತದೆ. (ಎಂದು ಹೇಳಿದರು)

ಇತ್ಯುಕ್ತಃ ಪ್ರತ್ಯುವಾಚೇದಂ ವಚನಂ ಬ್ರಾಹ್ಮಣರ್ಷಭಮ್ ।
ಅಭಿಪೂಜ್ಯಾಭಿಸತ್ಕೃತ್ಯ ಪೂಜಾರ್ಹಮನುಮಾನ್ಯ ಚ ॥೧೯॥

ಹೀಗೆ ಹೇಳಲ್ಪಟ್ಟ ವಿದೇಹನು ಬ್ರಾಹ್ಮಣಶ್ರೇಷ್ಠರಾದ ಆ ಮುನಿಯನ್ನು ಸತ್ಕರಿಸಿ, ಪೂಜಿಸಿ, ಪೂಜಾರ್ಹರಾದ ಅವರ ಮಾತನ್ನು ಸಮ್ಮತಿಸಿ ಪ್ರತ್ಯುತ್ತರವನ್ನು ನೀಡಿದನು.

ಯಥಾ ಬ್ರೂಯಾನ್ಮಹಾಪ್ರಾಜ್ಞೋ ಯಥಾ ಬ್ರೂಯಾದ್ ಬಹುಶ್ರುತಃ।
ಶ್ರೇಯಸ್ಕಾಮೋ ಯಥಾ ಬ್ರೂಯಾದುಭಯೋರ್ಯತ್ ಕ್ಷಮಂ ಭವೇತ್ ॥

ತಥಾ ವಚನಮುಕ್ತೋಽಸ್ಮಿ ಕರಿಷ್ಯಾಮಿ ಚ ತತ್ ತಥಾ।
ಏತದ್ಧಿ ಪರಮಂ ಶ್ರೇಯೋ ನ ಮೇಽತ್ರಾಸ್ತಿ ವಿಚಾರಣಾ ॥೨೧॥

ಮಹಾಪ್ರಾಜ್ಞನಾದವನು ಏನು ಹೇಳಬಹುದೋ, ಬಹುಶ್ರುತನಾದವನು ಏನು ಹೇಳಬಹುದೋ, ಶ್ರೇಯಸ್ಕಾಮನಾದವನು ಇಬ್ಬರಿಗೂ ಏನು ಹೇಳಬಹುದೋ ಅಂತಹ ಮಾತುಗಳನ್ನು ನೀವು ನನಗೆ ಹೇಳಿದ್ದೀರಿ. ನಾನು ಹಾಗೆಯೇ ನಡೆದುಕೊಳ್ಳುವೆನು. ಹಾಗೆ ನಡೆದುಕೊಳ್ಳುವುದು ನನಗೆ ಪರಮಶ್ರೇಯಸ್ಕರ. ಇದರಲ್ಲಿ ನಾನು ಯಾವ ವಿಚಾರವನ್ನೂ ಮಾಡುವುದಿಲ್ಲ. (ಎಂದು ಹೇಳಿದನು).

ತತಃ ಕೌಸಲ್ಯಮಾಹೂಯ ವೈದೇಹೋ ವಾಕ್ಯಮಬ್ರವೀತ್।
ಧರ್ಮತೋ ನೀತಿತಶ್ಚೈವ ಬಲೇನ ಚ ಜಿತೋ ಮಯಾ ॥೨೨॥

ಅನಂತರ ಕೌಸಲ್ಯನನ್ನು ಕರೆದು ಜನಕನು ಮಾತನಾಡಿದನು. ನೀನು ಧರ್ಮದಿಂದಲೂ ರಾಜನೀತಿಯಿಂದಲೂ ಸೈನ್ಯದಿಂದಲೂ ನನ್ನಿಂದ ಪರಾಜಿತನಾಗಿದ್ದೀಯೆ.

ಸೋಽಹಂ ತ್ವಯಾ ತ್ವತ್ಗುಣೈರ್ಜಿತಃ ಪಾರ್ಥಿವಸತ್ತಮ।
ಆತ್ಮಾನಮನವಜ್ಞಾಯ ಜಿತವದ್ ವರ್ತತಾಂ ಭವಾನ್ ॥೨೩॥

ಎಲೈ ರಾಜಶ್ರೇಷ್ಠನೇ! ನಾನು ನಿನ್ನ ಗುಣಗಳಿಂದ ನಿನ್ನಿಂದ ಪರಾಜಿತನಾಗಿದ್ದೇನೆ. ನಿನ್ನನ್ನು ನೀನು ಹೀನನೆಂದು ತಿಳಿದುಕೊಳ್ಳದೇ ಪರಾಜಿತನಾದವನಂತೆ ನನ್ನ ಜೊತೆಯಲ್ಲಿ ಇರು.

ನಾವಮನ್ಯೇ ಚ ತೇ ಬುದ್ಧಿಂ ನಾವಮನ್ಯೇ ಚ ಪೌರುಷಮ್।
ನಾವಮನ್ಯೇ ಜಯಾಮೀತಿ ಜಿತವದ್ ವರ್ತತಾಂ ಭವಾನ್ ॥೨೪॥

ನಾನು ನಿನ್ನ ಬುದ್ಧಿಯನ್ನು ತಿರಸ್ಕರಿಸುವುದಿಲ್ಲ; ನಿನ್ನ ಪೌರುಷವನ್ನು ಅವಮಾನ-ಗೊಳಿಸುವುದಿಲ್ಲ. ನಾನು ಜಯಿಸಿದ್ದೇನೆ ಎಂದು ನಿನ್ನನ್ನು ಅವಮಾನ ಮಾಡು-ವುದಿಲ್ಲ. ಪರಾಜಿತನಾದವನಂತೆ ಇರು.

ಯಥಾವತ್ ಪೂಜಿತೋ ರಾಜನ್ ಗೃಹಂ ಗಂತಾಸಿ ಮೇ ಗೃಹಾತ್ ।
ತತಃ ಸಂಪೂಜ್ಯ ತೌ ವಿಪ್ರಂ ವಿಶ್ವಸ್ತೌ ಜಗ್ಮತುರ್ಗೃಹಾನ್ ॥೨೫॥

ಎಲೈ ರಾಜನೇ! ವಿಧಿಗೆ ಅನುಗುಣವಾಗಿ ನನ್ನಿಂದ ಪೂಜಿತನಾಗಿ ನೀನು ನಿನ್ನ ಮನೆಗೆ ಹಿಂದಿರುಗುವಿ. (ಎಂದು ಹೇಳಿದನು). ಅನಂತರ ಅವರಿಬ್ಬರೂ ಆ ಬ್ರಾಹ್ಮಣರನ್ನು ಪೂಜಿಸಿ ಮನೆಗಳಿಗೆ ಹೋದರು.

ವೈದೇಹಸ್ತ್ವಥ ಕೌಸಲ್ಯಂ ಪ್ರವೇಶ್ಯ ಗೃಹಮಂಜಸಾ ।
ಪಾದ್ಯಾರ್ಘ್ಯಮಧುಪರ್ಕೈಸ್ತಂ ಪೂಜಾರ್ಹಂ ಪ್ರತ್ಯಪೂಜಯತ್ ॥೨೬॥

ವೈದೇಹನು ಕೋಸಲರಾಜಕುಮಾರನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಪಾದ್ಯ, ಅರ್ಘ್ಯ, ಮಧುಪರ್ಕಗಳನ್ನು ಚೆನ್ನಾಗಿ ನೀಡಿ ಪೂಜಾರ್ಹನಾದ ಅವನನ್ನು ಪೂಜಿಸಿದನು.

ದದೌ ದುಹಿತರಂ ಚಾಸ್ಮೈ ರತ್ನಾನಿ ವಿವಿಧಾನಿ ಚ ।
ಏಷ ರಾಜ್ಞಾಂ ಪರೋ ಧರ್ಮಃ ಸಹ್ಯೌ ಜಯಪರಾಜಯೌ ॥೨೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಾಧಿಕಶತತಮೋऽಧ್ಯಾಯಃ ॥೧೦೮॥

ತನ್ನ ಮಗಳನ್ನೂ ಅವನಿಗೆ ಕೊಟ್ಟನು. ವಿಧವಿಧವಾದ ರತ್ನಗಳನ್ನು ಕೊಟ್ಟನು. ಇದು ರಾಜರ ಶ್ರೇಷ್ಠವಾದ ಧರ್ಮ. ಜಯಪರಾಜಯಗಳನ್ನು ಸಹಿಸಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೮ನೆಯ ಅಧ್ಯಾಯವು ಮುಗಿಯಿತು.

—0—

೧೦೯. ನೂರ ಒಂಭತ್ತನೆಯ ಅಧ್ಯಾಯ

ಚತುರಂಗಾದಿಗಣಗಳ ನಡತೆ

ಯುಧಿಷ್ಠಿರಃ

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ।
ಧರ್ಮವೃತ್ತಶ್ಚ ವೃತ್ತಿಶ್ಚ ವೃತ್ತ್ಯುಪಾಯಫಲಾನಿ ಚ ॥೧॥

ಎಲೈ ಪರಂತಪನೇ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಧರ್ಮದ ನಡವಳಿಕೆಯನ್ನು, ಜೀವನೋಪಾಯವನ್ನು ಸಂಪಾದಿಸುವ ಕ್ರಮ ಮತ್ತು ಫಲಗಳನ್ನು ಹೇಳಿದ್ದೀಯೆ.

ರಾಜ್ಞಾಂ ವೃತ್ತಂ ಚ ಕೋಶಶ್ಚ ಕೋಶಸಂಜನನಂ ಮಹತ್।
ಅಮಾತ್ಯಗುಣವೃದ್ಧಿಶ್ಚ ಪ್ರಕೃತೀನಾಂ ಚ ವರ್ಧನಮ್ ॥೨॥

ರಾಜರ ನಡತೆ, ಕೋಶ, ಕೋಶದ ಅಭಿವೃದ್ಧಿ, ಅಮಾತ್ಯರ ಗುಣ, ವೃದ್ಧಿ, ಪ್ರಜೆಗಳ ಅಭಿವೃದ್ಧಿ -

ಷಾಡ್ಗುಣ್ಯಗುಣಕಲ್ಪಶ್ಚ ಸೇನಾನೀತಿಸ್ತಥೈವ ಚ।
ದುಷ್ಟಸ್ಯ ಚ ಪರಿಜ್ಞಾನಮದುಷ್ಟಸ್ಯ ಚ ಲಕ್ಷಣಮ್ ॥೩॥

ಷಾಡ್ಗುಣ್ಯಗಳ ನಿರೂಪಣೆ, ಸೇನೆಯ ನೀತಿ, ದುಷ್ಟರನ್ನು ತಿಳಿಯುವ ಕ್ರಮ, ಅದುಷ್ಟರ ಲಕ್ಷಣ -

ಸಮಹೀನಾಧಿಕಾನಾಂ ಚ ಯಥಾವಲ್ಲಕ್ಷಣೋಚ್ಚಯಃ।
ಮಧ್ಯಮಸ್ಯ ಚ ತುಷ್ಟ್ಯರ್ಥಂ ಯಥಾ ಸ್ಥೇಯಂ ವಿವರ್ಧತಾ ॥೪॥

ಸಮರ, ಅಧಮರ ಮತ್ತು ಉತ್ತಮರ ಯಥಾರ್ಥವಾದ ಲಕ್ಷಣಸಮೂಹಗಳು, ಮಧ್ಯಮರ ಸಂತೋಷಕ್ಕಾಗಿ ಅಭಿವೃದ್ಧಿಯನ್ನು ಹೊಂದುವ ರಾಜನು ಅನುಸರಿಸಬೇಕಾದ ಕ್ರಮ,

ಕ್ಷೀಣಸಂಗ್ರಹವೃತ್ತಿಶ್ಚ ಯಥಾವತ್ ಸಂಪ್ರಕೀರ್ತಿತಾ।
ಲಘುನಾऽऽದೇಶರೂಪೇಣ ಗ್ರಂಥಯೋಗೇನ ಭಾರತ ॥೫॥

ಎಲೈ ಭಾರತನೇ! ದುರ್ಬಲನಾದ ರಾಜನನ್ನು ಸಂಗ್ರಹಿಸುವ ರೀತಿ ಇವೆಲ್ಲವನ್ನೂ ಲಘುವಾದ ಉಪದೇಶದಿಂದ ಗ್ರಂಥಗಳಿಗೆ ಅನುಸಾರವಾಗಿ ಹೇಳಿದ್ದೀಯೆ.

ವಿಜಿಗೀಷೋಸ್ತಥಾ ವೃತ್ತಮುಕ್ತಂ ಚೈವ ತಥೈವ ತೇ।
ಗಣಾನಾಂ ವೃತ್ತಿಮಿಚ್ಛಾಮಿ ಶ್ರೋತುಂ ಮತಿಮತಾಂವರ ॥೬॥

ಜಯವನ್ನು ಬಯಸುವ ರಾಜನ ನಡತೆಯನ್ನು ನೀವು ಹೇಳಿದ್ದೀಯೆ. ಎಲೈ ಬುದ್ಧಿವಂತರಲ್ಲಿ ಶ್ರೇಷ್ಠನೇ! ಈಗ ಗಣಗಳ (ಚತುರಂಗಾದಿಗಣಗಳ) ನಡತೆಯನ್ನು ಕೇಳಲು ಬಯಸುತ್ತೇನೆ.

ಯಥಾ ಗಣಾಃ ಪ್ರವರ್ಧಂತೇ ನ ಭಿದ್ಯಂತೇ ಚ ಭಾರತ।
ಅರೀನ್ ಹಿ ವಿಜಿಗೀಷಂತೇ ಸುಹೃದಃ ಪ್ರಾಪ್ನುವಂತಿ ಚ ॥೭॥

ಎಲೈ ಭಾರತನೇ! ಗಣಗಳು ಹೇಗೆ ಅಭಿವೃದ್ಧಿಯನ್ನು ಹೊಂದುತ್ತವೆ. ಹೇಗೆ ಭೇದವನ್ನು ಹೊಂದುವುದಿಲ್ಲ. ಹೇಗೆ ಶತ್ರುಗಳನ್ನು ಗೆಲ್ಲಲು ಬಯಸುತ್ತವೆ. ಮತ್ತು ಸುಹೃಜ್ಜನರನ್ನು ಸಂಪಾದಿಸುತ್ತವೆ (ಎಂದು ಕೇಳಲು ಬಯಸುತ್ತೇನೆ).

ಭೇದಮೂಲೋ ವಿನಾಶೋ ಹಿ ಗಣಾನಾಮುಪಲಕ್ಷಯೇ।
ಮಂತ್ರಸಂವರಣಂ ದುಃಖಂ ಬಹೂನಾಮಿತಿ ಮೇ ಮತಿಃ ॥೮॥

ಗಣಗಳ ವಿನಾಶವು ಆಂತರಿಕಭೇದಮೂಲವಾದುದು ಎಂದು ನಾನು ತಿಳಿಯುತ್ತೇನೆ. ಗಣಗಳಲ್ಲಿ ಅನೇಕರು ಇರುವಾಗ ಮಂತ್ರವನ್ನು ಮುಚ್ಚಿಡುವುದು ದುಃಖಕರವಾದ ಕಾರ್ಯವೆಂದು ನನ್ನ ಅಭಿಪ್ರಾಯ.

ಏತದಿಚ್ಛಾಮ್ಯಹಂ ಶ್ರೋತುಂ ನಿಖಿಲೇನ ಪರಂತಪ।
ಯಥಾ ಚ ತೇ ನ ಭಿದ್ಯೇರಂಸ್ತಚ್ಚ ಮೇ ಬ್ರೂಹಿ ಪಾರ್ಥಿವ ॥೯॥

ಎಲೈ ಪರಂತಪನೇ! ಇವೆಲ್ಲವನ್ನೂ ನಾನು ಸಂಪೂರ್ಣವಾಗಿ ಕೇಳಲು ಬಯಸುತ್ತೇನೆ. ಎಲೈ ಪಾರ್ಥಿವನೇ! ಗಣಗಳು ಹೇಗೆ ಒಡೆದು ಹೋಗುವುದಿಲ್ಲ ಎಂಬುದನ್ನು ನನಗೆ ಹೇಳು.

ಭೀಷ್ಮಃ

ಗಣಾನಾಂ ಚ ಕುಲಾನಾಂ ಚ ರಾಜ್ಞಾಂ ಚ ಭರತರ್ಷಭ।
ವೈರಸಂದೀಪನಾವೇತೌ ಲೋಭಾಮರ್ಷೌ ಜನಾಧಿಪ ॥೧೦॥

ಭೀಷ್ಮರು – ಎಲೈ ಭರತರ್ಷಭನೇ! ರಾಜನೇ! ಗಣಗಳಿಗೆ ಕುಲಗಳಿಗೆ ಮತ್ತು ರಾಜರಿಗೆ ವೈರವನ್ನು ಹಚ್ಚುವಂತಹವುಗಳು ಲೋಭ ಮತ್ತು ಕ್ರೋಧ ಇವೆರಡು.

ಲೋಭಮೇಕೋ ಹಿ ವೃಣುತೇ ತತೋऽಮರ್ಷಮನಂತರಮ್ ।
ತೌ ಕ್ಷಯವ್ಯಯಸಂಯುಕ್ತಾವನ್ಯೋನ್ಯಜನಿತಾಶ್ರಯೌ ॥೧೧॥

ಒಬ್ಬನು ಲೋಭವನ್ನು ಆಶ್ರಯಿಸುತ್ತಾನೆ. ಅನಂತರ (ಲೋಭವನ್ನು ಆಶ್ರಯಿಸಿ ಬಯಸಿದ ವಸ್ತುವು ದೊರೆಯದಿದ್ದರೆ) ಕ್ರೋಧವನ್ನು ಆಶ್ರಯಿಸುತ್ತಾನೆ. ಲೋಭ ಮತ್ತು ಕ್ರೋಧಗಳು ಕ್ಷಯ ಮತ್ತು ವ್ಯಯಗಳಿಂದ ಕೂಡಿ, ಪರಸ್ಪರವಾಗಿ ಆಶ್ರಯ-ವಾಗುತ್ತವೆ.

ಚಾರಮಂತ್ರಬಲಾದಾನೈಃ ಸಾಮದಾನವಿಭೇದನೈಃ।
ಕ್ಷಯವ್ಯಯಭಯೋಪಾಯೈಃ ಕರ್ಶಯಂತೀತರೇತರಮ್ ॥೧೨॥

ರಾಜರು ಚಾರರ ಮತ್ತು ಮಂತ್ರಗಳ ಬಲವನ್ನು ದುರ್ಬಲಗೊಳಿಸಿ ಕ್ಷಯವ್ಯಯ-ಭಯಗಳಿಂದ ಕೂಡಿದ ಸಾಮದಾನಭೇದೋಪಾಯಗಳಿಂದ ಪರಸ್ಪರವಾಗಿ ಹಿಂಸಿಸುತ್ತಾರೆ.

ತತ್ರ ದಾನೇನ ಭಿದ್ಯಂತೇ ಗಣಾಃ ಸಂಘಾತವೃತ್ತಯಃ।
ಭಿನ್ನಾ ವಿಮನಸಃ ಸರ್ವೇ ಗಚ್ಛಂತ್ಯರಿವಶಂ ಭಯಾತ್ ॥೧೩॥

ಅವುಗಳಲ್ಲಿ ಒಟ್ಟಿಗೆ ನಡೆದುಕೊಳ್ಳುವ ಗಣಗಳು ದಾನದಿಂದ ಭಿನ್ನವಾಗುತ್ತವೆ. ಭಿನ್ನವಾದವರೆಲ್ಲರೂ ಗಣಕಾರ್ಯದಲ್ಲಿ ವಿಮುಖರಾಗಿ ಭಯದಿಂದ ಶತ್ರುಗಳಿಗೆ ವಶರಾಗುತ್ತಾರೆ.

ಭೇದಾದ್ ಗಣಾ ವಿನಶ್ಯಂತಿ ಭಿನ್ನಾಃ ಸೂಪಜಪಾಃ ಪರೈಃ।
ತಸ್ಮಾತ್ ಸಂಘಾತಯೋಗೇಷು ಪ್ರಯತೇರನ್ ಗಣಾಃ ಸದಾ ॥೧೪॥

ಭೇದದಿಂದ ಗಣಗಳು ನಾಶ ಹೊಂದುತ್ತವೆ. ಭೇದೋಪಾಯಕ್ಕೆ ಸಿಲುಕಿದವರು ಶತ್ರುಗಳಿಂದ ಬೇರೆ ದಾರಿಗೆ ಒಳ್ಳೆಯ ಮಾತುಗಳಿಂದ ಎಳೆಯಲ್ಪಡುತ್ತಾರೆ. ಆದ್ದರಿಂದ ಗಣಗಳು ಯಾವಾಗಲೂ ಒಟ್ಟಿಗೇ ಇರುವುದಕ್ಕೆ ಪ್ರಯತ್ನವನ್ನು ಮಾಡಬೇಕು.

ಅರ್ಥಾ ಹ್ಯೇವಾಧಿಗಮ್ಯಂತೇ ಸಂಘಾತಬಲಪೌರುಷಾತ್।
ಬಾಹ್ಯಾಶ್ಚ ಮೈತ್ರೀಂ ಕುರ್ವಂತಿ ತೇಷು ಸಂಘಾತವೃತ್ತಿಷು ॥೧೫॥

ಗಣಗಳು ಒಟ್ಟಿಗಿದ್ದರೆ ಗಣಗಳ ಬಲ ಮತ್ತು ಪೌರುಷಗಳಿಂದ ಅರ್ಥಪ್ರಾಪ್ತಿಯಾಗುತ್ತದೆ. ಗಣಗಳ ಹೊರಗಿದ್ದವರು ಗಣಗಳ ಜೊತೆಯಲ್ಲಿ ಸ್ನೇಹವನ್ನು ಮಾಡುತ್ತಾರೆ.

ಜ್ಞಾನವೃದ್ಧಾನ್ ಪ್ರಶಂಸಂತಃ ಶುಶ್ರೂಷಂತಃ ಪರಸ್ಪರಮ್।
ವಿನಿವೃತ್ತಾಭಿ(ನು)ಸಂಘಾತಾಃ ಸುಖಮೇಧಂತಿ ಸರ್ವಶಃ ॥೧೬॥

ಜ್ಞಾನವೃದ್ಧರನ್ನು ಸೇವಿಸುತ್ತಾ, ಅವರ ಮಾತುಗಳನ್ನು ಕೇಳುತ್ತಾ, ಪರಸ್ಪರವಾಗಿ ಸಂಘರ್ಷವನ್ನು ತ್ಯಜಿಸಿ ಗಣಗಳು ಎಲ್ಲ ರೀತಿಯಿಂದಲೂ ಸುಖವನ್ನು ಹೊಂದುತ್ತವೆ.

ಧರ್ಮಿಷ್ಠಾನ್ ವ್ಯವಹಾರಾಂಶ್ಚ ಸ್ಥಾಪಯಂತಶ್ಚ ಶಾಸ್ತ್ರತಃ।
ಯಥಾವತ್ ಸಂಪ್ರವರ್ತಂತೋ ವಿವರ್ಧಂತೇ ಗಣೋತ್ತಮಾಃ ॥೧೭॥

ಧರ್ಮಾನುಗುಣವಾದ (ವ್ಯವಹಾರಾಂಶ್ಚ) ಶಾಸ್ತ್ರಕ್ಕೆ ಅನುಗುಣವಾಗಿ ಸ್ಥಾಪಿಸುತ್ತಾ ಸರಿಯಾದ ರೀತಿಯಲ್ಲಿ ಪ್ರವೃತ್ತಿಯನ್ನು ಮಾಡುತ್ತಾ, ಗಣಗಳಲ್ಲಿ ಶ್ರೇಷ್ಠರಾದವರು ಗಣಗಳನ್ನು ಅಭಿವೃದ್ಧಿ ಪಡಿಸುತ್ತಾರೆ.

ಪುತ್ರಾನ್ ಭ್ರಾತೄನ್ ನಿಗೃಹ್ಣಂತೋ ವಿನಯೇ ಚ ಸದಾ ರತಾಃ।
ವಿನೀತಾಂಶ್ಚ ಪ್ರಗೃಹ್ಣಂತೋ ವಿವರ್ಧಂತೇ ಗಣೋತ್ತಮಾಃ ॥೧೮॥

ಪುತ್ರರನ್ನು ಸಹೋದರರನ್ನು ನಿಗ್ರಹಿಸುತ್ತಾ, ಸದಾ ವಿನಯಶೀಲರಾಗಿ ವಿನೀತರಾದವರನ್ನು ಸಂಗ್ರಹಿಸುತ್ತಾ ಉತ್ತಮವಾದ ಗಣಗಳು ಅಭಿವೃದ್ಧಿಯನ್ನು ಹೊಂದುತ್ತವೆ.

ಚಾರಮಂತ್ರವಿಧಾನೇಷು ಕೋಶಸನ್ನಿಚಯೇಷು ಚ।
ನಿತ್ಯಯುಕ್ತಾ ಮಹಾಬಾಹೋ ವರ್ಧಂತೇ ಸರ್ವತೋ ಗಣಾಃ ॥೧೯॥

ಎಲೈ ಮಹಾಬಾಹುವೇ! ಚಾರಮಂತ್ರವಿಧಿಗಳಲ್ಲಿಯೂ ಕೋಶಾಭಿವೃದ್ಧಿಯಲ್ಲಿಯೂ ನಿತ್ಯವೂ ರತವಾದ ಗಣಗಳು ಎಲ್ಲ ರೀತಿಯಲ್ಲಿಯೂ ಬೆಳಯುತ್ತವೆ.

ಪ್ರಾಜ್ಞಾನ್ ಶೂರಾನ್ ಮಹೋತ್ಸಾಹಾನ್ ಕರ್ಮಸು ಸ್ಥಿರಪೌರುಷಾನ್।
ಮಾನಯಂತಃ ಸದಾ ಯುಕ್ತಾ ವಿವರ್ಧಂತೇ ಗಣಾ ನೃಪ ॥೨೦॥

ಎಲೈ ರಾಜನೇ! ಪ್ರಾಜ್ಞರನ್ನೂ, ಶೂರರನ್ನೂ, ಮಹೋತ್ಸಾಹವುಳ್ಳವರನ್ನೂ, ಕರ್ಮಗಳಲ್ಲಿ ಸ್ಥಿರವಾದ ಪೌರುಷವುಳ್ಳವರನ್ನೂ ಸನ್ಮಾನಿಸುತ್ತಾ ಸದಾ ಯುಕ್ತಗಳಾಗಿ ಗಣಗಳು ಬೆಳೆಯುತ್ತವೆ.

ದ್ರವ್ಯವಂತಶ್ಚ ಶೂರಾಶ್ಚ ಶಸ್ತ್ರಜ್ಞಾಃ ಶಾಸ್ತ್ರಪಾರಗಾಃ।
ಕೃಚ್ಛ್ರಾಸ್ವಾಪತ್ಸು ಸಮ್ಮೂಢಾನ್ ಗಣಾನುತ್ತಾರಯಂತಿ ತೇ ॥೨೧॥

ದ್ರವ್ಯವಂತರೂ, ಶೂರರೂ, ಶಸ್ತ್ರಜ್ಞರೂ, ಶಾಸ್ತ್ರಪಾರಂಗತರೂ ಆದವರು ಪ್ರಮಾದಕ್ಕೆ ಒಳಗಾದ ಗಣಗಳನ್ನು ಕಷ್ಟಕರವಾದ ಆಪತ್ತುಗಳಿಂದ ದಾಟಿಸುತ್ತಾರೆ.

ಕ್ರೋಧೋ ಭೇದೋ ಭಯೋ ದಂಡಃ ಕರ್ಶನಂ ನಿಗ್ರಹೋ ವಧಃ।
ನಯತ್ಯರಿವಶಂ ಸದ್ಯೋ ಗಣಾನ್ ಭರತಸತ್ತಮ ॥೨೨॥

ಎಲೈ ಭರತಶ್ರೇಷ್ಠನೇ! ಕ್ರೋಧ, ಭೇದ, ಭಯ, ದಂಡ, ಹಿಂಸೆ, ನಿಗ್ರಹ ಮತ್ತು ವಧೆಗಳು ಗಣಗಳನ್ನು ತತ್ಕ್ಷಣದಲ್ಲಿಯೇ ಶತ್ರುವಶವನ್ನಾಗಿ ಮಾಡುತ್ತವೆ.

ತಸ್ಮಾನ್ಮಾನಯಿತವ್ಯಾಸ್ತೇ ಗಣಮುಖ್ಯಾಃ ಪ್ರಧಾನತಃ।
ಲೋಕಯಾತ್ರಾ ಸಮಾಯತ್ತಾ ಭೂಯಸೀ ತೇಷು ಪಾರ್ಥಿವ ॥೨೩॥

ಆದ್ದರಿಂದ ಗಣಗಳಲ್ಲಿ ಮುಖ್ಯರಾದವರನ್ನು ಪ್ರಯತ್ನಪೂರ್ವಕವಾಗಿ ಸನ್ಮಾನಿಸಬೇಕು. ಎಲೈ ರಾಜನೇ! ಲೋಕಯಾತ್ರೆಯು ಬಹಳವಾಗಿ ಅವರನ್ನೇ ಅವಲಂಬಿಸಿದೆ.

ಮಂತ್ರಗುಪ್ತಿಃ ಪ್ರಧಾನೇಷು ಚಾರಶ್ಚಾಮಿತ್ರಕರ್ಶನ।
ನ ಗಣಾಃ ಕೃತ್ಸ್ನಶೋ ಮಂತ್ರಂ ಶ್ರೋತುಮರ್ಹಂತಿ ಭಾರತ ॥೨೪॥

ಎಲೈ ಶತ್ರುಕರ್ಶನನೇ! ಮಂತ್ರದ ರಕ್ಷಣೆ ಮತ್ತು ಚಾರರ ನಿಯೋಜನೆ ಇವು ಪ್ರಧಾನರಾದವರನ್ನೇ ಆಶ್ರಯಿಸಿರುತ್ತದೆ.

ಗಣಮುಖ್ಯೈಸ್ತು ಸಂಭೂಯ ಕಾರ್ಯಂ ಗಣಹಿತಂ ಮಿಥಃ।
ಪೃಥಗ್ಗಣಸ್ಯ ಭಿನ್ನಸ್ಯ ವಿಮತಸ್ಯ ತತೋಽನ್ಯಥಾ।
ಅರ್ಥಾಃ ಪ್ರತ್ಯವಸೀದಂತಿ ತಥಾಽನರ್ಥಾ ಭವಂತಿ ಚ ॥೨೫॥

ಎಲೈ ಭಾರತನೇ! ಗಣಗಳಲ್ಲಿ ಇದ್ದವರೆಲ್ಲರೂ ಮಂತ್ರವನ್ನು ತಿಳಿಯಲು ಅರ್ಹರಲ್ಲ. ಇಲ್ಲದಿದ್ದರೆ ಅರ್ಥವು ನಾಶವನ್ನು ಹೊಂದುತ್ತದೆ. ಮತ್ತು ಅನರ್ಥವು ಉಂಟಾಗುತ್ತದೆ.

ತೇಷಾಮನ್ಯೋನ್ಯಭಿನ್ನಾನಾಂ ಸ್ವಶಕ್ತಿಮನುತಿಷ್ಠತಾಮ್।
ನಿಗ್ರಹಃ ಪಂಡಿತೈಃ ಕಾರ್ಯಃ ಕ್ಷಿಪ್ರಮೇವ ಪ್ರಧಾನತಃ ॥೨೬॥

ಪರಸ್ಪರವಾಗಿ ಭಿನ್ನರಾಗಿ, ತಮ್ಮ ಶಕ್ತಿಯಿಂದ ಕಾರ್ಯವನ್ನು ಮಾಡುವ ಗಣದ ವ್ಯಕ್ತಿಗಳನ್ನು ಪಂಡಿತರು ತತ್ಕ್ಷಣದಲ್ಲಿಯೇ ಪ್ರಧಾನರನ್ನು ಆರಂಭಿಸಿ ನಿಗ್ರಹವನ್ನು ಮಾಡಬೇಕು.

ಕುಲೇಷು ಕಲಹಾ ಜಾತಾಃ ಕುಲವೃದ್ಧೈರುಪೇಕ್ಷಿತಾಃ।
ಗೋತ್ರಸ್ಯ ನಾಶಂ ಕುರ್ವಂತಿ ಗಣಸಂಭೇದಕಾರಕಮ್ ॥೨೭॥

ಕುಲಗಳಲ್ಲಿ ಕಲಹಗಳುಂಟಾಗಿ ಕುಲವೃದ್ಧರು ಅದನ್ನು ಉಪೇಕ್ಷಿಸಿದರೆ ಆ ಕಲಹಗಳು ಗೋತ್ರನಾಶವನ್ನೇ ಮಾಡುತ್ತವೆ. ಅದು ಪುನಃ ಗಣದ ಭೇದವನ್ನು ಉಂಟುಮಾಡುತ್ತದೆ.

ಆಭ್ಯಂತರಂ ಭಯಂ ರಕ್ಷ್ಯಂ ಸುರಕ್ಷ್ಯಂ ಬಾಹ್ಯತೋ ಭಯಮ್ ।
ಆಭ್ಯಂತರಾದ್ ಭಯಂ ಜಾತಂ ಸದ್ಯೋ ಮೂಲಂ ನಿಕೃಂತತಿ ॥೨೮॥

ಒಳಗಿನಿಂದುಂಟಾಗುವ ಭಯವನ್ನು ಪರಿಹರಿಸಬೇಕು. ಹೊರಗಿನಿಂದ ಉಂಟಾ-ಗುವ ಭಯವನ್ನು ಇನ್ನೂ ಚೆನ್ನಾಗಿ ಪರಿಹರಿಸಬೇಕು. ಒಳಗಿನವರಿಂದಲೇ ಭಯ-ವುಂಟಾದರೆ ಅದು ತತ್ಕ್ಷಣವೇ ಮೂಲವನ್ನೇ ನಾಶಮಾಡುತ್ತದೆ.

ಅಕಸ್ಮಾತ್ ಕ್ರೋಧಲೋಭಾದ್ ವಾ ಮೋಹಾದ್ ವಾಪಿ ಸ್ವಭಾವಜಾತ್ ।
ಅನ್ಯೋನ್ಯಂ ನಾಭಿಭಾಷಂತೇ ತತ್ಪರಾಭಾವಲಕ್ಷಣಮ್ ॥೨೯॥

ಗಣಗಳಲ್ಲಿದ್ದವರು ಅಕಸ್ಮಾತ್ತಾಗಲೀ, ಕ್ರೋಧಲೋಭಗಳಿಂದಾಗಲೀ, ಸ್ವಾಭಾ-ವಿಕವಾದ ಮೋಹದಿಂದಾಗಲೀ ಪರಸ್ಪರವಾಗಿ ಮಾತನಾಡದಿದ್ದರೆ ಅದು ಪರಾ-ಭವದ ಲಕ್ಷಣ.

ಜಾತ್ಯಾ ಚ ಸದೃಶಾಃ ಸರ್ವೇ ಕುಲೇನ ಸದೃಶಾಸ್ತಥಾ ।
ನ ತು ಶೌರ್ಯೇಣ ಬುದ್ಧ್ಯಾ ವಾ ರೂಪದ್ರವ್ಯೇಣ ವಾ ಪುನಃ ॥೩೦॥

ಎಲ್ಲರೂ ಜಾತಿಯಿಂದಲೂ, ಕುಲದಿಂದಲೂ ಸದೃಶರಾಗಿರುತ್ತಾರೆ. ಆದರೆ ಶೌರ್ಯದಿಂದಾಗಲೀ, ಬುದ್ಧಿಯಿಂದಾಗಲೀ, ರೂಪಸಂಪತ್ತಿನಿಂದಾಗಲೀ ಸದೃಶ-ರಾಗಿರುವುದಿಲ್ಲ.

ಭೇದಾಚ್ಚೈವ ಪ್ರಮಾದಾಚ್ಚ ನಾಮ್ಯಂತೇ ರಿಪುಭಿರ್ಗಣಾಃ ।
ತಸ್ಮಾತ್ ಸಂಘಾತಮೇವಾಹುರ್ಗಣಾನಾಂ ಶರಣಂ ಮಹತ್ ॥೩೧॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ನವಾಧಿಕಶತತಮೋಽಧ್ಯಾಯಃ ॥೨೦೯॥

ಗಣಗಳಲ್ಲಿ ಉಂಟಾಗುವ ಭೇದದಿಂದಲೂ ಮತ್ತು ಪ್ರಮಾದದಿಂದಲೂ ಶತ್ರುಗಳು ಗಣಗಳನ್ನು ಬಗ್ಗಿಸುತ್ತಾರೆ. ಆದ್ದರಿಂದ ಒಡೆಯದೇ ಒಟ್ಟಿಗಿರುವುದೇ ಗಣಗಳಿಗೆ ದೊಡ್ಡ ಆಶ್ರಯವಾದುದು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೯ನೆಯ ಅಧ್ಯಾಯ ಮುಗಿಯಿತು

—0—

೧೧೦. ನೂರಹತ್ತನೆಯ ಅಧ್ಯಾಯ

ಪಿತೃಮಾತೃಗುರುಮಹಿಮಾಕಥನ

ಯುಧಿಷ್ಠಿರಃ

ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ।
ಕಿಂಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್ ॥೧॥

ಕಿಂ ಕಾರ್ಯಂ ಸರ್ವಧರ್ಮಾಣಾಂ ಗರೀಯೋ ಭವತೋ ಮತಮ್।
ಯಥಾಯಂ ಪುರುಷೋ ಧರ್ಮಮಿಹ ಚ ಪ್ರೇತ್ಯ ಚಾಪ್ನುಯಾತ್ ॥೨॥

ಯುಧಿಷ್ಠಿರ – ಎಲೈ ಭಾರತನೇ! ಈ ಧರ್ಮಮಾರ್ಗವು ಬಹಳ ವಿಸ್ತಾರವಾದುದು. ಮತ್ತು ಅನೇಕ ಕವಲುಗಳಿಂದ ಕೂಡಿದುದು. ಈ ಧರ್ಮಗಳಲ್ಲಿ ಅನುಷ್ಠಾನ ಮಾಡಬೇಕಾದ ಶ್ರೇಷ್ಠವಾದ ಧರ್ಮವು ಯಾವುದೆಂದು ನಿನ್ನ ಅಭಿಪ್ರಾಯ? ಯಾವ ಕಾರ್ಯವು ಸರ್ವಧರ್ಮಗಳಿಗಿಂತ ಗುರುತರವಾದುದೆಂದು ನಿನ್ನ ಅಭಿಪ್ರಾಯ? ಯಾವ ಕರ್ಮವನ್ನು ಅನುಷ್ಠಾನ ಮಾಡಿದರೆ ಪುರುಷನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಧರ್ಮವನ್ನು ಬಯಸುತ್ತಾನೆಯೋ (ಅಂತಹ ಕಾರ್ಯವನ್ನು ಹೇಳು)

ಭೀಷ್ಮಃ

ಮಾತಾಪಿತ್ರೋರ್ಗುರೂಣಾಂ ಚ ಪೂಜಾ ಬಹುಮತಾ ಮಮ।
ಅತ್ರ ಯುಕ್ತೋ ನರೋ ಲೋಕಾನ್ ಯಶಶ್ಚ ಮಹದಶ್ನುತೇ ॥೩॥

ಭೀಷ್ಮರು – ತಂದೆ ತಾಯಿಯರ ಮತ್ತು ಗುರುಗಳ ಪೂಜೆಯು ಶ್ರೇಷ್ಠವಾದುದು ಎಂದು ನನ್ನ ಅಭಿಪ್ರಾಯ. ಇವುಗಳಲ್ಲಿ ನಿರತನಾದ ಮನುಷ್ಯನು ಅಪಾರವಾದ ಕೀರ್ತಿಯನ್ನೂ ಮತ್ತು ಶುಭಲೋಕಗಳನ್ನೂ ಹೊಂದುತ್ತಾನೆ.

ಯದೇತೇ ಹ್ಯಭಿಜಾನೀಯುಃ ಕರ್ಮ ತಾತ ಸುಪೂಜಿತಾಃ।
ಧರ್ಮ್ಯಂ ಧರ್ಮವಿರುದ್ಧಂ ವಾ ತತ್ ಕರ್ತವ್ಯಂ ಯುಧಿಷ್ಠಿರ ॥೪॥

ಎಲೈ ಪ್ರೀತಿಪಾತ್ರನೇ! ಯುಧಿಷ್ಠಿರನೇ! ಚೆನ್ನಾಗಿ ಪೂಜಿತರಾದ ಈ ಮೂವರು ಏನನ್ನು ಹೇಳುತ್ತಾರೆಯೋ ಅದು ಧರ್ಮವಾಗಿರಲಿ ಧರ್ಮವಿರುದ್ಧವಾಗಿರಲಿ ಅದನ್ನು ಮಾಡಬೇಕು.

ನ ತೈರನಭ್ಯನುಜ್ಞಾತೋ ಧರ್ಮಮನ್ಯಂ ಪ್ರಕಲ್ಪಯೇತ್।
ಯಮೇತೇಽಭ್ಯನುಜಾನೀಯುಃ ಸ ಧರ್ಮ ಇತಿ ನಿಶ್ಚಯಃ ॥೫॥

ಅವರ ಅನುಮತಿಯನ್ನು ಪಡೆಯದೇ ಬೇರೆ ಧರ್ಮವನ್ನು ಆಚರಿಸಬಾರದು. ಯಾವುದಕ್ಕೆ ಅವರು ಅನುಮತಿಯನ್ನು ಕೊಡುತ್ತಾರೋ ಅದು ಧರ್ಮ ಎಂಬುದು ನಿಶ್ಚಿತವಾದುದು.

ಏತ ಏವ ತ್ರಯೋ ಲೋಕಾ ಏತ ಏವಾಶ್ರಮಾಸ್ತ್ರಯಃ।
ಏತ ಏವ ತ್ರಯೋ ವೇದಾ ಏತ ಏವ ತ್ರಯೋಽಗ್ನಯಃ ॥೬॥

ಇವರೇ ಮೂರು ಲೋಕಗಳು, ಮೂರು ಆಶ್ರಮಗಳು, ಮೂರು ವೇದಗಳು, ಮೂರು ಅಗ್ನಿಗಳು.

ಪಿತಾ ಹ್ಯಗ್ನಿರ್ಗಾರ್ಹಪತ್ಯೋ ಮಾತಾಽಗ್ನಿರ್ದಕ್ಷಿಣಃ ಸ್ಮೃತಃ।
ಗುರುರಾಹವನೀಯಸ್ತು ಸಾಽಗ್ನಿತ್ರೇತಾ ಗರೀಯಸೀ ॥೭॥

ತಂದೆಯು ಗಾರ್ಹಪತ್ಯಾಗ್ನಿ, ತಾಯಿಯು ದಕ್ಷಿಣಾಗ್ನಿ, ಗುರುವು ಆಹವನೀಯಾಗ್ನಿ - ಈ ತ್ರೇತಾಗ್ನಿಯು ಬಹಳ ಗರಿಷ್ಠವಾದುದು.

ಗಣಗಳಲ್ಲಿ ಉಂಟಾಗುವ ಭೇದದಿಂದಲೂ ಮತ್ತು ಪ್ರಮಾದದಿಂದಲೂ ಶತ್ರುಗಳು ಗಣಗಳನ್ನು ಬಗ್ಗಿಸುತ್ತಾರೆ. ಆದ್ದರಿಂದ ಒಡೆಯದೇ ಒಟ್ಟಿಗಿರುವುದೇ ಗಣಗಳಿಗೆ ದೊಡ್ಡ ಆಶ್ರಯವಾದುದು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೦೯ನೆಯ ಅಧ್ಯಾಯ ಮುಗಿಯಿತು

—0—

೧೧೦. ನೂರಹತ್ತನೆಯ ಅಧ್ಯಾಯ

ಪಿತೃಮಾತೃಗುರುಮಹಿಮಾಕಥನ

ಯುಧಿಷ್ಠಿರಃ

ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ।
ಕಿಂಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್ ॥೧॥

ಕಿಂ ಕಾರ್ಯಂ ಸರ್ವಧರ್ಮಾಣಾಂ ಗರೀಯೋ ಭವತೋ ಮತಮ್।
ಯಥಾಯಂ ಪುರುಷೋ ಧರ್ಮಮಿಹ ಚ ಪ್ರೇತ್ಯ ಚಾಪ್ನುಯಾತ್ ॥೨॥

ಯುಧಿಷ್ಠಿರ – ಎಲೈ ಭಾರತನೇ! ಈ ಧರ್ಮಮಾರ್ಗವು ಬಹಳ ವಿಸ್ತಾರವಾದುದು. ಮತ್ತು ಅನೇಕ ಕವಲುಗಳಿಂದ ಕೂಡಿದುದು. ಈ ಧರ್ಮಗಳಲ್ಲಿ ಅನುಷ್ಠಾನ ಮಾಡಬೇಕಾದ ಶ್ರೇಷ್ಠವಾದ ಧರ್ಮವು ಯಾವುದೆಂದು ನಿನ್ನ ಅಭಿಪ್ರಾಯ? ಯಾವ ಕಾರ್ಯವು ಸರ್ವಧರ್ಮಗಳಿಗಿಂತ ಗುರುತರವಾದುದೆಂದು ನಿನ್ನ ಅಭಿಪ್ರಾಯ? ಯಾವ ಕರ್ಮವನ್ನು ಅನುಷ್ಠಾನ ಮಾಡಿದರೆ ಪುರುಷನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಧರ್ಮವನ್ನು ಬಯಸುತ್ತಾನೆಯೋ (ಅಂತಹ ಕಾರ್ಯವನ್ನು ಹೇಳು)

ಭೀಷ್ಮಃ

ಮಾತಾಪಿತ್ರೋರ್ಗುರೂಣಾಂ ಚ ಪೂಜಾ ಬಹುಮತಾ ಮಮ।
ಅತ್ರ ಯುಕ್ತೋ ನರೋ ಲೋಕಾನ್ ಯಶಶ್ಚ ಮಹದಶ್ನುತೇ ॥೩॥

ಭೀಷ್ಮರು – ತಂದೆ ತಾಯಿಯರ ಮತ್ತು ಗುರುಗಳ ಪೂಜೆಯು ಶ್ರೇಷ್ಠವಾದುದು ಎಂದು ನನ್ನ ಅಭಿಪ್ರಾಯ. ಇವುಗಳಲ್ಲಿ ನಿರತನಾದ ಮನುಷ್ಯನು ಅಪಾರವಾದ ಕೀರ್ತಿಯನ್ನೂ ಮತ್ತು ಶುಭಲೋಕಗಳನ್ನೂ ಹೊಂದುತ್ತಾನೆ.

ಯದೇತೇ ಹ್ಯಭಿಜಾನೀಯುಃ ಕರ್ಮ ತಾತ ಸುಪೂಜಿತಾಃ।
ಧರ್ಮ್ಯಂ ಧರ್ಮವಿರುದ್ಧಂ ವಾ ತತ್ ಕರ್ತವ್ಯಂ ಯುಧಿಷ್ಠಿರ ॥೪॥

ಎಲೈ ಪ್ರೀತಿಪಾತ್ರನೇ! ಯುಧಿಷ್ಠಿರನೇ! ಚೆನ್ನಾಗಿ ಪೂಜಿತರಾದ ಈ ಮೂವರು ಏನನ್ನು ಹೇಳುತ್ತಾರೆಯೋ ಅದು ಧರ್ಮವಾಗಿರಲಿ ಧರ್ಮವಿರುದ್ಧವಾಗಿರಲಿ ಅದನ್ನು ಮಾಡಬೇಕು.

ನ ತೈರನಭ್ಯನುಜ್ಞಾತೋ ಧರ್ಮಮನ್ಯಂ ಪ್ರಕಲ್ಪಯೇತ್।
ಯಮೇತೇಽಭ್ಯನುಜಾನೀಯುಃ ಸ ಧರ್ಮ ಇತಿ ನಿಶ್ಚಯಃ ॥೫॥

ಅವರ ಅನುಮತಿಯನ್ನು ಪಡೆಯದೇ ಬೇರೆ ಧರ್ಮವನ್ನು ಆಚರಿಸಬಾರದು. ಯಾವುದಕ್ಕೆ ಅವರು ಅನುಮತಿಯನ್ನು ಕೊಡುತ್ತಾರೋ ಅದು ಧರ್ಮ ಎಂಬುದು ನಿಶ್ಚಿತವಾದುದು.

ಏತ ಏವ ತ್ರಯೋ ಲೋಕಾ ಏತ ಏವಾಶ್ರಮಾಸ್ತ್ರಯಃ।
ಏತ ಏವ ತ್ರಯೋ ವೇದಾ ಏತ ಏವ ತ್ರಯೋಽಗ್ನಯಃ ॥೬॥

ಇವರೇ ಮೂರು ಲೋಕಗಳು, ಮೂರು ಆಶ್ರಮಗಳು, ಮೂರು ವೇದಗಳು, ಮೂರು ಅಗ್ನಿಗಳು.

ಪಿತಾ ಹ್ಯಗ್ನಿರ್ಗಾರ್ಹಪತ್ಯೋ ಮಾತಾಽಗ್ನಿರ್ದಕ್ಷಿಣಃ ಸ್ಮೃತಃ।
ಗುರುರಾಹವನೀಯಸ್ತು ಸಾಽಗ್ನಿತ್ರೇತಾ ಗರೀಯಸೀ ॥೭॥

ತಂದೆಯು ಗಾರ್ಹಪತ್ಯಾಗ್ನಿ, ತಾಯಿಯು ದಕ್ಷಿಣಾಗ್ನಿ, ಗುರುವು ಆಹವನೀಯಾಗ್ನಿ - ಈ ತ್ರೇತಾಗ್ನಿಯು ಬಹಳ ಗರಿಷ್ಠವಾದುದು.

ತ್ರಿಷ್ವಪ್ರಮಾದ್ಯನ್ನೇತೇಷು ತ್ರೀನ್ ಲೋಕಾನವಜೇಷ್ಯಸಿ।
ಪಿತೃವೃತ್ತ್ಯಾ ತ್ವಿಮಂ ಲೋಕಂ ಮಾತೃವೃತ್ತ್ಯಾ ತಥಾऽಪರಮ್।
ಬ್ರಹ್ಮಲೋಕಂ ಗುರೋರ್ವೃತ್ತ್ಯಾ ನಿತ್ಯಮೇವ ಚರಿಷ್ಯಸಿ ॥೮॥

ಈ ಮೂವರ ವಿಷಯದಲ್ಲಿ ಎಚ್ಚರಿಕೆಯಿಂದ ನಡೆದುಕೊಂಡರೆ ನೀನು ಮೂರು ಲೋಕಗಳನ್ನೂ ಜಯಿಸುವಿ. ತಂದೆಯ ಸೇವೆಯಿಂದ ಈ ಲೋಕವನ್ನೂ, ತಾಯಿಯ ಸೇವೆಯಿಂದ ಪರಲೋಕವನ್ನೂ, ಗುರುವಿನ ಸೇವೆಯಿಂದ ಬ್ರಹ್ಮ-ಲೋಕವನ್ನು ಪಡೆದು ಅಲ್ಲಿ ಯಾವಾಗಲೂ ಸಂಚರಿಸುವಿ.

ಸಮ್ಯಗೇತೇಷು ವರ್ತಸ್ವ ತ್ರಿಷು ಲೋಕೇಷು ಭಾರತ।
ಯಶಃ ಪ್ರಾಪ್ಸ್ಯಸಿ ಭದ್ರಂ ತೇ ಧರ್ಮಂ ಚ ಸುಮಹಾಫಲಮ್ ॥೯॥

ಎಲೈ ಭಾರತನೇ! ಈ ಮೂರು ಲೋಕಗಳ ಪ್ರಾಪಕರಾದ ಇವರಲ್ಲಿ ಸರಿಯಾಗಿ ನಡೆದುಕೋ. ನಿನಗೆ ಮಂಗಳವಾಗಲಿ. ಕೀರ್ತಿಯನ್ನೂ ಮತ್ತು ಮಹಾಫಲವುಳ್ಳ ಧರ್ಮವನ್ನೂ ಪಡೆಯುವಿ.

ನೈತಾನತಿಶಯೇಜ್ಜಾತು ನಾಶ್ನೀಯಾನ್ನ ಚ ದೂಷಯೇತ್।
ನಿತ್ಯಂ ಪರಿಚರೇಚ್ಚೈವ ತದ್ ವೈ ಸುಕೃತಮುತ್ತಮಮ್।
ಕೀರ್ತಿಂ ಪುಣ್ಯಂ ಯಶೋ ಲೋಕಾನ್ ಪ್ರಾಪ್ಸ್ಯಸೇ ಚ ಜನಾಧಿಪ ॥೧೦॥

ಇವರನ್ನು ಯಾವಾಗಲೂ ಮೀರಬಾರದು. ಅವರಿಗಿಂತ ಮೊದಲು ಭೋಜನ-ವನ್ನು ಮಾಡಬಾರದು. ನಿತ್ಯವೂ ಅವರ ಸೇವೆಯನ್ನು ಮಾಡಬೇಕು. ಅದೇ ಶ್ರೇಷ್ಠ-ವಾದ ಪುಣ್ಯಕಾರ್ಯ. ಎಲೈ ಜನಾಧಿಪನೇ! ಹಾಗೆ ಮಾಡಿದರೆ ನೀನು ಈ ಲೋಕ-ದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ಯಶಸ್ಸನ್ನೂ ಪುಣ್ಯವನ್ನೂ ಪಡೆಯುವಿ.

ಸರ್ವೇ ತಸ್ಯಾದೃತಾ ಲೋಕಾ ಯಸ್ಯೈತೇ ತ್ರಯ ಆದೃತಾಃ।
ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ ॥೧೧॥

ಈ ಮೂವರೂ ಯಾವನಿಂದ ಆದರಿಸಲ್ಪಡುತ್ತಾರೆಯೋ ಅವರಿಂದ ಎಲ್ಲ

ಲೋಕಗಳೂ ಆದರಿಸಲ್ಪಡುತ್ತವೆ. ಈ ಮೂವರನ್ನು ಆದರಿಸದವನು ಮಾಡಿದ ಎಲ್ಲಾ ಕಾರ್ಯಗಳೂ ನಿಷ್ಫಲವಾಗುತ್ತವೆ.

ನೈವಾಯಂ ನ ಪರೋ ಲೋಕಸ್ತಸ್ಯ ಚೈವ ಪರಂತಪ।
ಅಮಾನಿತಾ ನಿತ್ಯಮೇವ ಯಸ್ಯೈತೇ ಗುರವಸ್ತ್ರಯಃ ॥೧೨॥

ಎಲೈ ಪರಂತಪನೇ! ಯಾವನಿಂದ ಗುರುಗಳಾದ ಈ ಮೂವರು ಸನ್ಮಾನಿಸಲ್ಪಡುವುದಿಲ್ಲವೋ ಅವನಿಗೆ ಈ ಲೋಕವೂ ಇಲ್ಲ; ಪರಲೋಕವೂ ಇಲ್ಲ.

ನ ಚಾಸ್ಮಿನ್ನ ಪರೇ ಲೋಕೇ ಯಶಸ್ತಸ್ಯ ಪ್ರಕಾಶತೇ।
ನ ಚಾನ್ಯದಪಿ ಕಲ್ಯಾಣಂ ಪಾರತ್ರಂ ಸಮುದಾಹೃತಮ್ ॥೧೩॥

ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅವನ ಕೀರ್ತಿಯು ಪ್ರಕಾಶಿಸುವುದಿಲ್ಲ. ಮತ್ತು ಪರಲೋಕದಲ್ಲಿ ಅವನಿಗೆ ಬೇರೆ ಯಾವ ಶುಭವೂ ಉಂಟಾಗುವುದಿಲ್ಲ.

ಏಭ್ಯ ಏವಾಸ್ಮಿ ಯತ್ಸರ್ವಂ ಕೃತ್ವಾ ಯದ್ ವಿಸೃಜಾಮ್ಯಹಮ್।
ತದಾಸೀನ್ಮೇ ಶತಗುಣಂ ಸಹಸ್ರಗುಣಮೇವ ಚ।
ತಸ್ಮಾನ್ಮೇ ಸಂಪ್ರಕಾಶಂತೇ ತ್ರಯೋ ಲೋಕಾ ಯುಧಿಷ್ಠಿರ ॥೧೪॥

ನಾನು ಈ ಮೂವರ ಸೇವೆಯಿಂದಲೇ ಅಭಿವೃದ್ಧನಾಗಿದ್ದೇನೆ. ಇವರ ಉಪದೇಶದಿಂದಲೇ ಎಲ್ಲ ಪುಣ್ಯಕಾರ್ಯಗಳನ್ನು ಮಾಡಿ ಪಾಪವನ್ನು ತ್ಯಜಿಸಿದ್ದೇನೆ. ಇವರ ಸಲುವಾಗಿಯೇ ಎಲ್ಲ ಹಿತವನ್ನೂ ಮಾಡಿ ಊರ್ಧ್ವರೇತಸ್ಕನಾಗಿ ರಾಜ್ಯವನ್ನು ತ್ಯಜಿಸಿದ್ದೇನೆ. ಎಲೈ ಯುಧಿಷ್ಠಿರನೇ! ಅದರಿಂದ ಆ ಪುಣ್ಯವು ನೂರು ಪಟ್ಟು, ಸಾವಿರಪಟ್ಟು ಅಧಿಕವಾಗಿದೆ. – ಲಕ್ಷಾಲಂಕಾರ

ದಶೈವ ತು ಸದಾಚಾರ್ಯಃ ಶ್ರೋತ್ರಿಯಾನತಿರಿಚ್ಯತೇ।
ದಶಾಚಾರ್ಯಾನುಪಾಧ್ಯಾಯ ಉಪಾಧ್ಯಾಯಾನ್ ಪಿತಾ ದಶ ॥೧೫॥

ಆಚಾರ್ಯನು ಹತ್ತು ಶ್ರೋತ್ರಿಯರಿಗಿಂತಲೂ ಶ್ರೇಷ್ಠನಾದವನು. ಉಪಾ-

ತ್ರಿಷ್ವಪ್ರಮಾದ್ಯನ್ನೇತೇಷು ತ್ರೀನ್ ಲೋಕಾನವಜೇಷ್ಯಸಿ।
ಪಿತೃವೃತ್ತ್ಯಾ ತ್ವಿಮಂ ಲೋಕಂ ಮಾತೃವೃತ್ತ್ಯಾ ತಥಾऽಪರಮ್।
ಬ್ರಹ್ಮಲೋಕಂ ಗುರೋರ್ವೃತ್ತ್ಯಾ ನಿತ್ಯಮೇವ ಚರಿಷ್ಯಸಿ ॥೮॥

ಈ ಮೂವರ ವಿಷಯದಲ್ಲಿ ಎಚ್ಚರಿಕೆಯಿಂದ ನಡೆದುಕೊಂಡರೆ ನೀನು ಮೂರು ಲೋಕಗಳನ್ನೂ ಜಯಿಸುವಿ. ತಂದೆಯ ಸೇವೆಯಿಂದ ಈ ಲೋಕವನ್ನೂ, ತಾಯಿಯ ಸೇವೆಯಿಂದ ಪರಲೋಕವನ್ನೂ, ಗುರುವಿನ ಸೇವೆಯಿಂದ ಬ್ರಹ್ಮ-ಲೋಕವನ್ನು ಪಡೆದು ಅಲ್ಲಿ ಯಾವಾಗಲೂ ಸಂಚರಿಸುವಿ.

ಸಮ್ಯಗೇತೇಷು ವರ್ತಸ್ವ ತ್ರಿಷು ಲೋಕೇಷು ಭಾರತ।
ಯಶಃ ಪ್ರಾಪ್ಸ್ಯಸಿ ಭದ್ರಂ ತೇ ಧರ್ಮಂ ಚ ಸುಮಹಾಫಲಮ್ ॥೯॥

ಎಲೈ ಭಾರತನೇ! ಈ ಮೂರು ಲೋಕಗಳ ಪ್ರಾಪಕರಾದ ಇವರಲ್ಲಿ ಸರಿಯಾಗಿ ನಡೆದುಕೋ. ನಿನಗೆ ಮಂಗಳವಾಗಲಿ. ಕೀರ್ತಿಯನ್ನೂ ಮತ್ತು ಮಹಾಫಲವುಳ್ಳ ಧರ್ಮವನ್ನೂ ಪಡೆಯುವಿ.

ನೈತಾನತಿಶಯೇಜ್ಜಾತು ನಾಶ್ನೀಯಾನ್ನ ಚ ದೂಷಯೇತ್।
ನಿತ್ಯಂ ಪರಿಚರೇಚ್ಚೈವ ತದ್ ವೈ ಸುಕೃತಮುತ್ತಮಮ್।
ಕೀರ್ತಿಂ ಪುಣ್ಯಂ ಯಶೋ ಲೋಕಾನ್ ಪ್ರಾಪ್ಸ್ಯಸೇ ಚ ಜನಾಧಿಪ ॥೧೦॥

ಇವರನ್ನು ಯಾವಾಗಲೂ ಮೀರಬಾರದು. ಅವರಿಗಿಂತ ಮೊದಲು ಭೋಜನ-ವನ್ನು ಮಾಡಬಾರದು. ನಿತ್ಯವೂ ಅವರ ಸೇವೆಯನ್ನು ಮಾಡಬೇಕು. ಅದೇ ಶ್ರೇಷ್ಠ-ವಾದ ಪುಣ್ಯಕಾರ್ಯ. ಎಲೈ ಜನಾಧಿಪನೇ! ಹಾಗೆ ಮಾಡಿದರೆ ನೀನು ಈ ಲೋಕ-ದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ಯಶಸ್ಸನ್ನೂ ಪುಣ್ಯವನ್ನೂ ಪಡೆಯುವಿ.

ಸರ್ವೇ ತಸ್ಯಾದೃತಾ ಲೋಕಾ ಯಸ್ಯೈತೇ ತ್ರಯ ಆದೃತಾಃ।
ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ ॥೧೧॥

ಈ ಮೂವರೂ ಯಾವನಿಂದ ಆದರಿಸಲ್ಪಡುತ್ತಾರೆಯೋ ಅವರಿಂದ ಎಲ್ಲ

ಲೋಕಗಳೂ ಆದರಿಸಲ್ಪಡುತ್ತವೆ. ಈ ಮೂವರನ್ನು ಅದರಿಸದವನು ಮಾಡಿದ ಎಲ್ಲಾ ಕಾರ್ಯಗಳೂ ನಿಷ್ಫಲವಾಗುತ್ತವೆ.

ನೈವಾಯಂ ನ ಪರೋ ಲೋಕಸ್ತಸ್ಯ ಚೈವ ಪರಂತಪ।
ಅಮಾನಿತಾ ನಿತ್ಯಮೇವ ಯಸ್ಯೈತೇ ಗುರವಸ್ತ್ರಯಃ ॥೧೨॥

ಎಲೈ ಪರಂತಪನೇ! ಯಾವನಿಂದ ಗುರುಗಳಾದ ಈ ಮೂವರು ಸನ್ಮಾನಿಸಲ್ಪಡುವುದಿಲ್ಲವೋ ಅವನಿಗೆ ಈ ಲೋಕವೂ ಇಲ್ಲ; ಪರಲೋಕವೂ ಇಲ್ಲ.

ನ ಚಾಸ್ಮಿನ್ನ ಪರೇ ಲೋಕೇ ಯಶಸ್ತಸ್ಯ ಪ್ರಕಾಶತೇ।
ನ ಚಾನ್ಯದಪಿ ಕಲ್ಯಾಣಂ ಪಾರತ್ರಂ ಸಮುದಾಹೃತಮ್ ॥೧೩॥

ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅವನ ಕೀರ್ತಿಯು ಪ್ರಕಾಶಿಸುವುದಿಲ್ಲ. ಮತ್ತು ಪರಲೋಕದಲ್ಲಿ ಅವನಿಗೆ ಬೇರೆ ಯಾವ ಶುಭವೂ ಉಂಟಾಗುವುದಿಲ್ಲ.

ಏಭ್ಯ ಏವಾಸ್ಮಿ ಯತ್ಸರ್ವಂ ಕೃತ್ವಾ ಯದ್ ವಿಸೃಜಾಮ್ಯಹಮ್।
ತದಾಸೀನ್ಮೇ ಶತಗುಣಂ ಸಹಸ್ರಗುಣಮೇವ ಚ।
ತಸ್ಮಾನ್ಮೇ ಸಂಪ್ರಕಾಶಂತೇ ತ್ರಯೋ ಲೋಕಾ ಯುಧಿಷ್ಠಿರ ॥೧೪॥

ನಾನು ಈ ಮೂವರ ಸೇವೆಯಿಂದಲೇ ಅಭಿವೃದ್ಧನಾಗಿದ್ದೇನೆ. ಇವರ ಉಪದೇಶದಿಂದಲೇ ಎಲ್ಲ ಪುಣ್ಯಕಾರ್ಯಗಳನ್ನು ಮಾಡಿ ಪಾಪವನ್ನು ತ್ಯಜಿಸಿದ್ದೇನೆ. ಇವರ ಸಲುವಾಗಿಯೇ ಎಲ್ಲ ಹಿತವನ್ನೂ ಮಾಡಿ ಊರ್ಧ್ವರೇತಸ್ಕನಾಗಿ ರಾಜ್ಯವನ್ನು ತ್ಯಜಿಸಿದ್ದೇನೆ. ಎಲೈ ಯುಧಿಷ್ಠಿರನೇ! ಅದರಿಂದ ಆ ಪುಣ್ಯವು ನೂರು ಪಟ್ಟು, ಸಾವಿರಪಟ್ಟು ಅಧಿಕವಾಗಿದೆ. – ಲಕ್ಷ್ಮಣಂಕಾರ

ದಶೈವ ತು ಸದಾಚಾರ್ಯಃ ಶ್ರೋತ್ರಿಯಾನತಿರಿಚ್ಯತೇ।
ದಶಾಚಾರ್ಯಾನುಪಾಧ್ಯಾಯ ಉಪಾಧ್ಯಾಯಾನ್ ಪಿತಾ ದಶ ॥೧೫॥

ಆಚಾರ್ಯನು ಹತ್ತು ಶ್ರೋತ್ರಿಯರಿಗಿಂತಲೂ ಶ್ರೇಷ್ಠನಾದವನು. ಉಪಾ-

ಧ್ಯಾಯನು ಹತ್ತು ಆಚಾರ್ಯರನ್ನು ಮೀರಿಸಿದವನು. ತಂದೆಯು ಹತ್ತು ಉಪಾಧ್ಯಾಯರನ್ನು ಮೀರಿಸಿದವನು.

ಪಿತೄನ್ ದಶ ತು ಮಾತೈಕಾ ಸರ್ವಾಂ ವಾ ಪೃಥಿವೀಮಪಿ।
ಗುರುತ್ವೇನಾಭಿಭವತಿ ನಾಸ್ತಿ ಮಾತೃಸಮೋ ಗುರುಃ।
ಗುರುರ್ಗರೀಯಾನ್ ಪಿತೃತೋ ಮಾತೃತಶ್ಚೇತಿ ಮೇ ಮತಿಃ ॥೧೬॥

ತಾಯಿಯೊಬ್ಬಳೇ ಹತ್ತು ತಂದೆಗಳನ್ನು ಮೀರಿದವಳು. ಅಥವಾ ಸಮಗ್ರವಾದ ಭೂಮಿಯನ್ನೂ ಮೀರಿದವಳು. ಅವಳು ತನ್ನ ಗುರುತ್ವದಿಂದ ಎಲ್ಲರನ್ನೂ ಹಿಂದೆ ಹಾಕುತ್ತಾಳೆ. ತಾಯಿಗೆ ಸಮಾನವಾದ ಗುರುವಿಲ್ಲ. ವಿದ್ಯೋಪದೇಶವನ್ನು ಮಾಡುವ ಗುರುವು ತಂದೆಗಿಂತಲೂ ಮತ್ತು ತಾಯಿಗಿಂತಲೂ ಶ್ರೇಷ್ಠನಾದವನೆಂದು ನನ್ನ ಅಭಿಪ್ರಾಯ.

ಉಭೌ ಹಿ ಮಾತಾಪಿತರೌ ಜನ್ಮನ್ಯೇವೋಪಯುಜ್ಯತಃ।
ಶರೀರಮೇತೌ ಸೃಜತಃ ಪಿತಾ ಮಾತಾ ಚ ಭಾರತ।
ಆಚಾರ್ಯಶಿಷ್ಟ್ಯಾ ಜಾತಿಃ ಸಾ ದಿವ್ಯಾ ಸಾऽಜರಾಮರಾ ॥೧೭॥

ತಂದೆ ತಾಯಿಗಳಿಬ್ಬರೂ ಪುರುಷನ ಜನ್ಮದಲ್ಲಿ ಮಾತ್ರ ಉಪಯುಕ್ತರಾಗುತ್ತಾರೆ. ಎಲೈ ಭಾರತನೇ! ಈ ತಂದೆತಾಯಿಗಳು ಪುರುಷನ ಶರೀರವನ್ನು ಸೃಷ್ಟಿಸುತ್ತಾರೆ. ಆದರೆ ಆಚಾರ್ಯನಿಂದ ಉಂಟಾದ ಜನ್ಮವು ದಿವ್ಯವಾದುದು ಮತ್ತು ಅಜರಾಮರವಾದುದು.

ಅವಧ್ಯಾ ಹಿ ಸದಾ ಮಾತಾ ಪಿತಾ ಚಾಪ್ಯಪಕಾರಿಣೌ।
ನ ಸ ದುಷ್ಯತಿ ತತ್ ಕೃತ್ವಾ ನ ಚ ತೇ ದೂಷಯಂತಿ ತಮ್।
ಧರ್ಮಾಯ ಯತಮಾನಾನಾಂ ಪಿತೃದೇವಾಃ ಸಹರ್ಷಿಭಿಃ ॥೧೮॥

ತಂದೆ ತಾಯಿಗಳು ಅಪಕಾರವನ್ನು ಮಾಡಿದರೂ ಅವರನ್ನು ಹೊಡೆಯಬಾರದು. ಅವರು ಹೇಳಿದ ಕಾರ್ಯವನ್ನು ಮಾಡಿ ಅವರಿಗೆ ಹಿತವನ್ನು ಮಾಡು-

ವುದರಲ್ಲಿ ಯಾವ ದೋಷವೂ ಇಲ್ಲ. ಅವರು ಅವನಿಗೆ ದೋಷವನ್ನುಂಟು ಮಾಡುವುದಿಲ್ಲ. ಧರ್ಮಕ್ಕಾಗಿ ಪ್ರಯತ್ನಪಡುವವನಿಗೆ ಪಿತೃದೇವತೆಗಳು ಋಷಿಗಳ ಜೊತೆಯಲ್ಲಿ ಸಹಾಯ ಮಾಡುತ್ತಾರೆ.

ಯ ಆವೃಣೋತ್ಯವಿತಥೇನ ಕರ್ಣಾ-
ವೃತಂ ಬ್ರುವನ್ನಮೃತಂ ಸಂಪ್ರಯಚ್ಛನ್ ।
ತಂ ವೈ ಮನ್ಯೇ ಪಿತರಂ ಮಾತರಂ ಚ
ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್ ॥೧೯॥

ಯಾವ ಗುರುವು ಸತ್ಯವಾದ ಉಪದೇಶವನ್ನು ಮಾಡಿ, ಅಮೃತಪ್ರದಾನವನ್ನು ಮಾಡಿ ಕಿವಿಗಳನ್ನು ತುಂಬುತ್ತಾನೆಯೋ ಅವನೇ ತಂದೆ ಮತ್ತು ತಾಯಿಯೆಂದು ತಿಳಿಯುತ್ತೇನೆ. ಅವನು ಮಾಡಿದ ಉಪಕಾರವನ್ನು ತಿಳಿದವನು ಎಂದೂ ಅವನಿಗೆ ದ್ರೋಹವನ್ನು ಮಾಡಬಾರದು.

ವಿದ್ಯಾಂ ಶ್ರುತ್ವಾಯೇ ಗುರುಂ ನಾದ್ರಿಯಂತೇ
ಪ್ರತ್ಯಾಪನ್ನಾ ಮನಸಾ ಕರ್ಮಣಾ ವಾ ।
ಯಥೈವ ತೇ ಗುರುಭಿರ್ಭಾವನೀಯಾ-
ಸ್ತಥಾ ತೇಷಾಂ ಗುರವೋऽಪ್ಯರ್ಚನೀಯಾಃ ॥೨೦॥

ಗುರುವಿನಿಂದ ವಿದ್ಯೆಯನ್ನು ಪಡೆದು ಯಾರು ಮನಸ್ಸಿನಿಂದಾಗಲೀ ಕರ್ಮ-ದಿಂದಾಗಲೀ ಅವನಿಗೆ ಆದರವನ್ನು ಮಾಡುವುದಿಲ್ಲವೋ ಅವರು ಹೆಜ್ಜೆ ಹೆಜ್ಜೆಗೆ ಆಪತ್ತಿಗೆ ಸಿಲುಕುತ್ತಾರೆ. ಪುರುಷರು ತಮ್ಮನ್ನು ಹೇಗೆ ಶುಭದೃಷ್ಟಿಯಿಂದ ನೋಡ-ಬಯಸುತ್ತಾರೆಯೋ ಹಾಗೆ ಶಿಷ್ಯರೂ ಸಹ ಗುರುಗಳನ್ನು ಶುಭದೃಷ್ಟಿಯಿಂದ ಅರ್ಚಿಸಬೇಕು.

ತಸ್ಮಾತ್ ಪೂಜಯಿತವ್ಯಾಶ್ಚ ಸಂವಿಭಜ್ಯಾಶ್ಚ ಯತ್ನತಃ ।
ಗುರವೋऽರ್ಚಯಿತವ್ಯಾಶ್ಚ ಪುರಾಣಂ ಧರ್ಮಮಿಚ್ಛತಾ ॥೨೧॥

ಆದ್ದರಿಂದ ಗುರುಗಳಿಗೆ ತಮ್ಮ ಸಂಪತ್ತನ್ನು ಹಂಚಿ ಪೂಜಿಸಬೇಕು. ಪ್ರಾಚೀನವಾದ ಧರ್ಮವನ್ನು ಬಯಸುವವನು ಗುರುಗಳನ್ನು ಅರ್ಚಿಸಬೇಕು.

ಯೇನ ಪ್ರೀತಾಶ್ಚ ಪಿತರಸ್ತೇನ ಪ್ರೀತಃ ಪಿತಾಮಹಃ।
ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ ॥೨೨॥

ಯಾವನು ತಂದೆಯನ್ನು ಪ್ರಸನ್ನಗೊಳಿಸುತ್ತಾನೆಯೋ ಅದರಿಂದ ಅವನು ಪಿತಾಮಹನನ್ನು ಸಂತೋಷಗೊಳಿಸುತ್ತಾನೆ. ಯಾವನು ತಾಯಿಯನ್ನು ಸಂತೋಷಗೊಳಿಸುತ್ತಾನೆಯೋ ಅವನು ಪೃಥಿವಿಯನ್ನೇ ಪೂಜಿಸುತ್ತಾನೆ.

ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ ಬ್ರಹ್ಮ ಪೂಜಿತಮ್।
ಮಾತೃತಃ ಪಿತೃತಶ್ಚೈವ ತಸ್ಮಾತ್ ಪೂಜ್ಯತಮೋ ಗುರುಃ।
ಋಷಯಶ್ಚ ಹಿ ದೇವಾಶ್ಚ ಪ್ರೀಯಂತೇ ಪಿತೃಭಿಃ ಸಹ ॥೨೩॥

ಯಾವನು ಆಚಾರ್ಯನನ್ನು ಪೂಜಿಸುತ್ತಾನೆಯೋ ಅವನು ಬ್ರಹ್ಮನನ್ನೇ ಪೂಜಿಸುತ್ತಾನೆ. ಆದ್ದರಿಂದ ಗುರುವು ತಂದೆಗಿಂತಲೂ, ತಾಯಿಗಿಂತಲೂ ಅತ್ಯಂತ ಪೂಜ್ಯನಾದವನು. ಋಷಿಗಳು ಮತ್ತು ದೇವತೆಗಳು ಪಿತೃಗಳ ಜೊತೆಯಲ್ಲಿ ಗುರುಪೂಜೆಯನ್ನು ಮಾಡಿದವನ ಮೇಲೆ ಪ್ರಸನ್ನರಾಗುತ್ತಾರೆ.

ನ ಕೇನಚನ ವೃತ್ತೇನ ಹ್ಯವಜ್ಞೇಯೋ ಗುರುರ್ಭವೇತ್।
ನ ಚ ಮಾತಾ ನ ಚ ಪಿತಾ ತಾದೃಶೋ ಯಾದೃಶೋ ಗುರುಃ ॥೨೪॥

ಯಾವ ನಡತೆಯಿಂದಲೂ ಗುರುವಿಗೆ ಅವಮಾನ ಮಾಡಬಾರದು. ಗುರುವಿನ ಮಹಿಮೆಯಂತಹದೋ ತಾಯಿಯ ಅಥವಾ ತಂದೆಯ ಮಹಿಮೆಯು ಅಂತಹುದಲ್ಲ.

ನ ತೇऽವಮಾನಮರ್ಹಂತಿ ನ ಚ ತೇ ದೂಷಯಂತಿ ತಮ್।
ಗುರೂಣಾಮೇವ ಸತ್ಕಾರಂ ವಿದುರ್ದೇವಾಃ ಸಹರ್ಷಿಭಿಃ ॥೨೫॥

ಅವರು ಅವಮಾನಕ್ಕೆ ಅರ್ಹರಲ್ಲ. ಅವರು ಆ ಪುರುಷನನ್ನು

ದೂಷಿಸುವುದಿಲ್ಲ. ದೇವತೆಗಳು ಮತ್ತು ಋಷಿಗಳು ಗುರುಗಳ ಸತ್ಕಾರವನ್ನೇ ದೊಡ್ಡ ಧರ್ಮವೆಂದು ತಿಳಿಯುತ್ತಾರೆ.

ಉಪಾಧ್ಯಾಯಂ ಪಿತರಂ ಮಾತರಂ ಚ
ಯೇಽಭಿದ್ರುಹ್ಯಂತಿ ಮನಸಾ ಕರ್ಮಣಾ ವಾ।
ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತಸ್ಮಾನ್ನಾನ್ಯಃ ಪಾಪಕೃದಸ್ತಿ ಲೋಕೇ ॥೨೬॥

ಯಾರು ಉಪಾಧ್ಯಾಯನನ್ನಾಗಲೀ ತಂದೆತಾಯಿಗಳನ್ನಾಗಲೀ ಮನಸ್ಸಿನಿಂದ ಅಥವಾ ಕ್ರಿಯೆಯಿಂದ ದ್ರೋಹಕ್ಕೆ ಒಳಪಡಿಸುತ್ತಾರೆಯೋ ಅವರಿಗೆ ಭ್ರೂಣಹತ್ಯೆಗಿಂತಲೂ ಅಧಿಕವಾದ ಪಾಪವು ಉಂಟಾಗುತ್ತದೆ. ಲೋಕದಲ್ಲಿ ಅವನಿಗಿಂತ ಹೆಚ್ಚು ಪಾಪವನ್ನು ಮಾಡಿದವನು ಇರುವುದಿಲ್ಲ.

ಮಿತ್ರದ್ರುಹಃ ಕೃತಘ್ನಸ್ಯ ಸ್ತ್ರೀಘ್ನಸ್ಯ ಪಿಶುನಸ್ಯ ಚ।
ಚತುರ್ಣಾಂ ವಯಮೇತೇಷಾಂ ನಿಷ್ಕೃತಿಂ ನಾನುಶುಶ್ರುಮಃ ॥೧೭॥

ಮಿತ್ರದ್ರೋಹ, ಕೃತಘ್ನತೆ, ಸ್ತ್ರೀಹತ್ಯೆ, ಚಾಡಿಯನ್ನು ಹೇಳುವುದು ಈ ನಾಲ್ಕು ಪಾಪಗಳಿಗೆ ನಾವು ಪ್ರಾಯಶ್ಚಿತ್ತವನ್ನು ಕೇಳಿಲ್ಲ.

ಏತತ್ ಸರ್ವಮತಿದೇಶೇನ ಸೃಷ್ಟಂ
ಯತ್ ಕರ್ತವ್ಯಂ ಪುರುಷೇಣೇಹ ಲೋಕೇ।
ಏತಚ್ಛ್ರೇಯೋ ನಾನ್ಯದಸ್ಮಾದ್ ವಿಶಿಷ್ಟಂ
ಸರ್ವಾನ್ ಧರ್ಮಾನನುಸೃತ್ಯೈತದುಕ್ತಮ್ ॥೨೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದಶಾಧಿಕಶತತಮೋಽಧ್ಯಾಯಃ ॥೧೧೦॥

ಮನುಷ್ಯನು ಈ ಲೋಕದಲ್ಲಿ ಏನು ಮಾಡಬೇಕೆಂಬ ಇದೆಲ್ಲವನ್ನೂ ಶಾಸ್ತ್ರದ ಆದೇಶಕ್ಕೆ ಅನುಸಾರವಾಗಿ ಹೇಳಿದ್ದೇನೆ. ಇದೇ ಶ್ರೇಯಸ್ಕರವಾದುದು. ಇದಕ್ಕಿಂತ

ದೊಡ್ಡ ಶ್ರೇಯಸ್ಕರವಾದುದು ಇನ್ನೊಂದಿಲ್ಲ. ಎಲ್ಲ ಧರ್ಮಗಳನ್ನೂ ಅನುಸರಿಸಿ ನಾನು ಈ ವಿಷಯವನ್ನು ನಿನಗೆ ಹೇಳಿದ್ದೇನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೦ನೆಯ ಅಧ್ಯಾಯವು ಮುಗಿಯಿತು.

—0—

೧೧೧. ನೂರಹನ್ನೊಂದನೆಯ ಅಧ್ಯಾಯ

ಸತ್ಯಾನೃತವಿವೇಚನೆ

ಯುಧಿಷ್ಠಿರಃ

ಕಥಂ ಧರ್ಮೇ ಸ್ಥಾತುಮಿಚ್ಛನ್ ನರೋ ವರ್ತೇತ ಭಾರತ।
ವಿದ್ವನ್ ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ ॥೧॥

ಯುಧಿಷ್ಠಿರ – ಎಲೈ ಭರತರ್ಷಭನೇ! ಧರ್ಮದಲ್ಲಿಯೇ ಇರಬೇಕೆಂದು ಬಯಸುವ ಮನುಷ್ಯನು ಹೇಗೆ ನಡೆದುಕೊಳ್ಳಬೇಕು? ಇದನ್ನು ನನಗೆ ಹೇಳು.

ಸತ್ಯಂ ಚೈವಾನೃತಂ ಚೋಭೇ ಲೋಕಾನಾವೃತ್ಯ ತಿಷ್ಠತಃ।
ತಯೋಃ ಕಿಮಾಚರೇದ್ ರಾಜನ್ ಪುರುಷೋ ಧರ್ಮನಿಶ್ಚಿತಃ ॥೨॥

ಎಲೈ ರಾಜನೇ! ಲೋಕವನ್ನು ಸತ್ಯ ಮತ್ತು ಅನೃತಗಳೆರಡೂ ಆವರಿಸಿ ನಿಂತಿವೆ. ಧರ್ಮನಿಶ್ಚಯವನ್ನುಳ್ಳ ಪುರುಷನು ಅವುಗಳಲ್ಲಿ ಯಾವುದನ್ನು ಮಾಡಬೇಕು?

ಕಿಂಸ್ವಿತ್ ಸತ್ಯಂ ಕಿಮನೃತಂ ಕಿಂಸ್ವಿದ್ ಧರ್ಮ್ಯಂ ಸನಾತನಮ್।
ಕಸ್ಮಿನ್ ಕಾಲೇ ವದೇತ್ ಸತ್ಯಂ ಕಸ್ಮಿನ್ ಕಾಲೇऽನೃತಂ ವದೇತ್ ॥೩॥

ಸತ್ಯವು ಯಾವುದು? ಅನೃತವು ಯಾವುದು? ಸನಾತನಧರ್ಮ ಯಾವುದು? ಯಾವ ಕಾಲದಲ್ಲಿ ಸತ್ಯವನ್ನು ನುಡಿಯಬೇಕು? ಯಾವ ಕಾಲದಲ್ಲಿ ಅನೃತವನ್ನು ನುಡಿಯಬೇಕು?

ಭೀಷ್ಮಃ

ಸತ್ಯಸ್ಯ ವಚನಂ ಸಾಧು ನ ಸತ್ಯಾದ್ ವಿದ್ಯತೇ ಪರಮ್ ।
ಯದ್ ಭೂಲೋಕೇ ಸುದುರ್ಜ್ಞಾತಂ ತತ್ ತೇ ವಕ್ಷ್ಯಾಮಿ ಭಾರತ ॥೪॥

ಭೀಷ್ಮರು – ಸತ್ಯವನ್ನು ಮಾತನಾಡುವುದು ಒಳ್ಳೆಯದು (ಸುಲಭ); ಸತ್ಯಕ್ಕಿಂತ ಶ್ರೇಷ್ಠವಾದುದು ಇಲ್ಲ. ಎಲೈ ಭಾರತನೇ! ಭೂಲೋಕದಲ್ಲಿ ಯಾವುದು ಅತ್ಯಂತ ದುರ್ಜ್ಞೇಯವೋ ಅದನ್ನು ನಾನು ನಿನಗೆ ಹೇಳುವೆನು.

ಭವೇತ್ ಸತ್ಯಂ ನ ವಕ್ತವ್ಯಂ ವಕ್ತವ್ಯಮನೃತಂ ಭವೇತ್ ।
ಯತ್ರಾನೃತಂ ಭವೇತ್ ಸತ್ಯಂ ಸತ್ಯಂ ವಾಪ್ಯನೃತಂ ಭವೇತ್ ॥೫॥

ಎಲ್ಲಿ ಸತ್ಯವೇ ಅನೃತವಾಗುತ್ತದೆಯೋ, ಅಥವಾ ಅನೃತವೇ ಸತ್ಯವಾಗುತ್ತದೆಯೋ ಅಂತಹ ಕಡೆಯಲ್ಲಿ ಸತ್ಯವನ್ನು ಹೇಳಬಾರದು. ಅನೃತವನ್ನೇ ಹೇಳಬೇಕು.

ತಾದೃಶೇ ಮುಹ್ಯತೇ ಬಾಲೋ ಯತ್ರ ಸತ್ಯಮನಿಶ್ಚಿತಮ್ ।
ಸತ್ಯಾನೃತೇ ವಿನಿಶ್ಚಿತ್ಯ ತತೋ ಭವತಿ ಧರ್ಮವಿತ್ ॥೬॥

ಸತ್ಯವು ಅನುಷ್ಠಿತವಾದ ಅಂತಹ ಸ್ಥಳದಲ್ಲಿ ಬಾಲಕನು ಮೋಹಕ್ಕೆ ಒಳಗಾಗುತ್ತಾನೆ. ಸತ್ಯಾನೃತಗಳನ್ನು ನಿಶ್ಚಯಿಸಿದವನು ಧರ್ಮಜ್ಞನಾಗುತ್ತಾನೆ.

ಅಪ್ಯನಾರ್ಯೋಽಕೃತಪ್ರಜ್ಞಃ ಪುರುಷೋಽಪಿ ಸುದಾರುಣಃ ।
ಸುಮಹತ್ ಪ್ರಾಪ್ನುಯಾತ್ ಪುಣ್ಯಂ ಬಲಾಕೋಽಂಧವಧಾದಿವ ॥೭॥

ಅನಾರ್ಯನೂ, ಸುಶಿಕ್ಷಿತಪ್ರಜ್ಞೆಯಿಲ್ಲದವನೂ, ಕ್ರೂರಿಯೂ ಆದ ಪುರುಷನೂ ಸಹ ಬಲಾಕನೆಂಬ ಬೇಡನು ಅಂಧಪ್ರಾಣಿಯನ್ನು ಕೊಂದು ಸಂಪಾದಿಸಿದಂತೆ ದೊಡ್ಡ ಪುಣ್ಯವನ್ನು ಸಂಪಾದಿಸಿಯಾನು! (ಇದು ಕರ್ಣಪರ್ವದಲ್ಲಿ ಬರುವ ಕಥೆ - ಒಂದು ಕುರುಡಾದ ಮೃಗವು ಉಳಿದ ಪ್ರಾಣಿಗಳನ್ನೆಲ್ಲ ಅವುಗಳ ವಾಸನೆಯಿಂದಲೇ ತಿಳಿದು ಅವುಗಳನ್ನು ಕೊಲ್ಲುತ್ತಿದ್ದಿತು. ಬಲಾಕನೆಂಬ ವ್ಯಾಧನು ಆ ಕುರುಡುಪ್ರಾಣಿಯನ್ನು ಕೊಂದು ಉಳಿದ ಪ್ರಾಣಿಗಳಿಗೆ ಕ್ಷೇಮವನ್ನುಂಟುಮಾಡಿದನು.).

ಕಿಮಾಶ್ಚರ್ಯಂ ಚ ಯನ್ಮೂಢೋ ಧರ್ಮಕಾಮೋಽಪ್ಯಧರ್ಮವಿತ್ ।
ಸುಮಹತ್ ಪ್ರಾಪ್ನುಯಾತ್ ಪುಣ್ಯಂ ಗಂಗಾಯಾಮಿವ ಕೌಶಿಕಃ ॥೮॥

ಧರ್ಮವನ್ನು ಬಯಸುವವನು ಮೂಢನಾಗಿ ಅಧರ್ಮವನ್ನು ಸಂಪಾದಿಸುವುದರಲ್ಲಿ ಆಶ್ಚರ್ಯವಿಲ್ಲ. ಹಾಗೆಯೇ ಕ್ರೂರಿಯಾದವನೂ ಸಹ ಗಂಗಾತೀರದಲ್ಲಿನ ಗೂಬೆಯಂತೆ ದೊಡ್ಡ ಪುಣ್ಯವನ್ನು ಪಡೆದಾನು! (ಇದೂ ಕರ್ಣಪರ್ವದಲ್ಲಿ ಬರುವ ಕಥೆ – ಗಂಗಾತೀರದಲ್ಲಿ ಒಂದು ವಿಷಸರ್ಪವು ತನ್ನ ಮೊಟ್ಟೆಗಳನ್ನು ಇಟ್ಟಿದ್ದಿತು. ಒಂದು ಗೂಬೆಯು ಅಲ್ಲಿಗೆ ಬಂದು ಆ ಮೊಟ್ಟೆಗಳನ್ನು ತಿಂದು ಅವುಗಳಿಂದ ಉಂಟಾಗಬಹುದಾಗಿದ್ದ ಅಪಾಯವನ್ನು ತಪ್ಪಿಸಿತು).

ತಾದೃಶೋಽಯಮನುಪ್ರಶ್ನೋ ಯತ್ರ ಧರ್ಮಃ ಸುದುರ್ವಚಃ ।
ದುಷ್ಕರಃ ಪ್ರತಿಸಂಖ್ಯಾತುಂ ತರ್ಕೇಣಾತ್ರ ವ್ಯವಸ್ಯತಿ ॥೯॥

ಎಲ್ಲಿ ಧರ್ಮವನ್ನು ತಿಳಿಯುವುದು ಕಷ್ಟವಾಗುತ್ತದೆಯೋ ಅಂತಹ ಸ್ಥಳದಲ್ಲಿ ನೀನು ಪ್ರಶ್ನೆಯನ್ನು ಮಾಡಿದ್ದೀಯೆ. ಇದು ಧರ್ಮ ಇದು ಅಧರ್ಮ ಎಂದು ಪಟ್ಟಿ ಮಾಡುವುದು ಸಾಧ್ಯವಿಲ್ಲ. ವಿಮರ್ಶೆ ಮಾಡಿ ಯಾವುದು ಧರ್ಮ ಯಾವುದು ಅಧರ್ಮ ಎಂದು ತಿಳಿಯಬೇಕು.

ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಮ್ ।
ಯತ್ ಸ್ಯಾದಹಿಂಸಾಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥೧೦॥

ಮನುಷ್ಯನ ಏಳಿಗೆಗಾಗಿ ಶಾಸ್ತ್ರಗಳಲ್ಲಿ ಧರ್ಮವು ಹೇಳಲ್ಪಟ್ಟಿದೆ. ಯಾವುದು ಅಹಿಂಸಾಯುಕ್ತವಾದುದೋ ಅದು ಧರ್ಮ ಎಂಬುದು ನಿಶ್ಚಿತವಾದುದು.

ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಮ್ ।
ಯತ್ ಸ್ಯಾದಹಿಂಸಾಯುಕ್ತಶ್ಚ ಸ ಧರ್ಮ ಇತಿ ನಿಶ್ಚಯಃ ॥೧೧॥

ಅಹಿಂಸಾ ಸತ್ಯಮಕ್ರೋಧಸ್ತಪೋ ದಾನಂ ದಮೋ ಮತಿಃ ।
ಅನಸೂಯಾಪ್ಯಮಾತ್ಸರ್ಯಮನೀರ್ಷ್ಯಾ ಶೀಲಮೇವ ಚ ॥೧೨॥

ಏಷ ಧರ್ಮಃ ಕುರುಶ್ರೇಷ್ಠ ಕಥಿತಃ ಪರಮೇಷ್ಠಿನಾ ।
ಬ್ರಹ್ಮಣಾ ದೇವದೇವೇನ ಅಯಂ ಚೈವ ಸನಾತನಃ ॥೧೩॥

ಅಹಿಂಸೆ, ಸತ್ಯ, ಅಕ್ರೋಧ, ತಪಸ್ಸು, ದಾನ, ದಮ, ಜ್ಞಾನ, ಅಸೂಯಾರಾಹಿತ್ಯ, ಅಮಾತ್ಸರ್ಯ, ಶೀಲ – ಎಲೈ ಕುರುಶ್ರೇಷ್ಠನೇ! ಇವು ದೇವದೇವನೂ ಪರಮೇಷ್ಠಿಯೂ ಆದ ಬ್ರಹ್ಮನಿಂದ ಹೇಳಲ್ಪಟ್ಟಿವೆ. ಇದು ಸನಾತನವಾದ ಧರ್ಮ.

ಅಸ್ಮಿನ್ ಧರ್ಮೇ ಸ್ಥಿತೋ ರಾಜನ್ ನರೋ ಭದ್ರಾಣಿ ಪಶ್ಯತಿ ।
ಶ್ರೌತೋ ವಧಾತ್ಮಕೋ ಧರ್ಮ ಅಹಿಂಸಾ ಪಾರಮಾರ್ಥಿಕಃ ॥೧೪॥

ಎಲೈ ರಾಜನೇ! ಈ ಧರ್ಮದಲ್ಲಿ ವ್ಯವಸ್ಥಿತನಾದವನು ಶುಭವನ್ನು ಕಾಣುತ್ತಾನೆ. ಅಹಿಂಸೆಯು ಶ್ರೇಷ್ಠವಾದ ಧರ್ಮ. ಆದರೂ ಶ್ರುತಿಯಲ್ಲಿ ಯಜ್ಞಗಳಲ್ಲಿ ಹೇಳಿದ ಪ್ರಾಣಿವಧೆಯು ಧರ್ಮವಾಗುತ್ತದೆ.

ಧಾರಣಾದ್ ಧರ್ಮ ಇತ್ಯಾಹುರ್ಧರ್ಮೇಣ ವಿಧೃತಾಃ ಪ್ರಜಾಃ ।
ಯತ್ ಸ್ಯಾದ್ ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥೧೫॥

ಧಾರಣೆಯನ್ನು ಮಾಡುವುದು ಧರ್ಮ ಎಂದು ಹೇಳುತ್ತಾರೆ. ಧರ್ಮದಿಂದಲೇ ಎಲ್ಲಾ ಪ್ರಜೆಗಳೂ ಧರಿಸಲ್ಪಟ್ಟಿದ್ದಾರೆ. ಯಾವುದು ಜಗತ್ತಿನ ಧಾರಣೆಗೆ ಪ್ರಯೋಜಕವೋ ಅದು ಧರ್ಮವೆಂಬುದಾಗಿ ನಿಶ್ಚಿತವಾದುದು.

ಶ್ರುತಿರ್ಧರ್ಮ ಇತಿ ಹ್ಯೇಕೇ ನೇತ್ಯಾಹುರಪರೇ ಜನಾಃ ।
ನ ತು ತತ್ತ್ಯಸೂಯಾಮೋ ನ ಹಿ ಸರ್ವಂ ವಿಧೀಯತೇ ॥೧೬॥

ಶ್ರುತಿಯಲ್ಲಿ ಹೇಳಿದುದು ಧರ್ಮ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಹಾಗಲ್ಲ ಎಂದು ಹೇಳುತ್ತಾರೆ. ನಾನು ಇಬ್ಬರನ್ನೂ ನಿರಾಕರಿಸುವುದಿಲ್ಲ. ಏಕೆಂದರೆ ಶ್ರುತಿಯಲ್ಲಿ ಎಲ್ಲವೂ ಹೇಳಲ್ಪಟ್ಟಿರುವುದಿಲ್ಲ.

ಯೇಽನ್ಯಾಯೇನ ಜಿಹೀರ್ಷಂತೋ ಧನಮಿಚ್ಛಂತಿ ಕರ್ಹಿಚಿತ್ ।
ತೇಭ್ಯಸ್ತನ್ನ ತದಾಖ್ಯೇಯಂ ಸ ಧರ್ಮ ಇತಿ ನಿಶ್ಚಯಃ ॥೧೭॥

ಯಾವನು ಅನ್ಯಾಯದಿಂದ ಇನ್ನೊಬ್ಬರ ಧನವನ್ನು ಅಪಹಾರ ಮಾಡುತ್ತಾ ಧನವನ್ನು ಬಯಸುತ್ತಾನೆಯೋ ಅವನಿಗೆ ನನ್ನ ಬಳಿ ಧನವಿಲ್ಲ ಎಂದು ಹೇಳಬೇಕು. ಆ ವಚನವು ಅನೃತವಾದರೂ ಧರ್ಮವೆಂಬುದು ನಿಶ್ಚಿತವಾದುದು.

ಅಕೂಜನೇನ ಚೇನ್ಮೋಕ್ಷೋ ನಾತ್ರ ಕೂಜೇತ್ ಕಥಂಚನ।
ಅವಶ್ಯಂ ಕೂಜಿತವ್ಯೇ ವಾ ಶಂಕೇರನ್ ವಾಪ್ಯಕೂಜನಾತ್ ॥೧೮॥

ಶ್ರೇಯಸ್ತತ್ಸ್ಯಾನೃತಂ ವಕ್ತುಂ ಸತ್ಯಾದಿತಿ ವಿಚಾರಿತಮ್ ।
ಯಃ ಪಾಪೈಃ ಸಹ ಸಂಬಂಧಾನ್ಮುಚ್ಯತೇ ಶಪಥಾದಪಿ ॥೧೯॥

ಚೋರರು ಬಂದು ಧನಿಕನೆಲ್ಲಿ ಎಂದು ಕೇಳಿದಾಗ ಮಾತನಾಡದೇ ಸುಮ್ಮನಿದ್ದರೆ ಕಳ್ಳರಿಂದ ಬಿಡುಗಡೆ ಹೊಂದುವುದಾದರೆ ಏನೂ ಮಾತನಾಡದೇ ಮೌನವಾಗಿರಬೇಕು. ಮಾತನಾಡದಿದ್ದರೆ ಕಳ್ಳರು (ಚೋರರು) ಶಂಕಿಸುತ್ತಾರೆ ಎಂದು ತಿಳಿದು ಮಾತನಾಡಲೇ ಬೇಕಾದರೆ ಧನಿಕನು ಹಣವನ್ನು ಬೇರೆ ಕಡೆ ಇಟ್ಟಿದ್ದಾನೆಂದು ಅಥವಾ ಧನಿಕನ ಬಳಿ ಈಗ ಹಣವೇ ಇಲ್ಲವೆಂದು ಹೇಳಬೇಕು. ಅಲ್ಲಿ ಸತ್ಯವನ್ನು ಹೇಳುವುದಕ್ಕಿಂತ ಸುಳ್ಳನ್ನು ಹೇಳುವುದೇ ಶ್ರೇಯಸ್ಕರವೆಂದು ನಿಶ್ಚಿತವಾದುದು. ಕಾಡಿನಲ್ಲಿ ಹಣಕ್ಕಾಗಿ ಕಳ್ಳರಿಂದ ಹಿಡಿಯಲ್ಪಟ್ಟಾಗ ನನ್ನನ್ನು ಬಿಟ್ಟು ಬಿಡು. ಅನಂತರ ಧನವನ್ನು ಕೊಡುತ್ತೇನೆ ಎಂದು ಶಪಥಮಾಡಿ ಹೇಳಬೇಕು. ಅನಂತರ ಆ ಧನವನ್ನು ಕೊಡದಿದ್ದರೂ ಆ ಶಪಥವು ಅನೃತವಚನದೋಷಕ್ಕೆ ಗುರಿಯಾಗುವುದಿಲ್ಲ – ಲಕ್ಷ್ಣಲಂಕಾರ.

ಅಕ್ಷಯೋಽಸೌ ವರ್ಧಯೇಚ್ಚೇತ್ ಕುರ್ಯಾದೇವಾವಿಚಾರಯನ್ ।
ಅಬುದ್ಧ್ಯಾಽನುಸರೇದ್ ದೋಷಂ ಶ್ರೇಯಸ್ತತ್ಸ್ಯಾನೃತಂ ಭವೇತ್ ॥೨೦॥

ಪಾಪಿಗಳಿಗೆ ಧನವನ್ನು ಕೊಟ್ಟರೆ ತನ್ನ ಶರೀರಕ್ಕೆ ಬಾಧೆಯಿಲ್ಲದಂತಾಗುತ್ತದೆ

ಎಂದಾದರೆ ಪಾಪಿಷ್ಠರಿಗೂ ದ್ರವ್ಯವನ್ನು ಕೊಡಬೇಕು. ಅದು ಪುಣ್ಯವನ್ನೇ ಹೆಚ್ಚಿಸುತ್ತದೆ. ದೋಷದಿಂದ ಉಂಟಾಗುವ ಧನಾಪಹಾರಾದಿದೋಷಗಳನ್ನು ಮನಸ್ಸಿಗೆ ತಂದುಕೊಳ್ಳದೇ ಅವರನ್ನು ಅನುಸರಿಸಬೇಕು. ಪಾಪವೆಂಬ ನಿಶ್ಚಯವನ್ನು ಹೊಂದಿ ಚೋರರ ಭಯದಿಂದ ಅನೃತವನ್ನು ಹೇಳಿದರೂ ಅದು ದೋಷವಾಗುವುದಿಲ್ಲ – ಲಕ್ಷ್ಲಲಂಕಾರ.

ನ ಸ್ತೇನೈಃ ಸಹ ಸಂಬಂಧಾನ್ಮುಚ್ಯತೇ ಶಪಥಾದಪಿ।
ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ಹಿ ಧಾರಣಾ ॥೨೧॥

ಚೋರರ ಕೈಯಲ್ಲಿ ಸಿಲುಕಿದಾಗ ಸತ್ಯಶಪಥವನ್ನು ಮಾಡಿದರೂ ಅವರಿಂದ ಬಿಡುಗಡೆ ದೊರೆಯದಿದ್ದರೆ ಅಲ್ಲಿ ಸತ್ಯಕ್ಕಿಂತಲೂ ಸುಳ್ಳನ್ನು ಹೇಳುವುದೇ ಶ್ರೇಷ್ಠವೆಂದು ನಿಶ್ಚಿತವಾದುದು.

ನ ಚ ತೇಭ್ಯೋ ಧನಂ ದೇಯಂ ಶಕ್ಯೇ ಸತಿ ಕಥಂಚನ।
ಪಾಪೇಭ್ಯೋ ಹಿ ಧನಂ ದತ್ತಂ ದಾತಾರಮಪಿ ಪೀಡಯೇತ್ ॥೨೨॥

ಸಾಧ್ಯವಾದರೆ ಚೋರರಿಗೆ ಧನವನ್ನು ಕೊಡಬಾರದು. ಪಾಪಿಗಳಿಗೆ ಕೊಟ್ಟ ಧನವು ಕೊಟ್ಟವನನ್ನು ಪೀಡಿಸುತ್ತದೆ.

ಸ್ವಶರೀರೋಪರೋಧೇನ ಧನಮಾದಾತುಮಿಚ್ಛತಃ।
ಸತ್ಯಸಂಪ್ರತಿಪತ್ತ್ಯರ್ಥಂ ಯೇ ಬ್ರೂಯುಃ ಸಾಕ್ಷಿಣಃ ಕ್ವಚಿತ್।
ಅನುಕ್ತ್ವಾ ತತ್ರ ತದ್ ವಾಚ್ಯಂ ಸರ್ವೇ ತೇऽನೃತವಾದಿನಃ ॥೨೩॥

ತನ್ನವರ ಬಂಧನಾದಿಗಳನ್ನು ಮಾಡಿ ಧನವನ್ನು ಅಪಹರಿಸಲು ಬಂದ ಚೋರರನ್ನು ಕುರಿತು ಅವರು(ರಿಗೆ) ನನಗೆ ಧನವಿಲ್ಲ ಎಂಬ ವಿಷಯದಲ್ಲಿ ಇವರೆಲ್ಲರೂ ಸಾಕ್ಷಿಗಳು ಎಂದು ಹೇಳಬೇಕು. ಅವರೆಲ್ಲರೂ ಹೌದು ಎಂದು ಹೇಳಬೇಕು. ಇಲ್ಲದಿದ್ದರೆ (ಸುಮ್ಮನಿದ್ದರೆ) ಅವರಿಗೆಲ್ಲಾ ಅನೃತವಚನದೋಷವು ಬರುವುದು – ಲಕ್ಷ್ಲಲಂಕಾರ.

ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ।
ಅರ್ಥಸ್ಯ ರಕ್ಷಣಾರ್ಥಾಯ ಪರೇಷಾಂ ಧರ್ಮಕಾರಣಾತ್ ।
ಪರೇಷಾಂ ಧರ್ಮಮಾಕಾಂಕ್ಷನ್ ನೀಚಃ ಸ್ಯಾದ್ ಧರ್ಮಭಿಕ್ಷುಕಃ ॥೨೪॥

ಪ್ರಾಣಸಂಕಟಕಾಲದಲ್ಲಿ (ಪ್ರಾಣವನ್ನು ಉಳಿಸಲು) ಮತ್ತು ವಿವಾಹ-ಸಂದರ್ಭದಲ್ಲಿ (ವಿವಾಹವನ್ನು ಸಂಘಟಿಸಲು) ಅನೃತವನ್ನು ಹೇಳಬಹುದು. ಧರ್ಮಕ್ಕಾಗಿ ತೆಗೆದಿಟ್ಟ ಇನ್ನೊಬ್ಬರ ಧನವನ್ನು ರಕ್ಷಿಸುವುದಕ್ಕಾಗಿಯೂ ಅನೃತವನ್ನು ಹೇಳಬಹುದು. ಆದರೆ ಇನ್ನೊಬ್ಬರಿಗೆ ಧರ್ಮವುಂಟಾಗಲಿ ಎಂಬ ಅಭಿಪ್ರಾಯದಿಂದ ಧನವನ್ನು ತೆಗೆದುಕೊಂಡು ಧರ್ಮಾನುಷ್ಠಾನ ಮಾಡಿ ಅದನ್ನು ಮಾರುವ ನೀಚನು ಧರ್ಮಭಿಕ್ಷುಕ ಎನಿಸುತ್ತಾನೆ.

ಪ್ರತಿಶ್ರುತ್ಯ ತು ದಾತವ್ಯಂ ಸ್ವಕಾರ್ಯಶ್ಚೇದ್ ಬಲಾತ್ಕೃತಃ ।

ಧನಬಲದಿಂದ ಇನ್ನೊಬ್ಬನಿಂದ ಕಾರ್ಯವನ್ನು ಮಾಡಿಸಿಕೊಂಡವನು ಮೊದಲು ವಾಗ್ದಾನ ಮಾಡಿದ ಧನವನ್ನು ಕೊಡಬೇಕು. ಇನ್ನೊಬ್ಬನ ಕೈಯ್ಯಲ್ಲಿ ದುಡಿಸಿ-ಕೊಂಡವನು ಅವನಿಗೆ ಯೋಗ್ಯವಾದ ಧನವನ್ನು ಮೊದಲು ಮಾತನಾಡಿದಂತೆ ಕೊಡಬೇಕು ಎಂದು ಅಭಿಪ್ರಾಯ.

ಯಃ ಕಶ್ಚಿದ್ ಧರ್ಮಸಮಯಾತ್ ಪ್ರಚ್ಯುತೋಽಧರ್ಮಮಾಸ್ಥಿತಃ ॥೨೫॥
ಶತಃ ಸ್ವಧರ್ಮಮುತ್ಸೃಜ್ಯ ತಮಿಚ್ಛೇದುಪಜೀವಿತುಮ್ ।
ಸರ್ವೋಪಾಯೈರ್ನಿಯಂತವ್ಯಃ ಪಾಪೋ ನಿಕೃತಿಜೀವನಃ ॥೨೬॥

ಯಾವನು ಧರ್ಮಮಾರ್ಗವನ್ನು ಬಿಟ್ಟು ಅಧರ್ಮಮಾರ್ಗವನ್ನು ಆಶ್ರಯಿಸು-ತ್ತಾನೆಯೋ ಅವನು ತನ್ನ ಧರ್ಮವನ್ನು ಬಿಟ್ಟು ತನ್ನ ಜೀವನೋಪಾಯಕ್ಕಾಗಿ ಇನ್ನೊಬ್ಬನಿಗಾಗಿ ಧರ್ಮವನ್ನು ಆಚರಿಸುವುದಿದ್ದರೆ ಅವನನ್ನು ಸರ್ವೋಪಾಯ-ಗಳಿಂದಲೂ ನಿಯಂತ್ರಿಸಬೇಕು. ಅಂತಹವನು ಪಾಪಿಯಾದವನು ಮತ್ತು ನೀಚ ಜೀವನವನ್ನು ಮಾಡುವವನು. (ತಾನೂ ಧರ್ಮಾಚರಣೆಯನ್ನು ಮಾಡಿ ಇನ್ನೊಬ್ಬ-

ನಿಗಾಗಿಯೂ ಧರ್ಮಾಚರಣೆಯನ್ನು ಮಾಡಬಹುದು. ತನಗೆ ಮಂತ್ರಾದಿಗಳು ತಿಳಿದಿವೆ ಎಂಬ ಕಾರಣದಿಂದ ತಾನು ಭ್ರಷ್ಟನಾದರೂ ಇನ್ನೊಬ್ಬನಿಗಾಗಿ ಮಾಡುವವನು ನೀಚನಾದವನು ಎಂದು ಅಭಿಪ್ರಾಯ).

ಧನಮಿತ್ಯೇವ ಪಾಪಾನಾಂ ಸರ್ವೇಷಾಮಿಹ ನಿಶ್ಚಯಃ।
ಯೇಽವಿಷಹ್ಯಾ ಹ್ಯಸಂಭೋಜ್ಯಾ ನಿಕೃತ್ಯಾ ಪತನಂ ಗತಾಃ ॥೨೭॥

ಯಾರು ಸಹಿಸಲು ಅಸಾಧ್ಯರಾಗಿ ಮೋಸಗಾರರಾಗಿ ಪತನವನ್ನು ಹೊಂದಿರುತ್ತಾರೆಯೋ ಅಂತಹ ಪಾಪಿಗಳಿಗೆಲ್ಲರಿಗೂ ಧನವನ್ನು ಸಂಪಾದಿಸಿದರೆ ಆಯಿತು ಅದು ಹೇಗಾದರೂ ಬರಲಿ ಎಂಬ ನಿಶ್ಚಯವಿರುತ್ತದೆ.

ಚ್ಯುತಾ ದೇವಮನುಷ್ಯೇಭ್ಯೋ ಯಥಾ ಪ್ರೇತಾಸ್ತಥೈವ ತೇ।
ಧನಾದಾನಾದ್ ದುಃಖತರಂ ಜೀವಿತಾದ್ ವಿಪ್ರಯೋಜನಮ್ ॥೨೮॥

ಅವರು ದೇವಲೋಕದಿಂದಲೂ ಮತ್ತು ಮನುಷ್ಯಲೋಕದಿಂದಲೂ ಚ್ಯುತರಾಗಿ ಪ್ರೇತಗಳಂತೆ ಇರುತ್ತಾರೆ. ಧನಾಪಹಾರಕ್ಕಿಂತ ದುಃಖಕರವಾದುದು ವಧೆ.

ಅಯಂ ವೋ ರೋಚತಾಂ ಧರ್ಮ ಇತಿ ವಾಚ್ಯಃ ಪ್ರಯತ್ನತಃ।
ನ ಕಶ್ಚಿದಸ್ತಿ ಪಾಪಾನಾಂ ಧರ್ಮ ಇತ್ಯೇಷ ನಿಶ್ಚಯಃ ॥೨೯॥

ಪಾಪಿಗಳಿಗೆ ಯಾವ ಧರ್ಮವೂ ಇಲ್ಲ ಎಂಬುದು ನಿಶ್ಚಿತವಾದುದು. ಆದರೂ ಪ್ರಯತ್ನಪಟ್ಟು ನೀವು ಈ ಧರ್ಮವನ್ನು ಆಶ್ರಯಿಸಿ ಎಂದು ಅವರಿಗೆ ಹೇಳಬೇಕು.

ತಥಾಗತಂ ಚ ಯೋ ಹನ್ಯಾನ್ನಾಸೌ ಪಾಪೇನ ಲಿಪ್ಯತೇ।
ಸ್ವಕರ್ಮಣಾ ಹತಂ ಹಂತಿ ಹತ ಏವ ಸ ಹನ್ಯತೇ।
ತೇಷು ಯಃ ಸಮಯಂ ಕಶ್ಚಿತ್ ಕುರ್ವೀತ ಹತಬುದ್ಧಿಷು ॥೩೦॥

ಅಂತಹ ಪಾಪಿಗಳನ್ನು ಯಾವನು (ಯಾವ ರಾಜನು) ಕೊಲ್ಲುತ್ತಾನೆಯೋ ಅಂತಹವನಿಗೆ ಪಾಪಲೇಪವು ಉಂಟಾಗುವುದಿಲ್ಲ. ಏಕೆಂದರೆ, ತನ್ನ ನೀಚಕರ್ಮದಿಂದ ಮೊದಲೇ ಹತನಾದ ಅವನನ್ನು ಇವನು ಕೊಂದಿರುತ್ತಾನೆ. ಕೆಲವರು ಒಟ್ಟಿಗೆ

ಸೇರಿ ನಾವು ಈ ಅಧರ್ಮಿಗೆ ಶಿಕ್ಷೆಯನ್ನು ಮಾಡಲು ಅವಕಾಶ ಕೊಡುವುದಿಲ್ಲ ಎಂದು ನಿಶ್ಚಯವನ್ನು ಮಾಡಿಕೊಂಡರೆ ಅಂತಹ ದುರ್ಬುದ್ಧಿಯುಳ್ಳವರು ಪಾಪಿಗಳೇ ಸರಿ. (ಅಂತಹ ದುರ್ಬುದ್ಧಿಯುಳ್ಳ ಪಾಪಿಗಳನ್ನು ಕೊಲ್ಲುವ ಪ್ರತಿಜ್ಞೆಯನ್ನು ಮಾಡುವವರು ಧರ್ಮಾತ್ಮರಾದವರು).

ಯಥಾ ಕಾಕಶ್ಚ ಗೃಧ್ರಶ್ಚ ತಥೈವೋಪಧಿಜೀವಿನಃ।
ಊರ್ಧ್ವಂ ದೇಹವಿಮೋಕ್ಷಾಂತೇ ಭವಂತ್ಯೇತಾಸು ಯೋನಿಷು ॥೩೧॥

ಕಳ್ಳರು ಕಾಗೆಗಳಂತೆ ಮತ್ತು ಗೂಬೆಗಳಂತೆ ಇರುವವರು. ಅವರು ದೇಹ-ತ್ಯಾಗವನ್ನು ಮಾಡಿದ ಮೇಲೆ ಆ ಯೋನಿಗಳಲ್ಲಿಯೇ ಜನಿಸುತ್ತಾರೆ.

ಯಸ್ಮಿನ್ ಯಥಾ ವರ್ತತೇ ಯೋ ಮನುಷ್ಯ-
ಸ್ತಸ್ಮಿಂಸ್ತಥಾ ವರ್ತಿತವ್ಯಂ ಸ ಧರ್ಮಃ।
ಮಾಯಾಚಾರೋ ಮಾಯಯಾ ವರ್ತಿತವ್ಯಃ
ಸಾಧ್ವಾಚಾರಃ ಸಾಧುನಾ ಪ್ರತ್ಯುದೇಯಃ ॥೩೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ರಾಜಧರ್ಮೇ ಏಕದಶಾಧಿಕಶತತಮೋಽಧ್ಯಾಯಃ ॥೧೧೧॥

ಯಾವನು ತನ್ನ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾನೆಯೋ ಅವನ ವಿಷಯದಲ್ಲಿ ಹಾಗೆಯೇ ನಡೆದುಕೊಳ್ಳುವುದು ಧರ್ಮ. ಕಪಟವನ್ನು ಮಾಡುವವನ ಜೊತೆಯಲ್ಲಿ ಕಪಟದಿಂದಲೇ ನಡೆದುಕೊಳ್ಳಬೇಕು. ಒಳ್ಳೆಯ ರೀತಿ ನಡೆದುಕೊಳ್ಳು-ವವನ ಜೊತೆಯಲ್ಲಿ ಒಳ್ಳೆಯ ರೀತಿಯಿಂದಲೇ ನಡೆದುಕೊಳ್ಳಬೇಕು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೧೧ನೆಯ ಅಧ್ಯಾಯವು ಮುಗಿಯಿತು.

—0—

೧೧೨. ನೂರಹನ್ನೆರಡನೆಯ ಅಧ್ಯಾಯ

ಕಷ್ಟಗಳನ್ನು ದಾಟುವ ಉಪಾಯಕಥನ

ಯುಧಿಷ್ಠಿರಃ

ಕ್ಲಿಶ್ಯಮಾನೇಷು ಭೂತೇಷು ತೈಸ್ತೈರ್ಭಾವೈಸ್ತತಸ್ತತಃ।
ದುರ್ಗಾಣ್ಯತಿತರೇದ್ ಯೇನ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ – ಪಿತಾಮಹನೇ! ಬೇರೆ ಬೇರೆ ಕಾರಣಗಳಿಂದ ಎಲ್ಲ ಮಾನವರೂ ಕ್ಲೇಶಕ್ಕೆ ಒಳಗಾಗಿರುವಾಗ ಯಾವುದರಿಂದ ಅಂತಹ ಕಷ್ಟವನ್ನು ದಾಟುತ್ತಾರೆ ಎಂದು ನನಗೆ ಹೇಳು.

ಭೀಷ್ಮಃ

ಆಶ್ರಮೇಷು ಯಥೋಕ್ತೇಷು ಯಥೋಕ್ತಂ ಯೇ ದ್ವಿಜಾತಯಃ।
ವರ್ತಂತೇ ಸಂಯತಾತ್ಮಾನೋ ದುರ್ಗಾಣ್ಯತಿತರಂತಿ ತೇ ॥೨॥

ಭೀಷ್ಮರು – ಯಾವ ಬ್ರಾಹ್ಮಣರು ವೇದಾ(ಶಾಸ್ತ್ರ)ನುಸಾರಿಯಾದ ಆಶ್ರಮಗಳಲ್ಲಿ ಶಾಸ್ತ್ರರೀತಿಯಲ್ಲಿ ಸಂಯಮದಿಂದ ವಾಸಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ದಂಭಾನ್ನ ಜಪಂತಿ ಸ್ಮ ಯೇಷಾಂ ವೃತ್ತಿಶ್ಚ ಸಂಯತಾ।
ವಿಷಯಾಂಶ್ಚ ನಿಗೃಹ್ಣಂತಿ ದುರ್ಗಾಣ್ಯತಿತರಂತಿ ತೇ ॥೩॥

ಯಾರು ಡಂಭದಿಂದ ಜಪವನ್ನು ಮಾಡುವುದಿಲ್ಲವೋ (ಪ್ರಾಮಾಣಿಕವಾಗಿ ಜಪವನ್ನುಮಾಡುತ್ತಾರೆಯೋ) ಯಾರ ಜೀವನ ರೀತಿಯು ಸಂಯಮದಿಂದ ಕೂಡಿರುತ್ತದೆಯೋ, ಯಾರು ಇಂದ್ರಿಯಗಳನ್ನು ವಿಷಯಗಳಿಂದ ನಿಗ್ರಹಿಸುತ್ತಾರೆಯೋ ಅಂತಹವರು ಕಷ್ಟಗಳನ್ನು ದಾಟುತ್ತಾರೆ.

ವಾಸಯಂತ್ಯತಿಥೀನ್ ನಿತ್ಯಂ ನಿತ್ಯಂ ಯೇ ಚಾನಸೂಯಕಾಃ।
ನಿತ್ಯಂ ಸ್ವಾಧ್ಯಾಯಶೀಲಾಶ್ಚ ದುರ್ಗಾಣ್ಯತಿತರಂತಿ ತೇ ॥೪॥

ಯಾರು ಮನೆಯಲ್ಲಿ ಅತಿಥಿಗಳನ್ನು ವಾಸಿಸುವಂತೆ ಮಾಡುತ್ತಾರೆಯೋ, ನಿತ್ಯವೂ ಅಸೂಯಾರಹಿತರಾಗಿರುತ್ತಾರೆಯೋ, ನಿತ್ಯವೂ ಸ್ವಾಧ್ಯಾಯಶೀಲರಾಗಿರುತ್ತಾರೆಯೋ ಅಂತಹವರು ಕಷ್ಟಗಳನ್ನು ದಾಟುತ್ತಾರೆ.

ಮಾತಾಪಿತ್ರೋಶ್ಚ ಯೇ ವೃತ್ತಿಂ ವರ್ತಂತೇ ಧರ್ಮಕೋವಿದಾಃ।
ವರ್ಜಯಂತಿ ದಿವಾಸ್ವಪ್ನಂ ದುರ್ಗಾಣ್ಯತಿತರಂತಿ ತೇ ॥೫॥

ಧರ್ಮಕೋವಿದರಾದ ಯಾರು ತಂದೆತಾಯಿಗಳ ಸೇವೆಯನ್ನು ಮಾಡುತ್ತಾರೋ, ದಿವಾಸ್ವಾಪವನ್ನು ಪರಿತ್ಯಜಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಸ್ವೇಷು ದಾರೇಷು ವರ್ತಂತೇ ನ್ಯಾಯವೃತ್ತಿಷ್ವವೃತಾವೃತೌ।
ಅಗ್ನಿಹೋತ್ರಪರಾಃ ಸಂತೋ ದುರ್ಗಾಣ್ಯತಿತರಂತಿ ತೇ ॥೬॥

ಯಾರು ನ್ಯಾಯವಾದ ನಡತೆಯನ್ನು ಹೊಂದಿದ ತಮ್ಮ ಪತ್ನಿಯರಲ್ಲಿ ಋತುಗಾಮಿಗಳಾಗಿರುತ್ತಾರೆಯೋ, ಅಗ್ನಿಹೋತ್ರಪರರಾಗಿರುತ್ತಾರೆಯೋ ಅಂತಹವರು ಕಷ್ಟಗಳನ್ನು ದಾಟುತ್ತಾರೆ.

ಯೇ ನ ಲೋಭಾನ್ನಯಂತ್ಯರ್ಥಾನ್ ರಾಜಾನೋ ರಜಸಾವೃತಾಃ।
ವಿಷಯಾನ್ ಪರಿರಕ್ಷಂತೋ ದುರ್ಗಾಣ್ಯತಿತರಂತಿ ತೇ ॥೭॥

ಯಾವ ರಾಜರು ಆಸೆಗೆ ಒಳಗಾಗಿ ಲೋಭದಿಂದ ಪ್ರಜೆಗಳ ಧನವನ್ನು ಸಂಗ್ರಹಿಸದೆ ದೇಶವನ್ನು ರಕ್ಷಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಆಹವೇಷು ಚ ಯೇ ಶೂರಾಸ್ತ್ಯಕ್ತ್ವಾ ಮರಣಜಂ ಭಯಮ್।
ಧರ್ಮೇಣ ಜಯಮಿಚ್ಛಂತೋ ದುರ್ಗಾಣ್ಯತಿತರಂತಿ ತೇ ॥೮॥

ಯಾರು ಯುದ್ಧದಲ್ಲಿ ಶೂರರೋ ಮರಣಭಯವನ್ನು ತ್ಯಜಿಸಿ ಧರ್ಮ-ಯುದ್ಧದಿಂದ ಜಯವನ್ನು ಬಯಸುವರೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ಪಾಪಾನಿ ನ ಕುರ್ವಂತಿ ಕರ್ಮಣಾ ಮನಸಾ ಗಿರಾ।
ನಿಕ್ಷಿಪ್ತದಂಡಾ ಭೂತೇಷು ದುರ್ಗಾಣ್ಯತಿತರಂತಿ ತೇ ॥೯॥

ಯಾರು ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮದಿಂದಾಗಲೀ ಪಾಪವನ್ನು ಮಾಡುವುದಿಲ್ಲವೋ ಪ್ರಾಣಿಗಳಿಗೆ ಹಿಂಸೆಯನ್ನುಂಟುಮಾಡುವುದಿಲ್ಲವೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ವದಂತೀಹ ಸತ್ಯಾನಿ ಪ್ರಾಣತ್ಯಾಗೇಪ್ಯುಪಸ್ಥಿತೇ।
ಪ್ರಮಾಣಭೂತಾ ಭೂತಾನಾಂ ದುರ್ಗಾಣ್ಯತಿತರಂತಿ ತೇ ॥೧೦॥

ಯಾರು ಪ್ರಾಣತ್ಯಾಗವು ಸನ್ನಿಹಿತವಾದರೂ ಸತ್ಯವನ್ನೇ ನುಡಿಯುತ್ತಾರೆಯೋ, ಎಲ್ಲಾ ಜೀವರಿಗೂ ಆದರ್ಶಪ್ರಾಯರಾಗಿರುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಅನಧ್ಯಾಯೇಷು ಯೇ ವಿಪ್ರಾಃ ಸ್ವಾಧ್ಯಾಯಂ ನೈವ ಕುರ್ವತೇ।
ತಪೋನಿತ್ಯಾಃ ಸುಮನಸಃ ದುರ್ಗಾಣ್ಯತಿತರಂತಿ ತೇ ॥೧೧॥

ಯಾವ ವಿಪ್ರರು ಅನಧ್ಯಯನಕಾಲದಲ್ಲಿ ವೇದಾಧ್ಯಯನವನ್ನು ಮಾಡದೇ ತಪಸ್ಸಿನಲ್ಲಿ ನಿರತರಾಗಿ ಒಳ್ಳೆಯ ಮನಸ್ಸನ್ನು ಹೊಂದಿರುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಕರ್ಮಾಣ್ಯಕುಹಕಾರ್ಥಾನಿ ಯೇಷಾಂ ವಾಚಶ್ಚ ಸೂನೃತಾಃ।
ಯೇಷಾಮರ್ಥಾಶ್ಚ ಸಾಧ್ವರ್ಥಾ ದುರ್ಗಾಣ್ಯತಿತರಂತಿ ತೇ ॥೧೨॥

ಯಾರ ಕಾರ್ಯಗಳು ಕುಹಕದಿಂದ ಕೂಡಿರುವುದಿಲ್ಲವೋ, ಯಾರ ವಚನಗಳು ಮೃದುವಾಗಿರುತ್ತವೆಯೋ, ಯಾರ ಧನವು ಸಜ್ಜನರ ಸಲುವಾಗಿ ಇರುತ್ತದೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ತಪಶ್ಚ ತಪಸ್ಯಂತಿ ಕೌಮಾರಬ್ರಹ್ಮಚಾರಿಣಃ।
ವಿದ್ಯಾವೇದವ್ರತಸ್ನಾತಾ ದುರ್ಗಾಣ್ಯತಿತರಂತಿ ತೇ ॥೧೩॥

ಯಾರು ಕೌಮಾರ ಬ್ರಹ್ಮಚಾರಿಗಳಾಗಿ ವಿದ್ಯಾ,ವೇದ, ವ್ರತಸ್ನಾತರಾಗಿ ತಪಸ್ಸನ್ನು ಮಾಡುತ್ತಾರೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ಚ ಸಂಶಾಂತರಜಸಃ ಸಂಶಾಂತತಮಸಶ್ಚ ಯೇ।
ಸತ್ವೇ ಸ್ಥಿತಾ ಮಹಾತ್ಮಾನೋ ದುರ್ಗಾಣ್ಯತಿತರಂತಿ ತೇ ॥೧೪॥

ಯಾವ ಮಹಾತ್ಮರು ರಜೋಗುಣತಮೋಗುಣಗಳಿಂದ ದೂರರಾಗಿ ಸತ್ವ-ಗುಣವನ್ನು ಆಶ್ರಯಿಸಿರುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇಷಾಂ ನ ಕಶ್ಚಿತ್ ತ್ರಸತಿ ತ್ರಸಂತಿ ನ ಚ ಕಸ್ಯಚಿತ್।
ಯೇಷಾಮಾತ್ಮಸಮೋ ಲೋಕೋ ದುರ್ಗಾಣ್ಯತಿತರಂತಿ ತೇ ॥೧೫॥

ಯಾರಿಗೆ ಯಾವೊಬ್ಬನೂ ಹೆದರುವುದಿಲ್ಲವೋ, ಯಾರು ಯಾವನಿಗೂ ಹೆದರುವುದಿಲ್ಲವೋ, ಯಾರಿಗೆ ಎಲ್ಲ ಜನರೂ ತಮ್ಮ ಸಮಾನರೋ, ಅವರು ಕಷ್ಟಗಳನ್ನು ದಾಟುತ್ತಾರೆ.

ಪರಶ್ರಿಯಾ ನ ತಪ್ಯಂತೇ ಯೇ ಸಂತಃ ಪುರುಷರ್ಷಭಾಃ।
ಗ್ರಾಮ್ಯಾದನ್ನಾನ್ನಿವೃತ್ತಾಶ್ಚ ದುರ್ಗಾಣ್ಯತಿತರಂತಿ ತೇ ॥೧೬॥

ಯಾವ ಪುರುಷಶ್ರೇಷ್ಠರಾದ ಸಜ್ಜನರು ಇನ್ನೊಬ್ಬರ ಸಂಪತ್ತನ್ನು ನೋಡಿ ತಾಪ ಪಡುವುದಿಲ್ಲವೋ, ಗ್ರಾಮ್ಯಭೋಗಗಳಿಂದ ನಿವೃತ್ತರಾಗಿರುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಸರ್ವಾನ್ ದೇವಾನ್ ನಮಸ್ಯಂತಿ ಸರ್ವಾನ್ ಧರ್ಮಾಂಶ್ಚ ಶೃಣ್ವತೇ।
ಯೇ ಶ್ರದ್ದಧಾನಾ ದಾಂತಾಶ್ಚ ದುರ್ಗಾಣ್ಯತಿತರಂತಿ ತೇ ॥೧೭॥

ಯಾರು ಎಲ್ಲ ದೇವತೆಗಳಿಗೂ ನಮಸ್ಕಾರವನ್ನು ಮಾಡುತ್ತಾರೆಯೋ, ಎಲ್ಲ

ಧರ್ಮಗಳನ್ನೂ ಕೇಳುತ್ತಾರೆಯೋ, ಶ್ರದ್ಧೆಯಿಂದ ಕೂಡಿ ಇಂದ್ರಿಯನಿಗ್ರಹವನ್ನು ಹೊಂದಿರುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ನ ಮಾನಿತಮಿಚ್ಛಂತಿ ಮಾನಯಂತಿ ಚ ಯೇ ಪರಮ್ ।
ಮಾನ್ಯಮಾನಾ ನ ಮನ್ಯಂತೇ ದುರ್ಗಾಣ್ಯತಿತರಂತಿ ತೇ ॥೧೮॥

ಯಾರು ಸನ್ಮಾನವನ್ನು ಬಯಸುವುದಿಲ್ಲವೋ, ಇನ್ನೊಬ್ಬರಿಗೆ ಸನ್ಮಾನವನ್ನು ಮಾಡುತ್ತಾರೆಯೋ, ಅಥವಾ ತಮಗೆ ಸನ್ಮಾನವನ್ನು ಮಾಡಿದರೂ ಅಹಂಕಾರ ಪಡುವುದಿಲ್ಲವೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ಶ್ರಾದ್ಧಾನಿ ಚ ಕುರ್ವಂತಿ ತಿಥ್ಯಾಂ ತಿಥ್ಯಾಂ ಪ್ರಜಾರ್ಥಿನಃ।
ಸುವಿಶುದ್ಧೇನ ಮನಸಾ ದುರ್ಗಾಣ್ಯತಿತರಂತಿ ತೇ ॥೧೯॥

ಯಾರು ಸಂತತಿಯನ್ನು ಬಯಸಿ ತಿಥಿ ತಿಥಿಗಳಲ್ಲಿ ಒಳ್ಳೆಯ ಮನಸ್ಸಿನಿಂದ ಶ್ರಾದ್ಧಗಳನ್ನು ಮಾಡುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ಕ್ರೋಧಂ ನೈವ ಕುರ್ವಂತಿ ಕ್ರುದ್ಧಾನ್ ಸಂಶಮಯಂತಿ ಚ।
ನ ಚ ಕುಪ್ಯಂತಿ ಭೃತ್ಯೇಭ್ಯೋ ದುರ್ಗಾಣ್ಯತಿತರಂತಿ ತೇ ॥೨೦॥

ಯಾರು ಕೋಪವನ್ನು ಮಾಡುವುದಿಲ್ಲವೋ, ಕೋಪಗೊಂಡವರನ್ನು ಸಮಾಧಾನಪಡಿಸುತ್ತಾರೋ, ಸೇವಕರ ಮೇಲೆ ಕೋಪಗೊಳ್ಳುವುದಿಲ್ಲವೋ ಅವರು ಕಷ್ಟಗಳನ್ನು ದಾಟುತ್ತಾರೆ.

ಮಧು ಮಾಂಸಂ ಚ ಯೇ ನಿತ್ಯಂ ವರ್ಜಯಂತೀಹ ಮಾನವಾಃ।
ಜನ್ಮಪ್ರಭೃತಿ ಮದ್ಯಂ ಚ ದುರ್ಗಾಣ್ಯತಿತರಂತಿ ತೇ ॥೨೧॥

ಯಾವ ಮನುಷ್ಯರು ಇಲ್ಲಿ ಯಾವಾಗಲೂ ಮಧು ಮಾಂಸಗಳನ್ನು ವರ್ಜಿಸುತ್ತಾರೆಯೋ ಹುಟ್ಟಿದಾಗಿನಿಂದಲೂ ಮದ್ಯವನ್ನು ವರ್ಜಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯಾತ್ರಾರ್ಥಂ ಭೋಜನಂ ಯೇಷಾಂ ಸಂತಾನಾರ್ಥಂ ಚ ಮೈಥುನಮ್ ।
ವಾಕ್‌ಸತ್ಯವಚನಾರ್ಥಾಯ ದುರ್ಗಾಣ್ಯತಿತರಂತಿ ತೇ ॥೨೨॥

ಯಾರಿಗೆ ಭೋಜನವು ಶರೀರರಕ್ಷಣೆಯ ಸಲುವಾಗಿ ಇರುತ್ತದೆಯೋ, ಮೈಥುನವು ಸಂತಾನದ ಸಲುವಾಗಿ ಇರುತ್ತದೆಯೋ, ವಾಗಿಂದ್ರಿಯವು ಸತ್ಯವನ್ನು ನುಡಿಯುವುದಕ್ಕಾಗಿ ಇರುತ್ತದೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಈಶ್ವರಂ ಸರ್ವಭೂತಾನಾಂ ಜಗತಃ ಪ್ರಭವಾಪ್ಯಯಮ್ ।
ಭಕ್ತಾ ನಾರಾಯಣಂ ದೇವಂ ದುರ್ಗಾಣ್ಯತಿತರಂತಿ ತೇ ॥೨೩॥

ಸರ್ವ ಜೀವರಿಗೂ ಪ್ರಭುವಾದ ಜಗತ್ತಿನ ಸೃಷ್ಟಿಸಂಹಾರಗಳಿಗೆ ಕಾರಣನಾದ ದೇವನಾದ ನಾರಾಯಣನನ್ನು ಯಾರು ಭಜಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯ ಏಷ ರಕ್ತಪದ್ಮಾಕ್ಷಃ ಪೀತವಾಸಾ ಮಹಾಭುಜಃ ।
ಸುಹೃದ್ ಭ್ರಾತಾ ಚ ಮಿತ್ರಂ ಚ ಸಂಬಂಧೀ ಚ ತವಾಚ್ಯುತಃ ॥೨೪॥

ಯ ಇಮಾನ್ ಸಕಲಾನ್ ಲೋಕಾಂಶ್ಚರ್ಮವತ್ ಪರಿವೇಷ್ಟಯೇತ್ ।
ಇಚ್ಛನ್ ಪ್ರಭುರಚಿಂತ್ಯಾತ್ಮಾ ಗೋವಿಂದಃ ಪುರುಷೋತ್ತಮಃ ॥೨೫॥

ಸ್ಥಿತಃ ಪ್ರಿಯಹಿತೇ ಜಿಷ್ಣೋಃ ಸ ಏವ ಪುರುಷರ್ಷಭಃ ।
ರಾಜಂಸ್ತವ ಯದುಶ್ರೇಷ್ಠೋ ವೈಕುಂಠಃ ಪುರುಷೋತ್ತಮಃ ॥೨೬॥

ಎಲೈ ರಾಜನೇ! ಈ ರಕ್ತಪದ್ಮಾಕ್ಷನೂ, ಪೀತಾಂಬರಧಾರಿಯೂ, ಮಹಾಭುಜನೂ, ನಿನಗೆ ಸುಹೃಜ್ಜನನೂ, ಭ್ರಾತೃವೂ, ಮಿತ್ರನೂ, ಸಂಬಂಧಿಯೂ ಆದ ಅಚ್ಯುತನು ಏನಿದ್ದಾನೆಯೋ, ಯಾವ ಇವನು ಎಲ್ಲ ಲೋಕಗಳನ್ನೂ ಬಯಸಿದರೆ ಚರ್ಮದಂತೆ ಸುತ್ತಿಬಿಡಲು ಶಕ್ತನಾಗಿದ್ದಾನೆಯೋ, ಅಂತಹ ಪ್ರಭುವೂ ಅಚಿಂತ್ಯಸ್ವರೂಪನೂ ಗೋವಿಂದನೂ ಪುರುಷಶ್ರೇಷ್ಠನೂ ಅರ್ಜುನನ ಪ್ರಿಯ ಹಿತಗಳಲ್ಲಿ

ರತನಾದವನೂ, ಯದುಶ್ರೇಷ್ಠನೂ, ವೈಕುಂಠನಾಮಕನೂ ಪುರುಷೋತ್ತಮನೂ ಆದ -

ಯ ಏನಂ ಸಂಶ್ರಯಂತೀಹ ಭಕ್ತ್ಯಾ ನಾರಾಯಣಂ ಹರಿಮ್ ।
ತೇ ತರಂತೀಹ ದುರ್ಗಾಣಿ ನ ಮೇಽತ್ರಾಸ್ತಿ ವಿಚಾರಣಾ ॥೨೭॥

ಅಂತಹ ಈ ಪಾಪಪರಿಹಾರಕನಾದ ನಾರಾಯಣನನ್ನು ಭಕ್ತಿಯಿಂದ ಆಶ್ರಯಿಸಿದವರು ಇಲ್ಲಿ ಎಲ್ಲ ಕಷ್ಟಗಳನ್ನೂ ದಾಟುತ್ತಾರೆ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಅಸ್ಮಿನ್ನರ್ಪಿತಕರ್ಮಾಣಃ ಸರ್ವಭಾವೇನ ಭಾರತ।
ಕೃಷ್ಣೇ ಕಮಲಪತ್ರಾಕ್ಷೇ ದುರ್ಗಾಣ್ಯತಿತರಂತಿ ತೇ।

ಎಲೈ ಭಾರತನೇ! ಸರ್ವಭಾವಗಳಿಂದಲೂ ಕಮಲದಳಾಯತಾಕ್ಷನಾದ ಕೃಷ್ಣನಲ್ಲಿ ತಮ್ಮ ಕರ್ಮಗಳನ್ನು ಅರ್ಪಿಸಿದವರು ಕಷ್ಟಗಳನ್ನು ದಾಟುತ್ತಾರೆ.

ಲೋಕರಕ್ಷಾರ್ಥಮುತ್ಪನ್ನಮದಿತ್ಯಾಂ ಕಶ್ಯಪಾತ್ಮಜಮ್ ॥೨೮॥

ದೇವಮಿಂದ್ರಂ ನ ಪಶ್ಯಂತಿ ದುರ್ಗಾಣ್ಯತಿತರಂತಿ ತೇ।

ಲೋಕರಕ್ಷಾರ್ಥವಾಗಿ ಕಶ್ಯಪರಿಂದ ಅದಿತಿಯಲ್ಲಿ ಅವತರಿಸಿದ ಇವನನ್ನು ಇಂದ್ರನಿಗೂ ದೇವನಾದವನೆಂದು ಯಾರು ತಿಳಿಯುತ್ತಾರೆಯೋ, ಅಣ್ಣನಾದ ಕಾರಣದಿಂದ ದೇವೇಂದ್ರನು ಕೃಷ್ಣನಿಗಿಂತ ಶ್ರೇಷ್ಠನೆಂದು ಯಾರು ತಿಳಿಯುವುದಿಲ್ಲವೋ ಅವರು ಕಷ್ಟಗಳನ್ನು ದಾಟುತ್ತಾರೆ – ಲಕ್ಷಾಲಂಕಾರ.

ಬ್ರಹ್ಮಾಣಂ ಲೋಕಕರ್ತಾರಂ ಯೇ ನ ಪಶ್ಯಂತಿ ತತ್ವತಿಮ್ ॥೨೯॥

ಯಷ್ಟವ್ಯಂ ಕ್ರತುಭಿರ್ದೇವ ದುರ್ಗಾಣ್ಯತಿತರಂತಿ ತೇ।

ಯಾರು ಲೋಕಕರ್ತೃವೂ, ಯಜ್ಞಗಳಲ್ಲಿ ಯಷ್ಟವ್ಯನೂ ಆದ ಬ್ರಹ್ಮನನ್ನು ಕೃಷ್ಣನ ಸ್ವಾಮಿಯೆಂದು ತಿಳಿಯುವುದಿಲ್ಲವೋ ಅವರು ಕಷ್ಟಗಳನ್ನು ದಾಟುತ್ತಾರೆ.

ಯೇ ವಿಷ್ಣುಮಿಂದ್ರಂ ಶಂಭುಂ ಚ ಬ್ರಹ್ಮಾಣಂ ಲೋಕಪೂಜಿತಮ್ ॥೩೦॥

ಸ್ತುವಂತಿ ವೈದಿಕೈಃ ಸ್ತೋತ್ರೈರ್ದೇವದೇವಂ ಮಹೇಶ್ವರಮ್ ।
ತಮರ್ಚಯಂತಿ ಯೇ ಶಶ್ವದ್ ದುರ್ಗಾಣ್ಯತಿತರಂತಿ ತೇ ॥೩೧॥

ದೇವದೇವನೂ, ಮಹೇಶ್ವರನೂ ಆದ ವಿಷ್ಣುವನ್ನು ವೈದಿಕಸ್ತೋತ್ರಗಳಿಂದ ಇಂದ್ರನೆಂದು ಶಂಭುವೆಂದು ಲೋಕಪೂಜಿತನಾದ ಬ್ರಹ್ಮನೆಂದು ಯಾರು ಸ್ತೋತ್ರ ಮಾಡುತ್ತಾರೆಯೋ ಇಂದ್ರ ಬ್ರಹ್ಮ ಶಂಭು ಮೊದಲಾದ ಶಬ್ದಗಳಿಂದ ವಿಷ್ಣುವೇ ವಾಚ್ಯನೆಂದು ತಿಳಿದು ಯಜ್ಞಗಳಲ್ಲಿ ಅವನನ್ನು ಪೂಜಿಸುತ್ತಾರೆಯೋ ಅವರು ಕಷ್ಟಗಳನ್ನು ದಾಟುತ್ತಾರೆ.

ದುರ್ಗಾತಿತರಣಂ ಯೇ ಚ ಪಠಂತಿ ಶ್ರಾವಯಂತಿ ಚ।
ಪಾಠಯಂತಿ ಚ ವಿಪ್ರೇಭ್ಯೋ ದುರ್ಗಾಣ್ಯತಿತರಂತಿ ತೇ ॥೩೨॥

ದುರ್ಗಾತಿತರಣವೆಂಬ ಈ ಅಧ್ಯಾಯವನ್ನು ಯಾರು ಪಾರಾಯಣ ಮಾಡುತ್ತಾರೆಯೋ ಇನ್ನೊಬ್ಬರಿಗೆ ಶ್ರವಣ ಮಾಡಿಸುತ್ತಾರೆಯೋ ಮತ್ತು ಬ್ರಾಹ್ಮಣರಿಗೆ ಪಾಠ ಮಾಡುತ್ತಾರರೆಯೋ,ಅಂತಹವರು ಕಷ್ಟಗಳನ್ನು ದಾಟುತ್ತಾರೆ.

ಇತಿ ಕೃತ್ಯಸಮುದ್ದೇಶಃ ಕೀರ್ತಿತಸ್ತೇ ಮಯಾऽನಘ।
ಸಂತರೇದ್ ಯೇನ ದುರ್ಗಾಣಿ ಪರತ್ರೇಹ ಚ ಮಾನವಃ ॥೩೩॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಾದಶಾಧಿಕಶತತಮೋऽಧ್ಯಾಯಃ ॥೧೧೨॥

ಎಲೈ ಅನಘನೇ! ಯಾವ ಕಾರ್ಯವನ್ನು ಮಾಡಿದರೆ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಮನುಷ್ಯನು ಕಷ್ಟಗಳನ್ನು ದಾಟುತ್ತಾನೆಯೋ ಅಂತಹ ಮಾಡಬೇಕಾದ ಕಾರ್ಯಗಳ ಸಮೂಹವನ್ನೇ ನಿನಗೆ ಹೇಳಿದ್ದೇನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೨ನೆಯ ಅಧ್ಯಾಯವು ಮುಗಿಯಿತು.

—0—

೧೧೩. ನೂರ ಹದಿಮೂರನೆಯ ಅಧ್ಯಾಯ

ಪರೀಕ್ಷೆಯಿಂದ ಸ್ವಭಾವನಿರ್ಣಯವಿಷಯದಲ್ಲಿ ವ್ಯಾಘ್ರಗೋಮಾಯು ಕಥೆ

ಯುಧಿಷ್ಠಿರಃ

ಅಸೌಮ್ಯಾಃ ಸೌಮ್ಯರೂಪೇಣ ಸೌಮ್ಯಾಶ್ಚಾಸೌಮ್ಯದರ್ಶಿನಃ।
ಈದೃಶಾನ್ ಪುರುಷಾಂಸ್ತಾತ ಕಥಂ ವಿದ್ಯಾಮಹೇ ವಯಮ್ ॥೧॥

ಯುಧಿಷ್ಠಿರ – ಎಲೈ ಪ್ರೀತಿಪಾತ್ರನೇ ಕ್ರೂರರಾದವರು ಸೌಮ್ಯರೂಪದಿಂದಲೂ, ಸೌಮ್ಯರಾದವರು ಕ್ರೂರರೂಪದಿಂದಲೂ ಕಾಣಿಸುತ್ತಾರೆ. ಇಂತಹವರನ್ನು ನಾವು ತಿಳಿಯುವ ಬಗೆ ಹೇಗೆ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ವ್ಯಾಘ್ರಗೋಮಾಯುಸಂವಾದಂ ತಂ ನಿಬೋಧ ಯುಧಿಷ್ಠಿರ ॥೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಈ ವಿಷಯದಲ್ಲಿಯೂ ಸಹ ಒಂದು ಹುಲಿ ಮತ್ತು ನರಿಗಳಿಗೆ ನಡೆದ ಸಂವಾದರೂಪವಾದ ಈ ಇತಿಹಾಸವನ್ನು ಹೇಳುತ್ತಾರೆ. ಅದನ್ನು ಕೇಳು.

ಪುರೀಕಾಯಾಂ ಪುರಿ ಪುರಾ ಶ್ರೀಮತ್ಯಾಂ ಪೌರಿಕೋ ನೃಪಃ।
ಪರಹಿಂಸಾರುಚಿಃ ಕ್ರೂರೋ ಬಭೂವ ಪುರುಷಾಧಮಃ ॥೩॥

ಪುರೀಕಾ ಎಂಬ ಸಂಪದ್ಯುಕ್ತವಾದ ಪಟ್ಟಣದಲ್ಲಿ ಪೌರಿಕನೆಂಬ ರಾಜನಿದ್ದನು. ಪುರುಷಾಧಮನಾದ ಅವನು ಕ್ರೂರನಾಗಿ ಪರಹಿಂಸೆಯಲ್ಲಿಯೇ ಅಭಿರುಚಿಯುಳ್ಳ-ವನಾಗಿದ್ದನು.

ಸ ತ್ವಾಯುಷಿ ಪರಿಕ್ಷೀಣೇ ಜಗಾಮಾನೀಪ್ಸಿತಾಂ ಗತಿಮ್।
ಗೋಮಾಯುತ್ವಂ ಚ ಸಂಪ್ರಾಪ್ತೋ ದೂಷಿತಃ ಪೂರ್ವಕರ್ಮಣಾ ॥೪॥

ಆಯುಸ್ಸು ಮುಗಿಯುತ್ತಿರಲು ಅವನು ದುರ್ಗತಿಯನ್ನು ಹೊಂದಿ, ಪೂರ್ವ-ಕರ್ಮದೋಷದಿಂದ ನರಿಯಾಗಿ ಜನಿಸಿದನು.

ಸಂಸ್ಮೃತ್ಯ ಪೂರ್ವಜಾತಿಂ ಸ ನಿರ್ವೇದಂ ಪರಮಂ ಗತಃ।
ನ ಭಕ್ಷಯತಿ ಮಾಂಸಾನಿ ಪರೈರುಪಹೃತಾನ್ಯಪಿ ॥೫॥

ಪೂರ್ವಜನ್ಮಸ್ಮರಣೆಯನ್ನು ಹೊಂದಿದ ಅವನು ಬಹಳ ವೈಸರಗೊಂಡನು. ಇನ್ನೊಬ್ಬರು ತಂದುಕೊಟ್ಟ ಮಾಂಸವನ್ನೂ ತಿನ್ನುತ್ತಿರಲಿಲ್ಲ.

ಅಹಿಂಸ್ರಃ ಸರ್ವಭೂತೇಷು ಸತ್ಯವಾಕ್ ಸುದೃಢವ್ರತಃ।
ಚಕಾರ ಚ ಯಥಾಕಾಲಮಾಹಾರಂ ಪತಿತೈಃ ಫಲೈಃ ॥೬॥

ಯಾವ ಪ್ರಾಣಿಯನ್ನೂ ಹಿಂಸಿಸದೇ ಸತ್ಯವಚನನಾಗಿ ದೃಢವಾದ ವ್ರತವನ್ನು ಧರಿಸಿ ಆಯಾ ಕಾಲದಲ್ಲಿ ಭೂಮಿಯ ಮೇಲೆ ಬಿದ್ದ ಫಲಗಳಿಂದ ಜೀವನವನ್ನು ಮಾಡಿದನು.

ಶ್ಮಶಾನೇ ತಸ್ಯ ಚಾವಾಸೋ ಗೋಮಾಯೋಃ ಸಮ್ಮತೋऽಭವತ್।
ಜನ್ಮಭೂಮ್ಯನುರೋಧಾಚ್ಚ ನಾನ್ಯದ್ ವಾಸಮರೋಚಯತ್ ॥೭॥

ಆ ನರಿಗೆ ಸ್ಮಶಾನವಾಸವು ಪ್ರಿಯವಾಗಿದ್ದಿತು. ಅದು ಅಲ್ಲಿಯೇ ಹುಟ್ಟಿದುದರಿಂದ ಬೇರೆ ಕಡೆಯಲ್ಲಿ ವಾಸವನ್ನು ಮಾಡಲು ಬಯಸಲಿಲ್ಲ.

ತಸ್ಯ ಶೌಚಮಮೃಷ್ಯಂತಃ ಸರ್ವೇ ತೇ ಸಹಜಾತಯಃ।
ಚಾಲಯಂತಿ ಸ್ಮ ತಾಂ ಬುದ್ಧಿಂ ವಚನೈಃ ಪ್ರಶ್ರಯೋತ್ತರೈಃ ॥೮॥

ಅವನ ಶೀಲವನ್ನು ಸಹಿಸದ ಅವನ ಜಾತಿಯ ಉಳಿದ ನರಿಗಳು ವಿನಯ-ಪೂರ್ವಕವಾದ ಮಾತುಗಳಿಂದ ಅವನ ಬುದ್ಧಿಯನ್ನು ಕೆಡಿಸಲು ಪ್ರಯತ್ನಪಟ್ಟವು.

ವಸನ್ ಪಿತೃವನೇ ರೌದ್ರೇ ಶೌಚಂ ಲಪ್ಸ್ತುಮಿಚ್ಛಸಿ।
ಇಯಂ ವಿಪ್ರತಿಪತ್ತಿಸ್ತೇ ಯದಾ ತ್ವಂ ಪಿಶಿತಾಶನಃ ॥೯॥

ಘೋರವಾದ ಸ್ಮಶಾನದಲ್ಲಿ ವಾಸ ಮಾಡಿ, ಶುಚಿಯಾಗಿರಲು ಬಯಸುತ್ತಿದ್ದೀಯೆ. ಮಾಂಸಾಹಾರಿಯಾದ ನಿನಗೆ ಇದು ವಿರುದ್ಧವಾದ ವರ್ತನೆ.

ತತ್ ಸಮೋ ವಾ ಭವಾಸ್ಮಾಭಿರ್ಭಕ್ಷ್ಯಾನ್ ದಾಸ್ಯಾಮಹೇ ವಯಮ್ ।
ಭುಂಕ್ಷ್ವ ಶೌಚಂ ಪರಿತ್ಯಜ್ಯ ಯದ್ಧಿ ಭುಕ್ತಂ ತದಸ್ತಿ ತೇ ॥೧೦॥

ಆದ್ದರಿಂದ ನಮ್ಮಂತೆಯೇ ಇರುವವನಾಗು. ನಾವು ನಿನಗೆ ಆಹಾರವನ್ನು ಒದಗಿಸುವೆವು. ಈ ಶೌಚವನ್ನು ಪರಿತ್ಯಜಿಸಿ ನಿನ್ನ ಜಾತಿಗೆ ಯಾವ ಆಹಾರವಿದೆಯೋ ಅದು ನಿನಗೂ ಇರಲಿ - (ಎಂದು ಹೇಳಿದವು).

ಇತಿ ತೇಷಾಂ ವಚಃ ಶ್ರುತ್ವಾ ಪ್ರತ್ಯುವಾಚ ಸಮಾಹಿತಃ ।
ಮಧುರೈಃ ಪ್ರಶ್ರಿತೈರ್ವಾಕ್ಯೈರ್ಹೇತುಮದ್ಭಿರನಿಷ್ಠುರೈಃ ॥೧೧॥

ಅವುಗಳ ಈ ಮಾತನ್ನು ಕೇಳಿ ರಾಜನರಿಯು ಸಮಾಧಾನದಿಂದ ಮಧುರವಾದ ವಿನಯಪೂರ್ವಕವಾದ ಯುಕ್ತಿಯುಕ್ತವಾದ ನಿಷ್ಠುರವಲ್ಲದ ಮಾತುಗಳಿಂದ ಉತ್ತರವನ್ನು ಕೊಟ್ಟಿತು.

ಅಪ್ರಮಾಣಂ ಪ್ರಸೂತಿರ್ಮೇ ಶೀಲತಃ ಕ್ರಿಯತೇ ಕುಲಮ್ ।
ಪ್ರಾರ್ಥಯಿಷ್ಯೇ ತು ತತ್ ಕರ್ಮ ಯೇನ ವಿಸ್ತೀರ್ಯತೇ ಯಶಃ ॥೧೨॥

ನಾನು ಎಲ್ಲಿ ಹುಟ್ಟಿದೆನೆಂಬುದು ಅಪ್ರಯೋಜಕವಾದುದು. ಶೀಲದಿಂದ ಕುಲವುಂಟಾಗುತ್ತದೆ. ಏನನ್ನು ಮಾಡಿದರೆ ಕೀರ್ತಿಯು ವಿಸ್ತಾರವಾಗುವುದೋ ಅಂತಹ ಕರ್ಮವನ್ನು ಮಾಡಲು ಬಯಸುತ್ತೇನೆ.

ಶ್ಮಶಾನೇ ಯದಿ ವಾಸೋ ಮೇ ಸಮಾಧಿರ್ಮೇ ನಿಶಮ್ಯತಾಮ್ ।
ಆತ್ಮಾ ಫಲತಿ ಕರ್ಮಾಣಿ ನಾಶ್ರಮೋ ಧರ್ಮಲಕ್ಷಣಮ್ ॥೧೩॥

ನಾನು ಸ್ಮಶಾನದಲ್ಲಿ ವಾಸ ಮಾಡುವುದಕ್ಕೆ ನನ್ನ ಸಮರ್ಥನೆಯನ್ನು ಕೇಳಿ. ಆಶ್ರಮವು ಧರ್ಮಕ್ಕೆ ಕಾರಣವಲ್ಲ. ಕರ್ಮವನ್ನು ಮಾಡುವವನು ಮತ್ತು ಅನುಭವಿಸುವವನು ಜೀವ.

ಆಶ್ರಮೇ ಯೋ ದ್ವಿಜಂ ಹನ್ಯಾದ್ ಗಾಂ ವಾ ದದ್ಯಾದನಾಶ್ರಮೇ।
ಕಿನ್ನು ತತ್ ಪಾತಕಂ ನ ಸ್ಯಾತ್ ತದ್ದಾದತ್ತಂ ವೃಥಾ ಭವೇತ್ ॥೧೪॥

ಆಶ್ರಮದಲ್ಲಿ ಒಬ್ಬ ಬ್ರಾಹ್ಮಣನನ್ನು ಕೊಂದರೆ ಅದು ಪಾತಕವಾಗುವುದಿಲ್ಲವೇ? ಆಶ್ರಮವಲ್ಲದ ಸ್ಥಳದಲ್ಲಿ ಗೋದಾನವನ್ನು ಮಾಡಿದರೆ ಅದು ವ್ಯರ್ಥವಾಗುವುದೇ?

ಭವಂತಃ ಸರ್ವಲೋಭೇನ ಕೇವಲಂ ಭಕ್ಷಣೇ ರತಾಃ।
ಅನುಬಂಧೇ ತು ಯೇ ದೋಷಾಸ್ತಾನ್ ನ ಪಶ್ಯಂತಿ ಮೋಹಿತಾಃ ॥೧೫॥

ನೀವು ಎಲ್ಲವನ್ನೂ ಆಸೆ ಪಡುತ್ತಾ ಕೇವಲ ಭೋಜನದಲ್ಲಿ ನಿರತರಾಗಿದ್ದೀರಿ. ಮೋಹಕ್ಕೆ ಒಳಗಾದ ನೀವು ಅದರ ಪರಿಣಾಮವಾದ ದೋಷಗಳನ್ನು ಕಾಣುತ್ತಿಲ್ಲ.

ಅಪ್ರತ್ಯಯಕೃತಾಂ ಗರ್ಹ್ಯಾಮರ್ಥಾಪನಯದೂಷಿತಾಮ್।
ಇಹ ಚಾಮುತ್ರಾ ಚಾನಿಷ್ಟಾಂ ತಸ್ಮಾದ್ ವೃತ್ತಿಂ ನ ರೋಚಯೇ ॥೧೬॥

ನೀವು ಅನುಸರಿಸುತ್ತಿರುವ ವೃತ್ತಿಯು ಅಜ್ಞಾನಮೂಲಕವಾದುದು, ನಿಂದನೀಯವಾದುದು, ದ್ರವ್ಯನಾಶಕವಾದುದು, ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅನಿಷ್ಟವನ್ನು ಉಂಟುಮಾಡುವಂತಹದು. ಆದ್ದರಿಂದ ಅದನ್ನು ನಾನು ಬಯಸುವುದಿಲ್ಲ (ಎಂದು ಹೇಳಿತು).

ತಂ ಶುಚಿಂ ಪಂಡಿತಂ ಮತ್ವಾ ಶಾರ್ದೂಲಃ ಖ್ಯಾತವಿಕ್ರಮಃ।
ಕೃತ್ವಾऽऽತ್ಮಸದೃಶಾಂ ಪೂಜಾಂ ಸಾಚಿವ್ಯೇऽವರ್ಧಯತ್ ಸ್ವಯಮ್ ॥೧೭॥

ಪ್ರಸಿದ್ಧವಾದ ಪರಾಕ್ರಮವುಳ್ಳ ಆ ವ್ಯಾಘ್ರವು ಶುಚಿಯಾದ ಆ ನರಿಯನ್ನು ವಿದ್ವಾಂಸನೆಂದು ತಿಳಿದು ತನಗೆ ಅನುಗುಣವಾದ ಪೂಜೆಯನ್ನು ಮಾಡಿ ತಾನೇ ಆ ನರಿಗೆ ಸಚಿವಪದವಿಯನ್ನು ಕೊಟ್ಟು ಬೆಳೆಸಿತು.

ಸೌಮ್ಯ ವಿಜ್ಞಾತರೂಪಸ್ತ್ವಂ ಗಚ್ಛಯಾತ್ರಾಂ ಮಯಾ ಸಹ।
ವ್ರಿಯಂತಾಮೀಪ್ಸಿತಾ ಭೋಗಾಃ ಪರಿಹಾರ್ಯಾಶ್ಚ ಪುಷ್ಕಳಾಃ ॥೧೮॥

ಎಲೈ ಸೌಮ್ಯನೇ! ನಿನ್ನ ಸ್ವಭಾವವು ತಿಳಿದಿದೆ. ನನ್ನ ಜೊತೆಯಲ್ಲಿ ಸಂಚಾರ ಮಾಡು. ಇಷ್ಟವಾದ ಭೋಗಗಳನ್ನು ಅನುಭವಿಸು. ಹೆಚ್ಚಿನ ವಸ್ತುಗಳು ನಿನಗೆ ಬೇಡವಾದರೆ ಅವುಗಳನ್ನು ಬಿಟ್ಟುಬಿಡು.

ತೀಕ್ಷ್ಣಾ ವಯಮಿತಿ ಖ್ಯಾತಾ ಭವಂತಂ ಜ್ಞಾಪಯಾಮಹೇ।
ಮೃದುಪೂರ್ವಂ ಘಾತಿನಸ್ತೇ ಶ್ರೇಯಶ್ಚಾಧಿಗಮಿಷ್ಯತಿ ॥೧೯॥

ನಾವುಕ್ರೂರರಾದವರು ಎಂದು ಪ್ರಸಿದ್ಧರಾಗಿದ್ದೇವೆ ಎಂದು ನಿನಗೆ ಜ್ಞಾಪಿಸುತ್ತಿದ್ದೇನೆ. ನೀನು ಮಾರ್ದವದಿಂದ ವರ್ತಿಸಿ ಪ್ರಾಣಿಗಳನ್ನು ಕೊಂದರೆ ನಿನಗೆ ಶ್ರೇಯಸ್ಸು ಲಭಿಸುವುದು (ಎಂದು ಹೇಳಿತು).

ಅಥ ಸಂಪೂಜ್ಯ ತದ್ ವಾಕ್ಯಂ ಮೃಗೇಂದ್ರಸ್ಯ ಮಹಾತ್ಮನಃ।
ಗೋಮಾಯುಃ ಪ್ರಶ್ರಿತಂ ವಾಕ್ಯಂ ಬಭಾಷೇ ಕಿಂಚಿದಾನತಃ ॥೨೦॥

ಅನಂತರ ನರಿಯು ಮಹಾತ್ಮನಾದ ಆ ಮೃಗೇಂದ್ರನ ಮಾತನ್ನು ಪೂಜಿಸಿ, ತಲೆಯನ್ನು ಬಗ್ಗಿಸಿ, ವಿನಯಪೂರ್ವಕವಾದ ಮಾತನ್ನಾಡಿತು.

ಸದೃಶಂ ಮೃಗರಾಜೈತತ್ ತವ ವಾಕ್ಯಂ ಮದಂತರೇ।
ಯತ್ ಸಹಾಯಾನ್ಮೃಗಯಸೇ ಧರ್ಮಾರ್ಥಕುಶಲಾನ್ ಶುಚೀನ್ ॥೨೧॥

ಎಲೈ ಮೃಗರಾಜನೇ! ಧರ್ಮಾರ್ಥಕುಶಲರೂ ಶುಚಿಗಳೂ ಆದವರ ಸಹಾಯವನ್ನು ಬಯಸಿ ನನ್ನ ವಿಷಯದಲ್ಲಿ ನೀನು ಹೇಳಿದ ಮಾತುಗಳು ನಿನಗೆ ಯೋಗ್ಯವಾಗಿಯೇ ಇವೆ.

ನ ಶಕ್ಯಮನಮಾತ್ಯೇನ ಮಹತ್ತ್ವಮನುಶಾಸಿತುಮ್।
ದುಷ್ಟಾಮಾತ್ಯೇನ ವಾ ವೀರ ಶರೀರಪರಿಪಂಥಿನಾ ॥೨೨॥

ಅಮಾತ್ಯನಿಲ್ಲದೇ ದೊಡ್ಡ ರಾಜ್ಯವನ್ನು ಆಳುವುದು ಸಾಧ್ಯವಿಲ್ಲ. ಎಲೈ ವೀರನೇ ತನ್ನ ಶರೀರಕ್ಕೆ ವಿರೋಧವನ್ನು ಮಾಡುವ ದುಷ್ಟ ಅಮಾತ್ಯನ ಸಹಾಯದಿಂದಲೂ ದೊಡ್ಡರಾಜ್ಯವನ್ನು ಆಳಲು ಸಾಧ್ಯವಿಲ್ಲ.

ಸಹಾಯಾನುರಕ್ತಾಂಸ್ತು ಯತೇತಾನುಪಸಂಹಿತಾನ್ ।
ಪರಸ್ಪರಮಸಂಘುಷ್ಟಾನ್ ವಿಜಿಗೀಷೂನಲೋಲುಪಾನ್ ॥೨೩॥

ಪರಸ್ಪರ ಗುಂಪುಗೂಡದ ಇಂದ್ರಿಯಲೋಲುಪರಲ್ಲದ, ಸ್ವಾಮಿಯ ಹಿತವನ್ನು ಬಯಸುವ, ಅನುರಾಗವುಳ್ಳ, ನಿಷ್ಕಪಟರಾದ ಸಹಾಯಕರನ್ನು ಪಡೆಯಲು ಪ್ರಯತ್ನಿಸಬೇಕು.

ತಾನತೀತೋಪಧಾನ್ ಪ್ರಾಜ್ಞಾನ್ ಹಿತೇ ಯುಕ್ತಾನ್ ನ ತು ಪ್ರಿಯೇ ।
ಪೂಜಯೇಥಾ ಮಹಾಭಾಗಾನ್ ಯಥಾಚಾರ್ಯಾನ್ ಯಥಾ ಪಿತೄನ್ ॥

ನಿಷ್ಕಪಟರಾದ ಪ್ರಾಜ್ಞರಾದ ನಿನ್ನ ಹಿತದಲ್ಲಿ ನಿರತರಾದ ತಮ್ಮ ಪ್ರಿಯದಲ್ಲಿ ನಿರತರಾಗದ ಮಹಾನುಭಾವರನ್ನು ನೀನು ಗುರುಗಳನ್ನು ಪೂಜಿಸುವಂತೆ ತಂದೆಯನ್ನು ಪೂಜಿಸುವಂತೆ ಪೂಜಿಸಬೇಕು.

ನ ತ್ವೇವಂ ಮಮ ಸಂತೋಷಾದ್ ರೋಚತೇऽನ್ಯನ್ಮೃಗಾಧಿಪ ।
ನ ಕಾಮಯೇ ಸುಖಾನ್ ಭೋಗಾನೈಶ್ವರ್ಯಂ ವಾ ತ್ವದಾಶ್ರಯಮ್ ॥೨೫

ಆದರೆ ಎಲೈ ಮೃಗಾಧಿಪನೇ! ನನಗೆ ಆತ್ಮತೃಪ್ತಿಪೂರ್ವಕವಾಗಿ ಇದು ಯಾವುದೂ ರುಚಿಸುವುದಿಲ್ಲ. ನಿನ್ನನ್ನು ಆಶ್ರಯಿಸಿದ ಸುಖಗಳನ್ನಾಗಲೀ, ಭೋಗ-ಗಳನ್ನಾಗಲೀ, ಐಶ್ವರ್ಯವನ್ನಾಗಲೀ ನಾನು ಬಯಸುವುದಿಲ್ಲ.

ನ ಯೋಕ್ಷ್ಯತಿ ಹಿ ಮೇ ಶೀಲಂ ತವ ಭೃತ್ಯೈಃ ಪುರಾತನೈಃ ।
ತೇ ತ್ವಾಂ ವಿಭೇದಯಿಷ್ಯಂತಿ ದುಃಶೀಲಾಶ್ಚ ಮದಂತರೇ ॥೨೬॥

ನಿನ್ನ ಹಿಂದಿನ ಭೃತ್ಯರಿಗೂ ಮತ್ತು ನನ್ನ ಸ್ವಭಾವಕ್ಕೂ ಸರಿ ಹೊಂದುವುದಿಲ್ಲ. ದುಷ್ಪಸ್ವಭಾವವುಳ್ಳ ಅವರು ನನ್ನ ವಿಷಯದಲ್ಲಿ ನಿನಗೆ ಭೇದಬುದ್ಧಿಯನ್ನು ಉಂಟು ಮಾಡುತ್ತಾರೆ. (ನಮ್ಮ ಮೈತ್ರಿಯನ್ನು ನಾಶಗೊಳಿಸುತ್ತಾರೆ).

ಸಂಶ್ರಯಃ ಶ್ಲಾಘನೀಯಸ್ತ್ವಮನ್ಯೇಷಾಮಪಿ ಭಾಸ್ವತಾಮ್ ।
ಕೃತಾತ್ಮಾ ಸುಮಹಾಭಾಗಃ ಪಾಪಕೇಷ್ವಪ್ಯದಾರುಣಃ ॥೨೭॥

ನೀನು ಒಳ್ಳೆಯ ಮನಸ್ಸುಳ್ಳವನು; ಮಹಾನುಭಾವನಾದವನು; ಅಪರಾಧ ಮಾಡಿದವರಲ್ಲಿಯೂ ದಯೆಯಿಂದ ವರ್ತಿಸುವವನು. ಬೇರೆಯ ಬಲಿಷ್ಠಪ್ರಾಣಿಗಳಿಗೂ ನಿನ್ನನ್ನು ಆಶ್ರಯಿಸುವುದು ಪ್ರಶಂಸನೀಯವಾಗುತ್ತದೆ.

ದೀರ್ಘದರ್ಶೀ ಮಹೋತ್ಸಾಹಃ ಸ್ಥೂಲಲಕ್ಷ್ಯೋ ಮಹಾಬಲಃ।
ಕೃತೀ ಚಾಮೋಘಕರ್ತಾಸಿ ಭಾವ್ಯೈಶ್ಚ ಸಮಲಂಕೃತಃ ॥೨೮॥

ನೀನು ದೀರ್ಘದೃಷ್ಟಿಯುಳ್ಳವನು; ಬಹಳ ಉತ್ಸಾಹವುಳ್ಳವನು; ಬಹುಪ್ರದನಾದವನು, ಮಹಾಬಲವುಳ್ಳವನು, ನಿಪುಣನಾದವನು, ವ್ಯರ್ಥವಲ್ಲದ ಕಾರ್ಯವನ್ನು ಮಾಡುವವನು. ಶುಭಫಲಗಳಿಂದ ಕೂಡಿರುವವನು.

ಕಿಂತು ಸ್ವೇನಾಸ್ಮಿ ಸಂತುಷ್ಟೋ ದುಃಖಾ ವೃತ್ತಿರನುಷ್ಠಿತಾ।
ಸೇವಾಯಾಶ್ಚಾಪಿ ನಾಭಿಜ್ಞಃ ಸ್ವಚ್ಛಂದೇನ ವನೇಚರಃ ॥೨೯॥

ಆದರೆ ನಾನು ನನ್ನ ಪಾಡಿಗೆ ತೃಪ್ತಿಯಿಂದ ಇದ್ದೇನೆ. ಸಂತೋಷದಿಂದಲೇ ಈ ದುಃಖಕರವಾದ ಜೀವನವೃತ್ತಿಯನ್ನು ಅನುಸರಿಸುತ್ತಿದ್ದೇನೆ. ನನ್ನ ಮನಸ್ಸಿಗೆ ಬಂದಂತೆ ಕಾಡಿನಲ್ಲಿ ತಿರುಗುವ ನಾನು ಸ್ವಾಮಿಗೆ ಸೇವೆಯನ್ನು ಮಾಡುವ ಪ್ರಕಾರವನ್ನು ತಿಳಿದವನಲ್ಲ.

ರಾಜೋಪಕ್ರೋಶದೋಷಾಶ್ಚ ಸರ್ವೇ ಸಂಶ್ರಯವಾಸಿನಾಮ್।
ವನಚರ್ಯಾ ಚ ನಿಃಸಂಗಾ ನಿರ್ಭಯಾ ನಿರವಗ್ರಹಾ ॥೩೦॥

ರಾಜನನ್ನು ಆಶ್ರಯಿಸಿ ಇರುವವರೆಲ್ಲರಿಗೂ ರಾಜನಿಗೆ ಉಂಟಾಗಬಹುದಾದ ಕ್ರೋಧದಿಂದ ಉಂಟಾಗುವ ಪರಿಣಾಮದ ದೋಷಗಳು ಇದ್ದೇ ಇರುತ್ತವೆ. ಕಾಡಿನಲ್ಲಿ ಸಂಚರಿಸುವುದಾದರೂ ನಿರ್ಭಯವಾದುದು, ಪ್ರತಿರೋಧರಹಿತವಾದುದು ಮತ್ತು ನಿಃಸಂಗವಾದುದು.

ನೃಪೇಣಾಹೂಯಮಾನಸ್ಯ ಯತ್ ತಿಷ್ಠತಿ ಭಯಂ ಹೃದಿ।
ನ ತತ್ ತಿಷ್ಠತಿ ತುಷ್ಟಾನಾಂ ವನೇ ಮೂಲಫಲಾಶಿನಾಮ್ ॥೩೧॥

ರಾಜನಿಂದ ಆಹ್ವಾನ ಮಾಡಲ್ಪಟ್ಟವನಿಗೆ ಮನಸ್ಸಿನಲ್ಲಿ ಯಾವ ಭಯವಿರುತ್ತದೆಯೋ ಅದು ಕಾಡಿನಲ್ಲಿ ಮೂಲಫಲಗಳನ್ನು ತಿಂದು ಸಂತೃಪ್ತರಾದವರಿಗೆ ಇರುವುದಿಲ್ಲ.

ಪಾನೀಯಂ ವಾ ನಿರಾಯಾಸಂ ಸ್ವಾದ್ವನ್ನಂ ವಾ ಭಯೋತ್ತರಮ್ ।
ವಿಚಾರ್ಯ ಖಲು ಪಶ್ಯಾಮಿ ತತ್ ಸುಖಂ ಯತ್ರ ನಿರ್ವೃತಿಃ ॥೩೨॥

ಒಂದು ಕಡೆ ನಿರಾಯಾಸವಾದ ನೀರು ಮಾತ್ರ. ಇನ್ನೊಂದು ಕಡೆ ಭಯದಿಂದ ಕೂಡಿದ ರುಚಿಕರವಾದ ಅನ್ನ. ಇವೆರಡನ್ನೂ ವಿಚಾರ ಮಾಡಿದರೆ ಎಲ್ಲಿ ನಿರಾಯಾಸವಿರುತ್ತದೆಯೋ ಅದೇ ಸುಖವೆಂದು ಭಾವಿಸುತ್ತೇನೆ.

ಅಪರಾಧ್ಧೈರ್ನ ತಾವಂತೋ ಭೃತ್ಯಾಃ ಶಿಷ್ಟಾನರಾಧಿಪೈಃ।
ಉಪಘಾತೈರ್ಯಥಾ ಭೃತ್ಯಾ ದೂಷಿತಾ ನಿಧನಂ ಗತಾಃ ॥೩೩॥

ರಾಜನ ಕೋಪದಿಂದ ದೂಷಿತರಾಗಿ ಎಷ್ಟು ಸೇವಕರು ಮೃತರಾಗುತ್ತಾರೆಯೋ ಅಷ್ಟು ಸೇವಕರು ರಾಜನಿಗೆ ಅಪರಾಧವನ್ನು ಮಾಡಿ ಮೃತರಾಗುವುದಿಲ್ಲ.

ಯದಿ ತ್ವೇತನ್ಮಯಾ ಕಾರ್ಯಂ ಮೃಗೇಂದ್ರ ಯದಿ ಮನ್ಯಸೇ।
ಸಮಯಂ ಕೃತಮಿಚ್ಛಾಮಿ ವರ್ತಿತವ್ಯಂ ಯಥಾ ಮಯಿ ॥೩೪॥

ಎಲೈ ಮೃಗೇಂದ್ರನೇ! ನಿನ್ನ ಸಾಚಿವ್ಯವನ್ನು ನಾನುಮಾಡಲೇಬೇಕೆಂದು ನೀನು ತಿಳಿದರೆ ನೀನು ನನ್ನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ಒಂದು ನಿಬಂಧನೆಯನ್ನು ಮಾಡುವೆನು.

ಮದೀಯಾ ಮಾನನೀಯಾಸ್ತೇ ಶ್ರೋತವ್ಯಂ ಚ ಹಿತಂ ವಚಃ।
ಕಲ್ಪಿತಾ ಯಾ ಚ ತೇ ವೃತ್ತಿಃ ಸಾ ಭವೇತ್ ತವ ಸುಸ್ಥಿರಾ ॥೩೫॥

ನನ್ನವರನ್ನು ನೀನು ಸನ್ಮಾನಿಸಬೇಕು. ಹಿತವಚನಗಳನ್ನು ಕೇಳಬೇಕು. ನಿನಗೆ ಯಾವ ಜೀವನೋಪಾಯವು ಕಲ್ಪಿತವಾಗಿದೆಯೋ ಅದೇ ನಿನಗೆ ಇರಲಿ. (ಆ ವಿಷಯದಲ್ಲಿ ನನಗೆ ಬಲಾತ್ಕಾರವನ್ನು ಮಾಡಬಾರದು).

ನ ಮಂತ್ರಯೇಯಮನ್ಯೈಸ್ತೇ ಸಚಿವೈಃ ಸಹ ಕರ್ಹಿಚಿತ್ ।
ನೀತಿಮಂತಃ ಪರೀಪ್ಸಂತೋ ವೃಥಾ ಬ್ರೂಯುಃ ಪರೇ ಮಯಿ ॥೩೬॥

ನಾನು ನಿನ್ನ ಉಳಿದ ಮಂತ್ರಿಗಳ ಜೊತೆಯಲ್ಲಿ ಯಾವ ಕಾರಣದಿಂದಲೂ ಮಂತ್ರಾಲೋಚನೆಯನ್ನು ಮಾಡುವುದಿಲ್ಲ. ನನ್ನ ಒಳಗಿನ ವಿಷಯಗಳನ್ನು ವಿಚಾರ ಮಾಡುತ್ತಾ ಅವರು ನನ್ನ ವಿಷಯದಲ್ಲಿ ನಿನ್ನ ಬಳಿ ಸುಳ್ಳು ಮಾತುಗಳನ್ನು ಹೇಳಬಹುದು.

ಏಕ ಏಕೇನ ಸಂಗಮ್ಯ ರಹೋ ಬ್ರೂಯಾಂ ಹಿತಂ ತವ ।
ನ ಚ ತೇ ಜ್ಞಾತಿಕಾರ್ಯೇಷು ಪ್ರಷ್ಟವ್ಯೋಽಹಂ ಹಿತಾಹಿತೇ ॥೩೭॥

ನಾನೊಬ್ಬನೇ ನಿನ್ನೊಬ್ಬನ ಜೊತೆಯಲ್ಲಿ ಸೇರಿ ರಹಸ್ಯವಾಗಿ ನಿನ್ನ ಹಿತವನ್ನು ಹೇಳುವೆನು. ನಿನ್ನ ಜ್ಞಾತಿಗಳ ಹಿತಾಹಿತವಿಷಯದಲ್ಲಿ ನೀನು ನನ್ನನ್ನು ಪ್ರಶ್ನಿಸಬಾರದು.

ಮಯಾ ಸಮ್ಮಂತ್ರ್ಯ ಪಶ್ಚಾಚ್ಚ ನ ಹಿಂಸ್ಯಾಃ ಸಚಿವಾಸ್ತ್ವಯಾ ।
ಮದೀಯಾನಾಂ ಚ ಕುಪಿತೋ ಮಾ ತ್ವಂ ದಂಡಂ ನಿಪಾತಯೇಃ ॥೩೮॥

ನನ್ನ ಜೊತೆಯಲ್ಲಿ ಮಂತ್ರರಹಸ್ಯವನ್ನು ಮಾಡಿ ಅನಂತರ ನಿನ್ನ ಉಳಿದ ಸಚಿವರನ್ನು ಹಿಂಸಿಸಬಾರದು. ನನ್ನವರ ಮೇಲೆ ಕೋಪಗೊಂಡು ನೀನು ಶಿಕ್ಷೆಯನ್ನು ವಿಧಿಸಬಾರದು (ಎಂದು ಹೇಳಿತು).

ಏವಮಸ್ತ್ವಿತಿ ತೇನಾಸೌ ಮೃಗೇಂದ್ರೇಣಾಭಿಪೂಜಿತಃ ।
ಪ್ರಾಪ್ತವಾನ್ ಮತಿಸಾಚಿವ್ಯಂ ಗೋಮಾಯುರ್ವ್ಯಾಘ್ರಯೋನಿತಃ ॥೩೯॥

ಮೃಗೇಂದ್ರನು ಹಾಗೆಯೇ ಆಗಲಿ ಎಂದು ಹೇಳಿ ಆ ನರಿಯನ್ನು ಪೂಜಿಸಿದನು. ನರಿಯು ಆ ವ್ಯಾಘ್ರಕುಮಾರನ ಸಚಿವಪದವಿಯನ್ನು ಹೊಂದಿತು.

ತಂ ತಥಾ ಸತ್ಕೃತಂ ದೃಷ್ಟ್ವಾ ಯುಜ್ಯಮಾನಂ ಚ ಕರ್ಮಣಿ ।
ಪ್ರಾದ್ವಿಷನ್ ಕೃತಸಂಘಾತಾಃ ಪೂರ್ವಭೃತ್ಯಾ ಮುಹುರ್ಮುಹುಃ ॥೪೦॥

ಆ ನರಿಯು ಹಾಗೆ ಪೂಜಿತವಾದುದನ್ನು ನೋಡಿ ಮತ್ತು ರಾಜಕಾರ್ಯಗಳಲ್ಲಿ ಭಾಗವಹಿಸುವುದನ್ನು ನೋಡಿ ಆ ಮೃಗರಾಜನ ಮೊದಲನೆಯ ಸೇವಕರೆಲ್ಲರೂ ಮತ್ತೆ ಮತ್ತೆ ಗುಂಪುಗೂಡಿ ಆ ನರಿಯನ್ನು ದ್ವೇಷಿಸಲು ಪ್ರಾರಂಭಿಸಿದವು.

ಮಿತ್ರಬುದ್ಧ್ಯಾ ಚ ಗೋಮಾಯುಂ ಸಾಂತ್ವಯಿತ್ವಾಪ್ರವೇಶ್ಯ ಚ।
ದೋಷೇಷು ಸಮತಾಂ ನೇತುಮೈಚ್ಛನ್ನಶುಭಬುದ್ಧಯಃ ॥೪೧॥

ದುಷ್ಟಬುದ್ಧಿಯುಳ್ಳ ಆ ನರಿಗಳು ಮಿತ್ರಬುದ್ಧಿಯಿಂದ ಆ ನರಿಯನ್ನು ತಮ್ಮ ಗುಂಪಿಗೆ ಸೇರಿಸಿಕೊಂಡು ಸಮಾಧಾನ ಮಾಡಿ ತಮ್ಮ ದೋಷಗಳನ್ನು ಆ ನರಿಗೂ ಉಂಟುಮಾಡಲು ಪ್ರಯತ್ನಿಸಿದವು.

ಅನ್ಯಥಾಭ್ಯುಚಿತಾಃ ಪೂರ್ವಂ ಪರದ್ರವ್ಯಾಪಹಾರಿಣಃ।
ಅಶಕ್ತಾಃ ಕಿಂಚಿದಾದಾತುಂ ದ್ರವ್ಯಂ ಗೋಮಾಯುಯಂತ್ರಿತಾಃ ॥೪೨॥

ಹಿಂದೆ ಪರದ್ರವ್ಯಗಳನ್ನು ಅಪಹರಿಸಿ ಬೇರೆ ರೀತಿಯಲ್ಲಿ ಜೀವನ ಮಾಡಿದ ಅವು ಈಗ ರಾಜ-ನರಿಯ ನಿಯಂತ್ರಣಕ್ಕೆ ಒಳಪಟ್ಟು ಬೇರೆಯವರ ದ್ರವ್ಯವನ್ನು ಅಪಹರಿಸಲು ಸಾಧ್ಯವಾಗಲಿಲ್ಲ.

ವ್ಯುತ್ಥಾನಂ ಚಾತ್ರ ಕಾಂಕ್ಷದ್ಭಿಃ ಕಥಾಭಿಃ ಪ್ರವಿಲೋಭ್ಯತೇ।
ನ ಚಾಪಿ ಸ ಮಹಾಪ್ರಾಜ್ಞಸ್ತಸ್ಮಾದ್ ಧೈರ್ಯಾಚ್ಚಚಾಲ ಹ।
ಅಥಾಸ್ಯ ಸಮಯಂ ಕೃತ್ವಾ ವಿನಾಶಾಯ ಸ್ಥಿತಾಃ ಪರೇ ॥೪೪॥

ಆ ರಾಜನರಿಯನ್ನು ಅಲ್ಲಿಂದ ಎಬ್ಬಿಸಲು ಬಯಸಿದ ಅವು ಬೇರೆ ಬೇರೆ ಕಥೆಗಳನ್ನು ಹೇಳಿ ಅದನ್ನು ಲೋಭಗೊಳಿಸಲು ಪ್ರಯತ್ನಿಸಿದವು. ಬಹಳ ಧನವನ್ನು ನೀಡಿ ಅದರ ಬುದ್ಧಿಯನ್ನು ಕೆಡಿಸಲು ಪ್ರಯತ್ನಪಟ್ಟವು. ಮಹಾಪ್ರಾಜ್ಞನಾದ ಆ ರಾಜನರಿಯು ಮಾತ್ರ ತನ್ನ ಧೈರ್ಯವನ್ನು ಬಿಟ್ಟು ಅಲುಗಾಡಲಿಲ್ಲ. ಉಳಿದ ಸೇವಕರು ಆ ನರಿಯನ್ನು ವಿನಾಶಮಾಡುವುದಾಗಿ ನಿಶ್ಚಯಿಸಿ ಪ್ರತಿಜ್ಞೆಯನ್ನು ಮಾಡಿದವು.

ಈಪ್ಸಿತಂ ಚ ಮೃಗೇಂದ್ರಸ್ಯ ಮಾಂಸಂ ಯತ್ ತತ್ರ ಸಂಸ್ಕೃತಮ್ ।
ಅಪನೀಯ ಸ್ವಯಂ ತದ್ಧಿ ತೈರ್ನ್ಯಸ್ತಂ ತಸ್ಯ ವೇಶ್ಮನಿ ॥೪೫॥

ಮೃಗೇಂದ್ರನಿಗೆ ಇಷ್ಟವಾದ ಪಕ್ವವಾದ ಮಾಂಸವನ್ನು ತಾವೇ ತೆಗೆದು ಆ ರಾಜನರಿಯ ಗೃಹದಲ್ಲಿ ಇಟ್ಟವು.

ಯದರ್ಥಂ ಚಾಪ್ಯಪಹೃತಂ ಯೇನ ಯಚ್ಚೈವ ಮಂತ್ರಿತಮ್ ।
ತಸ್ಯ ತದ್ ವಿದಿತಂ ಸರ್ವಂ ಕಾರಣಾರ್ಥಂ ಚ ಮರ್ಷಿತಮ್ ॥೪೬॥

ರಾಜನರಿಗೆ ಉಳಿದವರು ಮಾಡಿದ ಮಂತ್ರಾಲೋಚನೆಯನ್ನು, ಮಾಂಸವನ್ನು ತೆಗೆದವರು ಯಾರು? ತೆಗೆದ ಉದ್ದೇಶವೇನು? ಎಂದು ಎಲ್ಲವೂ ತಿಳಿದಿದ್ದರೂ ಅದು ಒಂದು ಕಾರಣದಿಂದ ಕ್ಷಮಿಸಿ ಸುಮ್ಮನಿದ್ದಿತು.

ಸಮಯೋಽಯಂ ಕೃತಸ್ತೇನ ಸಾಚಿವ್ಯಮುಪಗಚ್ಛತಾ ।
ನೋಪಘಾತಸ್ತ್ವಯಾ ಕಾರ್ಯೋ ರಾಜನ್ ಮೈತ್ರೀಮಿಹೇಚ್ಛತಾ ॥೪೭॥

ಸಚಿವಪದವಿಯನ್ನು ಒಪ್ಪಿಕೊಳ್ಳುವಾಗ 'ಎಲೈ ರಾಜನೇ! ನನ್ನ ಜೊತೆಯಲ್ಲಿ ಸ್ನೇಹವನ್ನು ಬಯಸುವ ನೀನು ನನ್ನನ್ನು ಹಿಂಸಿಸಬಾರದು' ಎಂದು ನಿಬಂಧನೆಯನ್ನು ಮಾಡಿಕೊಂಡಿದ್ದಿತು.

ಭೋಜನೇ ಚೋಪಹರ್ತವ್ಯೇ ತನ್ಮಾಂಸಂ ನ ಸ್ಮ ದೃಶ್ಯತೇ ।
ಮೃಗರಾಜೇನ ಚಾಜ್ಞಪ್ತಂ ಮೃಗ್ಯತಾಂ ಚೋರ ಇತ್ಯುತ ॥೪೮॥

ಮೃಗರಾಜನಿಗೆ ಭೋಜನವನ್ನು ತಲುಪಿಸಬೇಕಾದಾಗ ಆ ಮಾಂಸವು ಕಂಡು ಬರಲಿಲ್ಲ. ಮೃಗರಾಜನು ಕಳ್ಳನು ಯಾರೆಂದು ಹುಡುಕಿ ಎಂದು ಆಜ್ಞೆಯನ್ನು ಮಾಡಿದನು.

ಕೃತಕೈಶ್ಚಾಪಿ ತನ್ಮಾಂಸಂ ಮೃಗೇಂದ್ರಾಯೋಪವರ್ಣಿತಮ್ ।
ಸಚಿವೇನೋಪನೀತಂ ತೇ ವಿದುಷಾ ಪ್ರಾಜ್ಞಮಾನಿನಾ ॥೪೯॥

ಕಪಟವನ್ನು ಮಾಡಿದ ಅವನ ಸೇವಕರೆಲ್ಲರೂ ವಿದ್ವಾಂಸನೂ, ಪ್ರಾಜ್ಞನೂ ಆದ ನಿನ್ನ ಸಚಿವನಿಂದ ಆ ಮಾಂಸವು ಅಪಹೃತವಾಗಿದೆ ಎಂದು ಮೃಗೇಂದ್ರನಿಗೆ ತಿಳಿಸಿದರು.

ಸರೋಷಸ್ತ್ವಥ ಶಾರ್ದೂಲಃ ಶ್ರುತ್ವಾ ಗೋಮಾಯುಚಾಪಲಮ್ ।
ಬಭೂವಾಮರ್ಷಿತೋ ರಾಜಾ ವಧಂ ಚಾಸ್ಯಾಭ್ಯರೋಚಯತ್ ॥೫೦॥

ಆ ಹುಲಿಯು ನರಿಯ ಚಪಲತೆಯನ್ನು ಕೇಳಿ, ರೋಷದಿಂದ ಕೂಡಿ, ಅದರ ವಧೆಯನ್ನು ಬಯಸಿತು.

ಛಿದ್ರಂ ತು ತಸ್ಯ ತದ್ ದೃಷ್ಟ್ವಾ ಪ್ರೋಚುಸ್ತೇ ಪೂರ್ವಮಂತ್ರಿಣಃ ।
ಸರ್ವೇಷಾಮೇವ ಸೋಽಸ್ಮಾಕಂ ವೃತ್ತಿಭಂಗೇಷು ವರ್ತತೇ ॥೫೧॥

ಮೃಗರಾಜನ ಆ ಛಿದ್ರವನ್ನು ನೋಡಿ ಪೂರ್ವಮಂತ್ರಿಗಳು ಹೀಗೆ ಮಾತನಾಡಿದವು. ಈ ರಾಜನರಿಯು ನಮ್ಮೆಲ್ಲರ ಜೀವನೋಪಾಯವನ್ನು ಭಗ್ನಗೊಳಿಸುವುದರಲ್ಲಿ ನಿರತವಾಗಿದೆ.

ಇದಂ ಚಾಸ್ಯೇದೃಶಂ ಕರ್ಮ ವಾಲ್ಲಭ್ಯೇನ ತು ರಕ್ಷ್ಯತೇ ।
ಶ್ರುತಶ್ಚ ಸ್ವಾಮಿನಾ ಪೂರ್ವಂ ಯಾದೃಶೋ ನೈಷ ತಾದೃಶಃ ॥೫೨॥

ಅದು ಮಾಡುವ ಇಂತಹ ಕರ್ಮಗಳನ್ನು ನೀನು ಪ್ರೀತಿಯಿಂದ ರಕ್ಷಿಸುತ್ತಿದ್ದೀಯೆ. ಸ್ವಾಮಿಯಾದ ನೀನು ಅವನ ವಿಷಯದಲ್ಲಿ ಹಿಂದೆ ಹೇಗೆ ಕೇಳಿದ್ದೀಯೋ ಅವನು ಅಂತಹ ಸ್ವಭಾವದವನಲ್ಲ.

ವಾಙ್ಮಾತ್ರೇಣೈವ ಧರ್ಮಿಷ್ಠಃ ಸ್ವಭಾವೇನ ತು ದಾರುಣಃ ।
ಧರ್ಮಚ್ಛದ್ಮಾ ಹ್ಯಯಂ ಪಾಪೋ ವೃಥಾಚಾರಪರಿಗ್ರಹಃ ।
ಕಾರ್ಯಾರ್ಥಂ ಭೋಜನಾದ್ಯೇಷು ವ್ರತೇಷು ಕೃತವಾನ್ ಶ್ರಮಮ್ ॥೫೩॥

ಮಾತಿನಲ್ಲಿ ಮಾತ್ರ ಧರ್ಮಿಷ್ಠನಾಗಿದ್ದಾನೆ. ಸ್ವಭಾವ ಮಾತ್ರ ದಾರುಣವಾದುದು. ಈ ಪಾಪಿಯು ಧರ್ಮದ ನಾಟಕವನ್ನು ಆಡುವವನು. ಸುಳ್ಳಾದ ಆಚಾರವನ್ನು

ತೋರಿಸುತ್ತಾನೆ. ತನ್ನ ಭೋಜನಾದಿಗಳನ್ನು ದೊರಕಿಸಿಕೊಳ್ಳುವ ಸಲುವಾಗಿ ಇಂತಹ ವ್ರತಗಳನ್ನು ಧರಿಸಿದ್ದಾನೆ.

ಯದಿ ವಿಪ್ರತ್ಯಯೋ ಹ್ಯೇಷ ತದಿದಂ ದರ್ಶಯಾಮಿ ತೇ।
ತನ್ಮಾಂಸಂ ಚೈವ ಗೋಮಾಯೋಸ್ತತ್ಕ್ಷಣಾತ್ ತೈಸ್ತು ಢೌಕಿತಮ್ ॥೫೪॥

ನಿನಗೆ ನಮ್ಮಲ್ಲಿ ವಿಶ್ವಾಸವಿಲ್ಲದಿದ್ದರೆ ಅದನ್ನು ಈಗ ತೋರಿಸುತ್ತೇವೆ ಎಂದು ಹೇಳಿ ಆ ಕ್ಷಣದಲ್ಲಿ ರಾಜನರಿಯ ಗೃಹದಿಂದ ಮಾಂಸವನ್ನು ತಂದು ಮೃಗರಾಜನ ಮುಂದೆ ಇಟ್ಟವು.

ಮಾಂಸಾಪನಯನಂ ಜ್ಞಾತ್ವಾ ವ್ಯಾಘ್ರಸ್ತೇಷಾಂ ತು ತದ್ವಚಃ।
ಆಜ್ಞಾಪಯಾಮಾಸ ತದಾ ಗೋಮಾಯುರ್ವಧ್ಯತಾಮಿತಿ ॥೫೫॥

ಹುಲಿಯು ಅವರ ಮಾತುಗಳನ್ನು ಕೇಳಿ ನರಿಯೇ ಮಾಂಸವನ್ನು ಅಪಹರಿಸಿರುವುದು ಎಂದು ನಿಶ್ಚಯಿಸಿ 'ನರಿಯನ್ನು ಕೊಲ್ಲಿ' ಎಂದು ಆಜ್ಞೆಮಾಡಿತು.

ಶಾರ್ದೂಲವಚನಂ ಶ್ರುತ್ವಾ ಶಾರ್ದೂಲಜನನೀ ತತಃ।
ಮೃಗರಾಜಂ ಹಿತೈರ್ವಾಕ್ಯೈಃ ಸಂಬೋಧಯಿತುಮಾಗಮತ್ ॥೫೬॥

ವ್ಯಾಘ್ರನ ಮಾತುಗಳನ್ನು ಕೇಳಿ ವ್ಯಾಘ್ರನ ತಾಯಿಯು ಮೃಗರಾಜನನ್ನು ಹಿತವಾಕ್ಯಗಳಿಂದ ಎಚ್ಚರಿಸಲು ಆಗ ಅಲ್ಲಿಗೆ ಬಂದಿತು.

ಪುತ್ರ ನೈತತ್ ತ್ವಯಾ ಗ್ರಾಹ್ಯಂ ಕಪಟಾರಂಭಸಂವೃತಮ್।
ಕರ್ಮಸಂಘರ್ಷಜೈರ್ದೋಷೈರ್ದುಷ್ಯತ್ಯಶುಚಿಭಿಃ ಶುಚಿಃ ॥೫೭॥

ಎಲೈ ಪುತ್ರನೇ! ನಿನ್ನ ಉಳಿದ ಸೇವಕರು ಹೇಳುವ ಮಾತು ಕಪಟದಿಂದ ಕೂಡಿದೆ. ಅದನ್ನು ನೀನು ಸ್ವೀಕರಿಸಬಾರದು. ತಮ್ಮ ಕಾರ್ಯಕ್ಕೆ ವಿರೋಧವುಂಟಾದ ಕಾರಣ ಅಶುಚಿಗಳಾದ ಅವರು ಶುಚಿಯನ್ನು ದೂಷಿಸುತ್ತಿದ್ದಾರೆ.

ನೋಚ್ಚ್ರಿತಂ ಸಹತೇ ಕಶ್ಚಿತ್ ಪ್ರಕ್ರಿಯಾ ವೈರಕಾರಿಕಾ।
ಶುಚೇರಪಿ ಹಿ ಯುಕ್ತಸ್ಯ ದೋಷ ಏವ ನಿಪಾತ್ಯತೇ ॥೫೮॥

ಇನ್ನೊಬ್ಬರ ಉನ್ನತಿಯನ್ನು ಸಹಿಸುವುದಿಲ್ಲ. ಇದು ನಿನಗೂ ಮತ್ತು ಆ ರಾಜನರಿಗೂ ವೈರವನ್ನು ಉಂಟುಮಾಡುವ ಪ್ರಕ್ರಿಯೆಯಾಗಿದೆ. ಶುಚಿಯಾಗಿದ್ದವನಿಗೂ ದೋಷವು ಆರೋಪಿಸಲ್ಪಡುತ್ತಿದೆ.

ಲುಬ್ಧಾನಾಂ ಶುಚಯೋ ದ್ವೇಷ್ಯಾಃ ಕಾತರಾಣಾಂ ತರಸ್ವಿನಃ।
ಮೂರ್ಖಾಣಾಂ ಪಂಡಿತಾ ದ್ವೇಷ್ಯಾ ದರಿದ್ರಾಣಾಂ ಮಹಾಧನಾಃ।
ಅಧಾರ್ಮಿಕಾಣಾಂ ಧರ್ಮಿಷ್ಠಾ ವಿರೂಪಾಣಾಂ ಸುರೂಪಕಾಃ ॥೫೯॥

ಲೋಭಿಗಳಿಗೆ ಶುಚಿಗಳು ದ್ವೇಷ್ಯರಾದವರು. ಹೇಡಿಗಳಿಗೆ ವಿವೇಕಶಾಲಿಗಳಾದ ವೀರರು ದ್ವೇಷ್ಯರು. ಮೂರ್ಖರಿಗೆ ಪಂಡಿತರು ದ್ವೇಷ್ಯರು. ದರಿದ್ರರಿಗೆ ಶ್ರೀಮಂತರು ದ್ವೇಷ್ಯರು. ಅಧಾರ್ಮಿಕರಿಗೆ ಧರ್ಮಿಷ್ಠರು ದ್ವೇಷ್ಯರು. ರೂಪಹೀನರಿಗೆ ರೂಪವಂತರು ದ್ವೇಷ್ಯರು.

ಮುನೇರಪಿ ವನಸ್ಥಸ್ಯ ಸ್ವಾನಿ ಕರ್ಮಾಣಿ ಕುರ್ವತಃ।
ಉತ್ಪದ್ಯಂತೇ ತ್ರಯಃ ಪಕ್ಷಾಃ ಮಿತ್ರೋದಾಸೀನಶತ್ರವಃ ॥೬೦॥

ಕಾಡಿನಲ್ಲಿ ವಾಸಿಸಿ, ತನ್ನ ಕರ್ಮಗಳನ್ನು ತಾನು ಮಾಡಿಕೊಂಡಿರುವ ಮುನಿಗೂ ಮಿತ್ರರು ಶತ್ರುಗಳು ಮತ್ತು ಉದಾಸೀನರು ಎಂಬ ಮೂರು ಪಕ್ಷಗಳು ಉಂಟಾಗುತ್ತವೆ.

ಬಹವಃ ಪಂಡಿತಾಃ ಲುಬ್ಧಾಃ ಸರ್ವೇ ಮಾಯೋಪಜೀವಿನಃ।
ಕುರ್ಯುರ್ದೋಷಮದೋಷಸ್ಯ ಬೃಹಸ್ಪತಿಮತೇರಪಿ ॥೬೧॥

ಅನೇಕ ಪಂಡಿತರು ಲೋಭಿಗಳಾಗಿರುತ್ತಾರೆ. ಕಪಟದಿಂದ ಜೀವನವನ್ನು ಮಾಡುತ್ತಾರೆ. ಬೃಹಸ್ಪತಿಮತಿಯನ್ನು ಹೊಂದಿ ನಿರ್ದೋಷನಾದವನಿಗೂ ದೋಷಾರೋಪಣೆಯನ್ನು ಮಾಡುತ್ತಾರೆ.

ಶೂನ್ಯಾತ್ ತಚ್ಚ ಗೃಹಾನ್ಮಾಂಸಂ ಯದದ್ಯಾಪಹೃತಂ ತವ।
ನೇಚ್ಛತೇ ದೀಯಮಾನಂ ಚ ಸಾಧು ತಾವದ್ ವಿಮೃಶ್ಯತಾಮ್ ॥೬೨॥

ಶೂನ್ಯವಾಗಿದ್ದ ನಿನ್ನ ಗೃಹದಿಂದ ಮಾಂಸವು ಅಪಹರಿಸಲ್ಪಟ್ಟಿದೆ. ಇನ್ನೊಂದು ಕಡೆ ಮಾಂಸವನ್ನು ನೀಡಿದರೂ ಅವನು ಮಾಂಸವನ್ನು ತೆಗೆದುಕೊಳ್ಳಲು ಬಯಸುತ್ತಿಲ್ಲ. ಈ ವಿಷಯವನ್ನು ಚೆನ್ನಾಗಿ ವಿಚಾರಮಾಡು.

ಅಸತ್ಯಾಃ ಸತ್ಯಸಂಕಾಶಾಃ ಸತ್ಯಾಶ್ಚಾಸತ್ಯದರ್ಶಿನಃ।
ದೃಶ್ಯಂತೇ ವಿವಿಧಾ ಭಾವಾಸ್ತೇಷು ಯುಕ್ತಂ ಪರೀಕ್ಷಣಮ್ ॥೬೩॥

ಅಸತ್ಯವನ್ನು ನುಡಿಯುವವರು ಸತ್ಯವಾದಿಗಳಂತೆಯೂ, ಸತ್ಯವನ್ನು ನುಡಿಯುವವರು ಅಸತ್ಯವಾದಿಗಳಂತೆಯೂ ಕಂಡು ಬರುತ್ತಾರೆ. ಅವರಲ್ಲಿ ಅನೇಕ ಅಭಿಪ್ರಾಯಗಳಿರುತ್ತವೆ. ಅದರಲ್ಲಿ ಯುಕ್ತವಾದುದು ಯಾವುದು ಎಂದು ಪರೀಕ್ಷಿಸಬೇಕು.

ತಳವದ್ ದೃಶ್ಯತೇ ವ್ಯೋಮ ಖದ್ಯೋತೋ ಹವ್ಯವಾಡಿವ।
ನ ಚೈವಾಸ್ತಿ ತಳಂ ವ್ಯೋಮ್ನಿ ನ ಖದ್ಯೋತೇ ಹುತಾಶನಃ ॥೬೪॥

ಆಕಾಶವು ಭೂತಳದಂತೆ ಕಾಣುತ್ತದೆ. ಮಿಣುಕುಹುಳುವು ಅಗ್ನಿಯಂತೆ ಕಾಣುತ್ತದೆ. ಆದರೆ ಆಕಾಶದಲ್ಲಿ ಭೂಮಿಯಾಗಲೀ, ಮಿಣುಕುಹುಳುವಿನಲ್ಲಿ ಅಗ್ನಿಯಾಗಲೀ ಇಲ್ಲ.

ತಸ್ಮಾತ್ ಪ್ರತ್ಯಕ್ಷದೃಷ್ಟೋSಪಿ ಯುಕ್ತೋ ಹ್ಯರ್ಥಃ ಪರೀಕ್ಷಿತುಮ್।
ಪರೀಕ್ಷ್ಯ ಜ್ಞಾಪಯನ್ ಹ್ಯರ್ಥಾನ್ನ ಪಶ್ಚಾತ್ ಪರಿತಪ್ಯತೇ ॥೬೫॥

ಆದ್ದರಿಂದ ಪ್ರತ್ಯಕ್ಷದೃಷ್ಟವಾದರೂ ಆ ವಿಷಯವನ್ನು ಪರೀಕ್ಷಿಸುವುದು ಯೋಗ್ಯವಾದುದು. ಪರೀಕ್ಷೆಯನ್ನು ಮಾಡಿ ವಿಷಯವನ್ನು ತಿಳಿಯುವವನು ಪಶ್ಚಾತ್ತಾಪ ಪಡುವುದಿಲ್ಲ.

ನ ದುಷ್ಕರಮಿದಂ ಪುತ್ರ ಯತ್ ಪ್ರಭುರ್ಘಾತಯೇತ್ ಪರಮ್।
ಶ್ಲಾಘನೀಯಾ ಚ ವರ್ಯಾ ಚ ಲೋಕೇ ಪ್ರಭವತಾಂ ಕ್ಷಮಾ ॥೬೬॥

ಎಲೈ ಪುತ್ರನೇ! ಪ್ರಭುವಾದವನು ಇನ್ನೊಬ್ಬನನ್ನು ಕೊಲ್ಲಿಸುವುದು ದುಷ್ಕರ-

ವಾದುದಲ್ಲ. ಆದರೆ ಪ್ರಭುತ್ವವಿದ್ದವರು ಕ್ಷಮಿಸುವುದು ಲೋಕದಲ್ಲಿ ಶ್ಲಾಘನೀಯವಾದುದು ಮತ್ತು ಅಪೇಕ್ಷಿತವಾದುದು.

ಸ್ಥಾಪಿತೋಽಯಂ ಪುತ್ರ ತ್ವಯಾ ಸಾಮಂತೇಷ್ವಪಿ ವಿಶ್ರುತಃ।
ದುಃಖೇನಾಸಾದ್ಯತೇ ಚಾತ್ರ ಧಾರ್ಯತಾಮೇಷ ತೇ ಸುಹೃತ್ ॥೬೭॥

ಎಲೈ ಪುತ್ರನೇ! ನೀನು ಅವನನ್ನು ಸಚಿವಪದವಿಯಲ್ಲಿ ಸ್ಥಾಪಿಸಿದ್ದೀಯೆ. ನಿನ್ನ ಸಾಮಂತರಲ್ಲಿಯೂ ಅವನು ಖ್ಯಾತನಾಗಿದ್ದಾನೆ. ಅವನು ದುಃಖದಿಂದ ಈ ಕಡೆ ಬರುತ್ತಿದ್ದಾನೆ. ಈ ಸುಹೃಜ್ಜನನನ್ನು ನಿನ್ನ ಬಳಿಯಲ್ಲಿ ಇರಿಸಿಕೋ.

ದೂಷಿತಂ ಪರದೋಷೈರ್ಹಿ ಗೃಹ್ಣೀತೇ ಯೋಽನ್ಯಥಾ ಶುಚಿಮ್।
ಸ್ವಯಂ ಸನ್ ದೂಷಿತಾಮಾತ್ಯಃ ಕ್ಷಿಪ್ರಮೇವ ವಿನಶ್ಯತಿ ॥೬೮॥

ಶುಚಿಯಾದವನು ಪರದೋಷಗಳಿಂದ ದೂಷಿಸಲ್ಪಟ್ಟರೆ ಅದನ್ನು ಹಾಗೆಯೇ ಗ್ರಹಿಸುವವನು ಸ್ವತಃ ಸಜ್ಜನನಾದರೂ ದುಷ್ಟರಾದ ಸಚಿವರನ್ನುಳ್ಳವನು ಶೀಘ್ರವಾಗಿ ವಿನಾಶವನ್ನು ಹೊಂದುತ್ತಾನೆ.

ತಸ್ಮಾದಥಾರಿಸಂಘಾತಾದ್ ಗೋಮಾಯೋಃ ಕಶ್ಚಿದಾಗತಃ।
ಧರ್ಮಾತ್ಮಾ ತೇನ ಚಾಖ್ಯಾತಂ ಯಥೈತದ್ ಕಪಟಂ ಕೃತಮ್ ॥೬೯॥

ಆ ನರಿಯ ಸಮೂಹದಿಂದ ಧರ್ಮಾತ್ಮನಾದ ಒಂದು ನರಿಯು ಬಂದು ನನಗೆ ಈ ಕಪಟವನ್ನು ಹೀಗೆ ಆಚರಿಸಿದ್ದಾರೆ ಎಂಬ ವಿಷಯವನ್ನು ಹೇಳಿತು.

ತತೋ ವಿಜ್ಞಾತಚಾರಿತ್ರಃ ಸತ್ಕೃತ್ಯ ಚ ವಿಮೋಕ್ಷಿತಃ।
ಪರಿಷ್ವಕ್ತಶ್ಚ ಸಸ್ನೇಹಂ ಮೃಗೇಂದ್ರೇಣ ಪುನಃ ಪುನಃ ॥೭೦॥

ಆಗ ರಾಜನರಿಯ ಸ್ವಭಾವವನ್ನು ತಿಳಿದ ಮೃಗರಾಜನು ಅದನ್ನು ಸತ್ಕರಿಸಿ, ದೋಷಾರೋಪದಿಂದ ಬಿಡುಗಡೆಗೊಳಿಸಿ, ಪುನಃ ಪುನಃ ಸ್ನೇಹಪೂರ್ವಕವಾಗಿ ಆಲಿಂಗಿಸಿದನು.

ಅನುಜ್ಞಾಪ್ಯ ಮೃಗೇಂದ್ರಂ ತು ಗೋಮಾಯುರ್ನೀತಿಶಾಸ್ತ್ರವಿತ್ ।
ತೇನಾಮರ್ಷೇಣ ಸಂತಪ್ತಃ ಪ್ರಾಯಮಾಸಿತುಮೈಕ್ಷತ ॥೭೧॥

ನೀತಿಶಾಸ್ತ್ರವನ್ನು ತಿಳಿದ ಆ ರಾಜನರಿಯು ಮೃಗೇಂದ್ರನ ಅನುಮತಿಯನ್ನು ಪಡೆದು, ಮೃಗೇಂದ್ರನ ಕೋಪದಿಂದ ತಪ್ತವಾಗಿ ಪ್ರಾಯೋಪ್ರವೇಶವನ್ನು ಮಾಡಲು ಬಯಸಿತು.

ಶಾರ್ದೂಲಸ್ತತ್ರ ಗೋಮಾಯುಂ ಸ್ನೇಹಾತ್ ಪ್ರಸ್ರುತಲೋಚನಃ ।
ಅವಾರಯತ್ ಸ ಧರ್ಮಿಷ್ಠಂ ಪೂಜಯಾ ಪ್ರತಿಪೂಜಯತ್ ॥೭೨॥

ಆಗ ಆ ವ್ಯಾಘ್ರವು ಸ್ನೇಹದಿಂದ ಅಳುತ್ತಾ ಧರ್ಮಿಷ್ಠವಾದ ಆ ನರಿಯನ್ನು ತಡೆದು ಅದನ್ನು ಪೂಜಿಸಿತು.

ತಂ ಸ ಗೋಮಾಯುರಾಲೋಕ್ಯ ಸ್ನೇಹಾದಾಗತಸಂಭ್ರಮಮ್ ।
ಬಭಾಷೇ ಪ್ರಣತೋ ವಾಕ್ಯಂ ಬಾಷ್ಪಗದ್ಗದಯಾ ಗಿರಾ ॥೭೩॥

ಸ್ನೇಹದಿಂದ ಆ ವ್ಯಾಘ್ರನಿಗೆ ಉಂಟಾದ ಗಾಬರಿಯನ್ನು ನೋಡಿ ಆ ನರಿಯು ಅದನ್ನು ನಮಸ್ಕರಿಸಿ ಬಾಷ್ಪಗದ್ಗದವಾದ ಕಂಠದಿಂದ ಮಾತನಾಡಿತು.

ಪೂಜಿತೋಽಹಂ ತ್ವಯಾ ಪೂರ್ವಂ ಪಶ್ಚಾಚ್ಚೈವ ವಿಮಾನಿತಃ ।
ಪರೇಷಾಮಾಸ್ಪದಂ ನೀತೋ ವಸ್ತುಂ ನಾಹರ್ಮ್ಯಹಂ ತ್ವಯಿ ॥೭೪॥

ನೀನು ನನ್ನನ್ನು ಮೊದಲು ಪೂಜಿಸಿ, ಅನಂತರ ಅವಮಾನಗೊಳಿಸಿದೆ. ನಾನು ಇನ್ನೊಬ್ಬರ ದೋಷಾರೋಪಣೆಗೆ ಗುರಿಯಾಗುವಂತೆ ಮಾಡಿದೆ. ನಾನು ನಿನ್ನ ಜೊತೆಯಲ್ಲಿ ವಾಸಿಸುವುದು ಯೋಗ್ಯವಲ್ಲ.

ಸ್ವಸಂತುಷ್ಟಾಶ್ಚ್ಯುತಾಃ ಸ್ಥಾನಾನ್ಮಾನಾತ್ ಪ್ರತ್ಯವರೋಪಿತಾಃ ।
ಸ್ವಯಂ ಚೋಪಹೃತಾ ಭೃತ್ಯಾ ಯೇ ಚಾಪ್ಯುಪಹೃತಾಃ ಪರೈಃ ॥೭೫॥

ಪರಿಕ್ಷೀಣಾಶ್ಚ ಲುಬ್ಧಾಶ್ಚ ಕ್ರೂರಾಃ ಕಾರಾಭಿತಾಪಿತಾಃ ।
ಹೃತಸ್ವಾಮಾನಿನೋ ಯೇ ಚ ತ್ಯಕ್ತೋಪಾತ್ತಾ ಮಹೇಚ್ಛವಃ ॥೭೬॥

ಸಂತಾಪಿತಾಶ್ಚ ಯೇ ಕೇಚಿದ್ ವ್ಯಸನೌಘಪ್ರತೀಕ್ಷಿಣಃ।
ಅಂತರ್ಹಿತಾಃ ಸ್ವೋಪಹೃತಾಃ ಸರ್ವೇ ತೇ ಪರಸಾಧನಾಃ ॥೭೭॥

ಬಹಳ ಅಸಂತುಷ್ಟರಾದ, ತಮ್ಮ ಸ್ಥಾನದಿಂದ ಚ್ಯುತರಾದ, ಮಾನದಿಂದ ಚ್ಯುತರಾದ, ತಾನಾಗಿಯೇ ಸಂಪಾದಿಸಿದ ಅಥವಾ ಬೇರೆಯವರು ನೀಡಿದ, ಕ್ಷೀಣರೂ ಲೋಭಿಗಳೂ ಕ್ರೂರರೂ ಕಾರಾಗೃಹದಲ್ಲಿ ಹಾಕಲ್ಪಟ್ಟವರು ಸರ್ವಸ್ವವೂ ರಾಜನಿಂದ ದೋಚಲ್ಪಟ್ಟವರು, ಆತ್ಮಾಭಿಮಾನವುಳ್ಳವರು, ತಮ್ಮ ಉತ್ಸವದ ಆಸೆ ಉಳ್ಳವರು. ಒಮ್ಮೆ ಸೇವೆಯಿಂದ ಚ್ಯುತಿಗೊಳಿಸಲ್ಪಟ್ಟು ಪುನಃ ಸೇವೆಗೆ ತೆಗೆದುಕೊಂಡವರು, ಹಿಂದೆ ಸಂತಾಪಕ್ಕೆ ಒಳಗಾದವರು. ವ್ಯಸನಗಳ ಸಮೂಹವನ್ನೇ ನೋಡುವವರು, ಮರೆಯಲ್ಲಿ ಕೆಲಸ ಮಾಡುವ ಇಂತಹ ಎಲ್ಲರೂ ಇನ್ನೊಬ್ಬರ ಕಾರ್ಯವನ್ನು ಸಾಧಿಸುತ್ತಾರೆ. ತಮ್ಮ ಸ್ವಾಮಿಯ ಕಾರ್ಯವನ್ನು ಸಾಧಿಸುವುದಿಲ್ಲ.

ಅವಮಾನೇನ ಯುಕ್ತಸ್ಯ ಸ್ಥಾಪಿತಸ್ಯ ಚ ಮೇ ಪುನಃ।
ಕಥಂ ಯಾಸ್ಯಸಿ ವಿಶ್ವಾಸಮಹಮೇಷ್ಯಾಮಿ ವಾ ಪುನಃ ॥೭೮॥

ಅವಮಾನದಿಂದ ಕೂಡಿ ಪುನಃ ಸ್ಥಾಪಿತನಾದ ನನ್ನಲ್ಲಿ ನೀನು ಹೇಗೆ ವಿಶ್ವಾಸವನ್ನು ಹೊಂದುವಿ? ಅಥವಾ ನಾನಾದರೂ ನಿನ್ನ ಬಳಿ ಪುನಃ ಹೇಗೆ ಬರುವೆ?

ಸಮರ್ಥ ಇತಿ ಸಂಗೃಹ್ಯ ಸ್ಥಾಪಯಿತ್ವಾ ಪರೀಕ್ಷ್ಯ ಚ।
ಕೃತಂ ಚ ಸಮಯಂ ಭಿತ್ತ್ವಾ ತ್ವಯಾऽಹಮವಮಾನಿತಃ ॥೭೯॥

ನಾನು ಸಮರ್ಥನಾದವನೆಂದು ತಿಳಿದು ನನ್ನನ್ನು ಸಂಗ್ರಹಿಸಿ, ಪರೀಕ್ಷಿಸಿ, ಸಚಿವಸ್ಥಾನದಲ್ಲಿಟ್ಟು, ಮಾಡಿಕೊಂಡ ಒಪ್ಪಂದವನ್ನು ಮುರಿದು ನೀನು ನನಗೆ ಅವಮಾನವನ್ನು ಮಾಡಿದ್ದೀಯೆ.

ಪ್ರಥಮಂ ಯಃ ಸಮಾಖ್ಯಾತಃ ಶೀಲವಾನಿತಿ ಸಂಸದಿ।
ನ ವಾಚ್ಯಂ ತಸ್ಯ ವೈಗುಣ್ಯಂ ಪ್ರತಿಜ್ಞಾಂ ಪರಿರಕ್ಷತಾ ॥೮೦॥

ಮೊದಲು ಸಭೆಯಲ್ಲಿ ಇವನು ಶೀಲವಂತನೆಂದು ಘೋಷಿಸಿದ ಮೇಲೆ ತನ್ನ

ಪ್ರತಿಜ್ಞೆಯನ್ನು ರಕ್ಷಿಸಿಕೊಳ್ಳುವವನು ಅವನಲ್ಲಿ ದೋಷವುಂಟಾದರೂ ಅದನ್ನು ಹೇಳಬಾರದು.

ಏವಂ ಚಾವಮತಸ್ಯೇಹ ವಿಶ್ವಾಸಂ ಕಿಂ ಪ್ರಯಾಸ್ಯಸಿ।
ತ್ವಯಿ ಚೈವ ಹ್ಯವಿಶ್ವಾಸೇ ಮಮೋದ್ವೇಗೋ ಭವಿಷ್ಯತಿ ॥೮೧॥

ಹೀಗೆ ಅವಮಾನಕ್ಕೆ ಒಳಗಾದ ನನ್ನಲ್ಲಿ ನೀನು ಹೇಗೆ ವಿಶ್ವಾಸವನ್ನು ಮಾಡುವಿ? ನಿನಗೆ ನನ್ನಲ್ಲಿ ವಿಶ್ವಾಸವಿಲ್ಲದಿದ್ದರೆ ನನಗೂ ಉದ್ವೇಗವುಂಟಾಗುವುದು.

ಶಂಕಿತಸ್ತ್ವದಹಂ ಭೀತಃ ಪರೇ ಛಿದ್ರಾನುದರ್ಶಿನಃ।
ಅಸ್ನಿಗ್ಧಾಶ್ಚೈವ ದುಸ್ತೋಷಾಃ ಕರ್ಮ ಚೈತದ್ ಬಹುಚ್ಛಲಮ್ ॥೮೨॥

ನಾನು ನಿನ್ನಿಂದ ಶಂಕಿಸಲ್ಪಟ್ಟಿದ್ದೇನೆ. ಉಳಿದ ನಿನ್ನ ಸೇವಕರು ನನ್ನ ದೋಷವನ್ನು ಹುಡುಕಲು ಪ್ರಯತ್ನಿಸುತ್ತಿದ್ದಾರೆ. ಅವರು ಸ್ನೇಹಶೂನ್ಯರಾದವರು ಮತ್ತು ಸಂತೋಷ ಪಡಿಸಲು ಅಸಾಧ್ಯರಾದವರು. ನಿನ್ನ ಸಚಿವಸ್ಥಾನವು ಬಹಳ ದೋಷಗಳಿಂದ ಕೂಡಿದೆ.

ದುಃಖೇನ ಶ್ಲಿಷ್ಯತೇ ಭಿನ್ನಂ ಶ್ಲಿಷ್ಟಂ ದುಃಖೇ ನ ಭಿದ್ಯತೇ।
ಭಿನ್ನಶ್ಲಿಷ್ಟಾ ತು ಯಾ ಪ್ರೀತಿರ್ನ ಸಾ ಸ್ನೇಹೇನ ವರ್ತತೇ ॥೮೩॥

ಒಡೆದು ಹೋದ ವಸ್ತುವನ್ನು ಬಹಳ ಕಷ್ಟಪಟ್ಟು ಪುನಃ ಕೂಡಿಸಬೇಕು. ನಿಜವಾಗಿ ಸಂಬದ್ಧವಾದ ವಸ್ತುವು/ಸ್ನೇಹಿತರು ಕಷ್ಟ ಒದಗಿದಾಗ ಭಿನ್ನರಾಗುವುದಿಲ್ಲ. ಮೊದಲು ಭಿನ್ನವಾಗಿ ಅನಂತರ ಒಂದು ಗೂಡಿಸಿದ ವಸ್ತುವಿನಲ್ಲಿ ಇರುವ ಪ್ರೀತಿಯು ಸ್ನೇಹಪೂರ್ವಕವಾಗಿ ಇರುವುದಿಲ್ಲ.

ಕಶ್ಚಿದೇವ ಹಿತೇ ಭರ್ತುಃ ದೃಶ್ಯತೇ ನ ಪರಾತ್ಮನಃ।
ಕಾರ್ಯಾಪೇಕ್ಷಾ ಹಿ ವರ್ತಂತೇ ಭಾವಾಃ ಸ್ನಿಗ್ಧಾಸ್ತು ದುರ್ಲಭಾಃ ॥೮೪॥

ಯಾವನೋ ಒಬ್ಬನು ಮಾತ್ರ ಸ್ವಾಮಿಯ ಹಿತದಲ್ಲಿ ರತನಾಗಿರುವುದು ಕಂಡು ಬರುತ್ತದೆ. ಇನ್ನೊಬ್ಬರ ಹಿತದಲ್ಲಿ ಆಸಕ್ತನಾದವನು ಸ್ವಾಮಿಯ ಹಿತದಲ್ಲಿ ಆಸಕ್ತನಾಗಿ–

ರುವುದಿಲ್ಲ. ಪ್ರತಿಯೊಬ್ಬರಿಗೂ ಸ್ವಾರ್ಥವಿರುತ್ತದೆ. ನಿಜವಾದ ಸ್ನೇಹವಿರುವ ಜನರು (ವಸ್ತುಗಳು) ದುರ್ಲಭರಾದವರು.

ಸುದುಃಖಂ ಪುರುಷಜ್ಞಾನಂ ಚಿತ್ತಂ ಹ್ಯೇಷಾಂ ಚಲಾಚಲಮ್ ।
ಸಮರ್ಥೋ ವಾಪ್ಯಶಕ್ತೋ ವಾ ಶತೇಷ್ವೇಕೋऽಧಿಗಮ್ಯತೇ ॥೮೫॥

ಪುರುಷರ ಸ್ವಭಾವವನ್ನು ತಿಳಿಯುವುದು ಬಹಳ ಕಷ್ಟಸಾಧ್ಯವಾದುದು. ಅವರ ಮನಸ್ಸು ಚಂಚಲವಾಗಿರುತ್ತದೆ. ಅವನು ಸಮರ್ಥನಾಗಿರಲಿ ಅಥವಾ ಅಸಮರ್ಥನಾಗಿರಲಿ ನೂರರಲ್ಲಿ ಒಬ್ಬನನ್ನು ಮಾತ್ರ ಸರಿಯಾಗಿ ತಿಳಿಯಬಹುದು.

ಅಕಸ್ಮಾತ್ ಪ್ರಕ್ರಿಯಾ ನೃಣಾಮಕಸ್ಮಾಚ್ಚಾಪಕರ್ಷಣಮ್ ।
ಶುಭಾಶುಭೇ ಮಹತ್ತ್ವಂ ಚ ಪ್ರಕರ್ತುಂ ಬುದ್ಧಿಲಾಘವಾತ್ ॥೮೬॥

ಇದ್ದಕ್ಕಿದ್ದಂತೆಯೇ ಮನುಷ್ಯರಿಗೆ ಒಂದು ಕಾರ್ಯವು ಉಪಕ್ರಮಗೊಳ್ಳುತ್ತದೆ. ಇದ್ದಕ್ಕಿದ್ದಂತೆಯೇ ನಿಂತು ಹೋಗುತ್ತದೆ. ಒಬ್ಬನಿಗೆ ಶುಭವನ್ನು ಉಂಟುಮಾಡುವುದು, ಅಶುಭವನ್ನು ಉಂಟುಮಾಡುವುದು, ಮಹತ್ವವನ್ನು ಉಂಟುಮಾಡವುದು ಇವೆಲ್ಲವೂ ಬುದ್ಧಿದೋಷದಿಂದ ಉಂಟಾಗುವಂತಹವುಗಳು. (ಆದ್ದರಿಂದ ಅನಿತ್ಯವಾದವುಗಳು).

ಏವಂ ಬಹುವಿಧಂ ಸಾಂತ್ವಮುಕ್ತ್ವಾ ಧರ್ಮಾರ್ಥಹೇತುಮತ್ ।
ಪ್ರಸಾದಯಿತ್ವಾ ರಾಜಾನಂ ಗೋಮಾಯುರ್ವನಮಭ್ಯಗಾತ್ ॥೮೭॥

ಹೀಗೆ ಧರ್ಮಾರ್ಥಯುಕ್ತವಾದ ಯುಕ್ತಿಯುಕ್ತವಾದ ಅನೇಕ ವಿಧವಾದ ಸಮಾಧಾನವಚನಗಳನ್ನು ಹೇಳಿ, ಮೃಗರಾಜನನ್ನು ಪ್ರಸನ್ನಗೊಳಿಸಿ ರಾಜನರಿಯು ಕಾಡಿಗೆ ಹೊರಟು ಹೋಯಿತು.

ಅಗೃಹ್ಯಾನುನಯಂ ತಸ್ಯ ಮೃಗೇಂದ್ರಸ್ಯ ಸ ಬುದ್ಧಿಮಾನ್ ।
ಗೋಮಾಯುಃ ಪ್ರಾಯಮಾಸೀನಸ್ತ್ಯಕ್ತ್ವಾ ದೇಹಂ ದಿವಂ ಯಯೌ ॥೮೮॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಯೋದಶಾಧಿಕಶತತಮೋऽಧ್ಯಾಯಃ ॥೧೧೩॥

ಮೃಗೇಂದ್ರನ ಒಲಿಸುವ ಮಾತುಗಳನ್ನು ಕೇಳದೇ ಮೇಧಾವಿಯಾದ ಆ ನರಿಯು ಪ್ರಾಯೋಪವೇಶವನ್ನು ಮಾಡಿ ದೇಹವನ್ನು ತ್ಯಜಿಸಿ ಸ್ವರ್ಗಕ್ಕೆ ಹೋಯಿತು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೧೩ನೆಯ ಅಧ್ಯಾಯವು ಮುಗಿಯಿತು.

—0—

೧೧೪. ನೂರಹದಿನಾಲ್ಕನೆಯ ಅಧ್ಯಾಯ

ಆಲಸ್ಯದಿಂದ ಉಂಟಾಗುವ ಅನರ್ಥದ ವಿಷಯದಲ್ಲಿ ಒಂಟೆಯ ಕಥೆ

ಯುಧಿಷ್ಠಿರಃ

ಕಿಂ ಪಾರ್ಥಿವೇನ ಕರ್ತವ್ಯಂ ಕಿಂಚ ಕೃತ್ವಾ ಸುಖೀ ಭವೇತ್ ।
ತನ್ಮಮಾಚಕ್ಷ್ವ ತತ್ತ್ವೇನ ಸರ್ವಂ ಧರ್ಮಭೃತಾಂವರ ॥೧॥

ಯುಧಿಷ್ಠಿರ – ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ! ರಾಜನು ಏನು ಮಾಡಬೇಕು? ಏನು ಮಾಡಿದರೆ ಸುಖಿಯಾಗಿರುತ್ತಾನೆ ಎಂಬುದೆಲ್ಲವನ್ನೂ ನನಗೆ ಸರಿಯಾಗಿ ಹೇಳು.

ಭೀಷ್ಮಃ

ಹಂತ ತೇऽಹಂ ಪ್ರವಕ್ಷ್ಯಾಮಿ ಶೃಣು ಕಾರ್ಯೈಕನಿಶ್ಚಯಮ್ ।
ಯಥಾ ರಾಜ್ಞೇಹ ಕರ್ತವ್ಯಂ ಯಚ್ಚ ಕೃತ್ವಾ ಸುಖೀ ಭವೇತ್ ॥೨॥

ಭೀಷ್ಮರು – ಸಂತೋಷ! ರಾಜನು ಇಲ್ಲಿ ಹೇಗೆ ನಡೆದುಕೊಳ್ಳಬೇಕು? ಏನು ಮಾಡಿದರೆ ಸುಖಿಯಾಗುತ್ತಾನೆ ಎಂದು ಕಾರ್ಯನಿಶ್ಚಯವನ್ನು ನಿನಗೆ ಹೇಳುವೆನು ಅದನ್ನು ಕೇಳು.

ನ ತ್ವೇವಂ ವರ್ತಿತವ್ಯಂ ಸ್ಮ ಯಥೇದಮನುಶುಶ್ರುಮಃ ।
ಉಷ್ಟ್ರಸ್ಯ ಸುಮಹದ್ ವೃತ್ತಂ ತನ್ನಿಬೋಧ ಯುಧಿಷ್ಠಿರ ॥೩॥

ನಾವು ಕೇಳಿದ ಒಂಟೆಯ ಕಥೆಯಂತೆ ನೀನು ನಡೆದುಕೊಳ್ಳಬಾರದು. ಎಲೈ ಯುಧಿಷ್ಠಿರನೇ! ಒಂಟೆಯ ಒಂದು ದೊಡ್ಡ ಕಥೆಯನ್ನು ಕೇಳು.

ಜಾತಿಸ್ಮರೋ ಮಹಾನುಷ್ಟ್ರಃ ಪ್ರಾಜಾಪತ್ಯಯುಗೋದ್ಭವಃ।
ತಪಃ ಸುಮಹದಾತಿಷ್ಠದರಣ್ಯೇ ಸಂಶಿತವ್ರತಃ ॥೪॥

ಕೃತಯುಗದಲ್ಲಿ ಪೂರ್ವಜನ್ಮದ ಸ್ಮರಣೆಯುಳ್ಳ ಒಂದು ದೊಡ್ಡ ಒಂಟೆಯು ವ್ರತವನ್ನು ಧರಿಸಿ, ಅರಣ್ಯದಲ್ಲಿ ದೊಡ್ಡ ತಪಸ್ಸನ್ನು ಮಾಡಿತು.

ತಪಸಸ್ತಸ್ಯ ಚಾಂತೇ ವೈ ಪ್ರೀತಿಮಾನಭವತ್ ಪ್ರಭುಃ।
ವರೇಣ ಚ್ಛಂದಯಾಮಾಸ ತತಶ್ಚೈನಂ ಪಿತಾಮಹಃ ॥೫॥

ತಪಸ್ಸಿನ ಅಂತ್ಯದಲ್ಲಿ ಪ್ರಸನ್ನರಾದ ಪ್ರಭುಗಳಾದ ಬ್ರಹ್ಮದೇವರು ಆ ಒಂಟೆಗೆ ವರವನ್ನು ಕೇಳುವಂತೆ ಹೇಳಿದರು.

ಉಷ್ಟ್ರಃ

ಭಗವಂಸ್ತ್ವತ್ಪ್ರಸಾದಾನ್ಮೇ ದೀರ್ಘಾ ಗ್ರೀವಾ ಭವೇದಿಯಮ್।
ಯೋಜನಾನಾಂ ಶತಂ ಸಾಗ್ರಂ ಯಾ ಗಚ್ಛೇಚ್ಚರಿತುಂ ವಿಭೋ ॥೬॥

ಒಂಟೆ– ಎಲೈ ಪೂಜ್ಯನೇ! ನಿನ್ನ ಅನುಗ್ರಹದಿಂದ ನನ್ನ ಈ ಕತ್ತು ದೀರ್ಘವಾಗಲಿ. ಎಲೈ ವಿಭುವೇ! ಭಕ್ಷಿಸುವುದಕ್ಕಾಗಿ ನನ್ನ ಈ ಕತ್ತು ನೂರು ಯೋಜನಗಳಿಗಿಂತ ಹೆಚ್ಚು ದೂರವೂ ಹೋಗುವಂತಾಗಲಿ.

ಭೀಷ್ಮಃ

ಏವಮಸ್ತ್ವಿತಿ ಚೋಕ್ತಃ ಸ ವರದೇನ ಮಹಾತ್ಮನಾ।
ಪ್ರತಿಲಭ್ಯ ವರಂ ಶ್ರೇಷ್ಠಂ ಯಯಾವುಷ್ಟ್ರಃ ಸ್ವಕಂ ವನಮ್ ॥೭॥

ಭೀಷ್ಮರು – ವರಪ್ರದರಾದ ಮಹಾತ್ಮರಾದ ಬ್ರಹ್ಮದೇವರು ಹಾಗೆಯೇ ಆಗಲಿ

ಎಂದು ಹೇಳಿದರು. ಶ್ರೇಷ್ಠವಾದ ವರವನ್ನು ಪಡೆದು ಒಂಟೆಯು ತನ್ನ ಕಾಡಿಗೆ ಹೊರಟು ಹೋಯಿತು.

ಸ ಚಕಾರ ತದಾऽऽಲಸ್ಯಂ ವರದಾನಾತ್ ಸ ದುರ್ಮತಿಃ।
ನ ಚೈಚ್ಛಚ್ಚರಿತುಂ ಗಂತುಂ ದುರಾತ್ಮಾ ಕಾಲಮೋಹಿತಃ ॥೮॥

ದುರ್ಮತಿಯಾದ ಆ ಒಂಟೆಯು ವರದಾನದ ಬಲದಿಂದ ಆಲಸ್ಯವನ್ನು ಮಾಡಿತು. ಕಾಲಮೋಹಿತವಾದ ದುಷ್ಟಮನಸ್ಸುಳ್ಳ ಆ ಒಂಟೆಯು ಆಹಾರವನ್ನು ಭಕ್ಷಿಸಲು ಹೊರಗೆ ಹೋಗಲು ಬಯಸಲಿಲ್ಲ.

ಸ ಕದಾಚಿತ್ ಪ್ರಸಾರ್ಯೈವಂ ತಾಂ ಗ್ರೀವಾಂ ಶತಯೋಜನಾಮ್।
ಚಚಾರ ಶ್ರಾಂತಹೃದಯೋ ವಾತಶ್ಚಾಗಾತ್ ತತೋ ಮಹಾನ್ ॥೯॥

ದೀರ್ಘಕಾಲದ ಉಪವಾಸದಿಂದ ಬಳಲಿದ ಆ ಒಂಟೆಯು ಒಮ್ಮೆ ತನ್ನ ಕತ್ತನ್ನು ನೂರು ಯೋಜನ ಉದ್ದ ಮಾಡಿ ಸಂಚರಿಸಿತು. ಆಗ ದೊಡ್ಡ ಬಿರುಗಾಳಿಯು ಉಂಟಾಯಿತು.

ಸ ಗುಹಾಯಾಂ ಶಿರೋಗ್ರೀವಂ ನಿಧಾಯ ಪಶುರಾತ್ಮನಃ।
ಆಸ್ಥಾಥ ವರ್ಷಮಭ್ಯಾಗಾತ್ ಸುಮಹತ್ ಪ್ಲಾವಯಜ್ಜಗತ್ ॥೧೦॥

ಆ ಪಶುವು ತನ್ನ ತಲೆಯನ್ನು ಮತ್ತು ಕತ್ತನ್ನು ಒಂದು ಗುಹೆಯೊಳಗೆ ಇಟ್ಟುಕೊಂಡಿತು. ಆಗ ಪ್ರಪಂಚವನ್ನೇ ಕೊಚ್ಚಿ ಹಾಕುವಂತಹ ದೊಡ್ಡ ಮಳೆಯು ಉಂಟಾಯಿತು.

ಅಥ ಶೀತಪರೀತಾಂಗೋ ಜಂಬುಕಃ ಕ್ಷುಚ್ಛ್ರಮಾನ್ವಿತಃ।
ಸದಾರಸ್ತಾಂ ಗುಹಾಮಾಶು ಪ್ರವಿವೇಶ ಜಲಾರ್ದಿತಃ ॥೧೧॥

ಆಗ ಹಸಿವಿನಿಂದ ಬಳಲಿ ಶೀತದಿಂದ ನಡುಗುತ್ತಿದ್ದ ಒಂದು ನರಿಯು ಜ್ವರದಿಂದ ಪೀಡಿತವಾಗಿ ತನ್ನ ಪತ್ನೀಸಹಿತವಾಗಿ ಶೀಘ್ರವಾಗಿ ಆ ಗುಹೆಯನ್ನು ಪ್ರವೇಶಿಸಿತು.

ಸ ದೃಷ್ಟ್ವಾ ಮಾಂಸಜೀವೀ ತು ಸುಭೃಶಂ ಕ್ಷುಚ್ಛ್ರಮಾನ್ವಿತಃ।
ಅಭಕ್ಷಯತ್ ತತೋ ಗ್ರೀವಾಮುಷ್ಟ್ರಸ್ಯ ಭರತರ್ಷಭ ॥೧೨॥

ಬಹಳವಾಗಿ ಹಸಿದು ಬಳಲಿದ ಮಾಂಸಜೀವಿಯಾದ ಆ ನರಿಯು ಎಲೈ ಭರತರ್ಷಭನೇ! ಆ ಒಂಟೆಯ ಕತ್ತನ್ನು ನೋಡಿ ಅದನ್ನು ತಿಂದುಹಾಕಿತು.

ಯದಾ ತ್ವಬುದ್ಧ್ಯತಾತ್ಮಾನಂ ಭಕ್ಷ್ಯಮಾಣಂ ಸ ವೈ ಪಶುಃ।
ತದಾ ಸಂಕೋಚನೇ ಯತ್ನಮಕರೋದ್ ಭೃಶದುಃಖಿತಃ ॥೧೩॥

ಒಂಟೆಗೆ ತಾನು ತಿನ್ನಲ್ಪಡುತ್ತಿದ್ದೇನೆ ಎಂದು ತಿಳಿದಾಗ ಅದು ಬಹಳ ದುಃಖದಿಂದ ಕೂಡಿ ತನ್ನ ಕತ್ತನ್ನು ಹಿಂದಕ್ಕೆ ಎಳೆದುಕೊಳ್ಳಲು ಪ್ರಯತ್ನಮಾಡಿತು.

ಯಾವದೂರ್ಧ್ವಮಧಶ್ಚೈವ ಗ್ರೀವಾಂ ಸಂಕ್ಷಪತೇ ಪಶುಃ।
ತಾವತ್ ತೇನ ಸದಾರೇಣ ಜಂಬುಕೇನ ಸ ಭಕ್ಷಿತಃ ॥೧೪॥

ಮೇಲ್ಭಾಗವಿದ್ದ ಗುಹೆಯಿಂದ ತನ್ನ ಕತ್ತನ್ನು ಅರ್ಧಭಾಗ ಎಳೆದುಕೊಳ್ಳುವಷ್ಟರಲ್ಲಿ ಪತ್ನೀಸಹಿತವಾದ ಆ ನರಿಯು ಅದನ್ನು ತಿಂದುಬಿಟ್ಟಿತು.

ಸ ಹತ್ವಾ ಭಕ್ಷಯಿತ್ವಾ ಚ ಉಷ್ಟ್ರಂ ತಂ ಜಂಬುಕಸ್ತದಾ।
ವಿಗತೇ ವಾತವರ್ಷೇ ಚ ನಿಶ್ಚಕ್ರಾಮ ಗುಹಾಮುಖಾತ್ ॥೧೫॥

ಆ ನರಿಯು ಆ ಒಂಟೆಯನ್ನು ಕೊಂದು ತಿಂದು ಮಳೆಗಾಳಿಯು ನಿಲ್ಲುತ್ತಿರಲು ಗುಹೆಯ ಮುಂಭಾಗದಿಂದ ಹೊರಟುಹೋಯಿತು.

ಏವಂ ದುರ್ಬುದ್ಧಿನಾ ಪ್ರಾಪ್ತಮುಷ್ಟ್ರೇಣ ನಿಧನಂ ತದಾ।
ಆಲಸ್ಯಕರಣಾತ್ ಪಶ್ಯ ಮಹದ್ ದೋಷಮುಪಾಗತಮ್ ॥೧೬॥

ಹೀಗೆ ದುರ್ಬುದ್ಧಿಯುಳ್ಳ ಒಂಟೆಯು ಆಗ ನಿಧನವನ್ನು ಹೊಂದಿತು. ಕತ್ತನ್ನು ಚಾಚುವುದರಲ್ಲಿ ಮತ್ತು ಹಿಂದೆ ತೆಗೆದುಕೊಳ್ಳುವುದರಲ್ಲಿ ಆಲಸ್ಯವನ್ನು ಮಾಡಿದ ಒಂಟೆಗೆ ಎಂತಹ ದೋಷವುಂಟಾಯಿತೆಂಬುದನ್ನು ನೋಡು.

ತ್ವಮಪ್ಯೇತಂ ವಿಧಿಂ ತ್ಯಕ್ತ್ವಾ ಯೋಗೇನ ನಿಯತೇಂದ್ರಿಯಃ।
ವರ್ತಸ್ವ ಬುದ್ಧಿಮೂಲಂ ಹಿ ವಿಜಯಂ ಮನುರಬ್ರವೀತ್ ॥೧೭॥

ನೀನೂ ಸಹ ಒಂಟೆಯ ಈ ನೀತಿಯನ್ನು ತ್ಯಜಿಸಿ, ಯೋಗಾರೂಢನಾಗಿ, ಇಂದ್ರಿಯಜಯವನ್ನು ಹೊಂದಿ ಇರುವವನಾಗು. ವಿಜಯಕ್ಕೆ ಬುದ್ಧಿಯೇ ಮೂಲವೆಂದು ಮನುವು ಹೇಳಿದ್ದಾನೆ.

ಬುದ್ಧಿಶ್ರೇಷ್ಠಾನಿ ಕರ್ಮಾಣಿ ಬಾಹುಮಧ್ಯಾನಿ ಭಾರತ।
ತಾನಿ ಜಂಘಾಜಘನ್ಯಾನಿ ಭಾರಪ್ರತ್ಯವರಾಣಿ ಚ ॥೧೮॥

ಎಲೈ ಭಾರತನೇ! ಬುದ್ಧಿಯ ಬಲದಿಂದ ಮಾಡುವ ಕರ್ಮಗಳು ಶ್ರೇಷ್ಠವಾದವು. ಬಾಹುಬಲದಿಂದ ಮಾಡುವ ಕರ್ಮಗಳು ಮಧ್ಯಮವಾದವುಗಳು. ಜಘಾಬಲದಿಂದ ಮಾಡುವ ಸೇವಾವೃತ್ತಿರೂಪವಾದ ಕರ್ಮಗಳು ನೀಚವಾದವುಗಳು. ಭಾರವನ್ನು ಹೊರುವಂತಹ ಕರ್ಮಗಳು ಅತಿನೀಚವಾದವುಗಳು (ಲಕ್ಷಾಲಂಕಾರ).

ರಾಜ್ಯಂ ತಿಷ್ಠತಿ ದಕ್ಷಸ್ಯ ಸಂಗೃಹೀತೇಂದ್ರಿಯಸ್ಯ ಚ।
ಗುಪ್ತಮಂತ್ರಶ್ರುತವತಃ ಸುಸಹಾಯಸ್ಯ ಚಾನಘ ॥೧೯॥

ಎಲೈ ಅನಘನೇ! ದಕ್ಷನೂ ಇಂದ್ರಿಯಜಯವುಳ್ಳವನೂ ಮಂತ್ರರಕ್ಷಣೆಯನ್ನು ಮಾಡಿಕೊಳ್ಳುವವನೂ ವಿದ್ಯಾವಂತನೂ ಒಳ್ಳೆಯ ಸಹಾಯವುಳ್ಳವನೂ ಆದ ರಾಜನಲ್ಲಿ ರಾಜ್ಯವು ನಿಲ್ಲುತ್ತದೆ.

ಪರೀಕ್ಷ್ಯಕಾರಿಣೋಽರ್ಥಾಶ್ಚ ತಿಷ್ಠಂತೀಹ ಯುಧಿಷ್ಠಿರ।
ಸಹಾಯಯುಕ್ತೇನ ಮಹೀ ಕೃತ್ಸ್ನಾ ಶಕ್ಯಾ ಪ್ರಶಾಸಿತುಮ್ ॥೨೦॥

ಎಲೈ ಯುಧಿಷ್ಠಿರನೇ! ಪರೀಕ್ಷಿಸಿ ಕಾರ್ಯವನ್ನು ಮಾಡುವವನಿಗೆ ಇಲ್ಲಿ ಅರ್ಥಸಿದ್ಧಿಯಾಗುತ್ತದೆ. ಸಹಾಯಯುಕ್ತನಾದ ರಾಜನು ಸಮಗ್ರವಾದ ಭೂಮಿಯನ್ನು ಆಳಲು ಸಮರ್ಥನಾಗುತ್ತಾನೆ.

ಇದಂ ಹಿ ಸದ್ಭಿಃ ಕಥಿತಂ ವಿಧಿಜ್ಞೈಃ ಪುರಾ ಮಹೇಂದ್ರಪ್ರತಿಮಪ್ರಭಾವ।
ಮಯಾಪಿ ಚೋಕ್ತಂ ತವ ಶಾಸ್ತ್ರದೃಷ್ಟ್ಯಾ ತ್ವಮತ್ರ ಯುಕ್ತಃ ಪ್ರಚರಸ್ವ ರಾಜನ್ ॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರ್ದಶಾಧಿಕಶತತಮೋऽಧ್ಯಾಯಃ ॥೧೧೪॥

ಎಲೈ ಮಹೇಂದ್ರನಿಗೆ ಸದೃಶವಾದ ಸಾಮರ್ಥ್ಯವುಳ್ಳವನೇ! ಈ ವಿಷಯವನ್ನು ಹಿಂದೆ ರಾಜನೀತಿಯನ್ನು ತಿಳಿದ ಸಜ್ಜನರು ಹೇಳಿದ್ದಾರೆ. ಶಾಸ್ತ್ರದೃಷ್ಟಿಯಿಂದ ನಾನು ನಿನಗೆ ಹೇಳಿದ್ದೇನೆ. ಎಲೈ ರಾಜನೇ! ಇದರಲ್ಲಿ ಯುಕ್ತವಾದುದನ್ನು ಮಾಡುವವನಾಗು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೪ನೆಯ ಅಧ್ಯಾಯವು ಮುಗಿಯಿತು

—0—

೧೧೫. ನೂರಹದಿನೈದನೆಯ ಅಧ್ಯಾಯ

ಗಂಗಾಸಾಗರಸಂವಾದಾನುವಾದದಿಂದ ಬಲಿಷ್ಠನಾದ ಶತ್ರುವಿನ ವಿಷಯದಲ್ಲಿ ನಡೆದುಕೊಳ್ಳಬೇಕಾದ ರೀತಿಯ ಕಥನ

ಯುಧಿಷ್ಠಿರಃ

ರಾಜಾ ರಾಜ್ಯಮನುಪ್ರಾಪ್ಯ ದುರ್ಬಲೋ ಭರತರ್ಷಭ।
ಅಮಿತ್ರಸ್ಯಾತಿವೃದ್ಧಸ್ಯ ಕಥಂ ತಿಷ್ಠೇದಸಾಧನಃ ॥೧॥

ಯುಧಿಷ್ಠಿರ – ಎಲೈ ಭರತರ್ಷಭನೇ! ದುರ್ಬಲನಾದ ರಾಜನು ರಾಜ್ಯವನ್ನು ಪಡೆದು ಅತಿಬಲಿಷ್ಠನಾದ ಶತ್ರುವಿನ ಮುಂದೆ ಸಾಧನರಹಿತನಾಗಿ ಹೇಗೆ ನಿಲ್ಲುತ್ತಾನೆ? (ನಡೆದುಕೊಳ್ಳುತ್ತಾನೆ?)

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಸರಿತಾಂ ಚೈವ ಸಂವಾದಂ ಸಾಗರಸ್ಯ ಚ ಭಾರತ ॥೨॥

ಭೀಷ್ಮರು – ಎಲೈ ಭಾರತನೇ! ಈ ವಿಷಯದಲ್ಲೂ ಸಹ ಸಾಗರಕ್ಕೂ ಮತ್ತು ನದಿಗಳಿಗೂ ನಡೆದ ಸಂವಾದರೂಪವಾದ ಈ ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ.

ಸುರಾರಿನಿಲಯಃ ಶಶ್ವತ್ ಸಾಗರಃ ಸರಿತಾಂಪತಿಃ।
ಪಪ್ರಚ್ಛ ಸರಿತಃ ಸರ್ವಾಃ ಸಂಶಯಂ ಜಾತಮಾತ್ಮನಃ ॥೩॥

ಯಾವಾಗಲೂ ನಾರಾಯಣನಿಗೆ ಆಶ್ರಯನೂ ಸರಿತ್ಪತಿಯೂ ಆದ ಸಾಗರನು ತನಗೆ ಉಂಟಾದ ಸಂಶಯವನ್ನು ಎಲ್ಲಾ ನದಿಗಳ ಮುಂದೆ ಕೇಳಿದನು.

ಸಮೂಲಶಾಖಾನ್ ಪಶ್ಯಾಮಿ ನಿಹತಾನ್ ಕ್ವಾಥಿನೋ ದ್ರುಮಾನ್।
ಯುಷ್ಮಾಭಿರಿಹ ಪೂರ್ಣಾಭಿರನ್ಯಾಂಸ್ತತ್ರ ನ ವೇತಸಮ್ ॥೪॥

ಪೂರ್ಣರಾದ ನೀವು ಮೂಲ ಮತ್ತು ಶಾಖೆಗಳಿಂದ ಸಹಿತವಾದ ಕ್ಷೀರವನ್ನು ಸ್ರವಿಸುವ ವೃಕ್ಷಗಳನ್ನೂ ಬೇರೆ ವೃಕ್ಷಗಳನ್ನೂ ಸೆಳೆದುಕೊಂಡು ಹೋಗುತ್ತೀರಿ. ಆದರೆ ಬೆತ್ತದ ಪೊದೆಯನ್ನು ಸೆಳೆದುಕೊಂಡು ಹೋಗುವುದಿಲ್ಲ.

ಅಕಾಯಶ್ಚಾಲ್ಪಸಾರಶ್ಚ ವೇತಸಃ ಕೂಲಜಶ್ಚ ವಃ।
ಅವಜ್ಞಾಯ ನಶಕ್ಯೋ ವಾ ಕಿಂಚಿದ್ ವಾ ತೇನ ವಃ ಕೃತಮ್ ॥೫॥

ಬೆತ್ತವು ಅಲ್ಪಶರೀರವನ್ನು ಮತ್ತು ಅಲ್ಪಬಲವನ್ನೂ ಹೊಂದಿ, ನಿಮ್ಮ ತೀರದಲ್ಲಿಯೇ ಇದೆ. ನಿಮ್ಮನ್ನು ತಿರಸ್ಕರಿಸಿ ಅದು ನಿಲ್ಲಲು ಸಾಧ್ಯವಿಲ್ಲ. ಅಥವಾ ಅದು ನಿಮಗೆ ಏನಾದರೂ ಉಪಕಾರವನ್ನು ಮಾಡಿದೆಯೇ?

ತದಹಂ ಶ್ರೋತುಮಿಚ್ಛಾಮಿ ಸರ್ವಾಸಾಮೇವ ವೋ ಮತಮ್।
ಯಥಾ ಕೂಲಾನಿ ಚೇಮಾನಿ ಭಿತ್ತ್ವಾ ನಾನೀಯತೇ ವಶಮ್ ॥೬॥

ಹೇಗೆ ತೀರಗಳನ್ನು ಭೇದಿಸಿ ಬೆತ್ತವನ್ನು ವಶಪಡಿಸಿಕೊಳ್ಳುವುದಿಲ್ಲ ಎಂಬ ವಿಷಯದಲ್ಲಿ ನಿಮ್ಮೆಲ್ಲರ ಅಭಿಪ್ರಾಯವನ್ನು ಕೇಳಲು ಬಯಸುತ್ತೇನೆ. (ಎಂದು ಹೇಳಿದನು).

ತತಃ ಪ್ರಾಹ ನದೀ ಗಂಗಾ ವಾಕ್ಯಮುತ್ತರಮರ್ಥವತ್ ।
ಹೇತುಮದ್ ಗ್ರಾಹಕಂ ಚೈವ ಸಾಗರಂ ಸರಿತಾಂಪತಿಮ್ ॥೭॥

ಆಗ ಗಂಗಾನದಿಯು ಸರಿತ್ಪತಿಯಾದ ಸಾಗರನನ್ನು ಕುರಿತು ಅರ್ಥಪೂರ್ಣವಾದ ಯುಕ್ತಿಯುಕ್ತವಾದ ಕೇಳುವವರಲ್ಲಿ ಗುಣಗಳನ್ನು ಉಂಟುಮಾಡುವ ಉತ್ತರವನ್ನು ಹೇಳಿದಳು.

ತಿಷ್ಠಂತ್ಯೇತೇ ಯಥಾಸ್ಥಾನಂ ನಗಾ ಹ್ಯೇಕನಿಕೇತನಾಃ ।
ತತಸ್ತ್ಯಜಂತಿ ತತ್ ಸ್ಥಾನಂ ಪ್ರಾತಿಲೋಮ್ಯಾದಚೇತಸಃ ॥೮॥

ವೇತಸೋ ವೇಗಮಾಯಾಂತಂ ದೃಷ್ಟ್ವಾ ನಮತಿ ನೇತರಃ ।
ಸ ಚ ವೇಗೇऽಭ್ಯತಿಕ್ರಾಂತೇ ಸ್ಥಾನಮಾಸಾದ್ಯ ತಿಷ್ಠತಿ ॥೯॥

ನಮ್ಮ ತೀರದಲ್ಲಿರುವ ಈ ದೊಡ್ಡ ವೃಕ್ಷಗಳು ಒಂದೇ ಸ್ಥಾನದಲ್ಲಿ ನಿಲ್ಲುತ್ತವೆ. ಆದ್ದರಿಂದ ಬುದ್ಧಿಯಿಲ್ಲದ ಅವು ಆ ಸ್ಥಾನವನ್ನು ತ್ಯಜಿಸುತ್ತವೆ. ಬೆತ್ತವಾದರೋ ಇದಕ್ಕೆ ವಿರುದ್ಧವಾಗಿ ನದಿಯ ವೇಗವು ಬರುವುದನ್ನು ಗಮನಿಸಿ ಬಾಗುತ್ತದೆ. ಉಳಿದ ವೃಕ್ಷಗಳು ಬಾಗುವುದಿಲ್ಲ. ವೇಗವು ಹೊರಟು ಹೋದ ಮೇಲೆ ಬೆತ್ತವು ತನ್ನ ಮೊದಲಸ್ಥಾನದಲ್ಲಿಯೇ ನಿಲ್ಲುತ್ತದೆ.

ಕಾಲಜ್ಞಃ ಸಮಯಜ್ಞಶ್ಚ ಸದಾ ವಶ್ಯಶ್ಚ ಯೋ ದ್ರುಮಃ ।
ಅನುಲೋಮಸ್ತಥಾऽಸ್ತಬ್ಧಸ್ತೇನ ನಾತ್ಯೇತಿ ವೇತಸಃ ॥೧೦॥

ಬಾಗುವ ಕಾಲವನ್ನು ಪುನಃ ಏಳುವ ಕಾಲವನ್ನು ತಿಳಿದು ಸದಾ ಪ್ರವಾಹಕ್ಕೆ ವಶವಾದ ಬೆತ್ತವು ಅಹಂಕಾರವಿಲ್ಲದೇ ಪ್ರವಾಹಕ್ಕೆ ಅನುಕೂಲವಾಗಿರುತ್ತದೆ. ಆದ್ದರಿಂದ ಅದು ವಿನಾಶವನ್ನು ಹೊಂದುವುದಿಲ್ಲ.

ಮಾರುತೋದಕವೇಗೇನ ಯೇ ನಮಂತ್ಯುನ್ನಮಂತಿ ಚ ।
ಔಷಧ್ಯಃ ಪಾದಪಾ ಗುಲ್ಮಾ ನ ತೇ ಯಾಂತಿ ಪರಾಭವಮ್ ॥೧೧॥

ಗಾಳಿ ಮತ್ತು ಉದಕಗಳ ವೇಗಗಳಿಗೆ ಸಿಲುಕಿ ಯಾವ ಓಷಧಿಗಳು ವೃಕ್ಷಗಳು ಪೊದೆಗಳು ಬಗ್ಗಿ ಅನಂತರ ಏಳುತ್ತವೆಯೋ ಅವು ಪರಾಭವವನ್ನು ಹೊಂದುವುದಿಲ್ಲ.

ಯೋ ಹಿ ಶತ್ರೋರ್ವಿವೃದ್ಧಸ್ಯ ಪ್ರಭೋರ್ವಧವಿನಾಶನೇ।
ಪೂರ್ವಂ ನ ಸಹತೇ ವೇಗಂ ಕ್ಷಿಪ್ರಮೇವ ಸ ನಶ್ಯತಿ ॥೧೨॥

ಯಾವನು ಅಭಿವೃದ್ಧನಾದ ಪ್ರಭುವಾದ ಶತ್ರುವು ಉಂಟು ಮಾಡಿದ ವಧೆ ಮತ್ತು ವಿನಾಶಗಳ ವೇಗವನ್ನು ಮೊದಲು ಸಹಿಸುವುದಿಲ್ಲವೋ ಅವನು ಶೀಘ್ರವಾಗಿ ನಾಶವನ್ನು ಹೊಂದುತ್ತಾನೆ.

ಸಾರಾಸಾರಂ ಬಲಂ ವೀರ್ಯಮಾತ್ಮನೋ ದ್ವಿಷತಶ್ಚ ಯಃ।
ಜಾನನ್ ವಿಚರತಿ ಪ್ರಾಜ್ಞೋ ನ ಸ ಯಾತಿ ಪರಾಭವಮ್ ॥೧೩॥

ತನ್ನ ಮತ್ತು ಶತ್ರುಗಳ ಬಲಾಬಲಗಳನ್ನು ಸಾರಾಸಾರವನ್ನು ತಿಳಿದು ವರ್ತಿಸುವ ಪ್ರಾಜ್ಞನಾದವನು ಪರಾಭವವನ್ನು ಹೊಂದುವುದಿಲ್ಲ.

ಏವಮೇವ ಯದಾ ವಿದ್ವಾನ್ ಮನ್ಯೇತಾತಿಬಲಂ ರಿಪುಮ್।
ಸಂಶ್ರಯೇದ್ ವೈತಸೀಂ ವೃತ್ತಿಮೇವಂ ಪ್ರಜ್ಞಾನಲಕ್ಷಣಮ್ ॥೧೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚದಶಾಧಿಕಶತತಮೋऽಧ್ಯಾಯಃ ॥೧೧೫॥

ಇದೇ ರೀತಿಯಲ್ಲಿ ವಿವೇಕಿಯಾದವನು ಶತ್ರುವು ತನಗಿಂತ ಬಹಳಬಲಿಷ್ಠನಾಗಿದ್ದಾನೆಂದು ತಿಳಿದಾಗ ಬೆತ್ತದ ನಡತೆಯನ್ನು ಆಶ್ರಯಿಸಬೇಕು. ಇದು ವಿವೇಕದ ಲಕ್ಷಣ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೫ನೆಯ ಅಧ್ಯಾಯವು ಮುಗಿಯಿತು

—0—

೧೧೬. ನೂರಹದಿನಾರನೆಯ ಅಧ್ಯಾಯ

ಸಭೆಯಲ್ಲಿ ದುಷ್ಟಪುರುಷರು ನಿಂದಿಸಿದರೆ ಸಹನೆಯ ಕಥನ

ಯುಧಿಷ್ಠಿರಃ

ವಿದ್ವಾನ್ ಮೂಢಪ್ರಗಲ್ಭೇನ ಮೃದುಸ್ತೀಕ್ಷ್ಣೇನ ಭಾರತ।
ಆಕ್ರುಶ್ಯಮಾನಃ ಸದಸಿ ಕಥಂ ಕುರ್ಯಾದರಿಂದಮ ॥೧॥

ಯುಧಿಷ್ಠಿರ – ಎಲೈ ಭಾರತನೇ! ಅರಿಂದಮನೇ! ಮೃದುವೂ ವಿದ್ವಾಂಸನೂ ಆದ ಮನುಷ್ಯನು ಸಭೆಯಲ್ಲಿ ಮೂಢನೂ ವಾಚಾಲನೂ ಮತ್ತು ಉಗ್ರನೂ ಆದ ದುಷ್ಟನಿಂದ ನಿಂದಿಸಲ್ಪಡುವಾಗ ಏನು ಮಾಡಬೇಕು?

ಭೀಷ್ಮಃ

ಶ್ರೂಯತಾಂ ಪೃಥಿವೀಪಾಲ ಯದ್ಭೈಷೋಽಥೋರ್ಽನುಗೀಯತೇ।
ಸದಾ ಸುಚೇತಾಃ ಸಹತೇ ನರಸ್ಯೇಹಾಲ್ಪಚೇತಸಃ ॥೨॥

ಎಲೈ ಪೃಥಿವೀಪಾಲನೇ! ಒಳ್ಳೆಯ ಮನಸ್ಸುಳ್ಳವನು ಅಲ್ಪಬುದ್ಧಿಯ ನರನು ಅವನನ್ನು ನಿಂದಿಸುವಾಗ ಸಹನೆ ಮಾಡಬೇಕೆಂಬ (ಈ) ವಿಷಯವು ಹೇಗೆ ಹೇಳಲ್ಪಡುತ್ತದೆ ಎಂಬುದನ್ನು ಕೇಳು.

ಅರುಷ್ಯನ್ ಕ್ರುಶ್ಯಮಾನಸ್ಯ ಸುಕೃತಂ ನಾಮ ವಿಂದತಿ।
ದುಷ್ಕೃತಂ ಚಾತ್ಮನೋಽಮರ್ಷೀ ರುಷ್ಯತ್ಯೇವಾಪಮಾರ್ಷ್ಟಿ ವೈ ॥೩॥

ದುಷ್ಟನು ನಿಂದಿಸುತ್ತಿದ್ದರೆ ಕೋಪಗೊಳ್ಳದ ಸತ್ಪುರುಷನು ಪುಣ್ಯವನ್ನು ಹೊಂದುತ್ತಾನೆ. ಮತ್ತು ತನ್ನ ಸಹನೆಯ ಗುಣದಿಂದ ತನ್ನ ಪಾಪವನ್ನೆಲ್ಲ ನಿಂದಿಸುವವನಿಗೆ ಕೊಟ್ಟು ತೊಳೆದು ಬಿಡುತ್ತಾನೆ.

ಟಿಟ್ಟಿಭಂ ತಮುಪೇಕ್ಷೇತ ವಾಶಮಾನಮಿವಾತುರಮ್।
ಲೋಕವಿದ್ವೇಷಮಾಪನ್ನೋ ನಿಷ್ಫಲಂ ಪ್ರತಿಪದ್ಯತೇ ॥೪॥

ಕಿರುಚುವ ಹಕ್ಕಿಯಂತೆ, ನರಳುವ ರೋಗಿಯಂತೆ ಇರುವ ಅವನನ್ನು ಉಪೇಕ್ಷಿಸಬೇಕು. ಅವನು ಲೋಕವಿದ್ವೇಷಕ್ಕೆ ಪಾತ್ರನಾಗುತ್ತಾನೆ. ಅವನ ನಿಂದೆಯ ಮಾತುಗಳಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲ.

ಇತಿ ಸಂಶ್ಲಾಘತೇ ನಿತ್ಯಂ ತೇನ ಪಾಪೇನ ಕರ್ಮಣಾ।
ಇದಮುಕ್ತೋ ಮಯಾ ಕಶ್ಚಿತ್ ಸಮ್ಮತೋ ಜನಸಂಸದಿ।
ಸ ತತ್ರ ವ್ರೀಡಿತಃ ಶುಷ್ಕೋ ಮೃತಕಲ್ಪೋಽವತಿಷ್ಠತಿ ॥೫॥

ದುಷ್ಟನಾದವನು "ನಾನು ದೊಡ್ಡ ಸಭೆಯಲ್ಲಿ ಪ್ರಾಜ್ಞಸಮ್ಮತನಾದ ಒಬ್ಬನನ್ನು ಈ ರೀತಿಯಲ್ಲಿ ನಿಂದಿಸಿದೆ. ಅವನು ನಾಚಿಕೆಯಿಂದ ಮುಖವನ್ನು ಒಣಗಿಸಿಕೊಂಡು ಸತ್ತವನಂತೆ ಸುಮ್ಮನಿದ್ದನು" ಎಂದು ತನ್ನ ಪಾಪಕರ್ಮವನ್ನು ತಾನೇ ಹೊಗಳಿಕೊಳ್ಳುತ್ತಾನೆ.

ಶ್ಲಾಘನ್ನಶ್ಲಾಘನೀಯೇನ ಕರ್ಮಣಾ ನಿರಪತ್ರಪಃ।
ಉಪೇಕ್ಷಿತವ್ಯೋ ದಾಂತೇನ ತಾದೃಶಃ ಪುರುಷಾಧಮಃ ॥೬॥

ಶ್ಲಾಘನೀಯವಲ್ಲದ ಕರ್ಮದಿಂದ ತನ್ನನ್ನು ಹೊಗಳಿಕೊಳ್ಳುವ ನಾಚಿಕೆಗೆಟ್ಟ ಅಂತಹ ಪುರುಷಾಧಮನನ್ನು ದಾಂತನಾದವನು ಉಪೇಕ್ಷೆ ಮಾಡಬೇಕು.

ಯದ್ಯದ್ ಬ್ರೂಯಾದಲ್ಪಮತಿಸ್ತತ್ ತದಸ್ಯ ಸಹೇತ್ ಸದಾ।
ಪ್ರಾಕೃತೋ ಹಿ ಪ್ರಶಂಸನ್ ವಾ ನಿಂದನ್ ವಾ ಕಿಂ ಕರಿಷ್ಯತಿ।
ವನೇ ಕಾಕ ಇವಾಬುದ್ಧಿರ್ವಾಶಮಾನೋ ನಿರರ್ಥಕಮ್ ॥೭॥

ಅಲ್ಪಮತಿಯು ಏನೇನನ್ನು ಹೇಳುತ್ತಾನೋ ಅದೆಲ್ಲವನ್ನೂ ಸದಾ ಸಹಿಸಬೇಕು. ಅಂತಹ ಬುದ್ಧಿಶೂನ್ಯನು ಪ್ರಶಂಸೆಯನ್ನು ಅಥವಾ ನಿಂದೆಯನ್ನು ಮಾಡಿ ಏನು ಮಾಡುವನು? ಕಾಡಿನಲ್ಲಿರುವ ಕಾಗೆಯಂತೆ ವ್ಯರ್ಥವಾಗಿ ಕಿರುಚುತ್ತಾ ಇರುತ್ತಾನೆ.

ಯದಿ ವಾಗ್ಭಿಃ ಪ್ರಯೋಗಃ ಸ್ಯಾತ್ ಪ್ರಯೋಗೇ ಪಾಪಕರ್ಮಣಃ।
ವಾಗೇವಾರ್ಥೋ ಭವೇತ್ ತಸ್ಯ ನ ಹ್ಯೇವಾರ್ಥೋ ಜಿಘಾಂಸತಃ ॥೮॥

ಪಾಪಕರ್ಮವುಳ್ಳವನ ಜೊತೆಯಲ್ಲಿ ಸಮಾಗಮವಾದಾಗ ಅವನು ತನ್ನ ವಚನಗಳಿಂದ ನಿಂದಿಸಲು ಪ್ರಾರಂಭಿಸಿದರೆ ಅವನು ಮಾತನಾಡುವುದೇ ಅವನಿಗೆ ಪ್ರಯೋಜನ. ಸಜ್ಜನನನ್ನು ಹಿಂಸಿಸಲು ಬಯಸುವ ಅವನಿಗೆ ಬೇರೆ ಯಾವ ಪ್ರಯೋಜನವೂ ಇಲ್ಲ.

ನಿಷೇಕಂ ವಿಪರೀತಂ ಸ ವ್ಯಾಚಷ್ಟೇ ವೃತ್ತಚೇಷ್ಟಯಾ।
ಮಯೂರ ಇವ ಕೋಪೇನ ನೃತ್ತಂ ಸಂದರ್ಶಯನ್ನಿವ ॥೯॥

ದುರ್ಜನನು ತನ್ನಲ್ಲಿ ಒಳ್ಳೆಯ ನಡತೆ ಇದೆಯೆಂದು ತೋರಿಸಿಕೊಳ್ಳುತ್ತಾ, ಸಜ್ಜನನು ಆಡಿದ ಅಮೃತದಂತಹ ಪ್ರಿಯವಾದ ಮಾತುಗಳನ್ನು ವಿಪರೀತವಾಗಿ ವ್ಯಾಖ್ಯಾನ ಮಾಡುತ್ತಾನೆ. ಕೋಪದಿಂದ ವಿಪರೀತವಾಗಿ ವ್ಯಾಖ್ಯಾನಮಾಡುತ್ತಾನೆ.

ಕೋಪೇನ ಎಂಬ ಪದಕ್ಕೆ ಕೌಪೀನವೆಂಬ ಪಾಠಾಂತರವಿದೆ. ನೃತ್ಯವನ್ನು ಮಾಡುವ ನವಿಲು ತಾನು ಚೆನ್ನಾಗಿದ್ದೇನೆ ಎಂದು ಭಾವಿಸಿದರೂ ತೋರಿಸಬಾರದ ತನ್ನ ಅಂಗವನ್ನು ಹೇಗೆ ತೋರಿಸುತ್ತದೆಯೋ ಅದರಂತೆ ದುರ್ಜನನು ತಾನು ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದೇನೆಂದು ತೋರಿಸಿಕೊಂಡರೂ ಅವನ ದುರ್ಗುಣಗಳು ಎಲ್ಲರಿಗೂ ತಿಳಿಯುತ್ತವೆ.

ಯಸ್ಯಾವಾಚ್ಯಂ ನ ಲೋಕೇಽಸ್ತಿ ನಾಕಾರ್ಯಂ ವಾಪಿ ಕಿಂಚನ।
ವಾಚಂ ತೇನ ನ ಸಂದಧ್ಯಾಚ್ಛುಚಿಃ ಸಂಕ್ಲಿಷ್ಟಕರ್ಮಣಾ ॥೧೦॥

ಯಾವನಿಗೆ ಲೋಕದಲ್ಲಿ ಮಾತನಾಡಬಾರದ ಒಂದು ಶಬ್ದವೂಇಲ್ಲವೋ, ಮಾಡಲಾರದ ಒಂದು ಕಾರ್ಯವೂ ಇಲ್ಲವೋ ಅಂತಹ ದುಷ್ಟಕರ್ಮವನ್ನು ಮಾಡುವವನ ಜೊತೆಯಲ್ಲಿ ಶುಚಿಯಾದವನು ಮಾತನಾಡಬಾರದು.

ಪ್ರತ್ಯಕ್ಷಂ ಗುಣವಾದೀ ಯಃ ಪರೋಕ್ಷಂ ತು ವಿನಿಂದಕಃ।
ಸ ಮಾನವಃ ಶ್ವವಲ್ಲೋಕೇ ನಷ್ಟಲೋಕಪರಾಯಣಃ ॥೧೧॥

ಯಾವ ಮನುಷ್ಯನು ಎದುರಿಗೆ ಗುಣಗಳನ್ನು ಹೇಳಿ ಹೊಗಳಿ ಹಿಂದೆ ನಿಂದಿಸು-

ತ್ತಾನೆಯೋ ಅವನು ನಾಯಿಯಂತೆ ಲೋಕವನ್ನೂ ಆಶ್ರಯವನ್ನೂ ಕಳೆದುಕೊಂಡವನು.

ತಾದೃಗ್ ಜನಶತಸ್ಯಾಪಿ ಯದ್ ದದಾತಿ ಜುಹೋತಿ ಚ।
ಪರೋಕ್ಷೇಣಾಪವಾದೇನ ತನ್ನಾಶಯತಿ ಸ ಕ್ಷಣಾತ್ ॥೧೨॥

ಅಂತಹ ದುಷ್ಟನು ನೂರು ಜನರಿಗೆ ದಾನವನ್ನು ಮಾಡಿ ಹೋಮವನ್ನು ಮಾಡಿದರೂ ಅವನು ಪರೋಕ್ಷವಾಗಿ ಮಾಡಿದ ಅಪವಾದಗಳಿಂದ ಅದೆಲ್ಲವನ್ನೂ ಒಂದೇ ಕ್ಷಣದಲ್ಲಿ ನಾಶಪಡಿಸುತ್ತಾನೆ.

ತಸ್ಮಾತ್ ಪ್ರಾಜ್ಞೋ ನರಃ ಸದ್ಯಸ್ತಾದೃಶಂ ಪಾಪಚೇತಸಮ್।
ವರ್ಜಯೇತ್ ಸಾಧುಭಿರ್ವರ್ಜ್ಯಂ ಸಾರಮೇಯಾಮಿಷಂ ಯಥಾ ॥೧೩॥

ಆದ್ದರಿಂದ ಪ್ರಾಜ್ಞನಾದವನು ಸಜ್ಜನರಿಂದ ವರ್ಜಿಸಬೇಕಾದ ಅಂತಹ ಪಾಪಮನಸ್ಸುಳ್ಳವನನ್ನು ನಾಯಿಯ ಮಾಂಸದಂತೆ ವರ್ಜಿಸಬೇಕು.

ಪರಿವಾದಂ ಬ್ರುವಾಣೋ ಹಿ ದುರಾತ್ಮಾ ವೈ ಮಹಾತ್ಮನೇ।
ಪ್ರಕಾಶಯತಿ ದೋಷಾನ್ ಸ್ವಾನ್ ಸರ್ಪಃ ಫಣಮಿವೋಚ್ಛ್ರಿತಮ್ ॥೧೪॥

ಮಹಾತ್ಮನ ಕುರಿತು ನಿಂದೆಯ ಮಾತುಗಳನ್ನಾಡುವ ದುರಾತ್ಮನು ಸರ್ಪವು ತನ್ನ ಹೆಡೆಯನ್ನು ಬಿಚ್ಚಿ ತೋರಿಸಿದಂತೆ ತನ್ನ ದೋಷಗಳನ್ನೇ ತೋರಿಸಿಕೊಳ್ಳುತ್ತಾನೆ.

ತಂ ಸ್ವಕರ್ಮಾಣಿ ಕುರ್ವಾಣಂ ಪ್ರತಿಕರ್ತುಂ ಯ ಇಚ್ಛತಿ।
ಭಸ್ಮಕೂಟ ಇವಾಬುದ್ಧಿಃ ಖರೋ ರಜಸಿ ಮಜ್ಜತಿ ॥೧೫॥

ತನ್ನ ಕರ್ಮದಲ್ಲಿ ನಿರತನಾದ ಸಜ್ಜನನಿಗೆ ಅಪಕಾರವನ್ನು ಮಾಡಲು ಯಾವನು ಇಚ್ಛಿಸುತ್ತಾನೆಯೋ ಅಂತಹ ದುರ್ಬುದ್ಧಿಯುಳ್ಳ ಮನುಷ್ಯನು ಬೂದಿಯ ರಾಶಿಯಲ್ಲಿ ಹೊರಳುವ ಕತ್ತೆಯಂತೆ ಇರುತ್ತಾನೆ.

ಮನುಷ್ಯಶಾಲಾವೃಕಮಪ್ರಶಾಂತಂ
ಜನಾಪವಾದೇ ಸತತಂ ನಿವಿಷ್ಟಮ್।

ಮಾತಂಗಮುನ್ಮತ್ತಮಿವೋನ್ನದಂತಂ
ತ್ಯಜೇತ ತಂ ಶ್ವಾನಮಿವಾತಿರೌದ್ರಮ್ ॥೧೬॥

ಶಾಂತವಾದ ಮನಸ್ಸನ್ನು ಹೊಂದದಿರುವ ಸತತವಾಗಿ ಜನಗಳನ್ನು ನಿಂದಿಸುವುದರಲ್ಲಿ ನಿರತನಾದ ಮದಿಸಿದ ಆನೆಯಂತೆ ಗರ್ಜಿಸುವಅಂತಹ ಮನುಷ್ಯ ತೋಳನನ್ನು ಭಯಂಕರವಾದ ನಾಯಿಯನ್ನು ತ್ಯಜಿಸುವಂತೆ ತ್ಯಜಿಸಬೇಕು.

ಅಧೀರಜುಷ್ಟೇ ಪಥಿ ವರ್ತಮಾನಂ
ದಮಾದಪೇತಂ ವಿನಯಾಚ್ಚ ಪಾಪಮ್ ।
ಅರಿವ್ರತಂ ನಿತ್ಯಮಭೂತಿಕಾಮಂ
ಧಿಗಸ್ತು ತಂ ಪಾಪಮತಿಂ ಮನುಷ್ಯಮ್ ॥೧೭॥

ಅಸಜ್ಜನರ ಮಾರ್ಗದಲ್ಲಿರುವ, ದಮ ಮತ್ತು ವಿನಯಗಳಿಂದ ರಹಿತನಾದ, ಶತ್ರುವ್ರತವನ್ನು ಧರಿಸಿದ, ನಿತ್ಯವೂ ಇನ್ನೊಬ್ಬನಿಗೆ ಅಶುಭವನ್ನು ಕೋರುವ, ಪಾಪಮತಿಯುಳ್ಳ ಅಂತಹ ಮನುಷ್ಯನಿಗೆ ಧಿಕ್ಕಾರವಿರಲಿ.

ಪ್ರತ್ಯುಚ್ಯಮಾನಸ್ತು ಹಿ ಭೂಯ ಏಭಿ-
ರ್ನಿಶಾಮ್ಯ ಮಾ ಭೂಸ್ತ್ವಮಥಾರ್ತರೂಪಃ ।
ಉಚ್ಚಸ್ಯ ನೀಚೇನ ಹಿ ಸಂಪ್ರಯೋಗಂ
ವಿಗರ್ಹಯಂತಿ ಸ್ಥಿರಬುದ್ಧಯೋ ಯೇ ॥೧೮॥

ಅಂತಹ ದುರ್ಜನರಿಂದ ನಿಂದಿಸಲ್ಪಡುವವನನ್ನು ನೋಡಿ, ಸ್ಥಿತಬುದ್ಧಿಯುಳ್ಳ ಸಜ್ಜನರು ನಿಂದಿಸಲ್ಪಡುವ ಪುರುಷನನ್ನು ಕುರಿತು ಅವನ ಮಾತುಗಳನ್ನು ಕೇಳಿ ನೀನು ಆರ್ತನಾಗಬೇಡ. ಶ್ರೇಷ್ಠನಾದವನು ನೀಚಪುರುಷನ ಸಹವಾಸವನ್ನು ಹೊಂದುವುದನ್ನು ದೊಡ್ಡವರು ನಿಂದಿಸುತ್ತಾರೆ.

ಕ್ರುದ್ಧೋ ದಶೇದ್ ವಾಪಿ ಚ ತಾಡಯೇದ್ ವಾ
ಸ ಪಾಂಸುಭಿರ್ವಾಪಕಿರೇತ್ ತುಷೈರ್ವಾ ।

ವಿವೃತ್ಯ ದಂತಾಂಶ್ಚ ವಿಭೀಷಯೇದ್ ವಾ
ಸಿದ್ಧಂ ಹಿ ಮೂರ್ಖೇ ಕುಪಿತೇ ನೃಶಂಸೇ ॥೧೯॥

ಕೋಪಗೊಂಡ ದುರ್ಜನನು ಕಚ್ಚಬಹುದು. ಅಥವಾ ಹೊಡೆಯಬಹುದು. ಅಥವಾ ಒಂದು ಹಿಡಿ ಮಣ್ಣನ್ನಾಗಲೀ ಹೊಟ್ಟನ್ನಾಗಲೀ ತೆಗೆದುಕೊಂಡು ಎರೆಚಬಹುದು. ಅಥವಾ ಹಲ್ಲುಗಳನ್ನು ತೋರಿಸಿ ಹೆದರಿಸಬಹುದು. – ಕೋಪಗೊಂಡವನೂ ಕ್ರೂರಿಯೂ ಆದ ಮೂರ್ಖನಲ್ಲಿ ಇವೆಲ್ಲ ನಡತೆಯು ಸಿದ್ಧವಾದವುಗಳು.

ವಿಗರ್ಹಣಾಂ ಪರಮದುರಾತ್ಮನಾ ಕೃತಾಂ
ಸಹೇತ ಯಃ ಸಂಸದಿ ದುರ್ಜನಾನ್ನರಃ।
ಪಠೇದಿದಂ ಚಾಪಿ ನಿದರ್ಶನಂ ಸದಾ
ನ ವಾಜ್ಮಯಂ ಸ ಲಭತೇ ಕಿಂಚಿದಪ್ರಿಯಮ್ ॥೨೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷೋಡಶಾಧಿಕಶತತಮೋऽಧ್ಯಾಯಃ ॥೧೧೬॥

ಪರಮದುಷ್ಟಾತ್ಮನು ಸಭೆಯಲ್ಲಿ ಮಾಡಿದ ನಿಂದೆಯ ಮಾತುಗಳನ್ನು ಯಾವನು ಸಹಿಸುತ್ತಾನೆಯೋ ನಾನು ಹೇಳಿದ ಈ ದೃಷ್ಟಾಂತಗಳನ್ನು ಯಾವನು ಪಠಿಸುತ್ತಾನೋ ಅವನು ಮಾತುಗಳಿಂದ ಯಾವ ಅಪ್ರಿಯವನ್ನೂ ಹೊಂದುವುದಿಲ್ಲ.

—0—

೧೧೭. ನೂರಹದಿನೇಳನೆಯ ಅಧ್ಯಾಯ

ರಾಜರಿಗೆ ಸಹಾಯಸಂಪಾದನೆಯ ಅವಶ್ಯಕತೆ

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸಂಶಯೋ ಮೇ ಮಹಾನಯಮ್।
ಸ ಚ್ಛೇತ್ತವ್ಯಸ್ತ್ವಯಾ ರಾಜನ್ ಭವಾನ್ ಕುಲಕರೋ ಹಿ ನಃ ॥೧॥

ಎಲೈ ಮಹಾಪ್ರಾಜ್ಞನೇ ಪಿತಾಮಹನೇ! ನನಗೆ ಒಂದು ದೊಡ್ಡ ಸಂಶಯವಿದೆ. ನೀನು ಅದನ್ನು ಪರಿಹರಿಸಬೇಕು. ನೀನೇ ನಮ್ಮ ವಂಶಕರನಷ್ಟೇ!.

ಪುರುಷಾಣಾಮಯಂ ತಾತ ದುರ್ವೃತ್ತಾನಾಂ ದುರಾತ್ಮನಾಮ್ ।
ಕಥಿತೋ ವಾಕ್ಯಸಂಚಾರಸ್ತತೋ ವಿಜ್ಞಾಪಯಾಮಿ ತೇ ॥೨॥

ಎಲೈ ಪ್ರೀತಿಪಾತ್ರನೇ! ದುರ್ನಡತೆಯುಳ್ಳ ಪುರುಷರು ಹೇಗೆ ಮಾತನಾಡುತ್ತಾರೆಂದು ನನಗೆ ಹೇಳಿದೆ. ಅದರಿಂದ ಈ ಪ್ರಶ್ನೆಯನ್ನು ಮಾಡುತ್ತಿದ್ದೇನೆ.

ಯದ್ ಹಿತಂ ರಾಜ್ಯತಂತ್ರಸ್ಯ ಕುಲಸ್ಯ ಚ ಸುಖೋದಯಮ್ ।
ಆಯತ್ಯಾಂ ಚ ತದಾತ್ವೇ ಚ ಕ್ಷೇಮವೃದ್ಧಿಕರಂ ಚ ಯತ್ ॥೩॥

ಪುತ್ರಪೌತ್ರಾಭಿರಾಮಂ ಚ ರಾಷ್ಟ್ರವೃದ್ಧಿಕರಂ ಚ ಯತ್ ।
ಅನ್ನಪಾನೇ ಶರೀರೇ ಚ ಹಿತಂ ಯತ್ ತದ್ ಬ್ರವೀಹಿ ಮೇ ॥೪॥

ರಾಜ್ಯತಂತ್ರಕ್ಕೆ ಯಾವುದು ಹಿತವೋ, ಕುಲಕ್ಕೆ ಯಾವುದು ಸುಖವನ್ನು ಉಂಟು ಮಾಡುತ್ತದೆಯೋ, ತತ್ಕಾಲದಲ್ಲಿ ಮತ್ತು ಭವಿಷ್ಯತ್ಕಾಲದಲ್ಲಿ ಯಾವುದು ಕ್ಷೇಮವನ್ನು ಹಾಗೂ ವೃದ್ಧಿಯನ್ನು ಉಂಟು ಮಾಡುತ್ತದೆಯೋ, ಪುತ್ರಪೌತ್ರರಿಗೆ ಸುಖಕರವಾಗಿದೆಯೋ, ರಾಷ್ಟ್ರಕ್ಕೆ ವೃದ್ಧಿಯನ್ನು ಉಂಟು ಮೂಡುತ್ತದೆಯೋ, ಅನ್ನಪಾನಗಳ ವಿಷಯದಲ್ಲಿ ಹಾಗೂ ಶರೀರದ ವಿಷಯದಲ್ಲಿ ಹಿತವಾಗಿರುತ್ತದೆಯೋ ಅಂತಹ ವಿಷಯವನ್ನು ನನಗೆ ಹೇಳು.

ಅಭಿಷಿಕ್ತೋ ಹಿ ಯೋ ರಾಜಾ ರಾಜ್ಯಸ್ಥೋ ಮಿತ್ರಸಂವೃತಃ।
ಅಸುಹೃತ್‌ಸಮುಪೇತೋ ವಾ ಸ ಕಥಂ ರಂಜಯೇತ್ ಪ್ರಜಾಃ ॥೫॥

ರಾಜನು ಪಟ್ಟಾಭಿಷಿಕ್ತನಾಗಿ ಮಿತ್ರರ ಜೊತೆಯಲ್ಲಿ ರಾಜ್ಯದಲ್ಲಿ ನೆಲೆಸಿದವನಾಗಿ ಅಥವಾ ಅಸುಹೃಜ್ಜನರಿಂದ ಕೂಡಿದವನಾಗಿ ಹೇಗೆ ಪ್ರಜೆಗಳನ್ನು ರಂಜಿಸಬೇಕು?

ಯೋ ಹ್ಯಸತ್‌ಪ್ರಗ್ರಹರತಿಃ ಸ್ನೇಹರಾಗಬಲಾತ್ಕೃತಃ।
ಇಂದ್ರಿಯಾಣಾಮನೀಶತ್ವಾದಸಜ್ಜನಬುಭೂಷಕಃ ॥೬॥

ತಸ್ಯ ಭೃತ್ಯಾ ವಿಗುಣತಾಂ ಯಾಂತಿ ಸರ್ವೇ ಕುಲೋದ್ಗತಾಃ।
ನ ಚ ಭೃತ್ಯಫಲೈರರ್ಥೈಃ ಸ ರಾಜಾ ಸಂಪ್ರಯುಜ್ಯತೇ ॥೭॥

ಯಾವನು ಸ್ನೇಹರಾಗಗಳಿಗೆ ವಶನಾಗಿ ಸುಹೃಜ್ಜನರಲ್ಲದವರನ್ನು ಸ್ವೀಕರಿಸುವುದರಲ್ಲಿಯೇ ನಿರತನೋ, ಇಂದ್ರಿಯಗಳ ಮೇಲೆ ನಿಯಂತ್ರಣವಿಲ್ಲದಿರುವುದರಿಂದ ಅಸಜ್ಜನರಿಗೆ ಹಿತವನ್ನು ಮಾಡುತ್ತಾನೆಯೋ ಅಂತಹವನ ಭೃತ್ಯರು ಒಳ್ಳೆಯ ಕುಲದಿಂದ ಬಂದಿದ್ದರೂ ಎಲ್ಲರೂ ಗುಣಹೀನರಾಗುತ್ತಾರೆ. ಅಂತಹ ರಾಜನು ಭೃತ್ಯರಿಂದ ಯಾವ ಪ್ರಯೋಜನವನ್ನೂ ಪಡೆಯುವುದಿಲ್ಲ.

ಏತಾನ್ ಮೇ ಸಂಶಯಸ್ಥಸ್ಯ ರಾಜಧರ್ಮಾನ್ ಸುದುರ್ಲಭಾನ್।
ಬೃಹಸ್ಪತಿಸಮೋ ಬುದ್ಧ್ಯಾ ಭವಾನ್ ಶಂಸಿತುಮರ್ಹತಿ ॥೮॥

ಸುದುರ್ಲಭವಾದ ರಾಜಧರ್ಮಗಳ ವಿಷಯದಲ್ಲಿ ನನಗೆ ಇರುವ ಈ ಸಂಶಯವನ್ನು ಬೃಹಸ್ಪತಿಸಮನಾದ ನೀನು ನಿನ್ನ ಬುದ್ಧಿಯಿಂದ ಪರಿಹರಿಸಬೇಕು.

ಶಂಸಿತಾ ಪುರುಷವ್ಯಾಘ್ರ ತ್ವಂ ನಃ ಕುಲಹಿತೇ ರತಃ।
ಕ್ಷತ್ತಾ ಚೈವ ಪಟುಪ್ರಜ್ಞೋ ಯೋ ನಃ ಶಂಸತಿ ಸರ್ವದಾ ॥೯॥

ಎಲೈ ಪುರುಷವ್ಯಾಘ್ರನೇ! ನಮ್ಮ ಕುಲಹಿತದಲ್ಲಿ ನಿರತನಾದ ನೀನು ನಮಗೆ ಇಂತಹ ಉಪದೇಶವನ್ನು ಮಾಡುವವನು. ಮತ್ತು ಪಟುವಾದ ಜ್ಞಾನವನ್ನು ಹೊಂದಿದ ವಿದುರನೂ ಸಹ ಯಾವಾಗಲೂ ಉಪದೇಶಿಸುತ್ತಾನೆ.

ತ್ವತ್ತಃ ಕುಲಹಿತಂ ವಾಕ್ಯಂ ಶ್ರುತ್ವಾ ರಾಜ್ಯಹಿತೋದಯಮ್।
ಅಮೃತಸ್ಯಾವ್ಯಯಸ್ಯೇವ ತೃಪ್ತಃ ಸ್ವಪ್ಸ್ಯಾಮ್ಯಹಂ ಸುಖಮ್ ॥೧೦॥

ನಿನ್ನಿಂದ ಕುಲಕ್ಕೆ ಹಿತವೂ ಮತ್ತು ರಾಜ್ಯಕ್ಕೆ ಹಿತವನ್ನು ಉಂಟುಮಾಡುವುದೂ ಆದ ಮಾತುಗಳನ್ನು ಕೇಳಿ ಅಮೃತವನ್ನು ಪಾನ ಮಾಡಿದವನಂತೆ ತೃಪ್ತನಾಗಿ ನಾನು ನಿದ್ರಿಸುವೆನು.

ಕೀದೃಶಾಃ ಸನ್ನಿಕರ್ಷಸ್ಥಾ ಭೃತ್ಯಾಃ ಸ್ಯುರ್ವಾ ಗುಣಾನ್ವಿತಾಃ।
ಕೀದೃಶೈಃ ಕಿಂಕುಲೀನೈರ್ವಾ ಸಹ ಯಾತ್ರಾ ವಿಧೀಯತೇ ॥೧೧॥

ರಾಜನ ಸಮೀಪದಲ್ಲಿರುವ ಭೃತ್ಯರು ಎಂತಹವರು ಮತ್ತು ಎಂತಹ ಗುಣದಿಂದ ಕೂಡಿದವರಾಗಿರಬೇಕು? ರಾಜನ ಜೊತೆಯಲ್ಲಿ ಸಂಚರಿಸುವವರು ಎಂತಹವರು ಮತ್ತು ಎಂತಹ ಕುಲೀನರಾಗಿರಬೇಕು?

ನ ಹ್ಯೇಕೋ ಭೃತ್ಯರಹಿತೋ ರಾಜಾ ಭವತಿ ರಕ್ಷಿತಾ।
ರಾಜ್ಯಂ ಚೇದಂ ಜನಃ ಸರ್ವಸ್ತತ್ಕುಲೀನೋಽಭಿಶಾಸತಿ ॥೧೨॥

ಭೃತ್ಯರಿಲ್ಲದೇ ರಾಜನೊಬ್ಬನೇ ಈ ರಾಜ್ಯವನ್ನೂ ಸರ್ವಜನರನ್ನೂ ಕುಲೀನನಾದ ರಾಜನು ರಕ್ಷಿಸಲು ಸಾಧ್ಯವಿಲ್ಲ.

ನ ಚ ಪ್ರಶಾಸ್ತುಂ ರಾಜ್ಯಂ ಹಿ ಶಕ್ಯಮೇಕೇನ ಭಾರತ।
ಅಸಹಾಯವತಾ ತಾತ ನೈವಾರ್ಥಾಃ ಕೇಚಿದಪ್ಯುತ।
ಲಬ್ಧುಂ ಲಬ್ಧ್ವಾ ಚಾಪಿ ಸದಾ ರಕ್ಷಿತುಂ ಭರತರ್ಷಭ ॥೧೩॥

ಎಲೈ ಭಾರತನೇ! ಸಹಾಯವಿಲ್ಲದೇ ಒಬ್ಬನೇ ರಾಜ್ಯವನ್ನು ಆಳಲು ಸಾಧ್ಯವಿಲ್ಲ. ಮತ್ತು ಸಹಾಯವಿಲ್ಲದೇ ಯಾವುದನ್ನಾದರೂ ಸಂಪಾದಿಸಲು ಅಥವಾ ಸಂಪಾದಿಸಿದುದನ್ನು ಸದಾ ರಕ್ಷಿಸಲೂ ಸಾಧ್ಯವಿಲ್ಲ.

ಭೀಷ್ಮಃ

ಯಸ್ಯ ಭೃತ್ಯಜನಃ ಸರ್ವೋ ಜ್ಞಾನವಿಜ್ಞಾನಕೋವಿದಃ।
ಹಿತೈಷೀ ಕುಲಜಃ ಸ್ನಿಗ್ಧಃ ಸ ರಾಜ್ಯಫಲಮಶ್ನುತೇ ॥೧೪॥

ಭೀಷ್ಮರು – ಯಾವನ ಭೃತ್ಯಜನರೆಲ್ಲರೂ ಜ್ಞಾನವಿಜ್ಞಾನ ಕೋವಿದರಾಗಿರುತ್ತಾರೆಯೋ ಸತ್ಕುಲದಿಂದ ಬಂದು ರಾಜನ ಹಿತೈಷಿಗಳಾಗಿ ರಾಜನಲ್ಲಿ ಸ್ನೇಹವುಳ್ಳವರಾಗಿರುತ್ತಾರೆಯೋ, ಅಂತಹ ರಾಜನು ರಾಜ್ಯಫಲವನ್ನು ಹೊಂದುವನು.

ಮಂತ್ರಿಣೋ ಯಸ್ಯ ಕುಲಜಾ ಅಸಂಹಾರ್ಯಾ ಸಹೋಷಿತಾಃ।
ನೃಪತೇರ್ಮತಿದಾಃ ಸಂತಿ ಸಂಬಂಧಜ್ಞಾನಕೋವಿದಾಃ ॥೧೫॥

ಅನಾಗತವಿಧಾತಾರಃ ಕಾಲಜ್ಞಾನವಿಶಾರದಾಃ।
ಅತಿಕ್ರಾಂತಮಶೋಚಂತಃ ಸ ರಾಜ್ಯಫಲಮಶ್ನುತೇ ॥೧೬॥

ಯಾವನ ಮಂತ್ರಿಗಳು ಒಳ್ಳೆಯ ಕುಲದಲ್ಲಿ ಬಂದವರಾಗಿ, ಇನ್ನೊಬ್ಬರಿಂದ ಭೇದಿಸಲು ಸಾಧ್ಯವಿಲ್ಲದವರಾಗಿ, ರಾಜನ ಜೊತೆಯಲ್ಲಿ ವಾಸಿಸಿ, ರಾಜನಿಗೆ ಒಳ್ಳೆಯ ಉಪದೇಶವನ್ನು ನೀಡಿ, ಯಾರ ಜೊತೆಯಲ್ಲಿ ಸಂಬಂಧವನ್ನು ಮಾಡಬೇಕು ಯಾರ ಜೊತೆಯಲ್ಲಿ ಸಂಬಂಧವನ್ನು ಮಾಡಬಾರದು ಎಂದು ಚೆನ್ನಾಗಿ ತಿಳಿದವರಾಗಿ, ಕಾಲಜ್ಞಾನದಲ್ಲಿ ವಿಶಾರದರಾಗಿ, ಕಳೆದುಹೋದುದನ್ನು ಕುರಿತು ಶೋಕಪಡದೇ ಮುಂದೆ ಆಗಬೇಕಾದುದನ್ನು ಸಾಧಿಸುತ್ತಾರೆಯೋ ಅಂತಹ ರಾಜನು ರಾಜ್ಯಫಲವನ್ನು ಹೊಂದುತ್ತಾನೆ.

ಸಮದುಃಖಸುಖಾ ಯಸ್ಯ ಸಹಾಯಾಃ ಸತ್ಯಕಾರಿಣಃ।
ಅರ್ಥಚಿಂತಾಪರಾ ಯಸ್ಯ ಸ ರಾಜ್ಯಫಲಮಶ್ನುತೇ ॥೧೭॥

ಯಾವ ರಾಜನ ಭೃತ್ಯರು ಹಿತವಾದ ಕಾರ್ಯಗಳನ್ನೇ ಮಾಡುತ್ತಾ ರಾಜನ ಸುಖದುಃಖಗಳಲ್ಲಿ ಸಮಭಾಗಿಗಳಾಗಿ ರಾಜನ ಸಮೃದ್ಧಿಯನ್ನು ಚಿಂತಿಸುವರೋ ಅಂತಹ ರಾಜನು ರಾಜ್ಯಫಲವನ್ನು ಹೊಂದುವನು.

ಯಸ್ಯ ನಾರ್ತೋ ಜನಪದಃ ಸನ್ನಿಕರ್ಷಗತಃ ಸದಾ।
ಅಕ್ಷುದ್ರಃ ಸತ್ಪಥಾಲಂಬೀ ಸ ರಾಜ್ಯಫಲಭಾಗ್ ಭವೇತ್ ॥೧೮॥

ಯಾವ ರಾಜನಿಗೆ ಸಮೀಪದಲ್ಲಿರುವ ಪ್ರಜೆಗಳು ಆರ್ತರಾಗಿರುವುದಿಲ್ಲವೋ, ಕ್ಷುದ್ರರಾಗಿರುವುದಿಲ್ಲವೋ, ಸನ್ಮಾರ್ಗದಲ್ಲಿ ನಡೆಯುವರೋ ಅಂತಹ ರಾಜನು ರಾಜ್ಯಫಲವನ್ನು ಹೊಂದುವನು.

ಕೋಶಾಕ್ಷಪಟಲಂ ಯಸ್ಯ ಕೋಶವೃದ್ಧಿಕರೈರ್ಜನೈಃ।
ಆಪ್ತೈಸ್ತುಷ್ಟೈಶ್ಚ ಸತತಂ ಧಾರ್ಯತೇ ಸ ನೃಪೋತ್ತಮಃ ॥೧೯॥

ಯಾವ ರಾಜನ ಕೋಶವು (ಬೊಕ್ಕಸವು) ಕೋಶವನ್ನು ಅಭಿವೃದ್ಧಿಗೊಳಿಸುವುದರಲ್ಲಿ ನಿರತರಾದ ತೃಪ್ತರಾದ ಆಪ್ತರಾದ ಜನರಿಂದ ನೋಡಲ್ಪಡುತ್ತದೆಯೋ ಅಂತಹವನು ಶ್ರೇಷ್ಠರಾಜನಾಗುತ್ತಾನೆ.

ಕೋಷ್ಠಾಗಾರಮಸಂಹಾರ್ಯೈರಾಪ್ತೈಃ ಸಂಚಯತತ್ಪರೈಃ।
ಪಾತ್ರಭೂತೈರಲುಬ್ಧೈಶ್ಚ ಪಾಲ್ಯಮಾನಂ ಗುಣೀ ಭವೇತ್ ॥೨೦॥

ಯಾವ ರಾಜನ ಉಗ್ರಾಣಗಳು ಇನ್ನೊಬ್ಬರಿಂದ ರಾಜನಿಂದ ಬೇರ್ಪಡಿಸಲಾಗದ ಆಪ್ತರಾದ ಉಗ್ರಾಣವನ್ನು ಅಭಿವೃದ್ಧಿಪಡಿಸುವುದರಲ್ಲಿ ನಿರತರಾದ ಸತ್ಪಾತ್ರರಾದ ಲೋಭಿಗಳಲ್ಲದ ಸೇವಕರಿಂದ ರಕ್ಷಿಸಲ್ಪಡುತ್ತದೆಯೋ ಆ ರಾಜನು ಗುಣವಂತನಾಗುತ್ತಾನೆ.

ವ್ಯವಹಾರಶ್ಚ ನಗರೇ ಯಸ್ಯ ಕರ್ಮಫಲೋದಯಃ।
ದೃಶ್ಯತೇ ಶಂಖಲಿಖಿತಃ ಸ ಧರ್ಮಫಲಭಾಗ್ ಭವೇತ್ ॥೨೧॥

ಯಾವನ ರಾಜ್ಯದಲ್ಲಿ ಕ್ರಯವಿಕ್ರಯಾದಿ ವ್ಯವಹಾರಗಳು ಯೋಗ್ಯವಾದ ಫಲವನ್ನು ಕೊಡುತ್ತವೆಯೋ, ಶಂಖಲಿಖಿತರಿಗೆ ಅನುಗುಣವಾದ ವ್ಯವಹಾರವು ಕಂಡು ಬರುತ್ತದೆಯೋ ಅಂತಹ ರಾಜನು ಧರ್ಮಫಲವನ್ನು ಪಡೆಯುತ್ತಾನೆ.

ಸಂಗೃಹೀತಮನುಷ್ಯಶ್ಚ ಯೋ ರಾಜಾ ರಾಜಧರ್ಮವಿತ್।
ಷಡ್ವರ್ಗಂ ಪ್ರತಿಗೃಹ್ಣನ್ ಸ ಧರ್ಮಾತ್ ಫಲಮುಪಾಶ್ನುತೇ ॥೨೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತದಶಾಧಿಕಶತತಮೋऽಧ್ಯಾಯಃ ॥೧೧೭॥

ಒಳ್ಳೆಯ ಸೇವಕರನ್ನು ಸಂಗ್ರಹಿಸಿ ರಾಜಧರ್ಮವನ್ನು ತಿಳಿದ ಯಾವ ರಾಜನು ಷಡ್ವರ್ಗವನ್ನು ಅನುಷ್ಠಾನ ಮಾಡುತ್ತಾನೆಯೋ ಅವನು ಧರ್ಮದ ಫಲವನ್ನು ಹೊಂದುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೭ನೆಯ ಅಧ್ಯಾಯ ಮುಗಿಯಿತು

—0—

೧೧೮. ನೂರಹದಿನೆಂಟನೆಯ ಅಧ್ಯಾಯ

ಮುನಿಯಿಂದ ನಾಯಿಯ ರೂಪಾಂತರಕರಣ ಮತ್ತು ಪುನಃ ಶ್ವಾನಕರಣ

ಯುಧಿಷ್ಠಿರಃ

ನ ಸಂತಿ ಕುಲಜಾ ಯತ್ರ ಸಹಾಯಾಃ ಪಾರ್ಥಿವಸ್ಯ ತು।
ಅಕುಲೀನಾಶ್ಚ ಕರ್ತವ್ಯಾ ನ ವಾ ಭಾರತಸತ್ತಮ ॥೧॥

ಯುಧಿಷ್ಠಿರ – ಎಲೈ ಭರತಸತ್ತಮನೇ! ರಾಜನಿಗೆ ಕುಲಜರಾದವರು ಸಹಾಯಕರಿಲ್ಲದಿದ್ದರೆ ಅಕುಲೀನರನ್ನು ಸಹಾಯಕರಾಗಿ ತೆಗೆದುಕೊಳ್ಳಬಹುದೇ ಬೇಡವೇ?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ನಿದರ್ಶನಕರಂ ಲೋಕೇ ಸಜ್ಜನಾಚರಿತಂ ಸದಾ ॥೨॥

ಭೀಷ್ಮರು – ಈ ವಿಷಯದಲ್ಲಿಯೂ ಸಜ್ಜನನಾದ ಮುನಿಯು ಆಚರಿಸಿದ ದೃಷ್ಟಾಂತರೂಪವಾದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಅಸ್ಯೈವಾರ್ಥಸ್ಯ ಸದೃಶಂ ಯಚ್ಛ್ರುತಂ ಮೇ ತಪೋವನೇ।
ಜಾಮದಗ್ನ್ಯಸ್ಯ ರಾಮಸ್ಯ ಯದುಕ್ತಮೃಷಿಸತ್ತಮೈಃ ॥೩॥

ನೀನು ಕೇಳಿದ ಪ್ರಶ್ನೆಗೆ ಸದೃಶವಾದ ಒಂದು ವಿಷಯವನ್ನು ನಾನು ತಪೋವನದಲ್ಲಿ ಜಮದಗ್ನಿಪುತ್ರರಾದ ಪರಶುರಾಮರ ಆಶ್ರಮದಲ್ಲಿ ಋಷಿಶ್ರೇಷ್ಠರಿಂದ ಹೇಳಿದ ಒಂದು ಕಥೆಯನ್ನು ಕೇಳಿದ್ದೇನೆ.

ವನೇ ಮಹತಿ ಕಸ್ಮಿಂಶ್ಚಿದಮನುಷ್ಯನಿಷೇವಿತೇ।
ಋಷಿರ್ಮೂಲಫಲಾಹಾರೋ ನಿಯತೋ ನಿಯತೇಂದ್ರಿಯಃ ॥೪॥

ದೀಕ್ಷಾದಮಪರಃ ಶಾಂತಃ ಸ್ವಾಧ್ಯಾಯಪರಮಃ ಶುಚಿಃ।
ಉಪವಾಸವಿಶುದ್ಧಾತ್ಮಾ ಸತತಂ ಸತ್ಪಥೇ ಸ್ಥಿತಃ ॥೫॥

ನಿರ್ಜನವಾದ ಒಂದು ದೊಡ್ಡ ವನದಲ್ಲಿ ಮೂಲಫಲಾಹಾರನೂ, ನಿಯಮಬದ್ಧನೂ, ಜಿತೇಂದ್ರಿಯನೂ, ದೀಕ್ಷಾಪರನೂ, ಶಾಂತನೂ, ಸ್ವಾಧ್ಯಾಯನಿರತನೂ, ಶುಚಿಯೂ, ಉಪವಾಸದಿಂದ ವಿಶುದ್ಧವಾದ ಶರೀರವುಳ್ಳವನೂ ಯಾವಾಗಲೂ ಸನ್ಮಾರ್ಗದಲ್ಲಿ ಇರುವವನೂ ಆದ ಒಬ್ಬ ಋಷಿಯು ಇದ್ದನು.

ತಸ್ಯ ಸಂದೃಶ್ಯ ಸದ್ಭಾವಮುಪವಿಷ್ಟಸ್ಯ ಧೀಮತಃ।
ಸರ್ವಸತ್ತ್ವಾಃ ಸಮೀಪಸ್ಥಾ ಭವಂತಿ ವನಚಾರಿಣಃ ॥೬॥

ಮೇಧಾವಿಯಾದ ಅವನ ಒಳ್ಳೆಯತನವನ್ನು ನೋಡಿ ವನಚಾರಿಗಳಾದ ಎಲ್ಲ ಪ್ರಾಣಿಗಳೂ ಅವನ ಸಮೀಪದಲ್ಲಿರುತ್ತಿದ್ದವು.

ಸಿಂಹವ್ಯಾಘ್ರಾಃ ಸಶರಭಾ ಮತ್ತಾಶ್ಚೈವ ಮಹಾಗಜಾಃ।
ದ್ವೀಪಿನಃ ಖಡ್ಗಭಲ್ಲೂಕಾ ಯೇ ಚಾನ್ಯೇ ಭೀಮದರ್ಶನಾಃ ॥೭॥

ಸಿಂಹವ್ಯಾಘ್ರಗಳು, ಶರಭಗಳು, ಮದ್ದಾನೆಗಳು, ಚಿರತೆಗಳು, ಖಡ್ಗಮೃಗಗಳು, ಕರಡಿಗಳು ಇನ್ನೂ ಅನೇಕ ಭಯಂಕರಪ್ರಾಣಿಗಳೂ ಬರುತ್ತಿದ್ದವು.

ತೇ ಸುಖಪ್ರಶ್ನದಾಃ ಸರ್ವೇ ಭವಂತಿ ಕೃತಜಾಶನಾಃ।
ತಸ್ಯರ್ಷೇಃ ಶಿಷ್ಯವಚ್ಚೈವ ನ್ಯಗ್ಭೂತಾಃ ಪ್ರಿಯಕಾರಿಣಃ ॥೮॥

ಮಾಂಸಾಹಾರಿಗಳಾದ ಆ ಪ್ರಾಣಿಗಳೆಲ್ಲವೂ ಮುನಿಯ ಸಮೀಪಕ್ಕೆ ಬಂದು ಕುಶಲಪ್ರಶ್ನೆಯನ್ನು ಮಾಡಿ ಅವನಿಗೆ ಪ್ರಿಯವನ್ನು ಮಾಡಿ ಆ ಋಷಿಯ ಶಿಷ್ಯರಂತೆ ವಿನಯದಿಂದ ಬಾಗಿರುತ್ತಿದ್ದವು.

ದತ್ತ್ವಾ ಚ ತೇ ಸುಖಪ್ರಶ್ನಂ ಸರ್ವೇ ಯಾಂತಿ ಯಥಾಗತಮ್।
ಗ್ರಾಮ್ಯಸ್ತ್ವೇಕಃ ಪಶುಸ್ತತ್ರ ನಾಜಹಾತ್ ಸ ಮಹಾಮುನಿಮ್ ॥೯॥

ಅವೆಲ್ಲವೂ ಕುಶಲಪ್ರಶ್ನೆಯನ್ನು ಮಾಡಿ ಬಂದ ದಾರಿಯಲ್ಲಿಯೇ ಹಿಂದಿರುಗುತ್ತಿದ್ದವು. ಆದರೆ ಒಂದು ನಾಯಿಯು ಮಾತ್ರ ಆ ಮಹಾಮುನಿಯನ್ನು ಬಿಡುತ್ತಿರಲಿಲ್ಲ.

ಭಕ್ತೋಽನುರಕ್ತಃ ಸತತಮುಪವಾಸಕೃಶೋಽಬಲಃ।
ಫಲಮೂಲೋತ್ಕರಾಹಾರಃ ಶಾಂತಃ ಶಿಷ್ಟಾಕೃತಿರ್ಯಥಾ ॥೧೦॥

ಆ ನಾಯಿಯು ಆ ಋಷಿಯಲ್ಲಿ ಭಕ್ತಿಯನ್ನು ಹೊಂದಿ, ಅನುರಾಗವನ್ನು ಹೊಂದಿ, ಸತತೋಪವಾಸದಿಂದ ಕೃಶವಾಗಿ, ದುರ್ಬಲವಾಗಿ, ಫಲಮೂಲಗಳನ್ನು ಮತ್ತು ಎಸೆದ ಆಹಾರವನ್ನು ಸ್ವೀಕರಿಸುತ್ತಾ, ಶಾಂತವಾಗಿ, ಶಿಷ್ಟರಂತೆ ಇರುತ್ತಿದ್ದಿತು.

ತಸ್ಯರ್ಷೇರುಪವಿಷ್ಟಸ್ಯ ಪಾದಮೂಲೇ ಮಹಾಮುನೇಃ।
ಮನುಷ್ಯವದ್ ಗತೋ ಭಾವಃ ಸ್ನೇಹಬದ್ಧೋಽಭವದ್ ಭೃಶಮ್ ॥೧೧॥

ಆ ಮಹಾಮುನಿಯಾದ ಋಷಿಯು ಕುಳಿತುಕೊಂಡಾಗ ಅವನ ಪಾದಮೂಲದಲ್ಲಿ ಮನುಷ್ಯರಂತೆ ಸ್ನೇಹಭಾವದಿಂದ ಕುಳಿತಿರುತ್ತಿದ್ದಿತು.

ತತೋಽಭ್ಯಯಾನ್ಮಹಾವೀರ್ಯೋ ದ್ವೀಪೀ ಕ್ಷತಜಭೋಜನಃ।
ಶ್ವಾರ್ಥಮತ್ಯಂತಸಂದುಷ್ಟಃ ಕ್ರೂರಃ ಕಾಲ ಇವಾಂತಕಃ ॥೧೨॥

ಅನಂತರ ಒಮ್ಮೆ ಅಲ್ಲಿ ರಕ್ತಾಹಾರಸೇವಿಯಾದ, ಮಹಾಪರಾಕ್ರಮಿಯಾದ ಒಂದು ಚಿರತೆಯು ಬಂದಿತು. ಕ್ರೂರಿಯೂ, ಯಮನಂತೆ ಇರುವುದೂ, ದುಷ್ಟವೂ ಆದ ಆ ಚಿರತೆಯು ನಾಯಿಯನ್ನು ಹಿಡಿಯುವ ಸಲುವಾಗಿ ಬಂದಿತು.

ಲೇಲಿಹ್ಯಮಾನಸ್ಪೃಷಿತಃ ಪುಚ್ಛಾಸ್ಫೋಟನತತ್ಪರಃ।
ವ್ಯಾದಿತಾಸ್ಯಃ ಕ್ಷುಧಾಭಗ್ನಃ ಪ್ರಾರ್ಥಯಾನಸ್ತದಾಮಿಷಮ್ ॥೧೩॥

ಬಾಯಾರಿಕೆಯಿಂದ ತನ್ನ ಕಟಬಾಯಿಗಳನ್ನು ಸವರಿಕೊಂಡು, ಬಾಲವನ್ನು ಬಡಿಯುತ್ತಾ, ಮುಖವನ್ನು ತೆರೆದು, ಹಸಿವೆಯಿಂದ ಬಳಲಿ, ನಾಯಿಯ ಮಾಂಸವನ್ನು ಆಶಿಸುತ್ತಾ ಸಮೀಪಕ್ಕೆ ಬಂದಿತು.

ತಂ ದೃಷ್ಟ್ವಾಽಽಕ್ರೂರಮಾಯಾಂತಂ ಜೀವಿತಾರ್ಥೀ ನರಾಧಿಪ।
ಪ್ರೋವಾಚ ಶ್ವಾ ಮುನಿಂ ತತ್ರ ಯತ್ ತಚ್ಛೃಣು ಮಹಾಮತೇ ॥೧೪॥

ಎಲೈ ನರಾಧಿಪನೇ! ಕ್ರೂರ ಮೃಗವು ತನ್ನ ಬಳಿ ಬರುತ್ತಿರುವುದನ್ನು ನೋಡಿ, ಜೀವಿತಾರ್ಥಿಯಾದ ಆ ನಾಯಿಯು ಆ ಋಷಿಯನ್ನು ಕುರಿತು ಏನು ಹೇಳಿತೆಂಬುದನ್ನು ಎಲೈ ಮಹಾಮತಿಯೇ! ನನ್ನಿಂದ ಕೇಳು.

ಶ್ವಾಶತ್ರುರ್ಭಗವನ್ನತ್ರ ದ್ವೀಪೀ ಮಾಂ ಹಂತುಮಿಚ್ಛತಿ।
ತತ್ಪ್ರಸಾದಾದ್ ಭಯಂ ನ ಸ್ಯಾತ್ ತಸ್ಮಾನ್ಮಮ ಮಹಾಮುನೇ ॥೧೫॥

ಎಲೈ ಪೂಜ್ಯನೇ! ನಾಯಿಗಳಿಗೆ ಶತ್ರುವಾದ ಈ ಚಿರತೆಯು ನನ್ನನ್ನು ಕೊಲ್ಲಲು ಬಯಸುತ್ತಿದೆ. ಎಲೈ ಮಹಾಮುನಿಯೇ! ನಿನ್ನ ಅನುಗ್ರಹದಿಂದ ನನಗೆ ಆ ಚಿರತೆಯಿಂದ ಭಯವುಂಟಾಗುವುದು ಬೇಡ.

ಮುನಿಃ

ನ ಭಯಂ ದ್ವೀಪಿನಃ ಕಾರ್ಯಂ ಮೃತ್ಯುತಸ್ತೇ ಕಥಂಚನ।
ಏಷ ಶ್ವರೂಪರಹಿತೋ ದ್ವೀಪೀ ಭವಸಿ ಪುತ್ರಕ ॥೧೬॥

ಮುನಿ – ಚಿರತೆಯಿಂದ ಮರಣವುಂಟಾಗುವುದೆಂಬ ಭಯವು ನಿನಗೆ ಬೇಡ. ಎಲೈ ಪುತ್ರನೇ! ನೀನು ನಾಯಿಯ ರೂಪವನ್ನು ತ್ಯಜಿಸಿ, ಚಿರತೆಯ ರೂಪವನ್ನು ಹೊಂದಿದವನಾಗುವಿ.

ಭೀಷ್ಮಃ

ತತಃ ಶ್ವಾ ದ್ವೀಪಿತಾಂ ನೀತೋ ಜಾಂಬೂನದನಿಭಾಕೃತಿಃ।
ಚಿತ್ರಾಂಗೋ ವಿಸ್ಫುರದ್‌ದಂಷ್ಟ್ರೋ (ಹೃಷ್ಟೋ) ವನೇ ವಸತಿ ನಿರ್ಭಯಃ ೧೭

ಭೀಷ್ಮರು – ಆಗ ಆ ನಾಯಿಯು ಚಿನ್ನದ ಬಣ್ಣದ ಒಂದು ಚಿರತೆಯಾಗಿ ಮಾಡಲ್ಪಟ್ಟಿತು. ಅದು ಚಿತ್ರಿತವಾದ ಅಂಗಗಳಿಂದ ಶೋಭಿಸುತ್ತಾ ಆ ಕಾಡಿನಲ್ಲಿ ನಿರ್ಭಯವಾಗಿ ಸಂತೋಷದಿಂದ ವಾಸ ಮಾಡಿತು.

ತಂ ದೃಷ್ಟ್ವಾ ಪುನರ್ದ್ವೀಪೀ ಆತ್ಮನಃ ಸುಭೃಶಂ ಶುಭಮ್ ।
ಅವಿರುದ್ಧಸ್ತತಸ್ತಸ್ಯ ಕ್ಷಣೇನ ಸಮಪದ್ಯತ ॥೧೮॥

ತನ್ನ ಕಡೆಗೆ ಬರುತ್ತಿದ್ದ ಚಿರತೆಯು ತನಗೆ ಸದೃಶವಾದ ಇನ್ನೊಂದು ಒಳ್ಳೆಯ ಚಿರತೆಯನ್ನು ನೋಡಿ ಒಂದು ಕ್ಷಣದಲ್ಲಿಯೇ ಅದರ ವಿರೋಧವನ್ನು ತ್ಯಜಿಸಿತು.

ತತೋಽಭ್ಯಯಾನ್ಮಹಾರೌದ್ರೋ ವ್ಯಾದಿತಾಸ್ಯಃ ಕ್ಷುಧಾನ್ವಿತಃ ।
ದ್ವೀಪಿನಂ ಲೇಲಿಹದ್ವಕ್ತ್ರೋ ವ್ಯಾಘ್ರೋ ರುಧಿರಲಾಲಸಃ ॥೧೯॥

ಆನಂತರ ಅಲ್ಲಿಗೆ ಮಹಾಭಯಂಕರವೂ, ಹಸಿವೆಯಿಂದ ಕೂಡಿದುದೂ, ರಕ್ತಪ್ರಿಯವೂ ಆದ ಒಂದು ಮಹಾವ್ಯಾಘ್ರವು ಬಾಯನ್ನು ತೆರೆದು ಕಟಬಾಯಿಗಳನ್ನು ಸವರುತ್ತಾ ಅಲ್ಲಿಗೆ ಬಂದಿತು.

ವ್ಯಾಘ್ರಂ ದೃಷ್ಟ್ವಾ ಕ್ಷುಧಾಭಗ್ನಂ ದಂಷ್ಟ್ರಿಣಂ ವನಗೋಚರಮ್ ।
ದ್ವೀಪೀ ಜೀವಿತರಕ್ಷಾರ್ಥಮೃಷಿಂ ಶರಣಮೇಯಿವಾನ್ ॥೨೦॥

ಹಸಿವಿನಿಂದ ಬಳಲಿದ ವನಸಂಚಾರಿಯಾದ, ಪ್ರಶಸ್ತವಾದ ಕೋರೆದಾಡೆಗಳನ್ನು ಹೊಂದಿದ ಆ ವ್ಯಾಘ್ರವನ್ನು ನೋಡಿ ಚಿರತೆಯು ತನ್ನ ಜೀವನವನ್ನು (ಅಥವಾ ಪ್ರಾಣಗಳನ್ನು) ರಕ್ಷಿಸಿಕೊಳ್ಳಲು ಋಷಿಯನ್ನು ಶರಣು ಹೊಂದಿತು.

ತತಃ ಸಂವಾಸಜಂ ಸ್ನೇಹಮೃಷಿಣಾ ಕುರ್ವತಾ ಸದಾ ।
ಸ ದ್ವೀಪೀ ವ್ಯಾಘ್ರತಾಂ ನೀತೋ ರಿಪುಭಿರ್ಬಲವತ್ತರಃ ।
ತತೋ ದೃಷ್ಟ್ವಾ ಸ ಶಾರ್ದೂಲೋ ನಾಭ್ಯಹಂಸ್ತಂ ವಿಶಾಂಪತೇ ॥೨೧॥

ಆಗ ಸಹವಾಸಪ್ರಯುಕ್ತವಾಗಿ ಸ್ನೇಹವನ್ನು ಮಾಡುವ ಋಷಿಯು ಆ ಚಿರತೆಯನ್ನು ಅದರ ಶತ್ರುಗಳಾದ ವ್ಯಾಘ್ರಗಳಿಗಿಂತ ಬಲಿಷ್ಠವಾದ ಇನ್ನೊಂದು ವ್ಯಾಘ್ರವನ್ನಾಗಿ ಮಾಡಿದನು. ಎಲೈ ರಾಜನೇ! ಮೊದಲು ಬರುತ್ತಿದ್ದ ವ್ಯಾಘ್ರವು ಆ ವ್ಯಾಘ್ರವನ್ನು ನೋಡಿ ಅದನ್ನು ಕೊಲ್ಲಲಿಲ್ಲ.

ಸ ತು ಶ್ವಾ ವ್ಯಾಘ್ರತಾಂ ಪ್ರಾಪ್ಯ ಬಲವಾನ್ ಪಿಶಿತಾಶನಃ।
ನ ಮೂಲಫಲಭೋಗೇಷು ಸ್ಪೃಹಾಮಪ್ಯಕರೋತ್ ತದಾ ॥೨೨॥

ಆ ನಾಯಿಯಾದರೋ ವ್ಯಾಘ್ರವಾಗಿ ಪರಿವರ್ತನೆ ಹೊಂದಿ ಬಲಿಷ್ಠವಾಗಿ ಮಾಂಸಾಹಾರಿಯಾಗಿ ಫಲಮೂಲಗಳಲ್ಲಿ ಅಪೇಕ್ಷೆಯನ್ನು ತೊರೆಯಿತು.

ಯಥಾ ಮೃಗಪತಿರ್ನಿತ್ಯಂ ಪ್ರಕಾಂಕ್ಷತಿ ವನೌಕಸಃ।
ತಥೈವ ಸ ಮಹಾರಾಜ ವ್ಯಾಘ್ರಃ ಸಮಭವತ್ ತದಾ ॥೨೩॥

ಮೃಗರಾಜನು ನಿತ್ಯವೂ ವನಚಾರಿ ಪ್ರಾಣಿಗಳನ್ನು ಬಯಸುವಂತೆ ಎಲೈ ಮಹಾರಾಜನೇ! ಆ ವ್ಯಾಘ್ರವು ಅದೇ ರೀತಿಯಲ್ಲಿ ಆಯಿತು.

ವ್ಯಾಘ್ರಸ್ತೂಟಜಮೂಲಸ್ಥಸ್ತೃಪ್ತಃ ಸುಪ್ತೋ ಹತೈರ್ಮೃಗೈಃ।
ನಾಗಶ್ಚಾಗಾತ್ ತಮುದ್ದೇಶಂ ಮತ್ತೋ ಮೇಘ ಇವೋತ್ಥಿತಃ ॥೨೪॥

ಆ ವ್ಯಾಘ್ರವಾದರೋ ಮೃಗಗಳನ್ನು ಕೊಂದು, ಅವುಗಳ ಮಾಂಸದಿಂದ ತೃಪ್ತವಾಗಿ ಪರ್ಣಶಾಲೆಯ ಬಳಿಯಲ್ಲಿ ಮಲಗಿದ್ದಿತು. ಆಗ ಒಂದು ಮದ್ದಾನೆಯು ದೊಡ್ಡ ಮೋಡದಂತೆ ಆ ಪ್ರದೇಶಕ್ಕೆ ಬಂದಿತು.

ಪ್ರಭಿನ್ನಕರಟಃ ಪ್ರಾಂಶುಃ ಪದ್ಮೀ ವಿತತಮಸ್ತಕಃ।
ಸುವಿಷಾಣೋ ಮಹಾಕಾಯೋ ಮೇಘಗಂಭೀರನಿಸ್ವನಃ ॥೨೫॥

ಅದು ಎತ್ತರವಾಗಿದ್ದು ವಿಸ್ತಾರವಾದ ಶಿರಸ್ಸನ್ನು ಹೊಂದಿದ್ದು, ಒಳ್ಳೆಯ ದಂತಗಳನ್ನು, ದೊಡ್ಡ ಶರೀರವನ್ನು, ಮೇಘಗಂಭೀರವಾದ ನಾದವನ್ನೂ ಹೊಂದಿ, ಗಂಡಸ್ಥಳದಿಂದ ಮದವನ್ನು ಸುರಿಸುತ್ತಿದ್ದಿತು.

ತಂ ದೃಷ್ಟ್ವಾ ಕುಂಜರಂ ಮತ್ತಮಾಯಾಂತಂ ಮದಗರ್ವಿತಮ್।
ವ್ಯಾಘ್ರೋ ಹಸ್ತಿಭಯಾತ್ ತ್ರಸ್ತಸ್ತಮೃಷಿಂ ಶರಣಂ ಯಯೌ ॥೨೬॥

ಮದಭರಿತವಾದ ಮದ್ದಾನೆಯು ತನ್ನೆಡೆಗೆ ಬರುತ್ತಿರುವುದನ್ನು ನೋಡಿ ವ್ಯಾಘ್ರವು ಅದರ ಭಯದಿಂದ ಋಷಿಗೆ ಶರಣುಹೊಂದಿತು.

ತತೋಽನಯತ್ ಕುಂಜರತಾಂ ತಂ ವ್ಯಾಘ್ರಮೃಷಿಸತ್ತಮಃ।
ಮಹಾಮೇಘೋಪಮಂ ದೃಷ್ಟ್ವಾ ತಂ ಸ ಭೀತೋಽಭವದ್ ಗಜಃ ॥೨೭॥

ಆ ಋಷಿಶ್ರೇಷ್ಠನು ಆಗ ಅದನ್ನು ಒಂದು ಗಜವನ್ನಾಗಿ ಮಾಡಿದನು. ದೊಡ್ಡ ಮೇಘದಂತಿರುವ ಈ ಗಜವನ್ನು ನೋಡಿ ಮೊದಲು ಬಂದ ಗಜವು ಭಯದಿಂದ ಹೊರಟು ಹೋಯಿತು.

ತತಃ ಕಮಲಷಂಡಾನಿ ಶಲ್ಯಕೀಗಹನಾನಿ ಚ।
ವ್ಯಚರತ್ ಸ ಮುದಾ ಯುಕ್ತಃ ಪದ್ಮರೇಣುವಿಭೂಷಿತಃ ॥೨೮॥

ಅನಂತರ ಆ ಆನೆಯು ಕಮಲನಾಳಗಳನ್ನು ಶಲ್ಯಕೀಪಕ್ಷಿಗಳು ಗೂಡುಕಟ್ಟುವ ಜೊಂಡುಗಳನ್ನು ಸಂತೋಷದಿಂದ ತಿನ್ನುತ್ತಾ ಪದ್ಮರೇಣುಗಳಿಂದ ಭೂಷಿತವಾಗಿ ತಿರುಗಾಡಿತು.

ಕದಾಚಿದ್ ರಮಮಾಣಸ್ಯ ಹಸ್ತಿನಃ ಸುಸುಖಂ ತದಾ।
ಋಷೇಸ್ತಸ್ಯೋಟಜಸ್ಥಸ್ಯ ಕಾಲೋಽಗಚ್ಛನ್ನಿಶಾನಿಶಮ್ ॥೨೯॥

ಹೀಗೆ ಋಷಿಗಳ ಪರ್ಣಶಾಲೆಯ ಸಮೀಪದಲ್ಲಿ ಸುಖವಾಗಿ ಕಾಲವನ್ನು ಕಳೆಯುತ್ತಿದ್ದ ಆ ಗಜಕ್ಕೆ ಎಷ್ಟೋ ರಾತ್ರಿಗಳು ಕಳೆದವು.

ಅಥಾಜಗಾಮ ತಂ ದೇಶಂ ಕೇಸರೀ ಕೇಸರಾರುಣಃ।
ಗಿರಿಕಂದರಜೋ ಭೀಮಃ ಸಿಂಹೋ ನಾಗಕುಲಾಂತಕಃ ॥೩೦॥

ಅನಂತರ ಒಮ್ಮೆ ಗಜಕುಲವೈರಿಯಾದ ಅರುಣಬಣ್ಣದ ಕೇಸರಗಳನ್ನು ಹೊಂದಿದ ಗಿರಿಗುಹೆಯಲ್ಲಿ ವಾಸಿಸುವ ಒಂದು ಭಯಂಕರವಾದ ಸಿಂಹವು ಅಲ್ಲಿಗೆ ಬಂದಿತು.

ತಂ ದೃಷ್ಟ್ವಾ ಸಿಂಹಮಾಯಾಂತಂ ನಾಗಃ ಸಿಂಹಭಯಾಕುಲಃ।
ಋಷಿಂ ಶರಣಮಾಪೇದೇ ವೇಪಮಾನೋ ಭಯಾತುರಃ ॥೩೧॥

ಬರುತ್ತಿದ್ದ ಸಿಂಹವನ್ನು ನೋಡಿದ ಆನೆಯು ಸಿಂಹದ ಭಯದಿಂದ ವ್ಯಾಕುಲವಾಗಿ ನಡುಗುತ್ತಾ ಭಯಾತುರವಾಗಿ ಋಷಿಗೆ ಶರಣಾಗತವಾಯಿತು.

ತತಃ ಸ ಸಿಂಹತಾಂ ನೀತೋ ನಾಗೇಂದ್ರೋ ಮುನಿನಾ ತದಾ ।
ವನ್ಯಂ ನಾಗಣಯತ್ ಸಿಂಹಂ ತುಲ್ಯಜಾತಿಸಮನ್ವಯಾತ್ ॥೩೨॥

ಆಗ ಆ ಋಷಿಯು ಆ ನಾಗವನ್ನು ಸಿಂಹವನ್ನಾಗಿ ಮಾಡಿದನು. ಆ ಸಿಂಹವು ತನ್ನದೇ ಜಾತಿಯ ವನಸಿಂಹಗಳನ್ನು ಪರಿಗಣಿಸಲೇ ಇಲ್ಲ.

ದೃಷ್ಟ್ವಾ ಚ ಸೋಽನಶತ್ ಸಿಂಹೋ ವನ್ಯೋ ಭೀಸನ್ನವಾಗ್ಬಲಃ ।
ಸ ಚಾಶ್ರಮೇಽವಸತ್ ಸಿಂಹಸ್ತಸ್ಮಿನ್ನೇವ ವನೇ ಸುಖೀ ॥೩೩॥

ಈ ಹೊಸಸಿಂಹವನ್ನು ನೋಡಿದ ಇನ್ನೊಂದು ವನಸಿಂಹವು ಭಯದಿಂದ ವಾಗ್ಬಲವು ಉಡುಗಿಹೋಗಿ ನಾಶವನ್ನು ಹೊಂದಿತು. ಈ ಸಿಂಹವಾದರೋ ಅದೇ ಆಶ್ರಮದಲ್ಲಿ ಸುಖವಾಗಿ ವಾಸಮಾಡಿತು.

ನ ತ್ವನ್ಯೇ ಕ್ಷುದ್ರಪಶವಸ್ತಪೋವನನಿವಾಸಿನಃ ।
ವ್ಯದೃಶ್ಯಂತ ಭಯತ್ರಸ್ತಾ ಜೀವಿತಾಕಾಂಕ್ಷಿಣಃ ಸದಾ ॥೩೪॥

(ತಪೋ)ವನದಲ್ಲಿ ವಾಸಿಸುವ ಕ್ಷುದ್ರಪಶುಗಳು ತಮ್ಮ ಜೀವಿತವನ್ನು ಬಯಸಿ ಭಯದಿಂದ ಕೂಡಿದವುಗಳಾಗಿ ಅಲ್ಲಿ ಕಂಡುಬರಲೇ ಇಲ್ಲ.

ಕದಾಚಿದ್ ಕಾಲಯೋಗೇನ ಸರ್ವಪ್ರಾಣಿವಿಹಿಂಸಕಃ ।
ಬಲವಾನ್ ಕ್ಷತಜಾಹಾರೋ ನಾನಾಸತ್ತ್ವಭಯಂಕರಃ ॥೩೫॥

ಅಷ್ಟಪಾದೋಽರ್ಧನಯನಃ ಶರಭೋ ವನಗೋಚರಃ ।
ತಂ ಸಿಂಹಂ ಹಂತುಮಾಗಚ್ಛನ್ ಮುನೇಸ್ತಸ್ಯ ನಿವೇಶನಮ್ ॥೩೬॥

ಅನಂತರ ಕಾಲಕ್ರಮದಲ್ಲಿ ಒಮ್ಮೆ ಸರ್ವಪ್ರಾಣಿಗಳನ್ನೂ ಕೊಲ್ಲುವ ಬಲಿಷ್ಠವಾದ ರಕ್ತಾಹಾರಿಯಾದ ಎಲ್ಲ ಪ್ರಾಣಿಗಳಿಗೂ ಭಯವನ್ನುಂಟು ಮಾಡುವ ಎಂಟು ಪಾದ-

ಗಳನ್ನೂ ಮತ್ತು ನಾಲ್ಕು ಕಣ್ಣುಗಳನ್ನೂ ಹೊಂದಿದ ವನವಾಸಿಯಾದ ಒಂದು ಶರಭವು ಆ ಸಿಂಹವನ್ನು ಕೊಲ್ಲಲು ಆ ಮುನಿಯ ಆಶ್ರಮದ ಬಳಿಗೆ ಬಂದಿತು.

ತಂ ಮುನಿಃ ಶರಭಂ ಚಕ್ರೇ ಬಲೋತ್ಕಟಮರಿಂದಮ।
ತತಃ ಸ ಶರಭೋ ವನ್ಯೋ ಮುನೇಃ ಶರಭಮಗ್ರತಃ।
ದೃಷ್ಟ್ವಾ ಬಲಿನಮತ್ಯುಗ್ರಂ ದ್ರುತಂ ಸಂಪ್ರಾದ್ರವದ್ ಭಯಾತ್ ॥೩೭॥

ಎಲೈ ಅರಿಂದಮನೇ! ಮುನಿಯು ಆಗ ಆ ಸಿಂಹವನ್ನು ಬಲೋತ್ಕಟವಾದ ಶರಭವನ್ನಾಗಿ ಮಾಡಿದನು. ಆಗ ಮೊದಲು ಬಂದ ಕಾಡಿನ ಶರಭವು ತನ್ನ ಮುಂಭಾಗದಲ್ಲಿ ತನಗಿಂತ ಬಲಿಷ್ಠವೂ ಉಗ್ರವೂ ಆದ ಆ ಋಷಿಯ ಶರಭವನ್ನು ನೋಡಿ ಭಯದಿಂದ ಬೇಗ ಓಡಿಹೋಯಿತು.

ಸ ಏವಂ ಶರಭಸ್ಥಾನೇ ನ್ಯಸ್ತೋ ವೈ ಮುನಿನಾ ತದಾ।
ಮುನೇಃ ಪಾರ್ಶ್ವಗತೋ ನಿತ್ಯಂ ಶಾರಭ್ಯಂ ಸುಖಮಾಪ್ತವಾನ್ ॥೩೮॥

ಹೀಗೆ ಶರಭರೂಪವನ್ನು ಹೊಂದಿದ ಆ ಗಜವು ಮುನಿಯ ಪಾರ್ಶ್ವದಲ್ಲಿ ವಾಸಿಸಿ ನಿತ್ಯವೂ ಶರಭಕ್ಕೆ ಯೋಗ್ಯವಾದ ಸುಖವನ್ನು ಹೊಂದಿತು.

ತತಃ ಶರಭಸಂತ್ರಸ್ತಾಃ ಸರ್ವೇ ಮೃಗಗಣಾ ವನಾತ್।
ದಿಶಃ ಸಂಪ್ರಾದ್ರವನ್ ರಾಜನ್ ಭಯಾಜ್ಜೀವಿತಕಾಂಕ್ಷಿಣಃ ॥೩೯॥

ಆಗ ಎಲೈ ರಾಜನೇ! ಶರಭವನ್ನು ನೋಡಿ ಹೆದರಿದ ಆ ಕಾಡಿನ ಮೃಗ-ಸಮೂಹಗಳೆಲ್ಲವೂ ತಮ್ಮ ಜೀವಿತವನ್ನು ಉಳಿಸಿಕೊಳ್ಳಲು ಅಲ್ಲಿಂದ ದಿಕ್ಕು ದೆಸೆಯಿಲ್ಲದೇ ಓಡಿಹೋದವು.

ಶರಭೋಽಪ್ಯತಿಸಂದುಷ್ಟೋ ನಿತ್ಯಂ ಪ್ರಾಣಿವಧೇ ರತಃ।
ಫಲಮೂಲಾಶನಂ ಶಾಂತಂ ನೈಚ್ಛತ್ ಸ ಪಿಶಿತಾಶನಃ ॥೪೦॥

ಈ ಶರಭವಾದರೂ ಅತ್ಯಂತ ದುಷ್ಟವಾಗಿ ಮಾಂಸಾಹಾರಿಯಾಗಿ ನಿತ್ಯವೂ

ಪ್ರಾಣಿವಧೆಯಲ್ಲಿಯೇ ರತವಾಗಿ ಶಾಂತವಾದ ಫಲಮೂಲಗಳ ಭೋಜನವನ್ನು ಬಯಸಲಿಲ್ಲ.

ತತೋ ರುಧಿರತರ್ಷೇಣ ಬಲಿನಾ ಶರಭೋಽನ್ವಿತಃ।
ಇಯೇಷ ತಂ ಮುನಿಂ ಹಂತುಮಕೃತಜ್ಞಃ ಶ್ವಯೋನಿಜಃ ॥೪೧॥

ಅನಂತರ ನಾಯಿಯೋನಿಯಿಂದ ಹುಟ್ಟಿಬಂದ ಕೃತಘ್ನತೆಯುಳ್ಳ ಆ ಶರಭವು ಬಲವಾದ ರಕ್ತಪಿಪಾಸೆಯಿಂದ ಕೂಡಿ ಆ ಮುನಿಯನ್ನೇ ಕೊಲ್ಲಲು ಬಯಸಿತು.

ಚಿಂತಯಾಮಾಸ ಚ ತದಾ ಶರಭಃ ಶ್ವಾನಪೂರ್ವಕಃ।
ಅಸ್ಯ ಪ್ರಭಾವಾತ್ ಸಂಪ್ರಾಪ್ತೋ ವಾಜ್ಞಾತ್ರೇಣ ತು ಕೇವಲಮ್ ॥೪೨॥

ಶರಭತ್ವಂ ಸುದುಷ್ಪ್ರಾಪಂ ಸರ್ವಭೂತಭಯಂಕರಮ್।

ಮೊದಲು ನಾಯಿಯಾಗಿದ್ದ ಆ ಶರಭವು ಹೀಗೆ ಚಿಂತಿಸಿತು. ಕೇವಲ ಅವನ ಮಾತಿನಿಂದ ಮತ್ತು ಅವನ ಪ್ರಭಾವದಿಂದ ನಾನು ಸರ್ವಭೂತಭಯಂಕರವಾದ ಪಡೆಯಲು ಕಷ್ಟಸಾಧ್ಯವಾದ ಶರಭಶರೀರವನ್ನು ಪಡೆದಿದ್ದೇನೆ.

ಅನ್ಯೇಽಪ್ಯತ್ರ ಭಯತ್ರಸ್ತಾ ಮೃಗಾಃ ಪಕ್ಷಿಗಣಾಸ್ತಥಾ ॥೪೩॥

ತೇಷಾಮಪಿ ಕದಾಚಿಚ್ಚ ಶರಭತ್ವಂ ಪ್ರಯಚ್ಛತಿ।
ಸರ್ವಸತ್ತ್ವೋತ್ತಮೇ ಲೋಕೇ ಬಲಂ ಯತ್ರ ಪ್ರತಿಷ್ಠಿತಮ್ ॥೪೪॥

ಈ ವನದಲ್ಲಿ ಭಯಗೊಂಡ ಇನ್ನೂ ಅನೇಕ ಮೃಗಗಳೂ ಪಕ್ಷಿಸಮೂಹಗಳೂ ಇವೆ. ಈ ಮುನಿಯು ಸರ್ವಪ್ರಾಣಿಗಳಿಂದ ಕೂಡಿದ ಈ ಲೋಕದಲ್ಲಿ ಎಲ್ಲಿ ಮಹಾಬಲವಿದೆಯೋ ಅಂತಹ ಶರಭತ್ವವನ್ನು ಅವುಗಳಿಗೂ ಕೊಡಬಹುದು.

ಪಕ್ಷಿಣಾಮಪ್ಯಯಂ ದದ್ಯಾತ್ ಕದಾಚಿದ್ ಗಾರುಡಂ ಬಲಮ್।
ಯಾವದನ್ಯತ್ರ ಸಂಪ್ರೀತಃ ಕಾರುಣ್ಯಂ ಚ ಸಮಾಶ್ರಿತಃ ॥೪೫॥

ಸ ದದಾತಿ ಬಲಂ ತುಷ್ಟಂ ಸತ್ತ್ವಸ್ಯಾನ್ಯಸ್ಯ ಕಸ್ಯಚಿತ್।

ತಾವದೇನಮಹಂ ವಿಪ್ರಂ ವಧಿಷ್ಯಾಮಿ ಚ ಶೀಘ್ರತಃ।
ಸ್ಥಾತುಂ ಮಯಾ ಶಕ್ಯಮಿಹ ಮುನಿಘಾತಾನ್ನ ಸಂಶಯಃ ॥೪೬॥

ಪಕ್ಷಿಗಳಿಗೂ ಇವನು ಗರುಡನಷ್ಟು ಬಲವನ್ನು ಕೊಡಬಹುದು. ಇವನು ಪ್ರೀತಿಯಿಂದ ಮತ್ತುಕರುಣೆಯಿಂದ ಉಳಿದ ಪ್ರಾಣಿಗಳಿಗೆ ಅಂತಹ ಬಲವನ್ನು ಕೊಡುವುದಕ್ಕಿಂತ ಮೊದಲೇ ನಾನುಶೀಘ್ರವಾಗಿ ಈ ಮುನಿಯನ್ನು ಕೊಂದು-ಬಿಡುವೆನು. ಮುನಿಯನ್ನು ಕೊಂದರೂ ನಾನು ಈ ವನದಲ್ಲಿ ವಾಸಿಸ ಬಹುದು ಎಂಬುದರಲ್ಲಿ ಸಂಶಯವಿಲ್ಲ. (ಎಂದು ಚಿಂತಿಸಿತು)

ತತಸ್ತೇನ ತಪಃಶಕ್ತ್ಯಾ ವಿದಿತೋ ಜ್ಞಾನಚಕ್ಷುಷಾ।
ವಿಜ್ಞಾಯ ಚ ಮಹಾಪ್ರಾಜ್ಞೋ ಮುನಿಃ ಶ್ವಾನಂ ತಮುಕ್ತವಾನ್ ॥೪೭॥

ಆಗ ಮುನಿಯು ತನ್ನ ಜ್ಞಾನಚಕ್ಷುಸ್ಸಿನಿಂದ ಮತ್ತು ತಪಃಶಕ್ತಿಯಿಂದ ಆ ಶರಭದ ಚಿಂತನೆಯ ವಿಷಯವನ್ನು ತಿಳಿದನು. ಅದನ್ನು ತಿಳಿದ ಮಹಾಪ್ರಾಜ್ಞನಾದ ಆ ಮುನಿಯು ಆ ಶ್ವಾನವನ್ನು ಕುರಿತು ಹೇಳಿದನು.

ಮುನಿಃ

ಅಹಮಗ್ನಿಪ್ರಭೋ ನಾಮ ಮುನಿರ್ಭೃಗುಕುಲಾನ್ವಯಃ।
ಮನಸಾ ನಿರ್ದಹೇ ಸರ್ವಂ ಜಗತ್ ಸಂಧಾರಯಾಮಿ ಚ ॥೪೮॥

ನಾನು ಭೃಗುಕುಲದಲ್ಲಿ ಜನಿಸಿದ ಅಗ್ನಿಪ್ರಭ ಎಂಬ ಮುನಿ. ನಾನು ನನ್ನ ಮನಸ್ಸಿನಿಂದಲೇ ಎಲ್ಲ ಜಗತ್ತನ್ನೂ ಸುಡುತ್ತೇನೆ ಅಥವಾ ಉಳಿಸುತ್ತೇನೆ.

ಮಮ ವಶ್ಯಂ ಜಗತ್ ಸರ್ವಂ ದೇವಾನ್ ವರ್ಜ್ಯಂ ಚರಾಚರಮ್।
ಸಂತಿ ದೇವಾಶ್ಚ ಮೇ ಭೀತಾಃ ಸ್ವಧರ್ಮಂ ನ ತ್ಯಜಂತಿ ಯೇ।
ಸ್ವಧರ್ಮಾಚ್ಚಾಲಿತಾನ್ ಸರ್ವಾನ್ ವಾಜ್ಯಾತ್ರೇಣೈವ ನಿರ್ದಹೇ ॥೪೯॥

ದೇವತೆಗಳನ್ನು ಬಿಟ್ಟು ಉಳಿದ ಚರಾಚರವಾದ ಜಗತ್ತೆಲ್ಲವೂ ನನ್ನ ಅಧೀನ-ವಾದುದು. ತಮ್ಮ ಧರ್ಮವನ್ನು ಆಚರಿಸುವ ದೇವತೆಗಳೂ ನನಗೆ ಹೆದರುತ್ತಾರೆ.

ತಮ್ಮ ಧರ್ಮವನ್ನು ತ್ಯಜಿಸಿದ ಎಲ್ಲರನ್ನೂ ನಾನು ಕೇವಲ ಮಾತಿನಿಂದಲೇ ಸುಟ್ಟು-ಬಿಡುತ್ತೇನೆ.

ಕಿಮಂಗ ತ್ವಂ ಮಯಾऽನೇನ ಶರಭತ್ವಮನಾಮಯಮ್ ।
ಕ್ರೂರಃ ಸ ಸರ್ವಭೂತೇಷು ಹೀನಶ್ಚಾಶುಚಿರೇವ ಚ ॥೫೦॥

ಎಲೈ ಪ್ರೀತಿಪಾತ್ರನೇ! ಹೀನನೂ, ಅಶುಚಿಯೂ ಆದ ನೀನು ಈ ನನ್ನಿಂದ ಸರ್ವಭೂತಗಳಲ್ಲಿ ಕ್ರೂರವಾದ ಶರಭಶರೀರವನ್ನು ಹೊಂದಿದೆ.

ಶ್ವಾ ತ್ವಂ ದ್ವೀಪಿತ್ವಮಾಪನ್ನೋ ದ್ವೀಪೀ ವ್ಯಾಘ್ರತ್ವಮಾಗತಃ ।
ವ್ಯಾಘ್ರೋ ನಾಗೋ ಮದಪಟುರ್ನಾಗಃ ಸಿಂಹತ್ವಮಾಪ್ತವಾನ್ ॥೫೧॥

ನಾಯಿಯಾಗಿದ್ದ ನೀನು ಚಿರತೆಯಾದೆ; ಚಿರತೆಯಾಗಿದ್ದ ನೀನು ವ್ಯಾಘ್ರನಾದೆ; ವ್ಯಾಘ್ರವಾಗಿದ್ದವನು ಮದಗಜವಾದೆ; ಮದಗಜವಾಗಿದ್ದವನು ಸಿಂಹತ್ವವನ್ನು ಹೊಂದಿದೆ.

ಸಿಂಹೋऽತಿಬಲಸಂಯುಕ್ತೋ ಭೂಯಃ ಶರಭತಾಂ ಗತಃ ।
ಮಯಾ ಸ್ನೇಹಪರೀತೇನ ನ ವಿಮೃಷ್ಟಃ ಕುಲಾನ್ವಯಃ ॥೫೨॥

ಸಿಂಹವು ಅತಿಬಲದಿಂದ ಕೂಡಿದ ಶರಭನಾದೆ. ಸ್ನೇಹದಿಂದ ಕೂಡಿದ ನಾನು ನಿನಗೆ ಇದೆಲ್ಲವನ್ನೂ ಮಾಡಿದೆ. ಆದರೆ ನಿನ್ನ ಮೊದಲಿನ ಕುಲದ ಬುದ್ಧಿಯನ್ನು ನಾನು ಚಿಂತಿಸಲಿಲ್ಲ.

ಯಸ್ಮಾದೇವಮಪಾಪಂ ಮಾಂ ಪಾಪ ಹಿಂಸಿತುಮಿಚ್ಛತಿ ।
ತಸ್ಮಾತ್ ಸ್ವಯೋನಿಮಾಪನ್ನಃ ಶ್ವೈವ ತ್ವಂ ಹಿ ಭವಿಷ್ಯತಿ ॥೫೩॥

ನಿರಪರಾಧಿಯಾದ ನನಗೆ ಎಲೈ ಪಾಪಿಯೇ! ಹಿಂಸೆ ಮಾಡಲು ನೀನು ಬಯಸುವುದರಿಂದ ನೀನು ನಿನ್ನ ಮೊದಲಿನ ಯೋನಿಗೇ ಹೋಗಿ ನಾಯಿಯೇ ಆಗುವಿ.

ತತೋ ಮುನಿಜನದ್ವೇಷಾದ್ ದುಷ್ಟಾತ್ಮಾ ಶ್ವಾಕೃತೋಽಬುಧಃ।
ಋಷಿಣಾ ಶರಭಃ ಶಪ್ತಃ ಸ್ವಂ ರೂಪಂ ಪುನರಾಪ್ತವಾನ್ ॥೫೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟಾದಶಾಧಿಕಶತತಮೋಽಧ್ಯಾಯಃ ॥೧೧೮॥

ಅನಂತರ ಮುನಿಯನ್ನು ದ್ವೇಷಮಾಡಿದ ಕಾರಣದಿಂದ ಅವಿವೇಕಿಯೂ ದುಷ್ಟವೂ ಆದ ಆ ಶರಭವು ನಾಯಿಯಾಯಿತು. ಋಷಿಯ ಶಾಪಕ್ಕೆ ಒಳಗಾದ ಶರಭವು ತನ್ನ ಮೊದಲಿನ ರೂಪವನ್ನು ಹೊಂದಿತು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೧೮ನೆಯ ಅಧ್ಯಾಯವು ಮುಗಿಯಿತು

—0—

೧೧೯. ನೂರಹತ್ತೊಂಬತ್ತನೆಯ ಅಧ್ಯಾಯ

ಸಚಿವ, ರಾಜ ಮತ್ತು ಯೋಧರ ಲಕ್ಷಣಕಥನ

ಭೀಷ್ಮಃ

ಸ ಶ್ವಾ ಪ್ರಕೃತಿಮಾಪನ್ನಃ ಪರಂ ದೈನ್ಯಮುಪಾಗಮತ್।
ಋಷಿಣಾ ಹುಂಕೃತಃ ಪಾಪಸ್ತಪೋವನಬಹಿಷ್ಕೃತಃ ॥೧॥

ಭೀಷ್ಮರು – ಆ ನಾಯಿಯು ತನ್ನ ಮೊದಲ ಸ್ವಭಾವವನ್ನು ಹೊಂದಿ ಬಹಳ ದೈನ್ಯವನ್ನು ಹೊಂದಿತು. ಋಷಿಯಿಂದ ಹುಂಕರಿಸಲ್ಪಟ್ಟ ಆ ಪಾಪಿಯು ತಪೋವನದಿಂದ ಹೊರಗೆ ಹೋಯಿತು.

ಏವಂ ರಾಜ್ಞಾ ಮತಿಮತಾ ವಿದಿತ್ವಾ ಶೀಲಶೌಚತಾಮ್।
ಆರ್ಜವಂ ಪ್ರಕೃತಿಂ ಸತ್ತ್ವಂ ಕುಲಂ ವೃತ್ತಂ ಶ್ರುತಂ ದಮಮ್ ॥೨॥

ಅನುಕ್ರೋಶಂ ಬಲಂ ವೀರ್ಯಂ ಭಾವಂ ಸಂಪ್ರಶಮಂ ಕ್ಷಮಾಮ್।
ಭೃತ್ಯಾ ಯೇ ಯತ್ರ ಯೋಗ್ಯಾಃ ಸ್ಯುಸ್ತತ್ರ ಸ್ಥಾಪ್ಯಾಃ ಸುಶಿಕ್ಷಿತಾಃ ॥೩॥

ಹೀಗೆ ಮೇಧಾವಿಯಾದ ರಾಜನು ಮನುಷ್ಯರ ಶೀಲ, ಶೌಚ, ನೇರವಾದ ನಡತೆ, ಸ್ವಭಾವ, ಧೈರ್ಯ, ಕುಲ, ವಿದ್ಯೆ, ಇಂದ್ರಿಯಜಯ, ದಯೆ, ಬಲ, ಪರಾಕ್ರಮ, ಶಾಂತಿ, ಕ್ಷಮೆ, ಭಕ್ತಿ - ಇವುಗಳನ್ನು ತಿಳಿದು ಯಾವ ಸೇವಕರು ಎಲ್ಲಿಯೋಗ್ಯರೋ ಅಲ್ಲಿ ಅಂತಹ ಸುಶಿಕ್ಷಿತಸೇವಕರನ್ನು ನಿಯೋಜಿಸಬೇಕು.

ನಾಪರೀಕ್ಷ್ಯ ಮಹೀಪಾಲಃ ಪ್ರಕರ್ತುಂ ಭೃತ್ಯಮರ್ಹತಿ।
ಅಕುಲೀನನರಾಕೀರ್ಣೋ ನ ರಾಜಾ ಸುಖಮೇಧತೇ ॥೪॥

ರಾಜನು ಪರೀಕ್ಷಿಸದೇ ಭೃತ್ಯರನ್ನು ನಿಯಮಿಸಬಾರದು. ಅಕುಲೀನರಾದ ಸೇವಕರಿಂದ ತುಂಬಿದ ರಾಜನು ಸುಖವನ್ನು ಹೊಂದುವುದಿಲ್ಲ.

ಕುಲಜಃ ಪ್ರಾಕೃತೋ ರಾಜ್ಞಾ ತತ್ಕುಲೀನತಯಾ ಸದಾ।
ನ ಪಾಪೇ ಕುರುತೇ ಬುದ್ಧಿಂ ನಿಂದ್ಯಮಾನೋಽಪ್ಯನಾಗಸಿ ॥೫॥

ಸತ್ಕುಲಪ್ರಸೂತನಾದವನು ಒಳ್ಳೆಯ ಕುಲದಿಂದ ಬಂದ ಕಾರಣದಿಂದ ಅವನು ಅಪರಾಧಮಾಡದೆಯೇ ರಾಜನಿಂದ ನಿಂದಿಸಲ್ಪಟ್ಟರೂ ರಾಜನ ವಿಷಯದಲ್ಲಿ ಕೆಟ್ಟ ಬುದ್ಧಿಯನ್ನು ಹೊಂದುವುದಿಲ್ಲ. ರಾಜನು ಅಂತಹವನನ್ನು ತನ್ನ ಸಪ್ತಪ್ರಕೃತಿಗಳಲ್ಲಿ ನಿಯೋಜಿಸಬೇಕು.

ಅಕುಲೀನಸ್ತು ಪುರುಷಃ ಪ್ರಾಕೃತಃ ಸಾಧುಸಂಕ್ಷಯಾತ್।
ದುರ್ಲಭೈಶ್ವರ್ಯತಾಂ ಪ್ರಾಪ್ತೋ ನಿಂದಿತಃ ಶತ್ರುತಾಂ ವ್ರಜೇತ್ ॥೬॥

ರಾಜನು ಸಜ್ಜನರು ದೊರೆಯದ ಕಾರಣ ಅಕುಲೀನರನ್ನು ಸೇವಕರನ್ನಾಗಿ ನಿಯೋಜಿಸಿದರೆ ದುರ್ಲಭವಾದ ಐಶ್ವರ್ಯದಿಂದ ಹೊಂದಿಸಲ್ಪಟ್ಟರೂ ರಾಜನಿಂದ ನಿಂದಿತನಾದರೆ ರಾಜನ ಶತ್ರುವಾದಾನು.

ಕಾಕಃ ಶ್ವಾನೋಽಕುಲೀನಶ್ಚ ಬಿಡಾಲಃ ಸರ್ಪ ಏವ ಚ।
ಅಕುಲೀನಾ ಚ ಯಾ ನಾರೀ ತುಲ್ಯಾಸ್ತೇ ಪರಿಕೀರ್ತಿತಾಃ ॥೭॥

ಕಾಗೆ, ನಾಯಿ, ಬೆಕ್ಕು, ಸರ್ಪ, ಅಕುಲೀನಳಾದ ನಾರಿ ಎಲ್ಲರೂ ಸಮಾನರಾದವರು ಎಂದು ಹೇಳಲ್ಪಡುತ್ತಾರೆ.

ಲೋಕಪಾಲಾಃ ಸದೋದ್ವಿಗ್ನಾಃ ಪಶ್ಯಂತ್ಯಕುಲಜಾನ್ ಯಥಾ।
ನಾರೀಂ ವಾ ಪುರುಷಂ ವಾऽಥ ಶೀಲಂ ತತ್ರಾಪಿ ಕಾರಣಮ್ ॥೮॥

ರಾಜರು ದುಷ್ಕುಲದಿಂದ ಬಂದ ಸೇವಕರನ್ನು ನೋಡಿ ಅವರು ನಾರಿಯರಾಗಿರಲಿ ಅಥವಾ ಪುರುಷರಾಗಿರಲಿ ಯಾವಾಗಲೂ ಭಯಪಡುತ್ತಾರೆ. ಅದಕ್ಕೆ ಆ ಭೃತ್ಯರ ಶೀಲವೇ ಕಾರಣ.

ದುಷ್ಕುಲೀನಾ ಚ ಯಾ ಸ್ತ್ರೀ ಸ್ಯಾದ್ ದುಷ್ಕುಲೀನಶ್ಚ ಯಃ ಪುಮಾನ್।
ಅಹಿಂಸಾಶೀಲಸಂಯೋಗಾದ್ ಧರ್ಮಶ್ಚಾಕುಲತಾಂ ವ್ರಜೇತ್ ॥೯॥

ದುಷ್ಕುಲೀನರಾದ ನಾರಿಯನ್ನಾಗಲೀ ಪುರುಷರನ್ನಾಗಲೀ ನೇಮಿಸಿದರೆ ರಾಜಧರ್ಮವು ಅಕುಲತೆಯನ್ನು ಹೊಂದುತ್ತದೆ.

ಧರ್ಮಂ ಪ್ರತಿ ಮಹಾರಾಜ ಶ್ಲೋಕಾನಾಹ ಬೃಹಸ್ಪತಿಃ।
ಶೃಣು ಸರ್ವಾನ್ ಮಹೀಪಾಲ ಹೃದಿ ತಾಂಶ್ಚ ಕರಿಷ್ಯಸಿ ॥೧೦॥

ಎಲೈ ಮಹಾರಾಜನೇ! ಧರ್ಮದ ವಿಷಯದಲ್ಲಿ ಬೃಹಸ್ಪತಿಗಳು ಶ್ಲೋಕಗಳನ್ನು ಹೇಳಿದ್ದಾರೆ. ಎಲೈ ಮಹೀಪಾಲನೇ! ಅವುಗಳನ್ನು ಕೇಳಿ ಮನಸ್ಸಿನಲ್ಲಿ ಧರಿಸು.

ಅಸಿತಂ ಸಿತಕರ್ಮಾಣಂ ತಥಾ ಜಾತಂ ತಪಸ್ವಿನಮ್।
ವೃತ್ತಸ್ಥಮಪಿ ಚಂಡಾಲಂ ತಂ ದೇವಾ ಬ್ರಾಹ್ಮಣಂ ವಿದುಃ ॥೧೧॥

ಮನಸ್ಸಿನಲ್ಲಿ ಬಂಧನರಹಿತನೂ ಬಾಹ್ಯದಲ್ಲಿ ಸ್ರಕ್‌ಚಂದನಧಾರಣಾದಿಸತ್ಕರ್ಮವನ್ನು ಮಾಡುವವನೂ ತಪಸ್ವಿಯೂ ಆದ ಪ್ರಾಕೃತಜನದಂತಿರುವವನು ಒಳ್ಳೆಯ ನಡತೆಯನ್ನು ಹೊಂದಿರುವವನಾದರೆ ಅಂತಹ ಚಂಡಾಲನನ್ನೂ ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯದಿ ಘಾತಯತೇ ಕಶ್ಚಿತ್ ಪಾಪಸತ್ತ್ವಂ ಪ್ರಜಾಹಿತಃ।
ಸರ್ವಸತ್ತ್ವಹಿತಾರ್ಥಾಯ ನ ತೇನಾಸೌ ವಿಹಿಂಸಕಃ ॥೧೨॥

ಸರ್ವಪ್ರಾಣಿಗಳ ಹಿತಕ್ಕಾಗಿ ಪ್ರಜಾಹಿತದಲ್ಲಿ ರತನಾದ ಒಬ್ಬನು ಕ್ರೂರಪ್ರಾಣಿಯನ್ನು ಕೊಂದರೂ ಅವನು ಅದರಿಂದ ಹಿಂಸಕನೆನಿಸಿಕೊಳ್ಳುವುದಿಲ್ಲ.

ದ್ವೀಪಿನಂ ಶರಭಂ ಸಿಂಹಂ ವ್ಯಾಘ್ರಂ ಕುಂಜರಮೇವ ಚ।
ಮಹಿಷಂ ಚ ವರಾಹಂ ಚ ಸೂಕರಂ ಶ್ವಾನಪನ್ನಗಾನ್ ॥೧೩॥

ಗೋಬ್ರಾಹ್ಮಣಹಿತಾರ್ಥಾಯ ಬಾಲಸ್ತ್ರೀರಕ್ಷಣಾಯ ಚ।
ವೃದ್ಧಾತುರಪರಿತ್ರಾಣೇ ಯೋ ಹಿನಸ್ತಿ ಸ ಧರ್ಮವಿತ್ ॥೧೪॥

ಗೋಬ್ರಾಹ್ಮಣರ ಹಿತಕ್ಕಾಗಿ ಬಾಲರ ಮತ್ತು ಸ್ತ್ರೀಯರ ರಕ್ಷಣೆಗಾಗಿ, ವೃದ್ಧರ ಮತ್ತು ರೋಗಿಗಳ ರಕ್ಷಣೆಗಾಗಿ ಯಾವನು ಚಿರತೆಯನ್ನಾಗಲೀ, ಶರಭವನ್ನಾಗಲೀ, ಸಿಂಹವ್ಯಾಘ್ರಗಜಗಳನ್ನಾಗಲೀ, ಮಹಿಷವರಾಹಗಳನ್ನಾಗಲೀ, ಶ್ವಾನಸರ್ಪಗಳನ್ನಾಗಲೀ ಕೊಲ್ಲುತ್ತಾನೆಯೋ ಅವನು ಧರ್ಮಗಳನ್ನು ತಿಳಿದವನು.

ಬ್ರಾಹ್ಮಣಃ ಪಾಪಕರ್ಮಾ ಚ ಮ್ಲೇಚ್ಛೋ ವಾ ಧಾರ್ಮಿಕಃ ಶುಚಿಃ।
ಶ್ರೇಯಾಂಸ್ತತ್ರ ಭವೇನ್ಮ್ಲೇಚ್ಛೋ ಬ್ರಾಹ್ಮಣಃ ಪಾಪಕೃತ್ತಮಃ ॥೧೫॥

ಪಾಪಕರ್ಮವನ್ನು ಮಾಡುವ ಬ್ರಾಹ್ಮಣ ಮತ್ತು ಧಾರ್ಮಿಕನೂ ಶುಚಿಯೂ ಆದ ಒಬ್ಬ ಮ್ಲೇಚ್ಛ ಇವರಿಬ್ಬರಲ್ಲಿ ಮ್ಲೇಚ್ಛನು ಶ್ರೇಷ್ಠನಾದವನು; ಬ್ರಾಹ್ಮಣನು ಪಾಪಿಗಳಲ್ಲಿ ಅಗ್ರಗಣ್ಯನಾದವನು.

ದುಷ್ಕುಲೀನಃ ಕುಲೀನೋ ವಾ ಯಃ ಕಶ್ಚಿಚ್ಛೀಲವಾನ್ ನರಃ।
ಪ್ರಕೃತಿಂ ತಸ್ಯ ವಿಜ್ಞಾಯ ಸ್ಥಿರಾಂ ವಾ ಯದಿ ವಾಽಸ್ಥಿರಾಮ್ ॥೧೬॥

ಶೀಲಂ ವಾಽನುತ್ತಮಂ ಕರ್ಮ ಕುರ್ಯಾದ್ ರಾಜ್ಞಾ ಸಮಾಹಿತಃ।
ನಿಯುಂಜೀತ ಮಹೀಪಾಲೋ ದುರ್ವೃತ್ತಂ ಪಾಪಕರ್ಮಸು ॥೧೭॥

ದುಷ್ಕುಲೀನನಾಗಲೀ ಅಥವಾ ಕುಲೀನನಾಗಲೀ ಯಾವನು ಒಳ್ಳೆಯ ಶೀಲವನ್ನು ಹೊಂದಿರುವಂತೆ ಕಾಣುತ್ತಾನೆಯೋ ರಾಜನು ಅವನಲ್ಲಿ ಕಾಣುವ ಶೀಲವು ಸ್ವಾಭಾವಿಕವೋ ಅಸ್ವಾಭಾವಿಕವೋ ಎಂದು ತಿಳಿದು ರಾಜನು ಅವನನ್ನು ತನ್ನ ಸೇವಾಕರ್ಮದಲ್ಲಿ ತೊಡಗಿಸಿದರೆ ಅವನು ಶ್ರೇಷ್ಠವಾದ ಕರ್ಮವನ್ನು ಮಾಡುವನು. ದುರ್ನಡತೆಯುಳ್ಳವನನ್ನು ಪಾಪಕರ್ಮಗಳಲ್ಲಿ ನಿಯೋಜಿಸಬೇಕು.

ಕುಲೀನಂ ಶಿಕ್ಷಿತಂ ಪ್ರಾಜ್ಞಂ ಜ್ಞಾನವಿಜ್ಞಾನಕೋವಿದಮ್ ।
ಸರ್ವಶಾಸ್ತ್ರಾರ್ಥತತ್ತ್ವಜ್ಞಂ ಸಹಿಷ್ಣುಂ ದೇಶಜಂ ತಥಾ ॥೧೮॥

ಕೃತಜ್ಞಂ ಬಲವಂತಂ ಚ ಕ್ಷಾಂತಂ ದಾಂತಂ ಜಿತೇಂದ್ರಿಯಮ್ ।
ಅಲುಬ್ಧಂ ಲಬ್ಧಸಂತುಷ್ಟಂ ಸ್ವಾಮಿಮಿತ್ರಬುಭೂಷಕಮ್ ॥೧೯॥

ಸಚಿವಂ ದೇಶಕಾಲಜ್ಞಂ ಸರ್ವಸಂಗ್ರಹಣೇ ರತಮ್ ।
ಸಂಸ್ಕೃತಂ ಯುಕ್ತವಚನಂ ಹಿತೈಷಿಣಮತಂದ್ರಿತಮ್ ॥೨೦॥

ಯುಕ್ತಾಚಾರಂ ಸ್ವವಿಷಯೇ ಸಂಧಿವಿಗ್ರಹಕೋವಿದಮ್ ।
ಶಸ್ತಂ ತ್ರಿವರ್ಗವೇತ್ತಾರಂ ಪೌರಜಾನಪದಪ್ರಿಯಮ್ ॥೨೧॥

ಸೇನಾವ್ಯೂಹನತತ್ತ್ವಜ್ಞಂ ಬಲಹರ್ಷಣಕೋವಿದಮ್ ।
ಇಂಗಿತಾಕಾರತತ್ತ್ವಜ್ಞಂ ಯಾತ್ರಾಸೇನಾವಿಶಾರದಮ್ ॥೨೨॥

ಹಸ್ತಿಶಿಕ್ಷಾಶತತ್ತ್ವಜ್ಞಮಹಂಕಾರವಿವರ್ಜಿತಮ್ ।
ಪ್ರಗಲ್ಭಂ ದಕ್ಷಿಣಂ ದಾಂತಂ ಬಲಿನಂ ಯಕ್ತಮಂತ್ರಿಣಮ್ ॥೨೩॥

ಚೌಕ್ಷಂ ಚೌಕ್ಷಜನಾಕೀರ್ಣಂ ಸುವೇಷಂ ಸುಖದರ್ಶನಮ್ ।
ನಾಯಕಂ ನೀತಿಕುಶಲಂ ಗುಣೈ ಷಡ್ಭಿಃ ಸಮನ್ವಿತಮ್ ॥೨೪॥

ಅಸ್ತಬ್ಧಂ ಪ್ರಶ್ರಿತಂ ಶಕ್ತಂ ಮೃದುವಾದಿನಮೇವ ಚ ।
ಧೀರಂ ಶೂರಂ ಮಹರ್ದ್ಧಿಂ ಚ ದೇಶಕಾಲೋಪಪಾದಕಮ್ ॥೨೫॥

ಸಚಿವಂ ಯಃ ಪ್ರಕುರುತೇ ನಚೈನಮವಮನ್ಯತೇ।
ತಸ್ಯ ವಿಸ್ತೀರ್ಯತೇ ರಾಜ್ಯಂ ಜ್ಯೋತ್ಸ್ನಾ ಗ್ರಹಪತೇರಿವ ॥೨೬॥

ಕುಲೀನನೂ, ಶಿಕ್ಷಿತನೂ, ಪ್ರಾಜ್ಞನೂ, ಜ್ಞಾನವಿಜ್ಞಾನಕೋವಿದನೂ, ಸರ್ವಶಾಸ್ತ್ರಾರ್ಥತತ್ವವನ್ನು ತಿಳಿದವನೂ, ಸಹನಶೀಲನೂ, ತನ್ನ ದೇಶದವನೂ, ಕೃತಜ್ಞನೂ, ಬಲಿಷ್ಠನೂ, ಕ್ಷಮೆಯುಳ್ಳವನೂ, ಜಿತೇಂದ್ರಿಯನೂ, ಲೋಭರಹಿತನೂ, ಲಬ್ಧವಾದುದರಲ್ಲೇ ತೃಪ್ತಿ ಪಡುವವನೂ, ಸ್ವಾಮಿಗೂ ಮತ್ತು ಮಿತ್ರರಿಗೂ ಶುಭವನ್ನುಂಟು ಮಾಡುವವನೂ, ದೇಶಕಾಲಗಳನ್ನು ತಿಳಿದವನೂ, ಸರ್ವಪ್ರಾಣಿಗಳಲ್ಲಿಯೂ ದಯೆಯುಳ್ಳವನೂ, ಸುಸಂಸ್ಕೃತನಾದವನೂ, ಯೋಗ್ಯವಾದ ಮಾತನ್ನಾಡುವವನೂ, ರಾಜನ ಹಿತವನ್ನು ಬಯಸುವವನೂ, ಆಲಸ್ಯರಹಿತನೂ, ಯೋಗ್ಯವಾದ ಆಚಾರವುಳ್ಳವನೂ, ಸಂಧಿವಿಗ್ರಹಾದಿಗಳನ್ನು ತಿಳಿದವನೂ, ಪ್ರಶಸ್ತನಾದವನೂ, ಧರ್ಮಾರ್ಥಕಾಮಗಳನ್ನು ತಿಳಿದವನೂ, ಪೌರಜಾನಪದಪ್ರಿಯನೂ, ಸೇನಾವ್ಯೂಹಗಳನ್ನು ಮಾಡುವುದನ್ನು ತಿಳಿದವನೂ, ಸೈನ್ಯವನ್ನು ಉತ್ಸಾಹಪಡಿಸುವುದನ್ನು ತಿಳಿದವನೂ, ಇಂಗಿತಜ್ಞನೂ, ಸೇನಾಯಾತ್ರೆಯಲ್ಲಿ ವಿಶಾರದನೂ, ಹಸ್ತಿಶಿಕ್ಷಾಶಾಸ್ತ್ರವನ್ನು ತಿಳಿದವನೂ, ಅಶ್ವಶಾಸ್ತ್ರವನ್ನು ತಿಳಿದವನೂ, ಅಹಂಕಾರವಿಲ್ಲದವನೂ, ವಾಗ್ಮಿಯೂ, ಸಂಕೋಚಸ್ವಭಾವದವನೂ, ಬಲಿಷ್ಠನೂ, ಒಳ್ಳೆಯ ಸಲಹೆಯನ್ನು ನೀಡುವವನೂ, ದಕ್ಷನೂ, ದಕ್ಷಜನರಿಂದ ಕೂಡಿದವನೂ, ಒಳ್ಳೆಯ ವೇಷವನ್ನು ಧರಿಸಿದವನೂ, ನೋಡಲು ಸುಂದರನಾಗಿರುವವನೂ, ನಾಯಕನೂ, ನೀತಿಕುಶಲನೂ, ರಾಜನೀತಿಯ ಆರುಗುಣಗಳನ್ನು ತಿಳಿದವನೂ, ಅನಹಂಕಾರಿಯೂ, ವಿನಯಶೀಲನೂ, ನಿಪುಣನೂ, ಮೃದುವಾಗಿ ಮಾತನಾಡುವವನೂ, ಧೀರನೂ, ಶೂರನೂ, ಐಶ್ವರ್ಯೋಪೇತನೂ, ದೇಶಕಾಲಗುಣಗಳನ್ನು ಪ್ರತಿಪಾದಿಸುವವನೂ ಆದ ಪುರುಷನನ್ನು ಸಚಿವನನ್ನಾಗಿ ಮಾಡಿಕೊಂಡು ಅವನಿಗೆ ಅವಮಾನವನ್ನು ಮಾಡದಿದ್ದರೆ ಆ ರಾಜನ ರಾಜ್ಯವು ಚಂದ್ರನ ಬೆಳದಿಂಗಳಿನಂತೆ ವಿಸ್ತಾರವನ್ನು ಹೊಂದುತ್ತದೆ.

ಏತೈರೇವ ಗುಣೈರ್ಯುಕ್ತೋ ರಾಜಾ ಶಾಸ್ತ್ರವಿಶಾರದಃ।
ಏಷ್ಟವ್ಯೋ ಧರ್ಮಪರಮಃ ಪ್ರಜಾಪಾಲನತತ್ಪರಃ ॥೨೭॥

ಇವೇ ಗುಣಗಳಿಂದ ಕೂಡಿದ, ಶಾಸ್ತ್ರವಿಶಾರದನಾದ, ಧರ್ಮರತನಾದ, ಪ್ರಜಾಪಾಲನತತ್ಪರನಾದ ರಾಜನನ್ನು ಪ್ರಜೆಗಳು ಬಯಸಬೇಕು.

ಧೀರೋ ಮರ್ಷೀ ಶುಚಿಃ ಶೀಘ್ರಃ ಕಾಲೇ ಪುರುಷಕಾರವಿತ್।
ಶುಶ್ರೂಷುಃ ಶ್ರುತವಾನ್ ಶ್ರೋತಾ ಊಹಾಪೋಹವಿಶಾರದಃ ॥೨೮॥

ಮೇಧಾವೀ ಧಾರಣಾಯುಕ್ತೋ ಯಥಾನ್ಯಾಯೋಪಪಾದಕಃ।
ದಾಂತಃ ಸದಾ ಪ್ರಿಯಾಭಾಷೀ ಕ್ಷಮಾವಾಂಶ್ಚ ವಿಪರ್ಯಯೇ ॥೨೯॥

ನಾತಿಚ್ಛೇತ್ತಾ ಸ್ವಯಂಕಾರೀ ಶ್ರದ್ಧಾಲುಃ ಸುಖದರ್ಶನಃ।
ಆರ್ತಹಸ್ತಪ್ರದೋ ನಿತ್ಯಮಾಪ್ತಾಮಾತ್ಯೋ ನಯೇ ರತಃ ॥೩೦॥

ನಾಹಂವಾದೀ ನನಿರ್ವ್ಯಂದ್ವೋ ನ ಯತ್ಕಿಂಚಿನಕಾರಕಃ।
ಕೃತೇ ಕರ್ಮಣ್ಯಮೋಘಾನಾಂ ಕರ್ತಾ ಭೃತ್ಯಜನಪ್ರಿಯಃ ॥೩೧॥

ಸಂಗೃಹೀತಜನೋಽಸ್ತಬ್ಧಃ ಪ್ರಸನ್ನವದನಃ ಸದಾ।
ದಾತಾ ಭೃತ್ಯಜನಾಜೀವೀ ನಕ್ರೋಧೀ ಸುಮಹಾಮನಾಃ ॥೩೨॥

ಯುಕ್ತದಂಡೋ ನ ನಿರ್ದಂಡೋ ಧರ್ಮಕಾರ್ಯಾನುಶಾಸನಃ।
ಚಾರನೇತ್ರಃ ಪ್ರಜಾವೇಕ್ಷೀ ಧರ್ಮಾರ್ಥಕುಶಲಃ ಸದಾ ॥೩೩॥

ರಾಜಾ ಗುಣಶತಾಕೀರ್ಣ ಏಷ್ಟವ್ಯಸ್ತಾದೃಶೋ ಭವೇತ್।

ಧೀರನೂ, ಸಹನೆಯುಳ್ಳವನೂ, ಶುಚಿಯೂ, ಶೀಘ್ರವಾಗಿ ಕಾರ್ಯವನ್ನು ಮಾಡುವವನೂ, ಯೋಗ್ಯವಾದ ಕಾಲದಲ್ಲಿ ಪ್ರಯತ್ನವನ್ನು ಮಾಡುವುದನ್ನು ತಿಳಿದವನೂ, ಹಿರಿಯರ ಮಾತನ್ನು ಕೇಳುವವನೂ, ವಿದ್ಯಾವಂತನೂ, ಹಿರಿಯರ ಸೇವೆಯನ್ನು ಮಾಡುವವನೂ, ಊಹಾಪೋಹಗಳಲ್ಲಿ ವಿಶಾರದನೂ,

ಮೇಧಾವಿಯೂ, ಧಾರಣಾಶಕ್ತಿಯುಳ್ಳವನೂ, ನ್ಯಾಯವಾದುದನ್ನು ಮಾಡುವವನೂ, ಇಂದ್ರಿಯನಿಗ್ರಹವುಳ್ಳವನೂ, ಸದಾ ಪ್ರಿಯಭಾಷಿಯೂ, ವಿರೋಧವನ್ನು ಮಾಡಿದರೂ ಕ್ಷಮಿಸುವವನೂ, ಅಪರಾಧಿಗಳನ್ನು ಸಂಪೂರ್ಣವಾಗಿ ನಾಶಮಾಡುವವನೂ, ಸ್ವತಃ ತಾನೇ ಕಾರ್ಯವನ್ನು ಮಾಡುವವನೂ, ಶ್ರದ್ಧಾಳುವೂ , ನೋಡಲು ಸುಂದರನೂ, ಆರ್ತರಿಗೆ ಸಹಾಯಹಸ್ತವನ್ನು ನೀಡುವವನೂ, ಆಪ್ತರಾದ ಅಮಾತ್ಯರನ್ನು ಹೊಂದಿದವನೂ, ರಾಜನೀತಿಯಲ್ಲಿ ರತನಾದವನೂ, ಅಹಂಕಾರದ ಮಾತನ್ನು ಆಡದವನೂ, ಉದಾಸೀನವಾದ ಕಾರ್ಯಗಳನ್ನು ಮಾಡದವನೂ, ಒಳ್ಳೆಯ ಕಾರ್ಯವನ್ನು ಮಾಡಿದ ಸೇವಕರಿಗೆ ಹೆಚ್ಚಿನ ವೇತನವನ್ನು ಕೊಡುವವನೂ, ಭೃತ್ಯಜನರಿಗೆ ಪ್ರಿಯನಾದವನೂ, ಪ್ರಜೆಗಳನ್ನು ಸಂಗ್ರಹಿಸುವ ಸಾಮರ್ಥ್ಯವುಳ್ಳವನೂ, ದುರಹಂಕಾರವಿಲ್ಲದವನೂ, ಸದಾ ಪ್ರಸನ್ನಮುಖನಾದವನೂ, ದಾನವನ್ನು ಕೊಡುವವನೂ, ಭೃತ್ಯಜನರನ್ನು ಸಂತೋಷದಿಂದ ಜೀವಿಸುವಂತೆ ಮಾಡುವವನೂ, ಕ್ರೋಧರಹಿತನೂ, ಉದಾರವಾದ ಮನಸ್ಸುಳ್ಳವನೂ, ಯೋಗ್ಯವಾದ ದಂಡವನ್ನು ವಿಧಿಸುವವನೂ, ಯೋಗ್ಯದಂಡವನ್ನೇ ವಿಧಿಸುವವನೂ, ಎಲ್ಲವನ್ನೂ ಕ್ಷಮಿಸದಿರುವವನೂ, ಧರ್ಮಕಾರ್ಯಗಳನ್ನು ಆದೇಶಿಸುವವನೂ, ಚಾರರೆಂಬ ಚಕ್ಷುಸ್ಸನ್ನು ಹೊಂದಿರುವವನೂ, ಪ್ರಜೆಗಳ ಹಿತವನ್ನು ನೋಡುವವನೂ, ಯಾವಾಗಲೂ ಧರ್ಮಾರ್ಥಕುಶಲನಾದವನೂ ಆಗಿ ಇಂತಹ ನೂರಾರು ಗುಣಗಳಿಂದ ಕೂಡಿದ ರಾಜನನ್ನು ಪ್ರಜೆಗಳು ಅಪೇಕ್ಷಿಸಬೇಕು.

ಯೋಧಾಶ್ಚೈವ ಮನುಷ್ಯೇಂದ್ರ ಸರ್ವೈರ್ಗುಣಗಣೈರ್ವೃತಃ ॥೩೪॥

ಅನ್ವೇಷ್ಟವ್ಯಾಃ ಸುಪುರುಷಾಃ ಸಹಾಯಾ ರಾಜ್ಯಧಾರಣೇ।
ನ ವಿಮಾನಯಿತವ್ಯಾಸ್ತೇ ರಾಜ್ಞಾ ವೃದ್ಧಿಮಭೀಪ್ಸತಾ ॥೩೫॥

ಎಲೈ ಮನುಷ್ಯೇಂದ್ರನೇ! ಸರ್ವಗುಣಗಳಿಂದ ಕೂಡಿದ ಒಳ್ಳೆಯ ಸ್ವಭಾವವುಳ್ಳ ಯೋಧರನ್ನು ಹುಡುಕಿ ರಾಜ್ಯವನ್ನು ರಕ್ಷಿಸುವ ವಿಷಯದಲ್ಲಿ ಅವರನ್ನು ಸಹಾಯಕರನ್ನಾಗಿ ತೆಗೆದುಕೊಳ್ಳಬೇಕು. ತನ್ನ ಅಭಿವೃದ್ಧಿಯನ್ನು ಬಯಸುವ ರಾಜನು ಯೋಧರಿಗೆ ಅವಮಾನ ಮಾಡಬಾರದು.

ಯೋಧಾಃ ಸಮರಶೌಂಡೀರಾಃ ಕೃತಜ್ಞಾಃ ಶಾಸ್ತ್ರಕೋವಿದಾಃ।
ಧರ್ಮಶಾಸ್ತ್ರಸಮಾಯುಕ್ತಾಃ ಪದಾತಿಜನಸಂವೃತಾಃ ॥೩೬॥

ಅರ್ಥಮಾನವಿವೃದ್ಧಾಶ್ಚ ರಥಚರ್ಯಾವಿಶಾರದಾಃ।
ಇಷ್ವಸ್ತ್ರಕುಶಲಾ ಯಸ್ಯ ತಸ್ಯೇಯಂ ನೃಪತೇರ್ಮಹೀ ॥೩೭॥

ಯಾವ ರಾಜನ ಯೋಧರು ಯುದ್ಧನಿಪುಣರೋ ಕೃತಜ್ಞರೋ, ಶಾಸ್ತ್ರಕೋವಿದರೋ, ಧರ್ಮಶಾಸ್ತ್ರಸಮಾಯುಕ್ತರೋ, ಪದಾತಿಗಳಿಂದ ಕೂಡಿದವರೋ, ರಾಜನಿಂದ ಧನ ಮಾನಗಳನ್ನುಪಡೆದು ಅಭಿವೃದ್ಧಿ ಹೊಂದಿದವರೋ, ರಥವನ್ನು ನಡೆಸುವುದರಲ್ಲಿ ವಿಶಾರದರೋ, ಆಯುಧಗಳನ್ನು ಉಪಯೋಗಿಸುವುದರಲ್ಲಿ ಕುಶಲರೋ - ಈ ಭೂಮಿಯು ಅಂತಹ ರಾಜನಿಗೆ ಸೇರುತ್ತದೆ.

ಜ್ಞಾತೀನಾಮನವಜ್ಞಾನಂ ಭೃತ್ಯೇಷ್ವಶಠತಾ ತಥಾ।
ನೈಪುಣಂ ಚಾರ್ಥಚರ್ಯಾಸು ಯಸ್ಯೈತೇ ತಸ್ಯ ಸಾ ಮಹೀ ॥೩೮॥

ಯಾವ ರಾಜನು ಜ್ಞಾತಿಗಳಿಗೆ ಅವಮಾನ ಮಾಡುವುದಿಲ್ಲವೋ, ಭೃತ್ಯರಿಗೆ ದುರಹಂಕಾರವನ್ನು ತೋರಿಸುವುದಿಲ್ಲವೋ, ಅರ್ಥಕಾರ್ಯಗಳಲ್ಲಿ ನಿಪುಣನಾಗಿರುತ್ತಾನೆಯೋ ಈ ಭೂಮಿಯು ಅವನಿಗೆ ಸೇರುತ್ತದೆ.

ಆಲಸ್ಯಂ ಚೈವ ನಿದ್ರಾ ಚ ವ್ಯಸನಾನ್ಯತಿಹಾಸ್ಯತಾ।
ಯಸ್ಯೈತಾನಿ ನ ವಿದ್ಯಂತೇ ತಸ್ಯೈವ ಸುಚಿರಂ ಮಹೀ ॥೩೯॥

ಆಲಸ್ಯ, ನಿದ್ರೆ, ದುಶ್ಚಟಗಳು, ಅತಿಹಾಸ್ಯ - ಇವುಗಳು ಯಾವನಿಗೆ ಇರುವುದಿಲ್ಲವೋ ಅಂತಹ ರಾಜನ ಬಳಿಯಲ್ಲಿ ಭೂಮಿಯು ಬಹುಕಾಲ ಇರುತ್ತದೆ.

ನೀತಿವರ್ತ್ಮಾನುಸರಣಂ ನಿತ್ಯಮುತ್ಥಾನಮೇವ ಚ।
ರಿಪೂಣಾಮನವಜ್ಞಾನಂ ತಸ್ಯೇಯಂ ಸುಚಿರಂ ಮಹೀ ॥೪೦॥

ನೀತಿಮಾರ್ಗದ ಅನುಸರಣೆ, ನಿತ್ಯವೂ ಉದ್ಯಮಶೀಲತೆ, ಶತ್ರುಗಳನ್ನು ಉಪೇ-

ಕ್ಷಿಸದಿರುವುದು ಈ ಗುಣಗಳು ಯಾರಲ್ಲಿರುತ್ತವೆಯೋ ಅವನ ಬಳಿ ಈ ಭೂಮಿಯು ಬಹುಕಾಲ ಇರುತ್ತದೆ.

ಉತ್ಥಾನಂ ಚೈವ ದೈವಂ ಚ ತಯೋರ್ನಾನಾತ್ವಮೇವ ಚ।
ಮನುನಾ ವರ್ಣಿತಂ ಪೂರ್ವಂ ವಕ್ಷ್ಯೇ ಶೃಣು ತದೇವ ಹಿ ॥೪೧॥

ಉದ್ಯಮಶೀಲತೆ ಮತ್ತು ದೈವ ಇವುಗಳ ಪ್ರಭೇದಗಳನ್ನು ಮನುವು ಹಿಂದೆಯೇ ವರ್ಣಿಸಿದ್ದಾನೆ. ಅದನ್ನೇ ನಾನು ಹೇಳುವೆನು ಕೇಳು.

ಉತ್ಥಾನಂ ಹಿ ನರೇಂದ್ರಾಣಾಂ ಬೃಹಸ್ಪತಿರಭಾಷತ।
ನಯಾನಯವಿಧಾನಜ್ಞಃ ಸದಾ ಭವ ಕುರೂದ್ವಹ ॥೪೨॥

ನಯಾನಯವಿಧಾನಗಳನ್ನು ತಿಳಿದ ಬೃಹಸ್ಪತಿಗಳು ನರೇಂದ್ರರಿಗೆ ಉದ್ಯಮಶೀಲತೆಯೇ ಪ್ರಧಾನವಾದುದೆಂದು ಹೇಳಿದ್ದಾರೆ. ಎಲೈ ಕುರೂದ್ವಹನೇ! ಸದಾ ಉದ್ಯಮಶೀಲನಾಗು.

ದುರ್ಹೃದಾಂ ಛಿದ್ರದರ್ಶೀ ಯಃ ಸುಹೃದಾಮುಪಕಾರವಾನ್।
ವಿಶೇಷವಿಚ್ಚ ಭೃತ್ಯಾನಾಂ ಸ ರಾಜ್ಯಫಲಮಶ್ನುತೇ ॥೪೩॥

ಯಾವನು ಶತ್ರುಗಳ ದೌರ್ಬಲ್ಯವನ್ನು ಕಾಣುತ್ತಾನೆಯೋ, ಸುಹೃಜ್ಜನರಿಗೆ ಉಪಕಾರವನ್ನು ಮಾಡುತ್ತಾನೆಯೋ, ಭೃತ್ಯರ ವಿಶೇಷಯೋಗ್ಯತೆಗಳನ್ನು ತಿಳಿದಿರುತ್ತಾನೆಯೋ ಅವನು ರಾಜ್ಯದ ಫಲವನ್ನು ಭೋಗಿಸುತ್ತಾನೆ.

ಸರ್ವಸಂಗ್ರಹಣೇ ಯುಕ್ತೋ ನೃಪೋ ಭವತಿ ಯಃ ಸದಾ।
ಉತ್ಥಾನಶೀಲೋ ಮಂತ್ರಾಢ್ಯೋ ಸ ರಾಜಾ ರಾಜಸತ್ತಮಃ ॥೪೪॥

ಎಲ್ಲ ಪ್ರಜೆಗಳನ್ನೂ ಸಂಗ್ರಹಿಸುವುದರಲ್ಲಿ ಯಾವ ರಾಜನು ಸದಾ ನಿರತನಾಗಿ ಉದ್ಯಮಶೀಲನೂ ಮಂತ್ರಾಲೋಚನ ತತ್ಪರನೂ ಆಗಿರುತ್ತಾನೆಯೋ ಆ ರಾಜನು ರಾಜಶ್ರೇಷ್ಠನಾದವನು.

ಶಕ್ಯಾ ಚಾಶ್ವಸಹಸ್ರೇಣ ವೀರಾರೋಹೇಣ ಭಾರತ।
ಸಂಗೃಹೀತಮನುಷ್ಯೇಣ ಕೃತಾಸ್ತ್ರೇಣ ಜೇತುಂ ವಸುಂಧರಾ ॥೪೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನವಿಂಶತ್ಯಧಿಕಶತತಮೋಽಧ್ಯಾಯಃ ॥೧೧೯॥

ಎಲೈ ಭಾರತನೇ! ವೀರರಾದ ಅಶ್ವಾರೋಹಿಗಳಿಂದ ಕೂಡಿದ ಒಂದು ಸಹಸ್ರ ಅಶ್ವಗಳಿಂದ ಚೆನ್ನಾಗಿ ಸಂಪಾದಿಸಿದ ಒಬ್ಬ ಸೇನಾನಾಯಕನ ಮೂಲಕವಾಗಿ ಈ ಭೂಮಿಯನ್ನು ಗೆಲ್ಲುವುದು ಸಾಧ್ಯವಾಗುತ್ತದೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೧೯ನೆಯ ಅಧ್ಯಾಯವು ಮುಗಿಯಿತು

—0—

೧೨೦. ನೂರಇಪ್ಪತ್ತನೆಯ ಅಧ್ಯಾಯ

ಭೃತ್ಯರನ್ನು ಅವರವರಿಗೆ ಯೋಗ್ಯಸ್ಥಾನದಲ್ಲಿ ನಿಯೋಜಿಸುವ ರಾಜನೀತಿ

ಭೀಷ್ಮಃ

ಏವಂ ಶುಭಾನ್ ಸಮಾನ್ ಭೃತ್ಯಾನ್ ಸ್ವಸ್ಥಾನೇ ಯೋ ನರಾಧಿಪಃ।
ನಿಯೋಜಯತಿ ಕೃತ್ಯೇಷು ಸ ರಾಜ್ಯಫಲಮಶ್ನುತೇ ॥೧॥

ಭೀಷ್ಮರು– ಹೀಗೆ ಯಾವ ರಾಜನು ಶುಭರೂ, ಸಮಾಧಾನವುಳ್ಳವರೂ ಆದ ಭೃತ್ಯರನ್ನು ಅವರಿಗೆ ಯೋಗ್ಯವಾದ ಕಾರ್ಯಗಳಲ್ಲಿ ನಿಯೋಜಿಸುತ್ತಾನೆಯೋ ಅವನು ರಾಜ್ಯಫಲವನ್ನು ಪಡೆಯುತ್ತಾನೆ.

ನ ಶ್ವಾ ಸ್ವಸ್ಥಾನಮುತ್ಕ್ರಮ್ಯ ಪ್ರಮಾಣಮಭಿ ಸತ್ಕೃತಃ।
ಆರೋಪ್ಯಃ ಶ್ವಾ ಸ್ವಕಾತ್ ಸ್ಥಾನಾದುತ್ಕ್ರಮ್ಯಾನ್ಯತ್ ಪ್ರಪದ್ಯತೇ ॥೨॥

ನಾಯಿಯನ್ನು ಮೇಲೇರಿಸಿ ಪೂಜೆ ಮಾಡಿದರೂ ಅದು ಗ್ರಾಹ್ಯವಾಗುವುದಿಲ್ಲ. ನಾಯಿಯನ್ನು ಮೇಲೇರಿಸಿದರೆ ಅದು ತನ್ನ ಸ್ಥಾನವನ್ನುಬಿಟ್ಟು ಬೇರೆ ಕಾರ್ಯವನ್ನೇ ಮಾಡುತ್ತದೆ.

ಸ್ವಜಾತಿಗುಣಸಂಪನ್ನಾಃ ಸ್ವೇಷು ಕರ್ಮಸ್ವವಸ್ಥಿತಾಃ।
ಪ್ರಕರ್ತವ್ಯಾ ಬುಧಾ ಭೃತ್ಯಾ ನಾಸ್ಥಾನೇ ಪ್ರಕ್ರಿಯಾ ಕ್ಷಮಾ ॥೩॥

ತಮ್ಮ ಜಾತಿಗುಣಗಳಿಂದ ಸಂಪನ್ನರೂ, ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾದವರೂ ಆದ ಬುಧರನ್ನು ಭೃತ್ಯರನ್ನಾಗಿ ಮಾಡಬೇಕು. ಒಂದು ಸ್ಥಾನದಲ್ಲಿ ಅದಕ್ಕೆ ಅಯೋಗ್ಯರಾದವರನ್ನು ನಿಯಮಿಸುವುದು ಸರಿಯಲ್ಲ.

ಅನುರೂಪಾಣಿ ಕರ್ಮಾಣಿ ಭೃತ್ಯೇಭ್ಯೋ ಯಃ ಪ್ರಯಚ್ಛತಿ।
ಸ ಭೃತ್ಯಗುಣಸಂಪನ್ನಂ ರಾಜಾ ಫಲಮುಪಾಶ್ನುತೇ ॥೪॥

ಯಾವನು ಭೃತ್ಯರಿಗೆ ಅವರಿಗೆ ಅನುರೂಪವಾದ ಕಾರ್ಯಗಳನ್ನು ಕೊಡುತ್ತಾನೆಯೋ ಅಂತಹ ರಾಜನು ಭೃತ್ಯಗುಣದಿಂದ ಕೂಡಿದ ಫಲವನ್ನು ಅನುಭವಿಸುತ್ತಾನೆ.

ಶರಭಃ ಶರಭಸ್ಥಾನೇ ಸಿಂಹಃ ಸಿಂಹ ಇವೋರ್ಜಿತಃ।
ವ್ಯಾಘ್ರೋ ವ್ಯಾಘ್ರ ಇವ ಸ್ಥಾಪ್ಯೋ ದ್ವೀಪೀ ದ್ವೀಪೀ ಯಥಾ ತಥಾ ॥೫॥

ಶರಭವನ್ನು ಶರಭಸ್ಥಾನದಲ್ಲಿಯೂ, ಬಲಿಷ್ಠವಾದ ಸಿಂಹವನ್ನು ಸಿಂಹಸ್ಥಾನದಲ್ಲಿಯೂ ವ್ಯಾಘ್ರವನ್ನು ವ್ಯಾಘ್ರಸ್ಥಾನದಲ್ಲಿಯೂ ಚಿರತೆಯನ್ನು ಚಿರತೆಯ ಸ್ಥಾನದಲ್ಲಿಯೂ ಹಾಗೆಯೇ ಇಡಬೇಕು.

ಕರ್ಮಸ್ವಿಹಾನುರೂಪೇಣ ನ್ಯಸ್ಯಾ ಭೃತ್ಯಾ ಯಥಾವಿಧಿ।
ಪ್ರತಿಲೋಮಂ ನ ಭೃತ್ಯಾಸ್ತೇ ಸ್ಥಾಪ್ಯಾಃ ಕರ್ಮಫಲೈಷಿಣಾ ॥೬॥

ರಾಜನು ಭೃತ್ಯರನ್ನು ಅವರಿಗೆ ಅನುರೂಪವಾದ ಕರ್ಮದಲ್ಲಿಯೇ ಶಾಸ್ತ್ರಕ್ಕೆ ಅನುಸಾರಿಯಾಗಿ ಇಡಬೇಕು. ಕರ್ಮದ ಫಲವನ್ನು ಬಯಸುವ ರಾಜನು ಅದಕ್ಕೆ ವಿರುದ್ಧವಾಗಿ ಇಡಬಾರದು.

ಯಃ ಪ್ರಮಾಣಮತಿಕ್ರಮ್ಯ ಪ್ರತಿಲೋಮಂ ನರಾಧಿಪಃ।
ಭೃತ್ಯಾನ್ ಸ್ಥಾಪಯತೇऽಬುದ್ಧಿರ್ನ ಸ ರಂಜಯತೇ ಪ್ರಜಾಃ ॥೭॥

ಯಾವ ರಾಜನು ಬುದ್ಧಿಹೀನನಾಗಿ ರಾಜನೀತಿಶಾಸ್ತ್ರವನ್ನು ಅತಿಕ್ರಮಿಸಿ ಭೃತ್ಯರನ್ನು ತನ್ನ ಸಮೀಪದಲ್ಲಿ ಇರಿಸಿಕೊಳ್ಳುತ್ತಾನೆಯೋ ಅವನು ಪ್ರಜೆಗಳನ್ನು ಸಂತೋಷಪಡಿಸುವುದಿಲ್ಲ.

ನ ಬಾಲಿಶಾ ನ ಚ ಕ್ಷುದ್ರಾ ನ ಚಾಪ್ರತಿಮಿತೇಂದ್ರಿಯಾಃ।
ನಾಕುಲೀನಾ ನರಾಃ ಪಾರ್ಶ್ವೇ ಸ್ಥಾಪ್ಯಾ ರಾಜ್ಞಾ ಹಿತೈಷಿಣಾ ॥೮॥

ತನ್ನ ಹಿತೈಷಿಯಾದ ರಾಜನು ಬಾಲಿಶರನ್ನಾಗಲೀ ಕ್ಷುದ್ರರನ್ನಾಗಲೀ, ಇಂದ್ರಿಯಲೋಲುಪರನ್ನಾಗಲೀ, ಅಕುಲೀನರನ್ನಾಗಲೀ ತನ್ನ ಸಮೀಪದಲ್ಲಿಟ್ಟುಕೊಳ್ಳಬಾರದು.

ಸಾಧವಃ ಕುಶಲಾಃ ಶೂರಾ ಜ್ಞಾನವಂತೋಽನಸೂಯಕಾಃ।
ಅಕ್ಷುದ್ರಾಃ ಶುಚಯೋ ದಕ್ಷಾ ನರಾಃ ಸ್ಯುಃ ಪಾರಿಪಾರ್ಶ್ವಕಾಃ ॥೯॥

ಸಾಧುಗಳೂ ಕುಶಲರೂ ಶೂರರೂ ಜ್ಞಾನವಂತರೂ ಅಸೂಯಾರಹಿತರೂ ಕ್ಷುದ್ರರಲ್ಲದವರೂ, ಶುಚಿಗಳೂ , ದಕ್ಷರೂ ಆದ ನರರು ರಾಜನ ಪಾರ್ಶ್ವವರ್ತಿಗಳಾಗಿರಬೇಕು.

ನ್ಯಗ್ಭೂತಾಸ್ತತ್ಪರಾಃ ಕ್ಷಾಂತಾಶ್ಚೋಕ್ಷಾಃ ಪ್ರಕೃತಿಜಾಃ ಶುಭಾಃ।
ಸ್ವೇ ಸ್ವೇ ಸ್ಥಾನೇಽಪರಿಕ್ರುಷ್ಟಾಸ್ತೇ ಸ್ಯು ರಾಜ್ಞೋ ಬಹಿಶ್ಚರಾಃ ॥೧೦॥

ರಾಜನಿಗೆ ಬಾಗಿ ನಡೆದುಕೊಂಡು ರಾಜಕಾರ್ಯತತ್ಪರರಾಗಿ,ಕ್ಷಮಾವಂತರೂ, ದಕ್ಷರೂ, ತಮ್ಮ ದೇಶದವರೂ,ಶುಭರೂ, ತಮ್ಮ ತಮ್ಮ ಸ್ಥಾನಗಳಿಂದ ಕೆಳಗೆ ಎಳೆಯಲ್ಪಡದವರೂ ಆದವರು ರಾಜನಿಗೆ ಬಾಹ್ಯಚರರಾಗುತ್ತಾರೆ. (ದೂರದಲ್ಲಿ ಕೆಲಸ ಮಾಡುವ ಸೇವಕರಾಗುತ್ತಾರೆ.)

ಸಿಂಹಸ್ಯ ಸತತಂ ಪಾರ್ಶ್ವೇ ಸಿಂಹ ಏವ ಜನೋ ಭವೇತ್।
ಅಸಿಂಹಃ ಸಿಂಹಸಹಿತಃ ಸಿಂಹವಲ್ಲಭತೇ ಫಲಮ್ ॥೧೧॥

ಸಿಂಹದ ಪಾರ್ಶ್ವದಲ್ಲಿ ಸತತವೂ ಸಿಂಹವೇ ಇರಬೇಕು. ಸಿಂಹವಲ್ಲದುದು ಸಿಂಹದ ಜೊತೆಯಲ್ಲಿದ್ದರೆ ಅದಕ್ಕೆ ಸಿಂಹದಂತೆ ಫಲವುಂಟಾಗುತ್ತದೆ.

ಯಸ್ತು ಸಿಂಹಃ ಶ್ವಭಿಃ ಕೀರ್ಣಃ ಸಿಂಹಕರ್ಮಫಲೇ ರತಃ।
ನ ಸ ಸಿಂಹಫಲಂ ಭೋಕ್ತುಂ ಶಕ್ತಃ ಶ್ವಭಿರುಪಾಸಿತಃ ॥೧೨॥

ಯಾವ ಸಿಂಹವು ನಾಯಿಗಳಿಂದ ಪರಿವೃತವಾಗಿ ಸಿಂಹಕರ್ಮದ ಫಲವನ್ನು ಆಶಿಸುತ್ತದೆಯೋ ನಾಯಿಗಳಿಂದ ಸೇವಿತವಾದ ಅದು ಸಿಂಹಕರ್ಮದ ಫಲವನ್ನು ಭೋಗಿಸಲು ಸಮರ್ಥವಾಗುವುದಿಲ್ಲ.

ಏವಮೇತೈರ್ಮನುಷ್ಯೇಂದ್ರ ಶೂರೈಃ ಪ್ರಾಜ್ಞೈರ್ಬಹುಶ್ರುತೈಃ।
ಕುಲೀನೈಃ ಸಹ ಶಕ್ಯೇತ ಕೃತ್ಸ್ನಾ ಜೇತುಂ ವಸುಂಧರಾ ॥೧೩॥

ಎಲೈ ಮನುಷ್ಯೇಂದ್ರನೇ! ಅದೇ ರೀತಿಯಲ್ಲಿ ಶೂರರೂ ಪ್ರಾಜ್ಞರೂ ವಿದ್ಯಾವಂತರೂ ಕುಲೀನರೂ ಆದ ಇಂತಹ ಸೇವಕರಿಂದ ಸಮಗ್ರವಾದ ಭೂಮಿಯನ್ನು ಜಯಿಸಲು ಸಾಧ್ಯ.

ನಾವೈದ್ಯೋ ನಾನೃಜುಃ ಪಾರ್ಶ್ವೇ ನಾವಿದ್ಯೋ ನಾಮಹಾಧನಃ।
ಸಂಗ್ರಾಹ್ಯೋ ವಸುಧಾಪಾಲೈರ್ಭರ್ತ್ಯೋ ಭೃತ್ಯವತಾಂವರ ॥೧೪॥

ಎಲೈ ಸೇವಕರನ್ನು ಹೊಂದಿದವರಲ್ಲಿ ಶ್ರೇಷ್ಠನಾದವನೇ! ರಾಜರು ವೇದವಿದ್ಯೆ ರಹಿತನಲ್ಲದ, ವಕ್ರನಲ್ಲದ, ಅವಿದ್ಯಾವಂತನಲ್ಲದ, ದರಿದ್ರನಲ್ಲದ ಭೃತ್ಯನನ್ನು ಸಂಗ್ರಹಿಸಬೇಕು.

ಬಾಣವದ್ ವಿಸೃತಾ ಯಾಂತಿ ಸ್ವಾಮಿಕಾರ್ಯಪರಾ ಜನಾಃ।
ಯೇ ಭೃತ್ಯಾಃ ಪಾರ್ಥಿವಹಿತಾಸ್ತೇಷಾಂ ಸಾಂತ್ವಂ ಪ್ರಯೋಜಯೇತ್ ॥೧೫॥

ಯಾವ ಭೃತ್ಯರು ರಾಜನ ಆದೇಶವನ್ನು ಹೊಂದಿ, ಸ್ವಾಮಿಕಾರ್ಯತತ್ಪರರಾಗಿ ಬಾಣದಂತೆ ಹೊರಡುತ್ತಾರೋ, ಅಂತಹ ರಾಜನೀತಿಯಲ್ಲಿ ಆಸಕ್ತರಾದವರಿಗೆ ಸಾಂತ್ವವಚನಗಳನ್ನು ಹೇಳಬೇಕು.

ಕೋಶಶ್ಚ ಸತತಂ ರಕ್ಷ್ಯೋ ಯತ್ನಮಾಸ್ಥಾಯ ರಾಜಭಿಃ।
ಕೋಶಮೂಲಾ ಹಿ ರಾಜಾನಃ ಕೋಶವೃದ್ಧಿಕರೋ ಭವ ॥೧೬॥

ರಾಜನು ಪ್ರಯತ್ನಪೂರ್ವಕವಾಗಿ ತನ್ನ ಕೋಶವನ್ನು ಸತತವಾಗಿ ರಕ್ಷಿಸಿಕೊಳ್ಳಬೇಕು. ರಾಜರ ಬಲವು ಕೋಶದಲ್ಲಿ ಅಡಗಿದೆ. ಆದ್ದರಿಂದ ಕೋಶವೃದ್ಧಿಯನ್ನು ಮಾಡುವವನಾಗು.

ಕೋಷ್ಠಾಗಾರಂ ಚ ತೇ ನಿತ್ಯಂ ಸ್ಫೀತಂ ಧಾನ್ಯೈಃ ಸುಸಂಚಿತಮ್ ।
ಸದಾऽಸ್ತು ಸತ್ಸು ಸನ್ನ್ಯಸ್ತಂ ಧನಧಾನ್ಯಪರೋ ಭವ ॥೧೭॥

ನಿನ್ನ ಉಗ್ರಾಣಗಳೆಲ್ಲವೂ ನಿತ್ಯವೂ ಸಂಗ್ರಹಿಸಿದ ಧಾನ್ಯಗಳಿಂದ ತುಂಬಿರಲಿ. ಸಜ್ಜನರಿಗೆ ಅದರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಕೊಡು. ಧನ ಧಾನ್ಯವನ್ನು ಸಂಗ್ರಹಿಸುವುದರಲ್ಲಿ ನಿರತನಾಗು.

ನಿತ್ಯಯುಕ್ತಾಶ್ಚ ತೇ ಭೃತ್ಯಾ ಭವಂತು ರಣಕೋವಿದಾಃ ।
ವಾಜಿನಾಂ ಚ ಪ್ರಯೋಗೇಷು ವೈಶಾರದ್ಯಮಿಹೇಷ್ಯತೇ ॥೧೮॥

ಭೃತ್ಯರು ನಿತ್ಯವೂ ತಮ್ಮ ಕಾರ್ಯದಲ್ಲಿ ತೊಡಗಿದವರೂ, ರಣಕೋವಿದರೂ, ಅಶ್ವವಿದ್ಯೆಗಳಲ್ಲಿ ವಿಶಾರದರೂ ಆಗಿರಬೇಕು.

ಜ್ಞಾತಿಬಂಧುಜನಾವೇಕ್ಷೀ ಮಿತ್ರಸಂಬಂಧಿಸಂವೃತಃ ।
ಪೌರಕಾರ್ಯಹಿತಾನ್ವೇಷೀ ಭವ ಕೌರವನಂದನ ॥೧೯॥

ಎಲೈ ಕೌರವನಂದನನೇ! ನೀನು ಜ್ಞಾತಿಗಳ ಮತ್ತು ಬಂಧುಗಳ ಹಿತವನ್ನು ನೋಡುತ್ತಾ ಮಿತ್ರರು ಮತ್ತು ಸಂಬಂಧಿಗಳಿಂದಲೂ ಪರಿವೃತನಾಗಿ ಯೋಚಿಸಿ ಪ್ರಜೆಗಳಿಗೆ ಹಿತವಾದ ಕಾರ್ಯವನ್ನು ಮಾಡುವವನಾಗು.

ಏಷಾ ತೇ ನೈಷ್ಠಿಕೀ ಬುದ್ಧಿಃ ಪ್ರಜ್ಞಾ ಚಾಭಿಹಿತಾ ಮಯಾ ।
ಶ್ವಾತೇ ನಿದರ್ಶನಂ ತಾತ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ವಿಂಶತ್ಯಧಿಕಶತತಮೋऽಧ್ಯಾಯಃ ॥೨೧೦॥

ನಾನು ನಿನಗೆ ಶಾಸ್ತ್ರನಿಷ್ಠವಾದ ಬುದ್ಧಿಯನ್ನು ಮತ್ತು ವಿವೇಕವನ್ನು ಉಪದೇಶಿಸಿ-

ದ್ದೇನೆ. ಎಲೈ ಪ್ರೀತಿಪಾತ್ರನೇ! ಆ ನಾಯಿಯು ನಿನಗೆ ಒಳ್ಳೆಯ ನಿದರ್ಶನ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ ?

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೦ನೆಯ ಅಧ್ಯಾಯವು ಮುಗಿಯಿತು.

—0—

೧೨೧. ನೂರಇಪ್ಪತ್ತೊಂದನೆಯ ಅಧ್ಯಾಯ

ಪ್ರಜಾಪಾಲನಕಥನ

ಯುಧಿಷ್ಠಿರಃ

ರಾಜವೃತ್ತಾನ್ಯನೇಕಾನಿ ತ್ವಯಾ ಪ್ರೋಕ್ತಾನಿ ಭಾರತ।
ಪೂರ್ವೈಃ ಪೂರ್ವನಿಯುಕ್ತಾನಿ ರಾಜಧರ್ಮಾರ್ಥವೇದಿನಃ ॥೧॥

ಯುಧಿಷ್ಠಿರ – ಎಲೈ ಭಾರತನೇ! ನೀನು ರಾಜಧರ್ಮವನ್ನು ತಿಳಿದ ಪೂರ್ವ-ರಾಜರುಗಳು ಅನುಸರಿಸಿದ ಅನೇಕ ರಾಜಧರ್ಮಗಳನ್ನು ಹೇಳಿದ್ದೀಯೆ.

ತದೇವ ವಿಸ್ತರೇಣೋಕ್ತಂ ಪೂರ್ವೈರ್ದೃಷ್ಟಂ ಸತಾಂ ಮತಮ್ ।
ಪ್ರಣೇಯಂ ರಾಜಧರ್ಮಾಣಾಂ ಪ್ರಬ್ರೂಹಿ ಭರತರ್ಷಭ ॥೨॥

ಎಲೈ ಭರತರ್ಷಭನೇ! ಪೂರ್ವರಾಜರಿಂದ ದೃಷ್ಟವಾದ ಸಜ್ಜನರಿಂದ ಸಮ್ಮತ-ವಾದ ಇನ್ನೂ ಹೆಚ್ಚು ತಿಳಿಯಲು ಯೋಗ್ಯವಾದ ಅದೇ ರಾಜಧರ್ಮಗಳನ್ನು ವಿಸ್ತಾರ -ವಾಗಿ ಹೇಳು.

ಭೀಷ್ಮಃ

ರಕ್ಷಣಂ ಸರ್ವಭೂತಾನಾಮಿತಿ ಕ್ಷತ್ರೇ ಪರಂ ಮತಮ್ ।
ತದ್ ಯಥಾ ರಕ್ಷಣಂ ಕುರ್ಯಾತ್ ತಥಾ ಶೃಣು ಮಹೀಪತೇ ॥೩॥

ಭೀಷ್ಮ - ಸರ್ವಪ್ರಾಣಿಗಳ ರಕ್ಷಣೆಯು ಕ್ಷತ್ರಿಯನಿಗೆ ಶ್ರೇಷ್ಠವಾದ ಧರ್ಮವೆಂದು ಹೇಳಲ್ಪಡುತ್ತದೆ. ಎಲೈ ರಾಜನೇ! ಆ ರಕ್ಷಣೆಯನ್ನು ಹೇಗೆ ಮಾಡಬೇಕೆಂದು ಕೇಳು.

ಯಥಾ ಬರ್ಹಾಣಿ ಚಿತ್ರಾಣಿ ಬಿಭರ್ತಿ ಭುಜಗಾಶನಃ।
ತಥಾ ಬಹುವಿಧಂ ರಾಜಾ ರೂಪಂ ಕುರ್ವೀತ ಧರ್ಮವಿತ್ ॥೪॥

ಹೇಗೆ ನವಿಲು ಅನೇಕ ಬಣ್ಣದ ನವಿಲುಗರಿಗಳನ್ನು ಧರಿಸಿರುತ್ತದೆಯೋ ಹಾಗೆಯೇ ಧರ್ಮಜ್ಞನಾದ ರಾಜನು ಬಹುವಿಧವಾದ ರೂಪಗಳನ್ನು ಧರಿಸಬೇಕು.

ತೈಕ್ಷ್ಣ್ಯಂ ಜಿಹ್ಮತ್ವಮಾದಾಂತ್ಯಂ ಸತ್ಯಮಾರ್ಜವಮೇವ ಚ।
ಮಧ್ಯಸ್ಥಃ ಸತ್ತ್ವಮಾತಿಷ್ಠಂಸ್ತಥಾ ವೈ ಸುಖಮೃಚ್ಛತಿ ॥೫॥

ತೀಕ್ಷ್ಣತ್ವ, ಕುಟಿಲತೆ, ಉಗ್ರತ್ವ, ಸತ್ಯ, ಆರ್ಜವ, ತಟಸ್ಥತೆ, ಧೈರ್ಯ ಇವುಗಳನ್ನು ಹೊಂದುವವನು ಸುಖವನ್ನು ಪಡೆಯುತ್ತಾನೆ.

ಯಸ್ಮಿನ್ನರ್ಥೇ ಹಿತಂ ಯತ್ ಸ್ಯಾತ್ ತದ್ವರ್ಣಂ ರೂಪಮಾವಿಶೇತ್।
ಬಹುರೂಪಸ್ಯ ರಾಜ್ಞೋ ಹಿ ಸೂಕ್ಷ್ಮೋಽಪ್ಯರ್ಥೋ ನ ಸೀದತಿ ॥೬॥

ಯಾವ ಕಾರ್ಯವನ್ನು ಮಾಡುವಾಗ ಯಾವ ಬಣ್ಣದ ರೂಪವನ್ನು ಧರಿಸಬೇಕೋ ಅಂತಹ ರೂಪವನ್ನು ಧರಿಸುವ ಬಹುರೂಪವುಳ್ಳ ರಾಜನಿಗೆ ಒಂದು ಸಣ್ಣ ಅರ್ಥವೂ ನಾಶವನ್ನು ಹೊಂದುವುದಿಲ್ಲ.

ನಿತ್ಯಂ ರಕ್ಷಿತಮಂತ್ರಃ ಸ್ಯಾದ್ ಯಥಾರೂಪಂ ಶಿರಃ ಶಿಖೀ।
ಶ್ಲಕ್ಷ್ಣಾಕ್ಷರತನುಃ ಶ್ರೀಮಾನ್ ಭವೇಚ್ಛಾಸ್ತ್ರವಿಶಾರದಃ ॥೭॥

ರಾಜನ ಮಂತ್ರಾಲೋಚನೆಯು ನಿತ್ಯವೂ ರಕ್ಷಿತವಾಗಿರಬೇಕು. ಕಾರ್ಯಕ್ಕೆ ಅಪೇಕ್ಷಿತವಾದ ಶಿರಸ್ಸನ್ನೂ ಶಿಖೆಗಳನ್ನೂ ಧರಿಸಿರಬೇಕು. - ಕೆಲವು ಬಾರಿ ತಲೆಯನ್ನು ಎತ್ತಿತೋರಿಸಿಕೊಳ್ಳಬೇಕು. ಕೆಲವು ಬಾರಿ ಕತ್ತನ್ನು ತಗ್ಗಿಸಿ ಮುಚ್ಚಿಕೊಳ್ಳಬೇಕು. ನಿಪುಣವಾಗಿ ಮಾತನಾಡುವ ಶರೀರವನ್ನೂ ಕಾಂತಿಯನ್ನೂ ಹೊಂದಿ ಶಾಸ್ತ್ರವಿಶಾರದನಾಗಿರಬೇಕು. – ಲಕ್ಷಾಲಂಕಾರ.

ಆಪದ್ವಾರೇಷು ಯತ್ತಃ ಸ್ಯಾಜ್ಜಲಪ್ರಸ್ರವಣೇಷ್ವಿವ।
ಶೈಲಂ ವರ್ಷೋದಕಾನೀವ ದ್ವಿಜಾನ್ ಸಿದ್ಧಾಂತಮಾಶ್ರಯೇತ್ ॥೮॥

ಆಪತ್ತು ಉಂಟಾಗುವ ಸ್ಥಳಗಳಲ್ಲಿ ಜಲಪ್ರವಾಹಗಳಲ್ಲಿ ಇರುವಂತೆ ಪ್ರಯತ್ನ ಪೂರ್ವಕವಾಗಿ ಎಚ್ಚರಿಕೆಯಿಂದಿರಬೇಕು. ಮಳೆಯ ನೀರುಗಳು ಪರ್ವತವನ್ನು ಆಶ್ರಯಿಸಿದಂತೆ ಸಿದ್ಧರಾದ ದ್ವಿಜರನ್ನು ಆಶ್ರಯಿಸಬೇಕು.

ಅರ್ಥಕಾಮಃ ಶಿಖಾಂ ರಾಜಾ ಕುರ್ಯಾದ್ ಧರ್ಮಧ್ವಜೋಪಮಾಮ್ ।
ನಿತ್ಯಮುದ್ಯತದಂಡಃ ಸ್ಯಾದಾಚರೇಚ್ಚಾಪ್ರಮಾದತಃ ॥೯॥

ಅರ್ಥವನ್ನು ಸಂಪಾದಿಸಲು ಬಯಸುವವನು ಧರ್ಮಧ್ವಜದಂತಹ ಶೌರ್ಯ-ಶಿಖೆಯನ್ನು ತೋರಿಸಬೇಕು. ನಿತ್ಯವೂ ಅಪರಾಧಿಗಳಲ್ಲಿ ದಂಡಧಾರಣಶೀಲನಾಗಬೇಕು. ಯಾವಾಗಲೂ ಎಚ್ಚರ ತಪ್ಪಬಾರದು.

ಲೋಕೇ ಚಾಯವ್ಯಯೌ ದೃಷ್ಟ್ವಾ ಬೃಹದ್‌ವೃಕ್ಷ ಇವ ಸ್ರವನ್ ।
ಆಜ್ಞಾವಾನ್ ಸ್ಯಾತ್ ಸ್ವಯೂಥ್ಯೇಷು ಭೌಮಾನಿ ಚರಣೈಃ ಕ್ಷಿಪೇತ್ ॥೧೦॥

ತನ್ನ ಆಯವ್ಯಯಗಳನ್ನು ನೋಡಿ ದೊಡ್ಡ ವೃಕ್ಷದಂತಿರಬೇಕು. ವಟಾದಿ ವೃಕ್ಷವು ಬಹುರಸಸಂಗ್ರಹವಾದರೆ ತಾನು ಬಹಳ ರಸವನ್ನು ಸುರಿಸುತ್ತದೆ. ಇಲ್ಲದಿದ್ದರೆ ಅಲ್ಪ ರಸವನ್ನು ಸುರಿಸುತ್ತದೆ. ಹಾಗೆಯೇ ರಾಜನು ತನ್ನ ಆಯವ್ಯಯಗಳನ್ನು ನೋಡಿಕೊಂಡು ಪ್ರಜೆಗಳಿಗೆ ಧನವನ್ನು ಸುರಿಸುವ ವಿಷಯದಲ್ಲಿ ಆಜ್ಞೆಯನ್ನು ಮಾಡುವವನಾಗಬೇಕು. ಮಹಾವೃಕ್ಷವು ತನ್ನ ಬೇರುಗಳಿಂದ ಭೂಮಿಯನ್ನು ಆಕ್ರಮಿಸಿದಂತೆ ರಾಜನು ಭೂಮಿಯನ್ನು ಸಂಚಾರಮಾಡಿ ಕ್ರಮವಾಗಿ ಸಂಪಾದಿಸಬೇಕು. (ಲಕ್ಷ್ಯಲಂಕಾರ)

ಜಾತಪಕ್ಷಃ ಪರಿಸ್ಪಂದೇದ್ ರಕ್ಷೇದ್ ವೈಕಲ್ಯಮಾತ್ಮನಃ ॥೧೧॥

ಸಹಾಯವು ದೊರೆತ ಮೇಲೆ ರಾಜನು ಸಂಚರಿಸಬೇಕು. ಸಹಾಯವು ಸಿದ್ಧಿಸುವವರೆಗೆ ತನ್ನ ದೌರ್ಬಲ್ಯವನ್ನು ರಹಸ್ಯವಾಗಿ ಇಟ್ಟುಕೊಳ್ಳಬೇಕು.

ದೋಷಾನ್ ವಿವೃಣುಯಾಚ್ಚತ್ರೋಃ ಪರಪಕ್ಷಾನ್ ವಿಧೂನಯೇತ್ ।
ಕಾನನೇಷ್ವಿವ ಪುಷ್ಪಾಣಿ ಬಹೂನರ್ಥಾನ್ ಸಮಾಚರೇತ್ ॥೧೨॥

ಶತ್ರುವಿನ ದೋಷಗಳನ್ನು ಪ್ರಕಟಗೊಳಿಸಬೇಕು. ಶತ್ರುಪಕ್ಷಗಳನ್ನು ಕಂಪನ-ಗೊಳಿಸಬೇಕು. ಅರಣ್ಯಪುಷ್ಪಗಳಂತೆ ಅನೇಕ ಅರ್ಥಗಳನ್ನು ಸಾಧಿಸಲು ಸಂಚಾರವನ್ನು ಮಾಡಬೇಕು.

ಉಚ್ಚ್ರಿತಾನಾಶ್ರಯೇತ್ ಸ್ನಿಗ್ಧಾನ್ ನರೇಂದ್ರಾನಚಲೋಪಮಾನ್ ।
ಶ್ರಯೇಚ್ಛಾಯಾಮವಿಜ್ಞಾತಾಂ ಗುಪ್ತಂ ಶರಣಮಾಶ್ರಯೇತ್ ॥೧೩॥

ಉನ್ನತರೂ, ಶುದ್ಧರೂ ಪರ್ವತದಂತೆ ಇರುವವರೂ ಆದ ರಾಜರನ್ನು ಆಶ್ರ-ಯಿಸಬೇಕು. ಇನ್ನೊಬ್ಬರಿಗೆ ತಿಳಿಯದಂತೆ ಛಾಯೆಯನ್ನು ಆಶ್ರಯಿಸಬೇಕು. ಎಂದರೆ ತನ್ನ ವಾಸಸ್ಥಾನವು ಗುಪ್ತವಾಗಿರಬೇಕು.

ಪ್ರಾವೃಷೀವಾಸಿತಗ್ರೀವೋ ಮಜ್ಜೇತ ನಿಶಿ ನಿರ್ಜನೇ ।
ಮಾಯೂರೇಣ ಗುಣೇನೈವ ಸ್ತ್ರೀಭಿಶ್ಚಾಲಕ್ಷಿತಶ್ಚರೇತ್ ।
ನ ಜಹ್ಯಾಚ್ಚ ತನುತ್ರಾಣಂ ರಕ್ಷೇದಾತ್ಮಾನಮಾತ್ಮನಾ ॥೧೪॥

ಮಳೆಗಾಲದಲ್ಲಿ ನವಿಲಿನಂತೆ ನಿರ್ಜನವಾದ ಪ್ರದೇಶದಲ್ಲಿ ರಾತ್ರಿಯಲ್ಲಿ ಅಭ್ಯಂಗವನ್ನು ಮಾಡಬೇಕು. ನವಿಲಿನಂತೆಯೇ ಇನ್ನೊಬ್ಬರಿಗೆ ತಿಳಿಯದಂತೆ ಸ್ತ್ರೀಯರ ಜೊತೆಯಲ್ಲಿ ವಿಹರಿಸಬೇಕು. ನವಿಲು ತನ್ನ ಕವಚದಂತಿರುವ ನವಿಲುಗರಿಯನ್ನು ಎಂದೂ ಬಿಡದಂತೆ ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕು. (ಲಕ್ಷ್ಮಲಂಕಾರ)

ಚಾರಭೂಮಿಷ್ವಭಿಮತಾನ್ ಪಾಶಾಂಶ್ಚ ಪರಿವರ್ಜಯೇತ್ ।
ಪ್ರಸ್ಥಾಪಯೇದ್ ವಾ ತಾಂ ಭೂಮಿಂ ಪ್ರವಿಶೇದ್ ಗಹನೇ ಪುನಃ ॥೧೫॥

ಸಂಚಾರಮಾಡುವ ಭೂಮಿಗಳಲ್ಲಿ ಶತ್ರುಗಳು ಹಾಕಿರಬಹುದಾದ ಬಲಗಳ ರೂಪವಾದ ಪಾಶಗಳನ್ನು ಪರಿತ್ಯಜಿಸಬೇಕು. (ಶತ್ರುಗಳಿಂದ ಬಂಧನಕ್ಕೆ ಒಳಗಾ-ಗುವುದನ್ನು ತಪ್ಪಿಸಿಕೊಳ್ಳಬೇಕು). ಎಲ್ಲಿ ಅಪಾಯವಿಲ್ಲವೋ ಅಂತಹ ಭೂಮಿಯಲ್ಲಿ ಮಾತ್ರ ಸಂಚರಿಸಬೇಕು. ಅಂತಹ ಭೂಮಿಯಿಲ್ಲದಿದ್ದರೆ ಅರಣ್ಯವನ್ನು ಪ್ರವೇಶಿಸ-ಬೇಕು (ಲಕ್ಷ್ಮಲಂಕಾರ).

ಹನ್ಯಾತ್ ತಾನ್ ವಿಷಧರಾನ್ ಯೇ ಜಿಹ್ಮಗತಯೋಽಹಿತಾಃ।
ನಾಶಯೇದ್ ಪರಬರ್ಹಾಣಿ ಸನ್ನಿವಾಸಾನ್ ನಿವಾಸಯೇತ್ ॥೧೬॥

ವಿಷವನ್ನು ಧರಿಸಿದ ಕುಟಿಲಗತಿಗಳಾದ ಸರ್ಪಗಳಂತಿರುವ ಶತ್ರುಗಳನ್ನು ಸಂಹರಿಸಬೇಕು. ನವಿಲುಗರಿಯ ಸ್ಥಾನದಲ್ಲಿರುವ ಅವರ ಅಂಗರಕ್ಷಕಾದಿ ಪರಿವಾರವನ್ನು ನಾಶಗೊಳಿಸಬೇಕು. ತನ್ನ ಜೊತೆಯಲ್ಲಿ ಇರಲು ಯೋಗ್ಯರಾದವರನ್ನು ತನ್ನ ಜೊತೆಯಲ್ಲಿ ಇಟ್ಟುಕೊಳ್ಳಬೇಕು.

ಸದಾ ಬರ್ಹಿನಿಭಃ ಕಾಮಂ ಪ್ರಸಕ್ತಿಕೃತಮಾಚರೇತ್।
ಸರ್ವತಶ್ಚಾದದೇತ್ ಪ್ರಜ್ಞಾಂ ಪತಂಗಾನ್ ಗಹನೇಷ್ವಿವ।
ಏವಂ ಮಯೂರವದ್ ರಾಜಾ ಸ್ವರಾಷ್ಟ್ರಂ ಪರಿಪಾಲಯೇತ್ ॥೧೭॥

ಮಯೂರದಂತೆ ಸಮೀಪದಲ್ಲಿ ಸುಲಭವಾಗಿ ದೊರೆಯುವ ಕಾಮವನ್ನು ಮಾತ್ರ ಅನುಭವಿಸಬೇಕು. ಕಾಡಿನಲ್ಲಿ ಪತಂಗಗಳನ್ನು ಹಿಡಿದಂತೆ ಪ್ರಜ್ಞೆಯನ್ನು ಮಾತ್ರ ಎಲ್ಲ ಕಡೆಗಳಿಂದಲೂ ಸಂಪಾದಿಸಬೇಕು. ಹೀಗೆ ನವಿಲಿನಂತೆ ನಡೆದುಕೊಳ್ಳುವ ರಾಜನು ತನ್ನ ರಾಷ್ಟ್ರವನ್ನು ರಕ್ಷಿಸುವನು.

ಆತ್ಮವೃದ್ಧಿಕರೀಂ ನೀತಿಂ ವಿದಧೀತ ವಿಚಕ್ಷಣಃ।
ಆತ್ಮಸಂಯಮನಂ ಬುದ್ಧ್ಯಾ ಪರಬುದ್ಧ್ಯಾ ವಿಚಾರಣಾ।
ಬುದ್ಧ್ಯಾ ಚಾತ್ಮಗುಣಪ್ರಾಪ್ತಿರೇತಚ್ಛಾಸ್ತ್ರನಿದರ್ಶನಮ್ ॥೧೮॥

ವಿಚಕ್ಷಣನಾದ ರಾಜನು ತನಗೆ ವೃದ್ಧಿಯುಂಟಾಗುವ ನೀತಿಯನ್ನು ಅನುಸರಿಸಬೇಕು. ತನ್ನ ಬುದ್ಧಿಯಿಂದ ತನ್ನನ್ನು ನಿಯಂತ್ರಿಸಿಕೊಂಡು ಅಮಾತ್ಯಾದಿ ಪರಬುದ್ಧಿಯಿಂದ ವಿಚಾರಣೆಯನ್ನು ಮಾಡಬೇಕು. ವಿಮರ್ಶೆಯಿಂದ ಆತ್ಮಗುಣ ಪ್ರಾಪ್ತಿಯಾಗುತ್ತದೆ ಎಂಬುದು ಶಾಸ್ತ್ರದ ಆದೇಶವಾಗಿದೆ.

ಪರಂ ಚಾಶ್ವಾಸಯೇತ್ ಸಾಮ್ನಾ ಸ್ವಶಕ್ತಿಂ ಚೋಪಲಕ್ಷಯೇತ್।

ಆತ್ಮನಃ ಪರಿಮರ್ಶೇನ ಬುದ್ಧಿಂ ಬುದ್ಧ್ಯಾ ವಿಚಾರಯೇತ್ ।
ಸಾಂತ್ವಯೋಗಮತಿಃ ಪ್ರಾಜ್ಞಃ ಕಾರ್ಯಾಕಾರ್ಯವಿಚಾರಕಃ ॥೧೯॥

ಒಳ್ಳೆಯ ಮಾತುಗಳಿಂದ (ಸಾಮೋಪಾಯಗಳಿಂದ) ಇನ್ನೊಬ್ಬನು ತನ್ನಲ್ಲಿ ವಿಶ್ವಾಸವಿಡುವಂತೆ ಮಾಡಬೇಕು. ತನ್ನ ಶಕ್ತಿಯನ್ನು ತಾನು ಗಮನಿಸಬೇಕು. ತನ್ನನ್ನು ತಾನು ಪರಾಮರ್ಶೆಮಾಡಿಕೊಂಡು ಪರರ ಬುದ್ಧಿಯನ್ನು ತನ್ನ ಬುದ್ಧಿಯಿಂದ ವಿಚಾರಿಸಿ ತಿಳಿದು ಪ್ರಾಜ್ಞನಾದ ರಾಜನು ಸಾಮೋಪಾಯದಲ್ಲಿ ಬುದ್ಧಿಯನ್ನಿಟ್ಟು ಯಾವುದು ಕಾರ್ಯ ಯಾವುದು ಅಕಾರ್ಯ ಎಂದು ವಿಚಾರ ಮಾಡಬೇಕು.

ನಿಗೂಢಬುದ್ಧಿರ್ಧೀರಃ ಸ್ಯಾದ್ ವಕ್ತವ್ಯೋ ವಕ್ಷ್ಯತೇ ತಥಾ ।
ಸನ್ನಿಕೃಷ್ಟಾಂ ಕಥಾಂ ಪ್ರಾಜ್ಞೋ ಯದಿ ಬುದ್ಧ್ಯಾ ಬೃಹಸ್ಪತಿಃ ।
ಸ್ವಭಾವಮೇಷ್ಯತೇ ತಪ್ತಂ ಕೃಷ್ಣಾಯಸಮಿವೋದಕೇ ॥೨೦॥

ಧೀರನಾದ ರಾಜನು ತನ್ನ ಬುದ್ಧಿಯನ್ನು ಬಹಿರಂಗ ಪಡಿಸಬಾರದು. ಎಷ್ಟು ಹೇಳಬೇಕೋ ಅಷ್ಟನ್ನು ಮಾತನಾಡಬೇಕು. ಬುದ್ಧಿಯಿಂದ ಬೃಹಸ್ಪತಿಗೆ ಸಮನಾಗಿದ್ದರೂ ಪ್ರಾಕೃತವಾದ ಜನರು ಮಾತನಾಡುವಂತೆ ಮಾತನಾಡಿದರೆ ಅದು ಅವನ ಸ್ವಭಾವವೆಂದೇ ತಿಳಿಯಬೇಕು. ಕಾದ ಕಬ್ಬಿಣವನ್ನು ನೀರಿನಲ್ಲಿ ಹಾಕಿದರೆ ಅದು ಮೊದಲಿನಂತೆ ಕಪ್ಪಾಗಿಯೂ ತಣ್ಣಗೂ ಆಗುವುದಷ್ಟೇ!

ಅನುಯುಂಜೀತ ಕೃತ್ಯಾನಿ ಸರ್ವಾಣ್ಯೇವ ಮಹೀಪತಿಃ ।
ಆಗಮೈರುಪದಿಷ್ಟಾನಿ ಸ್ವಸ್ಯ ಚೈವ ಪರಸ್ಯ ಚ ॥೨೧॥

ರಾಜನಾದವನು ಶಾಸ್ತ್ರೋಪದಿಷ್ಟವಾದ, ತಾನು ಮಾಡಬೇಕಾದ ಮತ್ತು ಶತ್ರುಗಳು ಮಾಡುವ ಎಲ್ಲ ಕಾರ್ಯಗಳನ್ನೂ ಮಂತ್ರಿಗಳ ಜೊತೆಯಲ್ಲಿ ಪ್ರಶ್ನೆ ಮಾಡಿ ವಿಚಾರ ಮಾಡಬೇಕು.

ಮೃದುಶೀಲಂ ತಥಾ ಪ್ರಾಜ್ಞಂ ಶೂರಂ ಚಾರ್ಥವಿಶಾರದಮ್ ।
ಸ್ವಕರ್ಮಣಿ ನಿಯುಂಜೀತ ಯೇ ಚಾನ್ಯೇ ಚ ಬಲಾಧಿಕಾಃ ॥೨೨॥

ಮೃದುಸ್ವಭಾವವುಳ್ಳವನೂ, ಪ್ರಾಜ್ಞನೂ, ಶೂರನೂ, ಅರ್ಥವಿಶಾರದನೂ ಆದ ಸೇವಕನನ್ನೂ ಮತ್ತು ಬಲಿಷ್ಠರಾದವರನ್ನೂ ತನ್ನ ಕರ್ಮಗಳಲ್ಲಿ ನಿಯೋಜಿಸಬೇಕು.

ಅಥ ದೃಷ್ಟಾನಿ ಯುಕ್ತಾನಿ ಸ್ವಾನುರೂಪೇಷು ಕರ್ಮಸು।
ಸರ್ವಾಂಸ್ತಾನನುವರ್ತೇತ ಸ್ವರಾಂಸ್ತಂತ್ರೀರಿವಾಯತಾ ॥೨೩॥

ಶಾಸ್ತ್ರದೃಷ್ಟವಾದ ಮತ್ತು ಯುಕ್ತಿಯುಕ್ತವಾದ ಕರ್ಮಗಳಲ್ಲಿ ತನಗೆ ಅನುರೂಪರಾದ ಅಧಿಕಾರಿಗಳನ್ನು ನಿಯಮಿಸಬೇಕು. ತಂತಿಯು ಸ್ವರಗಳನ್ನು ಅನುಸರಿಸುವಂತೆ ರಾಜನು ಅವರೆಲ್ಲರನ್ನೂ ಅನುಸರಿಸಿ ನಡೆಯಬೇಕು.

ಧರ್ಮಾಣಾಮವಿರೋಧೇನ ಸರ್ವೇಷಾಂ ಪ್ರಿಯಮಾಚರೇತ್।
ಮಮಾಯಮಿತಿ ರಾಜಾ ಯಃ ಸ ಪರ್ವತ ಇವಾಚಲಃ ॥೨೪॥

ಧರ್ಮಕ್ಕೆ ವಿರೋಧ ಬರದಂತೆ ಎಲ್ಲರಿಗೂ ಪ್ರಿಯವನ್ನುಂಟುಮಾಡಬೇಕು. ಪ್ರಜೆಗಳನ್ನು ನನ್ನವರು ಎಂದು ತಿಳಿಯುವ ರಾಜನು ಪರ್ವತದಂತೆ ಸ್ಥಿರವಾಗಿರುತ್ತಾನೆ.

ವ್ಯವಸಾಯಂ ಸಮಾಧಾಯ ಸೂರ್ಯೋ ರಶ್ಮಿಮಿವಾಯತಾಮ್।
ಧರ್ಮಮೇವಾಭಿರಕ್ಷೇತ ಕೃತ್ವಾತುಲ್ಯೇ ಪ್ರಿಯಾಪ್ರಿಯೇ ॥೨೫॥

ಸೂರ್ಯನು ತನ್ನ ದೀರ್ಘವಾದ ರಶ್ಮಿಯಿಂದ ಪ್ರಿಯಾಪ್ರಿಯಗಳೆಲ್ಲವನ್ನೂ ಮುಟ್ಟುವಂತೆ ಪ್ರಯತ್ನವನ್ನು ಮುಂದಿಟ್ಟುಕೊಂಡು ಪ್ರಿಯಾಪ್ರಿಯಗಳನ್ನು ಸಮಾನವಾಗಿ ಎಣಿಸಿ ಧರ್ಮವನ್ನೇ ರಕ್ಷಿಸಬೇಕು.

ಕುಲಪ್ರಕೃತಿದೇಶಾನಾಂ ಧರ್ಮಜ್ಞಾನ್ ಮೃದುಭಾಷಿಣಃ।
ಮಧ್ಯೇ ವಯಸಿ ನಿರ್ದೋಷಾನ್ ಹಿತೇ ಯುಕ್ತಾನ್ ಜಿತೇಂದ್ರಿಯಾನ್ ॥೨೬

ಅಲುಬ್ಧಾನ್ ಶಿಕ್ಷಿತಾನ್ ದಾಂತಾನ್ ಧರ್ಮೇಷು ಪರಿನಿಷ್ಠಿತಾನ್।
ಸ್ಥಾಪಯೇತ್ ಸರ್ವಕಾರ್ಯೇಷು ರಾಜಾ ಧರ್ಮಾರ್ಥರಕ್ಷಿಣಃ ॥೨೭॥

ಕುಲಧರ್ಮಗಳನ್ನು ಸ್ವಭಾವಧರ್ಮಗಳನ್ನು ಮತ್ತುದೇಶಧರ್ಮಗಳನ್ನು ತಿಳಿದ, ಮೃದುಭಾಷಿಗಳಾದ, ಮಧ್ಯವಯಸ್ಸಿನಲ್ಲಿರುವ, ದೋಷದೂರರಾದ ಜಿತೇಂದ್ರಿಯರಾದ, ರಾಜನ ಹಿತದಲ್ಲಿ ಆಸಕ್ತರಾದ, ಲೋಭಿಗಳಲ್ಲದ, ಸುಶಿಕ್ಷಿತರಾದ, ಇಂದ್ರಿಯನಿಗ್ರಹವುಳ್ಳ , ಧರ್ಮದಲ್ಲಿ ಪರಿನಿಷ್ಠಿತರಾದ, ಅಧಿಕಾರಿಗಳನ್ನು ಧರ್ಮರಕ್ಷಕರನ್ನಾಗಿ ಮತ್ತುಅರ್ಥರಕ್ಷಕರನ್ನಾಗಿ ಎಲ್ಲ ಕಾರ್ಯಗಳಲ್ಲಿಯೂ ಸ್ಥಾಪಿಸಬೇಕು.

ಏತೇನೈವ ಪ್ರಕಾರೇಣ ಕೃತ್ಯಾನಾಮಾಗತಿಂ ಗತಿಮ್ ।
ಯುಕ್ತಃ ಸಮನುತಿಷ್ಠೇತ ತುಷ್ಟಶ್ಚಾಚೈರುಪಸ್ಕೃತಃ ॥೨೮॥

ಇದೇ ರೀತಿಯಿಂದ ಕಾರ್ಯಗಳ ಆದ ಅಥವಾ ಹೋದ ಗತಿಯನ್ನು ಚಾರರ ಮೂಲಕವಾಗಿ ಎಲ್ಲವನ್ನೂ ತಿಳಿದು ಎಚ್ಚರಿಕೆಯಿಂದ ಕೂಡಿದವನಾಗಿ ಸಂತೋಷದಿಂದ ಅನುಷ್ಠಾನ ಮಾಡಬೇಕು.

ಅಮೋಘಕ್ರೋಧಹರ್ಷಸ್ಯ ಸ್ವಯಂ ಕೃತ್ಯಾನ್ವವೇಕ್ಷಿಣಃ ।
ಆತ್ಮಪ್ರತ್ಯಯಕೋಶಸ್ಯ ವಸುದೈವ ವಸುಂಧರಾ ॥೨೯॥

ಯಾವ ರಾಜನ ಕ್ರೋಧ ಮತ್ತು ಹರ್ಷಗಳು ವ್ಯರ್ಥವಲ್ಲವೋ, ಯಾವ ರಾಜನು ಸ್ವತಃ ಎಲ್ಲ ಕಾರ್ಯಗಳ ಮೇಲ್ವಿಚಾರಣೆಯನ್ನು ಮಾಡುತ್ತಾನೆಯೋ ಮತ್ತು ತನ್ನನ್ನೇ ತಾನು ನಂಬುತ್ತಾನೆಯೋ (ಆತ್ಮವಿಶ್ವಾಸವೇ ಅವನಿಗೆ ಕೋಶವಾಗಿದೆಯೋ) ಅವನಿಗೆ ಭೂಮಿಯು ಐಶ್ವರ್ಯವನ್ನೇ ಕೊಡುತ್ತದೆ.

ವ್ಯಕ್ತಶ್ಚಾನುಗ್ರಹೋ ಯಸ್ಯ ಯಥಾರ್ಥಶ್ಚಾಪಿ ನಿಗ್ರಹಃ ।
ಗುಪ್ತಾತ್ಮಾ ಗುಪ್ತರಾಷ್ಟ್ರಶ್ಚ ಸ ರಾಜಾ ರಾಜಧರ್ಮವಿತ್ ॥೩೦॥

ಯಾವನ ಅನುಗ್ರಹವು ಪ್ರಜೆಗಳ ದೃಷ್ಟಿಗೆ ಗೋಚರವಾಗುತ್ತದೆಯೋ, ನಿಗ್ರಹವೂ ಅಪರಾಧಕ್ಕೆ ಅನುಗುಣವಾಗಿ ಪ್ರಜೆಗಳಿಗೆ ಗೋಚರವಾಗುತ್ತದೆಯೋ ಅಂತಹ ತನ್ನನ್ನು ರಕ್ಷಿಸಿಕೊಂಡು ರಾಷ್ಟ್ರವನ್ನೂ ರಕ್ಷಿಸುವ ರಾಜನು ರಾಜಧರ್ಮವನ್ನು ತಿಳಿದವನು.

ನಿತ್ಯಂ ರಾಷ್ಟ್ರಮವೇಕ್ಷೇತ ಗೋಭಿಃ ಸೂರ್ಯ ಇವೋತ್ಪತನ್ ।
ಚಾರಾಂಶ್ಚಾನುಚರಾನ್ ವಿದ್ಯಾತ್ ತಥಾ ಬುದ್ಧ್ಯಾ ನ ಸಂಜ್ವರೇತ್ ॥೩೧॥

ಉದಯಿಸುವ ಸೂರ್ಯನು ತನ್ನ ಕಿರಣಗಳಿಂದ ಎಲ್ಲವನ್ನೂ ನೋಡುವಂತೆ ನಿತ್ಯವೂ ರಾಷ್ಟ್ರವನ್ನು ನೋಡಿಕೊಳ್ಳಬೇಕು. ಚಾರರನ್ನು ಅವರ ಅನುಚರರನ್ನು ತಿಳಿದುಕೊಳ್ಳಬೇಕು. ಮನಸ್ಸಿನಲ್ಲಿ ವಿಹ್ವಲನಾಗಬಾರದು.

ಕಾಲಪ್ರಾಪ್ತಮುಪಾದದ್ಯಾನ್ನಾರ್ಥಂ ರಾಜಾ ಪ್ರಸೂಚಯೇತ್ ।
ಅಹನ್ಯಹನಿ ಸಂದುಹ್ಯಾನ್ಮಹೀಂ ಗಾಮಿವ ಬುದ್ಧಿಮಾನ್ ॥೩೨॥

ಆಯಾ ಕಾಲದಲ್ಲಿ ದೊರೆಯುವ ವಸ್ತುಗಳನ್ನು ಸಂಗ್ರಹಿಸಬೇಕು. ರಾಜನು ತಾನು ಮಾಡಲಿರುವ ಕಾರ್ಯವನ್ನು ಮೊದಲೇ ಸೂಚಿಸಬಾರದು. ವಿವೇಕಿಯಾದವನು ನಿತ್ಯವೂ ಹಸುವಿನಿಂದ ಹಾಲು ಕರೆಯುವಂತೆ ರಾಜನು ಭೂಮಿಯಿಂದ ಪ್ರತಿದಿನವೂ ಯೋಗ್ಯವಾದುದನ್ನು ಸಂಪಾದಿಸಬೇಕು.

ಯಥಾ ಕ್ರಮೇಣ ಪುಷ್ಪೇಭ್ಯಶ್ಚಿನೋತಿ ಮಧು ಷಟ್‌ಪದಃ ।
ತಥಾ ದ್ರವ್ಯಮುಪಾದಾಯ ರಾಜಾ ಕುರ್ವೀತ ಸಂಚಯಮ್ ॥೩೩॥

ದುಂಬಿಯು ಹೂಗಳಿಂದ ಕ್ರಮವಾಗಿ ಸ್ವಲ್ಪ ಸ್ವಲ್ಪ ಮಕರಂದವನ್ನು ಸಂಗ್ರಹಿಸುವಂತೆ ರಾಜನು ಪ್ರಜೆಗಳಿಂದ ಸ್ವಲ್ಪಸ್ವಲ್ಪವಾಗಿ ದ್ರವ್ಯವನ್ನು ಸಂಗ್ರಹಿಸಿ ಅದನ್ನು ಬೆಳೆಸಬೇಕು.

ಯದಿ ಗುಪ್ತಾವಶಿಷ್ಟಂ ಸ್ಯಾತ್ ತದ್ಧಿತಂ ಧರ್ಮಕಾಮಯೋಃ ।
ಸಂಚಯಾನುವಿಸರ್ಗೀ ಸ್ಯಾದ್ ರಾಜಾ ಶಾಸ್ತ್ರವಿದಾತ್ಮವಾನ್ ॥೩೪॥

ತಾನು ಸಂಗ್ರಹಿಸಿದ ಕೋಶವು ಧರ್ಮ ಕಾಮಗಳಿಗೆ ಉಪಯೋಗಿಸಿ ಗುಪ್ತವಾಗಿ ಇಟ್ಟುದಕ್ಕಿಂತಲೂ ಅಧಿಕವಾದರೆ ಅದನ್ನು ಶಾಸ್ತ್ರವನ್ನು ತಿಳಿದ ಧೈರ್ಯಶಾಲಿಯಾದ ರಾಜನು ಸಂಚಯಕ್ಕನುಗುಣವಾಗಿ ಪ್ರಜೆಗಳಿಗೆ ದಾನ ಮಾಡಬೇಕು.

ನಾಲ್ಪಮರ್ಥಂ ಪರಿಭವೇನ್ನಾವಮನ್ಯೇತ ಶಾತ್ರವಾನ್ ।
ಬುದ್ಧ್ಯಾऽವಬುದ್ಧ್ಯೇದಾತ್ಮಾನಂ ನ ಚಾಬುದ್ಧಿಷು ವಿಶ್ವಸೇತ್ ॥೩೫॥

ಅಲ್ಪವಾದ ಧನವನ್ನು ತಿರಸ್ಕರಿಸಬಾರದು. ಶತ್ರುಗಳನ್ನು ಉಪೇಕ್ಷೆ ಮಾಡ-ಬಾರದು. ತನ್ನನ್ನೇ ತನ್ನ ಬುದ್ಧಿಯಿಂದ ಪರೀಕ್ಷಿಸಿಕೊಳ್ಳಬೇಕು. ಬುದ್ಧಿಹೀನರಾದವರಲ್ಲಿ ವಿಶ್ವಾಸ ಮಾಡಬಾರದು.

ಧೃತಿರ್ದಾಕ್ಷ್ಯಂ ಸಂಯಮೋ ಬುದ್ಧಿರಗ್ರ್ಯಾ
ಧೈರ್ಯಂ ಶೌರ್ಯಂ ದೇಶಕಾಲೋऽಪ್ರಮಾದಃ ।
ಸ್ವಲ್ಪಸ್ಯ ವಾ ಮಹತೋ ವಾಪಿ ವೃದ್ಧೌ
ಧನಸ್ಯೈತಾನ್ಯಷ್ಟ ಸಮಿಂಧನಾನಿ ॥೩೬॥

ಧೈರ್ಯ, ದಕ್ಷತೆ, ಸಂಯಮ, ಶ್ರೇಷ್ಠವಾದ ಬುದ್ಧಿ, ಧೈರ್ಯ, ಶೌರ್ಯ, ದೇಶಕಾಲಾನುಕೂಲತೆ, ಅಪ್ರಮಾದ ಈ ಎಂಟು ಗುಣಗಳು ಸ್ವಲ್ಪ ಧನವನ್ನು ಅಥವಾ ಮಹಾಧನವನ್ನು ವೃದ್ಧಿಮಾಡುವುದಕ್ಕೆ ಬೇಕಾದ ಶ್ರೇಷ್ಠವಾದ ಸಾಧನಗಳು.

ಅಗ್ನಿಸ್ತೋಕೋ ವರ್ಧತೇ ಹ್ಯಾಜ್ಯಸಿಕ್ತೋ
ಬೀಜಂ ಚೈಕಂ ಬಹುಸಾಹಸ್ರಮೇತಿ ।
ಕ್ಷಯೋದಯೌ ವಿಪುಲೌ ಸನ್ನಿಶಾಮ್ಯ
ತಸ್ಮಾದಲ್ಪಂ ನಾವಮನ್ಯೇತ ವಿದ್ವಾನ್ ॥೩೭॥

ಅಲ್ಪವಾದ ಅಗ್ನಿಯು ಆಜ್ಯಸಿಕ್ತವಾಗಿ ಬೆಳೆಯುತ್ತದೆ. ಭೂಮಿಯಲ್ಲಿ ನೆಟ್ಟ ಒಂದು ಬೀಜವು ಅನೇಕಸಹಸ್ರ ಬೀಜಗಳಾಗುತ್ತವೆ. ಸಣ್ಣಪದಾರ್ಥದಿಂದುಂಟಾಗುವ ಅಭಿ-ವೃದ್ಧಿ ಮತ್ತು ಅವನತಿಗಳು ವಿಪುಲವಾದವುಗಳು ಎಂದು ಚೆನ್ನಾಗಿ ತಿಳಿದು ವಿದ್ವಾಂಸ-ನಾದವನು ಅಲ್ಪವಾದುದನ್ನು ಉಪೇಕ್ಷಿಸಬಾರದು.

ಬಾಲೋऽಬಾಲಃ ಸ್ಥವಿರೋ ವಾ ರಿಪುರ್ಯಃ
ಸದಾ ಪ್ರಮತ್ತಂ ಪುರುಷಂ ನಿಹನ್ಯಾತ್ ।

ಕಾಲೇನಾನ್ಯಸ್ತಸ್ಯ ಮೂಲಂ ಹರೇತ
ಕಾಲಜ್ಞಾತಾ ಪಾರ್ಥಿವಾನಾಂ ವರಿಷ್ಠಃ ॥೩೮॥

ಪ್ರಮತ್ತನಾದ ಶತ್ರುವು ಬಾಲನಾಗಲೀ, ಯುವಕನಾಗಲೀ, ವೃದ್ಧನಾಗಲೀ ಅವನನ್ನು ಸಂಹರಿಸಬೇಕು. ಇಲ್ಲದಿದ್ದರೆ ಅವನು ಅವನಿಗೆ ಯೋಗ್ಯವಾದ ಕಾಲದಲ್ಲಿ ಈ ರಾಜನ ಮೂಲವನ್ನೇ ನಾಶ ಮಾಡಬಹುದು. ಆಯಾ ಕಾರ್ಯವನ್ನು ಮಾಡಲು ಯೋಗ್ಯವಾದ ಕಾಲವನ್ನು ತಿಳಿದ ರಾಜನು ರಾಜರಲ್ಲಿ ಶ್ರೇಷ್ಠನಾದವನಾಗುತ್ತಾನೆ.

ಹರೇತ್ ಕೀರ್ತಿಂ ಧರ್ಮಮಸ್ಯೋಪರುಂಧ್ಯಾದ್
ಅರ್ಥೇ ವಿಘ್ನಂ ವೀರ್ಯಮಸ್ಯೋಪಹನ್ಯಾತ್ ।
ರಿಪುರ್ದ್ವೇಷ್ಟಾ ದುರ್ಬಲೋ ವಾ ಬಲೀ ವಾ
ತಸ್ಮಾಚ್ಛತ್ರೌ ನೈವ ಬಿಭ್ಯೇದ್ ಯತಾತ್ಮಾ ॥೩೯॥

ಶತ್ರುವಿನ ಕೀರ್ತಿಯನ್ನು ವಿನಾಶಗೊಳಿಸಬೇಕು. ಅವನ ಧರ್ಮಕ್ಕೆ ಅಡ್ಡಿಯನ್ನು ಮಾಡಬೇಕು. ಅವನ ಅರ್ಥಕ್ಕೆ ವಿಘ್ನವನ್ನುಂಟುಮಾಡಬೇಕು. ಅವನ ಪರಾಕ್ರಮವನ್ನು ನಾಶಗೊಳಿಸಬೇಕು. ದ್ವೇಷವನ್ನು ಮಾಡುವ ಶತ್ರುವು ದುರ್ಬಲನಾಗಿರಲಿ ಅಥವಾ ಪ್ರಬಲನಾಗಿರಲಿ ಪ್ರಯತ್ನಶೀಲನಾದ ರಾಜನು ಅವನಿಗೆ ಹೆದರಬಾರದು.

ಕ್ಷಯೇ ಶತ್ರೋಃ ಸಂಚಯಂ ಪಾಲನಂ ಚಾ-
ಪ್ಯುಭೌ ಬುದ್ಧ್ಯಾ ಸಹಿತೌ ಸರ್ವಕಾಮೌ ।
ಅತಶ್ಚಾನ್ಯನ್ಮತಿಮಾನ್ ಸಂದಧೀತ
ತಸ್ಮಾದ್ ರಾಜಾ ಬುದ್ಧಿಮಂತಂ ಶ್ರಯೇತ ॥೪೦॥

ಶತ್ರುವು ನಾಶವನ್ನು ಹೊಂದಿದಾಗ ಅವನ ಕೋಶದಲ್ಲಿರುವ ಧನವನ್ನು ಸಂಗ್ರಹಿಸಬೇಕು. ಮತ್ತು ರಾಜಕುಮಾರನನ್ನು ಆ ದೇಶದಲ್ಲಿಯೇ ರಕ್ಷಿಸಬೇಕು. ಇವೆರಡನ್ನೂ ಬುದ್ಧಿಯಿಂದ ವಿಚಾರಮಾಡಿದರೆ ಇವು ಸರ್ವಕಾಮಪ್ರದವಾಗುತ್ತವೆ. ಶತ್ರುಕುಮಾರನು ದುರ್ಜನನಾಗಿದ್ದರೆ ಅವನ ಬಂಧನ, ಸಜ್ಜನನಾಗಿದ್ದರೆ ಅವನ ಪಾಲನೆ ಎಂಬ ವಿವೇಕವನ್ನು ಹೊಂದಲು ಬುದ್ಧಿಯಿಂದ ವಿಮರ್ಶೆಯು ಅವಶ್ಯಕ.

ಬಂಧನ ಮತ್ತು ರಕ್ಷಣೆಗಳ ಮಧ್ಯದಲ್ಲಿ ಯಾವುದಾದರೂ ಒಂದನ್ನು ಅನುಷ್ಠಾನ ಮಾಡಬೇಕು. ಆದ್ದರಿಂದ ರಾಜನು ಬುದ್ಧಿವಂತನನ್ನು ಆಶ್ರಯಿಸಬೇಕು. (ಲಕ್ಷ್ಮಲಂಕಾರ)

ಬುದ್ಧಿರ್ದೀಪ್ತಾ ಬಲವಂತಂ ಹಿನಸ್ತಿ
ಬಲಂ ಬುದ್ಧ್ಯಾ ವರ್ಧತೇ ಪಾಲ್ಯಮಾನಮ್ ।
ಶತ್ರುರ್ಬುದ್ಧ್ಯಾ ಸೀದತೇ ವರ್ಧಮಾನೋ
ಬುದ್ಧೇಃ ಪಶ್ಚಾತ್ ಕರ್ಮ ಯತ್ ತತ್ ಪ್ರಶಸ್ತಮ್ ॥೪೧॥

ಕ್ರೂರವಾದ ಬುದ್ಧಿಯು ಬಲಿಷ್ಠನಾದ ತನ್ನನ್ನು ನಾಶಪಡಿಸುತ್ತದೆ. ಬುದ್ಧಿಯಿಂದ ರಕ್ಷಿಸಲ್ಪಡುವ ತನ್ನ ಸೈನ್ಯವು ಅಭಿವೃದ್ಧಿಯನ್ನು ಹೊಂದುತ್ತದೆ. ಸರಿಯಾದ ಬುದ್ಧಿಯನ್ನು ಉಪಯೋಗಿಸಿದರೆ ಏಳಿಗೆಯನ್ನು ಹೊಂದುತ್ತಿರುವ ಶತ್ರುವು ಅವನತಿಯನ್ನು ಹೊಂದುತ್ತಾನೆ. ಆದ್ದರಿಂದ ಬುದ್ಧಿಯು ಪ್ರಶಸ್ತವಾದುದು ಅನಂತರ ಅದಕ್ಕೆ ಅನುಗುಣವಾದ ಕರ್ಮವು ಪ್ರಶಸ್ತವಾದುದು.

ಸರ್ವಾನ್ ಕಾಮಾನ್ ಕಾಮಯಾನೋ ಹಿ ಧೀರಃ
ಸತ್ತ್ವೇನಾಲ್ಪೇನಾಪ್ನುತೇ ಹೀನದೇಹಃ ।
ಯಥಾತ್ಮಾನಂ ಪ್ರಾರ್ಥಯತೇಽರ್ಥ್ಯಮಾನೈಃ
ಶ್ರೇಯಃಪಾತ್ರಂ ಪೂರಯತೇ ಹ್ಯನಲ್ಪಮ್ ॥೪೨॥

ದೋಷರಹಿತನಾದ ಧೀರನಾದ ರಾಜನು ತನ್ನ ಎಲ್ಲ ಕಾಮಗಳನ್ನೂ ಅಲ್ಪಪ್ರಯತ್ನದಿಂದಲೇ ಪಡೆಯುತ್ತಾನೆ. ಸರ್ವಸಂಪನ್ನನಾಗಿದ್ದರೂ ಪ್ರಜೆಗಳಿಂದ ಅರ್ಥ-ಮಾನಗಳಿಂದ ತಾನು ಪೂಜಿಸಲ್ಪಡಬೇಕೆಂದು ಬಯಸುವ ರಾಜನು ಅನಲ್ಪವಾದ ತನ್ನ ಶ್ರೇಯಃಪಾತ್ರೆಯನ್ನು ಪೂರಣಗೊಳಿಸುವುದಿಲ್ಲ(?). ಅಂತಹ ದುರಾಸೆಯುಳ್ಳ ರಾಜನು ಶ್ರೇಯಸ್ಸನ್ನು ಹೊಂದುವುದಿಲ್ಲ.

ತಸ್ಮಾದ್ ರಾಜಾ ಪ್ರಗೃಹೀತಃ ಪ್ರಜಾಸು
ಮೂಲಂ ಲಕ್ಷ್ಮ್ಯಾಃ ಸರ್ವತೋಽಭ್ಯಾದದೀತ ।

ಕಾಲೇನಾನ್ಯಸ್ತಸ್ಯ ಮೂಲಂ ಹರೇತ
ಕಾಲಜ್ಞಾತಾ ಪಾರ್ಥಿವಾನಾಂ ವರಿಷ್ಠಃ ॥೩೮॥

ಪ್ರಮತ್ತನಾದ ಶತ್ರುವು ಬಾಲನಾಗಲೀ, ಯುವಕನಾಗಲೀ, ವೃದ್ಧನಾಗಲೀ ಅವನನ್ನು ಸಂಹರಿಸಬೇಕು. ಇಲ್ಲದಿದ್ದರೆ ಅವನು ಅವನಿಗೆ ಯೋಗ್ಯವಾದ ಕಾಲದಲ್ಲಿ ಈ ರಾಜನ ಮೂಲವನ್ನೇ ನಾಶ ಮಾಡಬಹುದು. ಆಯಾ ಕಾರ್ಯವನ್ನು ಮಾಡಲು ಯೋಗ್ಯವಾದ ಕಾಲವನ್ನು ತಿಳಿದ ರಾಜನು ರಾಜರಲ್ಲಿ ಶ್ರೇಷ್ಠನಾದವನಾಗುತ್ತಾನೆ.

ಹರೇತ್ ಕೀರ್ತಿಂ ಧರ್ಮಮಸ್ಯೋಪರುಂಧ್ಯಾದ್
ಅರ್ಥೇ ವಿಘ್ನಂ ವೀರ್ಯಮಸ್ಯೋಪಹನ್ಯಾತ್ ।
ರಿಪುರ್ದ್ವೇಷ್ಟಾ ದುರ್ಬಲೋ ವಾ ಬಲೀ ವಾ
ತಸ್ಮಾಚ್ಚತ್ರೌ ನೈವ ಬಿಭ್ಯೇದ್ ಯತಾತ್ಮಾ ॥೩೯॥

ಶತ್ರುವಿನ ಕೀರ್ತಿಯನ್ನು ವಿನಾಶಗೊಳಿಸಬೇಕು. ಅವನ ಧರ್ಮಕ್ಕೆ ಅಡ್ಡಿಯನ್ನು ಮಾಡಬೇಕು. ಅವನ ಅರ್ಥಕ್ಕೆ ವಿಘ್ನವನ್ನುಂಟುಮಾಡಬೇಕು. ಅವನ ಪರಾಕ್ರಮವನ್ನು ನಾಶಗೊಳಿಸಬೇಕು. ದ್ವೇಷವನ್ನು ಮಾಡುವ ಶತ್ರುವು ದುರ್ಬಲನಾಗಿರಲಿ ಅಥವಾ ಪ್ರಬಲನಾಗಿರಲಿ ಪ್ರಯತ್ನಶೀಲನಾದ ರಾಜನು ಅವನಿಗೆ ಹೆದರಬಾರದು.

ಕ್ಷಯೇ ಶತ್ರೋಃ ಸಂಚಯಂ ಪಾಲನಂ ಚಾ-
ಪ್ಯುಭೌ ಬುದ್ಧ್ಯಾ ಸಹಿತೌ ಸರ್ವಕಾಮೌ ।
ಅತಶ್ಚಾನ್ಯನ್ಮತಿಮಾನ್ ಸಂದಧೀತ
ತಸ್ಮಾದ್ ರಾಜಾ ಬುದ್ಧಿಮಂತಂ ಶ್ರಯೇತ ॥೪೦॥

ಶತ್ರುವು ನಾಶವನ್ನು ಹೊಂದಿದಾಗ ಅವನ ಕೋಶದಲ್ಲಿರುವ ಧನವನ್ನು ಸಂಗ್ರಹಿಸಬೇಕು. ಮತ್ತು ರಾಜಕುಮಾರನನ್ನು ಆ ದೇಶದಲ್ಲಿಯೇ ರಕ್ಷಿಸಬೇಕು. ಇವೆರಡನ್ನೂ ಬುದ್ಧಿಯಿಂದ ವಿಚಾರಮಾಡಿದರೆ ಇವು ಸರ್ವಕಾಮಪ್ರದವಾಗುತ್ತವೆ. ಶತ್ರುಕುಮಾರನು ದುರ್ಜನನಾಗಿದ್ದರೆ ಅವನ ಬಂಧನ, ಸಜ್ಜನನಾಗಿದ್ದರೆ ಅವನ ಪಾಲನೆ ಎಂಬ ವಿವೇಕವನ್ನು ಹೊಂದಲು ಬುದ್ಧಿಯಿಂದ ವಿಮರ್ಶೆಯು ಅವಶ್ಯಕ.

ಬಂಧನ ಮತ್ತು ರಕ್ಷಣೆಗಳ ಮಧ್ಯದಲ್ಲಿ ಯಾವುದಾದರೂ ಒಂದನ್ನು ಅನುಷ್ಠಾನ ಮಾಡಬೇಕು. ಆದ್ದರಿಂದ ರಾಜನು ಬುದ್ಧಿವಂತನನ್ನು ಆಶ್ರಯಿಸಬೇಕು. (ಲಕ್ಷ್ಮಾಲಂಕಾರ)

ಬುದ್ಧಿರ್ದೀಪ್ತಾ ಬಲವಂತಂ ಹಿನಸ್ತಿ
ಬಲಂ ಬುದ್ಧ್ಯಾ ವರ್ಧತೇ ಪಾಲ್ಯಮಾನಮ್ ।
ಶತ್ರುರ್ಬುದ್ಧ್ಯಾ ಸೀದತೇ ವರ್ಧಮಾನೋ
ಬುದ್ಧೇಃ ಪಶ್ಚಾತ್ ಕರ್ಮ ಯತ್ ತತ್ ಪ್ರಶಸ್ತಮ್ ॥೪೧॥

ಕ್ರೂರವಾದ ಬುದ್ಧಿಯು ಬಲಿಷ್ಠನಾದ ತನ್ನನ್ನು ನಾಶಪಡಿಸುತ್ತದೆ. ಬುದ್ಧಿಯಿಂದ ರಕ್ಷಿಸಲ್ಪಡುವ ತನ್ನ ಸೈನ್ಯವು ಅಭಿವೃದ್ಧಿಯನ್ನು ಹೊಂದುತ್ತದೆ. ಸರಿಯಾದ ಬುದ್ಧಿಯನ್ನು ಉಪಯೋಗಿಸಿದರೆ ಏಳಿಗೆಯನ್ನು ಹೊಂದುತ್ತಿರುವ ಶತ್ರುವು ಅವನತಿಯನ್ನು ಹೊಂದುತ್ತಾನೆ. ಆದ್ದರಿಂದ ಬುದ್ಧಿಯು ಪ್ರಶಸ್ತವಾದುದು ಅನಂತರ ಅದಕ್ಕೆ ಅನುಗುಣವಾದ ಕರ್ಮವು ಪ್ರಶಸ್ತವಾದುದು.

ಸರ್ವಾನ್ ಕಾಮಾನ್ ಕಾಮಯಾನೋ ಹಿ ಧೀರಃ
ಸತ್ತ್ವೇನಾಲ್ಪೇನಾಪ್ನುತೇ ಹೀನದೇಹಃ ।
ಯಥಾತ್ಮಾನಂ ಪ್ರಾರ್ಥಯತೇಽರ್ಥ್ಯಮಾನೈಃ
ಶ್ರೇಯಃಪಾತ್ರಂ ಪೂರಯತೇ ಹ್ಯನಲ್ಪಮ್ ॥೪೨॥

ದೋಷರಹಿತನಾದ ಧೀರನಾದ ರಾಜನು ತನ್ನ ಎಲ್ಲ ಕಾಮಗಳನ್ನೂ ಅಲ್ಪಪ್ರಯತ್ನದಿಂದಲೇ ಪಡೆಯುತ್ತಾನೆ. ಸರ್ವಸಂಪನ್ನನಾಗಿದ್ದರೂ ಪ್ರಜೆಗಳಿಂದ ಅರ್ಥಮಾನಗಳಿಂದ ತಾನು ಪೂಜಿಸಲ್ಪಡಬೇಕೆಂದು ಬಯಸುವ ರಾಜನು ಅನಲ್ಪವಾದ ತನ್ನ ಶ್ರೇಯಃಪಾತ್ರೆಯನ್ನು ಪೂರಣಗೊಳಿಸುವುದಿಲ್ಲ(?). ಅಂತಹ ದುರಾಸೆಯುಳ್ಳ ರಾಜನು ಶ್ರೇಯಸ್ಸನ್ನು ಹೊಂದುವುದಿಲ್ಲ.

ತಸ್ಮಾದ್ ರಾಜಾ ಪ್ರಗೃಹೀತಃ ಪ್ರಜಾಸು
ಮೂಲಂ ಲಕ್ಷ್ಮ್ಯಾಃ ಸರ್ವತೋಽಭ್ಯಾದದೀತ ।

ದೀರ್ಘಂ ಕಾಲಮಪಿ ಸಂಪೀಡ್ಯಮಾನೋ
ವಿದ್ಯುತ್ಸಂಪಾತಮಪಿ ನೋ ನಿರ್ಜಿತಃ ಸ್ಯಾತ್ ॥೪೩॥

ಆದ್ದರಿಂದ ಪ್ರಜೆಗಳಿಂದ ಸ್ವೀಕೃತನಾದ ರಾಜನು ಸಂಪತ್ತಿಗೆ ಮೂಲವಾದ ಧನವನ್ನು ಪ್ರಜೆಗಳಿಂದ ಎಲ್ಲ ಕಡೆಗಳಿಂದಲೂ ಸಂಗ್ರಹಿಸಬೇಕು. ಅಂತಹ ರಾಜನು ಸಿಡಿಲುಬಡಿದಂತಹ ಅನರ್ಥಕ್ಕೆ ದೀರ್ಘಕಾಲದವರೆಗೆ ಒಳಗಾದರೂ ಪರಾಜಿತನಾಗುವುದಿಲ್ಲ. (ಮಿಂಚಿನಂತಹ ಐಶ್ವರ್ಯವನ್ನು ಹೊಂದಿದರೂ ಪರಾಜಿತನಾಗುವುದಿಲ್ಲ - ಲಕ್ಷ್ಮಲಂಕಾರ)

ವಿದ್ಯಾ ತಪೋ ವಾ ವಿಪುಲಂ ಧನಂ ವಾ
ಸರ್ವಮೇತದ್ ವ್ಯವಸಾಯೇನ ಶಕ್ಯಮ್ ।
ಬ್ರಹ್ಮ ಯತ್ತಂ ನಿವಸತಿ ದೇಹವತ್ಸು
ತಸ್ಮಾದ್ ವಿದ್ಯಾದ್ ವ್ಯವಸಾಯಂ ಪ್ರಭೂತಮ್ ॥೪೪॥

ವಿದ್ಯೆಯಾಗಲೀ, ತಪಸ್ಸಾಗಲೀ, ವಿಪುಲವಾದ ಧನವಾಗಲೀ ಎಲ್ಲವೂ ಪ್ರಯತ್ನದಿಂದ ಲಭ್ಯವಾಗುತ್ತದೆ. ಜೀವರಲ್ಲಿ ಪ್ರಯತ್ನರೂಪನಾದ ಪರಬ್ರಹ್ಮನು ನೆಲೆಸಿದ್ದಾನೆ. ಆದ್ದರಿಂದ ಪ್ರಯತ್ನವು ಶ್ರೇಷ್ಠವಾದುದೆಂದು ತಿಳಿಯಬೇಕು.

ಯತ್ರಾಸತೇ ಮತಿಮಂತೋ ಮನಸ್ವಿನಃ
ಶಕ್ರೋ ವಿಷ್ಣುರ್ಯತ್ರ ಸರಸ್ವತೀ ಚ ।
ವಸಂತಿ ಭೂತಾನಿ ಚ ಯತ್ರ ನಿತ್ಯಂ
ತಸ್ಮಾದ್ ವಿದ್ವಾನ್ ನಾವಮನ್ಯೇತ ದೇಹಮ್ ॥೪೫॥

ಯಾವ ದೇಹದಲ್ಲಿ ಮೇಧಾವಿಗಳೂ, ಧೈರ್ಯಶಾಲಿಗಳೂ ಆದ ಇಂದ್ರ, ವಿಷ್ಣು, ಸರಸ್ವತಿಯರು ಮತ್ತು ಎಲ್ಲಾ ಭೂತಗಳೂ ನಿತ್ಯವೂ ನೆಲೆಸಿರುವರೋ ಆ ಕಾರಣದಿಂದ ಆ ದೇಹವನ್ನು ವಿದ್ವಾಂಸನಾದವನು ಅವಮಾನಗೊಳಿಸಬಾರದು.

ಲುಬ್ಧಂ ಹನ್ಯಾತ್ ಸಂಪ್ರದಾನೇನ ನಿತ್ಯಂ
ಲುಬ್ಧಸ್ಯಪ್ತಿಂ ಪರವಿತ್ತಸ್ಯ ನೈತಿ ।

ಸರ್ವೋ ಲುಬ್ಧಃ ಕರ್ಮಗುಣೋಪಭೋಗೇ
ಯೋಽರ್ಥೈರ್ಹೀನೋ ಧರ್ಮಕಾಮೌ ಜಹಾತಿ ॥೪೬॥

ಲೋಭಿಯಾದವನಿಗೆ ಧನವನ್ನು ನೀಡಿಯೇ ಅವನನ್ನು ಜಯಿಸಬೇಕು. ಲೋಭಿಯಾದವನು ಇನ್ನೊಬ್ಬರ ವಿತ್ತವು ಎಷ್ಟು ಬಂದರೂ ತೃಪ್ತಿಯನ್ನು ಹೊಂದುವುದಿಲ್ಲ. ಎಲ್ಲರಿಗೂ ಸತ್ಕರ್ಮದಿಂದ ಉಂಟಾದ ಗುಣಗಳ ಭೋಗದಲ್ಲಿ ಆಸೆಯಿರುತ್ತದೆ. ಅರ್ಥಹೀನನಾದವನು ಧರ್ಮವನ್ನೂ, ಕಾಮವನ್ನೂ ಕಳೆದುಕೊಳ್ಳುತ್ತಾನೆ. (ಧರ್ಮಾಚರಣೆಯನ್ನೂ ಮಾಡಲಾರ, ಕಾಮಭೋಗವನ್ನೂ ಮಾಡಲಾರ).

ಧನಂ ಭೋಜ್ಯಂ ಪುತ್ರದಾರಂ ಸಮೃದ್ಧಿಂ
ಸರ್ವೋ ಲುಬ್ಧಃ ಪ್ರಾರ್ಥಯತೇ ಪರೇಷಾಮ್ ।
ಲುಬ್ಧೇ ದೋಷಾಃ ಸಂಭವಂತೀಹ ಸರ್ವೇ
ತಸ್ಮಾದ್ ರಾಜಾ ನ ಪ್ರಗೃಹ್ಣೀತ ಲುಬ್ಧಾನ್ ॥೪೭॥

ಲೋಭಿಯಾದವನು ಇನ್ನೊಬ್ಬರ ಧನ ಭೋಜ್ಯವಸ್ತುಗಳು, ಪತ್ನೀಪುತ್ರರು, ಸಮೃದ್ಧಿ ಎಲ್ಲವನ್ನೂ ಅಪೇಕ್ಷಿಸುತ್ತಾನೆ. ಅವನಲ್ಲಿ ಎಲ್ಲ ದೋಷಗಳೂ ಉಂಟಾಗುತ್ತವೆ. ಆದ್ದರಿಂದ ರಾಜನು ಲೋಭಿಗಳನ್ನು ಹತ್ತಿರ ಸೇರಿಸಬಾರದು.

ಸಂದರ್ಶನೇ ಸತ್ಪುರುಷಂ ಜಘನ್ಯಮಪಿ ಚೋದಯೇತ್ ।
ಆರಂಭಾನ್ ದ್ವಿಷತಾಂ ಪ್ರಾಜ್ಞಃ ಸರ್ವಾನರ್ಥಾಂಸ್ತು ಸೂದಯೇತ್ ॥೪೮॥

ಅಲ್ಪನಾದ ಸತ್ಪುರುಷನಿಗೂ ಸಂದರ್ಶನವನ್ನು ಕೊಡುವುದಕ್ಕಾಗಿ ಒಳಗೆ ಬಿಡುವಂತೆ ದ್ವಾರಪಾಲಕರಿಗೆ ಸೂಚನೆಯನ್ನು ನೀಡಬೇಕು. ಪ್ರಾಜ್ಞನಾದ ರಾಜನು ಶತ್ರುಗಳ ಸರ್ವೋಪಕ್ರಮಗಳನ್ನು ಮತ್ತು ಸರ್ವಾರ್ಥಗಳನ್ನು ನಾಶಗೊಳಿಸಬೇಕು. - (ಲಕ್ಷ್ಮಲಂಕಾರ)

ಧರ್ಮಾನ್ವಿತೇಷು ವಿಜ್ಞಾತೋ ಮಂತ್ರೀ ಗುಪ್ತಶ್ಚ ಪಾಂಡವ।
ಆಪ್ತೋ ರಾಜನ್ ಕುಲೀನಶ್ಚ ಪರ್ಯಾಪ್ತೋ ರಾಜ್ಯಸಂಗ್ರಹೇ ॥೪೯॥

ಎಲೈ ಪಾಂಡವನೇ! ಧರ್ಮಸಂಬದ್ಧಕಾರ್ಯಗಳ ಜ್ಞಾನವುಳ್ಳ, ಸ್ವತಃ ರಕ್ಷಿತನಾದ, ಆಪ್ತನೂ, ಕುಲೀನನೂ ಆದ ಮಂತ್ರಿಯು ರಾಜ್ಯವನ್ನು ಚೆನ್ನಾಗಿ ನೋಡಿಕೊಳ್ಳಲು ಸಮರ್ಥನಾಗುತ್ತಾನೆ.

ವಿಧಿಪ್ರವೃತ್ತಾನ್ ನರದೇವಧರ್ಮಾನ್
ಉಕ್ತಾನ್ ಸಮಾಸೇನ ನಿಬೋಧ ಬುದ್ಧ್ಯಾ।
ಇಮಾನ್ ವಿದಧ್ಯಾದ್ ವ್ಯತಿಸೃತ್ಯ ಯೋಽಸೌ
ರಾಜಾ ಮಹೀಂ ಪಾಲಯಿತುಂ ಸ ಶಕ್ತಃ ॥೫೦॥

ನಾನು ಸಂಕ್ಷೇಪವಾಗಿ ಹೇಳಿದ ಶಾಸ್ತ್ರಗಳಲ್ಲಿ ಪ್ರವೃತ್ತವಾದ ರಾಜಧರ್ಮಗಳನ್ನು ಬುದ್ಧಿಯಿಂದ ತಿಳಿದುಕೋ. ಯಾವ ರಾಜನು ಇವುಗಳನ್ನು ಅನುಸರಿಸಿ ಕಾರ್ಯವನ್ನು ಮಾಡುತ್ತನೆಯೋ ಅವನು ಭೂಮಿಯನ್ನು ಆಳಲು ಸಮರ್ಥನಾಗುತ್ತಾನೆ.

ಅನೀತಿಜಂ ಯದ್ಯವಿಧಾನಜಂ ಸುಖಂ
ಹಠಪ್ರಣೀತಂ ವಿವಿಧಂ ಪ್ರದೃಶ್ಯತೇ।
ನ ವಿದ್ಯತೇ ತಸ್ಯ ಗತಿರ್ಮಹೀಪತೇ-
ರ್ನ ವಿದ್ಯತೇ ರಾಷ್ಟ್ರಜಮುತ್ತಮಂ ಸುಖಮ್ ॥೫೧॥

ಯಾವ ರಾಜನು ಅನೈತಿಕವಾದ, ಶಾಸ್ತ್ರಸಮ್ಮತವಲ್ಲದ, ಹಠದಿಂದ ಸಂಪಾದಿಸಿದ ವಿವಿಧಸುಖಗಳಲ್ಲಿ ಪ್ರವೃತ್ತನಾಗುತ್ತಾನೆಯೋ ಅಂತಹ ರಾಜನಿಗೆ ಶ್ರೇಷ್ಠವಾದ ಬುದ್ಧಿ (ಪರಗತಿ) ಇರುವುದಿಲ್ಲ. ರಾಷ್ಟ್ರದಿಂದ ಪ್ರಜೆಗಳಿಗಾಗಲೀ ತನಗಾಗಲೀ ಉಂಟಾಗುವ ಸುಖವೂ ಇರುವುದಿಲ್ಲ.

ಧನೈರ್ವಿಶಿಷ್ಟಾನ್ ಮತಿಶೀಲಪೂಜಿತಾನ್
ಗುಣೋಪಪನ್ನಾನ್ ಯುಧಿ ದೃಷ್ಟವಿಕ್ರಮಾನ್।
ಗುಣೇಷು ದೃಷ್ಟಾನಚಿರಾದಿಹಾತ್ಮವಾನ್
ಸತೋಽಭಿಸಂಧಾಯ ನಿಹಂತಿ ಶಾತ್ರವಾನ್ ॥೫೨॥

ಧನವಂತರಾದ, ಸದ್ಬುದ್ಧಿ ಮತ್ತುಶೀಲಗಳಿಂದ ಪೂಜಿತರಾದ, ಗುಣವಂತರಾದ, ಯುದ್ಧದಲ್ಲಿ ದೃಢವಿಕ್ರಮರಾದ, ಸಜ್ಜನರನ್ನು ಜೊತೆಯಲ್ಲಿರಿಸಿಕೊಂಡು ಅವರ ಜೊತೆಯಲ್ಲಿ ಚಿಂತನೆಯನ್ನು ಮಾಡಿ ಧೈರ್ಯಶಾಲಿಯಾದ ರಾಜನು ಶತ್ರುಗಳನ್ನು ಗೆಲ್ಲುತ್ತಾನೆ.

ಪಶ್ಯೇದುಪಾಯಾನ್ ವಿವಿಧೈಃ ಕ್ರಿಯಾಪಥೈ-
ರ್ನ ಚಾನುಪಾಯೇನ ಮತಿಂ ನಿವೇಶಯೇತ್ ।
ಶ್ರಿಯಂ ವಿಶಿಷ್ಟಾಂ ವಿಪುಲಂ ಯಶೋ ಧನಂ
ನ ದೋಷದರ್ಶೀ ಪುರುಷಃ ಸಮಶ್ನುತೇ ॥೫೩॥

ವಿವಿಧಕ್ರಿಯಾ ಮಾರ್ಗಗಳಿಂದ ಶತ್ರುವನ್ನು ಸೋಲಿಸುವ ಉಪಾಯಗಳನ್ನು ನೋಡಬೇಕು. ಉಪಾಯವಲ್ಲದ ರೀತಿಯಲ್ಲಿ ಯೋಚಿಸಬಾರದು. ತಪ್ಪಾಗಿ ಯೋಚಿಸುವ ಪುರುಷನು ವಿಪುಲವಾದ ಸಂಪತ್ತನ್ನಾಗಲೀ, ಕೀರ್ತಿಯನ್ನಾಗಲೀ, ಧನವನ್ನಾಗಲೀ ಗಳಿಸುವುದಿಲ್ಲ.

ಪ್ರೀತಿಪ್ರವೃತ್ತಂ ವಿನಿವರ್ತನಂ ಚ
ಸುಹೃತ್ಸು ವಿಜ್ಞಾಯ ನಿವರ್ತ್ಯ ಚೋಭಯಮ್ ।
ಯದೇವ ಮಿತ್ರಂ ಗುರುಭಾರಮಾವಹೇತ್
ತದೇವ ಸುಸ್ನಿಗ್ಧಮುದಾಹರೇದ್ ಬುಧಃ ॥೫೪॥

ಪ್ರೀತಿಯಿಂದ ರಾಜನ ಕಾರ್ಯದಲ್ಲಿ ಪ್ರವೃತ್ತಿ ಮತ್ತು ರಾಜನಿಗೆ ಒದಗ-ಬಹುದಾದ ಅಪಾಯದಿಂದ ನಿವೃತ್ತಿ ಇವೆರಡನ್ನೂ ಸುಹೃಜ್ಜನರಿಂದ ಮಾಡಿಸಿ ಅದರಲ್ಲಿ ಯಾರು ಹೆಚ್ಚಿನ ಭಾರವನ್ನು ಹೊರುತ್ತಾನೆಯೋ (ಹೆಚ್ಚಿನ ಜವಾಬ್ದಾರಿ-ಯನ್ನು ಹೊರುತ್ತಾನೆಯೋ) ಅಂತಹವನನ್ನು ಸ್ನೇಹಯುಕ್ತನಾದ ಮಿತ್ರನೆಂದು ರಾಜನು ಉದಾಹರಿಸಬೇಕು. (ಹೇಳಬೇಕು) (ಲಕ್ಷ್ಮಲಂಕಾರ)

ಏತಾನ್ ಮಯೋಕ್ತಾಂಸ್ತವ ರಾಜಧರ್ಮಾನ್
ನೃಣಾಂ ಚ ಗುಪ್ತೌ ಮತಿಮಾದಧತ್ಸ್ವ ।

ಅವಾಪ್ಸ್ಯಸೇ ಪುಣ್ಯಫಲಂ ಸುಖೇನ
ಸರ್ವೋ ಹಿ ಲೋಕೋತ್ತಮಧರ್ಮಮೂಲಃ ॥೫೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕವಿಂಶತ್ಯಧಿಕಶತತಮೋಽಧ್ಯಾಯಃ ॥೧೨೧॥

ನಾನು ನಿನಗೆ ಹೇಳಿದ ಈ ರಾಜಧರ್ಮಗಳನ್ನು ತಿಳಿದು ಪ್ರಜೆಗಳನ್ನು ರಕ್ಷಿಸುವುದರಲ್ಲಿ ಬುದ್ಧಿಯನ್ನು ನಿಯೋಜಿಸು. ನೀನು ಸುಖವಾಗಿ ಪುಣ್ಯಫಲವನ್ನು ಗಳಿಸುವಿ. ಎಲ್ಲ ಲೋಕಗಳೂ ಶ್ರೇಷ್ಠವಾದ ಧರ್ಮಮೂಲಗಳಾದವುಗಳು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೦ನೇ ಅಧ್ಯಾಯವು ಮುಗಿಯಿತು.

—0—

೧೨೨. ನೂರಇಪ್ಪತ್ತೆರಡನೆಯ ಅಧ್ಯಾಯ

ದಂಡಸ್ವರೂಪಕಥನ

ಯುಧಿಷ್ಠಿರಃ

ಅಯಂ ಪಿತಾಮಹೇನೋಕ್ತೋ ರಾಜಧರ್ಮಃ ಸನಾತನಃ।
ಈಶ್ವರಶ್ಚ ಮಹಾದಂಡೋ ದಂಡೇ ಸರ್ವಂ ಪ್ರತಿಷ್ಠಿತಮ್ ॥೧॥

ಯುಧಿಷ್ಠಿರ – ಈ ಸನಾತನವಾದ ರಾಜಧರ್ಮವು ಪಿತಾಮಹರಾದ ಬ್ರಹ್ಮದೇವರಿಂದ ಹೇಳಲ್ಪಟ್ಟಿದೆ. ಈಶ್ವರನೇ ಮಹಾದಂಡಸ್ವರೂಪನಾದವನು. ಎಲ್ಲವೂ ದಂಡವನ್ನವಲಂಬಿಸಿದೆ.

ದೇವತಾನಾಮೃಷೀಣಾಂ ಚ ಪಿತೄಣಾಂ ಚ ಮಹಾತ್ಮನಾಮ್।
ಯಕ್ಷರಕ್ಷಃಪಿಶಾಚಾನಾಂ ಮರ್ತ್ಯಾನಾಂ ಚ ವಿಶೇಷತಃ ॥೨॥

ಸರ್ವೇಷಾಂ ಪ್ರಾಣಿನಾಂ ಲೋಕೇ ತಿರ್ಯಕ್ಷ್ವಪಿ ನಿವಾಸಿನಾಮ್।
ಸರ್ವವ್ಯಾಪೀ ಮಹಾತೇಜಾ ದಂಡಃ ಶ್ರೇಯಾನಿತಿ ಪ್ರಭೋ ॥೩॥

ಇತ್ಯೇತದುಕ್ತಂ ಭವತಾ ದಂಡೇನೈವ ಚರಾಚರಮ್ ।
ದೃಶ್ಯತೇ ಲೋಕಮಾಸಕ್ತಂ ಸಸುರಾಸುರಮಾನುಷಮ್ ॥೪॥

ಎಲೈ ಪ್ರಭುವೇ! ದೇವತೆಗಳು, ಋಷಿಗಳು, ಪಿತೃಗಳು, ಮಹಾತ್ಮರು, ಯಕ್ಷರಕ್ಷ-ಪಿಶಾಚಿಗಳು, ವಿಶೇಷವಾಗಿ ಮನುಷ್ಯರು, ಲೋಕದಲ್ಲಿರುವ ಎಲ್ಲಾ ಪ್ರಾಣಿಗಳು - ಇವರೆಲ್ಲರನ್ನೂ ಮಹಾತೇಜಸ್ಸುಳ್ಳ ಶ್ರೇಷ್ಠವಾದ ದಂಡವು ವ್ಯಾಪಿಸಿಕೊಂಡಿದೆ - ಎಂದು ಹೇಳಿದ್ದೀಯೆ. ಚರಾಚರವಾದ ಸುರಾಸುರಮನುಷ್ಯರಿಂದ ಸಹಿತವಾದ ಲೋಕವು ದಂಡವನ್ನು ಅವಲಂಬಿಸಿಕೊಂಡಿದೆ ಎಂದು ಹೇಳಿದ್ದೀಯೆ.

ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ಭರತರ್ಷಭ ।
ಕೋ ದಂಡಃ ಕೀದೃಶೋ ದಂಡಃ ಕಿಂರೂಪಃ ಕಿಂಪರಾಯಣಃ ॥೫॥

ಕಿಮಾತ್ಮಕಃ ಕಥಂಭೂತಃ ಕತಿ ಮೂರ್ತಿಃ ಕಥಂ ಪ್ರಭುಃ ।
ಜಾಗರ್ತಿ ಸ ಕಥಂ ದಂಡಃ ಪ್ರಜಾಸ್ವವಹಿತಾತ್ಮಕಃ ॥೬॥

ಎಲೈ ಭರತರ್ಷಭನೇ! ಇದನ್ನು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ. ದಂಡವೆಂದರೆ ಏನು? ಅದು ಎಂತಹದು, ಅದರ ರೂಪವೇನು? ಅದು ಯಾರನ್ನು ಆಶ್ರಯಿಸಿರುತ್ತದೆ? ಅದರ ಮೂಲವೇನು? ಅದಕ್ಕೆ ಎಷ್ಟು ರೂಪಗಳಿವೆ? ಅದು ಹೇಗೆ ಪ್ರಭುತ್ವವನ್ನು ಸ್ಥಾಪಿಸುತ್ತದೆ? ಪ್ರಜೆಗಳಿಗೆ ಅಹಿತರೂಪವಾಗಿರುವ ಆ ದಂಡವು ಹೇಗೆ ಜಾಗರೂಕವಾಗಿರುತ್ತದೆ?

ಕಶ್ಚ ಪೂರ್ವಾಪರಮಿದಂ ಜಾಗರ್ತಿ ಪರಿಪಾಲಯನ್ ।
ಕಶ್ಚ ವಿಜ್ಞಾಯತೇ ಪೂರ್ವಂ ಕೋऽಪರೋ ದಂಡಸಂಜ್ಞಿತಃ ।
ಕಿಂಸಂಸ್ಥಶ್ಚ ಭವೇದ್ ದಂಡಃ ಕಾ ಚಾಸ್ಯ ಗತಿರಿಷ್ಯತೇ ॥೭॥

ದಂಡಕ್ಕಿಂತ ಮೊದಲು ಮತ್ತು ಅನಂತರ ಈ ಜಗತ್ತನ್ನು ಪರಿಪಾಲಿಸುತ್ತಾ ಎಚ್ಚರಿಕೆಯಿಂದ ಇರುವವನು ಯಾರು? ದಂಡಕ್ಕೆ ಮೊದಲು ಏನು ಹೆಸರಿದ್ದಿತು? ಅನಂತರ ಅದಕ್ಕೆ ಬರುವ ಹೆಸರೇನು? ದಂಡವು ಯಾರನ್ನು ಆಶ್ರಯಿಸಿರುತ್ತದೆ? ಅದರ ಗತಿಯೇನು?

ಭೀಷ್ಮಃ

ಶೃಣು ಕೌರವ್ಯ ಯೋ ದಂಡೋ ವ್ಯವಹಾರ್ಯೋ ಯಥಾ ಚ ಸಃ।
ಯಸ್ಮಿನ್ ಹಿ ಸರ್ವಮಾಯತ್ತಂ ಸ ದಂಡ ಇಹ ಕೇವಲಃ ॥೮॥

ಭೀಷ್ಮರು – ಎಲೈ ಕೌರವ್ಯನೇ! ದಂಡವೆಂದರೆ ಯಾವುದು. ಅದರ ಜೊತೆಯಲ್ಲಿ ಹೇಗೆ ವ್ಯವಹರಿಸಬೇಕೆಂಬುದನ್ನು ಕೇಳು. ಈ ಜಗತ್ತೆಲ್ಲವೂ ಯಾವುದನ್ನು ಅವಲಂಬಿಸಿಕೊಂಡಿದೆಯೋ ಅದು ಶ್ರೇಷ್ಠವಾದ ದಂಡ.

ಧರ್ಮಸ್ಯಾರ್ಥೇ ಮಹೀಪಾಲ ವ್ಯವಹಾರ ಇತೀಷ್ಯತೇ।
ತಸ್ಯ ಲೋಪಃ ಕಥಂ ನ ಸ್ಯಾಲ್ಲೋಕೇಷ್ವವಹಿತಾತ್ಮನಃ।
ಇತ್ಯರ್ಥಂ ವ್ಯವಹಾರಸ್ಯ ವ್ಯವಹಾರತ್ವಮಿಷ್ಯತೇ ॥೯॥

ಏಕಾಗ್ರಚಿತ್ತವುಳ್ಳ ಮನುಷ್ಯನಿಗೆ ಲೋಕದಲ್ಲಿ ಧರ್ಮಲೋಪವಾಗಬಾರದು ಎಂಬ ಉದ್ದೇಶದಿಂದ ಎಂತಹ ವಿಚಾರವು ಉಂಟಾಗುತ್ತದೆಯೋ ಅದಕ್ಕೆ ವ್ಯವಹಾರ ಎಂದು ಹೆಸರು (ಲಕ್ಷ್ಯಲಂಕಾರ).

ಅಪಿ ಚೈತತ್ ಪುರಾ ರಾಜನ್ ಮನುನಾ ಪ್ರೋಕ್ತಮಾದಿತಃ।
ಸುಪ್ರಣೀತೇನ ದಂಡೇನ ಪ್ರಿಯಾಪ್ರಿಯಸಮಾತ್ಮನಾ।
ಪ್ರಜಾ ರಕ್ಷತಿ ಯಃ ಸಮ್ಯಗ್ ಧರ್ಮ ಏವ ಸ ಕೇವಲಃ ॥೧೦॥

ಎಲೈ ರಾಜನೇ! ಇದನ್ನು ಮೊದಲು ಮನುಷ್ಯಲೋಕದಲ್ಲಿ ಮನುವು ಹೇಳಿದನು. ಪ್ರಿಯಾಪ್ರಿಯಗಳನ್ನು ಪಕ್ಷಪಾತವಿಲ್ಲದೆ ನೋಡಿ ಯಾರು ದಂಡವನ್ನು ಚೆನ್ನಾಗಿ ಪ್ರಯೋಗಿಸಿ ಪ್ರಜೆಗಳನ್ನು ರಕ್ಷಿಸುತ್ತಾನೆಯೋ ಅದು ಶ್ರೇಷ್ಠವಾದ ಧರ್ಮ.

ಅಥೋಕ್ತಮೇತದ್ ವಚನಂ ಪ್ರಾಗೇವ ಮನುನಾ ಪುರಾ।
ಜನ್ಮ ಚೋಕ್ತಂ ವಸಿಷ್ಠೇನ ಬ್ರಹ್ಮಣೋ ವಚನಂ ಮಹತ್ ॥೧೧॥

ದಂಡ ಎಂಬ ವಚನವು ಹಿಂದೆ ಮನುವಿನಿಂದಲೇ ಹೇಳಲ್ಪಟ್ಟಿತು. ದಂಡದ

ಜನ್ಮವು ವಸಿಷ್ಠರಿಂದ ಹೇಳಲ್ಪಟ್ಟಿತು. ಈ ವಿಷಯದಲ್ಲಿ ಬ್ರಹ್ಮದೇವರ ಶ್ರೇಷ್ಠವಾದ ವಚನವು ಇದೆ.

ಪ್ರಾಗಿದಂ ವಚನಂ ಪ್ರೋಕ್ತಮತಃ ಪ್ರಾಗ್ವಚನಂ ವಿದುಃ।
ವ್ಯವಹಾರಸ್ಯ ಚಾಖ್ಯಾನಾದ್ ವ್ಯವಹಾರ ಇಹೋಚ್ಯತೇ ॥೧೨॥

ದಂಡವನ್ನು ಮೊದಲು ಹೇಳಿದ ಕಾರಣ ಇದಕ್ಕೆ ಪ್ರಾಗ್ವಚನವೆಂಬ ಹೆಸರು ಎಂದು ಜ್ಞಾನಿಗಳು ತಿಳಿಯುತ್ತಾರೆ. ಜಗತ್ತಿನ ವ್ಯವಹಾರವನ್ನು ಸ್ಪಷ್ಟಪಡಿಸುವುದರಿಂದ ಇದಕ್ಕೆ ವ್ಯವಹಾರ ಎಂದು ಹೆಸರು.

ದಂಡಾತ್ ತ್ರಿವರ್ಗಃ ಸತತಂ ಸುಪ್ರಣೀತಾತ್ ಪ್ರವರ್ತತೇ।
ದೈವಂ ಹಿ ಪರಮೋ ದಂಡೋ ರೂಪತೋऽಗ್ನಿರಿವೋಚ್ಛ್ರಿತಃ ॥೧೩॥

ನೀಲೋತ್ಪಲದಲಶ್ಯಾಮಶ್ಚತುರ್ದಂಷ್ಟ್ರಶ್ಚತುರ್ಭುಜಃ।
ಅಷ್ಟಪಾನ್ನೈಕನಯನಃ ಶಂಕುಕರ್ಣೋರ್ಧ್ವರೋಮವಾನ್ ॥೧೪॥

ಜಟೀ ದ್ವಿಜಿಹ್ವಸ್ತಾಮ್ರಾಸ್ಯೋ ಮೃಗರಾಜತನುಚ್ಛದಃ।
ಏತದ್ ರೂಪಂ ಬಿಭರ್ತ್ಯುಗ್ರಂ ದಂಡೋ ನಿತ್ಯಂ ದುರಾವರಃ ॥೧೫॥

ಚೆನ್ನಾಗಿ ಪ್ರಯೋಗಿಸಿದ ದಂಡದಿಂದ ಧರ್ಮಾರ್ಥಕಾಮಗಳು ಪ್ರವೃತ್ತವಾಗುತ್ತವೆ. ದೈವವೇ (ಈಶ್ವರನೇ) ಸರ್ವೋತ್ತಮವಾದ ದಂಡ. ಅವನ ರೂಪವು ಊರ್ಧ್ವಶಿಖೆಯನ್ನು ಹೊಂದಿದ ಅಗ್ನಿಯಂತೆ. ಅವನು ನೀಲೋತ್ಪಲದಲಶ್ಯಾಮ. ನಾಲ್ಕು ದಂಷ್ಟ್ರಗಳನ್ನೂ, ನಾಲ್ಕು ಭುಜಗಳನ್ನೂ, ಎಂಟು ಪಾದಗಳನ್ನೂ, ಅನೇಕ ನೇತ್ರಗಳನ್ನೂ, ಶಂಕುವಿನ ಆಕಾರದ ಕಿವಿಯನ್ನೂ, ಊರ್ಧ್ವರೂಪವನ್ನೂ ಹೊಂದಿರುವವನು, ಜಟೆಯನ್ನು ಧರಿಸಿರುವವನು, ಎರಡುನಾಲಿಗೆ ಉಳ್ಳವನು, ಕೆಂಪಾದ ಮುಖವುಳ್ಳವನು, ಸಿಂಹದ ಬಣ್ಣದ ರೋಮಗಳನ್ನು ಹೊಂದಿದವನು. ನಿವಾರಿಸಲು ಅಸಾಧ್ಯವಾದ ಉಗ್ರವಾದ ಈಶ್ವರರೂಪವಾದ ದಂಡವು ಇಂತಹ ರೂಪವನ್ನು ಧರಿಸಿರುತ್ತದೆ.

ಅಸಿರ್ಗದಾ ಧನುಃ ಶಕ್ತಿಸ್ತ್ರಿಶೂಲಂ ಮುದ್ಗರಃ ಶರಃ।
ಮುಸಲಂ ಪರಶುಶ್ಚಕ್ರಂ ಪ್ರಾಸೋ.ದಂಡರ್ಷ್ಟಿತೋಮರಾಃ ॥೧೬॥

ಸರ್ವಪ್ರಹರಣೀಯಾನಿ ಸಂತಿ ಯಾನೀಹ ಕಾನಿಚಿತ್।
ದಂಡ ಏವ ಹಿ ಸರ್ವಾತ್ಮಾ ಲೋಕೇ ಚರತಿ ಮೂರ್ತಿಮಾನ್ ॥೧೭॥

ಖಡ್ಗ, ಗದೆ, ಧನುಸ್ಸು, ಶಕ್ತಿ, ತ್ರಿಶೂಲ, ಒನಕೆ, ಬಾಣ, ಮುದ್ಗರ, ಕೊಡಲಿ, ಚಕ್ರ, ಈಟಿ, ದಂಡ, ಋಷ್ಟಿ, ತೋಮರ ಮತ್ತು ಇಂತಹ ಇನ್ನೂ ಅನೇಕ ಆಯುಧಗಳು ಏನಿವೆಯೋ ಅವೆಲ್ಲಾ ದಂಡದ ಮೂರ್ತಿಗಳು. ಅಂತಹ ವಿಗ್ರಹದಿಂದ ಸರ್ವವ್ಯಾಪಿಯಾದ ದಂಡವು ಲೋಕದಲ್ಲಿ ಸಂಚರಿಸುತ್ತದೆ.

ಭಿಂದಂಶ್ಛಿಂದನ್ ರುಜನ್ ಕೃಂತನ್ ದಾರಯನ್ ಪಾಟಯಂಸ್ತಥಾ।
ಘಾತಯನ್ನಭಿಧಾವಂಶ್ಚ ದಂಡ ಏವ ಚರತ್ಯುತ ॥೧೮॥

ಹೊಡೆಯುತ್ತಾ, ಕತ್ತರಿಸುತ್ತಾ, ಹಿಂಸಿಸುತ್ತಾ, ಸೀಳುತ್ತಾ, ಪಾಲುಗಳನ್ನಾಗಿ ಮಾಡುತ್ತಾ, ಕೊಲ್ಲುತ್ತಾ ಈ ದಂಡವು ಓಡುತ್ತಾ ಸಂಚರಿಸುತ್ತದೆ.

ಅಸಿರ್ವಿಶಸನೋ ಧರ್ಮಸ್ತೀಕ್ಷ್ಣವರ್ತ್ಮಾ ದುರಾಸದಃ।
ಶ್ರೀಗರ್ಭೋ ವಿಜಯಃ ಶಾಸ್ತಾ ವ್ಯವಹಾರಃ ಪ್ರಜಾಗರಃ ॥೧೯॥

ಶಾಸ್ತ್ರಂ ಬ್ರಾಹ್ಮಣಮಂತ್ರಶ್ಚ ಶಾಸ್ತಾ ಪ್ರಾಗ್ವಚನಂ ಗತಃ।
ಧರ್ಮಪಾಲೋ.ಕ್ಷರೋ ದೇವಃ ಸತ್ಯಗೋ ನಿತ್ಯಗೋ ಗ್ರಹಃ ॥೨೦॥

ಅಸಂಗೋ ರುದ್ರತನಯೋ ಮನುಜ್ಯೇಷ್ಠಃ ಶಿವಂಕರಃ।
ನಾಮಾನ್ಯೇತಾನಿ ದಂಡಸ್ಯ ಕೀರ್ತಿತಾನಿ ಯುಧಿಷ್ಠಿರ ॥೨೧॥

ಅಸಿ, ವಿಶಸನ, ಧರ್ಮ, ತೀಕ್ಷ್ಣವರ್ತ್ಮಾ, ದುರಾಸದ, ಶ್ರೀಗರ್ಭ, ವಿಜಯ, ಶಾಸ್ತಾ, ವ್ಯವಹಾರ, ಪ್ರಜಾಗರ, ಶಾಸ್ತ್ರ, ಬ್ರಾಹ್ಮಣಮಂತ್ರ, ಪ್ರಾಗ್ವಚನ, ಧರ್ಮಪಾಲ, ಅಕ್ಷರ, ದೇವ, ಸತ್ಯಗ, ನಿತ್ಯಗ, ಗ್ರಹ, ಅಸಂಗ, ರುದ್ರತನಯ,

ಮನುಜ್ಯೇಷ್ಠ, ಶಿವಂಕರ - ಎಲೈ ಯುಧಿಷ್ಠಿರನೇ! ಇವೆಲ್ಲಾ ದಂಡದ ನಾಮಗಳೆಂದು ಹೇಳಲ್ಪಡುತ್ತವೆ.

ದಂಡೋ ಹಿ ಭಗವಾನ್ ವಿಷ್ಣುರ್ಯಜ್ಞೋ ನಾರಾಯಣಃ ಪ್ರಭುಃ।
ಶಶ್ವದ್ರೂಪಂ ಮಹದ್ ಬಿಭ್ರನ್ ಮಹಾಪುರುಷ ಉಚ್ಯತೇ ॥೨೨॥

ದಂಡವೆಂದರೆ ಯಜನೀಯನೂ, ಪ್ರಭುವೂ, ಭಗವಂತನೂ ಆದ ವ್ಯಾಪ್ತನಾದ ನಾರಾಯಣನೇ. ಅವನು ಯಾವಾಗಲೂ ದೊಡ್ಡ ರೂಪವನ್ನು ಧರಿಸಿ ಮಹಾಪುರುಷನೆಂದು ಕರೆಯಲ್ಪಡುತ್ತಾನೆ.

ಯಥೋಕ್ತಾ ಬ್ರಹ್ಮಕಲ್ಪೇತಿ ಲಕ್ಷ್ಮೀರ್ನೀತಿಃ ಸರಸ್ವತೀ।
ದಂಡನೀತಿರ್ಜಗದ್ಧಾತ್ರೀ ದಂಡೋ ಹಿ ವಿಷ್ಣುವಿಗ್ರಹಃ ॥೨೩॥

ದಂಡವನ್ನು ಬ್ರಹ್ಮಕಲ್ಪ(ವೇದಕಲ್ಪನಾ), ಲಕ್ಷ್ಮೀ, ನೀತಿ, ಸರಸ್ವತೀ, ದಂಡನೀತಿ, ಜಗದ್ಧಾತ್ರಿ ಎಂದೂ ಕರೆಯುತ್ತಾರೆ. ದಂಡವು ವಿಷ್ಣುವಿಗ್ರಹರೂಪವಾದುದು.

ಅರ್ಥಾನರ್ಥೌ ಸುಖಂ ದುಃಖಂ ಧರ್ಮಾಧರ್ಮೌ ಬಲಾಬಲೇ।
ದೌರ್ಭಾಗ್ಯಂ ಭಾಗಧೇಯಂ ಚ ಪುಣ್ಯಾಪುಣ್ಯೇ ಗುಣಾಗುಣೌ ॥೨೪॥

ಕಾಮಾಕಾಮಾವೃತುರ್ಮಾಸಃ ಶರ್ವರೀ ದಿವಸಃ ಕ್ಷಣಃ।
ಅಪ್ರಸಾದಃ ಪ್ರಸಾದಶ್ಚ ಹರ್ಷಃ ಕ್ರೋಧಃ ಶಮೋ ದಮಃ ॥೨೫॥

ದೈವಂ ಪುರುಷಕಾರಶ್ಚ ಮೋಕ್ಷಾಮೋಕ್ಷೌ ಭಯಾಭಯೇ।
ಹಿಂಸಾಹಿಂಸೇ ತಪೋ ರಾಜ್ಞಃ ಸಂಯಮೋಽಥ ವಿಷಾವಿಷಮ್ ॥೨೬॥

ಅಂತಶ್ಚಾದಿಶ್ಚ ಮಧ್ಯಂ ಚ ಕೃತ್ಯಾನಾಂ ಚ ಪ್ರಪಂಚನಮ್।
ಮದಃ ಪ್ರಮಾದೋ ದರ್ಪಶ್ಚ ದಂಭೋ ಧೈರ್ಯಂ ನಯಾನಯೌ ॥೨೭॥

ಅರ್ಥ-ಅನರ್ಥಗಳು, ಸುಖ-ದುಃಖಗಳು, ಧರ್ಮಾಧರ್ಮಗಳು, ಶರೀರ-ಬಲಾಬಲಗಳು, ದೌರ್ಭಾಗ್ಯ ಸೌಭಾಗ್ಯಗಳು, ಪುಣ್ಯಪಾಪಗಳು, ಗುಣದೋಷಗಳು,

ಕಾಮ-ಅಕಾಮಗಳು, ಋತುಮಾಸರಾತ್ರಿದಿವಸಕ್ಷಣಗಳು, ಪ್ರಸನ್ನತೆ ಅಪ್ರಸನ್ನತೆಗಳು, ಹರ್ಷಕ್ರೋಧಶಮದಮಗಳು, ದೈವಪುರುಷಪ್ರಯತ್ನಗಳು, ಮೋಕ್ಷಬಂಧನಗಳು, ಅಹಿಂಸೆಹಿಂಸೆಗಳು, ತಪಸ್ಸು, ರಾಜನಿಂದುಂಟಾಗುವ ಸಂಯಮ, ವಿಷ-ಅವಿಷಗಳು, ಆದಿಮಧ್ಯಾಂತಗಳು, ಕಾರ್ಯಗಳ ವಿಸ್ತಾರಗಳು, ಮದಪ್ರಮಾದದರ್ಪದಂಭ-ಧೈರ್ಯ ನೀತಿ-ಅನೀತಿಗಳು,

ಅಶಕ್ತಿಃ ಶಕ್ತಿರಿತ್ಯೇವ ಮಾನಸ್ತಂಭೌ ವ್ಯಯಾವ್ಯಯೌ।
ವಿನಯಶ್ಚ ವಿಸರ್ಗಶ್ಚ ಕಾಲಾಕಾಲೌ ಚ ಭಾರತ ॥೨೮॥

ಅನೃತಂ ಜ್ಞಾಜ್ಞತಾ ಸತ್ಯಂ ಶ್ರದ್ಧಾಶ್ರದ್ಧೇ ತಥೈವ ಚ।
ಕ್ಲೀಬತಾ ವ್ಯವಸಾಯಶ್ಚ ಲಾಭಾಲಾಭೌ ಜಯಾಜಯೌ ॥೨೯॥

ತೀಕ್ಷ್ಣತಾ ಮೃದುತಾ ಮೃತ್ಯುರಾಗಮಾನಾಗಮೌ ತಥಾ।
ವಿರಾದ್ಧಿಶ್ಚೈವ ರಾದ್ಧಿಶ್ಚ ಕಾರ್ಯಾಕಾರ್ಯೇ ಬಲಾಬಲೇ ॥೩೦॥

ಅಸೂಯಾ ಚಾನಸೂಯಾ ಚ ಧರ್ಮಾಧರ್ಮೌ ತಥೈವ ಚ।
ಅಪತ್ರಪಾನಪತ್ರಪೇ ಹ್ರೀಶ್ಚ ಸಂಪದ್ ವಿಪಚ್ಚ ಹ ॥೩೧॥

ತೇಜಃ ಕರ್ಮಣಿ ಪಾಂಡಿತ್ಯಂ ವಾಕ್‌ಶಕ್ತಿಸ್ತತ್ತ್ವಬುದ್ಧಿತಾ।
ಏವಂ ದಂಡಸ್ಯ ಕೌರವ್ಯ ಲೋಕೇಽಸ್ಮಿನ್ ಬಹುರೂಪತಾ ॥೩೨॥

ಶಕ್ತಿ-ಅಶಕ್ತಿಗಳು, ಮಾನ-ಅಹಂಕಾರಗಳು, ವ್ಯಯ-ಆದಾಯಗಳು, ವಿನಯ-ವಿಸರ್ಗ-ಕಾಲ-ಅಕಾಲಗಳು, ಸತ್ಯಾನೃತಗಳು, ಜ್ಞಾನಾಜ್ಞಾನಗಳು, ಶ್ರದ್ಧೆ-ಅಶ್ರದ್ಧೆಗಳು, ಆಲಸ್ಯ ಮತ್ತು ಪ್ರಯತ್ನಶೀಲತೆಗಳು, ಲಾಭಾಲಾಭಗಳು, ಜಯ-ಪರಾಜಯಗಳು, ತೀಕ್ಷ್ಣತೆ ಮೃದುತ್ವಗಳು, ಮೃತ್ಯು, ಆಗಮ-ಅನಾಗಮಗಳು, ಸಮೃದ್ಧಿ ಮತ್ತು ದಾರಿದ್ರ್ಯಗಳು, ಕಾರ್ಯಾಕಾರ್ಯಗಳು, ಮನೋಬಲದೌರ್ಬಲ್ಯಗಳು, ಅಸೂಯಾ ಅನಸೂಯಗಳು, ಧರ್ಮಾಧರ್ಮಗಳು, ನಾಚಿಕೆ ಮತ್ತು ನಾಚಿಕೆಗೇಡಿತನಗಳು, ಸಂಪತ್ತು ಮತ್ತು ವಿಪತ್ತುಗಳು, ತೇಜಸ್ಸು, ಕರ್ಮದಲ್ಲಿಕುಶಲತೆ, ವಾಕ್‌ಶಕ್ತಿ,

ತತ್ತ್ವಜ್ಞಾನ – ಎಲೈ ಕೌರವ್ಯನೇ! ಹೀಗೆ ಈ ಲೋಕದಲ್ಲಿ ದಂಡವು ಅನೇಕರೂಪಗಳನ್ನು ಧರಿಸಿದೆ.

ಇಲ್ಲಿ ಅರ್ಥಸುಖಧರ್ಮ ಮೊದಲಾದವುಗಳು ಅಹಂಕಾರಕಾರಣವಾದುದರಿಂದ ದಂಡವೆನಿಸುತ್ತವೆ. ಋತುಮಾಸರಾತ್ರ್ಯಾದಿಗಳು ವಿಷಯಾಭಿಲಾಷೆಯನ್ನು ಉಂಟುಮಾಡುವುದರಿಂದ ದಂಡವೆನಿಸುತ್ತವೆ. - (ಲಕ್ಷಾಲಂಕಾರ)

ನ ಸ್ಯಾದ್ ಯದೀಹ ದಂಡೋ ವೈ ಪ್ರಮಥೇಯುಃ ಪರಸ್ಪರಮ್ ।
ಭಯಾದ್ ದಂಡಸ್ಯ ಚಾನ್ಯೋನ್ಯಂ ಘ್ನಂತಿ ನೈವ ಯುಧಿಷ್ಠಿರ ॥೩೩॥

ಈ ಲೋಕದಲ್ಲಿ ದಂಡವಿರದಿದ್ದರೆ ಮನುಷ್ಯರು ಪರಸ್ಪರವಾಗಿ ಹಿಂಸಿಸುತ್ತಿದ್ದರು. ಎಲೈ ಯುಧಿಷ್ಠಿರನೇ! ದಂಡದ ಭಯದಿಂದಲೇ ಮನುಷ್ಯರು ಪರಸ್ಪರವಾಗಿ ಕೊಲ್ಲುವುದಿಲ್ಲ.

ದಂಡೇನ ರಕ್ಷ್ಯಮಾಣಾ ಹಿ ರಾಜನ್ನಹರಹಃ ಪ್ರಜಾಃ ।
ರಾಜಾನಂ ವರ್ಧಯಂತೀಹ ತಸ್ಮಾದ್ ದಂಡಃ ಪರಾಯಣಮ್ ॥೩೪॥

ದಂಡದಿಂದ ರಕ್ಷಿಸಲ್ಪಡುವ ಪ್ರಜೆಗಳು ಪ್ರತಿನಿತ್ಯವೂ ರಾಜನನ್ನು ಅಭಿವೃದ್ಧಿಪಡಿಸುತ್ತಾರೆ. ಆದ್ದರಿಂದ ದಂಡವು ಶ್ರೇಷ್ಠವಾದ ಅವಲಂಬನ.

ವ್ಯವಸ್ಥಾಪಯತಿ ಕ್ಷಿಪ್ರಮಿಮಂ ಲೋಕಂ ನರೇಶ್ವರ ।
ಸತ್ಯೇ ವ್ಯವಸ್ಥಿತೋ ಧರ್ಮೋ ಬ್ರಾಹ್ಮಣೇಷ್ವವತಿಷ್ಠತೇ ॥೩೫॥

ಎಲೈ ನರೇಶ್ವರನೇ! ದಂಡವು ಶೀಘ್ರವಾಗಿ ಈ ಲೋಕದಲ್ಲಿ ವ್ಯವಸ್ಥೆಯನ್ನು ಉಂಟುಮಾಡುತ್ತದೆ. ಸತ್ಯದಲ್ಲಿ ನೆಲೆಗೊಂಡ ಧರ್ಮವು ಬ್ರಾಹ್ಮಣರನ್ನು ಆಶ್ರಯಿಸಿದೆ.

ಧರ್ಮಯುಕ್ತಾ ದ್ವಿಜಾಃ ಶ್ರೇಷ್ಠಾ ವೇದಯುಕ್ತಾ ಭವಂತಿ ಚ ।
ಬಭೂವ ಯಜ್ಞೋ ವೇದೇಭ್ಯೋ ಯಜ್ಞಃ ಪ್ರೀಣಾತಿ ದೇವತಾಃ ॥೩೬॥

ಧರ್ಮಯುಕ್ತರಾದ ಶ್ರೇಷ್ಠರಾದ ಬ್ರಾಹ್ಮಣರು ವೇದಾಧ್ಯಯನಸಂಪನ್ನರಾಗಿರುತ್ತಾರೆ. ಯಜ್ಞವು ವೇದಗಳಿಂದ ನೆರವೇರಿಸಲ್ಪಡುತ್ತದೆ. ಅದು ದೇವತೆಗಳನ್ನು ಸಂತೋಷಪಡಿಸುತ್ತದೆ.

ಪ್ರೀತಾಶ್ಚ ದೇವತಾ ನಿತ್ಯಮಿಂದ್ರೇ ಪರಿದದತ್ಯುತ।
ಅನ್ನಂ ದದಾತಿ ಶಕ್ರಶ್ಚಾಪ್ಯನುಗೃಹ್ಣನ್ನಿಮಾಃ ಪ್ರಜಾಃ ॥೩೭॥

ಪ್ರೀತರಾದ ದೇವತೆಗಳು ಪ್ರಜೆಗಳ ಯೋಗಕ್ಷೇಮವನ್ನು ನಿತ್ಯವೂ ಇಂದ್ರನಿಗೆ ವಹಿಸುತ್ತಾರೆ. ಇಂದ್ರನು ಈ ಪ್ರಜೆಗಳಿಗೆ ಅನುಗ್ರಹವನ್ನು ಮಾಡುವವನಾಗಿ ಅನ್ನವನ್ನು ಕೊಡುತ್ತಾನೆ.

ಪ್ರಾಣಾಶ್ಚ ಸರ್ವಭೂತಾನಾಂ ನಿತ್ಯಮನ್ನೇ ಪ್ರತಿಷ್ಠಿತಾಃ।
ತಸ್ಮಾತ್ ಪ್ರಜಾಃ ಪ್ರತಿಷ್ಠಂತೇ ದಂಡೋ ಜಾಗರ್ತಿ ತಾಸು ಚ ॥೩೮॥

ಎಲ್ಲ ಜೀವರ ಪ್ರಾಣಗಳೂ ಯಾವಾಗಲೂ ಅನ್ನದಲ್ಲಿ ಪ್ರತಿಷ್ಠಿತವಾಗಿವೆ. ಅನ್ನದ ಬಲದಿಂದ ಪ್ರಜೆಗಳು ಕಾರ್ಯಗಳನ್ನು ಮಾಡುತ್ತಾರೆ. ದಂಡವು ಆ ಪ್ರಜೆಗಳ ವಿಷಯದಲ್ಲಿ ಎಚ್ಚರಿಕೆಯಿಂದಿರುತ್ತದೆ.

ಏವಂಪ್ರಯೋಜನಶ್ಚೈವ ದಂಡಃ ಕ್ಷತ್ರಿಯತಾಂ ಗತಃ।
ರಕ್ಷನ್ ಪ್ರಜಾಃ ಪ್ರಜಾಗರ್ತಿ ನಿತ್ಯಂ ಸುವಿಹಿತೋಽಕ್ಷರಃ ॥೩೯॥

ಇಂತಹ ಪ್ರಯೋಜನವುಳ್ಳ ದಂಡವು ಕ್ಷತ್ರಿಯರೂಪವನ್ನು ಧರಿಸಿತು. ಅದು ನಿತ್ಯವೂ ಚೆನ್ನಾಗಿ ಪ್ರಯೋಗಿಸಲ್ಪಟ್ಟು, ನಾಶವನ್ನು ಹೊಂದದೆ, ಪ್ರಜೆಗಳನ್ನು ರಕ್ಷಿಸುತ್ತಾ ಜಾಗರೂಕವಾಗಿರುತ್ತದೆ.

ಈಶ್ವರಃ ಪುರುಷಃ ಪ್ರಾಣಃ ಸತ್ತ್ವಂ ವಿತ್ತಂ ಪ್ರಜಾಪತಿಃ।
ಭೂತಾತ್ಮಾ ಜೀವ ಇತ್ಯೇವ ನಾಮಭಿಃ ಪ್ರೋಚ್ಯತೇಽಷ್ಟಭಿಃ ॥೪೦॥

ದಂಡವು ಈಶ್ವರ, ಪುರುಷ, ಪ್ರಾಣ, ಸತ್ವ, ವಿತ್ತ, ಪ್ರಜಾಪತಿ, ಭೂತಾತ್ಮಾ ಮತ್ತು ಜೀವ ಎಂಬ ಎಂಟುನಾಮಗಳಿಂದ ಹೇಳಲ್ಪಡುತ್ತದೆ.

ಅದದದ್ ದಂಡ ಏವಾಸ್ಯೈ ಧ್ರುವಮೈಶ್ವರ್ಯಮೇವ ಚ।
ಬಲಂ ನಯಂಶ್ಚ ಸಂಯುಕ್ತೈಃ ಸದಾ ಪಂಚವಿಧಾತ್ಮಕಮ್ ॥೪೧॥

ರಾಜನಿಗೆ ದಂಡವೇ ಶಾಶ್ವತವಾದ ಐಶ್ವರ್ಯವನ್ನು ಕೊಡುತ್ತದೆ. ಸಂಯುಕ್ತರಾದವರಿಂದ ಬಲವನ್ನು ನಡೆಸುತ್ತಾ ಯಾವಾಗಲೂ ಪಂಚವಿಧವಾಗಿರುತ್ತದೆ.

ಕುಲಬಾಹುಧನಾಮಾತ್ಯಾಃ ಪ್ರಜ್ಞಾ ಚೋಕ್ತಾ ಬಲಾನಿ ಚ।
ಆಹಾರ್ಯಂ ಚಾಷ್ಟಕೈರ್ದ್ರವ್ಯೈರ್ಬಲಮನ್ಯದ್ ಯುಧಿಷ್ಠಿರ ॥೪೨॥

ಕುಲಬಲ, ಬಾಹುಬಲ, ಧನಬಲ, ಅಮಾತ್ಯಬಲ ಮತ್ತು ಪ್ರಜ್ಞಾಬಲಗಳೆಂಬವು ಆ ಐದು ವಿಧಗಳು. ಎಲೈ ಯುಧಿಷ್ಠಿರನೇ! ಎಂಟು ದ್ರವ್ಯಗಳಿಂದ ಸಂಪಾದಿಸಬೇಕಾದ ಬಲವು ಬೇರೆಯೇ ಇದೆ.

ಹಸ್ತಿನೋಽಶ್ವಾ ರಥಾಃ ಪತ್ತಿರ್ನಾವೋ ವಿಷ್ಟಿಸ್ತಥೈವ ಚ।
ದೈಶಿಕಾಶ್ಚಾರಕಾಶ್ಚೈವ ತದಷ್ಟಾಂಗಂ ಬಲಂ ಸ್ಮೃತಮ್ ॥೪೩॥

ಗಜಗಳು, ಅಶ್ವಗಳು, ರಥಗಳು, ಪದಾತಿಗಳು, ನೌಕೆಗಳು, ಅಪರಾಧಿಗಳಾಗಿ ಬಿಟ್ಟಿ ದುಡಿಯುವವರು, ಉಪಾಧ್ಯಾಯರು ಮತ್ತು ಚಾರರು ಎಂಬ ಎಂಟು ಅವಯವಗಳಿಂದ ಕೂಡಿದುದು ಇನ್ನೊಂದು (ಬಾಹ್ಯವಾದ) ಬಲ.

ಅಥವಾಂಗಸ್ಯ ಯೋಕ್ತಾ ಸ್ಯಾದ್ ಹಸ್ತಿನೋ ರಥಸಾರಥೀ।
ಅಶ್ವಾರೋಹಾಃ ಪದಾತಾಶ್ಚ ಮಂತ್ರಿಣೋ ರಸದಾಶ್ಚ ಯೇ ॥೪೪॥

ತನ್ನ ಶರೀರದಂತಿರುವ ಸೇನೆಯನ್ನು ನಿಯಂತ್ರಿಸುವ ಸೇನಾಪತಿ, ಆರೋಹಿಗಳಿಂದ ಸಹಿತವಾದ ಗಜಗಳು, ಸಾರಥಿಯಿಂದ ಸಹಿತವಾದ ರಥಗಳು, ಅಶ್ವಾರೋಹಿಗಳಿಂದ ಸಹಿತವಾದ ಅಶ್ವಗಳು, ಪದಾತಿಗಳು, ಮಂತ್ರಿಗಳು ಮತ್ತು ಮನುಷ್ಯರ ಮತ್ತು ಪ್ರಾಣಿಗಳ ವೈದ್ಯರು - ಇವು ಏಳು ಸೈನ್ಯದ (ಸಪ್ತಾಂಗಗಳಿಗೆ) ಮೂಲಭೂತವಾದ ಮಧ್ಯದೇಹ(ಪ್ರಕೃತಿ)ವೆನಿಸುತ್ತದೆ – ಲಕ್ಷ್ಮಲಂಕಾರ.

ಭಿಕ್ಷುಕಾಃ ಪ್ರಾಜ್ವಿವಾಕಾಶ್ಚ ಮೌಹೂರ್ತಾ ದೈವಚಿಂತಕಾಃ।
ಕೋಶೋ ಮಿತ್ರಾಣಿ ಧಾನ್ಯಂ ಚ ಸರ್ವೋಪಕರಣಾನಿ ಚ ॥೪೫॥

ಬಹುವೇಷವನ್ನು ಧರಿಸುವ ಚಾರರು, ಕ್ರಯವಿಕ್ರಯಾದಿವ್ಯವಹಾರವನ್ನು ನೋಡುವ ವೈಶ್ಯಾದಿಗಳು, ಯುದ್ಧಕಾಲಕ್ಕೆ ಮುಹೂರ್ತವನ್ನು ಇಟ್ಟುಕೊಡುವವರು, ಜಾತಕಾದಿಗಳನ್ನು ಬರೆಯುವುದರಲ್ಲಿ ಕುಶಲರು, ಕೋಶ, ಮಿತ್ರರು, ಧಾನ್ಯ ಮತ್ತು ಎಲ್ಲಾ ಆಯುಧಾದಿ ಉಪಕರಣಗಳು (ಇವು ಎಂಟು ದ್ರವ್ಯಗಳು) – ಲಕ್ಷಾಲಂಕಾರ.

ಸಪ್ತಪ್ರಕೃತಿ ಚಾಷ್ಟಾಂಗಂ ಶರೀರಮಿಹ ಯದ್ ವಿದುಃ।
ರಾಜ್ಯಸ್ಯ ದಂಡ ಏವಾಂಗಂ ದಂಡಃ ಪ್ರಭವ ಏವ ಚ ॥೪೬॥

ರಾಜ್ಯಕ್ಕೆ ಹಿಂದೆ ಹೇಳಿದ ಏಳು ದ್ರವ್ಯಗಳು ಮಧ್ಯದೇಹಭೂತವಾದವು ಮತ್ತು ಅನಂತರ ಹೇಳಿದ ಎಂಟು ಅಂಗಭೂತವಾದವುಗಳು. ಇವು ಸೇರಿ ರಾಜ್ಯದ ಶರೀರವಾಗುತ್ತದೆ ಎಂದು ತಿಳಿಯುತ್ತಾರೆ. ದಂಡವು ರಾಜ್ಯದ ಇನ್ನೊಂದು ಅಂಗ. ರಾಜ್ಯದ ಸಮೃದ್ಧಿಯು ದಂಡಕ್ಕೆ ಅಧೀನವಾದುದು

ಈಶ್ವರೇಣ ಪ್ರಸನ್ನೇನ ಧಾರಣೇ ಕ್ಷತ್ರಿಯಸ್ಯ ಹಿ।
ದಂಡೋ ದತ್ತಃ ಸಮಾನಾತ್ಮಾ ದಂಡೋ ಹೀದಂ ಸನಾತನಮ್।
ರಾಜ್ಞಾಂ ಪೂಜ್ಯತಮೋ ನಾನ್ಯೋ ಯಥಾಧರ್ಮಪ್ರದರ್ಶನಃ ॥೪೭॥

ಪ್ರಸನ್ನನಾದ ಈಶ್ವರನು ಕ್ಷತ್ರಿಯನಿಗೆ ರಾಜನಿಗೆ ಧಾರಣೆಯನ್ನು ಮಾಡುವ ಸಲುವಾಗಿ ತನಗೆ ಸದೃಶವಾದ ಸಾಮರ್ಥ್ಯವುಳ್ಳ ದಂಡವನ್ನು ನೀಡಿದನು. ಈ ದಂಡವು ಸನಾತನವಾದುದು. ರಾಜರಿಂದ ಅತ್ಯಂತಪೂಜ್ಯವಾದುದು. ದಂಡವು ಧರ್ಮವನ್ನು ಪ್ರದರ್ಶಿಸುವಂತೆ ಧರ್ಮವನ್ನು ಪ್ರದರ್ಶಿಸುವುದು ಇನ್ನೊಂದು ಇರುವುದಿಲ್ಲ.

ಬ್ರಹ್ಮಣಾ ಲೋಕರಕ್ಷಾರ್ಥಂ ಸ್ವಧರ್ಮಸ್ಥಾಪನಾಯ ಚ।
ಭರ್ತೃಪ್ರತ್ಯಯ ಉತ್ಪನ್ನೋ ವ್ಯವಹಾರಸ್ತಥಾಪರಃ।
ತಸ್ಮಾದ್ ಯಃ ಸ ಹಿತೋ ದೃಷ್ಟೋ ಭರ್ತೃಪ್ರತ್ಯಯಲಕ್ಷಣಃ ॥೪೮॥

ಬ್ರಹ್ಮದೇವರು ಲೋಕರಕ್ಷಣೆ ಮತ್ತು ತಮ್ಮ ಧರ್ಮದ ಸ್ಥಾಪನೆಗಾಗಿ ಭರ್ತೃ-ಪ್ರತ್ಯಯ ಮತ್ತು ವ್ಯವಹಾರಗಳನ್ನು ಸೃಷ್ಟಿಸಿದರು. ಆದ್ದರಿಂದ ಭರ್ತೃಪ್ರತ್ಯಯರೂಪವಾದ ದಂಡವು ಲೋಕಕ್ಕೆ ಹಿತವಾಗಿ ಕಂಡುಬಂದಿದೆ.

ವ್ಯವಹಾರಸ್ತು ವೇದಾತ್ಮಾ ವೇದಪ್ರತ್ಯಯ ಉಚ್ಯತೇ।
ಮೌಲಶ್ಚ ನರಶಾರ್ದೂಲ ಶಾಸ್ತ್ರೋಕ್ತಶ್ಚ ತಥಾಪರಃ ॥೪೯॥

ವ್ಯವಹಾರವು ವೇದರೂಪವಾದುದು. ಅದಕ್ಕೆ ವೇದಪ್ರತ್ಯಯವೆಂದು ಹೆಸರು. ಎಲೈ ರಾಜನೇ! ಈ ವ್ಯವಹಾರವು ಮೌಲ ಮತ್ತು ಶಾಸ್ತ್ರೋಕ್ತ ಎಂದು ಎರಡು ವಿಧವಾಗಿದೆ.

ಉಕ್ತೋ ಯಶ್ಚಾಪಿ ದಂಡೋಽಸೌ ಭರ್ತೃಪ್ರತ್ಯಯಲಕ್ಷಣಃ।
ಜ್ಞೇಯೋ ನಃ ಸ ನರೇಂದ್ರಸ್ಥೋ ದಂಡಪ್ರತ್ಯಯ ಏವ ಚ ॥೫೦॥

ನಾವು ಭರ್ತೃಪ್ರತ್ಯಯರೂಪವಾದ ದಂಡವನ್ನು ಏನು ಹೇಳಿದೆವೋ ಅದು ರಾಜನಲ್ಲಿರುವ ದಂಡಪ್ರತ್ಯಯರೂಪವಾದುದು ಎಂದು ತಿಳಿಯಬೇಕು.

ದಂಡಪ್ರತ್ಯಯದೃಷ್ಟೋಽಪಿ ವ್ಯವಹಾರಾತ್ಮಕಃ ಸ್ಮೃತಃ।
ವ್ಯವಹಾರಃ ಸ್ಮೃತೋ ಯಶ್ಚ ಸ ವೇದವಿಷಯಾತ್ಮಕಃ ॥೫೧॥

ದಂಡವು ರಾಜನ ಮೇಲಿನ ವಿಶ್ವಾಸದಿಂದ ಪ್ರವೃತ್ತವಾದರೂ ಅದು ವ್ಯವಹಾರರೂಪವಾದುದು ಎಂದು ಹೇಳಲ್ಪಡುತ್ತದೆ. ಯಾವುದು ವ್ಯವಹಾರವೋ ಅದು ವೇದವಿಷಯವಾದುದು.

ಯಶ್ಚ ವೇದಪ್ರಸೂನಾತ್ಮಾ ಸ ಧರ್ಮೋ ಗುಣದರ್ಶಕಃ।
ಧರ್ಮಪ್ರತ್ಯಯ ಉತ್ಪನ್ನೋ ಯಥಾಧರ್ಮಃ ಕೃತಾತ್ಮಭಿಃ ॥೫೨॥

ಯಾವುದು ವೇದವಿಷಯವಾಗಿ ವೇದದಿಂದ ತನ್ನ ಸ್ವರೂಪವನ್ನು ಪಡೆಯುತ್ತದೆಯೋ ಅದು ಧರ್ಮ. ಅದು ಗುಣಗಳನ್ನು ತೋರಿಸುವಂತಹದು. ಜ್ಞಾನಿಗಳಿಂದ ಹೀಗೆ ಧರ್ಮಕ್ಕೆ ಅನುಗುಣವಾಗಿ ಧರ್ಮಪ್ರತ್ಯಯವು ಉಂಟಾಯಿತು.

ವ್ಯವಹಾರಃ ಪ್ರಜಾಗೋಪ್ತಾ ಬ್ರಹ್ಮದಿಷ್ಟೋ ಯುಧಿಷ್ಠಿರ।
ತ್ರೀನ್ ಧಾರಯತಿ ಲೋಕಾನ್ ವೈ ಸತ್ಯಾತ್ಮಾ ಭೂತಿವರ್ಧನಃ ॥೫೩॥

ಎಲೈ ಯುಧಿಷ್ಠಿರನೇ! ಬ್ರಹ್ಮದೇವರು ಹೇಳಿದ ವ್ಯವಹಾರವು ಪ್ರಜೆಗಳನ್ನು ರಕ್ಷಿಸುತ್ತದೆ. ಅದು ಮೂರು ಲೋಕಗಳನ್ನೂ ಧರಿಸುತ್ತದೆ. ಸತ್ಯಸ್ವರೂಪವಾದುದು ಮತ್ತು ಐಶ್ವರ್ಯಪ್ರದವಾದುದು.

ಯಶ್ಚ ದಂಡಃ ಸ ದೃಷ್ಟೋ ನೋ ವ್ಯವಹಾರಃ ಸನಾತನಃ।
ವ್ಯವಹಾರಶ್ಚ ಯೋ ದೃಷ್ಟಃ ಸ ಧರ್ಮ ಇತಿ ನಃ ಶ್ರುತಃ।
ಯಶ್ಚ ವೇದಃ ಸ ವೈ ಧರ್ಮೋ ಯಶ್ಚ ಧರ್ಮಃ ಸ ಸತ್ಪಥಃ ॥೫೪॥

ನಾವು ಯಾವ ದಂಡವನ್ನು ನೋಡಿದೆವೋ ಅದು ಸನಾತನವಾದ ವ್ಯವಹಾರ. ಯಾವ ವ್ಯವಹಾರವನ್ನು ಉಲ್ಲೇಖಿಸಿದೆವೋ ಅದು ಧರ್ಮ ಎಂದು ನಾವು ಕೇಳಿದ್ದೇವೆ. ಯಾವುದು ವೇದೋಕ್ತವೋ ಅದೇ ಧರ್ಮ. ಯಾವುದು ಧರ್ಮವೋ ಅದು ಸನ್ಮಾರ್ಗ.

ಬ್ರಹ್ಮಾ ಪ್ರಜಾಪತಿಃ ಪೂರ್ವಂ ಬಭೂವಾಥ ಪಿತಾಮಹಃ।
ಲೋಕಾನಾಂ ಸ ಹಿ ಸರ್ವೇಷಾಂ ಸಸುರಾಸುರರಕ್ಷಸಾಮ್।
ಸಮನುಷ್ಯೋರಗವತಾಂ ಕರ್ತಾ ಚೈವ ಸ ಭೂತಕೃತ್ ॥೫೫॥

ಹಿಂದೆ ಪಿತಾಮಹರೂ ಪ್ರಜಾಪತಿಗಳೂ ಆದ ಬ್ರಹ್ಮದೇವರು ಇದ್ದರು. ಅವರು ಸುರಾಸುರರಾಕ್ಷಸರಿಂದ ಸಹಿತವಾದ ಮನುಷ್ಯೋರಗಗಳಿಂದ ಸಹಿತವಾದ ಎಲ್ಲಾ ಪ್ರಾಣಿಗಳನ್ನೂ ಸೃಷ್ಟಿಸಿದರು.

ತತೋ ನೋ ವ್ಯವಹಾರೋऽಯಂ ಭರ್ತೃಪ್ರತ್ಯಯಲಕ್ಷಣಃ।
ತಸ್ಮಾದಿದಮವೋಚಾಮ ವ್ಯವಹಾರನಿದರ್ಶನಮ್ ॥೫೬॥

ಅವರಿಂದ ನಮಗೆ ಈ ಭರ್ತೃಪ್ರತ್ಯಯರೂಪವಾದ ವ್ಯವಹಾರವು ದೊರೆಯಿತು. ಆದ್ದರಿಂದ ಈ ವ್ಯವಹಾರವಿವರಣೆಯನ್ನು ನಾನು ಹೇಳಿದೆನು.

ಮಾತಾ ಪಿತಾ ಚ ಭ್ರಾತಾ ಚ ಭಾರ್ಯಾ ಚಾಥ ಪುರೋಹಿತಃ।
ನಾದಂಡ್ಯೋ ವಿದ್ಯತೇ ರಾಜ್ಞಾಂ ಯಃ ಸ್ವಧರ್ಮೇ ನ ತಿಷ್ಠತಿ ॥೫೭॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ದ್ವಾವಿಂಶತ್ಯಧಿಕಶತತಮೋಽಧ್ಯಾಯಃ ॥೧೨೨॥

ತಮ್ಮ ಧರ್ಮವನ್ನು ಮೀರುವ ತಂದೆಯಾಗಲೀ ತಾಯಿಯಾಗಲೀ ಸಹೋದರನಾಗಲೀ, ಪತ್ನಿಯಾಗಲೀ ಅಥವಾ ಪುರೋಹಿತನಾಗಲೀ ರಾಜನ ದಂಡಕ್ಕೆ ವಿಷಯರಾಗದವರು ಯಾರೂ ಇರುವುದಿಲ್ಲ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೨೨ನೇ ಅಧ್ಯಾಯವು ಮುಗಿಯಿತು.

—೦—

೧೨೩. ನೂರಇಪ್ಪತ್ತಮೂರನೆಯ ಅಧ್ಯಾಯ

ವಸುಹೋಮಮಾಂಧಾತೃಸಂವಾದ; ದಂಡೋತ್ಪತ್ತಿ ಮತ್ತು ಅದರ ಪ್ರಚಾರ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಅಂಗೇಷು ರಾಜಾ ದ್ಯುತಿಮಾನ್ ವಸುಹೋಮ ಇತಿ ಶ್ರುತಃ ॥೧॥

ಭೀಷ್ಮರು – ಈ ವಿಷಯದಲ್ಲಿಯೂ ಸಹ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ. ಅಂಗದೇಶದಲ್ಲಿ ಕಾಂತಿಯುಕ್ತನಾದ ವಸುಹೋಮನೆಂಬ ರಾಜನಿದ್ದನು.

ಸ ರಾಜಾ ಧರ್ಮನಿತ್ಯಃ ಸನ್ ಸಹ ಪತ್ನ್ಯಾ ಮಹಾತಪಾಃ।
ಮುಂಜಪೃಷ್ಠಂ ಜಗಾಮಾಥ ದೇವರ್ಷಿಗಣಸೇವಿತಮ್ ॥೨॥

ನಿತ್ಯವೂ ಧರ್ಮಪರನೂ, ಮಹಾತಪಸ್ವಿಯೂ ಆದ ಆ ರಾಜನು ಪತ್ನಿಯ ಜೊತೆಯಲ್ಲಿ ದೇವರ್ಷಿಗಣಸೇವಿತವಾದ ಮುಂಜಪೃಷ್ಠ ಪ್ರದೇಶಕ್ಕೆ ಹೋದನು.

ತತ್ರ ಶೃಂಗೇ ಹಿಮವತೋ ಮೇರೌ ಕನಕಪರ್ವತೇ।
ಯತ್ರ ಮುಂಜವಟೇ ರಾಮೋ ಜಟಾಹರಣಮಾದಿಶತ್ ॥೩॥

ಸುವರ್ಣಪರ್ವತವಾದ ಮೇರುವಿನ ಶೃಂಗದಲ್ಲಿ ಹಿಮಾಲಯದಲ್ಲಿ ಮುಂಜವಟವೃಕ್ಷದ ಬಳಿಯಲ್ಲಿ ಪರಶುರಾಮರು ತಮ್ಮ ಜಟೆಯನ್ನು ಬಿಚ್ಚಲು ಆದೇಶಿಸಿದ್ದರು. (ಸುವರ್ಣಪರ್ವತವಾದ ಮೇರುವಿನಿಂದ ಒಂದು ಪರ್ವತವನ್ನು ತಂದು ಹಿಮಾಲಯದಲ್ಲಿ ಇರಿಸಲಾಗಿದೆ - ಲಕ್ಷಾಲಂಕಾರ)

ತದಾಪ್ರಭೃತಿ ರಾಜೇಂದ್ರ ಋಷಿಭಿಃ ಸಂಶಿತವ್ರತೈಃ।
ಮುಂಜಪೃಷ್ಠ ಇತಿ ಪ್ರೋಕ್ತಃ ಸ ದೇಶೋ ರುದ್ರಸೇವಿತಃ ॥೪॥

ಎಲೈ ರಾಜನೇ! ಆಗಿನಿಂದ ಆರಂಭಿಸಿ, ವ್ರತಧಾರಿಗಳಾದ ಋಷಿಗಳು ಆ ಪ್ರದೇಶವನ್ನು ಮುಂಜಪೃಷ್ಠ ಎಂದು ಕರೆಯುತ್ತಾರೆ. ಅಲ್ಲಿ ಯಾವಾಗಲೂ ರುದ್ರದೇವರ ಸನ್ನಿಧಾನವಿದೆ.

ಸ ತತ್ರ ಬಹುಭಿರ್ಯುಕ್ತಃ ಸದಾ ಶ್ರುತಿಮಯೈರ್ಗುಣೈಃ।
ಬ್ರಾಹ್ಮಣಾನಾಮನುಮತೋ ದೇವರ್ಷಿಸದೃಶೋಽಭವತ್ ॥೫॥

ಅಲ್ಲಿ ವಸುಹೋಮನು ವೇದಗಳು ಹೇಳಿದ ಅನೇಕಗುಣಗಳಿಂದ ಕೂಡಿದವನಾಗಿ, ಬ್ರಾಹ್ಮಣರಿಗೆ ಸಮ್ಮತನಾಗಿ, ದೇವರ್ಷಿಸದೃಶನಾದನು.

ತಂ ಕದಾಚಿದದೀನಾತ್ಮಾ ಸಖಾ ಶಕ್ರಸ್ಯ ಮಾನಿತಃ।
ಅಭ್ಯಾಗಚ್ಛನ್ಮಹೀಪಾಲೋ ಮಾಂಧಾತಾ ಶತ್ರುಕರ್ಶನಃ ॥೬॥

ಒಮ್ಮೆ ಇಂದ್ರನಿಂದ ಸನ್ಮಾನಿತನಾದ, ಶತ್ರುಕರ್ಶನನಾದ, ಇಂದ್ರನ ಸ್ನೇಹಿತನಾದ, ಅದೀನನಾದ ಮಾಂಧಾತೃರಾಜನು ಅಲ್ಲಿಗೆ ಬಂದನು.

ಸೋಽಭಿಸೃತ್ಯ ತು ಮಾಂಧಾತಾ ವಸುಹೋಮಂ ನರಾಧಿಪಮ್।
ದೃಷ್ಟ್ವಾ ಪ್ರಕೃಷ್ಟಂ ತಪಸಾ ವಿನಯೇನಾಭ್ಯತಿಷ್ಠತ ॥೭॥

ಮಾಂಧಾತೃವು ವಸುಹೋಮರಾಜನನ್ನು ಸಮೀಪಿಸಿ, ಅವನ ಶ್ರೇಷ್ಠವಾದ ತಪಸ್ಸನ್ನು ನೋಡಿ, ವಿನಯದಿಂದ ನಿಂತನು.

ವಸುಹೋಮೋಽಪಿ ರಾಜ್ಞೋ ವೈ ಗಾಮರ್ಘ್ಯಂ ಚ ನ್ಯವೇದಯತ್ ।
ಸಪ್ತಾಂಗಸ್ಯ ಚ ರಾಜ್ಯಸ್ಯ ಪಪ್ರಚ್ಛ ಕುಶಲಂ ತದಾ ॥೮॥

ವಸುಹೋಮನೂ ಸಹ ರಾಜನಿಗೆ ಗೋದಾನವನ್ನು ಮಾಡಿ, ಅರ್ಘ್ಯವನ್ನು ನೀಡಿದನು. ಮತ್ತು ಸಪ್ತಾಂಗಯುತವಾದ ರಾಜ್ಯದ ಕುಶಲಪ್ರಶ್ನೆಯನ್ನು ಮಾಡಿದನು.

ಸದ್ಭಿರಾಚರಿತಂ ಪೂರ್ವಂ ಯಥಾವದನುಯಾಯಿನಮ್ ।
ಅಪೃಚ್ಛದ್ ವಸುಹೋಮಸ್ತಂ ರಾಜನ್ ಕಿಂ ಕರವಾಣಿ ತೇ ॥೯॥

ಸಜ್ಜನರು ಆಚರಿಸಿದ ಮಾರ್ಗವನ್ನು ಯಥಾವತ್ತಾಗಿ ಅನುಸರಿಸುವ ಮಾಂಧಾತೃ -ವನ್ನು ಕುರಿತು ವಸುಹೋಮನು ರಾಜನೇ! ನಿನಗೆ ಏನು ಮಾಡಲಿ ಎಂದು ಕೇಳಿದನು.

ಸೋಽಬ್ರವೀದ್ ಪರಮಪ್ರೀತೋ ಮಾಂಧಾತಾ ರಾಜಸತ್ತಮಮ್ ।
ವಸುಹೋಮಂ ಮಹಾಪ್ರಾಜ್ಞಮಾಸೀನಂ ಕುರುನಂದನ ॥೧೦॥

ಎಲೈ ಕುರುನಂದನನೇ! ಪರಮಸಂತುಷ್ಟನಾದ ಮಾಂಧಾತೃವು ಆಸೀನನಾದ ರಾಜಶ್ರೇಷ್ಠನೂ, ಮಹಾಪ್ರಾಜ್ಞನೂ ಆದ ವಸುಹೋಮನನ್ನು ಕುರಿತು ಹೇಳಿದನು.

ಬೃಹಸ್ಪತೇರ್ಮತಂ ರಾಜನ್ನಧೀತಂ ಸಕಲಂ ತ್ವಯಾ ।
ತಥೈವೌಶನಸಂ ಶಾಸ್ತ್ರಂ ವಿಜ್ಞಾತಂ ತೇ ನರಾಧಿಪ ॥೧೧॥

ಎಲೈ ರಾಜನೇ! ನೀನು ಬೃಹಸ್ಪತಿಗಳಿಗೆ ಅಭಿಮತವಾದ ಶಾಸ್ತ್ರವನ್ನು ಪೂರ್ಣವಾಗಿ ಅಧ್ಯಯನ ಮಾಡಿದ್ದೀಯೆ. ಹಾಗೆಯೇ ಎಲೈ ನರಾಧಿಪನೇ! ಶುಕ್ರಾಚಾರ್ಯರ ಶಾಸ್ತ್ರವನ್ನೂ ತಿಳಿದಿದ್ದೀಯೆ.

ತದಹಂ ಶ್ರೋತುಮಿಚ್ಛಾಮಿ ದಂಡ ಉತ್ಪದ್ಯತೇ ಕಥಮ್ ।
ಕಿಂ ವಾಪಿ ಪೂರ್ವಂ ಜಾಗರ್ತಿ ಕಿಂವಾ ಪರಮಮುಚ್ಯತೇ ॥೧೨॥

ಅದನ್ನು ನಾನು ಕೇಳಲು ಬಯಸುತ್ತೇನೆ. ದಂಡವು ಹೇಗೆ ಉತ್ಪನ್ನವಾಗುತ್ತದೆ?

ಸುವರ್ಣಪರ್ವತವಾದ ಮೇರುವಿನ ಶೃಂಗದಲ್ಲಿ ಹಿಮಾಲಯದಲ್ಲಿ ಮುಂಜವಟವೃಕ್ಷದ ಬಳಿಯಲ್ಲಿ ಪರಶುರಾಮರು ತಮ್ಮ ಜಟೆಯನ್ನು ಬಿಚ್ಚಲು ಆದೇಶಿಸಿದ್ದರು. (ಸುವರ್ಣಪರ್ವತವಾದ ಮೇರುವಿನಿಂದ ಒಂದು ಪರ್ವತವನ್ನು ತಂದು ಹಿಮಾಲಯದಲ್ಲಿ ಇರಿಸಲಾಗಿದೆ - ಲಕ್ಷಾಲಂಕಾರ)

ತದಾಪ್ರಭೃತಿ ರಾಜೇಂದ್ರ ಋಷಿಭಿಃ ಸಂಶಿತವ್ರತೈಃ।
ಮುಂಜಪೃಷ್ಠ ಇತಿ ಪ್ರೋಕ್ತಃ ಸ ದೇಶೋ ರುದ್ರಸೇವಿತಃ ॥೪॥

ಎಲೈ ರಾಜನೇ! ಆಗಿನಿಂದ ಆರಂಭಿಸಿ, ವ್ರತಧಾರಿಗಳಾದ ಋಷಿಗಳು ಆ ಪ್ರದೇಶವನ್ನು ಮುಂಜಪೃಷ್ಠ ಎಂದು ಕರೆಯುತ್ತಾರೆ. ಅಲ್ಲಿ ಯಾವಾಗಲೂ ರುದ್ರದೇವರ ಸನ್ನಿಧಾನವಿದೆ.

ಸ ತತ್ರ ಬಹುಭಿರ್ಯುಕ್ತಃ ಸದಾ ಶ್ರುತಿಮಯೈರ್ಗುಣೈಃ।
ಬ್ರಾಹ್ಮಣಾನಾಮನುಮತೋ ದೇವರ್ಷಿಸದೃಶೋಽಭವತ್ ॥೫॥

ಅಲ್ಲಿ ವಸುಹೋಮನು ವೇದಗಳು ಹೇಳಿದ ಅನೇಕಗುಣಗಳಿಂದ ಕೂಡಿದವನಾಗಿ, ಬ್ರಾಹ್ಮಣರಿಗೆ ಸಮ್ಮತನಾಗಿ, ದೇವರ್ಷಿಸದೃಶನಾದನು.

ತಂ ಕದಾಚಿದದೀನಾತ್ಮಾ ಸಖಾ ಶಕ್ರಸ್ಯ ಮಾನಿತಃ।
ಅಭ್ಯಾಗಚ್ಛನ್ಮಹೀಪಾಲೋ ಮಾಂಧಾತಾ ಶತ್ರುಕರ್ಶನಃ ॥೬॥

ಒಮ್ಮೆ ಇಂದ್ರನಿಂದ ಸನ್ಮಾನಿತನಾದ, ಶತ್ರುಕರ್ಶನನಾದ, ಇಂದ್ರನ ಸ್ನೇಹಿತನಾದ, ಅದೀನನಾದ ಮಾಂಧಾತೃರಾಜನು ಅಲ್ಲಿಗೆ ಬಂದನು.

ಸೋಽಭಿಸೃತ್ಯ ತು ಮಾಂಧಾತಾ ವಸುಹೋಮಂ ನರಾಧಿಪಮ್।
ದೃಷ್ಟ್ವಾ ಪ್ರಕೃಷ್ಟಂ ತಪಸಾ ವಿನಯೇನಾಭ್ಯತಿಷ್ಠತ ॥೭॥

ಮಾಂಧಾತೃವು ವಸುಹೋಮರಾಜನನ್ನು ಸಮೀಪಿಸಿ, ಅವನ ಶ್ರೇಷ್ಠವಾದ ತಪಸ್ಸನ್ನು ನೋಡಿ, ವಿನಯದಿಂದ ನಿಂತನು.

ವಸುಹೋಮೋಽಪಿ ರಾಜ್ಞೋ ವೈ ಗಾಮಘ್ರ್ಯಂ ಚ ನ್ಯವೇದಯತ್ ।
ಸಪ್ತಾಂಗಸ್ಯ ಚ ರಾಜ್ಯಸ್ಯ ಪಪ್ರಚ್ಛ ಕುಶಲಂ ತದಾ ॥೮॥

ವಸುಹೋಮನೂ ಸಹ ರಾಜನಿಗೆ ಗೋದಾನವನ್ನು ಮಾಡಿ, ಅರ್ಘ್ಯವನ್ನು ನೀಡಿದನು. ಮತ್ತು ಸಪ್ತಾಂಗಯುತವಾದ ರಾಜ್ಯದ ಕುಶಲಪ್ರಶ್ನೆಯನ್ನು ಮಾಡಿದನು.

ಸದ್ಭಿರಾಚರಿತಂ ಪೂರ್ವಂ ಯಥಾವದನುಯಾಯಿನಮ್ ।
ಅಪೃಚ್ಛದ್ ವಸುಹೋಮಸ್ತಂ ರಾಜನ್ ಕಿಂ ಕರವಾಣಿ ತೇ ॥೯॥

ಸಜ್ಜನರು ಆಚರಿಸಿದ ಮಾರ್ಗವನ್ನು ಯಥಾವತ್ತಾಗಿ ಅನುಸರಿಸುವ ಮಾಂಧಾತೃ -ವನ್ನು ಕುರಿತು ವಸುಹೋಮನು ರಾಜನೇ! ನಿನಗೆ ಏನು ಮಾಡಲಿ ಎಂದು ಕೇಳಿದನು.

ಸೋಽಬ್ರವೀದ್ ಪರಮಪ್ರೀತೋ ಮಾಂಧಾತಾ ರಾಜಸತ್ತಮಮ್ ।
ವಸುಹೋಮಂ ಮಹಾಪ್ರಾಜ್ಞಮಾಸೀನಂ ಕುರುನಂದನ ॥೧೦॥

ಎಲೈ ಕುರುನಂದನನೇ! ಪರಮಸಂತುಷ್ಟನಾದ ಮಾಂಧಾತೃವು ಆಸೀನನಾದ ರಾಜಶ್ರೇಷ್ಠನೂ, ಮಹಾಪ್ರಾಜ್ಞನೂ ಆದ ವಸುಹೋಮನನ್ನು ಕುರಿತು ಹೇಳಿದನು.

ಬೃಹಸ್ಪತೇರ್ಮತಂ ರಾಜನ್ನಧೀತಂ ಸಕಲಂ ತ್ವಯಾ ।
ತಥೈವೌಶನಸಂ ಶಾಸ್ತ್ರಂ ವಿಜ್ಞಾತಂ ತೇ ನರಾಧಿಪ ॥೧೧॥

ಎಲೈ ರಾಜನೇ! ನೀನು ಬೃಹಸ್ಪತಿಗಳಿಗೆ ಅಭಿಮತವಾದ ಶಾಸ್ತ್ರವನ್ನು ಪೂರ್ಣವಾಗಿ ಅಧ್ಯಯನ ಮಾಡಿದ್ದೀಯೆ. ಹಾಗೆಯೇ ಎಲೈ ನರಾಧಿಪನೇ! ಶುಕ್ರಾಚಾರ್ಯರ ಶಾಸ್ತ್ರವನ್ನೂ ತಿಳಿದಿದ್ದೀಯೆ.

ತದಹಂ ಶ್ರೋತುಮಿಚ್ಛಾಮಿ ದಂಡ ಉತ್ಪದ್ಯತೇ ಕಥಮ್ ।
ಕಿಂ ವಾಪಿ ಪೂರ್ವಂ ಜಾಗರ್ತಿ ಕಿಂವಾ ಪರಮಮುಚ್ಯತೇ ॥೧೨॥

ಅದನ್ನು ನಾನು ಕೇಳಲು ಬಯಸುತ್ತೇನೆ. ದಂಡವು ಹೇಗೆ ಉತ್ಪನ್ನವಾಗುತ್ತದೆ?

ದಂಡೋತ್ಪತ್ತಿಗಿಂತಲೂ ಮೊದಲು ಯಾವುದು ಪ್ರಜೆಗಳ ರಕ್ಷಣಾಕಾರ್ಯದಲ್ಲಿ ಜಾಗರೂಕವಾಗಿದ್ದಿತು? ಅದರಲ್ಲಿ ಯಾವುದು ಶ್ರೇಷ್ಠವಾದುದು?

ಕಥಂ ಕ್ಷತ್ರಿಯಸಂಸ್ಥಶ್ಚ ದಂಡಃ ಸಂಪ್ರತ್ಯವಸ್ಥಿತಃ।
ಬ್ರೂಹಿ ಮೇ ಸುಮಹಾಪ್ರಾಜ್ಞ ದದಾಮ್ಯಾಚಾರ್ಯವೇತನಮ್ ॥೧೩॥

ದಂಡವು ಈಗ ಹೇಗೆ ಕ್ಷತ್ರಿಯರ ಹಸ್ತಕ್ಕೆ ಬಂದಿದೆ? ಎಲೈ ಮಹಾಪ್ರಾಜ್ಞನೇ! ನನಗೆ ಇವೆಲ್ಲವನ್ನೂ ಹೇಳು. ನಾನು ಗುರುದಕ್ಷಿಣೆಯನ್ನು ಕೊಡುತ್ತೇನೆ.

ವಸುಹೋಮಃ

ಶೃಣು ರಾಜನ್ ಯಥಾ ದಂಡಃ ಸಂಭೂತೋ ಲೋಕಸಂಗ್ರಹಃ।
ಪ್ರಜಾವಿನಯರಕ್ಷಾರ್ಥಂ ಧರ್ಮಸ್ಯಾತ್ಮಾ ಸನಾತನಃ ॥೧೪॥

ವಸುಹೋಮ – ಎಲೈ ರಾಜನೇ! ಲೋಕಸಂಗ್ರಹವನ್ನು ಮಾಡುವ, ಪ್ರಜೆಗಳಲ್ಲಿ ವಿನಯವನ್ನು ರಕ್ಷಿಸುವ, ಧರ್ಮಸ್ವರೂಪವಾದ, ಸನಾತನವಾದ ದಂಡವು ಹೇಗೆ ಉತ್ಪನ್ನವಾಯಿತೆಂದು ಕೇಳು.

ಬ್ರಹ್ಮಾ ಯಿಯಕ್ಷುರ್ಭಗವಾನ್ ಸರ್ವಲೋಕಪಿತಾಮಹಃ।
ಋತ್ವಿಜಂ ನಾತ್ಮನಾ ತುಲ್ಯಂ ದದರ್ಶೇತಿ ಹಿ ನಃ ಶ್ರುತಮ್ ॥೧೫॥

ಯಜ್ಞವನ್ನು ಮಾಡಲು ಬಯಸಿದ, ಪೂಜ್ಯರಾದ ಸರ್ವಲೋಕಪಿತಾಮಹರಾದ ಬ್ರಹ್ಮದೇವರು ತಮಗೆ ಸದೃಶನಾದ ಋತ್ವಿಜನನ್ನು ಕಾಣಲಿಲ್ಲ ಎಂದು ನಾವು ಕೇಳಿದ್ದೇವೆ.

ಸ ಗರ್ಭಂ ಶಿರಸಾ ದೇವೋ ವರ್ಷಪೂಗಾನಧಾರಯತ್।
ಪೂರ್ಣೇ ವರ್ಷಸಹಸ್ರೇ ತು ಸ ಗರ್ಭಃ ಕ್ಷುವತೋऽಪತತ್ ॥೧೬॥

ಅವರು ಆಗ ಎಷ್ಟೋ ವರ್ಷಗಳ ಕಾಲ ಒಂದು ಗರ್ಭವನ್ನು ಶಿರಸ್ಸಿನಲ್ಲಿ ಧಾರಣ ಮಾಡಿದರು. ಒಂದು ಸಹಸ್ರ ವರ್ಷಗಳು ಕಳೆದ ಮೇಲೆ ಅವರು ಸೀನಿದಾಗ ಆ ಗರ್ಭವು ಕೆಳಗೆ ಬಿದ್ದಿತು.

ಸ ಕುಪ್ಪೋ ನಾಮ ಸಂಭೂತಃ ಪ್ರಜಾಪತಿರರಿಂದಮ।
ಋತ್ವಿಗಾಸೀತ್ ತದಾ ರಾಜನ್ ಯಜ್ಞೇ ತಸ್ಯ ಮಹಾತ್ಮನಃ ॥೧೭॥

ಎಲೈ ಅರಿಂದಮನೇ! ಆ ಗರ್ಭವು ಕುಪ್ಪ ಎಂಬ ಹೆಸರಿನ ಪ್ರಜಾಪತಿಯಾಯಿತು. ಕುಪ್ಪನು ಮಹಾತ್ಮರಾದ ಬ್ರಹ್ಮದೇವರ ಯಜ್ಞದಲ್ಲಿ ಋತ್ವಿಜನಾದನು.

ತಸ್ಮಿನ್ ಪ್ರವೃತ್ತೇ ಸತ್ರೇ ತು ಬ್ರಹ್ಮಣಃ ಪಾರ್ಥಿವರ್ಷಭ।
ಹೃಷ್ಟರೂಪಪ್ರಚಾರತ್ವಾದ್ ದಂಡಃ ಸೋಽಂತರ್ಹಿತೋಽಭವತ್ ॥೧೮॥

ಎಲೈ ಪಾರ್ಥಿವಶ್ರೇಷ್ಠನೇ! ಬ್ರಹ್ಮದೇವರ ಯಜ್ಞವು ನಡೆಯುತ್ತಿದ್ದಾಗ, ಬ್ರಹ್ಮದೇವರು ಸಂತೋಷಗೊಂಡು ಯಜ್ಞನಿರತನಾದುದರಿಂದ (ಪ್ರಜಾನಿಯಮನಕಾರ್ಯರಹಿತರಾದುದರಿಂದ) ಆ ದಂಡವು ಅಂತರ್ಧಾನವನ್ನು ಹೊಂದಿತು.

ತಸ್ಮಿನ್ನಂತರ್ಹಿತೇ ಚಾಥ ಪ್ರಜಾನಾಂ ಸಂಕರೋಽಭವತ್।
ನೈವ ಕಾರ್ಯಂ ನ ಚಾಕಾರ್ಯಂ ಭೋಜ್ಯಾಭೋಜ್ಯಂ ನ ವಿದ್ಯತೇ ॥೧೯॥

ದಂಡವು ಅಂತರ್ಧಾನ ಹೊಂದುತ್ತಿರಲು ಪ್ರಜೆಗಳಲ್ಲಿ ಸಾಂಕರ್ಯವುಂಟಾಯಿತು. ಕಾರ್ಯಾಕಾರ್ಯವಿಭಾಗವಾಗಲೀ ಭೋಜ್ಯಾಭೋಜ್ಯವಿಭಾಗವಾಗಲೀ ಇರಲಿಲ್ಲ.

ಪೇಯಾಪೇಯಂ ಕುತಃ ಸಿದ್ಧಿರ್ಹಿಂಸಂತಿ ಚ ಪರಸ್ಪರಮ್।
ಗಮ್ಯಾಗಮ್ಯಂ ತದಾ ನಾಸೀತ್ ಪರಸ್ವಂ ಸ್ವಂ ಚ ವೈ ಸಮಮ್ ॥೨೦॥

ಪೇಯಾಪೇಯವಿಭಾಗವು ಎಲ್ಲಿ ಸಿದ್ಧವಾದೀತು? ಪ್ರಜೆಗಳು ಪರಸ್ಪರವಾಗಿ ಹಿಂಸಿಸಿದರು. ಆಗ ಗಮ್ಯಾಗಮ್ಯವಿಭಾಗವಿರಲಿಲ್ಲ. ಪರಸ್ವತ್ತು ತನ್ನ ಸ್ವತ್ತಿಗೆ ಸಮನಾಗಿದ್ದಿತು.

ಪರಸ್ಪರಂ ವಿಲುಂಪಂತೇ ಸಾರಮೇಯಾ ಇವಾಮಿಷಮ್।
ಅಬಲಂ ಬಲಿನೋ ಜಘ್ನುರ್ಮರ್ಯಾದಮವರ್ತತ ॥೨೧॥

ನಾಯಿಗಳು ಮಾಂಸವನ್ನು ಲೂಟಿಮಾಡುವಂತೆ ಪರಸ್ಪರವಾಗಿ ಲೂಟಿ ಮಾಡಿದರು. ಬಲಿಷ್ಠರು ದುರ್ಬಲರನ್ನು ಕೊಂದರು. ಯಾವ ಕಟ್ಟುಪಾಡೂ ಇರಲಿಲ್ಲ.

ತತಃ ಪಿತಾಮಹೋ ವಿಷ್ಣುಂ ಭಗವಂತಂ ಸನಾತನಮ್ ।
ಸಂಪೂಜ್ಯ ವರದಂ ದೇವಂ ಮಹಾದೇವಮಥಾಬ್ರವೀತ್ ॥೨೨॥

ಆಗ ಪಿತಾಮಹರಾದ ಬ್ರಹ್ಮದೇವರು ಭಗವಂತನೂ, ಸನಾತನನೂ, ವರಪ್ರದನೂ, ಮಹಾದೇವನೂ ಆದ ವಿಷ್ಣುವನ್ನು ಚೆನ್ನಾಗಿ ಪೂಜಿಸಿ ಅನಂತರ ಮಾತನಾಡಿದನು.

ಸ್ವಯಂ ವಿಷ್ಣುಃ ಸದಾ ಕ್ಲೃಪ್ತೋ ಧರ್ಮಸ್ಯ ಪರಿರಕ್ಷಣೇ ।
ತ್ವಂ ಹಿ ಸರ್ವವಿಧಾನಜ್ಞಃ ಸತ್ವಾನಾಂ ತ್ವಂ ಗತಿಃ ಪುರಾ ॥೨೩॥

ವಿಷ್ಣುವಾದ ನೀನೇ ಯಾವಾಗಲೂ ಧರ್ಮದ ರಕ್ಷಣೆಯಲ್ಲಿ ಕ್ಲೃಪ್ತನಾಗಿದ್ದೀಯೆ. ನೀನು ಎಲ್ಲಾ ಪ್ರಕಾರಗಳನ್ನೂ ತಿಳಿದವನು. ಮೊದಲಿನಿಂದಲೂ ಎಲ್ಲ ಜೀವರಿಗೂ ನೀನೇ ಗತಿಯಾದವನು.

ಅತ್ರ ಸಾಧ್ವನುಕಂಪಾಂ ವೈ ಕರ್ತುಮರ್ಹಸಿ ಕೇವಲಮ್ ।
ಸಂಕರೋ ನ ಭವೇದತ್ರ ಯಥಾ ವೈ ತದ್ ವಿಧೀಯತಾಮ್ ॥೨೪॥

ಈಗ ನೀನು ಶುದ್ಧವಾದ ಅನುಕಂಪವನ್ನು ಮಾಡಬೇಕಾಗಿದೆ. ಪ್ರಜೆಗಳಲ್ಲಿ ಸಂಕರವುಂಟಾಗದಂತೆ ಮಾಡಬೇಕು. (ಎಂದು ಪ್ರಾರ್ಥಿಸಿದರು)

ತತಃ ಸ ಭಗವಾನ್ ಧ್ಯಾತ್ವಾ ಚಿರಂ ಶೂಲಜಟಾಧರಃ ।
ದೇವದೇವೋ ಮಹಾದೇವಃ ಕಾರಣಂ ಜಗತಃ ಪರಮ್ ॥೨೫॥

ಬ್ರಹ್ಮವಿಷ್ಣ್ವಿಂದ್ರಸಹಿತಃ ಸರ್ವೈಶ್ಚ ಸ ಸುರಾಸುರೈಃ ।
ಲೋಕಸಂಧಾರಣಾರ್ಥಂ ಚ ಲೋಕಸಂಕರನಾಶನಮ್ ।
ಆತ್ಮಾನಮಾತ್ಮನಾ ದಂಡಮಸೃಜದ್ ದೇವಸತ್ತಮಃ ॥೨೬॥

ಅನಂತರ ಶೂಲಜಟಾಧರನಾದ, ಮಹಾದೇವನಾದ, ದೇವದೇವನಾದ, ಜಗತ್ತಿಗೆ ಮೂಲಕಾರಣನಾದ ಶಂಕರನು (ಶಂಕರನ ಅಂತರ್ಯಾಮಿಯಾದ ಹರಿಯು) ಬ್ರಹ್ಮ, ವಿಷ್ಣು (ವಿಷ್ಣುವಿನ ಇನ್ನೊಂದು ರೂಪ) ಇಂದ್ರಸಹಿತನಾಗಿ ಎಲ್ಲ ಸುರಾಸುರರಿಂದಲೂ ಸಹಿತನಾಗಿ ಲೋಕವನ್ನು ಚೆನ್ನಾಗಿ ಧರಿಸಿ ಲೋಕ-ಸಾಂಕರ್ಯವನ್ನು ನಾಶ ಮಾಡುವುದಕ್ಕಾಗಿ ದೇವಶ್ರೇಷ್ಠನಾದ ಅವನು ತನ್ನನ್ನೇ ದಂಡರೂಪವಾಗಿ ಸೃಷ್ಟಿಸಿಕೊಂಡನು.

ತಸ್ಮಾಚ್ಚ ಧರ್ಮಚರಣಾಂ ನೀತಿಂ ದೇವೀಂ ಸರಸ್ವತೀಮ್ ।
ಅಸೃಜದ್ ದಂಡನೀತಿಃ ಸಾ ತ್ರಿಷು ಲೋಕೇಷು ವಿಶ್ರುತಾ ॥೨೭॥

ಅದರಿಂದ ಸರಸ್ವತಿಯಿಂದ ಅಭಿಮನ್ಯವಾದ ಧರ್ಮಾಚರಣೆಯ ನೀತಿಯನ್ನು ಸೃಷ್ಟಿಸಿದನು. ದಂಡನೀತಿಯೆಂದು ಹೆಸರು ಪಡೆದ ಆ ನೀತಿಯು ಮೂರು ಲೋಕಗಳಲ್ಲಿಯೂ ಪ್ರಖ್ಯಾತವಾಗಿದೆ.

ಯಥಾऽಸೌ ನೀಯತೇ ದಂಡಃ ಸತತಂ ಪಾಪಕಾರಿಷು ।
ದಂಡಸ್ಯ ನಯನಾತ್ ಸಾ ಹಿ ದಂಡನೀತಿರಿಹೋಚ್ಯತೇ ॥೨೮॥

ಅಪರಾಧಿಗಳಲ್ಲಿ ದಂಡವನ್ನು ಉಂಟು ಮಾಡುವುದರಿಂದ ಆ ನೀತಿಗೆ ದಂಡನೀತಿಯೆಂದು ಹೆಸರು.

ಭೂಯಃ ಸ ಭಗವಾನ್ ಧ್ಯಾತ್ವಾ ಚಿರಂ ಶೂಲಧರಃ ಪ್ರಭುಃ ।
ಅಸೃಜತ್ ಸರ್ವಶಾಸ್ತ್ರಾಣಿ ಮಹಾದೇವೋ ಮಹೇಶ್ವರಃ ॥೨೯॥

ಅನಂತರ ಪೂಜ್ಯನಾದ, ಶೂಲಧರನಾದ, ಮಹಾದೇವನಾದ ಮಹೇಶ್ವರನು ಪುನಃ ಬಹಳಕಾಲ ಚಿಂತಿಸಿ ಸರ್ವಶಾಸ್ತ್ರಗಳನ್ನೂ ಸೃಷ್ಟಿಸಿದನು.

ದಂಡನೀತೇಃ ಪ್ರಯೋಗಾರ್ಥಂ ಪ್ರಮಾಣಾನಿ ಚ ಸರ್ವಶಃ ।
ವಿದ್ಯಾಶ್ಚತಸ್ರಃ ಕೂಟಸ್ಥಾಸ್ತಾಸಾಂ ಭೇದವಿಕಲ್ಪನಾಃ ॥೩೦॥

ದಂಡನೀತಿಯ ಪ್ರಯೋಗಕ್ಕಾಗಿ ಎಲ್ಲಾ ಪ್ರಮಾಣಗಳನ್ನೂ ನಾಲ್ಕು ನಿರ್ವಿಕಾರವಿದ್ಯೆಗಳನ್ನೂ, ಅವುಗಳ ಪ್ರಭೇದಗಳನ್ನೂ ಸೃಷ್ಟಿಸಿದನು.

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ।
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥೩೧॥

ಅವು ನಾಲ್ಕು ವೇದಗಳು, ಆರು ವೇದಾಂಗಗಳು,ಮೀಮಾಂಸಾ, ನ್ಯಾಯಶಾಸ್ತ್ರ, ಪುರಾಣ, ಧರ್ಮಶಾಸ್ತ್ರ ಎಂದು ಹದಿನಾಲ್ಕು ವಿದ್ಯಾಸ್ಥಾನಗಳಾಗಿವೆ.

ಆಯುರ್ವೇದೋ ಧನುರ್ವೇದೋ ಗಾಂಧರ್ವಶ್ಚೇತಿ ತೇ ತ್ರಯಃ।
ಅರ್ಥಶಾಸ್ತ್ರಂ ಚತುರ್ಥಂ ತು ವಿದ್ಯಾ ಹ್ಯಷ್ಟಾದಶೈವ ತು ॥೩೨॥

ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಮತ್ತು ನಾಲ್ಕನೆಯ ಅರ್ಥಶಾಸ್ತ್ರವನ್ನು ಸೇರಿಸಿ ಒಟ್ಟು ಹದಿನೆಂಟು ವಿದ್ಯೆಗಳಾಗುತ್ತವೆ.

ದಶ ಚಾಷ್ಟೌ ಚ ವಿಖ್ಯಾತಾ ಏತಾ ಧರ್ಮಸ್ಯ ಸಂಹಿತಾಃ।
ಏತಾಸಾಮೇವ ವಿದ್ಯಾನಾಂ ವ್ಯಾಸಮಾಹ ಮಹೇಶ್ವರಃ ॥೩೩॥

ಇವು ಧರ್ಮಸಂಹಿತೆಗಳೆಂದು ಪ್ರಸಿದ್ಧವಾದ ಹದಿನೆಂಟು ವಿದ್ಯೆಗಳು. ಈ ವಿದ್ಯೆಗಳ ವಿಸ್ತಾರವನ್ನೇ ಮಹೇಶ್ವರನಾದ ವಿಷ್ಣುವು ಹೇಳಿದನು. – ಇಲ್ಲಿಯೇ ಮುಂದೆ ರುದ್ರನಿಗೆ ಈಶ್ವರನನ್ನು ಪ್ರಭುವನ್ನಾಗಿ ಮಾಡಿದನು ಎಂದು ಹೇಳಿರುವುದರಿಂದ ಶಿವನು ಶಿವನನ್ನು ಸೃಷ್ಟಿಮಾಡಲು ಸಾಧ್ಯವಿಲ್ಲವಾದುದರಿಂದ ಮಹೇಶ್ವರನೆಂದರೆ ಶಿವಾಂತರ್ಯಾಮಿಯಾದ ವಿಷ್ಣುವೆಂದೇ ತಿಳಿಯಬೇಕು - (ಲಕ್ಷಾಲಂಕಾರ)

ಶತಾನಿ ತ್ರೀಣಿ ಶಾಸ್ತ್ರಾಣಾಂ ಮಹಾತಂತ್ರಾಣಿ ಸಪ್ತತಿಮ್।
ವ್ಯಾಸ ಏವ ತು ವಿದ್ಯಾನಾಂ ಮಹಾದೇವೇನ ಕೀರ್ತಿತಃ ॥೩೪॥

ಮಹಾದೇವನಾದ ವಿಷ್ಣುವು ಮುನ್ನೂರು ಶಾಸ್ತ್ರಗಳನ್ನೂ ಎಪ್ಪತ್ತು ಮಹಾತಂತ್ರಗಳನ್ನೂ ರಚಿಸಿ ವಿದ್ಯೆಗಳ ವಿಸ್ತಾರವನ್ನು ಹೇಳಿದ್ದಾನೆ.

ತಂತ್ರಂ ಪಾಶುಪತಂ ನಾಮ ಪಂಚರಾತ್ರಂ ಚ ವಿಶ್ರುತಮ್ ।
ಯೋಗಶಾಸ್ತ್ರಂ ಚ ಸಾಂಖ್ಯಂ ಚ ತಂತ್ರಂ ಲೋಕಾಯತಂ ತಥಾ ॥೩೫॥

ತಂತ್ರಂ ಬ್ರಹ್ಮತುಲಾ ನಾಮ ತರ್ಕವಿದ್ಯಾ ದಿವೌಕಸಾಮ್ ।
ಸುಖದುಃಖಾರ್ತಜಿಜ್ಞಾಸಾ ಕಾರಣಂ ಚೇತಿ ವಿಶ್ರುತಮ್ ॥೩೬॥

ಪಾಶುಪತತಂತ್ರ , ಪ್ರಖ್ಯಾತವಾದ ಪಂಚರಾತ್ರ , ಯೋಗಶಾಸ್ತ್ರ, ಸಾಂಖ್ಯಶಾಸ್ತ್ರ, ಚಾರ್ವಾಕತಂತ್ರ , ಬ್ರಹ್ಮತುಲಾತಂತ್ರ, ದೇವತೆಗಳ ತರ್ಕವಿದ್ಯಾ , ಸುಖದುಃಖಾರ್ಥ-ಜಿಜ್ಞಾಸಾ, ಪ್ರಖ್ಯಾತವಾದ ಸುಖವಿದ್ಯಾಕಾರಣ ಎಂಬ ಶಾಸ್ತ್ರಗಳನ್ನು ರಚಿಸಿದನು.

ತರ್ಕವಿದ್ಯಾಸ್ತಥಾ ಚಾಷ್ಟೌ ಚ ಲೋಕ್ಯೋ ನ್ಯಾಯವಿಸ್ತರಃ ।
ದಶ ಚಾಷ್ಟೌ ಚ ವಿಜ್ಞೇಯಾಃ ಪೌರಾಣಾ ಯಜ್ಞಸಂಹಿತಾಃ ॥೩೭॥

ಎಂಟು ತರ್ಕವಿದ್ಯೆಗಳನ್ನು ರಚಿಸಿದನು. ಅದಕ್ಕೆ ನ್ಯಾಯವಿಸ್ತರವೆಂದು ಹೆಸರು. ಯಜ್ಞಕ್ಕೆ ಸಂಬಂಧಿಸಿದ ಪುರಾಣಸಂಹಿತೆಗಳು ಹದಿನೆಂಟು ಎಂದು ತಿಳಿಯಬೇಕು.

ಪುರಾಣಾಶ್ಚ ಪ್ರಣೀತಾಶ್ಚ ತಾವದೇವೇಹ ಸಂಹಿತಾಃ ।
ಧರ್ಮಶಾಸ್ತ್ರಾಣಿ ತದ್ವಚ್ಚ ಏಕಾರ್ಥಾನಿ ಚ ನಾನ್ಯಥಾ ॥೩೮॥

ಅಷ್ಟೇ ಪುರಾಣಸಂಹಿತೆಗಳನ್ನು ರಚಿಸಿದನು. ಅದರಂತೆಯೇ ಸಮಾನಾರ್ಥಕ-ವಾದ ಪರಸ್ಪರವಿರೋಧವಿಲ್ಲದ ಧರ್ಮಶಾಸ್ತ್ರಗಳನ್ನು ರಚಿಸಿದನು.

ಏಕಾರ್ಥಾನಿ ಪುರಾಣಾನಿ ವೇದಾಶ್ಚೈಕಾರ್ಥಸಂಹಿತಾಃ ।
ನಾನಾರ್ಥಾನಿ ಚ ಸರ್ವಾಣಿ ತತಃ ಶಾಸ್ತ್ರಾಣಿ ಶಂಕರಃ ॥೩೯॥

ಪ್ರೋವಾಚ ಭಗವಾನ್ ದೇವಃ ಕಾಲಜ್ಞಾನಾನಿ ಯಾನಿ ಚ ।
ಚತುಃಷಷ್ಟಿಪ್ರಮಾಣಾನಿ ಆಯುರ್ವೇದಂ ಚ ಸೋತ್ತರಮ್ ॥೪೦॥

ಪುರಾಣಗಳೆಲ್ಲವೂ ಒಂದೇ ಅರ್ಥವನ್ನು ಹೇಳುತ್ತವೆ. ವೇದಗಳಿಗೂ ಒಂದೇ ಅರ್ಥದಲ್ಲಿ ತಾತ್ಪರ್ಯವಿದೆ. ಉಳಿದ ಶಾಸ್ತ್ರಗಳು ಭಿನ್ನಭಿನ್ನಾರ್ಥಗಳನ್ನು ಹೊಂದಿವೆ.

ದಂಡನೀತಿಯ ಪ್ರಯೋಗಕ್ಕಾಗಿ ಎಲ್ಲಾ ಪ್ರಮಾಣಗಳನ್ನೂ ನಾಲ್ಕು ನಿರ್ವಿಕಾರವಿದ್ಯೆಗಳನ್ನೂ, ಅವುಗಳ ಪ್ರಭೇದಗಳನ್ನೂ ಸೃಷ್ಟಿಸಿದನು.

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ।
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥೩೧॥

ಅವು ನಾಲ್ಕು ವೇದಗಳು, ಆರು ವೇದಾಂಗಗಳು,ಮೀಮಾಂಸಾ, ನ್ಯಾಯಶಾಸ್ತ್ರ, ಪುರಾಣ, ಧರ್ಮಶಾಸ್ತ್ರ ಎಂದು ಹದಿನಾಲ್ಕು ವಿದ್ಯಾಸ್ಥಾನಗಳಾಗಿವೆ.

ಆಯುರ್ವೇದೋ ಧನುರ್ವೇದೋ ಗಾಂಧರ್ವಶ್ಚೇತಿ ತೇ ತ್ರಯಃ।
ಅರ್ಥಶಾಸ್ತ್ರಂ ಚತುರ್ಥಂ ತು ವಿದ್ಯಾ ಹ್ಯಷ್ಟಾದಶೈವ ತು ॥೩೨॥

ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಮತ್ತು ನಾಲ್ಕನೆಯ ಅರ್ಥಶಾಸ್ತ್ರವನ್ನು ಸೇರಿಸಿ ಒಟ್ಟು ಹದಿನೆಂಟು ವಿದ್ಯೆಗಳಾಗುತ್ತವೆ.

ದಶ ಚಾಷ್ಟೌ ಚ ವಿಖ್ಯಾತಾ ಏತಾ ಧರ್ಮಸ್ಯ ಸಂಹಿತಾಃ।
ಏತಾಸಾಮೇವ ವಿದ್ಯಾನಾಂ ವ್ಯಾಸಮಾಹ ಮಹೇಶ್ವರಃ ॥೩೩॥

ಇವು ಧರ್ಮಸಂಹಿತೆಗಳೆಂದು ಪ್ರಸಿದ್ಧವಾದ ಹದಿನೆಂಟು ವಿದ್ಯೆಗಳು. ಈ ವಿದ್ಯೆಗಳ ವಿಸ್ತಾರವನ್ನೇ ಮಹೇಶ್ವರನಾದ ವಿಷ್ಣುವು ಹೇಳಿದನು. – ಇಲ್ಲಿಯೇ ಮುಂದೆ ರುದ್ರನಿಗೆ ಈಶ್ವರನನ್ನು ಪ್ರಭುವನ್ನಾಗಿ ಮಾಡಿದನು ಎಂದು ಹೇಳಿರುವುದರಿಂದ ಶಿವನು ಶಿವನನ್ನು ಸೃಷ್ಟಿಮಾಡಲು ಸಾಧ್ಯವಿಲ್ಲವಾದುದರಿಂದ ಮಹೇಶ್ವರನೆಂದರೆ ಶಿವಾಂತರ್ಯಾಮಿಯಾದ ವಿಷ್ಣುವೆಂದೇ ತಿಳಿಯಬೇಕು - (ಲಕ್ಷ್ಮಲಂಕಾರ)

ಶತಾನಿ ತ್ರೀಣಿ ಶಾಸ್ತ್ರಾಣಾಂ ಮಹಾತಂತ್ರಾಣಿ ಸಪ್ತತಿಮ್।
ವ್ಯಾಸ ಏವ ತು ವಿದ್ಯಾನಾಂ ಮಹಾದೇವೇನ ಕೀರ್ತಿತಃ ॥೩೪॥

ಮಹಾದೇವನಾದ ವಿಷ್ಣುವು ಮುನ್ನೂರು ಶಾಸ್ತ್ರಗಳನ್ನೂ ಎಪ್ಪತ್ತು ಮಹಾತಂತ್ರಗಳನ್ನೂ ರಚಿಸಿ ವಿದ್ಯೆಗಳ ವಿಸ್ತಾರವನ್ನು ಹೇಳಿದ್ದಾನೆ.

ತಂತ್ರಂ ಪಾಶುಪತಂ ನಾಮ ಪಂಚರಾತ್ರಂ ಚ ವಿಶ್ರುತಮ್ ।
ಯೋಗಶಾಸ್ತ್ರಂ ಚ ಸಾಂಖ್ಯಂ ಚ ತಂತ್ರಂ ಲೋಕಾಯತಂ ತಥಾ ॥೩೫॥

ತಂತ್ರಂ ಬ್ರಹ್ಮತುಲಾ ನಾಮ ತರ್ಕವಿದ್ಯಾ ದಿವೌಕಸಾಮ್ ।
ಸುಖದುಃಖಾರ್ತಜಿಜ್ಞಾಸಾ ಕಾರಣಂ ಚೇತಿ ವಿಶ್ರುತಮ್ ॥೩೬॥

ಪಾಶುಪತತಂತ್ರ , ಪ್ರಖ್ಯಾತವಾದ ಪಂಚರಾತ್ರ , ಯೋಗಶಾಸ್ತ್ರ, ಸಾಂಖ್ಯಶಾಸ್ತ್ರ, ಚಾರ್ವಾಕತಂತ್ರ , ಬ್ರಹ್ಮತುಲಾತಂತ್ರ, ದೇವತೆಗಳ ತರ್ಕವಿದ್ಯಾ , ಸುಖದುಃಖಾರ್ಥ-ಜಿಜ್ಞಾಸಾ, ಪ್ರಖ್ಯಾತವಾದ ಸುಖವಿದ್ಯಾಕಾರಣ ಎಂಬ ಶಾಸ್ತ್ರಗಳನ್ನು ರಚಿಸಿದನು.

ತರ್ಕವಿದ್ಯಾಸ್ತಥಾ ಚಾಷ್ಟೌ ಚ ಲೋಕ್ಯೋ ನ್ಯಾಯವಿಸ್ತರಃ ।
ದಶ ಚಾಷ್ಟೌ ಚ ವಿಜ್ಞೇಯಾಃ ಪೌರಾಣಾ ಯಜ್ಞಸಂಹಿತಾಃ ॥೩೭॥

ಎಂಟು ತರ್ಕವಿದ್ಯೆಗಳನ್ನು ರಚಿಸಿದನು. ಅದಕ್ಕೆ ನ್ಯಾಯವಿಸ್ತರವೆಂದು ಹೆಸರು. ಯಜ್ಞಕ್ಕೆ ಸಂಬಂಧಿಸಿದ ಪುರಾಣಸಂಹಿತೆಗಳು ಹದಿನೆಂಟು ಎಂದು ತಿಳಿಯಬೇಕು.

ಪುರಾಣಾಶ್ಚ ಪ್ರಣೀತಾಶ್ಚ ತಾವದೇವೇಹ ಸಂಹಿತಾಃ ।
ಧರ್ಮಶಾಸ್ತ್ರಾಣಿ ತದ್ವಚ್ಚ ಏಕಾರ್ಥಾನಿ ಚ ನಾನ್ಯಥಾ ॥೩೮॥

ಅಷ್ಟೇ ಪುರಾಣಸಂಹಿತೆಗಳನ್ನು ರಚಿಸಿದನು. ಅದರಂತೆಯೇ ಸಮಾನಾರ್ಥಕ-ವಾದ ಪರಸ್ಪರವಿರೋಧವಿಲ್ಲದ ಧರ್ಮಶಾಸ್ತ್ರಗಳನ್ನು ರಚಿಸಿದನು.

ಏಕಾರ್ಥಾನಿ ಪುರಾಣಾನಿ ವೇದಾಶ್ಚೈಕಾರ್ಥಸಂಹಿತಾಃ ।
ನಾನಾರ್ಥಾನಿ ಚ ಸರ್ವಾಣಿ ತತಃ ಶಾಸ್ತ್ರಾಣಿ ಶಂಕರಃ ॥೩೯॥

ಪ್ರೋವಾಚ ಭಗವಾನ್ ದೇವಃ ಕಾಲಜ್ಞಾನಾನಿ ಯಾನಿ ಚ ।
ಚತುಃಷಷ್ಟಿಪ್ರಮಾಣಾನಿ ಆಯುರ್ವೇದಂ ಚ ಸೋತ್ತರಮ್ ॥೪೦॥

ಪುರಾಣಗಳೆಲ್ಲವೂ ಒಂದೇ ಅರ್ಥವನ್ನು ಹೇಳುತ್ತವೆ. ವೇದಗಳಿಗೂ ಒಂದೇ ಅರ್ಥದಲ್ಲಿ ತಾತ್ಪರ್ಯವಿದೆ. ಉಳಿದ ಶಾಸ್ತ್ರಗಳು ಭಿನ್ನಭಿನ್ನಾರ್ಥಗಳನ್ನು ಹೊಂದಿವೆ.

ಪೂಜ್ಯನಾದ ಶಂಕರದೇವನು ಅವುಗಳನ್ನು ಮತ್ತು ಕಾಲಜ್ಞಾನವನ್ನು, ಅರವತ್ತನಾಲ್ಕು ಪ್ರಮಾಣಗಳನ್ನು ಮತ್ತು ಶ್ರೇಷ್ಠವಾದ ಆಯುರ್ವೇದವನ್ನು ರಚಿಸಿದನು.

ಆಷ್ಟಾದಶವಿಕಲ್ಪಾಂ ತಾಂ ದಂಡನೀತಿಂ ಚ ಶಾಶ್ವತೀಮ್ ।
ಗಾಂಧರ್ವಮಿತಿಹಾಸಂ ಚ ನಾನಾವಿಸ್ತರಮುಕ್ತವಾನ್ ॥೪೧॥

ಹದಿನೆಂಟು ಪ್ರಭೇದಗಳಿಂದ ಕೂಡಿದ ಶಾಶ್ವತವಾದ ದಂಡನೀತಿಶಾಸ್ತ್ರವನ್ನು, ಗಾಂಧರ್ವಶಾಸ್ತ್ರವನ್ನು ಮತ್ತು ಇತಿಹಾಸವನ್ನು ಬಹಳವಿಸ್ತಾರವಾಗಿ ಹೇಳಿದನು.

ಇತ್ಯೇತಾಃ ಶಂಕರಪ್ರೋಕ್ತಾ ವಿದ್ಯಾಃ ಶಬ್ದಾರ್ಥಸಂಹಿತಾಃ ।
ಪುನರ್ಭೇದಸಹಸ್ರಂ ತು ತಾಸಾಮೇವ ತು ವಿಸ್ತರಃ ॥೪೨॥

ಋಷಿಭಿರ್ದೇವಗಂಧರ್ವೈಃ ಸವಿಕಲ್ಪಃ ಸವಿಸ್ತರಃ ।
ಶಶ್ವದಭ್ಯಸ್ಯತೇ ಲೋಕೇ ವೇದ ಏವ ತು ಸರ್ವಶಃ ॥೪೩॥

ಇವುಗಳು ಶಂಕರನಿಂದ ಹೇಳಲ್ಪಟ್ಟ ಶಬ್ದಾರ್ಥಗಳನ್ನೊಳಗೊಂಡ ವಿದ್ಯೆಗಳು. ಪುನಃ ಋಷಿಗಳು ಮತ್ತು ದೇವಗಂಧರ್ವರು ಅವುಗಳಲ್ಲಿ ಸಹಸ್ರಾರು ಪ್ರಭೇದಗಳನ್ನು ಮಾಡಿದರು. ಆ ಎಲ್ಲ ಪ್ರಭೇದಗಳು ವಿಸ್ತಾರವಾಗಿ ಲೋಕದಲ್ಲಿ ಅಧ್ಯಯನ ಮಾಡಲ್ಪಡುತ್ತವೆ. ಅವೆಲ್ಲವೂ ವೇದಗಳೇ.

ವೇದಾಶ್ಚತಸ್ರಃ ಸಂಕ್ಷಿಪ್ತಾ ವೇದವಾದಾಶ್ಚ ತೇ ಸ್ಮೃತಾಃ ।
ಏತಾಸಾಂ ಪಾರಗೋ ಯಶ್ಚ ಸ ಚೋಕ್ತೋ ವೇದಪಾರಗಃ ॥೪೪॥

ಅವು ಸಂಕ್ಷಿಪ್ತವಾದ ನಾಲ್ಕು ವೇದಗಳು. ಅವುಗಳಿಗೆ ವೇದವಾದಗಳೆಂದು ಹೆಸರು. ಇವುಗಳನ್ನೆಲ್ಲಾ ತಿಳಿದವನು ವೇದಪಾರಗನೆನಿಸುತ್ತಾನೆ.

ವೇದಾನಾಂ ಪಾರಗೋ ರುದ್ರೋ ವಿಷ್ಣುರಿಂದ್ರೋ ಬೃಹಸ್ಪತಿಃ ।
ಶಕ್ರಃ ಸ್ವಾಯಂಭುವಶ್ಚೈವ ಮನುಃ ಪರಮಧರ್ಮವಿತ್ ॥೪೫॥

ಬ್ರಹ್ಮಾ ಚ ಪರಮೋ ದೇವಃ ಸದಾ ಸರ್ವೈಃ ಸುರಾಸುರೈಃ ।
ಸರ್ವಸ್ಯಾನುಗ್ರಹಾಚ್ಚೈವ ವ್ಯಾಸೋ ವೈ ವೇದಪಾರಗಃ ॥೪೬॥

ವೇದಪಾರಂಗತರಾದವರೆಂದರೆ ರುದ್ರ, ವಿಷ್ಣು, ಇಂದ್ರ, ಬೃಹಸ್ಪತಿ, ಶಕ್ರ, ಪರಮಧರ್ಮಜ್ಞನಾದ ಸ್ವಾಯಂಭುವಮನು, ಸಕಲಸುರಾಸುರರಿಂದ ಕೂಡದ ಶ್ರೇಷ್ಠರಾದ ಬ್ರಹ್ಮದೇವರು, ಸರ್ವಾನುಗ್ರಹ ಮಾಡುವುದರಿಂದ ವೇದವ್ಯಾಸರು - ಇವರು ವೇದಪಾರಗರು.

ಭೀಷ್ಮಃ

ಅಹಂ ಶಾಂತನವೋ ಭೀಷ್ಮಃ ಪ್ರಸಾದಾನ್ಮಾಧವಸ್ಯ ಚ।
ಶಂಕರಸ್ಯ ಪ್ರಸಾದಾಚ್ಚ ಬ್ರಹ್ಮಣಶ್ಚ ಕುರೂದ್ವಹ।
ವೇದಪಾರಗ ಇತ್ಯುಕ್ತೋ ಯಾಜ್ಞವಲ್ಕ್ಯಶ್ಚ ಸರ್ವಶಃ ॥೪೭॥

ಭೀಷ್ಮರು – ಮಾಧವನ ಅನುಗ್ರಹದಿಂದ, ಶಂಕರನ ಮತ್ತು ಬ್ರಹ್ಮದೇವರ ಅನುಗ್ರಹದಿಂದ ಎಲೈ ಕುರೂದ್ವಹನೇ! ಶಂತನುವಿನ ಪುತ್ರನಾದ ಭೀಷ್ಮನಾದ ನಾನು ವೇದಪಾರಗನೆಂದು ಹೇಳಲ್ಪಡುತ್ತೇನೆ. ಯಾಜ್ಞವಲ್ಕ್ಯರೂ ವೇದಪಾರಗರೆಂದು ಹೇಳಲ್ಪಡುತ್ತಾರೆ.

ಕಲ್ಪೇ ಕಲ್ಪೇ ಮಹಾಭಾಗೈರ್ಋಷಿಭಿಸ್ತತ್ತ್ವದರ್ಶಿಭಿಃ।
ಋಷಿಪುತ್ರೈರ್ಋಷಿಗಣೈರ್ಭಿದ್ಯಂತೇ ಮಿಶ್ರಕೈರಪಿ ॥೪೮॥

ಪ್ರತಿಯೊಂದು ಕಲ್ಪದಲ್ಲಿಯೂ ಮಹಾನುಭಾವರೂ ತತ್ವದರ್ಶಿಗಳೂ ಆದ ಋಷಿಗಳಿಂದಲೂ ಋಷಿಪುತ್ರರಿಂದಲೂ ಋಷಿಸಮೂಹಗಳಿಂದಲೂ ಈ ವೇದ-ಗಳೂ ಒಬ್ಬೊಬ್ಬರಿಂದ ಮತ್ತು ಸಮೂಹದಿಂದ ಶಾಖೆಗಳಾಗಿ ಒಡೆಯುತ್ತವೆ.

ಶಿವೇನ ಬ್ರಹ್ಮಣಾ ಚೈವ ವಿಷ್ಣುನಾ ಚ ವಿಕಲ್ಪಿತಾಃ।
ಆದಿಕಲ್ಪೇ ಪುನಶ್ಚೈವ ಭಿದ್ಯಂತೇ ಸಾಧುಭಿಃ ಪುನಃ ॥೪೯॥

ಆದಿಕಲ್ಪದಲ್ಲಿ ಶಿವನಿಂದಲೂ, ಬ್ರಹ್ಮನಿಂದಲೂ, ವಿಷ್ಣುವಿನಿಂದಲೂ ಕವಲು-ಗಳಾಗಿ ಒಡೆದ ಈ ವೇದಗಳು ಪುನಃ ಸಜ್ಜನರಿಂದ ಕವಲುಗಳಾಗಿ ಒಡೆಯಲ್ಪಡುತ್ತವೆ.

ಇದಾನೀಮಪಿ ವಿದ್ವದ್ಭಿರ್ಭಿದ್ಯಂತೇ ಚ ವಿಕಲ್ಪಕೈಃ।
ಪೂರ್ವಜನ್ಮಾನುಸಾರೇಣ ಬಹುಧೇಯಂ ಸರಸ್ವತೀ ॥೫೦॥

ಈಗಲೂ ಸಹ ವಿದ್ವಾಂಸರು ಅನೇಕಶಾಖೆಗಳಾಗಿ ಒಡೆಯುತ್ತಾರೆ. ಮೊದಲಿನ ತನ್ನ ಜನ್ಮಕ್ಕೆ ಅನುಸಾರವಾಗಿ ಈ ವೇದವಾಙ್ಮಯವು ಬಹುಪ್ರಕಾರವಾಗಿ ಹಬ್ಬಿದೆ.

ತತಃ ಸ ಭಗವಾನ್ ಧ್ಯಾತ್ವಾ ತದಾ ಶೂಲವರಾಯುಧಃ।
ತಸ್ಯ ತಸ್ಯ ನಿಕಾಯಸ್ಯ ಚಕಾರೈಕೈಕಮೀಶ್ವರಮ್ ॥೫೧॥

ಅನಂತರ ಶೂಲವರಾಯುಧನಾದ ಭಗವಂತನಾದ ವಿಷ್ಣುವು ಆಯಾ ಗುಂಪುಗಳಿಗೆ ಒಬ್ಬೊಬ್ಬ ಅಧಿಪತಿಯನ್ನಾಗಿ ಮಾಡಿದನು.

ಇಲ್ಲಿ ಶೂಲವರಾಯುಧನೆಂದರೆ ಶೂಲಕ್ಕಿಂತಲೂ ಶ್ರೇಷ್ಠವಾದ ಚಕ್ರಾಯುಧ ಎಂದರ್ಥ. ಶೂಲವರಾಯುಧನಾದವನು ಶಿವಾಂತರ್ಯಾಮಿಯಾದ ವಿಷ್ಣುವೇ ಎಂದು ತಿಳಿಯಬೇಕು ಇಲ್ಲದಿದ್ದರೆ ಇದೇ ಅಧ್ಯಾಯದಲ್ಲಿ ಉಪಕ್ರಮದಿಂದ ಇರುವ 'ತತಃ ಪಿತಾಮಹೋ ವಿಷ್ಣುಂ' ಎಂಬ ಇದೇ ಅಧ್ಯಾಯದ ೨೨ನೆಯ ಶ್ಲೋಕದಿಂದಲೂ 'ಸ್ವಯಂ ವಿಷ್ಣುಃ ಸದಾ ಕ್ಲೃಪ್ತಃ' ಎಂಬ ೨೩ನೆಯ ಶ್ಲೋಕದಿಂದಲೂ ವಿರೋಧವುಂಟಾಗುತ್ತದೆ – ಲಕ್ಷಾಲಂಕಾರ.

ದೇವಾನಾಮೀಶ್ವರಂ ಚಕ್ರೇ ದೇವಂ ದಶಶತೇಕ್ಷಣಮ್।
ಯಮಂ ವೈವಸ್ವತಂ ಚಾಪಿ ಪಿತೄಣಾಮಕರೋತ್ ಪತಿಮ್ ॥೫೨॥

ದೇವತೆಗಳಿಗೆ ಸಹಸ್ರಾಕ್ಷನಾದ ಇಂದ್ರನನ್ನು ಒಡೆಯನನ್ನಾಗಿ ಮಾಡಿದನು. ಪಿತೃಗಳಿಗೆ ಸೂರ್ಯಪುತ್ರನಾದ ಯಮನನ್ನು ಪತಿಯನ್ನಾಗಿ ಮಾಡಿನು.

ಧನಾನಾಂ ರಕ್ಷಸಾಂ ಚಾಪಿ ಕುಬೇರಮಪಿ ಚೇಶ್ವರಮ್।
ಪರ್ವತಾನಾಂ ಪತಿಂ ಮೇರುಂ ಸರಿತಾಂ ಚ ಮಹೋದಧಿಮ್ ॥೫೩॥

ಕೋಶಗಳಿಗೆ ಮತ್ತು ರಾಕ್ಷಸರಿಗೆ ಕುಬೇರನನ್ನೂ, ಪರ್ವತಗಳಿಗೆ ಮೇರುವನ್ನೂ, ಜಲಾಶಯಗಳಿಗೆ ಸಮುದ್ರವನ್ನೂ ಅಧಿಪತಿಯನ್ನಾಗಿ ಮಾಡಿದನು.

ಅಪಾಂ ರಾಜ್ಯೇ ಸುರಾಣಾಂ ಚ ವಿದಧೇ ವರುಣಂ ಪ್ರಭುಮ್ ।
ಮೃತ್ಯುಂ ಪ್ರಾಣೇಶ್ವರಮಥೋ ತೇಜಸಾಂ ಚ ಹುತಾಶನಮ್ ॥೫೪॥

ಜಲಸಾಮ್ರಾಜ್ಯದಲ್ಲಿ ಮತ್ತು ದೇವತೆಗಳಿಗೆ ವರುಣನನ್ನೂ, ಪ್ರಾಣಗಳಿಗೆ ಮೃತ್ಯುವನ್ನೂ, ತೇಜಸ್ಸುಗಳಿಗೆ ಅಗ್ನಿಯನ್ನೂ ಪ್ರಭುವನ್ನಾಗಿ ಮಾಡಿದನು.

ರುದ್ರಾಣಾಮಪಿ ಚೇಶಾನಂ ಗೋಪ್ತಾರಂ ವಿದಧೇ ಪ್ರಭುಃ ।
ಮಹಾತ್ಮಾನಂ ಮಹಾದೇವಂ ವಿಶಾಲಾಕ್ಷಂ ಸನಾತನಮ್ ॥೫೫॥

ರುದ್ರರಿಗೆ ಮಹಾತ್ಮನೂ, ವಿಶಾಲಾಕ್ಷನೂ, ಸನಾತನನೂ, ಮಹಾದೇವನೂ ಆದ ಈಶ್ವರನನ್ನು ಒಡೆಯನನ್ನಾಗಿ ಮಾಡಿದನು.

ವಸಿಷ್ಠಮೀಶಂ ವಿಪ್ರಾಣಾಂ ವಸೂನಾಂ ಜಾತವೇದಸಮ್ ।
ತೇಜಸಾಂ ಭಾಸ್ಕರಂ ಚಕ್ರೇ ನಕ್ಷತ್ರಾಣಾಂ ನಿಶಾಕರಮ್ ॥೫೬॥

ವಿಪ್ರರಿಗೆ ವಸಿಷ್ಠರನ್ನೂ, ವಸುಗಳಿಗೆ ಅಗ್ನಿಯನ್ನೂ, ತೇಜಸ್ಸುಗಳಿಗೆ ಸೂರ್ಯನನ್ನೂ, ನಕ್ಷತ್ರಗಳಿಗೆ ಚಂದ್ರನನ್ನೂ ಅಧಿಪತಿಯನ್ನಾಗಿ ಮಾಡಿದನು.

ವೀರುಧಾಮಂಶುಮಂತಂ ಚ ಭೂತಾನಾಂ ಚ ಪ್ರಭುಂ ವರಮ್ ।
ಕುಮಾರಂ ದ್ವಾದಶಭುಜಂ ಸ್ಕಂದಂ ರಾಜಾನಮಾದಿಶತ್ ॥೫೭॥

ವೃಕ್ಷಗಳಿಗೆ ಮತ್ತು ಭೂತಗಳಿಗೆ ಕಿರಣಸಹಿತನಾದ ಚಂದ್ರನನ್ನು ಅಧಿಪತಿಯನ್ನಾಗಿ ಮಾಡಿದನು. ದ್ವಾದಶಭುಜವುಳ್ಳ ಸನತ್ಕುಮಾರನಾದ ಕುಮಾರನನ್ನು ರಾಜನನ್ನಾಗಿ (ಸೇನಾಪತಿಯನ್ನಾಗಿ) ಮಾಡಿದನು.

ಕಾಲಂ ಸರ್ವೇಶಮಕರೋತ್ ಸಂಹಾರವಿನಯಾತ್ಮಕಮ್ ।
ಮೃತ್ಯೋಶ್ಚತುರ್ವಿಭಾಗಸ್ಯ ದುಃಖಸ್ಯ ಚ ಸುಖಸ್ಯ ಚ ॥೫೮॥

ಸಂಹಾರನಿಯಾಮಕವಾದ ಕಾಲವನ್ನು ಸರ್ವಪ್ರಭುವನ್ನಾಗಿ ಮಾಡಿದನು. ನಾಲ್ಕು ವಿಧವಾದ ಮೃತ್ಯುವಿಗೂ, ಸುಖದುಃಖಗಳಿಗೂ ಕಾಲವನ್ನೇ ಸರ್ವೇಶನನ್ನಾಗಿ ಮಾಡಿದನು.

ಈಶ್ವರೋ ದೇವದೇವಸ್ತು ರಾಜರಾಜೋ ಧನಾಧಿಪಃ।
ಸರ್ವೇಷಾಮೇವ ರುದ್ರಾಣಾಂ ಶೂಲಪಾಣೇರಿತಿ ಶ್ರುತಿಃ ॥೫೯॥

ದೇವದೇವನೂ ರಾಜರಾಜನೂ ಆದ ಕುಬೇರನು ಸುಖಕ್ಕೂ ಈಶ್ವರನಾದವನು ಎಲ್ಲ ರುದ್ರರಿಗೆ ಶೂಲಪಾಣಿಯು ಒಡೆಯನಾದವನು ಎಂದು ಕೇಳಿದ್ದೇವೆ.

ತಮೇನಂ ಬ್ರಹ್ಮಣಃ ಪುತ್ರಮನುಜಾತಂ ಕುಪ್ಪಂ ದದೌ।
ಪ್ರಜಾನಾಮಧಿಪಂ ಶ್ರೇಷ್ಠಂ ಸರ್ವಧರ್ಮಭೃತಾಮಪಿ ॥೬೦॥

ಈ ದಂಡನೀತಿಯನ್ನು ಬ್ರಹ್ಮದೇವರ ಕಿರಿಯ ಪುತ್ರನೂ ಪ್ರಜಾಪತಿಯೂ, ಧರ್ಮಿಷ್ಠನೂ ಆದ ಕುಪ್ಪನಿಗೆ ಕೊಡಬೇಕೆಂದು ಉದ್ದೇಶಿಸಿ ಶಂಕರನಿಗೆ ಕೊಟ್ಟನು. (ಲಕ್ಷಾಲಂಕಾರ)

ಮಹಾದೇವಸ್ತತಸ್ತಸ್ಮಿನ್ ವೃತ್ತೇ ಯಜ್ಞೇ ಯಥಾವಿಧಿ।
ದಂಡಂ ಧರ್ಮಸ್ಯ ಗೋಪ್ತಾರಂ ವಿಷ್ಣವೇ ಸತ್ಕೃತಂ ದದೌ ॥೬೧॥

ಆ ಯಜ್ಞವು ವಿಧಿವತ್ತಾಗಿ ಮುಗಿಯುತ್ತಿರಲು ಮಹಾದೇವನು ಧರ್ಮರಕ್ಷಕವಾದ ಆ ದಂಡವನ್ನು ಪೂಜಿಸಿ ವಿಷ್ಣುವಿಗೆ ಕೊಟ್ಟನು.

ಈಶ್ವರಶ್ಚೇತನಃ ಕರ್ತಾ ಪುರುಷಃ ಕಾರಣಂ ಶಿವಃ।
ವಿಷ್ಣುರ್ಬ್ರಹ್ಮಾ ಶಶೀ ಸೂರ್ಯಃ ಶಕ್ರೋ ದೇವಾಶ್ಚ ಸಾನ್ವಯಾಃ ॥೬೨॥

ಜ್ಞಾನಾತ್ಮಕಃ ಶಿವೋ ಶೇಷ ಏತೇಷಾಮಪಿ ಕಾರಣಮ್।
ಸೃಜತೇ ಗ್ರಸತೇ ಚೈವ ತಮೋಭೂತಮಿದಂ ಯಥಾ।
ಅಪ್ರಜ್ಞಾತಂ ಜಗತ್ ಸರ್ವಂ ತದಾ ಹ್ಯೇಕೋ ಮಹೇಶ್ವರಃ ॥೬೩॥

ಈಶ್ವರ, ಚೇತನ, ಕರ್ತೃಗಳು, ಕಾರಣ, ಶಿವ, ವಿಷ್ಣು, ಬ್ರಹ್ಮಾ, ಚಂದ್ರ, ಸೂರ್ಯ, ಇಂದ್ರ, ದೇವತೆಗಳು, ಅವರ ಸಂತತಿ, ಜ್ಞಾನಾತ್ಮಕರಾದ ಶಿವ,ಶೇಷ, ಇವರೆಲ್ಲರಿಗೂ ಕಾರಣನಾದ, ಈ ಜಗತ್ತು ಕತ್ತಲಿನಿಂದ ಗ್ರಸ್ತವಾಗಿ ಕಾಣದಿದ್ದಾಗ

ಯಾವ ಒಬ್ಬನೇ ಮಹೇಶ್ವರನಾದವನು ಸೃಷ್ಟಿಮಾಡಿ ಕೊನೆಯಲ್ಲಿ ಸಂಹಾರ ಮಾಡುತ್ತಾನೆಯೋ, ಅಂತಹ ವಿಷ್ಣುವಿಗೆ ಶಂಕರನು ನೀಡಿದನು.

ವಿಷ್ಣುರಂಗಿರಸೇ ಪ್ರಾದಾದಂಗಿರಾ ಮುನಿಸತ್ತಮಃ।
ಪ್ರಾದಾದಿಂದ್ರಮರೀಚಿಭ್ಯಾಂ ಮರೀಚಿರ್ಭೃಗವೇ ದದೌ ॥೬೪॥

ವಿಷ್ಣುವು ಅದನ್ನು ಅಂಗಿರಸರಿಗೆ ಕೊಟ್ಟನು. ಮುನಿಶ್ರೇಷ್ಠರಾದ ಅಂಗಿರಸರು ಇಂದ್ರ , ಮರೀಚಿಗಳಿಗೆ ಕೊಟ್ಟರು. ಮರೀಚಿಗಳು ಭೃಗುವಿಗೆ ಕೊಟ್ಟರು.

ಭೃಗುರ್ದದಾವೃಷಿಭ್ಯಸ್ತು ತಂ ದಂಡಂ ಧರ್ಮಸಂಹಿತಮ್ ।
ಋಷಯೋ ಲೋಕಪಾಲೇಭ್ಯೋ ಲೋಕಪಾಲಾಃ ಕ್ಷುಪಾಯ ಚ ॥೬೫॥

ಭೃಗುಗಳು ಋಷಿಗಳಿಗೆ ಧರ್ಮಸಂಹಿತಾರೂಪವಾದ ಆ ದಂಡವನ್ನು ಕೊಟ್ಟರು. ಋಷಿಗಳು ಲೋಕಪಾಲಕರಿಗೂ ಲೋಕಪಾಲರು ಕ್ಷುಪನಿಗೂ ಕೊಟ್ಟರು. (ಹೀಗೆ ಅದು ವಿಷ್ಣುವಿನಿಂದ ಕ್ಷುಪನಿಗೆ ತಲುಪಿತು)

ಕ್ಷುಪಸ್ತು ಮನವೇ ಪ್ರಾದಾದಾದಿತ್ಯತನಯಾಯ ಚ।
ಪುತ್ರೇಭ್ಯಃ ಶ್ರಾದ್ಧದೇವಸ್ತು ಸೂಕ್ಷ್ಮಧರ್ಮಾರ್ಥಕಾರಣಾತ್ ।
ತಂ ದದೌ ಸೂರ್ಯಪುತ್ರಸ್ತು ಮನುರ್ವೈ ರಕ್ಷಣಾತ್ಮಕಮ್ ॥೬೬॥

ಕ್ಷುಪನು ಸೂರ್ಯಪುತ್ರನಾದ ಶ್ರಾದ್ಧದೇವ ಮನುವಿಗೆ ಕೊಟ್ಟನು. ಶ್ರಾದ್ಧದೇವನು ಸೂಕ್ಷ್ಮವಾದ ಧರ್ಮಾರ್ಥಗಳನ್ನು ತಿಳಿಯುವ ಉದ್ದೇಶದಿಂದ ರಕ್ಷಣಾರೂಪವಾದ ಆ ಶಾಸ್ತ್ರವನ್ನು ತನ್ನ ಪುತ್ರರಿಗೆ ಕೊಟ್ಟನು.

ವಿಭಜ್ಯ ದಂಡಃ ಕರ್ತವ್ಯೋ ಧರ್ಮೇಣ ನ ಯದೃಚ್ಛಯಾ।
ದುಷ್ಟಾನಾಂ ನಿಗ್ರಹೋ ದಂಡೋ ಹಿರಣ್ಯಂ ಬಾಹ್ಯತಃ ಕ್ರಿಯಾ ॥೬೭॥

ವಿಭಾಗ ಮಾಡಿ ಧರ್ಮದಿಂದ ದಂಡವನ್ನು ಪ್ರಯೋಗಿಸಬೇಕು. ಮನಸ್ಸಿಗೆ ಬಂದಂತೆ ಪ್ರಯೋಗಿಸಬಾರದು. ಹಿರಣ್ಯದಾನ, ವಿತ್ತದ ಆದಾನ ಇವು ಬಾಹ್ಯ-

ಕ್ರಿಯೆಗಳು. ದುಷ್ಟರಿಗೆ ಬಲದಿಂದ ಅವರನ್ನು ಬಂಧಿಸಬೇಕು. (ಕಾರಾಗೃಹದಲ್ಲಿ ಇಡಬೇಕು)

ವ್ಯಂಗತ್ವಂ ಚ ಶರೀರಸ್ಯ ವಧೋ ವಾ ನಾಲ್ಪಕಾರಣಾತ್ ।
ಶರೀರಪೀಡಾಸ್ತಾಸ್ತಾಸ್ತು ದೇಹತ್ಯಾಗೋ ವಿವಾಸನಮ್ ॥೬೮॥

ಅಲ್ಪಾಪರಾಧದ ಕಾರಣದಿಂದ ಅಂಗಹೀನತೆಯನ್ನಾಗಲೀ ವಧೆಯನ್ನಾಗಲೀ ಮಾಡಬಾರದು. ಆದನ್ನು ಬಿಟ್ಟು ಬೇರೆ ಬೇರೆ ಶರೀರಪೀಡೆಗಳನ್ನು ಮಾಡಬಹುದು. ಮಹಾಪರಾಧಗಳನ್ನು ಮಾಡಿದಾಗ ವಧೆಯನ್ನಾಗಲೀ, ದೇಶದಿಂದ ಗಡೀಪಾರನ್ನಾಗಲೀ ಮಾಡಬಹುದು.

ಆನುಪೂರ್ವ್ಯಾ ಚ ದಂಡೋಽಸೌ ಪ್ರಜಾ ಜಾಗರ್ತಿ ಪಾಲಯನ್ ।
ಇಂದ್ರೋ ಜಾಗರ್ತಿ ಭಗವಾನಿಂದ್ರಾದಗ್ನಿರ್ವಿಭಾವಸುಃ ॥೬೯॥

ಈ ದಂಡವು ಅನುಕ್ರಮವಾಗಿ ಪ್ರಜೆಗಳನ್ನು ಪಾಲಿಸುತ್ತಾ ಎಚ್ಚರದಿಂದಿದೆ. ಪೂಜ್ಯನಾದ ಇಂದ್ರನು ಜಾಗರೂಕನಾಗಿದ್ದಾನೆ. ಇಂದ್ರನಿಂದ ಅಗ್ನಿಯು ಜಾಗರೂಕನಾಗಿದ್ದಾನೆ.

ಅಗ್ನೇರ್ಜಾಗರ್ತಿ ವರುಣೋ ವರುಣಾಚ್ಚ ಪ್ರಜಾಪತಿಃ ।
ಪ್ರಜಾಪತೇಸ್ತತೋ ಧರ್ಮೋ ಜಾಗರ್ತಿ ವಿನಯಾತ್ಮಕಃ ॥೭೦॥

ಅಗ್ನಿಯಿಂದ ವರುಣನು ಜಾಗರೂಕನಾಗಿದ್ದಾನೆ. ವರುಣನಿಂದ ಪ್ರಜಾಪತಿಯು ಜಾಗರೂಕನಾಗಿದ್ದಾನೆ. ಪ್ರಜಾಪತಿಯಿಂದ ಎಲ್ಲರನ್ನೂ ದಮನಗೊಳಿಸುವ ಯಮನು ಜಾಗರೂಕನಾಗಿದ್ದಾನೆ.

ಧರ್ಮಾಚ್ಚ ಬ್ರಹ್ಮಣಃ ಪುತ್ರೋ ವ್ಯವಸಾಯಃ ಸನಾತನಃ ।
ವ್ಯವಸಾಯಾತ್ ತತಸ್ತೇಜೋ ಜಾಗರ್ತಿ ಪರಿಪಾಲಯನ್ ॥೭೧॥

ಧರ್ಮದಿಂದ ಬ್ರಹ್ಮಪುತ್ರನಾದ ಸನಾತನವಾದ ಉದ್ಯಮ(ವ್ಯವಸಾಯ)ವೂ, ವ್ಯವಸಾಯದಿಂದ ತೇಜಸ್ಸೂ ಜಗತ್ತನ್ನು ಪಾಲಿಸುತ್ತಾ ಜಾಗರೂಕವಾಗಿದೆ.

ಔಷಧ್ಯಸ್ತೇಜಸಸ್ತಸ್ಮಾದೋಷಧಿಭ್ಯಶ್ಚ ಪರ್ವತಾಃ।
ಪರ್ವತೇಭ್ಯಶ್ಚ ಜಾಗರ್ತಿ ರಸೋ ರಸಗುಣಾತ್ ತಥಾ ॥೭೨॥

ತೇಜಸ್ಸಿನಿಂದ ಓಷಧಿಗಳೂ, ಓಷಧಿಗಳಿಂದ ಪರ್ವತಗಳೂ, ಪರ್ವತಗಳಿಂದ ರಸಗಳೂ ರಸಗುಣಗಳೂ ಜಾಗೃತವಾಗಿವೆ.

ಜಾಗರ್ತಿ ನಿರ್ಋತಿರ್ದೇವೀ ಜ್ಯೋತೀಂಷಿ ನಿವೃತೇರಪಿ।
ವೇದಾಃ ಪ್ರತಿಷ್ಠಾ ಜ್ಯೋತಿರ್ಭ್ಯಸ್ತತೋ ಹಯಶಿರಾಃ ಪ್ರಭುಃ ॥೭೩॥

ರಸಗುಣಗಳಿಂದ ನಿರ್ಋತಿದೇವಿಯು ಜಾಗರೂಕಳಾಗಿದ್ದಾಳೆ. ನಿರ್ಋತಿಯಿಂದ ಜ್ಯೋತಿಸ್ಸುಗಳು ಜಾಗರೂಕವಾಗಿವೆ. ಜ್ಯೋತಿಸ್ಸುಗಳಿಂದ ಜಗತ್ತಿನ ಪ್ರತಿಷ್ಠೆಗೆ ಕಾರಣವಾದ ವೇದಗಳೂ ಮತ್ತು ಹಯಗ್ರೀವಪ್ರಭುವೂ ಜಾಗೃತವಾಗಿದ್ದಾರೆ.

ಬ್ರಹ್ಮಾ ಪಿತಾಮಹಸ್ತಸ್ಮಾಜ್ಜಾಗರ್ತಿ ಪ್ರಭುರವ್ಯಯಃ।
ಪಿತಾಮಹಾನ್ಮಹಾದೇವೋ ಜಾಗರ್ತಿ ಭಗವಾನ್ ಶಿವಃ ॥೭೪॥

ಹಯಗ್ರೀವದೇವರಿಂದ ಪ್ರಭುವೂಅವ್ಯಯರೂ ಆದ ಬ್ರಹ್ಮದೇವರು ಜಾಗೃತರಾಗಿದ್ದಾರೆ. ಬ್ರಹ್ಮದೇವರಿಂದ ಮಹಾದೇವನೂ ಪೂಜ್ಯನೂ ಆದ ಶಿವನು ಜಾಗರೂಕನಾಗಿದ್ದಾನೆ.

ವಿಶ್ವೇದೇವಾಃ ಶಿವಾಚ್ಚಾಪಿ ವಿಶ್ವೇಭ್ಯಶ್ಚ ತಥರ್ಷಯಃ।
ಋಷಿಭ್ಯೋ ಭಗವಾನ್ ಸೋಮಃ ಸೋಮಾದ್ ದೇವಾಃ ಸನಾತನಾಃ ॥೭೫॥

ಶಿವನಿಂದ ವಿಶ್ವೇದೇವತೆಗಳೂ, ವಿಶ್ವೇದೇವತೆಗಳಿಂದ ಋಷಿಗಳೂ, ಋಷಿಗಳಿಂದ ಪೂಜ್ಯನಾದ ಚಂದ್ರನೂ, ಚಂದ್ರನಿಂದ ವೇದಪ್ರತಿಪಾದ್ಯದೇವತೆಗಳೂ ಜಾಗರೂಕರಾಗಿದ್ದಾರೆ.

ದೇವೇಭ್ಯೋ ಬ್ರಾಹ್ಮಣಾ ಲೋಕೇ ಜಾಗ್ರತೀತ್ಯುಪಧಾರಯ।
ಬ್ರಾಹ್ಮಣೇಭ್ಯಶ್ಚ ರಾಜನ್ಯಾ ಲೋಕಾನ್ ರಕ್ಷಂತಿ ಧರ್ಮತಃ।
ಸ್ಥಾವರಂ ಜಂಗಮಂ ಚೈವ ಕ್ಷತ್ರಿಯೇಭ್ಯಃ ಸನಾತನಮ್ ॥೭೬॥

ಅಂತಹ ದೇವತೆಗಳಿಂದ ಈ ಲೋಕದಲ್ಲಿ ಬ್ರಾಹ್ಮಣರು ಜಾಗರೂಕರಾಗಿ-ದ್ದಾರೆಂದು ತಿಳಿಯುವವನಾಗು. ಬ್ರಾಹ್ಮಣರಿಂದ ಕ್ಷತ್ರಿಯರು (ಆ ದಂಡವನ್ನು ಪಡೆದು) ಲೋಕಗಳನ್ನು ಧರ್ಮದಿಂದ ರಕ್ಷಿಸುತ್ತಾರೆ. ಕ್ಷತ್ರಿಯರಿಂದ ಸನಾತನವಾದ ಸ್ಥಾವರಜಂಗಮರೂಪವಾದ ಪ್ರಜೆಗಳು ಜಾಗರೂಕರಾಗಿದ್ದಾರೆ.

ಪ್ರಜಾ ಜಾಗ್ರತಿ ಲೋಕೇಽಸ್ಮಿನ್ ದಂಡೋ ಜಾಗರ್ತಿ ತಾಸು ಚ।
ಸರ್ವಸಂಕ್ಷೇಪಕೋ ದಂಡಃ ಪಿತಾಮಹಸಮಃ ಪ್ರಭುಃ ॥೭೭॥

ಈ ಲೋಕದಲ್ಲಿ ಪ್ರಜೆಗಳು ಜಾಗರೂಕರಾಗಿದ್ದಾರೆ. ಆ ಪ್ರಜೆಗಳಲ್ಲಿ ದಂಡವು ಜಾಗರೂಕವಾಗಿದೆ. ಸರ್ವಸಂಹಾರಕವಾದ ದಂಡವು ಬ್ರಹ್ಮದೇವರಿಗೆ ಸಮವಾದ ಪ್ರಭುವಾಗಿದೆ.

ಜಾಗರ್ತಿ ಕಾಲಃ ಪೂರ್ವಂ ಚ ಮಧ್ಯೇ ಚಾಂತೇ ಚ ಭಾರತೇ।
ಈಶ್ವರಃ ಸರ್ವಲೋಕಸ್ಯ ಮಹಾದೇವಃ ಪ್ರಜಾಪತಿಃ ॥೭೮॥

ದೇವದೇವಃ ಶಿವಃ ಶರ್ವೋ ಜಾಗರ್ತಿ ಸತತಂ ಪ್ರಭುಃ।
ಕಪರ್ದೀ ಶಂಕರೋ ರುದ್ರೋ ಭವಃ ಸ್ಥಾಣುರುಮಾಪತಿಃ ॥೭೯॥

ಭಾರತವರ್ಷದಲ್ಲಿ ಆದಿಮಧ್ಯಾಂತಗಳಲ್ಲಿ ಕಾಲವು ಜಾಗರೂಕವಾಗಿದೆ. ದೇವದೇವನೂ, ಮಹಾದೇವನೂ, ಸರ್ವಲೋಕೇಶ್ವರನೂ, ಪ್ರಜಾಪತಿಯೂ, ಶಿವನೂ, ಶರ್ವನೂ, ಕಪರ್ದಿಯೂ, ಶಂಕರನೂ, ರುದ್ರನೂ, ಭವನೂ, ಸ್ಥಾಣುವೂ ಆದ ಉಮಾಪತಿಯು ಸತತವಾಗಿ ಜಾಗರೂಕನಾಗಿರುತ್ತಾನೆ.

ಇತ್ಯೇಷ ದಂಡೋ ವಿಖ್ಯಾತ ಆದೌ ಮಧ್ಯೇ ತಥಾವರೇ।
ಭೂಮಿಪಾಲೋ ಯಥಾನ್ಯಾಯಂ ವರ್ತೇತಾನೇನ ಧರ್ಮವಿತ್ ॥೮೦॥

ಈ ರೀತಿಯಲ್ಲಿ ದಂಡವು ಆದಿಮಧ್ಯಾಂತಗಳಲ್ಲಿ ವಿಖ್ಯಾತವಾಗಿದೆ. ಧರ್ಮ-ಜ್ಞಾನವುಳ್ಳ ಭೂಮಿಪಾಲನು ಈ ದಂಡವನ್ನು ನ್ಯಾಯಕ್ಕೆ ಅನುಗುಣವಾಗಿ ಪ್ರಯೋ-ಗಿಸಬೇಕು.

ಭೀಷ್ಮಃ

ಇತೀದಂ ವಸುಹೋಮಸ್ಯ ಶೃಣುಯಾದ್ ಯೋ ಮತಂ ನರಃ।
ಶ್ರುತ್ವಾ ಚ ಸಮ್ಯಗ್ ವರ್ತೇತ ಸ ಕಾಮಾನಾಪ್ನುಯಾನ್ನೃಪಃ ॥೮೧॥

ಭೀಷ್ಮರು - ಈ ವಸುಹೋಮನ ಅಭಿಪ್ರಾಯವನ್ನು ಯಾವ ಮನುಷ್ಯನಾಗಲೀ ರಾಜನಾಗಲೀ ಶ್ರವಣ ಮಾಡಿ ಅದರಂತೆ ನಡೆದುಕೊಳ್ಳುತ್ತಾನೆಯೋ ಅವನು ತನ್ನ ಕಾಮಗಳನ್ನು ಹೊಂದುತ್ತಾನೆ.

ಇತಿ ಮೇ ಸರ್ವಮಾಖ್ಯಾತಂ ಯೋ ದಂಡೋ ಮನುಜರ್ಷಭ।
ನಿಯಂತಾ ಸರ್ವಲೋಕಸ್ಯ ಧರ್ಮಾಕ್ರಾಂತಸ್ಯ ಭಾರತ ॥೮೨॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ತ್ರಯೋವಿಂಶತ್ಯಧಿಕಶತತಮೋऽಧ್ಯಾಯಃ ॥೧೨೩॥

ಎಲೈ ಮನುಜರ್ಷಭನೇ! ಭಾರತನೇ! ಈ ರೀತಿಯಲ್ಲಿ ನಿನಗೆ ಧರ್ಮಾಕ್ರಾಂತವಾದ ಸರ್ವಲೋಕವನ್ನು ನಿಯಂತ್ರಿಸುವ ದಂಡವನ್ನು ಹೇಳಿದ್ದೇನೆ.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೨೩ನೆಯ ಅಧ್ಯಾಯವು ಮುಗಿಯಿತು

—0—

೧೨೪. ನೂರಇಪ್ಪತ್ತನಾಲ್ಕನೆಯ ಅಧ್ಯಾಯ

ಕಾಮಂದ ಅರಿಷ್ಟಸಂವಾದ। ಧರ್ಮತ್ಯಾಗಿಗಳಿಗೆ ಪ್ರಾಯಶ್ಚಿತ್ತಕಥನ

ಯುಧಿಷ್ಠಿರಃ

ತಾತ ಧರ್ಮಾರ್ಥಕಾಮಾನಾಂ ಶ್ರೋತುಮಿಚ್ಛಾಮಿ ನಿಶ್ಚಯಮ್।
ಲೋಕಯಾತ್ರಾ ಹಿ ಕಾರ್ತ್ಸ್ನ್ಯೇನ ತ್ರಿಷ್ವೇತೇಷು ಪ್ರತಿಷ್ಠಿತಾ ॥೧॥

ಧರ್ಮಾರ್ಥಕಾಮಾಃ ಕಿಂಮೂಲಾಸ್ತ್ರಯಾಣಾಂ ಪ್ರಭವಶ್ಚ ಕಃ।
ಅನ್ಯೋನ್ಯಂ ಚಾನುಷಜ್ಜಂತೇ ವರ್ತಂತೇ ಚ ಪೃಥಕ್ ಪೃಥಕ್ ॥೨॥

ಯುಧಿಷ್ಠಿರ – ಪ್ರೀತಿಪಾತ್ರನೇ! ಧರ್ಮಾರ್ಥಕಾಮಗಳ ನಿರ್ಧಾರವನ್ನು ಕೇಳಲು ಬಯಸುತ್ತೇನೆ. ಲೋಕಯಾತ್ರೆ ಎಲ್ಲವೂ ಪೂರ್ಣವಾಗಿ ಈ ಮೂರರಲ್ಲಿಯೇ ನೆಲೆಸಿದೆ. ಧರ್ಮಾರ್ಥಕಾಮಗಳಿಗೆ ಮೂಲಕಾರಣವು ಯಾವುದು? ಅವುಗಳ ಉತ್ಪತ್ತಿ ಸ್ಥಾನವು ಯಾವುದು? ಅವುಗಳು ಪರಸ್ಪರ ಸಂಬದ್ಧವಾಗಿರುತ್ತವೆ. ಭಿನ್ನ ಭಿನ್ನವಾಗಿಯೂ ಇರುತ್ತವೆ.

ಭೀಷ್ಮಃ

ಯದಾ ತೇ ಸ್ಯುಃ ಸುಮನಸೋ ಲೋಕಸಂಸ್ಥಾರ್ಥನಿಶ್ಚಯೇ।
ಕಾಲಪ್ರಭವಸಂಸ್ಥಾಸು ಸಜ್ಜಂತೇ ಚ ತ್ರಯಸ್ತದಾ ॥೩॥

ಭೀಷ್ಮರು – ಲೋಕದಲ್ಲಿ ಜನರು ಶುದ್ಧಮನಸ್ಕರಾಗಿ, ಧರ್ಮಾರ್ಥಗಳನ್ನು ಸಂಪಾದಿಸಲು ಬಯಸಿದರೆ ಆಗ ಧರ್ಮಾರ್ಥಕಾಮಗಳು ಕಾಲದಿಂದ ಉತ್ಪತ್ತಿ ಮತ್ತು ವಿನಾಶಗಳನ್ನು ಹೊಂದುವ ಪ್ರಜೆಗಳಲ್ಲಿ ನೆಲೆಗೊಳ್ಳುತ್ತವೆ.

ಧರ್ಮಮೂಲಸ್ತು ದೇಹೋಽರ್ಥಃ ಕಾಮೋಽರ್ಥಫಲಮುಚ್ಯತೇ।
ಸಂಕಲ್ಪಮೂಲಾಸ್ತೇ ಸರ್ವೇ ಸಂಕಲ್ಪೋ ವಿಷಯಾತ್ಮಕಃ ॥೪॥

ದೇಹವೆಂಬ ವಸ್ತುವು ಹಿಂದೆ ಮಾಡಿದ ಧರ್ಮಮೂಲವಾದುದು. ಮುಂದೆ ಮಾಡುವ ಧರ್ಮಕ್ಕೆ ಕಾರಣವಾಗುತ್ತದೆ. ಅರ್ಥಶಬ್ದವಾಚ್ಯವಾದ ಫಲವು ಕಾಮಕ್ಕೆ ಮೂಲವಾದುದು. ಇವೆಲ್ಲವೂ ಸಂಕಲ್ಪವನ್ನು ಮೂಲವಾಗಿ ಹೊಂದಿರುವಂತಹವು. ಸಂಕಲ್ಪವು ವಿಷಯದಲ್ಲಿ ಹರಡಿದೆ.

ವಿಷಯಾಶ್ಚೈವ ಕಾರ್ತ್ಸ್ನ್ಯೇನ ಸರ್ವ ಆಹಾರಸಿದ್ಧಯೇ।
ಮೂಲಮೇತತ್ ತ್ರಿವರ್ಗಸ್ಯ ನಿವೃತ್ತಿರ್ಮೋಕ್ಷ ಉಚ್ಯತೇ ॥೫॥

ವಿಷಯಗಳೆಲ್ಲವೂ ಪೂರ್ಣವಾಗಿ ಭೋಗಾರ್ಥವಾಗಿಯೇ ಇವೆ. ಈ ವಿಷಯ-ಭೋಗವು ತ್ರಿವರ್ಗಕ್ಕೆ ಮೂಲವಾದುದು. ಇಂತಹ ವಿಷಯಗಳ ಭೋಗನಿವೃತ್ತಿ-ಯನ್ನು ಮೋಕ್ಷವೆಂದು ಕರೆಯುತ್ತಾರೆ.

ಧರ್ಮಃ ಶರೀರಸಂಗುಪ್ತಿರ್ಧರ್ಮಾರ್ಥಂ ಚಾರ್ಥ ಇಷ್ಯತೇ।
ಕಾಮೋ ರತಿಫಲಶ್ಚಾತ್ರ ಸರ್ವ ಏತೇ ರಜಸ್ವಲಾಃ।
ಸನ್ನಿಕೃಷ್ಟಾಂಶ್ಚರೇದೇನಾನ್ ನ ಚೈನಾನ್ ಮನಸಾ ತ್ಯಜೇತ್ ॥೬॥

ಶರೀರರಕ್ಷಣೆಯು ಧರ್ಮ. ಧರ್ಮಾರ್ಜನೆಯ ಸಲುವಾಗಿ ಅರ್ಥವು ಅಪೇಕ್ಷಿಸಲ್ಪಡುತ್ತದೆ. ಕಾಮವು ಸುಖರೂಪವಾದ ಫಲವನ್ನು ಹೊಂದಿರುವಂತಹದು. ಇವೆಲ್ಲವೂ ರಜೋಗುಣವಿಕಾರಗಳು. ಇವುಗಳು ಸನ್ನಿಹಿತವಾದಾಗ ಆಚರಿಸಬೇಕು. ಮನಸ್ಸಿನಿಂದ ಇವುಗಳನ್ನು ತ್ಯಜಿಸಬಾರದು.

ವಿಯುಕ್ತಸ್ತಪಸಾ ಸರ್ವಾನ್ ಧರ್ಮಾದೀನ್ ಕಾಮನೈಷ್ಠಿಕಾನ್।
ಶ್ರೇಷ್ಠಬುದ್ಧಿಸ್ತ್ರಿವರ್ಗಸ್ಯ ಯದಯಂ ಪ್ರಾಪ್ನುಯಾತ್ ಕ್ಷಣಾತ್ ॥೭॥

ಮನುಷ್ಯನು ತ್ರಿವರ್ಗದಿಂದ ಯಾವ ಫಲವನ್ನು ಪಡೆಯುತ್ತಾನೆಯೋ ಅದನ್ನು ಶ್ರೇಷ್ಠಬುದ್ಧಿಯುಳ್ಳವನು ತಪಸ್ಸಿನಿಂದ ವಿಷಯವಿರಕ್ತನಾಗಿ ಒಂದು ಕ್ಷಣದಲ್ಲಿ ಪಡೆಯುತ್ತಾನೆ.

ಬುದ್ಧ್ಯಾ ಬುದ್ಧಿರಿಹಾರ್ಥೇಷು ತದಜ್ಞಾನನಿಕೃಷ್ಟಯಾ ॥೮॥

ಅವಿವೇಕದಿಂದ ಸೆಳೆಯಲ್ಪಟ್ಟ ಬುದ್ಧಿಯಿಂದ ಈ ಲೋಕದಲ್ಲಿ ಅರ್ಥಗಳಲ್ಲಿ (ಭೋಗಪದಾರ್ಥಗಳಲ್ಲಿ) ಬುದ್ಧಿಯುಂಟಾಗುತ್ತದೆ.

ಅರ್ಥಾರ್ಥಮನ್ಯದ್ ಭವತಿ ವಿಪರೀತಮಥಾಪರಮ್।
ಅನರ್ಥಾರ್ಥಮವಾಪ್ಯಾರ್ಥಮನ್ಯತ್ರಾದ್ಯೋಪಕಾರಕಮ್ ॥೯॥

ಅರ್ಥಾರ್ಥವಾಗಿ ಇನ್ನೊಂದಿದೆ ಎಂದು ಕೆಲವರ ಅಭಿಪ್ರಾಯ. ಅದಕ್ಕೆ ವಿಪರೀತವಾಗಿ ಅರ್ಥವು ಇನ್ನೊಂದರ ಸಲುವಾಗಿದೆ ಎಂದು ಇನ್ನೊಂದು ಅಭಿಪ್ರಾಯ. ಅನರ್ಥಪ್ರಯೋಜನವುಳ್ಳ ಅರ್ಥವನ್ನು ಸಂಪಾದಿಸಿದರೆ ಅದು ಆದ್ಯಪುರುಷಾರ್ಥವಾದ ಧರ್ಮವನ್ನು ಬಿಟ್ಟು, ಅರ್ಥಕಾಮಗಳಲ್ಲಿಯೇ ಉಪಯುಕ್ತವಾಗುತ್ತದೆ.

ಅಪ(ವ)ಧ್ಯಾನಮಲೋ ಧರ್ಮೋ ಮಲೋಽರ್ಥಸ್ಯ ನಿಗೂಹನಮ್ ।
ಸಂಪ್ರಮೋದಮಲಃ ಕಾಮೋ ಭೂಯಃ ಸ್ವಗುಣವರ್ಜಿತಃ ॥೧೦॥

ಧರ್ಮದ ಮಲವು ಅನಾದರ. ಅರ್ಥದ ಮಲವು ಮುಚ್ಚಿಡುವುದು. ಕಾಮದ ಮಲವು ಅತಿಯಾದ ಪ್ರಮೋದ. ಇವೆಲ್ಲವೂ ಮನಸ್ಸಹಿತವಾದುದರಿಂದ ತಮ್ಮ ಗುಣಗಳಿಂದ ರಹಿತವಾದವುಗಳು.

ಅತ್ರಾಪ್ಯುದಹರಂತೀಮಮಿತಿಹಾಸಂ ಪುರಾತನಮ್ ।
ಕಾಮಂದಸ್ಯ ಚ ಸಂವಾದಮಂಗಾರಿಷ್ಠಸ್ಯ ಚೋಭಯೋಃ ॥೧೧॥

ಎಲೈ ಪ್ರೀತಿಪಾತ್ರನೇ! ಈ ವಿಷಯದಲ್ಲಿಯೂ ಕಾಮಂದ ಮತ್ತು ಅರಿಷ್ಟ ಇವರಿಬ್ಬರ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಕಾಮಂದಮೃಷಿಮಾಸೀನಮಭಿವಾದ್ಯ ನರಾಧಿಪಃ ।
ಅಂಗಾರಿಷ್ಟೋಽಥ ಪಪ್ರಚ್ಛ ಕೃತ್ವಾ ಸಮಯಪರ್ಯಯಮ್ ॥೧೨॥

ರಾಜನಾದ ಅಂಗಾರಿಷ್ಟನು ಸಮಯವು ಪ್ರಶಸ್ತವಾಗಿದೆಯೆಂದು ತಿಳಿದು ಆಸೀನ -ರಾಗಿದ್ದ ಕಾಮಂದಋಷಿಗಳಿಗೆ ನಮಸ್ಕಾರವನ್ನು ಮಾಡಿ ಪ್ರಶ್ನೆಯನ್ನು ಮಾಡಿದನು.

ಯಃ ಪಾಪಂ ಕುರುತೇ ರಾಜಾ ಕಾಮಮೋಹಬಲಾತ್ಕೃತಃ ।
ಪ್ರತ್ಯಾಸನ್ನಸ್ಯ ತಸ್ಯರ್ಷೇ ಕಿಂ ಸ್ಯಾತ್ ಪಾಪಪ್ರಣಾಶನಮ್ ॥೧೩॥

ಎಲೈ ಋಷಿಯೇ! ಯಾವ ರಾಜನು ಕಾಮಮೋಹಗಳಿಗೆ ವಶನಾಗಿ ಪಾಪವನ್ನು ಮಾಡುತ್ತಾನೆಯೋ ಆ ಕ್ಷಣದಲ್ಲಿ ಮಾಡಿದ ಪಾಪಗಳಿಗೆ ಪರಿಹಾರಕವಾದುದು ಯಾವುದು?

ಅಧರ್ಮಂ ಧರ್ಮ ಇತಿ ಹ ಯೋಽಜ್ಞಾನಾದಾಚರೇದಿಹ ।
ತಂ ಚಾಪಿ ಪ್ರಥಿತಂ ಲೋಕೇ ಕಥಂ ರಾಜಾ ನಿವರ್ತಯೇತ್ ॥೧೪॥

ಸಮಾಜದಲ್ಲಿ ಪ್ರಸಿದ್ಧನಾದ ಯಾವನು ಅಜ್ಞಾನದಿಂದ ಅಧರ್ಮವನ್ನು

ಧರ್ಮವೆಂದು ತಿಳಿದು ಅದನ್ನು ಆಚರಿಸುತ್ತಾನೆಯೋ ಅವನನ್ನು ನಿವರ್ತಿಸುವ ಬಗೆ ಹೇಗೆ?

ಕಾಮಂದಃ

ಯೋ ಧರ್ಮಾರ್ಥೌ ಸಮುತ್ಸೃಜ್ಯ ಕಾಮಮೇವಾನುವರ್ತತೇ।
ಸ ಧರ್ಮಾರ್ಥಪರಿತ್ಯಾಗಾತ್ ಪ್ರಜ್ಞಾನಾಶಮಿಹಾರ್ಚ್ಛತಿ ॥೧೫॥

ಪ್ರಜ್ಞಾಪ್ರಣಾಶಕೋ ಮೋಹಸ್ತಥಾ ಧರ್ಮಾರ್ಥನಾಶಕಃ।
ತಸ್ಮಾನ್ನಾಸ್ತಿಕತಾ ಚೈವ ದುರಾಚಾರಶ್ಚ ಜಾಯತೇ ॥೧೬॥

ಕಾಮಂದ – ಯಾವನು ಧರ್ಮಾರ್ಥಗಳನ್ನು ತ್ಯಜಿಸಿ ಕಾಮವನ್ನೇ ಹಿಂಬಾಲಿಸುತ್ತಾನೆಯೋ ಅವನು ಧರ್ಮಾರ್ಥಗಳನ್ನು ತ್ಯಾಗ ಮಾಡಿದ ಕಾರಣದಿಂದ ಪ್ರಜ್ಞಾನಾಶವನ್ನು ಹೊಂದುತ್ತಾನೆ. ಮೋಹವು (ಮಿಥ್ಯಾಜ್ಞಾನವು) ಪ್ರಜ್ಞಾನಾಶಕವಾದುದು ಮತ್ತು ಧರ್ಮಾರ್ಥನಾಶಕವಾದುದು. ಆ ಮೋಹದಿಂದ ನಾಸ್ತಿಕತೆಯೂ ಮತ್ತು ದುರಾಚಾರವೂ ಉಂಟಾಗುತ್ತದೆ.

ದುರಾಚಾರಾನ್ ಯದಾ ರಾಜಾ ಪ್ರದುಷ್ಟಾನ್ನ ನಿಯಚ್ಛತಿ।
ತಸ್ಮಾದುದ್ವಿಜತೇ ಲೋಕಃ ಸರ್ಪಾದ್ ವೇಶ್ಮಗತಾದಿವ ॥೧೭॥

ರಾಜನು ಯಾವಾಗ ದುರಾಚಾರಿಗಳಾದ ದುಷ್ಟರನ್ನು ನಿಯಂತ್ರಿಸುವುದಿಲ್ಲವೋ ಆಗ ಜನರು ಮನೆಯನ್ನು ಪ್ರವೇಶಿಸಿದ ಸರ್ಪದಂತೆ ಆ ರಾಜನಿಗೆ ಹೆದರುತ್ತಾರೆ.

ತಂ ಪ್ರಜಾ ನಾನುವರ್ತಂತೇ ಬ್ರಾಹ್ಮಣಾ ನ ಚ ಸಾಧವಃ।
ತತಃ ಸಂಕ್ಷಯಮಾಪ್ನೋತಿ ತಥಾऽಪಧ್ವಸ್ತ ಏವ ಚ ॥೧೮॥

ಆ ರಾಜನನ್ನು ಪ್ರಜೆಗಳಾಗಲೀ ಬ್ರಾಹ್ಮಣರಾಗಲೀ ಸಜ್ಜನರಾಗಲೀ ಅನುಸರಿಸುವುದಿಲ್ಲ. ಸಜ್ಜನರಿಂದ ಹಾಗೆ ಧಿಕ್ಕೃತನಾದ ಅವನು ವಿನಾಶವನ್ನು ಹೊಂದುತ್ತಾನೆ.

ಅಪಧ್ವಸ್ತಸ್ತ್ವಮತೋ ದುಃಖಿಂ ಜೀವತಿ ಜೀವಿತಮ್ ।
ಜೀವೇಚ್ಚ ಯದಪಧ್ವಸ್ತಸ್ತಚ್ಛುದ್ಧಂ ಮರಣಂ ಭವೇತ್ ॥೧೯॥

ಅಪಧ್ವಸ್ತ ಎಂದರೆ ಸಜ್ಜನರಿಂದ ಧಿಕ್ಕೃತನಾದವನು ಎಂದು ಅರ್ಥ. ಅಂತಹವನು ದುಃಖದಿಂದ ಜೀವಿಸುತ್ತಾನೆ. ಅಂತಹವನ ಜೀವನವು ಶುದ್ಧಮರಣವೇ ಆದೀತು.

ಅತ್ಯೈತದಾಹುರಾಚಾರ್ಯಾಃ ಪಾಪಸ್ಯ ಪರಿಬರ್ಹಣಮ್ ।
ಸೇವಿತವ್ಯಾ ತ್ರಯೀ ವಿದ್ಯಾ ಸತ್ಕಾರೋ ಬ್ರಾಹ್ಮಣೇಷು ಚ ॥೨೦॥

ಪಾಪನಾಶನವಿಷಯದಲ್ಲಿ ಆಚಾರ್ಯರು ಹೀಗೆ ಹೇಳುತ್ತಾರೆ. ಮೂರು ವೇದಗಳ ವಿದ್ಯೆಯನ್ನು ಆಶ್ರಯಿಸಬೇಕು. ಮತ್ತು ಬ್ರಾಹ್ಮಣರಿಗೆ ಸತ್ಕಾರವನ್ನು ಮಾಡಬೇಕು.

ಮಹಾಮನಾ ಭವೇದ್ ಧರ್ಮೇ ವಿವಹೇಚ್ಚ ಮಹಾಕುಲೇ ।
ಬ್ರಾಹ್ಮಣಾಂಶ್ಚಾಪಿ ಸೇವೇತ ಕ್ಷಮಾಯುಕ್ತಾನ್ ಮನಸ್ವಿನಃ ॥೨೧॥

ಧರ್ಮದಲ್ಲಿ ಮನಸ್ಸುಳ್ಳವನಾಗಿರಬೇಕು. ಮಹಾಕುಲದ ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕು. ಕ್ಷಮಾಶೀಲರೂ ಜಿತಮನಸ್ಕರೂ ಆದ ಬ್ರಾಹ್ಮಣರ ಸೇವೆಯನ್ನು ಮಾಡಬೇಕು.

ಜಪೇದುದಕಶೀಲಃ ಸ್ಯಾತ್ ಸುಮುಖೋ ನಾನ್ಯದಾಸ್ಥಿತಃ ।
ಧರ್ಮಾನ್ವಿತಾನ್ ಸಂಪ್ರವಿಶೇದ್ ಬಹಿಃ ಕೃತ್ವೈವ ದುಷ್ಕೃತೀನ್ ॥೨೨॥

ಜಪವನ್ನು ಮಾಡಬೇಕು. ಸ್ನಾನಪರನಾಗಿರಬೇಕು. ಪ್ರಸನ್ನಮುಖನಾಗಿರಬೇಕು. ದುಷ್ಕಾರ್ಯಗಳನ್ನು ಮಾಡಬಾರದು. ದುಷ್ಟರನ್ನು ದೂರಮಾಡಬೇಕು ಮತ್ತು ಧಾರ್ಮಿಕರ ಸಹವಾಸದಲ್ಲಿರಬೇಕು.

ಪ್ರಸಾದಯೇನ್ಮಧುರಯಾ ವಾಚಾಪ್ಯಥ ಚ ಕರ್ಮಣಾ ।
ಇತ್ಯಸ್ಮೀತಿ ವದೇನ್ನಿತ್ಯಂ ಪರೇಷಾಂ ಕೀರ್ತಯನ್ ಗುಣಾನ್ ॥೨೩॥

ಮಧುರವಾದ ಮಾತುಗಳಿಂದ ಮತ್ತು ಕ್ರಿಯೆಯಿಂದ ದೊಡ್ಡವರನ್ನು ಪ್ರಸನ್ನಗೊಳಿಸಬೇಕು. ಇನ್ನೊಬ್ಬರ ಗುಣಗಳನ್ನು ಹೊಗಳುತ್ತಾ ನಾನು ಮಾತ್ರ ಹೀಗಿದ್ದೇನೆ ಎಂದು ತನ್ನ ದೋಷಗಳನ್ನು ಹೇಳಿಕೊಳ್ಳಬೇಕು.

ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್ ।
ಪಾಪಾನ್ಯಪಿ ಚ ಕೃಚ್ಛ್ರಾಣಿ ಶಮಯೇನ್ನಾತ್ರ ಸಂಶಯಃ ॥೨೪॥

ಹೊಸದಾಗಿ ಪಾಪವನ್ನು ಮಾಡದೇ ಇಂತಹ ಆಚಾರವುಳ್ಳವನು ಶೀಘ್ರವಾಗಿ ಸಜ್ಜನರಿಗೆ ಸಮ್ಮತನಾಗುತ್ತಾನೆ. ತಾನು ಮಾಡಿದ ಪಾಪಗಳನ್ನು ತನಗೆ ಒದಗಿದ ಕಷ್ಟಗಳನ್ನು ಅವನು ನಾಶ ಮಾಡುವುದರಲ್ಲಿ ಸಂಶಯವಿಲ್ಲ.

ಗುರವೋಽಪಿ ಪರಂ ಧರ್ಮಂ ಯದ್ ಬ್ರೂಯುಸ್ತತ್ ತಥಾ ಕುರು ।
ಗುರೂಣಾಂ ಹಿ ಪ್ರಸಾದಾದ್ಧಿ ಶ್ರೇಯಃ ಪರಮವಾಪ್ಸ್ಯಸಿ ॥೨೫॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಚತುರ್ವಿಂಶತ್ಯಧಿಕಶತತಮೋಽಧ್ಯಾಯಃ ॥೧೨೪॥

ಗುರುಗಳು ಯಾವ ಶ್ರೇಷ್ಠವಾದ ಧರ್ಮವನ್ನು ಹೇಳುತ್ತಾರೆಯೋ ಅದನ್ನೂ ಸಹ ಮಾಡುವವನಾಗು. ಗುರುಗಳ ಅನುಗ್ರಹದಿಂದಲೇ ಶ್ರೇಷ್ಠವಾದ ಶ್ರೇಯಸ್ಸನ್ನು ಹೊಂದುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೪ನೆಯ ಅಧ್ಯಾಯವು ಮುಗಿಯಿತು

—0—

೧೨೫. ನೂರಇಪ್ಪತ್ತೈದನೆಯ ಅಧ್ಯಾಯ

ಧೃತರಾಷ್ಟ್ರದುರ್ಯೋಧನಸಂವಾದ; ಶೀಲಕ್ಕೆ ಧರ್ಮಾದಿಕಾರಣತ್ವಕಥನ

ಯುಧಿಷ್ಠಿರಃ

ಇಮೇ ಜನಾ ನರಶ್ರೇಷ್ಠ ಪ್ರಶಂಸಂತಿ ಸದಾ ಭುವಿ ।
ಧರ್ಮಸ್ಯ ಶೀಲಮೇವಾದೌ ತತೋ ಮೇ ಸಂಶಯೋ ಮಹಾನ್ ॥೧॥

ಎಲೈ ನರಶ್ರೇಷ್ಠನೇ! ಭೂಮಿಯಲ್ಲಿ ಈ ಜನರು ಧರ್ಮಕ್ಕಿಂತಲೂ ಮೊದಲು ಶೀಲವನ್ನು ಪ್ರಶಂಸೆ ಮಾಡುತ್ತಾರೆ. ಅದರಿಂದ ನನಗೆ ದೊಡ್ಡ ಸಂಶಯವುಂಟಾಗಿದೆ.

ಯದಿ ತಚ್ಛಕ್ಯಮಸ್ಮಾಭಿರ್ಜ್ಞಾತುಂ ಧರ್ಮಭೃತಾಂವರ।
ಶ್ರೋತುಮಿಚ್ಛಾಮಿ ತತ್ ಸರ್ವಂ ಯಥೈತದುಪಲಭ್ಯತೇ ॥೨॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ! ಅದನ್ನು ನಮಗೆ ಕೇಳಲು ಸಾಧ್ಯವಾದರೆ ಇದು ಹೇಗೆ ತಿಳಿಯಲ್ಪಡುತ್ತದೆ ಎಂದು ಇಚ್ಛಿಸುತ್ತೇನೆ.

ಕಥಂ ನು ಪ್ರಾಪ್ಯತೇ ಶೀಲಂ ಶ್ರೋತುಮಿಚ್ಛಾಮಿ ಭಾರತ।
ಕಿಂ ಲಕ್ಷಣಂ ಚ ತತ್ ಪ್ರೋಕ್ತಂ ಬ್ರೂಹಿ ಮೇ ವದತಾಂವರ ॥೩॥

ಎಲೈ ಭಾರತನೇ! ಶೀಲವನ್ನು ಹೇಗೆ ಸಂಪಾದಿಸುವುದು ಎಂದು ಕೇಳಲು ಬಯಸುತ್ತೇನೆ. ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ! ಶೀಲದ ಲಕ್ಷಣವೇನೆಂದು ಹೇಳು.

ಭೀಷ್ಮಃ

ಪುರಾ ದುರ್ಯೋಧನೇನೇಹ ಧೃತರಾಷ್ಟ್ರಾಯ ಮಾನದ।
ಆಖ್ಯಾತಂ ತಪ್ಯಮಾನೇನ ಶ್ರಿಯಂ ದೃಷ್ಟ್ವಾತವಾಗತಮ್ ॥೪॥

ಭೀಷ್ಮರು – ಎಲೈ ಮಾನದನೇ! ಹಿಂದೆ ನಿನ್ನ ಐಶ್ವರ್ಯವನ್ನು ನೋಡಿ ಅಸೂಯೆ ಪಡುತ್ತಿದ್ದ ದುರ್ಯೋಧನನು ಧೃತರಾಷ್ಟ್ರನನ್ನು ಕುರಿತು ಹೇಳಿದನು.

ಇಂದ್ರಪ್ರಸ್ಥೇ ಮಹಾರಾಜ ತವ ಸಭ್ರಾತೃಕಸ್ಯ ಹ।
ಸಭಾಯಾಂ ಚಾವಹಸನಂ ತತ್ ಸರ್ವಂ ಶೃಣು ಭಾರತ ॥೫॥

ಎಲೈ ಭಾರತನೇ! ಮಹಾರಾಜನೇ! ಇಂದ್ರಪ್ರಸ್ಥದಲ್ಲಿ ನಿನ್ನ ತಮ್ಮಂದಿರ ಜೊತೆಯಲ್ಲಿ ನೀನು ಕುಳಿತಿದ್ದಾಗ ಸಭೆಯಲ್ಲಿ ಉಂಟಾದ ಅಪಹಾಸ್ಯವನ್ನು ಹೇಳಿದನು. ಅದೆಲ್ಲವನ್ನೂ ಕೇಳು.

ಭವತಸ್ತಾಂ ಸಭಾಂ ದೃಷ್ಟ್ವಾ ಸಮೃದ್ಧಿಂ ಚಾಪ್ಯನುತ್ತಮಾಮ್ ।
ದುರ್ಯೋಧನಸ್ತದಾಸೀನಃ ಸರ್ವಂ ಪಿತ್ರೇ ನ್ಯವೇದಯತ್ ॥೬॥

ನಿನ್ನ ಸಭೆಯನ್ನು ಮತ್ತು ಶ್ರೇಷ್ಠವಾದ ಸಮೃದ್ಧಿಯನ್ನು ನೋಡಿ ಆಗ ದುರ್ಯೋಧನನು ಕುಳಿತುಕೊಂಡು ಎಲ್ಲವನ್ನೂ ತಂದೆಗೆ ನಿವೇದಿಸಿದನು.

ಶ್ರುತ್ವಾ ಚ ಧೃತರಾಷ್ಟ್ರೋಽಪಿ ದುರ್ಯೋಧನವಚಸ್ತದಾ ।
ಅಬ್ರವೀತ್ ಕರ್ಣಸಹಿತಂ ದುರ್ಯೋಧನಮಿದಂ ವಚಃ ॥೭॥

ಆಗ ಧೃತರಾಷ್ಟ್ರನಾದರೋ ದುರ್ಯೋಧನನ ಮಾತುಗಳನ್ನು ಕೇಳಿ ಕರ್ಣ-ಸಹಿತನಾದ ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಹೇಳಿದನು.

ಕಿಮರ್ಥಂ ತಪ್ಯಸೇ ಪುತ್ರ ಶ್ರೋತುಮಿಚ್ಛಾಮಿ ತತ್ತ್ವತಃ ।
ಶ್ರುತ್ವಾ ತ್ವಾಮನುನೇಷ್ಯಾಮಿ ಯದಿ ಸಮ್ಯಗ್ ಭವಿಷ್ಯಸಿ ॥೮॥

ಎಲೈ ಪುತ್ರನೇ! ಏತಕ್ಕೆ ತಾಪಪಡುತ್ತಿದ್ದೀಯೆ ಎಂದು ನಾನು ಸರಿಯಾಗಿ ಕೇಳಲು ಬಯಸುತ್ತೇನೆ. ಅದನ್ನು ಕೇಳಿ ನಿನಗೆ ಸಮಾಧಾನದ ವಚನವನ್ನು ಹೇಳುತ್ತೇನೆ. ಅದರಿಂದ ನೀನು ಸರಿಯಾಗಬಹುದು.

ಯಥಾ ತ್ವಂ ಮಹದೈಶ್ವರ್ಯಂ ಪ್ರಾಪ್ತಃ ಪರಪುರಂಜಯ ।
ಕಿಂಕರಾ ಭ್ರಾತರಃ ಸರ್ವೇ ಮಿತ್ರಾಃ ಸಂಬಂಧಿನಸ್ತಥಾ ॥೯॥

ಆಚ್ಛಾದಯಸಿ ಪ್ರಾವಾರಾನಶ್ನಾಸಿ ಪಿಶಿತೌದನಮ್ ।
ಆಜಾನೇಯಾ ವಹಂತಿ ತ್ವಾಂ ಕಸ್ಮಾಚ್ಛೋಚಸಿ ಪುತ್ರಕ ॥೧೦॥

ಎಲೈ ಪರಪುರಂಜಯನೇ! ನೀನೂ ಸಹ ಮಹದೈಶ್ವರ್ಯವನ್ನು, ಕಿಂಕರರನ್ನು, ಸಹೋದರರನ್ನು, ಮಿತ್ರಸಂಬಂಧಿಕರನ್ನೂ ಪಡೆದಿದ್ದೀಯೆ. ಒಳ್ಳೆಯ ವಸ್ತ್ರಗಳನ್ನು ಉಡುತ್ತೀಯೆ, ಮಾಂಸಭೋಜನವನ್ನು ಮಾಡುತ್ತೀಯೆ. ಜಾತಿಯ ಕುದುರೆಗಳು ನಿನ್ನನ್ನು ಎಳೆಯುತ್ತವೆ. ಎಲೈ ಪುತ್ರನೇ! ಏಕೆ ಶೋಕಪಡುತ್ತೀಯೆ?

ದುರ್ಯೋಧನಃ

ದಶ ತಾನಿ ಸಹಸ್ರಾಣಿ ಸ್ನಾತಕಾನಾಂ ಮಹಾತ್ಮನಾಮ್ ।
ಭುಂಜತೇ ರುಗ್ಮಪಾತ್ರೀಷು ಯುಧಿಷ್ಠಿರನಿವೇಶನೇ ॥೧೧॥

ದುರ್ಯೋಧನ – ಯುಧಿಷ್ಠಿರನ ಮನೆಯಲ್ಲಿ ಮಹಾತ್ಮರಾದ ಹತ್ತು ಸಹಸ್ರ-ಸ್ನಾತಕರು ಚಿನ್ನದ ಪಾತ್ರೆಗಳಲ್ಲಿ ಭೋಜನ ಮಾಡುತ್ತಾರೆ.

ದೃಷ್ಟ್ವಾ ಚ ತಾಂ ಸಭಾಂ ದಿವ್ಯಾಂ ದಿವ್ಯಪುಷ್ಪಫಲಾನ್ವಿತಾಮ್ ।
ಅಶ್ವಾಂಸ್ತಿತ್ತಿರಿಕಲ್ಮಾಷಾನ್ ರತ್ನಾನಿ ವಿವಿಧಾನಿ ಚ ॥೧೨॥

ದೃಷ್ಟ್ವಾ ತಾಂ ಪಾಂಡವೇಯಾನಾಮೃದ್ಧಿಮಿಂದ್ರೋಪಮಾಂ ಶುಭಾಮ್ ।
ಅಮಿತ್ರಾಣಾಂ ಸುಮಹತೀಮನುಶೋಚಾಮಿ ಮಾನದ ॥೧೩॥

ಎಲೈ ಮಾನದನೇ! ದಿವ್ಯಪುಷ್ಪಫಲಯುಕ್ತವಾದ ದಿವ್ಯವಾದ ಆ ಸಭೆಯನ್ನು, ಚಕೋರಪಕ್ಷಿಯ ಬಣ್ಣದ ಮತ್ತು ಬಿಳಿ ಕಪ್ಪುಮಿಶ್ರಿತಬಣ್ಣದ ಕುದುರೆಗಳನ್ನು ವಿವಿಧ-ವಾದ ರತ್ನಗಳನ್ನು, ನನ್ನ ಶತ್ರುಗಳಾದ ಪಾಂಡುಪುತ್ರರ ಇಂದ್ರನ ಸಂಪತ್ತಿಗೆ ಸಮವಾದ ಶುಭವಾದ ಆ ಮಹಾಸಮೃದ್ಧಿಯನ್ನು ನೋಡಿ ನಾನು ಶೋಕ ಪಡುತ್ತಿ-ದ್ದೇನೆ.

ಧೃತರಾಷ್ಟ್ರಃ

ಯದೀಚ್ಛಸಿ ಶ್ರಿಯಂ ತಾತ ಯಾದೃಶೀ ತಾಂ ಯುಧಿಷ್ಠಿರೇ ।
ವಿಶಿಷ್ಟಾಂ ವಾ ನರವ್ಯಾಘ್ರ ಶೀಲವಾನ್ ಭವ ಪುತ್ರಕ ॥೧೪॥

ಧೃತರಾಷ್ಟ್ರ – ಎಲೈ ಪ್ರೀತಿಪಾತ್ರನೇ! ಪುತ್ರನೇ! ನೀನು ಯುಧಿಷ್ಠಿರನಲ್ಲಿ-ರುವಂತಹ ಸಂಪತ್ತನ್ನು ಅಥವಾ ಅದಕ್ಕಿಂತ ಶ್ರೇಷ್ಠವಾದ ಸಂಪತ್ತನ್ನು ಅಪೇಕ್ಷಿಸು-ವುದಾದರೆ ಎಲೈ ನರವ್ಯಾಘ್ರನೇ! ಶೀಲವಂತನಾಗು.

ಶೀಲೇನ ಹಿ ತ್ರಯೋ ಲೋಕಾಃ ಶಕ್ಯಾ ಜೇತುಂ ನ ಸಂಶಯಃ ।
ನ ಹಿ ಕಿಂಚಿದಸಾಧ್ಯಂ ವೈ ಲೋಕೇ ಶೀಲವತಾಂ ಭವೇತ್ ॥೧೫॥

ಶೀಲದಿಂದ ಮೂರು ಲೋಕಗಳನ್ನು ಗೆಲ್ಲಲು ಸಾಧ್ಯ ಎಂಬುದರಲ್ಲಿ ಸಂಶಯವಿಲ್ಲ. ಲೋಕದಲ್ಲಿ ಶೀಲವಂತರಿಗೆ ಅಸಾಧ್ಯವಾದುದು ಯಾವುದೂ ಇಲ್ಲ.

ಏಕರಾತ್ರೇಣ ಮಾಂಧಾತಾ ತ್ರ್ಯಹೇಣ ಜನಮೇಜಯಃ।
ಸಪ್ತರಾತ್ರೇಣ ನಾಭಾಗಃ ಪೃಥಿವೀಂ ಪ್ರತಿಪೇದಿವಾನ್ ॥೧೬॥

ಮಾಂಧಾತೃವು ಒಂದೇ ರಾತ್ರಿಯಲ್ಲಿಯೂ, ಜನಮೇಜಯನು ಮೂರುದಿನದಲ್ಲಿಯೂ, ನಾಭಾಗನು ಏಳು ರಾತ್ರಿಯಲ್ಲಿಯೂ ಭೂಮಿಯನ್ನು ಪಡೆದರು (ಜಯಿಸಿದರು).

ಏತೇ ಹಿ ಪಾರ್ಥಿವಾಃ ಸರ್ವೇ ಶೀಲವಂತೋ ದಮಾನ್ವಿತಾಃ।
ಅತಸ್ತೇಷಾಂ ಗುಣಕ್ರೀತಾ ವಸುಧಾ ಸ್ವಯಮಾಗಮತ್ ॥೧೭॥

ಈ ರಾಜರೆಲ್ಲರೂ ಶೀಲವಂತರು ಮತ್ತು ಇಂದ್ರಿಯನಿಗ್ರಹವುಳ್ಳವರು. ಆದ್ದರಿಂದ ಅವರ ಗುಣಗಳಿಂದ ಕ್ರೀತಳಾದ ಭೂಮಿಯು ತಾನಾಗಿಯೇ ಅವರ ಬಳಿಗೆ ಬಂದಿತು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ನಾರದೇನ ಪುರಾ ಪ್ರೋಕ್ತಂ ಶೀಲಮಾಶ್ರಿತ್ಯ ಭಾರತ ॥೧೮॥

ಎಲೈ ಭಾರತನೇ! ಈ ಶೀಲದ ವಿಷಯದಲ್ಲಿ ನಾರದರು ಹಿಂದೆ ಹೇಳಿದ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಪ್ರಹ್ಲಾದೇನ ಹೃತಂ ರಾಜ್ಯಂ ಮಹೇಂದ್ರಸ್ಯ ಮಹಾತ್ಮನಃ।
ಶೀಲಮಾಶ್ರಿತ್ಯ ದೈತ್ಯೇನ ತ್ರೈಲೋಕ್ಯಂ ಚ ವಶೀಕೃತಮ್ ॥೧೯॥

ಮಹಾತ್ಮನಾದ ಪ್ರಹ್ಲಾದನು ಶೀಲವನ್ನು ಆಶ್ರಯಿಸಿ ಮಹೇಂದ್ರನ ರಾಜ್ಯವನ್ನು ಅಪಹರಿಸಿದನು. ಮತ್ತು ದೈತ್ಯನಾದ ಅವನು ಮೂರು ಲೋಕಗಳನ್ನೂ ವಶಪಡಿಸಿಕೊಂಡನು.

ತತೋ ಬೃಹಸ್ಪತಿಂ ಶಕ್ರಃ ಪ್ರಾಂಜಲಿಃ ಸಮುಪಸ್ಥಿತಃ।
ಉವಾಚ ಚ ಮಹಾಪ್ರಾಜ್ಞಃ ಶ್ರೇಯ ಇಚ್ಛಾಮಿ ವೇದಿತುಮ್ ॥೨೦॥

ಆಗ ಮಹಾಪ್ರಾಜ್ಞನಾದ ಇಂದ್ರನು ಬೃಹಸ್ಪತಿಗಳ ಸಮೀಪಕ್ಕೆ ಹೋಗಿ ಕೈಗಳನ್ನು ಮುಗಿದು, ನಾನು ಶ್ರೇಯಃಸಾಧನವನ್ನು ತಿಳಿಯಲು ಬಯಸುತ್ತೇನೆ ಎಂದು ಹೇಳಿದನು.

ತತೋ ಬೃಹಸ್ಪತಿಸ್ತಸ್ಮೈ ಜ್ಞಾನಂ ನೈಶ್ರೇಯಸಂ ಪರಮ್।
ಕಥಯಾಮಾಸ ಭಗವಾನ್ ದೇವೇಂದ್ರಾಯ ಕುರೂದ್ವಹ ॥೨೧॥

ಎಲೈ ಕುರೂದ್ವಹನೇ! ಆಗ ಪೂಜ್ಯರಾದ ಬೃಹಸ್ಪತಿಗಳು ದೇವೇಂದ್ರನಿಗೆ ಅಂತಹ ಶ್ರೇಯಃಸಾಧನವಾದ ಜ್ಞಾನವನ್ನು ಉಪದೇಶಿಸಿದರು.

ಏತಾವಚ್ಛ್ರೇಯ ಇತ್ಯೇವ ಬೃಹಸ್ಪತಿರಭಾಷತ।
ಇಂದ್ರಸ್ತು ಭೂಯಃ ಪಪ್ರಚ್ಛ ಕ್ವ ವಿಶೇಷೋ ಭವೇದಿತಿ ॥೨೨॥

ಶ್ರೇಯಸ್ಸಾಧನವಾದುದು ಇಷ್ಟು ಎಂದು ಬೃಹಸ್ಪತಿಗಳು ಹೇಳಿದರು. ಪುನಃ ಇಂದ್ರನು ಪುನಃ ತಿಳಿಯಬೇಕಾದ ಇನ್ನೂ ಏನಾದರೂ ವಿಶೇಷವಿದೆಯೇ ಎಂದು ಬೃಹಸ್ಪತಿಗಳನ್ನು ಕುರಿತು ಕೇಳಿದನು.

ಬೃಹಸ್ಪತಿಃ

ವಿಶೇಷೋऽಸ್ತಿ ಮಹಾಂಸ್ತಾತ ಭಾರ್ಗವಸ್ಯ ಮಹಾತ್ಮನಃ।
ತತ್ರಾಗಮಯ ಭದ್ರಂ ತೇ ಭೂಯ ಏವ ಪುರಂದರ ॥೨೩॥

ಪ್ರೀತಪಾತ್ರನೇ! ಮಹಾತ್ಮರಾದ ಶುಕ್ರಾಚಾರ್ಯರ ಬಳಿ ತಿಳಿಯಬೇಕಾದ ಇನ್ನೂ ವಿಶೇಷವಿದೆ. ಪುರಂದರನೇ! ನಿನಗೆ ಮಂಗಳವಾಗಲಿ. ಅಲ್ಲಿಗೆ ಹೋಗಿ ಆ ಜ್ಞಾನವನ್ನು ಸಂಪಾದಿಸು.

ಧೃತರಾಷ್ಟ್ರಃ

ಆತ್ಮನಸ್ತು ತತಃ ಶ್ರೇಯೋ ಭಾರ್ಗವಾತ್ ಸುಮಹಾಯಶಾಃ।
ಜ್ಞಾನಮಾಗಮತ್ ಪ್ರೀತ್ಯಾ ಪುನಃ ಸ ಪರಮದ್ಯುತಿಃ ॥೨೪॥

ಧೃತರಾಷ್ಟ್ರ - ಮಹಾಯಶಸ್ವಿಯೂ ಪರಮಕಾಂತಿಯುಳ್ಳವನೂ ಆದ ಇಂದ್ರನು ಪುನಃ ಶುಕ್ರಾಚಾರ್ಯರ ಬಳಿಗೆ ಹೋಗಿ ತನ್ನ ಶ್ರೇಯಃಸಾಧನವಾದ ಜ್ಞಾನವನ್ನು ಪ್ರೀತಿಯಿಂದ ಅವರಿಂದ ಸಂಪಾದಿಸಿದನು.

ತೇನಾಪಿ ಸಮನುಜ್ಞಾತೋ ಭಾರ್ಗವೇಣ ಮಹಾತ್ಮನಾ।
ಶ್ರೇಯೋಽಸ್ತೀತಿ ಪುನರ್ಭೂಯಃ ಶುಕ್ರಮಾಹ ಶತಕ್ರತುಃ ॥೨೫॥

ಮಹಾತ್ಮರಾದ ಶುಕ್ರಾಚಾರ್ಯರು ಉಪದೇಶವನ್ನು ಮಾಡಿ, ಹೊರಡಲು ಅನುಮತಿಯನ್ನು ಕೊಟ್ಟ ಮೇಲೆ ಇಂದ್ರನು ಶುಕ್ರಾಚಾರ್ಯರನ್ನು ಕುರಿತು ಇನ್ನೂ ಏನಾದರೂ ತಿಳಿಯಬೇಕಾದ ಶ್ರೇಯಸ್ಸಾಧನವಿದೆಯೇ ಎಂದು ಕೇಳಿದನು.

ಭಾರ್ಗವಸ್ತ್ವಾಹ ಧರ್ಮಜ್ಞಃ ಪ್ರಹ್ಲಾದಸ್ಯ ಮಹಾತ್ಮನಃ।
ಜ್ಞಾನಮಸ್ತಿ ವಿಶೇಷೇಣ ತತೋ ಹೃಷ್ಟಶ್ಚ ಸೋಽಭವತ್ ॥೨೬॥

ಧರ್ಮಜ್ಞರಾದ ಶುಕ್ರಾಚಾರ್ಯರು ಮಹಾತ್ಮನಾದ ಪ್ರಹ್ಲಾದನಲ್ಲಿ ಇನ್ನೂ ವಿಶೇಷಜ್ಞಾನವಿದೆ ಎಂದು ಹೇಳಿದರು. ಅದನ್ನು ಕೇಳಿದ ಇಂದ್ರನು ಸಂತುಷ್ಟನಾದನು.

ಸ ತತೋ ಬ್ರಾಹ್ಮಣೋ ಭೂತ್ವಾ ಪ್ರಹ್ಲಾದಂ ಪಾಕಶಾಸನಃ।
ಸೃತ್ವಾಪ್ರೋವಾಚ ಮೇಧಾವೀ ಶ್ರೇಯ ಇಚ್ಛಾಮಿ ವೇದಿತುಮ್ ॥೨೭॥

ಅನಂತರ ಪಾಕಶಾಸನನಾದ ಇಂದ್ರನು ಒಬ್ಬ ಬ್ರಾಹ್ಮಣನ ವೇಷವನ್ನು ಧರಿಸಿ ಪ್ರಹ್ಲಾದನನ್ನು ಸಮೀಪಿಸಿ ಮೇಧಾವಿಯಾದ ಅವನು ಶ್ರೇಯಸ್ಸನ್ನು ತಿಳಿಯಲು ಬಯಸುತ್ತೇನೆ ಎಂದು ಹೇಳಿದನು.

ಪ್ರಹ್ಲಾದಸ್ತ್ವಬ್ರವೀದ್ ವಿಪ್ರಂ ಕ್ಷಣೋ ನಾಸ್ತಿ ದ್ವಿಜರ್ಷಭ।
ತ್ರೈಲೋಕ್ಯರಾಜ್ಯೇ ಸಕ್ತಸ್ಯ ತತೋ ನೋಪದಿಶಾಮಿ ತೇ ॥೨೮॥

ಪ್ರಹ್ಲಾದನು ಆ ಬ್ರಾಹ್ಮಣನನ್ನು ಕುರಿತು ಎಲೈ ಬ್ರಾಹ್ಮಣಶ್ರೇಷ್ಠನೇ! ಮೂರು ಲೋಕದ ರಾಜ್ಯಭಾರದಲ್ಲಿ ಆಸಕ್ತನಾದ ನನಗೆ ಈಗ ಸಮಯವಿಲ್ಲ. ಆದ್ದರಿಂದ ನಿನಗೆ ಉಪದೇಶವನ್ನು ಮಾಡುವುದಿಲ್ಲ ಎಂದು ಹೇಳಿದನು.

ಬ್ರಾಹ್ಮಣಸ್ತ್ವಬ್ರವೀದ್ ವಾಕ್ಯಂ ಕಸ್ಮಿನ್ ಕಾಲೇ ಕ್ಷಣೋ ಭವೇತ್ ।
ತತೋಪದಿಷ್ಟಮಿಚ್ಛಾಮಿ ಯದ್ಯತ್ ಕಾರ್ಯಾಂತರಂ ಭವೇತ್ ॥೨೯॥

ಬ್ರಾಹ್ಮಣನು ಅವನನ್ನು ಕುರಿತು ನಿನಗೆ ಬೇರೆ ಕಾರ್ಯಗಳು ಮುಗಿದು ಯಾವಾಗ ಸಮಯವುಂಟಾಗುತ್ತದೋ ಆಗಲೇ ನಿನ್ನ ಉಪದೇಶವನ್ನು ಕೇಳುತ್ತೇನೆ ಎಂದು ಹೇಳಿದನು.

ತತಃ ಪ್ರೀತೋಽಭವದ್ ರಾಜಾ ಪ್ರಹ್ಲಾದೋ ಬ್ರಹ್ಮವಾದಿನೇ ।
ತಥೇತ್ಯುಕ್ತ್ವಾ ಶುಭೇ ಕಾಲೇ ಜ್ಞಾನತತ್ತ್ವಂ ದದೌ ತದಾ ॥೩೦॥

ಆಗ ರಾಜನಾದ ಪ್ರಹ್ಲಾದನು ಬ್ರಾಹ್ಮಣನಿಗೆ ಪ್ರಸನ್ನನಾದನು. ಹಾಗೆಯೇ ಆಗಲೆಂದು ಹೇಳಿ ಒಂದು ಶುಭಕಾಲದಲ್ಲಿ ಅವನಿಗೆ ಜ್ಞಾನವನ್ನು ಉಪದೇಶ ಮಾಡಿದನು.

ಬ್ರಾಹ್ಮಣೋಽಪಿ ಯಥಾನ್ಯಾಯಂ ಗುರುವೃತ್ತಿಮನುತ್ತಮಾಮ್ ।
ಚಕಾರ ಸರ್ವಭಾವೇನ ಯದ್ವತ್ ಸ ಮನಸೇಚ್ಛತಿ ॥೩೧॥

ಬ್ರಾಹ್ಮಣನೂ ಸಹ ನ್ಯಾಯವಾದ ರೀತಿಯಲ್ಲಿ ಪ್ರಹ್ಲಾದನ ಮನಸ್ಸಿಗೆ ಇಷ್ಟವಾಗುವ ರೀತಿಯಲ್ಲಿ ಸರ್ವಪ್ರಕಾರದಿಂದ ಶ್ರೇಷ್ಠವಾದ ಗುರುಸೇವೆಯನ್ನು ಮಾಡಿದನು.

ಪೃಷ್ಟಶ್ಚ ತೇನ ಬಹುಶಃ ಪ್ರಾಪ್ತಂ ಕಥಮರಿಂದಮ ।
ತ್ರೈಲೋಕ್ಯರಾಜ್ಯಂ ಧರ್ಮಜ್ಞಕಾರಣಂ ತದ್ ಬ್ರವೀಹಿ ಮೇ ॥೩೨॥

ಅವನು ಅನೇಕಬಾರಿ ಪ್ರಹ್ಲಾದನನ್ನು ಕುರಿತು ಎಲೈ ಅರಿಂದಮನೇ!

ಧರ್ಮಜ್ಞನೇ! ನಿನಗೆ ತ್ರೈಲೋಕ್ಯರಾಜ್ಯವು ಹೇಗ ಲಭಿಸಿತು? ನನಗೆ ಅದರ ಕಾರಣವನ್ನು ಹೇಳು - ಎಂದು ಕೇಳಿದನು.

ಪ್ರಹ್ಲಾದಃ

ನಾಸೂಯಾಮಿ ದ್ವಿಜಶ್ರೇಷ್ಠ ರಾಜಾಸ್ಮೀತಿ ಕದಾಚನ।
ಕಾಮ್ಯಾನಿ ವದತಾಂ ತಾತ ಸಂಯಚ್ಛಾಮಿ ವಹಾಮಿ ಚ ॥೩೩॥

ಪ್ರಹ್ಲಾದ – ಎಲೈ ದ್ವಿಜಶ್ರೇಷ್ಠನೇ! ನಾನು ರಾಜನಾಗಿದ್ದೇನೆ ಎಂದು ತಿಳಿದು ನಾನು ಯಾರನ್ನೂ ಅಸೂಯೆ ಮಾಡುವುದಿಲ್ಲ; ನನಗೆ ಇಷ್ಟವಾದ ವಿಷಯಗಳನ್ನು ಹೇಳುವವರಿಗೆ ನಾನು ಬಹಳ ದಾನವನ್ನು ಕೊಡುತ್ತೇನೆ ಮತ್ತು ಅವರ ಮಾತನ್ನು ನಡೆಸುತ್ತೇನೆ.

ತೇ ವಿಸ್ರಬ್ಧಾಃ ಪ್ರಭಾಷಂತೇ ಸಂಯಚ್ಛಂತಿ ಚ ಮಾಂ ಸದಾ।
ತೇಷು ಕಾರ್ಯಪಥೇ ಸಕ್ತಂ ಶುಶ್ರೂಷುಮನಸೂಯಕಮ್ ॥೩೪॥

ಧರ್ಮಾತ್ಮಾನಂ ಜಿತಕ್ರೋಧಂ ಸಂಯತಂ ಸಂಯತೇಂದ್ರಿಯಮ್।
ಸಮಾಚಿನ್ವಂತಿ ಶಾಸ್ತಾರಃ ಕ್ಷೌದ್ರಂ ಮಧ್ವಿವ ಮಕ್ಷಿಕಾಃ ॥೩೫॥

ಅವರು ಬಹಳವಿಶ್ವಾಸದಿಂದ ಮಾತನಾಡಿ ನನ್ನನ್ನು ಯಾವಾಗಲೂ ನಿಯಂತ್ರಿಸುತ್ತಾರೆ. ಅವರು ಉಪದೇಶಿಸಿದ ಕಾರ್ಯಮಾರ್ಗದಲ್ಲಿ ಆಸಕ್ತನಾದ ಶುಶ್ರೂಷಾಪರನೂ, ಅಸೂಯಾರಹಿತನೂ, ಧರ್ಮಾತ್ಮನೂ, ಕ್ರೋಧವನ್ನು ಜಯಿಸಿದವನೂ, ಇಂದ್ರಿಯಸಂಯಮವನ್ನು, ಮತ್ತು ಮನಃಸಂಯಮವನ್ನು ಹೊಂದಿದವನೂ ಆದ ನನ್ನನ್ನು ರಾಜರು ಜೇನುಹುಳುಗಳು ಜೇನನ್ನು ಸಂಗ್ರಹಿಸುವಂತೆ ಸಂಗ್ರಹಿಸುತ್ತಾರೆ.

ಸೋಽಹಂ ವಾಚಾ ಪ್ರಹೃಷ್ಟಾನಾಂ ರಸಾನಾಮವಲೇಹಿತಾ।
ಸ್ವಜಾತ್ಯಾನಧಿತಿಷ್ಠಾಮಿ ನಕ್ಷತ್ರಾಣೀವ ಚಂದ್ರಮಾಃ ॥೩೬॥

ಅಂತಹ ನಾನು ಸಂತೋಷದಿಂದುಪದೇಶಮಾಡುವವರ ವಾಗ್ರಸವನ್ನು ಸವಿದು

ಚಂದ್ರನು ನಕ್ಷತ್ರಗಳ ಮೇಲೆ ಇರುವಂತೆ ನನ್ನ ಜಾತಿಯವರ ಮೇಲೆ ಇದ್ದೇನೆ. (ನನ್ನ ಜಾತಿಯವರಲ್ಲಿ ಶ್ರೇಷ್ಠನಾಗಿದ್ದೇನೆ).

ಏತತ್ ಪೃಥಿವ್ಯಾಮಮೃತಮೇತಚ್ಚಕ್ಷುರನುತ್ತಮಮ್ ।
ಯದ್ ಬ್ರಾಹ್ಮಣಮುಖೇ ಕವ್ಯಮೇತಚ್ಛ್ರುತ್ವಾ ಪ್ರವರ್ತತೇ ॥೩೭॥

ಬ್ರಾಹ್ಮಣ ಮುಖದಿಂದ ಬಂದ ಉಪದೇಶವನ್ನು ಕೇಳಿ ಪ್ರಯತ್ನಿಸುವುದು ಭೂಮಿಯಲ್ಲಿ ಅಮೃತಪ್ರಾಯವಾದುದು ಮತ್ತು ಶ್ರೇಷ್ಠವಾದ ಚಕ್ಷುಸ್ಸಿನಂತೆ ಇರುವಂತಹದು. (ಜ್ಞಾನಪ್ರದವಾದುದು)

ಧೃತರಾಷ್ಟ್ರಃ

ಏತಾವಚ್ಛ್ರೇಯ ಇತ್ಯಾಹ ಪ್ರಹ್ಲಾದೋ ಬ್ರಹ್ಮವಾದಿನಮ್ ।
ಶುಶ್ರೂಷಿತಸ್ತೇನ ತದಾ ದೈತ್ಯೇಂದ್ರೋ ವಾಕ್ಯಮಬ್ರವೀತ್ ॥೩೮॥

ಧೃತರಾಷ್ಟ್ರ – ಆ ಬ್ರಾಹ್ಮಣನನ್ನು ಕುರಿತು ಪ್ರಹ್ಲಾದನು ಶ್ರೇಯಃಸಾಧನವೆಂದರೆ ಇಷ್ಟು ಎಂದು ಹೇಳಿದನು. ಅವನ ಸೇವೆಯನ್ನು ಸ್ವೀಕರಿಸಿ ದೈತ್ಯೇಂದ್ರನಾದ ಪ್ರಹ್ಲಾದನು ಪುನಃ ಮಾತನಾಡಿದನು.

ಯಥಾವದ್ ಗುರುವೃತ್ತ್ಯಾ ತೇ ಪ್ರೀತೋಽಸ್ಮಿ ದ್ವಿಜಸತ್ತಮ ।
ವರಂ ವೃಣೀಷ್ವ ಭದ್ರಂ ತೇ ಪ್ರದಾತಾಸ್ಮಿ ನ ಸಂಶಯಃ ॥೩೯॥

ಎಲೈ ದ್ವಿಜಶ್ರೇಷ್ಠನೇ! ನಿನ್ನ ಶಾಸ್ತ್ರೋಕ್ತರೀತಿಯಿಂದಿರುವ ಗುರುವೃತ್ತಿಯಿಂದ ಸಂತೋಷಗೊಂಡಿದ್ದೇನೆ. ನಿನಗೆ ಮಂಗಳವಾಗಲಿ. ವರವನ್ನು ಕೇಳು. ನಾನು ಅದನ್ನು ನಿಃಸಂಶಯವಾಗಿ ಕೊಡುವೆನು.

ಕೃತಮಿತ್ಯೇವ ದೈತ್ಯೇಂದ್ರಮುವಾಚ ಸ ಚ ವೈ ದ್ವಿಜಃ ।
ಪ್ರಹ್ಲಾದಸ್ತ್ವಬ್ರವೀತ್ ಪ್ರೀತೋ ಗೃಹ್ಯತಾಂ ವರಮಿತ್ಯುತ ॥೪೦॥

ಆ ಬ್ರಾಹ್ಮಣನು ದೈತ್ಯೇಂದ್ರನನ್ನು ಕುರಿತು ವರವು ಬೇಡ ಎಂದೇ ಹೇಳಿದನು. ಪ್ರಹ್ಲಾದನು ಪ್ರಸನ್ನನಾಗಿ ಪುನಃ ವರವನ್ನು ಕೇಳು ಎಂದು ಹೇಳಿದನು.

ಬ್ರಾಹ್ಮಣಃ

ಯದಿ ರಾಜನ್ ಪ್ರಸನ್ನಸ್ತ್ವಂ ಮಮ ಚೇಚ್ಛಸಿ ಚೇದ್ಧಿತಮ್ ।
ಭವತಃ ಶೀಲಮಿಚ್ಛಾಮಿ ಪ್ರಾಪ್ತುಮೇಷ ವರೋ ಮಮ ॥೪೧॥

ಎಲೈ ರಾಜನೇ! ನೀನು ಪ್ರಸನ್ನನಾಗಿ ನನ್ನ ಹಿತವನ್ನು ಬಯಸುವುದಾದರೆ ನಿನ್ನ ಶೀಲವನ್ನು ಪಡೆಯಲು ಬಯಸುತ್ತೇನೆ. ಇದೇ ನಾನು ಕೇಳುವ ವರ.

ಧೃತರಾಷ್ಟ್ರಃ

ತತಃ ಪ್ರೀತಶ್ಚ ದೈತ್ಯೇಂದ್ರೋ ಭಯಂ ಚಾಸ್ಯಾಭವನ್ಮಹತ್ ।
ವರೇ ಪ್ರದಿಷ್ಟೇ ವಿಪ್ರೇಣ ನಾಲ್ಪತೇಜಾಯಮಿತ್ಯುತ ॥೪೨॥

ಧೃತರಾಷ್ಟ್ರ – ಆಗ ದೈತ್ಯೇಂದ್ರನು ಸಂತೋಷಗೊಂಡನು. ಆದರೆ ವರವನ್ನು ತೆಗೆದುಕೊಂಡ ಈ ಬ್ರಾಹ್ಮಣನು ಅಲ್ಪ ತೇಜಸ್ಸಿನವನಲ್ಲ ಎಂದು ಅವನು ದೊಡ್ಡ ಭಯವನ್ನು ಹೊಂದಿದನು.

ಏವಮಸ್ತ್ವಿತಿ ತಂ ಪ್ರಾಹ ಪ್ರಹ್ಲಾದೋ ವಿಸ್ಮಿತಸ್ತದಾ ।
ಉಪಾಕೃತ್ಯ ತು ವಿಪ್ರಾಯ ವರಂ ದುಃಖಾನ್ವಿತೋಽಭವತ್ ॥೪೩॥

ಪ್ರಹ್ಲಾದನು ವಿಸ್ಮಯಗೊಂಡು ಹಾಗೆಯೇ ಆಗಲಿ ಎಂದು ಹೇಳಿದನು. ಬ್ರಾಹ್ಮಣನಿಗೆ ವರವನ್ನು ನೀಡಿ ದುಃಖಾನ್ವಿತನಾದನು.

ದತ್ತೇ ವರೇ ಗತೇ ವಿಪ್ರೇ ಚಿಂತಾऽऽಸೀನ್ಮಹತೀ ತತಃ ।
ಪ್ರಹ್ಲಾದಸ್ಯ ಮಹಾರಾಜ ನಿಶ್ಚಯಂ ನ ಚ ಜಗ್ಮಿವಾನ್ ॥೪೪॥

ಎಲೈ ಮಹಾರಾಜನೇ! ಬ್ರಾಹ್ಮಣನು ವರವನ್ನು ಪಡೆದು ಹೊರಟು ಹೋದ-ಮೇಲೆ ಪ್ರಹ್ಲಾದನಿಗೆ ದೊಡ್ಡ ಚಿಂತೆಯುಂಟಾಯಿತು. ಏನೂ ನಿಶ್ಚಯ ಮಾಡ-ಲಾಗಲಿಲ್ಲ.

ತಸ್ಯ ಚಿಂತಯತಸ್ತಾತ ಛಾಯಾಭೂತಂ ಮಹಾದ್ಯುತೇ।
ತೇಜೋ ವಿಗ್ರಹವತ್ ತಾತ ಶರೀರಮಜಹಾತ್ ತದಾ ॥೪೫॥

ಹೀಗೆ ಚಿಂತಿಸುತ್ತಿದ್ದ ಪ್ರಹ್ಲಾದನ ಶರೀರದಿಂದ ಎಲೈ ಮಹಾದ್ಯುತಿಯೇ! ಪ್ರಹ್ಲಾದನ ಶರೀರದ ಆಕಾರವನ್ನು ಧರಿಸಿದ ತೇಜೋರೂಪವಾದ ಇನ್ನೊಂದು ಶರೀರವು ಹೊರಬಂದಿತು.

ತಮಪೃಚ್ಛನ್ಮಹಾಕಾಯಂ ಪ್ರಹ್ಲಾದಃ ಕೋ ಭವಾನಿತಿ।
ಪ್ರತ್ಯಾಹ ನನು ಶೀಲೋಽಸ್ಮಿ ತ್ಯಕ್ತೋ ಗಚ್ಛಾಮ್ಯಹಂ ತ್ವಯಾ ॥೪೬॥

ಈ ಮಹಾಶರೀರವನ್ನು ಕುರಿತು ಪ್ರಹ್ಲಾದನು ನೀನು ಯಾರು? ಎಂದು ಕೇಳಿದನು. ಆ ವ್ಯಕ್ತಿಯು 'ನಾನು ಶೀಲ. ನೀನು ತ್ಯಜಿಸಿದುದರಿಂದ ನಾನು ಹೋಗುತ್ತಿದ್ದೇನೆ' ಎಂದು ಉತ್ತರವನ್ನು ನೀಡಿದನು.

ತಸ್ಮಿನ್ ದ್ವಿಜವರೇ ರಾಜನ್ ವತ್ಸ್ಯಾಮ್ಯಹಮನಿಂದಿತಮ್।
ಯೋಽಸೌ ಶಿಷ್ಯತ್ವಮಾಗಮ್ಯ ತ್ವಯಿ ನಿತ್ಯಂ ಸಮಾಹಿತಃ।
ಇತ್ಯುಕ್ತ್ವಾಽಂತರ್ಹಿತಂ ತದ್ ವೈ ಶಕ್ರಂ ಚಾನ್ವವಿಶತ್ ಪ್ರಭೋ ॥೪೭॥

ಎಲೈ ರಾಜನೇ! ಯಾವ ಬ್ರಾಹ್ಮಣಶ್ರೇಷ್ಠನು ನಿನ್ನ ಶಿಷ್ಯತ್ವವನ್ನು ವಹಿಸಿ, ನಿತ್ಯವೂ ನಿನ್ನ ಸೇವೆಯನ್ನು ಮಾಡಿದನೋ ಅಂತಹ ಅನಿಂದಿತನಾದ ಬ್ರಾಹ್ಮಣನಲ್ಲಿ ನಾನು ವಾಸವನ್ನು ಮಾಡುವೆನು ಎಂದು ಹೇಳಿ ಅಂತರ್ಧಾನವನ್ನು ಹೊಂದಿ ಇಂದ್ರನನ್ನು ಪ್ರವೇಶಿಸಿತು.

ತಸ್ಮಿಂಸ್ತೇಜಸಿ ಯಾತೇ ತು ತಾದೃಗ್ರೂಪಸ್ತತೋಽಪರಃ।
ಶರೀರಾನ್ನಿಃಸೃತಸ್ತಸ್ಯ ಕೋ ಭವಾನಿತಿ ಚಾಬ್ರವೀತ್ ॥೪೮॥

ಆ ತೇಜಸ್ಸು ಹೊರಟು ಹೋದ ಮೇಲೆ ಅದೇ ಆಕಾರದ ಇನ್ನೊಂದು ವಿಗ್ರಹವು ಪ್ರಹ್ಲಾದನ ಶರೀರದಿಂದ ಹೊರಗೆ ಬಂದಿತು. ಪ್ರಹ್ಲಾದನು ನೀನು ಯಾರು ಎಂದು ಕೇಳಿದನು.

ಧರ್ಮಂ ಪ್ರಹ್ಲಾದ ಮಾಂ ವಿದ್ಧಿ ಯತ್ರಾಸೌ ದ್ವಿಜಸತ್ತಮಃ।
ತತ್ರ ಯಾಸ್ಯಾಮಿ ದೈತ್ಯೇಂದ್ರ ಯತಃ ಶೀಲಂ ತತೋ ಹ್ಯಹಮ್ ॥೪೯॥

ಎಲೈ ಪ್ರಹ್ಲಾದನೇ! ನನ್ನನ್ನು ಧರ್ಮವೆಂದು ತಿಳಿ. ನಾನು ಆ ದ್ವಿಜಶ್ರೇಷ್ಠನು ಎಲ್ಲಿರುವನೋ ಅಲ್ಲಿಗೆ ಹೋಗುವೆನು. ಎಲೈ ದೈತ್ಯೇಂದ್ರನೇ! ಎಲ್ಲಿ ಶೀಲವಿರುತ್ತದೆಯೋ ಅಲ್ಲಿ ನಾನಿರುತ್ತೇನೆ. (ಎಂದು ಹೇಳಿತು).

ತತೋಽಪರೋ ಮಹಾರಾಜ ಪ್ರಜ್ವಲನ್ನಿವ ತೇಜಸಾ।
ಶರೀರಾನ್ನಿಃಸೃತಸ್ತಸ್ಯ ಪ್ರಹ್ಲಾದಸ್ಯ ಮಹಾತ್ಮನಃ ॥೫೦॥

ಎಲೈ ಮಹಾರಾಜನೇ! ಅನಂತರ ತನ್ನ ತೇಜಸ್ಸಿನಿಂದ ಜ್ವಲಿಸುತ್ತಿದ್ದ ಇನ್ನೊಂದು ವಿಗ್ರಹವು ಮಹಾತ್ಮನಾದ ಪ್ರಹ್ಲಾದನ ಶರೀರದಿಂದ ಹೊರಬಂದಿತು.

ಕೋ ಭವಾನಿತಿ ಪೃಷ್ಟಶ್ಚ ತಮಾಹ ಸ ಮಹಾದ್ಯುತಿಃ।
ಸತ್ಯಮಸ್ಮ್ಯಸುರೇಂದ್ರಾಗ್ರ್ಯ ಯಾಸ್ಯೇಽಹಂ ಧರ್ಮಮನ್ವಿಹ ॥೫೧॥

ನೀನು ಯಾರು ಎಂದು ಕೇಳಲ್ಪಟ್ಟ ಆ ಮಹಾತೇಜಸ್ಸು ಅವನನ್ನು ಕುರಿತು ಎಲೈ ಅಸುರಶ್ರೇಷ್ಠನೇ ನಾನು ಸತ್ಯ . ನಾನು ಈ ಲೋಕದಲ್ಲಿ ಧರ್ಮವನ್ನು ಹಿಂಬಾಲಿಸಿ ಹೋಗುವೆನು (ಎಂದು ಹೇಳಿತು.)

ತಸ್ಮಿನ್ನನುಗತೇ ಧರ್ಮಂ ಪುರುಷೇ ಪುರುಷೋಽಪರಃ।
ನಿಶ್ಚಕ್ರಾಮ ತತಸ್ತಸ್ಮಾತ್ ಪೃಷ್ಟಶ್ಚಾಹ ಮಹಾತ್ಮನಾ।
ವೃತ್ತಂ ಪ್ರಹ್ಲಾದ ಮಾಂ ವಿದ್ಧಿ ಯತಃ ಸತ್ಯಂ ತತೋ ಹ್ಯಹಮ್ ॥೫೨॥

ಆ ಧರ್ಮಪುರುಷನು ಹೋದ ಮೇಲೆ ಇನ್ನೊಬ್ಬ ಪುರುಷನು ಪ್ರಹ್ಲಾದನ ದೇಹದಿಂದ ಹೊರಗೆ ಬಂದನು. ಮಹಾತ್ಮನಾದ ಪ್ರಹ್ಲಾದನಿಂದ ನೀನು ಯಾರು ಎಂದು ಕೇಳಲ್ಪಟ್ಟು, ಎಲೈ ಪ್ರಹ್ಲಾದನೇ ನನ್ನನ್ನು ವೃತ್ತ (ಒಳ್ಳೆಯ ನಡತೆ) ಎಂದು ತಿಳಿ. ಎಲ್ಲಿ ಸತ್ಯವಿರುತ್ತದೆಯೋ ಅಲ್ಲಿ ನಾನಿರುತ್ತೇನೆ (ಎಂದು ಹೇಳಿದನು).

ತಸ್ಮಿನ್ ಗತೇ ಮಹಾಶ್ವೇತಃ ಶರೀರಾತ್ ತಸ್ಯ ನಿರ್ಯಯೌ।
ಪೃಷ್ಟಶ್ಚಾಹ ಬಲಂ ವಿದ್ಧಿ ಯತೋ ವೃತ್ತಮಹಂ ತತಃ।
ಇತ್ಯುಕ್ತ್ವಾ ಚ ಯಯೌ ತತ್ರ ಯತೋ ವೃತ್ತಂ ನರಾಧಿಪ ॥೫೩॥

ಎಲೈ ನರಾಧಿಪನೇ! ವೃತ್ತವು ಹೊರಟು ಹೋದ ಮೇಲೆ ಮಹಾಶ್ವೇತವರ್ಣದ ಇನ್ನೊಬ್ಬ ಪುರುಷನು ಬಂದನು. ಹಾಗೆಯೇ ಪ್ರಶ್ನೆ ಮಾಡಲ್ಪಟ್ಟ ಅವನು ನನ್ನನ್ನು ಬಲವೆಂದು ತಿಳಿ. ಎಲ್ಲಿ ವೃತ್ತವಿರುತ್ತದೆಯೋ ಅಲ್ಲಿ ನಾನಿರುತ್ತೇನೆ ಎಂದು ಹೇಳಿ ವೃತ್ತವನ್ನು ಹಿಂಬಾಲಿಸಿ ಹೊರಟು ಹೋದನು.

ತತಃ ಪ್ರಭಾಮಯೀ ದೇವೀ ಶರೀರಾತ್ ತಸ್ಯ ನಿರ್ಯಯೌ।
ತಾಮಪೃಚ್ಛದ್ ಸ ದೈತ್ಯೇಂದ್ರಃ ಸಾ ಶ್ರೀರಿತ್ಯೇವಮಬ್ರವೀತ್ ॥೫೪॥

ಅನಂತರ ತೇಜೋಮಯಿಯಾದ ಒಬ್ಬ ವನಿತೆಯು ಅವನ ಶರೀರದಿಂದ ಹೊರಬಂದಳು. ದೈತ್ಯೇಂದ್ರನು ಅವಳನ್ನು ಕುರಿತು ನೀನು ಯಾರು ಎಂದು ಕೇಳಿದನು. ಅವಳು ನಾನು ಸಂಪತ್ತು ಎಂದು ಹೇಳಿದಳು.

ಉಷಿತಾಸ್ಮಿ ಸುಖಂ ವೀರ ತ್ವಯಿ ಸತ್ಯಪರಾಕ್ರಮೇ।
ತ್ವಯಾ ತ್ಯಕ್ತಾ ಗಮಿಷ್ಯಾಮಿ ಬಲಂ ಯತ್ರ ತತೋ ಹ್ಯಹಮ್ ॥೫೫॥

ಎಲೈ ವೀರನೇ! ಸತ್ಯಪರಾಕ್ರಮನಾದ ನಿನ್ನಲ್ಲಿ ನಾನು ಸುಖವಾಗಿ ವಾಸಿಸುತ್ತಿದ್ದೆನು. ನೀನು ತ್ಯಜಿಸಿದ ಕಾರಣದಿಂದ ಎಲ್ಲಿ ಬಲವಿದೆಯೋ ಅಲ್ಲಿಗೆ ನಾನು ಹೋಗುವೆನು (ಎಂದು ಹೇಳಿದಳು.).

ತತೋ ಭಯಂ ಪ್ರಾದುರಾಸೀತ್ ಪ್ರಹ್ಲಾದಸ್ಯ ಮಹಾತ್ಮನಃ।
ಅಪೃಚ್ಛತ ಚ ತಾಂ ಭೂಯಃ ಕ್ವ ಯಾಸಿ ಕಮಲಾಲಯೇ ॥೫೬॥

ತ್ವಂ ಹಿ ಸತ್ಯವ್ರತಾ ದೇವೀ ಲೋಕಸ್ಯ ಪರಮೇಶ್ವರೀ।
ಕಶ್ಚಾಸೌ ಬ್ರಾಹ್ಮಣಶ್ರೇಷ್ಠಸ್ತತ್ತ್ವಮಿಚ್ಛಾಮಿ ವೇದಿತುಮ್ ॥೫೭॥

ಆಗ ಮಹಾತ್ಮನಾದ ಪ್ರಹ್ಲಾದನಿಗೆ ಭಯವುಂಟಾಯಿತು. ಆ ದೇವಿಯನ್ನು ಕುರಿತು ಎಲೌ ಕಮಲಾಲಯೇ! ಎಲ್ಲಿಗೆ ಹೋಗುತ್ತೀಯೆ; ಎಲೌ ದೇವಿಯೇ! ನೀನು ಸತ್ಯವ್ರತಳಾದವಳು. ಮತ್ತು ಲೋಕಕ್ಕೆ ಪ್ರಭುವಾದವಳು. ನನ್ನ ಬಳಿ ಇದ್ದ ಆ ಬ್ರಾಹ್ಮಣಶ್ರೇಷ್ಠನು ಯಾರು ಎಂದು ಕೇಳಲು ಬಯಸುತ್ತೇನೆ ಎಂದು ಹೇಳಿದನು.

ಶ್ರೀಃ

ಸ ಶಕ್ರೋ ಬ್ರಹ್ಮಚಾರೀ ಚ ಯಸ್ತ್ವಯಾ ಚೋಪಶಿಕ್ಷಿತಃ।
ತ್ರೈಲೋಕ್ಯೇ ತು ಯದೈಶ್ವರ್ಯಂ ತತ್ ತೇನಾಪಹೃತಂ ಪ್ರಭೋ ॥೫೮॥

ಶ್ರೀಃ – ನಿನ್ನಲ್ಲಿ ವಾಸ ಮಾಡಿ ನಿನ್ನಿಂದ ವಿದ್ಯೆಯನ್ನು ಗಳಿಸಿದ ಆ ಬ್ರಹ್ಮಚಾರಿಯು ಇಂದ್ರ . ಎಲೈ ಪ್ರಭುವೇ! ನಿನ್ನಲ್ಲಿದ್ದ ಮೂರು ಲೋಕದ ಐಶ್ವರ್ಯವು ಅವನಿಂದ ಅಪಹೃತವಾಯಿತು.

ಶೀಲೇನ ಹಿ ತ್ವಯಾ ಲೋಕಾಃ ಸರ್ವೇ ಧರ್ಮಜ್ಞ ನಿರ್ಜಿತಾಃ।
ತದ್ ವಿಜ್ಞಾಯ ಮಹೇಂದ್ರೇಣ ತವ ಶೀಲಂ ಹೃತಂ ಪ್ರಭೋ ॥೫೯॥

ಎಲೈ ಧರ್ಮಜ್ಞನೇ! ನೀನು ಶೀಲದಿಂದ ಎಲ್ಲ ಲೋಕಗಳನ್ನೂ ಜಯಿಸಿದ್ದಿ. ಎಲೈ ಪ್ರಭುವೇ! ಅದನ್ನು ತಿಳಿದ ದೇವೇಂದ್ರನು ನಿನ್ನ ಶೀಲವನ್ನು ಅಪಹರಿಸಿದನು.

ಧರ್ಮಃ ಸತ್ಯಂ ತಥಾ ವೃತ್ತಂ ಬಲಂ ಚೈವ ತಥಾ ಹ್ಯಹಮ್ ।
ಶೀಲಮೂಲಾ ಮಹಾಪ್ರಾಜ್ಞ ಸದಾ ನಾಸ್ತ್ಯತ್ರ ಸಂಶಯಃ ॥೬೦॥

ಎಲೈ ಮಹಾಪ್ರಾಜ್ಞನೇ! ಧರ್ಮ, ಸತ್ಯ , ವೃತ್ತ, ಬಲ ಹಾಗೂ ನಾನು ಎಲ್ಲರೂ ಯಾವಾಗಲೂ ಶೀಲಮೂಲರಾದವರು. ಈ ವಿಷಯದಲ್ಲಿ ಸಂಶಯವಿಲ್ಲ.

ಭೀಷ್ಮಃ

ಏವಮುಕ್ತ್ವಾ ಗತಾ ತು ಶ್ರೀಸ್ತೇ ಚ ಸರ್ವೇ ಯುಧಿಷ್ಠಿರ।
ದುರ್ಯೋಧನಸ್ತು ಪಿತರಂ ಭೂಯ ಏವಾಬ್ರವೀದಿದಮ್ ॥೬೧॥

ಶೀಲಸ್ಯ ತತ್ತ್ವಮಿಚ್ಛಾಮಿ ವೇತ್ತುಂ ಕೌರವನಂದನ।
ಪ್ರಾಪ್ಯತೇ ಚ ಯಥಾ ಶೀಲಂ ತಮುಪಾಯಂ ವದಸ್ವಮೇ ॥೬೨॥

ಭೀಷ್ಮರು – ಎಲೈ ಯುಧಿಷ್ಠಿರನೇ! ಹೀಗೆ ಹೇಳಿ ಲಕ್ಷ್ಮ್ಯಯು ಮತ್ತು ಅವರೆಲ್ಲರೂ ಹೊರಟುಹೋದರು. ದುರ್ಯೋಧನನು ತಂದೆಯನ್ನು ಕುರಿತು ಪುನಃ ಎಲೈ ಕೌರವನಂದನನೇ! ಶೀಲದ ತತ್ವವನ್ನು ತಿಳಿಯಲು ಬಯಸುತ್ತೇನೆ. ಶೀಲವನ್ನು ಹೇಗೆ ಸಂಪಾದಿಸುವುದು? ಆ ಉಪಾಯವನ್ನು ನನಗೆ ಹೇಳು ಎಂದು ಕೇಳಿದನು.

ಧೃತರಾಷ್ಟ್ರಃ

ಸೋಪಾಯಂ ಪೂರ್ವಮುದ್ದಿಷ್ಟಂ ಪ್ರಹ್ಲಾದೇನ ಮಹಾತ್ಮನಾ।
ಸಂಕ್ಷೇಪತಸ್ತು ಶೀಲಸ್ಯ ಶೃಣು ಪ್ರಾಪ್ತಿಂ ನರಾಧಿಪ ॥೬೩॥

ಧೃತರಾಷ್ಟ್ರ – ಮಹಾತ್ಮನಾದ ಪ್ರಹ್ಲಾದನು ಹಿಂದೆ ಹೇಳಿದ ಉಪಾಯಸಹಿತವಾಗಿ ಶೀಲವನ್ನು ಸಂಪಾದಿಸುವ ರೀತಿಯನ್ನು ಸಂಕ್ಷೇಪವಾಗಿ ಕೇಳು.

ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ।
ಅನುಗ್ರಹಶ್ಚ ದಾನಂ ಚ ಶೀಲಮೇತತ್ ಪ್ರಶಸ್ಯತೇ ॥೬೪॥

ಕರ್ಮದಿಂದಾಗಲೀ ಮನಸ್ಸಿನಿಂದಾಗಲೀ ಮಾತಿನಿಂದಾಗಲೀ ಯಾವ ಪ್ರಾಣಿಗೂ ದ್ರೋಹವನ್ನು ಮಾಡದಿರುವುದು. ಎಲ್ಲರನ್ನೂ ಅನುಗ್ರಹಿಸುವುದು ಮತ್ತು ದಾನವನ್ನು ಮಾಡುವುದು ಶೀಲವೆಂದು ಪ್ರಶಂಸಿಸಲ್ಪಡುತ್ತದೆ.

ಯದನ್ಯೇಷಾಂ ಹಿತಂ ನ ಸ್ಯಾದಾತ್ಮನಃ ಕರ್ಮ ಪೌರುಷಮ್।
ಅಪತ್ರಪೇತ ವಾ ಯೇನ ನ ತತ್ ಕುರ್ಯಾತ್ ಕಥಂಚನ ॥೬೫॥

ತನ್ನ ಯಾವ ಪೌರುಷಕಾರ್ಯದಿಂದ ಇನ್ನೊಬ್ಬನಿಗೆ ಹಿತವಾಗುವುದಿಲ್ಲವೋ ಅಂತಹ ಕಾರ್ಯವನ್ನು ಮಾಡಲು ನಾಚಿಕೊಂಡು ಆ ಕಾರ್ಯವನ್ನು ಸರ್ವಥಾ ಮಾಡಬಾರದು.

ತತ್ತು ಕರ್ಮ ತಥಾ ಕುರ್ಯಾದ್ ಯೇನ ಶ್ಲಾಘೇತ ಸಂಸದಿ।
ಏತಚ್ಛೀಲಂ ಸಮಾಸೇನ ಕಥಿತಂ ಕುರುಸತ್ತಮ ॥೬೬॥

ಎಲೈ ಕುರುಶ್ರೇಷ್ಠನೇ! ಯಾವ ಕರ್ಮವನ್ನು ಮಾಡಿದರೆ ಸಭೆಯಲ್ಲಿ ಅವನಿಗೆ ಪ್ರಶಂಸೆ ಉಂಟಾಗುತ್ತದೆಯೋ ಅಂತಹ ಕರ್ಮವನ್ನು ಮಾಡಬೇಕು. ಇದು ಸಂಕ್ಷೇಪ -ವಾಗಿ ಈ ಶೀಲವನ್ನು ನಿನಗೆ ಹೇಳಿದ್ದೇನೆ.

ಯದಪ್ಯಶೀಲಾ ನೃಪತೇ ಪ್ರಾಪ್ನುವಂತಿ ಕ್ವಚಿಚ್ಛ್ರಿಯಮ್ ।
ನ ಭುಂಜತೇ ಚಿರಂ ತಾತ ಸಮೂಲಾಶ್ಚ ಪತಂತಿ ತೇ ॥೬೭॥

ಎಲೈ ರಾಜನೇ! ಯದ್ಯಪಿ ಶೀಲವಿಲ್ಲದ ರಾಜರೂ ಸಹ ಒಮ್ಮೊಮ್ಮೆ ಸಂಪತ್ತನ್ನು ಪಡೆಯುತ್ತಾರೆ. ಆದರೆ ಎಲೈ ಪ್ರೀತಿಪಾತ್ರನೇ ಅವರು ಬಹುಕಾಲ ಅದನ್ನು ಭೋಗಿಸುವುದಿಲ್ಲ. ಮತ್ತು ಮೂಲಸಹಿತರಾಗಿ ಪತನವನ್ನು ಹೊಂದುತ್ತಾರೆ.

ಏತದ್ ವಿದಿತ್ವಾ ತತ್ತ್ವೇನ ಶೀಲವಾನ್ ಭವ ಪುತ್ರಕ।
ಯದೀಚ್ಛಸಿ ಶ್ರಿಯಂ ತಾತ ಸುವಿಶಿಷ್ಟಾಂ ಯುಧಿಷ್ಠಿರಾತ್ ॥೬೮॥

ಎಲೈ ಪುತ್ರನೇ! ಪ್ರೀತಿಪಾತ್ರನೇ! ಯುಧಿಷ್ಠಿರನ ಬಳಿ ಇರುವುದಕ್ಕಿಂತ ದೊಡ್ಡ ಸಂಪತ್ತನ್ನು ನೀನು ಬಯಸುವುದಾದರೆ ನನ್ನ ಈ ಮಾತುಗಳನ್ನು ಚೆನ್ನಾಗಿ ತಿಳಿದು ಶೀಲವಂತನಾಗು.

ಭೀಷ್ಮಃ

ಏತತ್ ಕಥಿತವಾನ್ ಪುತ್ರೇ ಧೃತರಾಷ್ಟ್ರೋ ನರಾಧಿಪಃ।
ಏತತ್ ಕುರುಷ್ವ ಕೌಂತೇಯ ತತಃ ಪ್ರಾಪ್ಸ್ಯಸಿ ತತ್ಫಲಮ್ ॥೬೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಪಂಚವಿಂಶತ್ಯಧಿಕಶತತಮೋಽಧ್ಯಾಯಃ ॥೧೨೫॥

ಭೀಷ್ಮರು – ಧೃತರಾಷ್ಟ್ರರಾಜನು ಈ ವಿಷಯವನ್ನು ಪುತ್ರನಾದ ದುರ್ಯೋ-

ಧನನಿಗೆ ಹೇಳಿದನು. ಎಲೈ ಕೌಂತೇಯನೇ! ನೀನು ಅದನ್ನು ಅನುಸರಿಸು. ಅದರಿಂದ ಆ ಫಲವನ್ನು ಹೊಂದುವಿ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೫ನೆಯ ಅಧ್ಯಾಯವು ಮುಗಿಯಿತು.

೧೨೬. ನೂರಇಪ್ಪತ್ತಾರನೆಯ ಅಧ್ಯಾಯ

ಋಷಭಸುಮಿತ್ರಸಂವಾದ; ಆಸೆಯಿಂದ ಸುಮಿತ್ರನ ಮೃಗಾನುಧಾವನ.

ಯುಧಿಷ್ಠಿರಃ

ಶೀಲಂ ಪ್ರಧಾನಂ ಪುರುಷೇ ಕಥಿತಂ ತೇ ಪಿತಾಮಹ।
ಕಥಮಾಶಾ ಸಮುತ್ಪನ್ನಾ ಯಾ ಚ ಸಾ ತದ್ ವದಸ್ವ ಮೇ ॥೧॥

ಯುಧಿಷ್ಠಿರ – ಎಲೈ ಪಿತಾಮಹನೇ! ಪುರುಷರಲ್ಲಿ ಶೀಲವು ಪ್ರಧಾನವಾದುದು ಎಂದು ನೀನು ಹೇಳಿದ್ದೀಯೆ. ಆಸೆಯು ಹೇಗೆ ಉತ್ಪನ್ನವಾಯಿತು ಮತ್ತು ನನಗೆ ಅದರ ಸ್ವರೂಪಗಳನ್ನು ಹೇಳು.

ಸಂಶಯೋ ಮೇ ಮಹಾನೇಷ ಸಮುತ್ಪನ್ನಃ ಪಿತಾಮಹ।
ಛೇತ್ತಾ ಚ ತಸ್ಯ ನಾನ್ಯೋಽಸ್ತಿ ತ್ವತ್ತಃ ಪರಪುರಂಜಯ ॥೨॥

ಎಲೈ ಪಿತಾಮಹನೇ! ಈ ವಿಷಯದಲ್ಲಿ ನನಗೆ ದೊಡ್ಡ ಸಂಶಯವುಂಟಾಗಿದೆ. ಎಲೈ ಪರಪುರಂಜಯನೇ! ಆ ಸಂಶಯವನ್ನು ಪರಿಹರಿಸುವವರು ನಿನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲ.

ಪಿತಾಮಹಾಶಾ ಮಹತೀ ಮಮಾಸೀದ್ಧಿ ಸುಯೋಧನೇ।
ಪ್ರಾಪ್ತೇ ಯುದ್ಧೇ ತು ತದ್ ಯುಕ್ತಂ ತತ್ಕರ್ತಾಽಯಮಿತಿ ಪ್ರಭೋ ॥೩॥

ಎಲೈ ಪಿತಾಮಹನೇ! ಪ್ರಭುವೇ! ಯುದ್ಧವು ಪ್ರಾರಂಭವಾದಾಗ ಸುಯೋಧನನು ಯುದ್ಧದಲ್ಲಿ ಯುಕ್ತವಾದುದನ್ನೇ ಮಾಡುವನು ಎಂದು ನನಗೆ ದೊಡ್ಡ ಆಸೆಯಿದ್ದಿತು.

ಸರ್ವಸ್ಯಾಶಾ ಸುಮಹತೀ ಪುರುಷಸ್ಯೋಪಜಾಯತೇ।
ತಸ್ಯಾಂ ವಿಹನ್ಯಮಾನಾಯಾಂ ದುಃಖೋ ಮೃತ್ಯುರಸಂಶಯಮ್ ॥೪॥

ಎಲ್ಲ ಜೀವರಿಗೂ ಆಸೆಯು ಬಹಳ ದೊಡ್ಡದಾಗಿ ಉಂಟಾಗುತ್ತದೆ. ಆಸೆಯು ಭಗ್ನವಾದರೆ ದುಃಖವೂ ಕೆಲವೊಮ್ಮೆ ಮರಣವೂ ನಿಃಸಂಶಯವಾಗಿ ಉಂಟಾಗುತ್ತದೆ.

ಸೋಽಹಂ ಹತಾಶೋ ದುರ್ಬುದ್ಧಿಃ ಕೃತಸ್ತೇನ ದುರಾತ್ಮನಾ।
ಧಾರ್ತರಾಷ್ಟ್ರೇಣ ರಾಜೇಂದ್ರ ಪಶ್ಯ ಮಂದಾತ್ಮತಾಂ ಮಮ ॥೫॥

ದುಷ್ಟನಾದ ಸುಯೋಧನನು ದುರ್ಬುದ್ಧಿಯುಳ್ಳ ನನ್ನ ಆಸೆಯ ಭಂಗವನ್ನು ಮಾಡಿದನು. ಎಲೈ ರಾಜೇಂದ್ರನೇ! ನಾನು ಎಷ್ಟು ಜ್ಞಾನಶೂನ್ಯನೆಂದು ನೋಡು.

ಆಶಾಂ ಮಹತ್ತರಾಂ ಮನ್ಯೇ ಪರ್ವತಾದಪಿ ಸದ್ರುಮಾತ್।
ಆಕಾಶಾದಪಿ ವಾ ರಾಜನ್ನಪ್ರಮೇಯೈವ ವಾ ಪುನಃ ॥೬॥

ಆಸೆಯು ವೃಕ್ಷದಿಂದ ಕೂಡಿರುವ ಪರ್ವತಗಳಿಗಿಂತಲೂ ಅಥವಾ ಆಕಾಶಕ್ಕಿಂತಲೂ ಎತ್ತರವಾದುದೆಂದು ನಾನು ತಿಳಿಯುತ್ತೇನೆ. ಅಥವಾ ಅದು ನಾವು ತಿಳಿಯಲಾರದಷ್ಟು ಎತ್ತರವನ್ನು ಹೊಂದಿದೆ.

ಏಷಾ ಚೈವ ಕುರುಶ್ರೇಷ್ಠ ದುರ್ವಿಚಿಂತ್ಯಾ ಸುದುರ್ಲಭಾ।
ದುರ್ಲಭತ್ವಾಚ್ಚ ಪಶ್ಯಾಮಿ ಕಿಮನ್ಯದ್ ದುರ್ಲಭಂ ತತಃ ॥೭॥

ಎಲೈ ಕುರುಶ್ರೇಷ್ಠನೇ! ಆಸೆಯನ್ನು ಚಿಂತಿಸುವುದು ಕಷ್ಟಕರವಾದುದು. ಮತ್ತು ಆಸೆಯನ್ನು ಜಯಿಸುವುದು ಬಹಳ ಕಷ್ಟದ ಕಾರ್ಯ. ಆಸೆಯನ್ನು ಜಯಿಸುವುದು ಕಷ್ಟವಾದುದರಿಂದಲೇ ಅದಕ್ಕಿಂತ ಕಷ್ಟಕರವಾದ ಕಾರ್ಯವು ಯಾವುದು ಎಂದು ನಾನು ಚಿಂತಿಸುತ್ತಿದ್ದೇನೆ.

ಭೀಷ್ಮಃ

ಅತ್ರ ತೇ ವರ್ತಯಿಷ್ಯಾಮಿ ಯುಧಿಷ್ಠಿರ ನಿಬೋಧ ತತ್।
ಇತಿಹಾಸಂ ಸುಮಿತ್ರಸ್ಯ ನಿರ್ವೃತ್ತಮೃಷಭಸ್ಯ ಚ ॥೮॥

ಭೀಷ್ಮರು – ಎಲೈ ಯುಧಿಷ್ಠಿರನೇ! ನಿನಗೆ ಈ ವಿಷಯದಲ್ಲಿ ವೃಷಭ ಎಂಬ ಋಷಿಗೂ ಸುಮಿತ್ರ ಎಂಬ ರಾಜನಿಗೂ ಸಂಬಂಧಿಸಿ ನಡೆದ ಒಂದು ಇತಿಹಾಸವನ್ನು ಹೇಳುವೆನು. ಅದನ್ನು ಕೇಳು.

ಸುಮಿತ್ರೋ ನಾಮ ರಾಜರ್ಷಿರ್ಹೈಹಯೋ ಮೃಗಯಾಂ ಗತಃ।
ಸಸಾರ ಸ ಮೃಗಂ ವಿದ್ಧ್ವಾ ಬಾಣೇನ ನತಪರ್ವಣಾ ॥೯॥

ಸುಮಿತ್ರನೆಂಬ ಹೈಹಯಕುಲದ ರಾಜರ್ಷಿಯು ಬೇಟೆಗೆ ಹೊರಟನು. ಅವನು ಬಾಗಿದ ತುದಿಯುಳ್ಳ ಬಾಣದಿಂದ ಒಂದು ಮೃಗವನ್ನು ಹೊಡೆದು ಅದನ್ನು ಹಿಂಬಾಲಿಸಿದನು.

ಸ ಮೃಗೋ ಬಾಣಮಾದಾಯ ಯಯಾವಮಿತವಿಕ್ರಮಃ।
ಸ ಚ ರಾಜಾ ಬಲೀ ತೂರ್ಣಂ ಸಸಾರ ಮೃಗಮಂತಿಕಾತ್ ॥೧೦॥

ಬಹಳಪರಾಕ್ರಮಶಾಲಿಯಾಗಿದ್ದ ಆ ಮೃಗವು ಆ ಬಾಣವು ನೆಟ್ಟಂತೆಯೇ ಹೊರಟು ಹೋಯಿತು. ಬಲಿಷ್ಠನಾದ ರಾಜನೂ ಸಹ ಮೃಗಕ್ಕೆ ಬಹಳ ಸಮೀಪದಿಂದಲೇ ಅದನ್ನು ಹಿಂಬಾಲಿಸಿದನು.

ತತೋ ನಿಮ್ನಂ ಸ್ಥಲಂ ಚೈವ ಸ ಮೃಗೋಽದ್ರವದಾಶುಗಃ।
ಮುಹೂರ್ತಮೇವ ರಾಜೇಂದ್ರ ಸಮೇನ ಸ ಪಥಮಾಗಮತ್ ॥೧೧॥

ಅನಂತರ ವೇಗವಾಗಿ ಸಾಗುವ ಆ ಮೃಗವು ಉಬ್ಬು ತಗ್ಗುಗಳನ್ನು ದಾಟುತ್ತಾ ಓಡಿಹೋಯಿತು. ಎಲೈ ರಾಜೇಂದ್ರನೇ! ಒಂದು ಮುಹೂರ್ತದ ವರೆಗೆ ಮಾತ್ರ ಅದು ಸಮತಟ್ಟಾದ ದಾರಿಯಲ್ಲಿ ನಡೆದಿತ್ತು.

ತತಃ ಸ ರಾಜಾ ತಾರುಣ್ಯಾದೌರಸೇನ ಬಲೇನ ಚ।
ಸಸಾರ ಬಾಣಾಸನಭೃತ್ ಸಖಡ್ಗೋ ಹಂಸವತ್ ತದಾ ॥೧೨॥

ಆಗ ಆ ರಾಜನು ತನ್ನ ತಾರುಣ್ಯದಿಂದಲೂ ಬಲದಿಂದಲೂ ಕೂಡಿದವನಾಗಿ ಧನುಸ್ಸನ್ನೂ ಖಡ್ಗವನ್ನೂ ಹಿಡಿದು ಹಂಸದಂತೆ ಆ ಮೃಗವನ್ನು ಹಿಂಬಾಲಿಸಿದನು.

ತೀರ್ತ್ವಾ ನದಾನ್ ನದೀಶ್ಚೈವ ಪಲ್ವಲಾನಿ ವನಾನಿ ಚ।
ಅತಿಕ್ರಮ್ಯಾಭ್ಯತಿಕ್ರಮ್ಯ ಸಸಾರೈವ ವನೇ ಚರನ್ ॥೧೩॥

ಆ ಮೃಗವಾದರೋ ನದಿಗಳನ್ನೂ, ನದಗಳನ್ನೂ, ಜೌಗುಪ್ರದೇಶಗಳನ್ನೂ, ಕಾಡುಗಳನ್ನೂ ದಾಟಿ ದಾಟಿ ಕಾಡಿನಲ್ಲಿ ಮುಂದೆ ಸಾಗಿತು.

ಸ ತು ಕಾಮಾನ್ಮೃಗೋ ರಾಜನ್ನಾಸಾದ್ಯಾಸಾದ್ಯ ತಂ ನೃಪಮ್।
ಪುನರಭ್ಯೇತಿ ಜವನೋ ಜವೇನ ಮಹತಾ ತತಃ ॥೧೪॥

ಎಲೈ ರಾಜನೇ! ಆ ಮೃಗವು ತನ್ನ ಇಚ್ಛೆಯಿಂದಲೇ ರಾಜನ ಸಮೀಪದಲ್ಲಿ ಸಿಲುಕಿ ಸಿಲುಕಿ ಪುನಃ ಬಹಳ ವೇಗದಿಂದ ಅಲ್ಲಿಂದ ಮುಂದಕ್ಕೆ ಓಡುತ್ತಿದ್ದಿತು.

ಸ ತಸ್ಯ ಬಾಣೈರ್ಬಹುಭಿಃ ಸಮಭ್ಯಸ್ತೋ ವನೇಚರಃ।
ಪ್ರಕ್ರೀಡನ್ನಿವ ರಾಜೇಂದ್ರ ಪುನರಭ್ಯೇತಿ ಚಾಂತಿಕಮ್ ॥೧೫॥

ಆ ರಾಜನು ಆ ವನಚರಪ್ರಾಣಿಗೆ ಅನೇಕ ಬಾಣಗಳಿಂದ ಹೊಡೆದರೂ ಎಲೈ ರಾಜೇಂದ್ರನೇ! ಅದು ಆಟ ಆಡುವಂತೆ ಪುನಃ ರಾಜನಿಗೆ ಸಮೀಪದಲ್ಲಿ ಬರುತ್ತಿದ್ದಿತು.

ಪುನಶ್ಚ ಜವಮಾಸ್ಥಾಯ ಜವನೋ ಮೃಗಯೂಥಪಃ।
ಅತೀತ್ಯಾತೀತ್ಯ ರಾಜೇಂದ್ರ ಪುನರಭ್ಯೇತಿ ಚಾಂತಿಕಮ್ ॥೧೬॥

ಎಲೈ ರಾಜೇಂದ್ರನೇ! ವೇಗಶಾಲಿಯಾದ ಆ ಮೃಗರಾಜನು ಪುನಃ ವೇಗವನ್ನು ಹೊಂದಿ ದೂರ ದೂರ ಹೋಗಿ ಪುನಃ ರಾಜನ ಸಮೀಪಕ್ಕೆ ಬರುತ್ತಿದ್ದಿತು.

ತಸ್ಯ ಮರ್ಮಚ್ಛಿದಂ ಘೋರಂ ಸುಮಿತ್ರೋಽಮಿತ್ರಕರ್ಶನಃ।
ಸಮಾದಾಯ ಶರಶ್ರೇಷ್ಠಂ ಕಾರ್ಮುಕಾನ್ನಿರವಾಸೃಜತ್ ॥೧೭॥

ಶತ್ರುಕರ್ಶನನಾದ ಸುಮಿತ್ರನು ಮರ್ಮಭೇದಿಯಾದ ಒಂದು ಶ್ರೇಷ್ಠ ಬಾಣವನ್ನು ತೆಗೆದುಕೊಂಡು ಬಿಲ್ಲಿನಲ್ಲಿ ಹೂಡಿ ಪ್ರಯೋಗಿಸಿದನು.

ತತೋ ಗವ್ಯೂತಿಮಾತ್ರೇಣ ಮೃಗಯೂಥಪಯೂಥಪಃ।
ತಸ್ಯ ಬಾಣಪಥಂ ತ್ಯಕ್ತ್ವಾ ತಸ್ಥಿವಾನ್ ಪ್ರಹಸನ್ನಿವ ॥೧೮॥

ಆಗ ಆ ಮೃಗರಾಜನು ಒಂದು ಗಾವುದ ದೂರದಲ್ಲಿ ಆ ಬಾಣದ ಮಾರ್ಗವನ್ನು ತಪ್ಪಿಸಿ ನಗುವವನಂತೆ ನಿಂತುಕೊಂಡಿತು.

ತಸ್ಮಿನ್ ನಿಪತಿತೇ ಬಾಣೇ ಭೂಮೌ ಪ್ರಜ್ವಲಿತೇ ತತಃ।
ಪ್ರವಿವೇಶ ಮಹಾರಣ್ಯಂ ಮೃಗೋ ರಾಜಾऽಪ್ಯಥಾದ್ರವತ್ ॥೧೯॥

ಆ ಜ್ವಲಿಸುವ ಬಾಣವು ಭೂಮಿಯ ಮೇಲೆ ಬೀಳುತ್ತಿರಲು ಮೃಗವು ಮಹಾ-ರಣ್ಯವನ್ನು ಪ್ರವೇಶಿಸಿತು. ರಾಜನು ಪುನಃ ಅದರ ಹಿಂದೆ ಓಡಿದನು.

ಪ್ರವಿಶ್ಯ ತು ಮಹಾರಣ್ಯಂ ತಾಪಸಾನಾಮಥಾಶ್ರಮಮ್।
ಆಸಸಾದ ತತೋ ರಾಜಾ ಶ್ರಾಂತಶ್ಚೋಪಾವಿಶತ್ ಪುನಃ ॥೨೦॥

ಅರಣ್ಯವನ್ನು ಪ್ರವೇಶಿಸಿದ ರಾಜನು ಒಂದು ಋಷ್ಯಾಶ್ರಮವನ್ನು ತಲುಪಿ ದಣಿದು ಅಲ್ಲಿ ಕುಳಿತುಕೊಂಡನು.

ತಂ ಕಾರ್ಮುಕಧರಂ ದೃಷ್ಟ್ವಾ ಶ್ರಮಾರ್ತಂ ಕ್ಷುಧಿತಂ ತದಾ।
ಸಮೇತ್ಯ ಋಷಯಸ್ತಸ್ಮಿನ್ ಪೂಜಾಂ ಚಕ್ರುರ್ಯಥಾವಿಧಿ ॥೨೧॥

ಬಿಲ್ಲನ್ನು ಧರಿಸಿ, ಹಸಿವು ಮತ್ತು ಶ್ರಮಗಳಿಂದ ಬಳಲಿದ ಅವನನ್ನು ನೋಡಿ ಅಲ್ಲಿನ ಋಷಿಗಳು ಒಟ್ಟಾಗಿ ಬಂದು ಅವನನ್ನು ವಿಧಿವತ್ತಾಗಿ ಪೂಜಿಸಿದರು.

ಋಷಯೋ ರಾಜಶಾರ್ದೂಲಮಪೃಚ್ಛನ್ ಸ್ವಂ ಪ್ರಯೋಜನಮ್।
ಕೇನ ಭದ್ರಮುಖಾರ್ಥೇನ ಸಂಪ್ರಾಪ್ತೋऽಸಿ ತಪೋವನಮ್ ॥೨೨॥

ಋಷಿಗಳು ಆ ರಾಜಶಾರ್ದೂಲನನ್ನು ಕುರಿತು ಎಲೈ ಭದ್ರಮುಖನೇ! ಯಾವ ಉದ್ದೇಶದಿಂದ ತಪೋವನಕ್ಕೆ ಬಂದಿದ್ದೀಯೆ ಎಂದು ಅವನ ತಪೋವನಪ್ರವೇಶದ ಉದ್ದೇಶವನ್ನು ಕೇಳಿದರು.

ಪದಾತಿರ್ಬದ್ಧನಿಸ್ತ್ರಿಂಶೋ ಧನ್ವೀ ಬಾಣೀ ನರೇಶ್ವರ।
ಏತದಿಚ್ಛಾಮ ವಿಜ್ಞಾತುಂ ಕುತಃ ಪ್ರಾಪ್ತೋಽಸಿ ಮಾನದ।
ಕಸ್ಮಿನ್ ಕುಲೇ ಹಿ ಜಾತಸ್ತ್ವಂ ಕಿನ್ನಾಮಾಸಿ ಬ್ರವೀಹಿ ನಃ ॥೨೩॥

ಎಲೈ ಮಾನದನೇ! ಖಡ್ಗವನ್ನು ಬಿಗಿದುಕೊಂಡು, ಧನುರ್ಬಾಣಗಳನ್ನು ಧರಿಸಿ, ಪದಾತಿಯಾಗಿ ಬಂದಿದ್ದೀಯೆ. ಎಲೈ ನರೇಶ್ವರನೇ! ನೀನು ಎಲ್ಲಿಂದ ಬಂದಿರುವಿ. ಯಾವ ಕುಲದಲ್ಲಿ ಜನಿಸಿದ್ದೀಯೆ. ನಿನ್ನ ಹೆಸರೇನು ಎಂದು ತಿಳಿದುಕೊಳ್ಳಲು ಬಯಸುತ್ತೇವೆ. ಅದನ್ನು ನಮಗೆ ಹೇಳು.

ತತಃ ಸ ರಾಜಾ ಸರ್ವೇಭ್ಯೋ ದ್ವಿಜೇಭ್ಯಃ ಪುರುಷರ್ಷಭ।
ಆಚಖ್ಯೌ ತದ್ ಯಥಾನ್ಯಾಯಂ ಪರಿಚರ್ಯಾಂ ಚ ಭಾರತ ॥೨೪॥

ಎಲೈ ಪುರುಷರ್ಷಭನೇ! ಆಗ ಆ ರಾಜನು ಎಲ್ಲ ಋಷಿಗಳಿಗೂ ವಿಧಿವತ್ತಾಗಿ ತನ್ನ ಪರಿಚರ್ಯವನ್ನು ಮತ್ತು ತಾನು ಆಶ್ರಮಕ್ಕೆ ಬಂದ ಉದ್ದೇಶವನ್ನು ಹೇಳಿದನು.

ಹೈಹಯಾನಾಂ ಕುಲೇ ಜಾತಃ ಸುಮಿತ್ರೋ ಮಿತ್ರನಂದನಃ।
ಚರಾಮಿ ಮೃಗಯೂಥಾನಿ ನಿಘ್ನನ್ ಬಾಣೈಃ ಸಹಸ್ರಶಃ।
ಬಲೇನ ಮಹತಾ ಗುಪ್ತಃ ಸಾಮಾತ್ಯಃ ಸಾವರೋಧನಃ ॥೨೫॥

ನಾನು ಹೈಹಯಕುಲದಲ್ಲಿ ಜನಿಸಿದ ಮಿತ್ರನೆಂಬ ರಾಜನ ಮಗನಾದ ಸುಮಿತ್ರನೆಂಬುವನು. ನನ್ನ ಸಹಸ್ರಾರು ಬಾಣಗಳಿಂದ ಮೃಗಸಮೂಹಗಳನ್ನು ಕೊಲ್ಲುತ್ತಾ ದೊಡ್ಡ ಸೈನ್ಯದಿಂದ ರಕ್ಷಿತನಾಗಿ ಅಮಾತ್ಯ ಮತ್ತು ಪರಿವಾರದೊಡನೆ ಸಂಚರಿಸುತ್ತಿದ್ದೇನೆ.

ಮೃಗಸ್ತು ವಿದ್ಧೋ ಬಾಣೇನ ಮಯಾ ಸರತಿ ಶಲ್ಯವಾನ್।
ತಂ ದ್ರವಂತಮನು ಪ್ರಾಪ್ತೋ ವನಮೇತದ್ ಯದೃಚ್ಛಯಾ।
ಭವತ್ಸಕಾಶೇ ನಷ್ಟಶ್ರೀರ್ಹತಾಶಃ ಶ್ರಮಕರ್ಶಿತಃ ॥೨೬॥

ಒಂದು ಮೃಗವು ನನ್ನಿಂದ ಬಾಣದಿಂದ ಹೊಡೆಯಲ್ಪಟ್ಟು ಆ ಬಾಣವು

ನಾಟಿದಂತೆಯೇ ಮುಂದೆ ಹೋಗುತ್ತಿದೆ. ಓಡುವ ಅದನ್ನು ಹಿಂಬಾಲಿಸುತ್ತಾ ನನ್ನ ಆಸೆಯನ್ನೂ ಕಾಂತಿಯನ್ನೂ ಕಳೆದುಕೊಂಡು ಶ್ರಮಕರ್ಶಿತನಾಗಿ ಅಕಸ್ಮಾತ್ತಾಗಿ ಈ ಕಾಡಿನಲ್ಲಿ ನಿಮ್ಮ ಬಳಿಗೆ ಬಂದಿದ್ದೇನೆ.

ಕಿಂ ನು ದುಃಖಮತೋಽನ್ಯದ್ ವೈ ಯದಹಂ ಶ್ರಮಕರ್ಶಿತಃ।
ಭವತಾಮಾಶ್ರಮಂ ಪ್ರಾಪ್ತೋ ಹತಾಶೋ ನಷ್ಟಲಕ್ಷಣಃ ॥೨೭॥

ನಾನು ನನ್ನ ಆಸೆಯನ್ನು ಮತ್ತು ನನ್ನ ರಾಜಚಿಹ್ನೆಗಳನ್ನು ಕಳೆದುಕೊಂಡು ಶ್ರಮದಿಂದಪೀಡಿತನಾಗಿ ನಿಮ್ಮ ಆಶ್ರಮವನ್ನು ಸೇರಿದುದಕ್ಕಿಂತ ಬೇರೆ ದುಃಖಕರವಾದುದು ಯಾವದಿದೆ?

ನ ರಾಜಲಕ್ಷಣತ್ಯಾಗೋ ನ ಪುರಸ್ಯ ತಪೋಧನಾಃ।
ದುಃಖಂ ಕರೋತಿ ತತ್ ತೀವ್ರಂ ಯಥಾಶಾ ವಿಹತಾ ಮಮ ॥೨೮॥

ಎಲೈ ತಪೋಧನರೇ! ರಾಜಚಿಹ್ನೆಯ ತ್ಯಾಗವಾಗಲೀ, ರಾಜಧಾನಿಯ ತ್ಯಾಗವಾಗಲೀ, ನನಗೆ ನನ್ನ ಆಶಾಭಂಗವು ಉಂಟುಮಾಡಿದ ತೀವ್ರವಾದ ದುಃಖವನ್ನು ಉಂಟುಮಾಡುವುದಿಲ್ಲ.

ಹಿಮವಾನ್ ವಾ ಮಹಾಶೈಲಃ ಸಮುದ್ರೋ ವಾ ಮಹೋದಧಿಃ।
ಮಹತ್ತ್ವಾನ್ನಾನ್ವಪದ್ಯೇತಾಂ ರೋದಸ್ಯೋರಂತರಂ ಯಥಾ।
ಆಶಾಯಾಸ್ತಪಸಿಶ್ರೇಷ್ಠಾಸ್ತಥಾ ನಾಂತಮಹಂ ಗತಃ ॥೨೯॥

ಹಿಮಾಲಯ ಮಹಾಪರ್ವತವಾಗಲೀ, ಮಹಾಜಲಾಶಯವಾದ ಸಮುದ್ರವಾಗಲೀ, ತಮ್ಮ ಮಹತ್ವದಿಂದ ಭೂಮಿ ಅಂತರಿಕ್ಷಗಳ ಮಧ್ಯಭಾಗವನ್ನು ಹೇಗೆ ತುಂಬುವುದಿಲ್ಲವೋ, ಎಲೈ ತಪೋನಿಷ್ಠರೇ! ಹಾಗೆ ನನ್ನ ಆಸೆಯ ಅಂತವನ್ನು ನಾನು ತಲುಪಿಲ್ಲ.

ಭವತಾಂ ವಿದಿತಂ ಸರ್ವಂ ಸರ್ವಜ್ಞಾ ಹಿ ತಪೋಧನಾಃ।
ಭವಂತಃ ಸುಮಹಾಭಾಗಾಸ್ತಸ್ಮಾತ್ ಪ್ರಕ್ಷ್ಯಾಮಿ ಸಂಶಯಮ್ ॥೩೦॥

ನೀವು ಎಲ್ಲವನ್ನೂ ತಿಳಿದಿದ್ದೀರಿ. ಏಕೆಂದರೆ ನೀವು ತಪೋಧನರಾದ ಸರ್ವಜ್ಞರು. ಮತ್ತು ಮಹಾನುಭಾವರು. ಆದ್ದರಿಂದ ನನ್ನ ಸಂಶಯವನ್ನು ಕೇಳುತ್ತಿದ್ದೇನೆ.

ಆಶಾವಾನ್ ಪುರುಷೋ ಯಃ ಸ್ಯಾದಂತರಿಕ್ಷಮಥಾಪಿ ವಾ ।
ಕಿನ್ನು ಜ್ಯಾಯಸ್ತರಂ ಲೋಕೇ ಮಹತ್ತ್ವೇ ಪ್ರತಿಭಾತಿ ವಃ ।
ಏತದಿಚ್ಛಾಮಿ ತತ್ತ್ವೇನ ಶ್ರೋತುಂ ಕಿಮಿಹ ದುರ್ಲಭಮ್ ॥೩೧॥

ಯದಿ ಗುಹ್ಯಂ ತಪೋನಿತ್ಯಾ ಮಾಂ ಬ್ರೂತೇಹ ಮಾಚಿರಮ್ ।
ನ ಹಿ ಗುಹ್ಯಮತಃ ಶ್ರೋತುಮಿಚ್ಛಾಮಿ ದ್ವಿಜಪುಂಗವಾಃ ॥೩೨॥

ಪುರುಷನ ಆಸೆ ಒಂದು ಕಡೆ; ಮತ್ತು ಅಂತರಿಕ್ಷವು ಇನ್ನೊಂದು ಕಡೆ. ಇವುಗಳಲ್ಲಿ ಮಹತ್ವದಿಂದ ದೊಡ್ಡದು ಯಾವುದೆಂದು ನೀವು ತಿಳಿಯುತ್ತೀರಿ? ಇದನ್ನು ಸರಿಯಾಗಿ ಕೇಳಲು ನಾನು ಬಯಸುತ್ತೇನೆ. ಇಲ್ಲಿ ಬಂದಿರುವ ನನಗೆ ದುರ್ಲಭವಾದುದು ಯಾವುದಿದೆ? ಎಲೈ ತಪೋನಿತ್ಯರೇ ಅದು ರಹಸ್ಯವಲ್ಲದಿದ್ದರೆ ಅದನ್ನು ಶೀಘ್ರವಾಗಿ ನನಗೆ ಹೇಳಿ. ಎಲೈ ದ್ವಿಜಪುಂಗವರೇ! ಗುಹ್ಯವಾಗಿದ್ದರೆ ನಾನು ಅದನ್ನು ಕೇಳಲು ಬಯಸುವುದಿಲ್ಲ.

ಭವತ್ ತಪೋವಿಘಾತೋ ವಾ ಯೇನ ಸ್ಯಾದ್ ವಿರಮೇ ತತಃ ।
ಯದಿ ವಾಸ್ತಿ ಕಥಾಯೋಗೋ ಯೋಽಯಂ ಪ್ರಶ್ನೋ ಮಯೇರಿತಃ ॥೩೩॥

ಅಥವಾ ನಿಮ್ಮ ತಪಸ್ಸಿಗೆ ಭಂಗವುಂಟಾಗುವುದಾದರೂ ನಾನು ನನ್ನ ಪ್ರಶ್ನೆಯಿಂದ ಹಿಂದೆ ಸರಿಯುತ್ತೇನೆ. ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡುವ ಸಾಧ್ಯತೆ ಇದ್ದರೆ ಮಾತ್ರ ಉತ್ತರವನ್ನು ಹೇಳಿ.

ಏತತ್ ಕಾರಣಸಾಮಗ್ರ್ಯಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಭವಂತೋ ಹಿ ತಪೋ ನಿತ್ಯಾ ಬ್ರೂಯುರೇತತ್ ಸಮಾಹಿತಾಃ ॥೩೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಷಟ್‌ವಿಂಶತ್ಯಧಿಕಶತತಮೋಽಧ್ಯಾಯಃ ॥೨೧೬॥

ಆಸೆಗೆ (ಮತ್ತು ಆಸೆಯ ಜಯಕ್ಕೆ) ಸಮಗ್ರವಾದ ಕಾರಣವನ್ನು ನಾನು ಕೇಳಲು ಬಯಸುತ್ತೇನೆ. ತಪೋನಿರತರಾದ ನೀವು ಸಮಾಧಾನದಿಂದ ಇದಕ್ಕೆ ಉತ್ತರವನ್ನು ಹೇಳಬಹುದು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೬ನೆಯ ಅಧ್ಯಾಯವು ಮುಗಿಯಿತು.

—0—

೧೨೭. ನೂರಇಪ್ಪತ್ತೇಳನೆಯ ಅಧ್ಯಾಯ

ಬದರಿಕಾಶ್ರಮದಲ್ಲಿ ವೃಷಭತನು ಸಂವಾದ ವೀರದ್ಯುಮ್ನಪ್ರಶ್ನೆ

ಭೀಷ್ಮಃ

ತತಸ್ತೇಷಾಂ ಸಮಸ್ತಾನಾಮೃಷೀಣಾಮೃಷಿಸತ್ತಮಃ।
ಋಷಭೋ ನಾಮ ವಿಪ್ರರ್ಷಿಃ ಸ್ಮಯನ್ನಿವ ತತೋಽಬ್ರವೀತ್ ॥೧॥

ಭೀಷ್ಮರು – ಆಗ ಅಲ್ಲಿ ಸೇರಿದ ಋಷಿಗಳಲ್ಲಿ ಋಷಭ ಎಂಬ ವಿಪ್ರರ್ಷಿಯು ನಗುತ್ತಾ ಮಾತನಾಡಿದನು.

ಪುರಾಹಂ ರಾಜಶಾರ್ದೂಲ ತೀರ್ಥಾನ್ಯನುಚರನ್ ಪ್ರಭೋ।
ಸಮಾಸಾದಿತವಾನ್ ದಿವ್ಯಂ ನರನಾರಾಯಣಾಶ್ರಮಮ್ ॥೨॥

ಎಲೈ ರಾಜಶಾರ್ದೂಲನೇ! ಪ್ರಭುವೇ! ನಾನು ಹಿಂದೆ ತೀರ್ಥಯಾತ್ರೆಯನ್ನು ಮಾಡುತ್ತಾ ದಿವ್ಯವಾದ ನರನಾರಾಯಣಾಶ್ರಮಕ್ಕೆ ಬಂದೆನು.

ಯತ್ರ ಸಾ ಬದರೀ ರಮ್ಯಾ ಹ್ರದೋ ವೈಹಾಯಸಸ್ತಥಾ।
ಯತ್ರ ಚಾಶ್ವಶಿರಾ ರಾಜನ್ ವೇದಾನ್ ಪಠತಿ ಶಾಶ್ವತಾನ್ ॥೩॥

ತಸ್ಮಿನ್ ಸರಸಿ ಕೃತ್ವಾಹಂ ವಿಧಿವತ್ ತರ್ಪಣಂ ಪುರಾ।
ಪಿತೄಣಾಂ ದೇವತಾನಾಂ ಚ ತತೋಽಽಶ್ರಮಮಿಯಾಂ ತದಾ ॥೪॥

ಎಲ್ಲಿ ಮನೋಹರವಾದ ಬದರೀವೃಕ್ಷವಿದೆಯೋ, ಹಾಗೆಯೇ ವೈಹಾಯಸ

ಕುಂಡವಿದೆಯೋ, ಎಲ್ಲಿ ಹಯಗ್ರೀವದೇವರು ಶಾಶ್ವತಗಳಾದ ವೇದಗಳನ್ನು ಪಠಿಸುತ್ತಾರೆಯೋ, ಅಲ್ಲಿಗೆ ಬಂದು ಆ ಸರೋವರದಲ್ಲಿ ಸ್ನಾನವನ್ನು ಮಾಡಿ ಪಿತೃಗಳಿಗೆ ಮತ್ತು ದೇವತೆಗಳಿಗೆ ವಿಧಿವತ್ತಾಗಿ ತರ್ಪಣವನ್ನು ಕೊಟ್ಟು ಅನಂತರ ಈ ಆಶ್ರಮವನ್ನು ಪ್ರವೇಶಿಸಿದೆನು.

ರೇಮಾತೇ ಯತ್ರ ತೌ ನಿತ್ಯಂ ನರನಾರಾಯಣಾವೃಷೀ।
ಅದೂರಾದಾಶ್ರಮಂ ಕಶ್ಚಿದ್ ವಾಸಾರ್ಥಮಗಮಂ ತತಃ ॥೫॥

ಎಲ್ಲಿ ನರನಾರಾಯಣಋಷಿಗಳು ನಿತ್ಯವೂ ವಾಸಮಾಡುತ್ತಾರೆಯೋ ಅಲ್ಲಿಂದ ಸ್ವಲ್ಪದೂರದಲ್ಲಿ ನನ್ನ ವಾಸಕ್ಕಾಗಿ ಒಂದು ಆಶ್ರಮಕ್ಕೆ ಹೋದೆನು.

ತತಶ್ಚೀರಾಜಿನಧರಂ ಕೃಶಮುಚ್ಚಮತೀವ ಚ।
ಅದ್ರಾಕ್ಷಮೃಷಿಮಾಯಾಂತಂ ತನುಂ ನಾಮ ತಪೋನಿಧಿಮ್ ॥೬॥

ಅಲ್ಲಿ ಕೃಷ್ಣಾಜಿನ ಮತ್ತು ನಾರುಮಡಿಯನ್ನುಟ್ಟ ಕೃಶನಾದ ಅತ್ಯಂತ ಎತ್ತರನಾದ ತನು ಎಂಬ ಹೆಸರಿನ ತಪೋನಿಧಿಯಾದ ಋಷಿಯು ಅಲ್ಲಿಗೆ ಬರುವುದನ್ನು ನೋಡಿದೆನು.

ಅನ್ಯೈರ್ನರೈರ್ಮಹಾಬಾಹೋ ವಪುಷಾऽಷ್ಟಗುಣಾನ್ವಿತಮ್।
ಕೃಶತಾ ಚಾಪಿ ರಾಜರ್ಷೇ ನ ದೃಷ್ಟಾ ತಾದೃಶೀ ಕ್ವಚಿತ್ ॥೭॥

ಎಲೈ ಮಹಾಬಾಹುವೇ! ಅವನ ಎತ್ತರವು ಉಳಿದ ಮನುಷ್ಯರ ಎತ್ತರಕ್ಕಿಂತ ಎಂಟುಪಟ್ಟು ಅಧಿಕವಾಗಿದ್ದಿತು. ಎಲೈ ರಾಜರ್ಷಿಯೇ! ಅಂತಹ ದೇಹದ ಕೃಶತೆಯನ್ನು ನಾನು ಎಂದೂ ನೋಡಿರಲಿಲ್ಲ.

ಶರೀರಮಪಿ ರಾಜೇಂದ್ರ ತನು ಕಾನಿಷ್ಠಿಕಾಸಮಮ್।
ಗ್ರೀವಾ ಬಾಹೂ ತಥಾ ಪಾದೌ ಕೇಶಾಶ್ಚಾದ್ಭುತದರ್ಶನಾಃ ॥೮॥

ಎಲೈ ರಾಜೇಂದ್ರನೇ! ಅವನ ಶರೀರವು ಒಂದು ಕಿರುಬೆರಳಿನ ಗಾತ್ರದಷ್ಟಿದ್ದಿತು.

ಕತ್ತು ಬಾಹುಗಳು ಪಾದಗಳು ಕೇಶಗಳು ಎಲ್ಲವೂ ಅದಕ್ಕೆ ಅನುಗುಣವಾಗಿ ಅದ್ಭುತವಾಗಿದ್ದವು.

ಶಿರಃ ಕಾಯಾನುರೂಪಂ ಚ ಕರ್ಣೌ ನೇತ್ರೇ ತಥೈವ ಚ।
ತಸ್ಯ ವಾಕ್ ಚೈವ ಚೇಷ್ಟಾ ಚ ಸಾಮಾನ್ಯೇ ರಾಜಸತ್ತಮ ॥೯॥

ಅವನ ಶಿರಸ್ಸು, ಕರ್ಣಗಳು ಮತ್ತು ನೇತ್ರಗಳು ಅವನ ದೇಹಕ್ಕೆ ಅನುಗುಣವಾಗಿದ್ದವು. ಎಲೈ ರಾಜಶ್ರೇಷ್ಠನೇ! ಅವನ ಮಾತು ಮತ್ತು ಚೇಷ್ಟೆಗಳು ಮಾತ್ರ ಉಳಿದ ಸಾಮಾನ್ಯಜನರಂತೆ ಇದ್ದವು.

ದೃಷ್ಟ್ವಾಽಹಂ ತಂ ಕೃಶಂ ವಿಪ್ರಂ ಭೀತಃ ಪರಮದುರ್ಮನಾಃ।
ಪಾದೌ ತಸ್ಯಾಭಿವಾದ್ಯಾಥ ಸ್ಥಿತಃ ಪ್ರಾಂಜಲಿರಗ್ರತಃ ॥೧೦॥

ನಾನು ಆ ಬ್ರಾಹ್ಮಣನನ್ನು ನೋಡಿ, ಬಹಳ ಭಯಗೊಂಡು, ಬೇಸರವನ್ನು ಹೊಂದಿ, ಅವನಿಗೆ ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು ಎದುರಿಗೆ ನಿಂತುಕೊಂಡೆನು.

ನಿವೇದ್ಯ ನಾಮ ಗೋತ್ರಂ ಚ ಪಿತರಂ ಚ ನರರ್ಷಭ।
ಪ್ರದಿಷ್ಟೇ ಚಾಸನೇ ತೇನ ಶನೈರಹಮುಪಾವಿಶಮ್ ॥೧೧॥

ಎಲೈ ನರರ್ಷಭನೇ ನನ್ನ ನಾಮಗೋತ್ರಗಳನ್ನು ತಂದೆಯ ಹೆಸರನ್ನು ಅವನಿಗೆ ನಿವೇದಿಸಿ ಅವನು ಸೂಚಿಸಿದ ಆಸನದಲ್ಲಿ ನಿಧಾನವಾಗಿ ಕುಳಿತುಕೊಂಡೆನು.

ತತಃ ಸ ಕಥಯಾಮಾಸ ಕಥಾ ಧರ್ಮಾರ್ಥಸಂಹಿತಾಃ।
ಋಷಿಮಧ್ಯೇ ಮಹಾರಾಜ ತತ್ರ ಧರ್ಮಭೃತಾಂವರಃ ॥೧೨॥

ಎಲೈ ಮಹಾರಾಜನೇ! ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಋಷಿಗಳ ಮಧ್ಯದಲ್ಲಿ ಧರ್ಮಾರ್ಥಗಳಿಗೆ ಸಂಬಂಧಿಸಿದ ಅನೇಕ ಕಥೆಗಳನ್ನು ಹೇಳಿದನು.

ತಸ್ಮಿಂಸ್ತು ಕಥಯತ್ಯೇವ ರಾಜಾ ರಾಜೀವಲೋಚನಃ।
ಉಪಾಯಾದ್ ಜವನೈರಶ್ವೈಃ ಸಬಲಃ ಸಾವರೋಧನಃ ॥೧೩॥

ಅವನು ಕಥೆಯನ್ನು ಹೇಳುತ್ತಿರುವಾಗಲೇ ರಾಜೀವಲೋಚನನಾದ ತನ್ನ ಸೈನ್ಯ ಮತ್ತು ಪರಿವಾರದಿಂದ ಸಹಿತನಾದ ಒಬ್ಬ ರಾಜನು ವೇಗಶಾಲಿಗಳಾದ ಅಶ್ವಗಳಿಂದ ಅಲ್ಲಿಗೆ ಬಂದನು.

ಸ್ಮರನ್ ಪುತ್ರಮರಣ್ಯೇ ವೈ ನಷ್ಟಂ ಪರಮದುರ್ಮನಾಃ।
ಭೂರಿದ್ಯುಮ್ನಪಿತಾ ಧೀಮಾನ್ ರಘುಶ್ರೇಷ್ಠೋ ಮಹಾಯಶಾಃ ॥೧೪॥

ಮಹಾಕೀರ್ತಿವಂತನೂ, ಮೇಧಾವಿಯೂ, ರಘುವಂಶದಲ್ಲಿ ಶ್ರೇಷ್ಠನೂ, ಭೂರಿದ್ಯುಮ್ನ ಎಂಬ ರಾಜಕುಮಾರನ ತಂದೆಯೂ ಆದ ಅವನು ಕಳೆದು ಹೋದ ತನ್ನ ಪುತ್ರನನ್ನು ಅರಣ್ಯದಲ್ಲಿ ಹುಡುಕುತ್ತಾ ಪರಮದುಃಖದಿಂದ ಕೂಡಿದವನಾಗಿ ಅಲ್ಲಿಗೆ ಬಂದನು.

ಇಹ ದ್ರಕ್ಷ್ಯಾಮಿ ತಂ ಪುತ್ರಂ ದ್ರಕ್ಷ್ಯಾಮೀಹೇತಿ ಪಾರ್ಥಿವಃ।
ಏವಮಾಶಾಕೃತೋ ರಾಜಂಶ್ಚರನ್ ವನಮಿದಂ ಪುರಾ ॥೧೫॥

ನಾನು ಇಲ್ಲಿ ನನ್ನ ಪುತ್ರನನ್ನು ನೋಡುವೆನು; ಇಲ್ಲಿ ನನ್ನ ಪುತ್ರನನ್ನು ನೋಡುವೆನು ಎಂದು ಆಸೆಯನ್ನು ಮಾಡುತ್ತಾ ಎಲೈ ರಾಜನೇ! ಈ ವನವನ್ನೆಲ್ಲಾ ಸಂಚರಿಸುತ್ತಾ ಬಂದನು.

ದುರ್ಲಭಃ ಸ ಮಯಾ ದ್ರಷ್ಟುಂ ನೂನಂ ಪರಮಧಾರ್ಮಿಕಃ।
ಏಕಃ ಪುತ್ರೋ ಮಹಾರಣ್ಯೇ ನಷ್ಟ ಇತ್ಯಸಕೃತ್ ತದಾ ॥೧೬॥

ಪರಮಧಾರ್ಮಿಕನಾದ ನನ್ನ ಪುತ್ರನನ್ನು ನೋಡುವುದು ದುರ್ಲಭವಾಗಬಹುದು. ನನಗಿದ್ದ ಒಬ್ಬನೇ ಪುತ್ರನು ದೊಡ್ಡ ಕಾಡಿನಲ್ಲಿ ನಾಶವನ್ನು ಹೊಂದಿದ್ದಾನೆ ಎಂದು ಪುನಃ ಪುನಃ ಹೇಳುತ್ತಿದ್ದನು.

ದುರ್ಲಭಃ ಸ ಮಯಾ ದ್ರಷ್ಟುಮಾಶಾ ಚ ಮಹತೀ ಮಮ।
ತಯಾ ಪರೀತಗಾತ್ರೋಽಹಂ ಮುಮೂರ್ಷುರ್ನಾತ್ರ ಸಂಶಯಃ ॥೧೭॥

ಅವನನ್ನು ನಾನು ಇನ್ನೊಮ್ಮೆ ನೋಡಲು ಸಾಧ್ಯವಾಗಲಾರದು. ನನ್ನ ಆಸೆ-

ಯಾದರೋ ಬಹಳ ಬಲವಾಗಿದೆ. ಆ ಆಸೆಯಿಂದ ತುಂಬಿದ ಶರೀರವುಳ್ಳ ನಾನು ಇಲ್ಲಿಯೇ ಮರಣ ಹೊಂದುವುದರಲ್ಲಿ ಸಂಶಯವಿಲ್ಲ. (ಎಂದು ಹೇಳಿದನು).

ಏತಚ್ಛ್ರುತ್ವಾ ಸ ಭಗವಾಂಸ್ತನುರ್ಮುನಿವರೋತ್ತಮಃ।
ಅವಾಕ್‌ಶಿರಾ ಧ್ಯಾನಪರೋ ಮುಹೂರ್ತಮಿವ ತಸ್ಥಿವಾನ್ ॥೧೮॥

ಇದನ್ನು ಕೇಳಿದ ಪೂಜ್ಯನಾದ ಮುನಿಶ್ರೇಷ್ಠನಾದ ತನುವು ತಲೆಯನ್ನು ತಗ್ಗಿಸಿ ಒಂದು ಮುಹೂರ್ತದ ಕಾಲ ಧ್ಯಾನಪರನಾಗಿ ಕುಳಿತನು.

ತಮನುಧ್ಯಾಂತಮಾಲಕ್ಷ್ಯ ರಾಜಾ ಪರಮದುರ್ಮನಾಃ।
ಉವಾಚ ವಾಕ್ಯಂ ದೀನಾತ್ಮಾ ಮಂದಂ ಮಂದಮಿವಾಸಕೃತ್ ॥೧೯॥

ಧ್ಯಾನಪರನಾದ ಅವನನ್ನು ಗಮನಿಸಿ ಪರಮವ್ಯಥೆಗೊಂಡ ರಾಜನು ದೀನನಾಗಿ ಮೆಲ್ಲ ಮೆಲ್ಲನೆ ಪುನಃ ಪುನಃ ಈ ಮಾತನ್ನು ಹೇಳಿದನು.

ದುರ್ಲಭಂ ಕಿನ್ನು ವಿಪ್ರರ್ಷೇ ಆಶಾಯಾಶ್ಚೈವ ಕಿಂ ಭವೇತ್।
ಬ್ರವೀತು ಭಗವಾನೇತದ್ ಯದಿ ಗುಹ್ಯಂ ನ ತನ್ಮಯಿ ॥೨೦॥

ಎಲೈ ವಿಪ್ರರ್ಷಿಯೇ! ಲೋಕದಲ್ಲಿ ದುರ್ಲಭವಾದುದು ಯಾವುದು? ಆಸೆಯಿಂದ ಏನಾದೀತು? ಇದು ರಹಸ್ಯವಲ್ಲದಿದ್ದರೆ ಪೂಜ್ಯನಾದ ನೀನು ನನಗೆ ಹೇಳಬೇಕು? (ಎಂದು ಹೇಳಿದನು).

ಮಹರ್ಷಿರ್ಭಗವಾಂಸ್ತೇನ ಪೂರ್ವಮಾಸೀದ್ ವಿಮಾನಿತಃ।
ಬಾಲಿಶಾಂ ಬುದ್ಧಿಮಾಸ್ಥಾಯ ಮಂದಭಾಗ್ಯತಯಾऽऽತ್ಮನಃ ॥೨೧॥

ಪೂಜ್ಯನಾದ ಮಹರ್ಷಿಯು ಹಿಂದೆ ಅಲ್ಪಭಾಗ್ಯನಾಗಿದ್ದ ಕಾರಣ ಅವನ ಬಳಿಗೆ ಹೋಗಿ ಆ ರಾಜನ ಬಾಲಿಶಬುದ್ಧಿಯಿಂದ ಅವಮಾನಗೊಳಿಸಲ್ಪಟ್ಟಿದ್ದನು.

ಅರ್ಘ್ಯಯನ್ ಕಲಶಂ ರಾಜನ್ ಕಾಂಚನಂ ವಲ್ಕಲಾನಿ ಚ।
ನಿರ್ವಿಣ್ಣಃ ಸ ತು ವಿಪ್ರರ್ಷಿರ್ನಿರಾಶಃ ಸಮಪದ್ಯತ ॥೨೨॥

ಕಮಂಡಲು, ನಾರುಮಡಿ, ಅಲ್ಪದ್ರವ್ಯವನ್ನು ಬೇಡಲು ಹೋದ ಆ ವಿಪ್ರರ್ಷಿಯು ಅವಮಾನಿತನಾದ ಕಾರಣದಿಂದ ಬೇಸರ ಹೊಂದಿ ನಿರಾಶನಾಗಿದ್ದನು.

ಏವಮುಕ್ತ್ವಾ ಽಭಿವಾದ್ಯಾಥ ತಮೃಷಿಂ ಲೋಕಪೂಜಿತಮ್ ।
ಶ್ರಾಂತೋ ನ್ಯಷೀದದ್ ಧರ್ಮಾತ್ಮಾ ಯಥಾ ತ್ವಂ ನರಸತ್ತಮ ॥೨೩॥

ಆ ರಾಜನು ಲೋಕಪೂಜಿತನಾದ ಋಷಿಯನ್ನು ಕುರಿತು ಹೀಗೆ ಹೇಳಿ ನೀನು ಕುಳಿತಂತೆಯೇ ಧರ್ಮಾತ್ಮನಾದ ಅವನು ದಣಿದು ಕುಳಿತನು.

ಅರ್ಘ್ಯಂ ತತಃ ಸಮಾನೀಯ ಪಾದ್ಯಂ ಚೈವ ಮಹಾನೃಷಿಃ ।
ಆರಣ್ಯಕೇನ ವಿಧಿನಾ ರಾಜ್ಞೇ ಸರ್ವಂ ನ್ಯವೇದಯತ್ ॥೨೪॥

ಆ ಮಹರ್ಷಿಯು ಅರ್ಘ್ಯಪಾದ್ಯಗಳನ್ನು ನೀಡಿ ವನವಾಸವಿಧಾನದಿಂದ ರಾಜನಿಗೆ ಎಲ್ಲವನ್ನೂ ನಿವೇದಿಸಿದನು.

ತತಸ್ತೇ ಮುನಯಃ ಸರ್ವೇ ಪರಿವಾರ್ಯ ನರರ್ಷಭಮ್ ।
ಉಪಾವಿಶನ್ ಪುರಸ್ಕೃತ್ಯ ಸಪ್ತರ್ಷಯ ಇವ ಧ್ರುವಮ್ ॥೨೫॥

ಅನಂತರ ಆ ಎಲ್ಲ ಋಷಿಗಳೂ ಸಪ್ತರ್ಷಿಗಳು ಧ್ರುವನನ್ನು ಸುತ್ತುವರಿದಂತೆ ಆ ರಾಜನನ್ನು ಸುತ್ತುವರಿದು ಕುಳಿತರು.

ಅಪೃಚ್ಛಂಶ್ಚೈವ ತೇ ತತ್ರ ರಾಜಾನಮಪರಾಜಿತಮ್ ।
ಪ್ರಯೋಜನಮಿದಂ ಸರ್ವಮಾಶ್ರಮಸ್ಯ ಪ್ರವೇಶನಮ್ ॥೨೬॥

ಅವರೆಲ್ಲರೂ ಅಪರಾಜಿತನಾದ ಆ ರಾಜನನ್ನು ಕುರಿತು ಆಶ್ರಮಕ್ಕೆ ಬಂದ ಉದ್ದೇಶವೆಲ್ಲವನ್ನೂ ಕೇಳಿದರು.

ರಾಜಾ

ವೀರದ್ಯುಮ್ನ ಇತಿ ಖ್ಯಾತೋ ರಾಜಾಹಂ ದಿಕ್ಷು ವಿಶ್ರುತಃ ।
ಭೂರಿದ್ಯುಮ್ನಂ ಸುತಂ ನಷ್ಟಮನ್ವೇಷ್ಟುಂ ವನಮಾಗತಃ ॥೨೭॥

ರಾಜ – ನಾನು ವೀರದ್ಯುಮ್ನನೆಂಬ ರಾಜ. ಎಲ್ಲ ದಿಕ್ಕುಗಳಲ್ಲಿಯೂ ಪ್ರಖ್ಯಾತನಾಗಿದ್ದೇನೆ. ಭೂರಿದ್ಯುಮ್ನನೆಂಬ ನನ್ನ ಪುತ್ರನು ನಷ್ಟನಾಗಿದ್ದಾನೆ. ಅವನನ್ನು ಹುಡುಕಲು ನಾನು ಕಾಡಿಗೆ ಬಂದಿದ್ದೇನೆ.

ಏಕಪುತ್ರಃ ಸ ವಿಪ್ರಾಗ್ರ್ಯ ಬಾಲ ಏವ ಚ ಸೋಽನಘ।
ನ ದೃಶ್ಯತೇ ವನೇ ಚಾಸ್ಮಿಂಸ್ತಮನ್ವೇಷ್ಟುಂ ಚರಾಮ್ಯಹಮ್ ॥೨೮॥

ಎಲೈ ಅನಘನೇ! ವಿಪ್ರಶ್ರೇಷ್ಠನೇ! ನನಗೆ ಅವನೊಬ್ಬನೇ ಪುತ್ರ . ಇನ್ನೂ ಬಾಲಕ. ಈ ಕಾಡಿನಲ್ಲಿ ಅವನು ಕಂಡುಬರುತ್ತಿಲ್ಲ. ಅವನನ್ನು ಹುಡುಕಲು ನಾನು ತಿರುಗುತ್ತಿದ್ದೇನೆ.

ಋಷಭಃ

ಏವಮುಕ್ತೇ ತು ವಚನೇ ರಾಜ್ಞಾ ಮುನಿರಧೋಮುಖಃ।
ತೂಷ್ಣೀಮೇವಾಭವತ್ ತತ್ರ ನ ಚ ಪ್ರತ್ಯುಕ್ತವಾನ್ ನೃಪಮ್ ॥೨೯॥

ಋಷಭ – ರಾಜನು ಹೀಗೆ ಮಾತನಾಡುತ್ತಿರಲು ಆ ಋಷಿಯು ತಲೆ ತಗ್ಗಿಸಿ ಕುಳಿತು ಮೌನವನ್ನು ವಹಿಸಿದನು. ರಾಜನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ.

ಸ ಹಿ ತೇನ ಪುರಾ ವಿಪ್ರೋ ರಾಜ್ಞಾ ನಾತ್ಯರ್ಥಮಾನಿತಃ।
ಆಶಾಕೃತಂ ಚ ರಾಜೇಂದ್ರ ತಪೋ ದೀರ್ಘಂ ಸಮಾಸ್ಥಿತಃ ॥೩೦॥

ಆ ಋಷಿಯಾದರೋ ಹಿಂದೆ ಅದೇ ರಾಜನಿಂದ ಬಹಳ ಸನ್ಮಾನಿತನಾಗದೇ ಎಲೈ ರಾಜೇಂದ್ರನೇ! ಆಶಾಭಂಗವನ್ನು ಹೊಂದಿ, ದೀರ್ಘವಾದ ತಪಸ್ಸನ್ನು ಆಶ್ರಯಿಸಿದವನು.

ಪ್ರತಿಗ್ರಹಮಹಂ ರಾಜ್ಞಾಂ ನ ಕರಿಷ್ಯೇ ಕಥಂಚನ।
ಅನ್ಯೇಷಾಂ ಚೈವ ವರ್ಣಾನಾಮಿತಿ ಕೃತ್ವಾ ಧಿಯಂ ತದಾ ॥೩೧॥

ನಾನು ರಾಜನಿಂದಾಗಲೀ ಅಥವಾ ಬೇರೆಯವರಿಂದಾಗಲೀ ಯಾವ ಕಾರಣ-

ದಿಂದಲೂ ಯಾವ ಪ್ರತಿಗ್ರಹವನ್ನೂ ಮಾಡುವುದಿಲ್ಲ ಎಂದು ಬುದ್ಧಿಯಿಂದ ನಿಶ್ಚಯಿಸಿ ಆಗ (ತಪೋನಿಷ್ಠನಾದನು) -

ಆಶಾ ಹಿ ಪುರುಷಂ ಬಾಲಂ ಲಾಲಾಪಯತಿ ತಸ್ಥುಷೀ।
ತಾಮಹಂ ವ್ಯಪನೇಷ್ಯಾಮಿ ಇತಿ ಕೃತ್ವಾ ವ್ಯವಸ್ಥಿತಃ ॥೩೨॥

ಆಸೆಯಾದರೋ ಬಾಲಿಶನಾದ ಪುರುಷನನ್ನು ತಾನು ಸ್ಥಿರವಾಗಿ ನಿಂತು ವಿಲಾಪಿಸುವಂತೆ ಮಾಡುತ್ತದೆ. ಅಂತಹ ಆಸೆಯನ್ನು ನಾನು ತ್ಯಜಿಸಿದ್ದೇನೆ ಎಂದು ನಿಶ್ಚಯಿಸಿ ತಪಸ್ಸಿನಲ್ಲಿ ಸ್ಥಿರವಾಗಿದ್ದನು.

ರಾಜಾ

ಆಶಾಯಾಃ ಕಿಂ ಕೃಶತ್ವಂ ಚ ಕಿಂ ಚೇಹ ಭುವಿ ದುರ್ಲಭಮ್।
ಬ್ರವೀತು ಭಗವಾನೇತತ್ ತ್ವಂ ಹಿ ಧರ್ಮಾರ್ಥದರ್ಶಿವಾನ್ ॥೩೩॥

ರಾಜ – ಆಸೆಯನ್ನು ಕೃಶವಾಗಿ ಮಾಡುವ ಉಪಾಯವೇನು? ಈ ಭೂಮಿಯಲ್ಲಿ ದುರ್ಲಭವಾದುದು ಯಾವುದು? ಪೂಜ್ಯನಾದ ನೀನು ಇದನ್ನು ನನಗೆ ಹೇಳಬೇಕು. ನೀನು ಧರ್ಮಾರ್ಥತತ್ವವನ್ನು ತಿಳಿದವನಷ್ಟೇ? - (ಲಕ್ಷ್ಯಲಂಕಾರ)

ಋಷಭಃ

ತತಃ ಸಂಸ್ಮೃತ್ಯ ತತ್ ಸರ್ವಂ ಸ್ಮಾರಯಿಷ್ಯನ್ನಿವಾಬ್ರವೀತ್।
ರಾಜಾನಂ ಭಗವಾನ್ ವಿಪ್ರಸ್ತತಃ ಕೃಶತನುಸ್ತನುಃ ॥೩೪॥

ಋಷಭ – ಅನಂತರ ಹಿಂದಿನ ಎಲ್ಲವನ್ನೂ ಸ್ಮರಿಸಿಕೊಂಡು ರಾಜನಿಗೆ ಸ್ಮರಣೆಗೆ ತರುವವನಾಗಿ ಪೂಜ್ಯನಾದ ಕೃಶಶರೀರನಾದ ಬ್ರಾಹ್ಮಣನಾದ ತನುವು ಮಾತನಾಡಿದನು.

ಕೃಶತ್ವೇನ ಸಮಂ ರಾಜನ್ನಾಶಾಯಾ ವಿದ್ಯತೇ ನ ಚ।
ತಸ್ಯ ವೈ ದುರ್ಲಭತ್ವಾತ್ ತು ಪ್ರಾರ್ಥಿತಾಃ ಪಾರ್ಥಿವಾ ಮಯಾ ॥೩೫॥

ಎಲೈ ರಾಜನೇ! ಆಸೆಯನ್ನು ಕೃಶವನ್ನಾಗಿ ಮಾಡುವುದರಿಂದ ಉಂಟಾಗುವ ಸುಖಕ್ಕೆ ಸಮನಾದ ಸುಖವು ಇಲ್ಲ. ಆಸೆಯನ್ನು ಕೃಶವನ್ನಾಗಿ ಮಾಡುವುದು ದುರ್ಲಭವಾದುದರಿಂದ ನಾನು ಅನೇಕರಾಜರನ್ನು ಪ್ರಾರ್ಥಿಸಿದೆನು (ಲಕ್ಷ್ಮಲಂಕಾರ).

ರಾಜಾ

ಕೃಶಾಕೃಶೇ ಮಯಾ ಬ್ರಹ್ಮನ್ ಗೃಹೀತೇ ವಚನಾತ್ ತವ।
ದುರ್ಲಭತ್ವಂ ಚ ತಸ್ಯೈವ ವೇದವಾಕ್ಯಮಿವ ದ್ವಿಜ ॥೩೬॥

ರಾಜ – ಫಲವು ದೊರಕುವುದಿಲ್ಲವೆಂದು ತಿಳಿದು ಯಾವ ಆಸೆಯು ಭಗ್ನವಾಗುತ್ತದೆಯೋ ಅದು ಕೃಶವಾದ ಆಸೆ. ಫಲಪ್ರಾಪ್ತಿ ಉಂಟಾಗುವುದೆಂದು ತಿಳಿದು ಯಾವ ಆಸೆಯು ಭಗ್ನವಾಗುವುದಿಲ್ಲವೋ ಅದು ಕೃಶವಲ್ಲದ ಆಸೆ. ಎಲೈ ಬ್ರಾಹ್ಮಣನೇ! ನಿನ್ನ ಮಾತಿನಂತೆ ಕೃಶಾಕೃಶ ಆಸೆಗಳನ್ನು ತಿಳಿದೆನು. ಆಸೆಯನ್ನು ಕೃಶ ಮಾಡುವುದು ದುರ್ಲಭವೆಂದು ವೇದವಾಕ್ಯದಂತಿರುವ ನಿನ್ನ ವಾಕ್ಯದಿಂದ ತಿಳಿದೆನು.

ಸಂಶಯಸ್ತು ಮಹಾಪ್ರಾಜ್ಞ ಸಂಜಾತೋ ಹೃದಯೇ ಮಮ।
ತನ್ಮೇ ಸತ್ತಮ ತತ್ತ್ವೇನ ವಕ್ತುಮರ್ಹಸಿ ಪೃಚ್ಛತಃ ॥೩೭॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ! ಮಹಾಪ್ರಾಜ್ಞನೇ! ಆದರೆ ನನ್ನ ಮನಸ್ಸಿನಲ್ಲಿ ಒಂದು ಸಂಶಯವುಂಟಾಗಿದೆ. ಅದನ್ನು ಕೇಳುವ ನೀನು ಸರಿಯಾದ ಉತ್ತರವನ್ನು ನೀಡಬೇಕು.

ತ್ವತ್ತಃ ಕೃಶತರಂ ಕಿನ್ನು ಬ್ರವೀತು ಭಗವಾನಿದಮ್।
ಯದಿ ಗುಹ್ಯಂ ನ ತೇ ವಿಪ್ರ ಲೋಕೇಽಸ್ಮಿನ್ ಕಿಂ ನು ದುರ್ಲಭಮ್ ॥೩೮॥

ನಿನಗಿಂತಲೂ ಕೃಶವಾದುದು ಯಾವುದೆಂದು ಬುದ್ಧಿಯಿಂದ ವಿಮರ್ಶೆ ಮಾಡಿ ಪೂಜ್ಯನಾದ ನೀನು ಹೇಳಬೇಕು. ಇದು ಗುಹ್ಯವಲ್ಲದಿದ್ದರೆ ಎಲೈ ಬ್ರಾಹ್ಮಣನೇ! ಈ ಲೋಕದಲ್ಲಿ ಯಾವುದು ದುರ್ಲಭವಾದುದೆಂದು ಹೇಳಬೇಕು.

ಕೃಶತನುಃ

ದುರ್ಲಭೋಽಪ್ಯಥ ವಾ ನಾಸ್ತಿ ಯೋಽರ್ಥೀ ಧೃತಿಮವಾಪ್ನುಯಾತ್ ।
ಸುದುರ್ಲಭತರಸ್ತಾತ ಯೋಽರ್ಥಿನಂ ನಾವಮನ್ಯತೇ ॥೩೯॥

ಕೃಶತನು – ಆಸೆಯನ್ನು ಹೊಂದಿ ಅನಂತರ ಆಸೆಯನ್ನು ಬಿಟ್ಟು ಧೈರ್ಯವನ್ನು ತಂದುಕೊಳ್ಳುವವನು ದುರ್ಲಭನಾದವನು ಅಥವಾ ಇಲ್ಲವೇ ಇಲ್ಲ ಎಂದು ಹೇಳಬೇಕು. ಎಲೈ ಪ್ರೀತಿಪಾತ್ರನೇ! ಆಸೆಯಿಂದ ಬೇಡುವವನನ್ನು ಅವಮಾನ ಪಡಿಸದಿರುವುದು ಅದಕ್ಕಿಂತಲೂ ದುರ್ಲಭವಾದುದು.

ಸತ್ಕೃತ್ಯ ನೋಪಕುರುತೇ ಪರಂ ಶಕ್ತ್ಯೈ ಯಥಾರ್ಹತಃ ।
ಸಕ್ತಾ ಯಾ ಸರ್ವಭೂತೇಷು ಸಾಽऽಶಾ ಕೃಶತರೀ ಮಯಾ ॥೪೦॥

ನೀನು ನನ್ನನ್ನು ಸತ್ಕರಿಸಿ ನಿನ್ನ ಶಕ್ತಿಗೆ ಮತ್ತು ನನ್ನ ಅರ್ಹತೆಗೆ ಅನುಗುಣವಾಗಿ ಉಪಕಾರವನ್ನು ಮಾಡದಿದ್ದರೆ ಎಲ್ಲ ವಿಷಯಗಳಲ್ಲಿ ಹರಡಿದ ನನ್ನ ಆಸೆಯು (ಭಗ್ನವಾಗಿ) ನನಗಿಂತ ಕೃಶವಾಗುತ್ತದೆ.

ಕೃತಘ್ನೇಷು ಚ ಯಾ ಸಕ್ತಾ ನೃಶಂಸೇಷ್ವಲಸೇಷು ಚ ।
ಅಪಕಾರಿಷು ಯಾ ಸಕ್ತಾ ಸಾಽऽಶಾ ಕೃಶತರೀ ಮಯಾ ॥೪೧॥

ಕೃತಘ್ನರಲ್ಲಿ, ಕ್ರೂರಿಗಳಲ್ಲಿ, ಸೋಮಾರಿಗಳಲ್ಲಿ, ಅಪಕಾರಿಗಳಲ್ಲಿ ಮಾಡಿದ ಆಸೆಯು ಫಲವು ದೊರೆಯದಿರುವುದರಿಂದ ನನಗಿಂತ ಕೃಶವಾಗುತ್ತದೆ.

ಏಕಪುತ್ರಃ ಪಿತಾ ಪುತ್ರೇ ನಷ್ಟೇ ವಾ ಪ್ರೋಷಿತೇ ತಥಾ ।
ಪ್ರವೃತ್ತಿಂ ಯೋ ನ ಜಾನಾತಿ ಸಾಽऽಶಾ ಕೃಶತರೀ ಮಯಾ ॥೪೨॥

ಏಕಪುತ್ರನನ್ನು ಹೊಂದಿದ ತಂದೆಯು ಆ ಪುತ್ರನು ನಷ್ಟವಾಗಿ, ಅಥವಾ ದೇಶಾಂತರಕ್ಕೆ ಹೋಗಿ ಅವನ ವಾರ್ತೆಯು ತಿಳಿಯದಿದ್ದರೆ ಆಗ ಪುತ್ರನ ವಿಷಯದಲ್ಲಿ ಅವನ ಆಸೆಯು ನನಗಿಂತಲೂ ಕೃಶವಾಗುತ್ತದೆ.

ಪ್ರಸವೇ ಚೈವ ನಾರೀಣಾಂ ವೃದ್ಧಾನಾಂ ಪುತ್ರಕಾರಿತಾ ।
ತಥಾ ನರೇಂದ್ರ ಧನಿನಾಮಾಶಾ ಕೃಶತರೀ ಮಯಾ ॥೪೩॥

ವೃದ್ಧರಾದ ನಾರಿಯರು ಮಕ್ಕಳನ್ನು ಪಡೆದರೆ ಪುತ್ರನನ್ನು ಪಡೆಯಬೇಕೆಂಬ ಆಸೆಯು, ಎಲೈ ನರೇಂದ್ರನೇ! ಧನಿಕನಿಗೆ ಇನ್ನೂ ಧನವನ್ನು ಗಳಿಸಬೇಕೆಂಬ ಆಸೆಯು ನನಗಿಂತಲೂ ಕೃಶವಾಗುತ್ತದೆ - ಲಕ್ಷ್ಯಲಂಕಾರ.

ಪ್ರದಾನಕಾಂಕ್ಷಿಣೀನಾಂ ಚ ಕನ್ಯಾನಾಂ ವಯಸಿ ಸ್ಥಿತೇ ।
ಶ್ರುತ್ವಾ ಕಥಾಸ್ತಥಾऽಯುಕ್ತಾ ಸಾಶಾ ಕೃಶತರಿ ಮಯಾ ॥೪೪॥

ತಮ್ಮ ವಿವಾಹವನ್ನು ಬಯಸುವ ವಯಸ್ಸಿಗೆ ಬಂದ ಕನ್ಯೆಯರಿಗೆ ತಮ್ಮ ವಿವಾಹದ ವಿಷಯದಲ್ಲಿ ಮರಣ ಮೊದಲಾದ ಅಯುಕ್ತವಾದ ಮಾತುಗಳನ್ನು ಕೇಳಿದರೆ ವಿವಾಹದ ಅವರ ಆಸೆಯು ನನಗಿಂತಲೂ ಕೃಶವಾಗುತ್ತದೆ.

ಋಷಭಃ

ಏತಚ್ಛ್ರುತ್ವಾ ತತೋ ರಾಜನ್ ಸ ರಾಜಾ ಸಾವರೋಧನಃ ।
ಸಂಸ್ಪೃಶ್ಯ ಪಾದೌ ಶಿರಸಾ ನಿಪಪಾತ ದ್ವಿಜರ್ಷಭೇ ॥೪೫॥

ಋಷಭ – ಎಲೈ ರಾಜನೇ ಈ ಮಾತುಗಳನ್ನು ಕೇಳಿ ರಾಜನು ತನ್ನ ಪರಿವಾರ ಸಹಿತನಾಗಿ ಆ ಋಷಿಯ ಪಾದಗಳಿಗೆ ಶಿರಸಾ ನಮಸ್ಕರಿಸಿ ದ್ವಿಜಶ್ರೇಷ್ಠನ ಪಾದಗಳಲ್ಲಿ ಬಿದ್ದನು.

ರಾಜಾ

ಪ್ರಸಾದಯೇ ತ್ವಾ ಭಗವನ್ ಪುತ್ರೇಣೇಚ್ಛಾಮಿ ಸಂಗತಿಮ್ ।
ವೃಣೀಷ್ವ ಚ ವರಂ ವಿಪ್ರ ಯಮಿಚ್ಛಸಿ ಯಥಾವಿಧಿ ॥೪೬॥

ರಾಜ – ಎಲೈ ಪೂಜ್ಯನೇ! ನೀನು ಪ್ರಸನ್ನನಾಗು. ನನ್ನ ಪುತ್ರನ ಜೊತೆಯಲ್ಲಿ ಸಂಗಮವನ್ನು ಬಯಸುತ್ತೇನೆ. ಎಲೈ ವಿಪ್ರನೇ! ನೀನು ಬಯಸುವ ವರವನ್ನು ವಿಧಿ ಪ್ರಕಾರವಾಗಿ ಕೇಳು.

ಋಷಭಃ

ಅಬ್ರವೀಚ್ಚ ಹಿ ತಂ ವಾಕ್ಯಂ ರಾಜಾ ರಾಜೀವಲೋಚನಃ।
ಸತ್ಯಮೇತದಸಂದೇಹಂ ತ್ವಯೋಕ್ತಂ ನಾಸ್ತ್ಯತೋ ಮೃಷಾ ॥೪೭॥

ಋಷಭ – ರಾಜೀವಲೋಚನನಾದ ರಾಜನು ಅವನನ್ನು ಕುರಿತು ನೀನು ಹೇಳಿದ ಮಾತುಗಳೆಲ್ಲವೂ ಸತ್ಯವಾದವುಗಳು. ಆಸೆಯನ್ನು ಕೃಶವನ್ನಾಗಿ ಮಾಡುವ ವಿಷಯದಲ್ಲಿ ನೀನು ಹೇಳಿದ ಯಾವ ಮಾತೂ ಸುಳ್ಳಲ್ಲ ಎಂದು ಹೇಳಿದನು.

ತತಃ ಪ್ರಹಸ್ಯ ಭಗವಾಂಸ್ತನುರ್ಧರ್ಮಭೃತಾಂ ವರಃ।
ಪುತ್ರಮಸ್ಯಾನಯತ್ ಕ್ಷಿಪ್ರಂ ತಪಸಾ ಚ ಶ್ರುತೇನ ಚ ॥೪೮॥

ಅನಂತರ ಪೂಜ್ಯನೂ, ಧರ್ಮಿಷ್ಠರಲ್ಲಿ ಶ್ರೇಷ್ಠನೂ ಆದ ಆ ವಿಪ್ರನು ನಕ್ಕು ತನ್ನ ತಪಸ್ಸು ವಿದ್ಯೆಗಳ ಬಲದಿಂದ ಶೀಘ್ರವಾಗಿ ಅವನ ಪುತ್ರನನ್ನು ಕರೆದುಕೊಂಡು ಬಂದನು.

ತಂ ಸಮಾನಾಯ್ಯ ಪುತ್ರಂ ತು ತದೋಪಾಲಭ್ಯ ಪಾರ್ಥಿವಮ್।
ಆತ್ಮಾನಂ ದರ್ಶಯಾಮಾಸ ಧರ್ಮಂ ಧರ್ಮಭೃತಾಂ ವರಃ ॥೪೯॥

ಪುತ್ರನನ್ನು ಕರೆದುಕೊಂಡು ಬಂದು, ರಾಜನನ್ನು ನೋಡಿ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ಧರ್ಮರೂಪನಾದ ತನ್ನನ್ನು ತೋರಿಸಿದನು.

ಸಂದರ್ಶಯಿತ್ವಾ ಚಾತ್ಮಾನಂ ದಿವ್ಯಮದ್ಭುತದರ್ಶನಮ್।
ವಿಪಾಪ್ಮಾ ವಿಗತಕ್ರೋಧಶ್ಚಚಾರ ವನಮಂತಿಕಾತ್ ॥೫೦॥

ತನ್ನ ದಿವ್ಯವಾದ ಮತ್ತು ಅದ್ಭುತವಾದ ದರ್ಶನವನ್ನು ನೀಡಿ ಪಾಪಗಳಿಂದಲೂ ಮತ್ತು ಕ್ರೋಧಗಳಿಂದಲೂ ರಹಿತನಾದ ಅವನು ವನದಲ್ಲಿಯೇ ಸಂಚಾರ ಮಾಡಿದನು.

ಏತದ್ ದೃಷ್ಟಂ ಮಯಾ ರಾಜಂಸ್ತತಶ್ಚ ವಚನಂ ಶ್ರುತಮ್।
ಆಶಾಮಪನಯಸ್ವಾಶು ತತಃ ಕೃಶತರೀಮಿಮಾಮ್ ॥೫೧॥

ಎಲೈ ರಾಜನೇ! ನಾನು ಇದನ್ನು ನೋಡಿದೆನು ಮತ್ತು ಆ ಮಾತುಗಳನ್ನು ಕೇಳಿದೆನು. ಮೃಗವು ದೊರೆಯದಿರುವುದರಿಂದ ಕೃಶವನ್ನು ಮಾಡಲು ಯೋಗ್ಯವಾದ ಆ ನಿನ್ನ ಆಸೆಯನ್ನು ಶೀಘ್ರವಾಗಿ ಬಿಟ್ಟುಬಿಡು. – ಲಕ್ಷ್ಮಲಂಕಾರ.

ಆಸೆಯನ್ನು ಬಿಡುವುದು ಕಷ್ಟಸಾಧ್ಯವಾದುದರಿಂದ ಆಶಾಖಂಡನವೇ ದುರ್ಲಭ -ವಾದುದು. ವಿವೇಕಿಗಳಾದವರು ಆಸೆಯನ್ನು ಖಂಡಿಸಬೇಕಾದ ರೀತಿಯೆಂದರೆ ಆಶಿಸುವ ವಸ್ತುವಿನ ಅಪ್ರಾಪ್ತಿಯೇ ಎಂದು ಅಧ್ಯಾಯದ ತಾತ್ಪರ್ಯವನ್ನು ತಿಳಿಯ-ಬೇಕು – ಲಕ್ಷ್ಮಲಂಕಾರ.

ಭೀಷ್ಮಃ

ಸ ತತ್ರೋಕ್ತೋ ಮಹಾರಾಜ ಋಷಭೇಣ ಮಹಾತ್ಮನಾ ।
ಸುಮಿತ್ರೋಽಪನಯತ್ ಕ್ಷಿಪ್ರಮಾಶಾಂ ಕೃಶತರೀಂ ತದಾ ॥೫೨॥

ಭೀಷ್ಮರು – ಎಲೈ ಮಹಾರಾಜನೇ! ಮಹಾತ್ಮನಾದ ಋಷಭನಿಂದ ಹೀಗೆ ಹೇಳಲ್ಪಟ್ಟ ಸುಮಿತ್ರನು ಕ್ಷಿಪ್ರವಾಗಿ ಮೃಗದ ವಿಷಯದಲ್ಲಿ ಇದ್ದ ತನ್ನ ಆಸೆಯನ್ನು ಕೃಶವನ್ನಾಗಿ ಮಾಡಿ ತೊರೆದನು.

ಏವಂ ತ್ವಮಪಿ ಕೌಂತೇಯ ಶ್ರುತ್ವಾವಾಣೇಮಿಮಾಂ ಮಮ ।
ಸ್ಥಿರೋ ಭವ ಯಥಾ ರಾಜನ್ ಹಿಮವಾನಚಲೋತ್ತಮಃ ॥೫೩॥

ಎಲೈ ಕೌಂತೇಯನೇ! ನೀನೂ ಸಹ ಈ ನನ್ನ ಮಾತನ್ನು ಕೇಳಿ ಆಸೆಯನ್ನು ತೊರೆದು ಹಿಮಾಲಯ ಪರ್ವತದಂತೆ ಸ್ಥಿರವಾಗಿರು.

ತ್ವಂ ಹಿ ದ್ರಷ್ಟಾ ಚ ಶ್ರೋತಾ ಚ ಕೃಚ್ಛ್ರೇಷ್ವರ್ಥಕೃತೇಷ್ವಿಹ ।
ಶ್ರುತ್ವಾ ಮಮ ಮಹಾರಾಜ ನ ಸಂತಪ್ತುಮಿಹಾರ್ಹಸಿ ॥೫೪॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ ॥೧೨೭॥

ನೀನು ಅರ್ಥದ ವಿಷಯದಲ್ಲಿ ಉಂಟಾಗುವ ಕಷ್ಟಗಳನ್ನು ನೋಡಿದ್ದೀಯೆ

ಮತ್ತು ಕೇಳಿದ್ದೀಯೆ. ಎಲೈ ಮಹಾರಾಜನೇ! ನನ್ನ ಮಾತುಗಳನ್ನು ಕೇಳಿ ಸಂತಾಪವನ್ನು ಬಿಡುವವನಾಗಬೇಕು.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೭ನೆಯ ಅಧ್ಯಾಯವು ಮುಗಿಯಿತು

—೦—

೧೨೮. ನೂರಇಪ್ಪತ್ತೆಂಟನೆಯ ಅಧ್ಯಾಯ

ಮಾತಾಪಿತೃಸೇವೆಯಿಂದ ಅವರ ಋಣಮೋಚನ ಕಥನ

ಯುಧಿಷ್ಠಿರಃ

ನಾಮೃತಸ್ಯೇವ ಪರ್ಯಾಪ್ತಿರ್ಮಮಾಸ್ತಿ ಬ್ರುವತಿ ತ್ವಯಿ।
ತಸ್ಮಾತ್ ಕಥಯ ಭೂಯಸ್ತ್ವಂ ಧರ್ಮಮೇವ ಪಿತಾಮಹ ॥೧॥

ಯುಧಿಷ್ಠಿರ – ನಿನ್ನ ಮಾತುಗಳನ್ನು ಕೇಳಿ ಅಮೃತಪಾನವನ್ನು ಮಾಡಿದವನಂತೆ ನನಗೆ ತೃಪ್ತಿಯೇ ಆಗುತ್ತಿಲ್ಲ. ಆದ್ದರಿಂದ ಎಲೈ ಪಿತಾಮಹನೇ! ಪುನಃ ಧರ್ಮವನ್ನೇ ಉಪದೇಶಿಸುವವನಾಗು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
ಗೌತಮಸ್ಯ ಚ ಸಂವಾದಂ ಯಮಸ್ಯ ಚ ಮಹಾತ್ಮನಃ ॥೨॥

ಈ ವಿಷಯದಲ್ಲಿಯೂ ಮಹಾತ್ಮನಾದ ಯಮನಿಗೂ ಮತ್ತು ಗೌತಮರಿಗೂ ನಡೆದ ಸಂವಾದರೂಪವಾದ ಈ ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಪಾರಿಯಾತ್ರಗಿರಿಂ ಪ್ರಾಪ್ಯ ಗೌತಮಸ್ಯಾಶ್ರಮೋ ಮಹಾನ್।
ಉವಾಸ ಗೌತಮೋ ಯತ್ರ ಕಾಲಂ ತದಪಿ ಮೇ ಶೃಣು ॥೩॥

ಪಾರಿಯಾತ್ರಪರ್ವತದ ಬಳಿ ಗೌತಮರ ದೊಡ್ಡ ಆಶ್ರಮವಿದೆ. ಅಲ್ಲಿ ಗೌತಮರು ಎಷ್ಟು ಕಾಲ ವಾಸಿಸಿದರು ಎಂಬುದನ್ನು ಕೇಳು.

ಷಷ್ಟಿಂ ವರ್ಷಸಹಸ್ರಾಣಿ ಸೋಽತಪ್ಯದ್ ಗೌತಮಸ್ತಪಃ।
ತಮುಗ್ರತಪಸಂ ಯುಕ್ತಂ ತಪಸಾ ಭಾವಿತಂ ಮುನಿಮ್ ॥೪॥

ಉಪಯಾತೋ ನರವ್ಯಾಘ್ರ ಲೋಕಪಾಲೋ ಯಮಸ್ತದಾ।
ತಮಪಶ್ಯತ್ ಸುತಪಸಮೃಷಿಂ ವೈ ಗೌತಮಂ ಮುನಿಮ್ ॥೫॥

ಅಲ್ಲಿ ಗೌತಮರು ಅರವತ್ತು ಸಹಸ್ರ ವರ್ಷಗಳ ಕಾಲ ಉಗ್ರತಪಸ್ಸನ್ನು ಆಚರಿಸಿದರು. ಎಲೈ ನರವ್ಯಾಘ್ರನೇ! ಉಗ್ರತಪಸ್ಸನ್ನು ಮಾಡಿ ತಪಸ್ಸಿನಿಂದ ಪರಿಶುದ್ಧರಾದ ಆ ಮುನಿಗಳ ಬಳಿಗೆ ಲೋಕಪಾಲಕನಾದ ಯಮನು ಬಂದನು. ಯಮನು ಒಳ್ಳೆಯ ತಪಸ್ಸನ್ನು ಮಾಡಿದ ಗೌತಮ ಋಷಿಗಳನ್ನು ನೋಡಿದನು.

ಸ ತಂ ವಿದಿತ್ವಾ ಬ್ರಹ್ಮರ್ಷಿರ್ಯಮಮಾಗತಮೋಜಸಾ।
ಪ್ರಾಂಜಲಿಃ ಪ್ರಯತೋ ಭೂತ್ವಾ ಉಪಸೃಪ್ತಸ್ತಪೋಧನಃ ॥೬॥

ಬ್ರಹ್ಮರ್ಷಿಗಳಾದ ತಪೋಧನರಾದ ಗೌತಮರು ತಮ್ಮ ತಪಃಶಕ್ತಿಯಿಂದ ಬಂದವನು ಯಮನೆಂದು ತಿಳಿದು ಕೈಗಳನ್ನು ಮುಗಿದು ವಿನಯದಿಂದ ಅವನನ್ನು ಸಮೀಪಿಸಿದರು.

ತಂ ಧರ್ಮರಾಜೋ ದೃಷ್ಟ್ವೈವ ನಮಸ್ಕೃತ್ಯ ನರರ್ಷಭಮ್।
ನ್ಯಮಂತ್ರಯತ ಧರ್ಮೇಣ ಕ್ರಿಯತಾಂ ಕಿಮಿತಿ ಬ್ರುವನ್ ॥೭॥

ಯಮಧರ್ಮರಾಜನು ಆ ನರಶ್ರೇಷ್ಠನನ್ನು ನೋಡಿದ ತತ್ಕ್ಷಣವೇ ನಮಸ್ಕಾರ ಮಾಡಿ ಅವರನ್ನು ಧರ್ಮಕ್ಕೆ ಅನುಸಾರವಾಗಿ ಆಮಂತ್ರಿಸಿ ನಾನು ಏನು ಉಪಕಾರವನ್ನು ಮಾಡಲಿ ಎಂದು ಕೇಳಿದನು.

ಗೌತಮಃ

ಮಾತಾಪಿತೃಭ್ಯಾಮಾನೃಣ್ಯಂ ಕಿಂ ಕೃತ್ವಾ ಸಮವಾಪ್ನುಯಾತ್।
ಕಥಂ ಚ ಲೋಕಾನಶ್ನಾತಿ ಪುರುಷೋ ದುರ್ಲಭಾನ್ ಶುಭಾನ್ ॥೮॥

ಗೌತಮರು – ಮನುಷ್ಯನು ಏನು ಮಾಡಿದರೆ ಮಾತಾಪಿತೃಗಳ ಋಣವನ್ನು ತೀರಿಸುತ್ತಾನೆ? ಮತ್ತು ದುರ್ಲಭವಾದ ಶುಭಲೋಕಗಳನ್ನು ಹೇಗೆ ಅನುಭವಿಸುತ್ತಾನೆ?

ಯಮಃ

ತಪಃಶೌಚವತಾ ನಿತ್ಯಂ ಸತ್ಯಧರ್ಮರತೇನ ಚ।
ಮಾತಾಪಿತ್ರೋರಹರಹಃ ಪೂಜನಂ ಕಾರ್ಯಮಂಜಸಾ ॥೯॥

ಯಮ – ನಿತ್ಯವೂ ತಪಃಶೌಚಗಳನ್ನು ಆಚರಿಸಿ, ಸತ್ಯಮತ್ತುಧರ್ಮಗಳಲ್ಲಿ ರತನಾಗಿ ಪ್ರತಿನಿತ್ಯವೂ ಚೆನ್ನಾಗಿ ತಂದೆ ತಾಯಿಗಳ ಪೂಜೆಯನ್ನು ಮಾಡಬೇಕು.

ಅಶ್ವಮೇಧೈಶ್ಚ ಯಷ್ಟವ್ಯಂ ಬಹುಭಿಃ ಸಾಪ್ತದಕ್ಷಿಣೈಃ।
ತೇನ ಲೋಕಾನುಪಾಶ್ನಾತಿ ಪುರುಷೋಽದ್ಭುತದರ್ಶನಾನ್ ॥೧೦॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಅಷ್ಟವಿಂಶತ್ಯಧಿಕಶತತಮೋಽಧ್ಯಾಯಃ ॥೧೨೮॥

ಬಹುದಕ್ಷಿಣೆಗಳಿಂದ ಕೂಡಿದ ಅನೇಕ ಅಶ್ವಮೇಧಯಾಗಗಳನ್ನು ಮಾಡಬೇಕು. ಅದರಿಂದ ಪುರುಷನು ಅದ್ಭುತವಾಗಿ ಕಾಣುವ ಶುಭಲೋಕಗಳನ್ನು ಹೊಂದುತ್ತಾನೆ.

ರಾಜಧರ್ಮಪರ್ವ ಕನ್ನಡಾನುವಾದದಲ್ಲಿ ೧೨೯ನೆಯ ಅಧ್ಯಾಯವುಮುಗಿಯಿತು.

—೦—

೧೨೯. ನೂರಇಪ್ಪತ್ತೊಂಬತ್ತನೆಯ ಅಧ್ಯಾಯ

ರಾಜನ ಕೋಶವೃದ್ಧಿರೂಪವಾದ ಆಪದ್ಧರ್ಮಕಥನ

ಯುಧಿಷ್ಠಿರಃ

ಮಿತ್ರೈಃ ಪ್ರಹೀಯಮಾಣಸ್ಯ ಬಹ್ವಮಿತ್ರಸ್ಯ ಕಾ ಗತಿಃ।
ರಾಜ್ಞಃ ಸಂಕೀರ್ಣಕೋಶಸ್ಯ ಬಲಹೀನಸ್ಯ ಭಾರತ ॥೧॥

ದುಷ್ಟಾಮಾತ್ಯಸಹಾಯಸ್ಯ ಸ್ರುತಮಂತ್ರಸ್ಯ ಸರ್ವತಃ।
ರಾಜ್ಯಾತ್ ಪ್ರಚ್ಯವಮಾನಸ್ಯ ಗತಿಮನ್ಯಾಮಪಶ್ಯತಃ ॥೨॥

ಪರಚಕ್ರಾಭಿಯಾತಸ್ಯ ದುರ್ಬಲಸ್ಯ ಬಲೀಯಸಾ।
ಅಸಂವಿಹಿತರಾಷ್ಟ್ರಸ್ಯ ದೇಶಕಾಲಾವಜಾನತಃ ॥೩॥

ಅಪ್ರಾಪ್ಯಂ ಚ ಭವೇತ್ ಸಾಂತ್ವಂ ಭೇದೋ ವಾऽಪ್ಯತಿಪೀಡನಾತ್।
ಜೀವಿತಂ ಚಾರ್ಥಹೇತೋರ್ವಾ ತತ್ರ ಕಿಂ ಸುಕೃತಂ ಭವೇತ್ ॥೪॥

ಯುಧಿಷ್ಠಿರ – ಎಲೈ ಭಾರತನೇ! ಮಿತ್ರರನ್ನು ಕಳೆದುಕೊಂಡು ಬಹಳ ಶತ್ರುಗಳನ್ನು ಸಂಪಾದಿಸಿ ಕೋಶವನ್ನೂ ಬಲವನ್ನೂ ಕಳೆದುಕೊಂಡ ರಾಜನಿಗೆ ಯಾವ ಗತಿ? ದುಷ್ಟ ಅಮಾತ್ಯರನ್ನು ಹೊಂದಿ ತನ್ನ ಮಂತ್ರಾಲೋಚನೆಯು ಸೋರಿಹೋಗಿ ಬೇರೆ ಗತಿಯನ್ನು ಕಾಣದೇ ರಾಜ್ಯವನ್ನು ಕಳೆದುಕೊಳ್ಳಲಿರುವ, ಪ್ರಬಲನಾದ ಶತ್ರುವಿನ ಆಕ್ರಮಣಕ್ಕೆ ಒಳಗಾದ, ರಾಷ್ಟ್ರವನ್ನು ಸರಿಯಾಗಿ ರಕ್ಷಿಸದ, ದೇಶಕಾಲಗಳ ಜ್ಞಾನವಿಲ್ಲದ ದುರ್ಬಲನಾದ ರಾಜನಿಗೆ ಏನು ಗತಿ?

ಧನಸಂಗ್ರಹಕ್ಕಾಗಿ ಪ್ರಜೆಗಳನ್ನು ಅತಿಯಾಗಿ ಪೀಡಿಸುವುದರಿಂದ ಸಾಮೋಪಾಯ -ವಾಗಲೀ ಭೇದೋಪಾಯವಾಗಲೀ ಹೊಂದಲು ಯೋಗ್ಯವಾಗುವುದಿಲ್ಲ. ಆಗ ರಾಜನು ಅರ್ಥವನ್ನು (ಧನವನ್ನು) ಸಂಗ್ರಹಿಸುವುದಕ್ಕಾಗಿ ಬದುಕಬೇಕೇ? ಅಥವಾ ಏನು ಮಾಡಿದರೆ ಒಳ್ಳೆಯದಾಗುತ್ತದೆ?

ಭೀಷ್ಮಃ

ಗುಹ್ಯಂ ಮಾ ಧರ್ಮಮಪ್ರಾಕ್ಷೀರತೀವ ಭರತರ್ಷಭ।
ಅಪೃಷ್ಟೋ ನೋತ್ಸಹೇ ವಕ್ತುಂ ಧರ್ಮಮೇನಂ ಯುಧಿಷ್ಠಿರ ॥೫॥

ಭೀಷ್ಮರು – ಎಲೈ ಭರತರ್ಷಭನೇ! ಅತ್ಯಂತ ರಹಸ್ಯವಾದ ಧರ್ಮವನ್ನು ಪ್ರಶ್ನೆ ಮಾಡುತ್ತಿದ್ದೀಯೆ. ಎಲೈ ಯುಧಿಷ್ಠಿರನೇ! ನೀನು ಕೇಳಿರದಿದ್ದರೆ ನಾನು ಇದಕ್ಕೆ ಉತ್ತರ -ವನ್ನು ಹೇಳುತ್ತಿರಲಿಲ್ಲ.

ಧರ್ಮೋ ಹ್ಯಣೀಯಾನ್ ವಚನಾದ್ ಬುದ್ಧೇಶ್ಚ ಭರತರ್ಷಭ।
ಶ್ರುತ್ವೋಪಾಸ್ಯ ಸದಾಚಾರೈಃ ಸಾಧುರ್ಭವತಿ ಸ ಕ್ವಚಿತ್ ॥೬॥

ಎಲೈ ಭರತರ್ಷಭನೇ! ಧರ್ಮವು ಮಾತಿಗಿಂತಲೂ ಮತ್ತು ಬುದ್ಧಿಗಿಂತಲೂ ಬಹಳ ಸೂಕ್ಷ್ಮವಾದುದು. ಧರ್ಮವನ್ನು ಕೇಳಿ, ಅನುಷ್ಠಾನ ಮಾಡಿ, ಸದಾಚಾರ-ಸಂಪನ್ನನಾದವನು ಸಜ್ಜನನಾಗುತ್ತಾನೆ. ಅಂತಹವರು ವಿರಳ.

ಧರ್ಮವಚನಕ್ಕಿಂತಲೂ ಧರ್ಮಬುದ್ಧಿಗಿಂತಲೂ ಧರ್ಮಾಚರಣೆಯೇ ಸೂಕ್ಷ್ಮ-ವಾದುದು (ಶ್ರೇಷ್ಠವಾದುದು). ಬಾಯಿಯಿಂದ ಧರ್ಮದ ಮಾತನಾಡಬಹುದು. ಮನಸ್ಸಿನಿಂದ ಧರ್ಮವನ್ನು ಸ್ಮರಿಸಬಹುದು ಆದರೆ ಧರ್ಮವನ್ನು ಆಚರಿಸುವುದು ಕಷ್ಟ ಎಂದು ಅಭಿಪ್ರಾಯ – ಲಕ್ಷ್ಯಾಲಂಕಾರ

ಕರ್ಮಣಾ ಬುದ್ಧಿಪೂರ್ವೇಣ ಭವತ್ಯಾದ್ಯೋ ನ ವಾ ಪುನಃ।
ತಾದೃಶೋಽಯಮನುಪ್ರಶ್ನಃ ಸ ವ್ಯವಸ್ಯಸ್ತ್ವಯಾ ಧಿಯಾ ॥೭॥

ಆದಿಕಾಲೀನವಾದ ಧರ್ಮವು ಬುದ್ಧಿಯಿಂದ ವಿಮರ್ಶೆ ಮಾಡಲ್ಪಡುತ್ತಿದ್ದಿತು ಅಥವಾ ತ್ಯಜಿಸಲ್ಪಡುತ್ತಿದ್ದಿತು. ನೀನು ಮಾಡಿರುವ ಪ್ರಶ್ನೆ ಅಂತಹದು. ಅದು ನೀನು ಬುದ್ಧಿಯಿಂದ ವಿಮರ್ಶೆ ಮಾಡಬೇಕು.

ಉಪಾಯಂ ಧರ್ಮಬಹುಲಂ ಯಾತ್ರಾರ್ಥಂ ಶೃಣು ಭಾರತ।
ನಾಹಮೇತಾದೃಶಂ ಧರ್ಮಂ ಬುಭೂಷೇ ಧರ್ಮಕಾರಣಾತ್।
ದುಃಖಾದಾನ ಇಹಾಢ್ಯೇಷು ಸ್ಯಾತ್ ತು ಪಶ್ಚಾತ್ ಕ್ಷಮೋ ಮತಃ ॥೮॥

ಎಲೈ ಭಾರತನೇ! ರಾಜ್ಯದ ಯಾತ್ರಾರ್ಥವಾಗಿ (ರಾಜ್ಯವನ್ನು ನಡೆಸುವುದಕ್ಕಾಗಿ) ಧರ್ಮವು ಹೆಚ್ಚಾಗಿರುವ (ಸ್ವಲ್ಪ ಅಧರ್ಮವೂ ಇರುವ) ಉಪಾಯವನ್ನು ಕೇಳು. ಧರ್ಮವನ್ನು ಸಂಪಾದಿಸುವ ಸಲುವಾಗಿ ನಾನು ಇಂತಹ ಉಪಾಯವನ್ನು ಆಶ್ರಯಿಸಲಾರೆ. ರಾಜನು ಆಪತ್ಕಾಲದಲ್ಲಿ ಧನಾಢ್ಯರಿಂದ ಅವರಿಗೆ ಹಿಂಸೆಯಾದರೂ ಧನವನ್ನು ಸಂಗ್ರಹಿಸಬೇಕು. ಅನಂತರ ಒಳ್ಳೆಯ ಕಾಲ ಬಂದಾಗ ಅವರನ್ನು ಕ್ಷಮಿಸ-ಬೇಕು ಎಂಬುದು ಅಭಿಪ್ರಾಯ.

ಅನುಗಮ್ಯ ಮತೀನಾಂ ಚ ಸರ್ವಾಸಾಮೇವ ನಿಶ್ಚಯಃ।
ಯಥಾ ಯಥಾ ಹಿ ಪುರುಷೋ ನಿತ್ಯಂ ಶಾಸ್ತ್ರಮವೇಕ್ಷತೇ।
ತಥಾ ತಥಾ ವಿಜಾನಾತಿ ವಿಜ್ಞಾನಂ ಚಾಸ್ಯ ರೋಚತೇ ॥೯॥

ಎಲ್ಲ ಬುದ್ಧಿಗಳನ್ನು ಒಂದುಗೂಡಿಸಿ ಒಂದು ನಿಶ್ಚಯಕ್ಕೆ ಬರಬೇಕು. ಮನುಷ್ಯನು ಸದಾ ಶಾಸ್ತ್ರವನ್ನು ನೋಡಿದಂತೆಲ್ಲಾ ಅವನಿಗೆ ವಿಜ್ಞಾನವುಂಟಾಗುತ್ತದೆ. ಆ ವಿಜ್ಞಾನವಾದರೋ ಅವನಿಗೆ ರುಚಿಸುತ್ತದೆ.

ಅವಿಜ್ಞಾನಾದಯೋಗಶ್ಚ ಪುರುಷಸ್ಯೋಪಜಾಯತೇ।
ವಿಜ್ಞಾನಾದಪಿ ಯೋಗಶ್ಚ ಯೋಗೋ ಭೂತಿಕರಃ ಪುನಃ ॥೧೦॥

ಅಂತಹ ಜ್ಞಾನವಿಲ್ಲದ ಮನುಷ್ಯರಿಗೆ ಆಪತ್ಕಾಲದಲ್ಲಿ ಪಾರಾಗುವ ಉಪಾಯವೇ ಉಂಟಾಗುವುದಿಲ್ಲ. ಆದರೆ ವಿಜ್ಞಾನದಿಂದ ಅಂತಹ ಉಪಾಯವು ತಿಳಿಯುತ್ತದೆ. ಆ ಉಪಾಯವು ಪುನಃ ಐಶ್ವರ್ಯವನ್ನು ತಂದುಕೊಡುತ್ತದೆ.

ಅಶಂಕಮಾನೋ ವಚನಮನಸೂಯುರಿದಂ ಶೃಣು।
ರಾಜ್ಞಃ ಕೋಶಕ್ಷಯಾದೇವ ಜಾಯತೇ ಬಲಸಂಕ್ಷಯಃ ॥೧೧॥

ನನ್ನ ಮಾತನ್ನು ಶಂಕಿಸದೇ ಅಸೂಯೆ ಪಡದೆ ಕೇಳುವವನಾಗು. ರಾಜನಿಗೆ ಕೋಶಕ್ಷಯದಿಂದಲೇ ಬಲದ ಕ್ಷಯವುಂಟಾಗುತ್ತದೆ.

ಕೋಶಂ ಸಂಜನಯೇದ್ ರಾಜಾ ನಿರ್ಜಲೇಭ್ಯೋ ಯಥಾ ಜಲಮ್।
ಕಾಲಂ ಪ್ರಾಪ್ಯಾನುಗೃಹ್ಣೀಯಾದೇಷ ಧರ್ಮೋಽತ್ರ ಸಾಂಪ್ರತಮ್।
ಉಪಾಯಧರ್ಮಂ ಪ್ರಾಪ್ಯೈನಂ ಪೂರ್ವೈರಾಚರಿತಂ ಜನೈಃ ॥೧೨॥

ಎತ್ತರದ ದುರ್ಗಾದಿ ಸ್ಥಳಗಳಿಗಾಗಿ ನೀರನ್ನು ಉತ್ಪಾದಿಸಿದಂತೆ ರಾಜನು ಕೋಶವನ್ನು ವೃದ್ಧಿಪಡಿಸಬೇಕು. ಯೋಗ್ಯವಾದ ಕಾಲದಲ್ಲಿ ಯಾರಿಂದ ಧನವನ್ನು ಸಂಗ್ರಹಿಸಿದೆಯೋ ಅವರಿಗೆ ಅನುಗ್ರಹವನ್ನು ಮಾಡಬೇಕು. ಇದು ಇಂತಹ ಆಪತ್ಕಾಲದಲ್ಲಿ ಅನುಸರಿಸಬೇಕಾದ ಧರ್ಮ. ಈ ಉಪಾಯವನ್ನು ಹಿಂದಿನ ರಾಜರೂ ಆಚರಿಸಿದರು. ಅಂತಹ ಉಪಾಯವನ್ನು ಆಚರಿಸಬೇಕು.

ಅನ್ಯೋ ಧರ್ಮಃ ಸಮರ್ಥಾನಾಮಾಪತ್ಸ್ವನ್ಯಶ್ಚ ಭಾರತ ॥೧೩॥

ಎಲೈ ಭಾರತನೇ! ಸಾಮರ್ಥ್ಯವಿದ್ದಾಗ ಬೇರೆಯ ಧರ್ಮವನ್ನೂ ಆಪತ್ತಿನಲ್ಲಿ ಬೇರೆಯ ಧರ್ಮವನ್ನೂ ಆಚರಿಸಬೇಕಾಗುತ್ತದೆ.

ಪ್ರಾಕ್ ಕಾರ್ಯಃ ಪ್ರೋಚ್ಯತೇ ಧರ್ಮೋ ವೃತ್ತಿರ್ಧರ್ಮಾದ್ ಗರೀಯಸೀ।
ಧರ್ಮಂ ಪ್ರಾಪ್ಯ ನ್ಯಾಯವೃತ್ತಿಮಬಲೀಯಾನ್ನ ವಿಂದತಿ ॥೧೪॥

ಧರ್ಮವನ್ನು ಮೊದಲು ಮಾಡಬೇಕೆಂದು ಹೇಳಲಾಗುತ್ತದೆ. ಆದರೆ ದೇಹ-ಧಾರಣೆಯು ಧರ್ಮಕ್ಕಿಂತಲೂ ದೊಡ್ಡದು. (ಶರೀರವೇ ಮೊದಲನೆಯ ಧರ್ಮ-ಸಾಧನವಷ್ಟೆ!) ಧರ್ಮವನ್ನು ಮಾಡಿದವನು (ಆ ಧರ್ಮವು ಸ್ವಲ್ಪ ಅಧರ್ಮದಿಂದ ಕೂಡಿದ್ದರೂ) ಬಲಿಷ್ಠನಾಗುವುದಿಲ್ಲ ಎಂಬುವುದಿಲ್ಲ. ಸ್ವರ್ಗವನ್ನು ಹೊಂದುವುದಿಲ್ಲ ಎಂಬುದಿಲ್ಲ - (ಲಕ್ಷಾಲಂಕಾರ)

ಯಸ್ಮಾದ್ ಧನಸ್ಯೋಪಪತ್ತಿರೇಕಾಂತೇನ ನ ವಿದ್ಯತೇ।
ತಸ್ಮಾದಾಪದ್ಯಧರ್ಮೋSಪಿ ಶ್ರೂಯತೇ ಧರ್ಮಲಕ್ಷಣಃ ॥೧೫॥

ಧರ್ಮದಿಂದಲೇ ಧನಸಂಗ್ರಹವು ಆಗುವುದು ಎಂಬ ನಿಯಮವಿಲ್ಲದಿರುವು-ದರಿಂದ ಆಪತ್ಕಾಲದಲ್ಲಿ ಅಧರ್ಮವೂ ಕೂಡ ಧರ್ಮವೆಂದು ಹೇಳಲ್ಪಡುತ್ತದೆ.

ಅಧರ್ಮೋ ಜಾಯತೇ ತಸ್ಮಿನ್ನಿತಿ ವೈ ಕವಯೋ ವಿದುಃ।
ಅನಂತರಃ ಕ್ಷತ್ರಿಯಸ್ಯ ಇತಿ ವೈ ವಿಚಿಕಿತ್ಸಸೇ ॥೧೬॥

ಆಪತ್ತಿಲ್ಲದ ಕಾಲದಲ್ಲಿ ಹಾಗೆ ಮಾಡಿದರೆ ಅಧರ್ಮವುಂಟಾಗುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ. ಆದರೆ ಕ್ಷತ್ರಿಯನಿಗೆ ಅದು ಅಪರಿಹಾರ್ಯ ಎಂಬ ಕಾರಣದಿಂದ ವಿಚಾರಮಾಡಲ್ಪಡುತ್ತದೆ.

ಯಥಾಸ್ಯ ಧರ್ಮೋ ನ ಗ್ಲಾಯೇನ್ನೇಯಾಚ್ಚತ್ರುವಶಂ ಯಥಾ।
ತತ್ ಕರ್ತವ್ಯಮಿಹೇತ್ಯಾಹುರ್ನಾತ್ಮಾನಮವಸಾದಯೇತ್ ॥೧೭॥

ತನ್ನ ಧರ್ಮವು ಲೋಪವಾಗದಂತೆ ತಾನು ಶತ್ರುವಶವಾಗದಂತೆ ರಾಜನು ತನ್ನನ್ನು ರಕ್ಷಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ರಾಜನು ಆತ್ಮನಾಶವನ್ನು ತಂದುಕೊಳ್ಳಬಾರದು.

ಸರ್ವಾತ್ಮನೈವ ಧರ್ಮಸ್ಯ ನ ಪರಸ್ಯ ನ ಚಾತ್ಮನಃ।
ಸರ್ವೋಪಾಯೈರುಜ್ಜಿಹೀರ್ಷೇದಾತ್ಮಾನಮಿತಿ ನಿಶ್ಚಯಃ ॥೧೮॥

ಸರ್ವರೀತಿಯಿಂದಲೂ ಧರ್ಮವನ್ನು ಆಚರಿಸುವುದಕ್ಕಾಗಿಯೇ ಸರ್ವೋಪಾಯಗಳಿಂದಲೂ ತನ್ನನ್ನು ರಕ್ಷಿಸಿಕೊಳ್ಳಬೇಕು. ತನ್ನ ಹೊಟ್ಟೆಯನ್ನು ತುಂಬಿಕೊಳ್ಳುವುದಕ್ಕಾಗಲೀ ಅಥವಾ ಇನ್ನೊಬ್ಬರ ಹೊಟ್ಟೆಯನ್ನು ತುಂಬುವುದಕ್ಕಾಗಲೀ ಅಲ್ಲ ಎಂಬುದು ನಿಶ್ಚಿತವಾದುದು – ಲಕ್ಷಾಲಂಕಾರ.

ತತ್ರ ಧರ್ಮವಿದಾಂ ತಾತ ನಿಶ್ಚಯೋ ಧರ್ಮನೈಪುಣಮ್।
ಉದ್ಯಮೋ ನೈಪುಣಂ ಕ್ಷಾತ್ರೇ ಬಾಹುವೀರ್ಯಾದಿತಿ ಶ್ರುತಿಃ ॥೧೯॥

ಎಲೈ ಪ್ರೀತಿಪಾತ್ರನೇ! ಕ್ಷತ್ರಿಯಧರ್ಮದಲ್ಲಿ ನಾನು ಇದನ್ನು ಮಾಡುತ್ತೇನೆಂಬ ನಿಯಮವು ಧರ್ಮದ ಮೊದಲನೆಯ ನಿಪುಣತೆ. ಬಾಹುಪರಾಕ್ರಮದಿಂದ ಪ್ರಯತ್ನವನ್ನು ಮಾಡುವುದು ಎರಡನೆಯ ನಿಪುಣತೆ ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಕ್ಷತ್ರಿಯೋ ವೃತ್ತಿಸಂರೋಧೇ ಕಸ್ಮಾನ್ನಾದಾತುಮರ್ಹತಿ।
ಅನ್ಯತ್ರ ತಾಪಸಸ್ವಾಚ್ಚ ಬ್ರಾಹ್ಮಣಸ್ವಾಚ್ಚ ಭಾರತ ॥೨೦॥

ಕ್ಷತ್ರಿಯನಿಗೆ ಅವನ ಜೀವನ ವೃತ್ತಿಯೇ ಕಷ್ಟಕ್ಕೆ ಸಿಲುಕಿದಾಗ ಎಲೈ ಭಾರತನೇ! ಅವನು ತಪಸ್ವಿಗಳನ್ನು ಬಿಟ್ಟು, ಬ್ರಾಹ್ಮಣರನ್ನು ಬಿಟ್ಟು ಉಳಿದವರಿಂದ ಏಕೆ ಧನವನ್ನು ಸಂಗ್ರಹಿಸಬಾರದು?

ಯಥಾ ವೈ ಬ್ರಾಹ್ಮಣಃ ಸೀದನ್ನಯಾಜ್ಯಮಿತಿ ಯಾಜಯೇತ್।
ಅಭೋಜ್ಯಾನ್ನಾನಿ ಚಾಶ್ನೀಯಾತ್ ತಥೇದಂ ನಾತ್ರ ಸಂಶಯಃ ॥೨೧॥

ಬ್ರಾಹ್ಮಣನು ಕಷ್ಟಕ್ಕೆ ಸಿಲುಕಿದಾಗ ಅಯಾಜ್ಯರಿಗೂ ಯಾಗವನ್ನು ಮಾಡಿಸಿದಂತೆ ಅಭೋಜ್ಯಾನ್ನವನ್ನು ಭಕ್ಷಿಸುವಂತೆ ಈ ಆಪದ್ಧರ್ಮವು ಇದೆ ಎಂಬುದರಲ್ಲಿ ಸಂಶಯವಿಲ್ಲ.

ಪೀಡಿತಸ್ಯ ಕಿಮದ್ವಾರಮುತ್ಪಥೋ ನಿಧೃತಸ್ಯ ವಾ।
ಅದ್ವಾರತಃ ಪ್ರದ್ರವತಿ ಯದಾ ಭವತಿ ಪೀಡಿತಃ ॥೨೨॥

ಪೀಡಿತನಾದವನಿಗೆ ಯಾವುದು ಸರಿಯಾದ ದ್ವಾರವಲ್ಲವೆನಿಸುತ್ತದೆ? ಬಂಧನಕ್ಕೆ ಸಿಲುಕಿ ಬಿಡಿಸಿಕೊಳ್ಳುವವನಿಗೆ ಯಾವುದು ಸರಿಯಾದ ಮಾರ್ಗವೆನಿಸುವುದಿಲ್ಲ? ಪೀಡಿತನಾದವನು ದ್ವಾರವಲ್ಲದ ಕಡೆಯಿಂದಲೇ ಓಡಿಹೋಗುತ್ತಾನೆ.

ತಸ್ಯ ಕೋಶಬಲಜ್ಯಾನ್ಯಾ ಸರ್ವಲೋಕಪರಾಭವಃ।
ಭೈಕ್ಷಚರ್ಯಾ ನ ವಿಹಿತಾ ನ ಚ ವಿಟ್-ಶೂದ್ರಜೀವಿಕಾ ॥೨೩॥

ರಾಜನ ಕೋಶಬಲಗಳು ಕ್ಷೀಣವಾದರೆ ಸರ್ವಪ್ರಜೆಗಳು ಪರಾಭವವನ್ನು ಹೊಂದುತ್ತಾರೆ. ಭಿಕ್ಷಾವೃತ್ತಿಯಾಗಲೀ, ವೈಶ್ಯಶೂದ್ರರ ಜೀವನವಾಗಲೀ ರಾಜನಿಗೆ ವಿಹಿತವಾದುದಲ್ಲ.

ಸ್ವಧರ್ಮಾನಂತರಾ ವೃತ್ತಿರ್ಯಾ ಅನ್ಯಾऽನುಪಜೀವತಃ।
ಅರ್ಹತಃ ಪ್ರಥಮಂ ಕಲ್ಪಮನುಕಲ್ಪೇನ ಜೀವನಮ್ ॥೨೪॥

ಸರ್ವಥಾ ಉಪಜೀವನ ರಹಿತನಾದ ಕ್ಷತ್ರಿಯನಿಗೆ ಸ್ವಧರ್ಮಾನಂತರದ ವೃತ್ತಿ ಎಂದರೆ ವೈಶ್ಯವೃತ್ತಿಯು ವಿಹಿತವಾಗುತ್ತದೆ. ಯೋಗ್ಯನಾದವನಿಗೆ (ಸಮರ್ಥನಾದವನಿಗೆ) ತಮ್ಮ ತಮ್ಮ ಧರ್ಮದಲ್ಲಿನ ವೃತ್ತಿಯೇ ಶ್ರೇಷ್ಠವಾದ ಪಕ್ಷ. ಸಾಮರ್ಥ್ಯವಿಲ್ಲ-ದಿದ್ದಾಗ ಎರಡನೆಯ ಕಲ್ಪದಿಂದ ಜೀವಿಸಬಹುದು.

ಆಪದ್ಗತೇನ ಧರ್ಮಾಣಾಮನುಕಲ್ಪೇನ ಜೀವಿತುಮ್।
ತಜ್ಜೀವನಂ ಬ್ರಾಹ್ಮಣೇಷು ದುಷ್ಟಂ ವೃತ್ತಿಪರಿಕ್ಷಯೇ ॥೨೫॥

ಧರ್ಮಸಂಕಟಕ್ಕೆ ಸಿಲುಕಿದ ಮನುಷ್ಯನು ಪ್ರಥಮಕಲ್ಪವನ್ನು ಬಿಟ್ಟು,ಅನಂತರ

ಪಕ್ಷದಿಂದ ಜೀವಿಸಲು ಸಾಧ್ಯವಾಗುತ್ತದೆ. ಜೀವನೋಪಾಯವನ್ನು ಕಳೆದುಕೊಂಡ ಬ್ರಾಹ್ಮಣರಲ್ಲಿ ಅಂತಹ ಜೀವನವು ದೃಷ್ಟವಾಗಿದೆ.

ಕ್ಷತ್ರಿಯೇ ಸಂಶಯಃ ಕಃ ಸ್ಯಾದಿತ್ಯೇತನ್ನಿಶ್ಚಿತಂ ಸದಾ ।
ಆದದೀತ ವಿಶಿಷ್ಟೇಭ್ಯೋ ನಾವಸೀದೇತ್ ಕಥಂಚನ ॥೨೬॥

ಹಾಗಾದರೆ ಕ್ಷತ್ರಿಯರ ವಿಷಯದಲ್ಲಿ ಏನು ಸಂಶಯ? ಹೀಗೆ ಯಾವಾಗಲೂ ನಿಶ್ಚಯಿಸಲ್ಪಟ್ಟಿದೆ. ಧನಾಢ್ಯರಿಂದ ಧನವನ್ನು ಸಂಗ್ರಹಿಸಬೇಕು. ರಾಜನು ಯಾವ ರೀತಿ -ಯಲ್ಲಿಯೂ ನಾಶವನ್ನು ಹೊಂದಬಾರದು.

ದಾತಾರಂ ರಕ್ಷಿತಾರಂ ಚ ಪ್ರಜಾನಾಂ ಕ್ಷತ್ರಿಯಂ ವಿದುಃ ।
ತಸ್ಮಾತ್ ಸಂರಕ್ಷತಾ ಕಾರ್ಯಮಾದಾನಂ ಕ್ಷತ್ರಬಂಧುನಾ ॥೨೭॥

ಪ್ರಜೆಗಳಿಂದ ಧನವನ್ನು ತೆಗೆದುಕೊಂಡು ಅವರನ್ನು ರಕ್ಷಿಸುವವನನ್ನು ಕ್ಷತ್ರಿಯ-ನೆಂದು ಹೇಳುತ್ತಾರೆ. ಆದ್ದರಿಂದ ರಕ್ಷಣೆಯನ್ನು ಮಾಡುವ ಕ್ಷತ್ರಿಯನು ಅವಶ್ಯವಾಗಿ ಧನವನ್ನು ಸಂಗ್ರಹಿಸಬೇಕಾಗುತ್ತದೆ.

ಅನ್ಯತ್ರ ರಾಜನ್ ಹಿಂಸಾಯಾ ವೃತ್ತಿರ್ನೇಹಾಸ್ತಿ ಕಸ್ಯಚಿತ್ ।
ಅಪ್ಯರಣ್ಯಸಮುತ್ಥಸ್ಯ ಏಕಸ್ಯ ಚರತೋ ಮುನೇಃ ॥೨೮॥

ಎಲೈ ರಾಜನೇ! ಹಿಂಸೆಯನ್ನು ಬಿಟ್ಟು ಈ ಜಗತ್ತಿನಲ್ಲಿ ಯಾವ ಪ್ರಾಣಿಯೂ ಜೀವಿಸುವುದಿಲ್ಲ. ಅರಣ್ಯವಾಸವನ್ನು ಮಾಡಿ ಒಬ್ಬನೇ ವಾಸಿಸುವ ಮುನಿಗೂ ಧಾನ್ಯಾದಿ ಹಿಂಸೆಯೂ ಮತ್ತು ಅರಣ್ಯಮೃಗಗಳ ಹಿಂಸೆಯೂ ಅನಿವಾರ್ಯ-ವಾಗುತ್ತದೆ.

ನ ಶಂಖಲಿಖಿತಾಂ ವೃತ್ತಿಂ ಶಕ್ಯಮಾಸ್ಥಾಯ ಜೀವಿತುಮ್ ।
ವಿಶೇಷತಃ ಕುರುಶ್ರೇಷ್ಠ ಪ್ರಜಾಪಾಲನಮೀಪ್ಸತಾ ॥೨೯॥

ಎಲೈ ಕುರುಶ್ರೇಷ್ಠನೇ! ಹಣೆಯಲ್ಲಿ ಬರೆದಂತಾಗುತ್ತದೆ ಎಂದು ಬದುಕಿರಲು

ಸಾಧ್ಯವಿಲ್ಲ. ಅದರಲ್ಲೂ ವಿಶೇಷವಾಗಿ ಪ್ರಜಾಪಾಲನೆಯನ್ನು ಮಾಡಲು ಬಯಸುವವನು ಆ ರೀತಿಯಲ್ಲಿ ಬದುಕಲು ಸಾಧ್ಯವಿಲ್ಲ - ಲಕ್ಷಾಲಂಕಾರ.

ಪರಸ್ಪರಾಭಿಸಂರಕ್ಷಾ ರಾಜ್ಞಾ ರಾಷ್ಟ್ರೇಣ ಚಾಪದಿ।
ನಿತ್ಯಮೇವೇಹ ಕರ್ತವ್ಯಾ ಏಷ ಧರ್ಮಃ ಸನಾತನಃ ॥೩೦॥

ಆಪತ್ತು ಒದಗಿದ ಎಲ್ಲ ಸಂದರ್ಭದಲ್ಲಿಯೂ ರಾಜ ಮತ್ತು ರಾಷ್ಟ್ರ ಇವು ಪರಸ್ಪರವಾಗಿ ರಕ್ಷಿಸಬೇಕು ಎಂಬುದು ಸನಾತನವಾದ ಧರ್ಮ.

ರಾಜಾ ರಾಷ್ಟ್ರಂ ಯಥಾಪತ್ಸು ದ್ರವ್ಯೌಘೈಃ ಪರಿರಕ್ಷತಿ।
ರಾಷ್ಟ್ರೇಣ ರಾಜಾ ವ್ಯಸನೇ ಪರಿರಕ್ಷ್ಯಸ್ತಥಾ ಭವೇತ್ ॥೩೧॥

ಆಪತ್ಕಾಲದಲ್ಲಿ ರಾಜನು ರಾಷ್ಟ್ರವನ್ನು ಧನಪ್ರವಾಹದಿಂದ ರಕ್ಷಿಸುವಂತೆ, ರಾಜನು ಆಪತ್ತಿಗೆ ಸಿಲುಕಿದಾಗ ರಾಷ್ಟ್ರವೂ ಕೂಡ ಅವನನ್ನು ಹಾಗೆಯೇ ರಕ್ಷಿಸಬೇಕು.

ಕೋಶಂ ದಂಡಂ ಬಲಂ ಮಿತ್ರಂ ಯದನ್ಯದಪಿ ಸಂಚಿತಮ್।
ನ ಕುರ್ವೀತಾಂತರಂ ರಾಷ್ಟ್ರೇ ರಾಜಾ ಪರಿಗತೇ ಕ್ಷುಧಾ।
ಬೀಜಂ ಭಕ್ತೇನ ಸಂಪಾದ್ಯಮಿತಿ ಧರ್ಮವಿದೋ ವಿದುಃ ॥೩೨॥

ರಾಷ್ಟ್ರವು ಹಸಿವಿನಿಂದ ಬಳಲುವಾಗ ತನ್ನ ಕೋಶ, ದಂಡ, ಬಲ, ಮಿತ್ರರು, ಸಂಚಿತವಾದ ಬೇರೆ ಯಾವುದೇ ವಸ್ತು, ಯಾವುದನ್ನೂ ಉಪಯೋಗಿಸಲು ತಡ ಮಾಡಬಾರದು. ಧರ್ಮಬೀಜವನ್ನು ಅನ್ನದಿಂದ ಸಂಪಾದಿಸಬೇಕೆಂಬುದು ಧರ್ಮವನ್ನು ತಿಳಿದವರು ಹೇಳುವ ಮಾತು.

ಅತ್ರೈತಚ್ಚಂಬರಸ್ಯಾಹುರ್ಮಹಾಮಾಯಸ್ಯ ದರ್ಶನಮ್ ॥೩೩॥

ವಿತ್ತಸ್ಯ ಜೀವಿತಂ ರಾಜ್ಞೋ ರಾಷ್ಟ್ರೇ ಯಸ್ಯಾವಸೀದತಿ।
ಅವೃತ್ತ್ಯಾಂತ್ಯಮನುಷ್ಯೋಽಪಿ ಯೋ ವೈ ವೇದ ಶಿಬೇರ್ವಚಃ ॥೩೪॥

ರಾಷ್ಟ್ರವು ಅವನತಿಗೆ ಒಳಗಾದಾಗ ರಾಜನು ಧನವನ್ನೇ ಆಶಿಸಬೇಕು. ಅವಸಾನ-

ವನ್ನು ಹೊಂದಬಾರದು. ಅನಂತರ ಪ್ರಜಾಪಾಲನವನ್ನು ಮಾಡಬೇಕು ಎಂಬುವ ವಿಷಯದಲ್ಲಿ ಮಹಾಮಾಯೆಗಳನ್ನು ಹೊಂದಿದ ಶಂಬರನ ಚರಿತ್ರೆಯು ನಿದರ್ಶನವಾಗಿದೆ.

ರಾಷ್ಟ್ರವು ಆಪತ್ತಿಗೆ ಒಳಗಾದಾಗ ಸಮಾಜದ ಅಂತ್ಯಮನುಷ್ಯನೂ ಜೀವನೋಪಾಯವನ್ನು ಹೊಂದದಿರುವಾಗ ಶಿಬಿಯ ವಚನವನ್ನು ತಿಳಿದವನು ವಿತ್ತಕ್ಕಾಗಿಯೇ ಪ್ರಯತ್ನಪಡಬೇಕು. ನಾಶವನ್ನು ಹೊಂದಬಾರದು ಧನಪ್ರಾಪ್ತಿಯ ಅನಂತರ ಪ್ರಜಾಪಾಲನವನ್ನು ಮಾಡಬೇಕು ಎಂಬುವ ವಿಷಯದಲ್ಲಿ ಮಹಾಮಾಯೆಗಳನ್ನು ಹೊಂದಿದ ಶಂಬರನ ಚರಿತ್ರೆಯು ನಿದರ್ಶನವಾಗಿದೆ.

ರಾಜ್ಞಃ ಕೋಶಬಲಂ ಮೂಲಂ ಕೋಶಮೂಲಂ ಪುನರ್ಬಲಮ್ ।
ತನ್ಮೂಲಂ ಸರ್ವಧರ್ಮಾಣಾಂ ಧರ್ಮಮೂಲಾಃ ಪುನಃ ಪ್ರಜಾಃ ॥೩೫॥

ರಾಜನಿಗೆ ಕೋಶಬಲವು ಮೂಲವಾದುದು. ಮತ್ತು ರಾಜನ ಬಲವು ಕೋಶಮೂಲವಾದುದು. ರಾಜನ ಬಲವು ಎಲ್ಲ ಧರ್ಮಗಳಿಗೂ ಮೂಲವಾದುದು. ಎಲ್ಲ ಪ್ರಜೆಗಳಿಗೂ ಧರ್ಮವು ಮೂಲವಾದುದು.

ನಾನ್ಯಾನಪೀಡಯಿತ್ವೇಹ ಕೋಶಃ ಶಕ್ಯಃ ಕುತೋ ಬಲಮ್ ।
ತದರ್ಥೇ ಪೀಡಯಿತ್ವಾ ಚ ದೋಷಂ ನ ಪ್ರಾಪ್ತುಮರ್ಹತಿ ॥೩೬॥

ಇನ್ನೊಬ್ಬರಿಗೆ ಪೀಡೆಯನ್ನು ಮಾಡದೇ ಕೋಶವನ್ನು ಸಂಪಾದಿಸಲು ಸಾಧ್ಯವಿಲ್ಲ. ಇನ್ನು ಕೋಶಮೂಲವಾದ ಬಲವು ಎಲ್ಲಿಂದ ಬಂದೀತು? ಕೋಶಕ್ಕಾಗಿ ಪೀಡಿಸಿದರೂ ಸಹ ರಾಜನು ದೋಷವನ್ನು ಹೊಂದುವುದಿಲ್ಲ.

ಅಕಾರ್ಯಮಪಿ ಕಾರ್ಯಾರ್ಥಂ ಕ್ರಿಯತೇ ಯಜ್ಞಕರ್ಮಸು ।
ಏತಸ್ಮಾತ್ ಕಾರಣಾದ್ ರಾಜಾ ನ ದೋಷಂ ಪ್ರಾಪ್ತುಮರ್ಹತಿ ॥೩೭॥

ಯಜ್ಞಗಳಲ್ಲಿ ಅಕಾರ್ಯವಾದ ಪ್ರಾಣಿಹಿಂಸೆಯನ್ನು ಸ್ವರ್ಗಾರ್ಥವಾಗಿ ಮಾಡು-

ತ್ತಾರೆ. ಆ ಕಾರಣದಿಂದ ಒಳ್ಳೆಯ ಉದ್ದೇಶದಿಂದ ಕೆಟ್ಟ ಕಾರ್ಯವನ್ನು ಮಾಡಿದರೂ ದೋಷವಾಗುವುದಿಲ್ಲ.

ಅರ್ಥಾರ್ಥಮನ್ಯದ್ ಭವತಿ ವಿಪರೀತಮಥಾಪರಮ್ ।
ಅನರ್ಥಾರ್ಥಮಥಾಪ್ಯನ್ಯತ್ ತತ್ ಸರ್ವಂ ಹ್ಯರ್ಥಕಾರಣಮ್ ।
ಏವಂ ಬುದ್ಧ್ಯಾ ಸಂಪ್ರಪಶ್ಯೇನ್ಮೇಧಾವೀ ಕಾರ್ಯನಿಶ್ಚಯಮ್ ॥೩೮॥

ಅರ್ಥಸಂಪಾದನೆಯ ಸಲುವಾಗಿ ಶುಭವಾದ ಉಪಾಯವು ಮತ್ತು ಅಶುಭವಾದ ಉಪಾಯವು ಉಂಟಾಗುತ್ತದೆ. ಇಲ್ಲದಿದ್ದರೆ ರಾಷ್ಟ್ರಾದಿಗಳು ನಿಷ್ಪ್ರಯೋಜನವಾಗುತ್ತವೆ. ಆದ್ದರಿಂದ ಸರ್ವವೂ ಅರ್ಥಕಾರಣವಾಗುತ್ತದೆ. ಮೇಧಾವಿಯಾದವನು ಹೀಗೆ ತನ್ನ ಬುದ್ಧಿಯಿಂದ ನಿಶ್ಚಯಿಸಿ ಕಾರ್ಯವನ್ನು ಮಾಡಬೇಕು - ಲಕ್ಷಾಲಂಕಾರ.

ಯಜ್ಞಾರ್ಥಮನ್ಯದ್ ಭವತಿ ಯಜ್ಞಾದ್ಯರ್ಥಸ್ತಥಾ ಪರಃ ।
ಯಜ್ಞಶ್ಚಾರ್ಥಾರ್ಥಮೇವೈತತ್ ತತ್ ಸರ್ವಂ ಯಜ್ಞಸಾಧನಮ್ ॥೩೯॥

ಸಂಗ್ರಹಿಸಿದ ಧನಧಾನ್ಯಾದಿಗಳು ಯಜ್ಞದ ಸಲುವಾಗಿ ಇರುತ್ತವೆ. ಯಜ್ಞವು ಪರಲೋಕದ ಸಲುವಾಗಿ ಇದೆ. ಆದರೆ ಯಜ್ಞದಿಂದ ಪರ್ಜನ್ಯನುಉಂಟಾಗುತ್ತಾನೆ. ಪರ್ಜನ್ಯದಿಂದ ಅನ್ನವು ಉಂಟಾಗುತ್ತದೆ ಎಂಬ ವಚನದಂತೆ ಯಜ್ಞದಿಂದ ಅನ್ನವು ಉಂಟಾಗುವುದರಿಂದ ಈ ಲೋಕದಲ್ಲಿ ಯಜ್ಞವು ಅಂತತಃ ಅನ್ನದ ಸಲುವಾಗಿಯೇ ಇದೆ. ಆದ್ದರಿಂದ ಎಲ್ಲವೂ ಯಜ್ಞದ ಸಾಧನವಾಗುತ್ತದೆ. (ಅದರಂತೆ ಒಳ್ಳೆಯ ಉದ್ದೇಶದಿಂದ ಮಾಡಿದ ಶುಭಾಶುಭಉಪಾಯಗಳು ಶುಭಕ್ಕೇ ಸಾಧನೆಯಾಗುತ್ತವೆ.) – ಲಕ್ಷಾಲಂಕಾರ.

ಉಪಮಾಮತ್ರ ವಕ್ಷ್ಯಾಮಿ ಧರ್ಮತತ್ತ್ವಪ್ರಕಾಶಿನೀಮ್ ।
ಯೂಪಂ ಛಿಂದಂತಿ ಯಜ್ಞಾರ್ಥಂ ತತ್ರ ಯೇ ಪರಿಪಂಥಿನಃ ॥೪೦॥

ದ್ರುಮಾಃ ಕೇಚನ ಸಾಮಂತಾ ಧ್ರುವಂ ಛಿಂದಂತಿ ತಾನಪಿ ।
ತೇ ಚಾಪಿ ನಿಪತಂತೋಽನ್ಯಾನ್ ನಿಘ್ನಂತಿ ಚ ವನಸ್ಪತೀನ್ ॥೪೧॥

ಧರ್ಮತತ್ವವನ್ನು ಚೆನ್ನಾಗಿ ತಿಳಿಸುವ ಒಂದು ದೃಷ್ಟಾಂತವನ್ನು ಈ ವಿಷಯದಲ್ಲಿ ಹೇಳುವೆನು. (ಇನ್ನೊಬ್ಬರನ್ನು ಪೀಡಿಸದೇ ಕೋಶವನ್ನು ಸಂಪಾದಿಸಲು ಸಾಧ್ಯವಿಲ್ಲ ಎಂಬ ವಿಷಯದಲ್ಲಿ ಈ ದೃಷ್ಟಾಂತವನ್ನು ಹೇಳುವೆನು). ಯಜ್ಞವನ್ನು ಮಾಡುವ ಸಲುವಾಗಿ ಯೂಪವನ್ನು ಕತ್ತರಿಸುತ್ತಾರೆ. (ಒಂದು ವೃಕ್ಷವನ್ನು ಕಡಿದು ಯೂಪವನ್ನು ಮಾಡುತ್ತಾರೆ). ಯೂಪವನ್ನು ಮಾಡುವುದರ ಸಲುವಾಗಿ ಅದಕ್ಕೆ ತೊಂದರೆಯನ್ನು ಮಾಡುವ ಸುತ್ತಲೂ ಬೆಳೆದಿರುವ ಮರಗಳನ್ನು ಅವಶ್ಯವಾಗಿ ಕತ್ತರಿಸುತ್ತಾರೆ. ಆ ಮರಗಳು ಬೀಳುತ್ತಾ ಬೇರೆ ಮರಗಳನ್ನು ಉರುಳಿಸುತ್ತವೆ.

ಏವಂ ಕೋಶಸ್ಯ ಮಹತೋ ಯೇ ನರಾಃ ಪರಿಪಂಥಿನಃ।
ತಾನಹತ್ವಾ ನ ಪಶ್ಯಾಮಿ ಸಿದ್ಧಿಮತ್ರ ಪರಂತಪ ॥೪೨॥

ಹೀಗೆ ಯಾವ ಮನುಷ್ಯರು ರಾಜನ ದೊಡ್ಡಕೋಶಕ್ಕೆ ವಿರೋಧಿಗಳೋ ಎಲೈ ಪರಂತಪನೇ! ಅವರನ್ನು ಕೊಲ್ಲದೇ ನಾನು ಕೋಶಸಿದ್ಧಿಯನ್ನು ಕಾಣುವುದಿಲ್ಲ.

ಧನೇನ ಜಯತೇ ಲೋಕಾವುಭೌ ಪರಮಿಮಂ ತಥಾ।
ಸತ್ಯಂ ಚ ಧರ್ಮವಚನಂ ಯಥಾ ನಾಸ್ತ್ಯಧನಸ್ತಥಾ ॥೪೩॥

ಧನದಿಂದ ಈ ಲೋಕವನ್ನೂ, ಪರಲೋಕವನ್ನೂ, ಸತ್ಯವಚನವನ್ನೂ, ಧರ್ಮವಚನವನ್ನೂ ಎಲ್ಲವನ್ನೂ ಸಂಪಾದಿಸುತ್ತಾನೆ. ನಿರ್ಧನನಾದ ಮನುಷ್ಯನು ಇದ್ದರೂ ಇಲ್ಲದಂತೆಯೇ ಸರಿ.

ಸರ್ವೋಪಾಯೈರಾದದೀತ ಧನಂ ಯಜ್ಞಪ್ರಯೋಜನಮ್।
ನ ತುಲ್ಯದೋಷಃ ಸ್ಯಾದೇವಂ ಕಾರ್ಯಾಕಾರ್ಯೇಷು ಭಾರತ ॥೪೪॥

ಯಜ್ಞಕ್ಕೆ ಕಾರಣವಾದ ಧನವನ್ನು ಸರ್ವೋಪಾಯಗಳಿಂದಲೂ ಸಂಗ್ರಹಿಸಬೇಕು. ಎಲೈ ಭಾರತನೇ! ಹಾಗೆ ಮಾಡಿದರೆ ಕಾರ್ಯಾಕಾರ್ಯಗಳಲ್ಲಿ ಸಮಾನದೋಷವುಂಟಾಗುವುದಿಲ್ಲ. ಯೂಪದ ಸಲುವಾಗಿ ಅನೇಕ ಮರಗಳನ್ನು ಉರುಳಿಸುವಾಗ ಶ್ರೇಷ್ಠವಾದ ಕಾರ್ಯದ ಸಲುವಾಗಿ ಅಕಾರ್ಯವನ್ನು ಮಾಡಿದರೂ

ಕೇವಲ ಅಕಾರ್ಯವನ್ನು ಮಾಡಿದ ದೋಷಕ್ಕೆ ಸಮಾನವಾದ ದೋಷವು ಉಂಟಾಗುವುದಿಲ್ಲ. ಅದರಂತೆ ಧನಸಂಗ್ರಹಲ್ಲಿಯೂ ಅಕಾರ್ಯಮಿಶ್ರಿತವಾದ ಕಾರ್ಯವನ್ನು ಮಾಡಿದರೆ ದೋಷವುಂಟಾಗುವುದಿಲ್ಲ. - (ಲಕ್ಷಾಲಂಕಾರ)

ನೋಭೌ ಸಂಭವತೋ ರಾಜನ್ ಕಥಂಚಿದಪಿ ಭಾರತ।
ನ ಹ್ಯರಣ್ಯೇಷು ಪಶ್ಯಾಮಿ ಧನವೃದ್ಧಾನಹಂ ಕ್ವಚಿತ್ ॥೪೫॥

ಎಲೈ ರಾಜನೇ! ಶುಭಕಾರ್ಯವನ್ನುಮಾಡಿದಾಗ ದೋಷ ಮತ್ತು ಗುಣ ಎರಡೂ ಉಂಟಾಗುವುದಿಲ್ಲ. ಅರಣ್ಯದಲ್ಲಿ ನಾನು ಯಾವರೀತಿಯಿಂದಲೂ ಧನವೃದ್ಧಿಯನ್ನು ಕಾಣಲಾರೆ. ಸಮುದ್ರದ ನೀರಿನಲ್ಲಿ ಸ್ವಲ್ಪ ಇಂಗನ್ನು ಹಾಕಿದರೆ ಹೇಗೆ ಇಂಗಿನಪರಿಮಳವು ಬರುವುದಿಲ್ಲವೋ ಅದರಂತೆ ಬಹುತರಪುಣ್ಯಕ್ಕೆ ಅನುಕೂಲವಾದ ಸ್ವಲ್ಪ ಪಾಪದಿಂದ ಬೆರೆತ ಕರ್ಮವು ಪುಣ್ಯಕರವೇ ಆಗುತ್ತದೆ. ಅದರಲ್ಲಿ ದೋಷವಿಲ್ಲ ಎಂಬುದು ಅಭಿಪ್ರಾಯ – ಲಕ್ಷಾಲಂಕಾರ.

ಯದಿದಂ ದೃಶ್ಯತೇ ವಿತ್ತಂ ಪೃಥಿವ್ಯಾಮಿಹ ಕಿಂಚನ।
ಮಮೇದಂ ಸ್ಯಾನ್ಮಮೇದಂ ಸ್ಯಾದಿತ್ಯಯಂ ಕಾಂಕ್ಷತೇ ಜನಃ ॥೪೬॥

ಈ ಭೂಮಿಯಲ್ಲಿ ಯಾವ ಅಲ್ಪವಾದ ವಿತ್ತವು ಕಂಡುಬರುತ್ತದೆಯೋ 'ಅದು ನನಗೆ ಇರಲಿ, ನನಗೆ ಇರಲಿ' ಎಂದು ಜನರು ಬಯಸುತ್ತಾರೆ.

ನ ಚ ರಾಜ್ಯಸಮೋ ಧರ್ಮಃ ಕಶ್ಚಿದಸ್ತಿ ಪರಂತಪ।
ಧರ್ಮಃ ಸಂಶಬ್ದಿತೋ ರಾಜ್ಞಾಮಾಪದರ್ಥಮತೋಽನ್ಯಥಾ ॥೪೭॥

ಎಲೈ ಪರಂತಪನೇ! ರಾಜ್ಯಪಾಲನೆಗೆ ಸಮನಾದ ಧರ್ಮವಿಲ್ಲ. ರಾಜರಿಗೆ ಪ್ರಜಾಪಾಲನರೂಪವಾದ ರಾಜ್ಯಧರ್ಮವು ಸಮೀಚೀನವಾದ ಧರ್ಮ ಎಂದು ಹೇಳಲ್ಪಡುತ್ತದೆ. ಆಪತ್ಕಾಲದಲ್ಲಿ ಪ್ರಜಾಪೀಡೆಯಿಂದ ಧನವನ್ನು ಸಂಗ್ರಹಿಸುವುದು ಅಧರ್ಮವಾದರೂ ಸಮೀಚೀನವಾದ ಧರ್ಮವೆಂದು ಹೇಳಲ್ಪಡುತ್ತದೆ – ಲಕ್ಷಾಲಂಕಾರ.

ದಾನೇನ ಕರ್ಮಣಾ ಚಾನ್ಯೇ ತಪಸಾऽನ್ಯೇ ತಪಸ್ವಿನಃ।
ಬುದ್ಧ್ಯಾ ದಾಕ್ಷ್ಯೇಣ ಚಾಪ್ಯನ್ಯೇ ಚಿನ್ವಂತಿ ಧನಸಂಚಯಾನ್ ॥೪೮॥

ತಪಸ್ವಿಗಳಾದವರು ದಾನದಿಂದ ಕರ್ಮದಿಂದ ಇನ್ನು ಕೆಲವರು ತಪಸ್ಸಿನಿಂದ ಇನ್ನುಕೆಲವರು ಬುದ್ಧಿಯಿಂದ, ಇನ್ನು ಕೆಲವರು ದಕ್ಷತೆಯಿಂದ ಧನಸಂಗ್ರಹವನ್ನು ಮಾಡುತ್ತಾರೆ.

ಸರ್ವಂ ಧನವತಃ ಪ್ರಾಪ್ಯಂ ಸರ್ವಂ ತರತಿ ಕೋಶವಾನ್।
ಕೋಶಾದ್ ಧರ್ಮಶ್ಚ ಕಾಮಶ್ಚ ಪರೋ ಲೋಕಸ್ತಥಾಪ್ಯಯಮ್।
ತಂ ಚ ಧರ್ಮೇಣ ಲಿಪ್ಸೇತ ನಾಧರ್ಮೇಣ ಕದಾಚನ ॥೪೯॥

ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ರಾಜಧರ್ಮೇ ಏಕೋನತ್ರಿಂಶತ್ಯಧಿಕಶತತಮೋऽಧ್ಯಾಯಃ ॥೧೨೯॥

॥ ಸಮಾಪ್ತಂ ರಾಜಧರ್ಮಪರ್ವ ॥

ಧನವುಳ್ಳವನು ಎಲ್ಲವನ್ನೂ ಸಂಪಾದಿಸುತ್ತಾನೆ. ಕೋಶವುಳ್ಳವನು ಎಲ್ಲ ಕಷ್ಟಗಳನ್ನೂ ದಾಟುತ್ತಾನೆ. ಕೋಶದಿಂದ ಧರ್ಮ, ಕಾಮ, ಪರಲೋಕ, ಈ ಲೋಕ ಎಲ್ಲವೂ ಸಿದ್ಧಿಸುತ್ತವೆ. ಕೋಶವನ್ನಾದರೂ ಧರ್ಮದಿಂದ ಪಡೆಯಲು ಪ್ರಯತ್ನಿಸ-ಬೇಕು. ಅಧರ್ಮದಿಂದ ಪಡೆಯಲು ಬಯಸಬಾರದು.

ರಾಜಧರ್ಮಪರ್ವಕನ್ನಡಾನುವಾದದಲ್ಲಿ ೧೨೯ನೇ ಅಧ್ಯಾಯವು ಮುಗಿಯಿತು
ರಾಜಧರ್ಮಪರ್ವವೂ ಮುಗಿಯಿತು

—0—

॥ ಶ್ರೀಮದ್ಭೇಶಾರ್ಪಣಮಸ್ತು ॥

ವಿದ್ಯಾಂ ಶ್ರುತ್ವಾಯೇಗುರುಂ ನಾದ್ರಿಯಂತೇ
ಪ್ರತ್ಯಾಪನ್ನಾ ಮನಸಾ ಕರ್ಮಣಾ ವಾ ।
ಯಥೈವತೇಗುರುಭಿರ್ಭಾವನೀಯಾ–
ಸ್ತಥಾತೇಷಾಂಗುರವೋಽಪ್ಯರ್ಚನೀಯಾಃ ॥

ಗುರುವಿನಿಂದ ವಿದ್ಯೆಯನ್ನು ಪಡೆದು ಯಾರು
ಮನಸ್ಸಿನಿಂದಾಗಲೀ, ಕರ್ಮದಿಂದಾಗಲೀ ಅವರಿಗೆ
ಆದರವನ್ನು ಮಾಡುವುದಿಲ್ಲವೋ, ಅವರು ಹೆಜ್ಜೆ ಹೆಜ್ಜೆಗೆ
ಆಪತ್ತಿಗೆ ಸಿಲುಕುತ್ತಾರೆ. ಪುರುಷರು ತಮ್ಮನ್ನು ಹೇಗೆ
ಶುಭದೃಷ್ಟಿಯಿಂದ ನೋಡಬಯಸುತ್ತಾರೆಯೋ,
ಹಾಗೆ ಶಿಷ್ಯರೂ ಸಹ ಗುರುಗಳನ್ನು
ಶುಭದೃಷ್ಟಿಯಿಂದ ಅರ್ಚಿಸಬೇಕು.

ISBN: 978-93-88813-30-3